ಕೊಪ್ಪಳ ಜಿಲ್ಲೆಯ ವಿಜಯನಗರ ಕಾಲದ ಸ್ಮಾರಕಗಳು

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ., ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)



ಸಂಶೋಧಕರು

ಗೀತಾ

ಮಾರ್ಗದರ್ಶಕರು

ಡಾ. ಸಿ. ಮಹದೇವ

ಪ್ರಾಧ್ಯಾಪಕರು

ಸಮಾಜ ವಿಜ್ಞಾನಗಳ ನಿಕಾಯ

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೮

ಕೊಪ್ಪಳ ಜಿಲ್ಲೆಯ ವಿಜಯನಗರ ಕಾಲದ ಸ್ಮಾರಕಗಳು

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ., ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು
ಗೀತಾ

ಮಾರ್ಗದರ್ಶಕರು
ಡಾ. ಸಿ. ಮಹದೇವ
ಪ್ರಾಧ್ಯಾಪಕರು

ಸಮಾಜ ವಿಜ್ಞಾನಗಳ ನಿಕಾಯ
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩೨೭೬
೨೦೧೮

ಮಾರ್ಗದರ್ಶಕರ ದೃಢೀಕರಣ ಪತ್ರ

ಗೀತಾ ಇವರು ಪಿಎಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ **ಕೊಪ್ಪಳ ಜಿಲ್ಲೆಯ ವಿಜಯನಗರ ಕಾಲದ ಸ್ಮಾರಕಗಳು** ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವು ಯಾವುದೇ ಪದವಿ ಅಥವಾ ಇತರೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ಮಾರ್ಗದರ್ಶಕರು

ಡಾ. ಸಿ. ಮಹದೇವ

ಪ್ರಾಧ್ಯಾಪಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ,

ಕನ್ನಡ ವಿಶ್ವವಿದ್ಯಾಲಯ, ಹಂಪಿ,

ವಿದ್ಯಾರಣ್ಯ ೫೮೩೨೭೬

ಸ್ಥಳ : ವಿದ್ಯಾರಣ್ಯ

ದಿನಾಂಕ : 05-09-18

ಸಂಶೋಧಕರ ಘೋಷಣಾ ಪತ್ರ

ಕೊಪ್ಪಳ ಜಿಲ್ಲೆಯ ವಿಜಯನಗರ ಕಾಲದ ಸ್ಮಾರಕಗಳು ಎಂಬ ಈ ಮಹಾಪ್ರಬಂಧವನ್ನು ಪಿಎಚ್.ಡಿ, ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ **ಡಾ. ಸಿ. ಮಹದೇವ** ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

ಸಂಶೋಧನಾ ವಿದ್ಯಾರ್ಥಿ

ಗೀತಾ

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ,
ವಿದ್ಯಾರಣ್ಯ ೫೮೩೨೭೬

ಸ್ಥಳ : ವಿದ್ಯಾರಣ್ಯ
ದಿನಾಂಕ : 05.09.2018

ಪರಿವಿಡಿ

ಅಧ್ಯಾಯ : ಒಂದು

ಪ್ರಸ್ತಾವನೆ

====================

೧.೧. ಅಧ್ಯಯನದ ಉದ್ದೇಶ

೧.೨. ಅಧ್ಯಯನದ ವ್ಯಾಪ್ತಿ

೧.೩. ಅಧ್ಯಯನದ ವಿಧಾನ

೧.೪. ಪೂರ್ವ ಅಧ್ಯಯನಗಳ ಸಮೀಕ್ಷೆ

೧.೫. ಅಧ್ಯಯನದ ಸ್ವರೂಪ

ಅಧ್ಯಾಯ : ಒಂದು
ಪ್ರಸ್ತಾವನೆ

ಭಾರತದ ಚರಿತ್ರೆಯಲ್ಲಿ ವಿಜಯನಗರ ಸಾಮ್ರಾಜ್ಯದ ಕಾಲವು ಚಿರಸ್ಮರಣೀಯವಾಗಿದೆ. ಅದೊಂದು ರಾಜಕೀಯ ಸಾರ್ವಭೌಮತ್ವದ, ಸಾಂಸ್ಕೃತಿಕ ಉತ್ಕರ್ಷದ ಯುಗವಾಗಿತ್ತು. ಕ್ರಿ.ಶ. ೧೩೩೬ರ ಸುಮಾರಿಗೆ ಅಸ್ತಿತ್ವಕ್ಕೆ ಬಂದ ವಿಜಯನಗರವು ಕ್ರಿ.ಶ. ೧೫೬೫ರ ವರೆಗೆ ದಕ್ಷಿಣ ಭಾರತದಲ್ಲಿ ರಾಜಕೀಯ ಶಕ್ತಿಯಾಗಿ ಮೆರೆಯಿತು. ವಿಜಯನಗರದ ರಾಜಕೀಯ ಪ್ರಭುತ್ವವನ್ನು ಸಂಗಮ, ಸಾಳವ, ತುಳುವ ಮತ್ತು ಅರವೀಡು ಮನೆತನಗಳು ಯಶಸ್ವಿಯಾಗಿ ಮುನ್ನಡೆಸಿದವು. ಪ್ರೌಢದೇವರಾಯ, ಕೃಷ್ಣದೇವರಾಯರಂಥ ಧೀಮಂತ ಸಾಮ್ರಾಟರ ಅವಧಿಯಲ್ಲಂತೂ ವಿಜಯನಗರದ ಕೀರ್ತಿ ಪ್ರತಿಷ್ಠೆಗಳು ದೇಶವಿದೇಶಗಳಲ್ಲಿ ಪಸರಿಸಿದ್ದವು. ಸುಮಾರು ೨೫೦ ವರ್ಷಗಳ ಕಾಲ ಅಸ್ತಿತ್ವದಲ್ಲಿದ್ದ ವಿಜಯನಗರ ತನ್ನ ಸ್ಥಾಪನೆಯ ಉದ್ದೇಶವನ್ನು ಯಶಸ್ವಿಯಾಗಿ ಪೂರೈಸಿತು. ಸ್ಥಳೀಯ ಧರ್ಮ, ಸಂಸ್ಕೃತಿ, ಪರಂಪರೆಗಳ ರಕ್ಷಣೆ, ಪೋಷಣೆಯನ್ನು ಸಮರ್ಥವಾಗಿ ನಿರ್ವಹಿಸಿದ ವಿಜಯನಗರದ ಅರಸರು ದಕ್ಷಿಣಭಾರತದ ಸಾಂಸ್ಕೃತಿಕ ರಂಗದಲ್ಲಿ ಹೊಸ ಅಧ್ಯಾಯವನ್ನು ಬರೆದರು. ಪರಿಣಾಮವಾಗಿ ಸಮಾಜ, ಧರ್ಮ, ಸಾಹಿತ್ಯ, ಕಲೆ, ನೃತ್ಯ, ಸಂಗೀತ, ಮುಂತಾದ ಜೀವನದ ಎಲ್ಲ ರಂಗಗಳಲ್ಲಿ ಪ್ರಗತಿ ಸಾಧಿತವಾಯಿತು. ಹೀಗೆ ವಿಜಯನಗರದ ಇತಿಹಾಸಕ್ಕೆ ಭಾರತೀಯ ಚರಿತ್ರೆಯಲ್ಲಿ ಮಹತ್ವದ ಸ್ಥಾನವಿದೆ. ಅದು ಸ್ವಾಭಿಮಾನ, ಸ್ವಾವಲಂಬನೆಯಂತಹ ಮೌಲ್ಯಗಳಿಗೆ ಸಂಕೇತವಾಗಿದೆ. ಪರಕೀಯ ಪ್ರಭುತ್ವಗಳ ದಾಳಿಯ ಪರಿಣಾಮವಾಗಿ ಕೊಚ್ಚಿಕೊಂಡು ಹೋಗುತ್ತಿದ್ದ ಸ್ಥಳೀಯತೆಯನ್ನು ರಕ್ಷಿಸುವ ಉದ್ದೇಶವನ್ನು ಹೊಂದಿ ಹೊರಹೊಮ್ಮಿದ ವಿಜಯನಗರ, ಅದನ್ನು ಸಮರ್ಥವಾಗಿ ನಿರ್ವಹಿಸುವ ಮೂಲಕ ವಸಾಹತುಶಾಹಿ ಸಂದರ್ಭ ಹಾಗೂ ಪ್ರಸ್ತುತ ನವವಸಾಹತುಶಾಹಿಯಿಂದ ಉದ್ಭವಿಸಿರುವ ಸಮಸ್ಯೆಗಳಿಗೆ ಪರಿಹಾರಾತ್ಮಕ ಪಾಠವಾಗಿದೆ ಎಂದು ಗ್ರಹಿಸಬಹುದಾಗಿದೆ. ಈ ಹಿನ್ನೆಲೆಯಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಕುರಿತ ವಿವಿಧ ಆಯಾಮಗಳ ಅಧ್ಯಯನ ಅತ್ಯಂತ ಪ್ರಸ್ತುತವಾಗಿದೆ.

ಮಧ್ಯಕಾಲೀನ ದಕ್ಷಿಣ ಭಾರತದಲ್ಲಿ ಅಚ್ಚರಿಯಾಗಿ ಮೂಡಿಬಂದ ವಿಜಯನಗರ ಸಾಮ್ರಾಜ್ಯ

ಚಿಗುರೊಡೆಯುತ್ತಲೇ ಹೆಮ್ಮರವಾಗಿ ವ್ಯಾಪಿಸಿದ್ದು ಅದರ ರಾಜಕೀಯದ ವೈಶಿಷ್ಟ್ಯದ ಸಂಗತಿ. ಈ ಅಚ್ಚರಿಯಲ್ಲಿ ಯಾವುದೇ ವ್ಯಕ್ತಿ ಪ್ರಯತ್ನ ಕೇವಲ ನೆಪವಾಗಿರುವುದನ್ನು, ಸಮುದಾಯದ ನಿರೀಕ್ಷೆ ಪ್ರಧಾನವಾಗಿರುವುದನ್ನು ಗುರುತಿಸಬಹುದು. ಹಾಗಾಗಿಯೇ ವಿಜಯನಗರ ಸ್ಥಾಪನೆಯಾಗುತ್ತಲೇ ಅದು ಸಾಮ್ರಾಜ್ಯದ ಸ್ವರೂಪವನ್ನು ಪಡೆದುಕೊಳ್ಳುವಂತದ್ದು. ಅಂದರೆ ಸಮುದಾಯದ ನೋವು, ಪ್ರತಿಭಟನೆ ಮತ್ತು ಜವಾಬ್ದಾರಿಗಳೇ ಮೂರ್ತರೂಪ ಪಡೆದುಕೊಂಡು ವ್ಯಾಪಕ ಸ್ವರೂಪದಲ್ಲಿ ವ್ಯಕ್ತವಾದದ್ದೇ ವಿಜಯನಗರ. ಈ ಅಭಿಪ್ರಾಯಕ್ಕೆ ಪೂರಕವಾಗಿ ವಿಜಯನಗರ ಆಡಳಿತ ವ್ಯವಸ್ಥೆಯಲ್ಲಿ ವಿಕೇಂದ್ರಿತ ಅಂಶಗಳನ್ನು ಕಾಣಬಹುದು. ಇದರಿಂದ ವ್ಯಕ್ತವಾಗುವ ಪ್ರಮುಖ ಅಂಶವೆಂದರೆ ವಿಜಯನಗರ ಸಾಮ್ರಾಜ್ಯದ ಪ್ರತಿ ಪ್ರದೇಶವು ಅದರ ರಾಜಕೀಯ ಹಾಗೂ ಸಾಂಸ್ಕೃತಿಕ ವಿಕಸನದಲ್ಲಿ ಭಾಗಿಯಾಗಿರುವುದು ಸ್ಪಷ್ಟವಾಗುತ್ತದೆ. ಈ ಹಿನ್ನೆಲೆಯಲ್ಲಿ ವಿಜಯನಗರ ಸಾಮ್ರಾಜ್ಯದ ಉತ್ತರದ ಮುಕುಟವಾಗಿರುವುದು ಕೊಪ್ಪಳ, ರಾಯಚೂರು ಪ್ರದೇಶ. ತುಂಗಭದ್ರಾ ಕೃಷ್ಣಾನದಿಗಳ ನಡುವಣ ಈ ಭೂಭಾಗ ರಾಜಕೀಯವಾಗಿ ಅತ್ಯಂತ ಆಯಕಟ್ಟಿನ ಹಾಗೂ ಆರ್ಥಿಕವಾಗಿ ಸಮೃದ್ಧ ಪ್ರದೇಶವಾಗಿದೆ. ಪ್ರಾಚೀನ ಕಾಲದಲ್ಲಿ ಈ ಪ್ರದೇಶ ಎಡದೊರೆ ಇರ್ಚ್ಛಾಸಿರ(೨೦೦೦) ವೆಂದು, ವಿಜಯನಗರ ಅವಧಿಯಲ್ಲಿ ದೋ-ಆಬ್ ಎಂದು ಕರೆಯಲ್ಪಟ್ಟಿದೆ. ಇದು ವಿಜಯನಗರ-ಬಹಮನಿ, ವಿಜಯನಗರ-ಆದಿಶಾಹಿ ರಾಜ್ಯಗಳ ನಡುವಿನ ಪ್ರದೇಶವಾಗಿದ್ದು, ಅನೇಕ ರಾಜಕೀಯ ಸ್ಥಿತ್ಯಂತರಗಳನ್ನು ಕಂಡಿದೆ. ರಾಯಚೂರು, ಮುದಗಲ್ ಕೋಟೆಗಳ ವಶಕ್ಕಾಗಿ ಎರಡೂ ರಾಜ್ಯಗಳ ಮಧ್ಯ ನಿರಂತರ ಹೋರಾಟಗಳು ಉದ್ದಕ್ಕೂ ನಡೆದಿವೆ. ಇದು ತುಂಗಭದ್ರಾ-ಕೃಷ್ಣಾನದಿಗಳ ಮಧ್ಯದ ರಾಯಚೂರ ದೋ-ಅಬ್‌ನ ರಾಜಕೀಯ ಮತ್ತು ಆರ್ಥಿಕ ಮಹತ್ವವನ್ನು ಬಿಂಬಿಸುತ್ತದೆ.

ರಾಯಚೂರ ದೋ - ಆಬ್‌ನ ದಕ್ಷಿಣ ಭಾಗವೇ ಕೊಪ್ಪಳ ಜಿಲ್ಲಾ ಪ್ರದೇಶ. ತುಂಗಭದ್ರಾ ನದಿಯ ಎಡತೀರಕ್ಕೆ ಹೊಂದಿಕೊಂಡಂತೆ ಉತ್ತರ ದಿಕ್ಕಿಗೆ ಇದು ವಿಸ್ತರಿಸಿದೆ. ಪ್ರಸ್ತುತ ಕೊಪ್ಪಳ, ಗಂಗಾವತಿ, ಕುಷ್ಟಗಿ, ಯಲಬುರ್ಗಾ, ಕುಕನೂರು, ಕಾರಟಗಿ, ಮತ್ತು ಕನಕಗಿರಿ ತಾಲೂಕುಗಳು ಕೊಪ್ಪಳ ಜಿಲ್ಲಾ ವ್ಯಾಪ್ತಿಯಲ್ಲಿವೆ. ರಾಯಚೂರು ದೋ-ಆಬ್ ಭಾಗಕ್ಕಿಂತ ಈ ಕೊಪ್ಪಳ ಭಾಗವು ವಿಜಯನಗರಕ್ಕೆ ಹೆಚ್ಚು ನಿಕಟವಾಗಿದ್ದಲ್ಲದೆ, ಹೆಚ್ಚಾಗಿ ವಿಜಯನಗರದ ಆಧೀನದಲ್ಲೇ ಇದ್ದಿತು. ಹಾಗಾಗಿ ಈ ಪ್ರದೇಶದಲ್ಲಿ ವಿಜಯನಗರ ಕಾಲದ ಶಾಸನಗಳು, ಸ್ಮಾರಕಗಳು, ಶಿಲ್ಪಗಳು, ಕೆರೆಗಳು ಮತ್ತು ಬಾವಿಗಳು ಅಧಿಕವಾಗಿವೆ. ಮೇಲಾಗಿ ವಿಜಯನಗರ ಸಾಮ್ರಾಜ್ಯಕ್ಕೆ ಮೂಲ ವೇದಿಕೆಯಾದದ್ದು ಕೊಪ್ಪಳ ಜಿಲ್ಲೆಯ ಆನೆಗೊಂದಿ, ಅದು ವಿಜಯನಗರದ ಮೊದಲ ರಾಜಧಾನಿ. ಅದಕ್ಕೆ ವಿಜಯನಗರ ಚರಿತ್ರೆಯಲ್ಲಿ ಮಹತ್ವದ ಸ್ಥಾನವಿದೆ. ಆದರೆ ಈ ಎಲ್ಲ ಅಂಶಗಳನ್ನು ಪ್ರಧಾನವಾಗಿಟ್ಟುಕೊಂಡು ಈವರೆಗೂ ಪ್ರೌಢ ಅಧ್ಯಯನಗಳು ನಡೆದಿರುವುದಿಲ್ಲ. ಆ ಕೊರತೆಯನ್ನು ಮನಗಂಡು ಪ್ರಸ್ತುತ ಕೊಪ್ಪಳ ಜಿಲ್ಲೆಯ ವಿಜಯನಗರ ಕಾಲದ ಸ್ಮಾರಕಗಳು ಎಂಬ ಅಧ್ಯಯನವನ್ನು ನಡೆಸಲಾಗಿದೆ.

ಅಧ್ಯಯನದ ಉದ್ದೇಶ

ಪ್ರಸ್ತುತ ಅಧ್ಯಯನದ ಉದ್ದೇಶ ಕೊಪ್ಪಳ ಜಿಲ್ಲೆಯ ವಿಜಯನಗರ ಕಾಲದ ಸ್ಮಾರಕಗಳನ್ನು

ಅಧ್ಯಯನಕ್ಕೆ ಒಳಪಡಿಸುವುದಾಗಿದೆ. ಕೊಪ್ಪಳ ಜಿಲ್ಲೆಯು ವಿಜಯನಗರ ಸಾಮ್ರಾಜ್ಯದ ಉತ್ತರದ ಗಡಿ ಪ್ರದೇಶವಾಗಿದೆ. ಕೃಷ್ಣಾ-ತುಂಗಭದ್ರಾ ನದಿಗಳ ನಡುವಣ ರಾಯಚೂರು ದೋ - ಆಬ್ ಎಂದು ಕರೆಯಲ್ಪಟ್ಟ ಪ್ರದೇಶವು ಅವಿಭಜಿತ ರಾಯಚೂರ ಜಿಲ್ಲೆಯ ದಕ್ಷಿಣ ದಿಕ್ಕಿಗೆ ಹೊಂದಿಕೊಂಡಂತೆ ವಿಸ್ತರಿಸಿದೆ. ಜಿಲ್ಲೆಯ ತುಂಗಭದ್ರಾ ನದಿ ಎಡದಂಡೆಯ ಪ್ರದೇಶ ವಿಜಯನಗರದ ಆರಂಭಕಾಲದಲ್ಲಿ ರಾಜಕೀಯ ಚಟುವಟಿಕೆಯ ನೆಲೆಯಾಗಿತ್ತು. ಇಲ್ಲಿಯ ಆನೆಗೊಂದಿಯಲ್ಲಿ ವಿಜಯನಗರ ಸಾಮ್ರಾಜ್ಯದ ಕುಡಿಯೊಡೆದಿದ್ದು ಆನಂತರ ರಾಜಧಾನಿ ಹಂಪಿಗೆ ಸ್ಥಳಾಂತರಗೊಂಡಿರೂ ಆನೆಗೊಂದಿಯ ರಾಜಕೀಯ ಮಹತ್ವ ಕಡಿಮೆಯಾಗಿರಲಿಲ್ಲ. ಹಾಗಾಗಿ ಈ ಪ್ರದೇಶದಲ್ಲಿ ವಿಜಯನಗರದ ಅರಸರು ಅನೇಕ ದೇವಾಲಯ ಸ್ಮಾರಕಗಳನ್ನು ನಿರ್ಮಿಸಿ. ತಮ್ಮ ಪ್ರಭುತ್ವವನ್ನು ಸ್ಥಿರಿಕರಿಸಿದರು. ಸ್ಮಾರಕಗಳ ಜೊತೆ ಶಾಸನಗಳು, ಶಿಲ್ಪಗಳು, ವೀರಗಲ್ಲುಗಳು ಸೃಷ್ಠಿಯಾದವು. ಈ ಎಲ್ಲ ಸ್ಮಾರಕಗಳು ಜಿಲ್ಲೆಯಲ್ಲಿಯ ವಿಜಯನಗರದ ರಾಜಕೀಯದ ಜೊತೆಗೆ ಸಾಂಸ್ಕೃತಿಕ ಇತಿಹಾಸಕ್ಕೆ ಸಾಕ್ಷಿಯಾಗಿವೆ.

ಕೊಪ್ಪಳ ಜಿಲ್ಲೆಯ ವಿಜಯನಗರ ಕಾಲದ ಎಲ್ಲ ಬಗೆಯ ಸ್ಮಾರಕಗಳ ಬಗ್ಗೆ ವ್ಯವಸ್ಥಿತ ಸಮೀಕ್ಷೆ ನಡೆದಿರುವುದಿಲ್ಲ. ಶಾಸನ ಮತ್ತು ದೇವಾಲಯಗಳ ಕುರಿತು ಸಮೀಕ್ಷೆ ನಡೆದಿವೆ. ಉಳಿದಂತೆ ಜಿಲ್ಲೆಯ ಕೆಲವು ದೇವಾಲಯ, ಶಾಸನ, ಶಿಲ್ಪಗಳ ಬಗೆಗೆ ಅಲ್ಲಲ್ಲಿ ಬಿಡಿ ಅಧ್ಯಯನಗಳಾಗಿವೆ. ಇದರಿಂದ ಜಿಲ್ಲೆಯ ವಿಜಯನಗರ ಕಾಲದ ಸ್ಮಾರಕಗಳ ರಚನೆಯ ಇತಿಹಾಸ, ವಾಸ್ತು, ಶಿಲ್ಪ, ವೀರಗಲ್ಲು, ಕೋಟೆಕೊತ್ತಲಗಳು, ಕೆರೆ ಮತ್ತು ಬಾವಿಗಳ ಕುರಿತಂತೆ ಅಧ್ಯಯನದ ಕೊರತೆ ಎದ್ದು ಕಾಣುತಿತ್ತು. ಈ ಕೊರತೆಯನ್ನು ಹೊಗಲಾಡಿಸಲು ಹಾಗೂ ಜಿಲ್ಲೆಯ ಸಾಂಸ್ಕೃತಿಕ ಚಟುವಟಿಕೆಗಳನ್ನು ಅರಿತುಕೊಳ್ಳಲು ಪ್ರಸ್ತುತ ಅಧ್ಯಯನದಲ್ಲಿ ಪ್ರಯತ್ನಿಸಲಾಗಿದೆ.

ವಿಜಯನಗರ ಸಾಮ್ರಾಜ್ಯವು ವಿಶಾಲವಾದ ಪ್ರದೇಶದಲ್ಲಿ ವಿಸ್ತರಿಸಿತ್ತು. ಆ ವಿಸ್ತಾರದುದ್ದಕ್ಕೂ ವಿಜಯನಗರದ ಅರಸರು ನೂರಾರು ದೇವಾಲಯ, ಸ್ಮಾರಕಗಳನ್ನು ನಿರ್ಮಿಸಿದ್ದಾರೆ. ಅವು ಪ್ರಧಾನವಾಗಿ ವಿಜಯನಗರ ವಾಸ್ತುಶೈಲಿಯಲ್ಲಿವೆ. ವಿಜಯನಗರ ಶೈಲಿಯು ದ್ರಾವಿಡ ಶೈಲಿಯ ವಿಕಸಿತ ರೂಪವಾಗಿದೆ. ರಾಜಧಾನಿ ವಿಜಯನಗರ ಪಟ್ಟಣವು ಆ ಕಾಲದ ಅಭೂತಪೂರ್ವ ಕಲಾ ಸ್ಮಾರಕಗಳ ಕೇಂದ್ರವಾಗಿದೆ. ಆದರೆ ಅದರ ಪಕ್ಕದ ಪ್ರದೇಶವಾದ ಕೊಪ್ಪಳ ಜಿಲ್ಲೆಯ ಪ್ರದೇಶದಲ್ಲಿ ಸಮಕಾಲೀನ ಸ್ಮಾರಕಗಳು ಹೆಚ್ಚಾಗಿ ರಚನೆಯಾಗಿಲ್ಲ. ಆದಾಗ್ಯೂ ವಿಜಯನಗರದ ಮೊದಲ ರಾಜಧಾನಿ ಆನೆಗೊಂದಿ, ಹಿರೇಜಂತಗಲ್ಲ, ಕನಕಗಿರಿ, ಹನುಮನಹಳ್ಳಿ, ತಾವರಗೇರಿ, ಕಲ್ಲೂರು ಮುಂತಾದೆಡೆ ಹಲವಾರು ದೇವಾಲಯಗಳು ನಿರ್ಮಾಣವಾಗಿವೆ. ಈ ದೇವಾಲಯಗಳಲ್ಲಿ ಆನೆಗೊಂದಿ, ಹಿರೇಜಂತಗಲ್ಲ ಹಾಗೂ ಕನಕಗಿರಿಗಳಲ್ಲಿ ಶಿಷ್ಟರೂಪದ ಪರಿಪೂರ್ಣ ದೇವಾಲಯಗಳಿವೆ. ಈ ದೇವಾಲಯಗಳು ಇಲ್ಲಿ ನಡೆದ ಪ್ರಮುಖ ರಾಜಕೀಯ ಘಟನಾವಳಿಗಳ ಪರಿಣಾಮದ ಸಂಕೇತಗಳಾಗಿವೆ. ಆದರೆ ಇಂಥ ದೇವಾಲಯಗಳ ಕುರಿತ ವಾಸ್ತುಲಕ್ಷಣ, ಶೈಲಿ, ವಿನ್ಯಾಸ ಹಾಗೂ ಆ ಮೂಲಕ ಅವುಗಳ ಸಾಂಸ್ಕೃತಿಕ ಮಹತ್ವವನ್ನು ಗುರುತಿಸುವ ಉದ್ದೇಶವನ್ನು ಹೊಂದಲಾಗಿದೆ.

ಕೊಪ್ಪಳ ಜಿಲ್ಲೆಯ ಕೊಪ್ಪಳ, ಗಂಗಾವತಿ, ಕುಷ್ಟಗಿ, ಯಲಬುರ್ಗಾ, ಕುಕನೂರು, ಕಾರಟಗಿ, ಕನಕಗಿರಿ ತಾಲೂಕಿನ ವಿಜಯನಗರ ಕಾಲದ ನೂರಾರು ಶಿಲ್ಪಗಳು ಕಂಡುಬರುತ್ತವೆ. ಈ ಶಿಲ್ಪಗಳಲ್ಲಿ ಧಾರ್ಮಿಕ ಹಾಗೂ ಲೌಕಿಕ ಶಿಲ್ಪಗಳಿವೆ. ಲೌಕಿಕ ಶಿಲ್ಪಗಳಲ್ಲಿ ಸ್ಮಾರಕ ಶಿಲ್ಪಗಳಾದ ವೀರಗಲ್ಲುಗಳು, ಮಾಸ್ತಿಗಲ್ಲುಗಳು, ವೀರಮಾಸ್ತಿಗಲ್ಲುಗಳು ಅಧಿಕವಾಗಿವೆ. ಆದರೆ ಈ ಎಲ್ಲ ಶಿಲ್ಪಗಳ ಕುರಿತಾಗಿ ಈವರೆಗೂ ಯಾವುದೇ ಸಮೀಕ್ಷೆಯಾಗಲಿ ಅಧ್ಯಯನಗಳಾಗಲಿ ನಡೆದಿರುವುದಿಲ್ಲ. ಈ ಅಂಶವನ್ನು ಅನುಲಕ್ಷಿಸಿ ವಿಜಯನಗರ ಕಾಲದ ಈ ಸ್ಮಾರಕಗಳ ರಚನೆ ಶೈಲಿ, ತಂತ್ರ, ಮಹತ್ವ ಹಾಗೂ ಸಾಂಸ್ಕೃತಿಕ ಮಹತ್ವವನ್ನು ಗುರುತಿಸುವ ಉದ್ದೇಶವನ್ನು ಪ್ರಸ್ತುತ ಅಧ್ಯಯನದಲ್ಲಿ ಹೊಂದಲಾಗಿದೆ.

ಕೊಪ್ಪಳ ಜಿಲ್ಲೆಯ ದಕ್ಷಿಣ ಭಾಗವು ತುಂಗಭದ್ರಾ ನದಿಯ ಎಡ ತೀರಕ್ಕೆ ಹೊಂದಿಕೊಂಡಂತೆ ಇದೆ. ಈ ಭಾಗದಲ್ಲಿ ವಿಜಯನಗರದ ಅರಸರು ನದಿಗೆ ಅಲ್ಲಲ್ಲಿ ಅಣೆಕಟ್ಟುಗಳನ್ನು ನಿರ್ಮಿಸಿ ಕಾಲುವೆಗಳ ಮೂಲಕ ಸಾವಿರಾರು ಎಕರೆ ಕೃಷಿ ಭೂಮಿಗೆ ನೀರನ್ನು ಒದಗಿಸಿದ್ದಾರೆ. ವಿಜಯನಗರದ ಕಾಲದ ಶಿವಪುರ ಅಣೆಕಟ್ಟು, ಹುಲಿಗಿ ಅಣೆಕಟ್ಟು, ಬೆನ್ನೂರು ಅಣೆಕಟ್ಟು ಮುಂತಾದ ಅಣೆಕಟ್ಟುಗಳು ಅವುಗಳ ಕಾಲುವೆಗಳು ಇಂದಿಗೂ ಬಳಕೆಯಲ್ಲಿವೆ. ಈ ನೀರಾವರಿ ಸ್ಮಾರಕಗಳ ವಾಸ್ತು ತಂತ್ರಜ್ಞಾನವು ಅಧ್ಯಯನ ಯೋಗ್ಯವಾಗಿದೆ. ಈ ಹಿನ್ನಲೆಯಲ್ಲಿ ಜಿಲ್ಲೆಯ ನೀರಾವರಿ ವಾಸ್ತುಗಳ ಕುರಿತು ಅಧ್ಯಯನ ನಡೆಸುವ ಉದ್ದೇಶ ಹೊಂದಲಾಗಿದೆ.

ಕೊಪ್ಪಳ ಜಿಲ್ಲೆಯಲ್ಲಿ ವಿಜಯನಗರ ಕಾಲದ ನೀರಾವರಿಯ ಮೂಲ ರಚನೆಗಳನ್ನು (ಆನೆಗೊಂದಿ ಭಾಗ) ಕಾಣಬಹುದು. ಇಲ್ಲಿಯ ಕೊಪ್ಪಳದ ಶಿವಪುರ, ಹುಲಗಿಗಳಿಂದ ಹಿಡಿದು ಗಂಗಾವತಿಯ ಸಾಣಾಪೂರ, ರಾಜಾಪುರ, ದೇವಘಾಟ್, ಹಿರೇಜಂತಗಲ್, ಚಿಕ್ಕಜಂತಗಲ್ಲ, ಬೆನ್ನೂರುಗಳವರೆಗೆ ತುಂಗಭದ್ರಾ ನದಿಗೆ ನಿರ್ಮಿಸಿರುವ ವಿಜಯನಗರ ಕಾಲದ ಅಣೆಕಟ್ಟುಗಳು, ಕಾಲುವೆಗಳು ಇದ್ದು ಅವು ಇಂದಿಗೂ ಬಳಕೆಯಲ್ಲಿವೆ. ಜೊತೆಗೆ ಜಿಲ್ಲೆಯಾದ್ಯಂತ 'ರಾಯರ ಕೆರೆ' ಹೆಸರಿನ ಕೆರೆಗಳು ಇವೆ. ಇವೆಲ್ಲವುಗಳನ್ನು ಅಧ್ಯಯನಕ್ಕೆ ಒಳಪಡಿಸುವುದರ ಮೂಲಕ ನೀರಾವರಿಗೆ ವಿಜಯನಗರದ ಅರಸರು ಕೊಟ್ಟ ಪ್ರಾಶಸ್ತ್ಯ, ಅಣೆಕಟ್ಟುಗಳ ನಿರ್ಮಾಣ, ತಂತ್ರಜ್ಞಾನ, ಕಾಲುವೆಗಳ ಜಾಲ ಮತ್ತು ಅದರಿಂದ ಆದ ಕೊಪ್ಪಳ ಪರಿಸರದ ಕೃಷಿಯ ಪ್ರಗತಿ ಮತ್ತು ಆರ್ಥಿಕ ಸಮೃದ್ಧಿಯನ್ನು ಅರಿಯುವ ಉದ್ದೇಶ ಹೊಂದಲಾಗಿದೆ. ಒಟ್ಟಿನಲ್ಲಿ ಕೊಪ್ಪಳ ಜಿಲ್ಲೆಯ ಅಧ್ಯಯನವು ಪ್ರಾಗಿತಿಹಾಸ ಕಾಲದಿಂದ ಹಿಡಿದು ಆಧುನಿಕ ಕಾಲದವರೆಗೆ ಅಲ್ಲಲ್ಲಿ ಒಂದೊಂದು ಸಂಗತಿಗಳಿಗೆ ಸಂಬಂಧಿಸಿದಂತೆ ಬಿಡಿ ಅಧ್ಯಯನಗಳಾಗಿವೆ. ಆದರೆ ವಿಜಯನಗರ ಕಾಲದ ಸಂದರ್ಭ ಹಾಗೂ ಕೊಪ್ಪಳ ಜಿಲ್ಲೆಯ ಕುರಿತು ಈವರೆಗೂ ಗಂಭೀರ ಅಧ್ಯಯನಗಳು ನಡೆದಿರುವುದಿಲ್ಲ. ಈ ಕೊರತೆಯನ್ನು ಅನುಲಕ್ಷಿಸಿ ಪ್ರಸ್ತುತ ಅಧ್ಯಯನವನ್ನು ಆಯ್ದುಕೊಳ್ಳಲಾಗಿದೆ.

ಒಟ್ಟಿನಲ್ಲಿ ಕೊಪ್ಪಳ ಜಿಲ್ಲೆಯ ವಿಜಯನಗರ ಕಾಲದ ಧಾರ್ಮಿಕ, ಲೌಕಿಕ ಸ್ಮಾರಕಗಳು ಹಾಗೂ ಶಿಲ್ಪಗಳ ಸಮೀಕ್ಷೆ, ದಾಖಲೀಕರಣ ಹಾಗೂ ಅವುಗಳ ಅಧ್ಯಯನ ನಡೆಸಿ ಆ ಮೂಲಕ

ಸಮಕಾಲೀನ ಕಲೆ ಮತ್ತು ವಾಸ್ತುವಿನ ಮಹತ್ವವನ್ನು ಅರಿಯುವುದು ಮತ್ತು ವಿಜಯನಗರ ಸಾಂಸ್ಕೃತಿಕ ಚರಿತ್ರೆಯನ್ನು ಇನ್ನಷ್ಟು ಪರಿಶೀಲಿಸುವುದು ಈ ಅಧ್ಯಯನದ ಪ್ರಧಾನ ಉದ್ದೇಶವಾಗಿದೆ.

ಅಧ್ಯಯನದ ವ್ಯಾಪ್ತಿ

"ಕೊಪ್ಪಳ ಜಿಲ್ಲೆಯ ವಿಜಯನಗರ ಕಾಲದ ಸ್ಮಾರಕಗಳು" ಎಂಬ ಶೀರ್ಷಿಕೆಯೇ ಸೂಚಿಸುವಂತೆ ಅಧ್ಯಯನವು ಕೊಪ್ಪಳ ಜಿಲ್ಲೆಯಲ್ಲಿ ವಿಜಯನಗರ ಕಾಲದಲ್ಲಿ ನಿರ್ಮಾಣವಾಗಿರುವ ಶಾಸನ, ಸ್ಮಾರಕಗಳು, ಮೂರ್ತಿಶಿಲ್ಪ, ಕೆರೆ ಮತ್ತು ಬಾವಿಗಳನ್ನು ಇಟ್ಟುಕೊಂಡು ಜಿಲ್ಲೆಯ ಚಾರಿತ್ರಿಕ ಕಾಲಘಟ್ಟಗಳಲ್ಲಿ ವಿಜಯನಗರದ ಸಂದರ್ಭವನ್ನು ಗುರುತಿಸುವುದಾಗಿದೆ. ಹೀಗಾಗಿ ಅಧ್ಯಯನವು ತನ್ನದೇ ಆದ ಕಾಲ, ಪ್ರದೇಶ ಮತ್ತು ವಿಷಯದ ಮಿತಿಯನ್ನು ಹೊಂದಿದೆ. ಈ ಮಿತಿಯು ಪ್ರಧಾನವಾಗಿ ವಿಷಯ ಹಾಗೂ ಪ್ರದೇಶಕ್ಕೆ ಸಂಬಂಧಿಸಿದಂತೆ ವಿಜಯನಗರ ಕಾಲಘಟ್ಟವನ್ನು, ಕೊಪ್ಪಳ ಜಿಲ್ಲೆಯ ಪ್ರಾದೇಶಿಕ ವ್ಯಾಪ್ತಿಯನ್ನು ಹೊಂದಿದೆ. ಕಾಲ ವ್ಯಾಪ್ತಿಯಲ್ಲಿ ವಿಜಯನಗರದ ಸ್ಥಾಪನೆಯಿಂದ ಅಂದರೆ ಕ್ರಿ.ಶ. ೧೩೩೬ ರಿಂದ ವಿಜಯನಗರದ ಪತನದವರೆಗೆ ಅಂದರೆ ಕ್ರಿ.ಶ. ೧೫೬೫ರ ಕಾಲದ ವ್ಯಾಪ್ತಿಯಲ್ಲಿ ಅಧ್ಯಯನ ನಡೆಸಲಾಗಿದೆ.

ಕೊಪ್ಪಳ ಜಿಲ್ಲಾ ಪ್ರದೇಶವು ತುಂಗಭದ್ರಾ ನದಿಯ ಉತ್ತರ ಭಾಗದಲ್ಲಿದ್ದು, ಪ್ರಾದೇಶಿಕವಾಗಿ ವಿಜಯನಗರ ಸಾಮ್ರಾಜ್ಯದ ದಕ್ಷಿಣ ಭಾಗಗಳಿಗಿಂತ ಭಿನ್ನತೆಯನ್ನು ಹೊಂದಿರುವಂತಹದು. ಹಾಗಾಗಿ ಅದರ ಪ್ರಾದೇಶಿಕ ವೈಶಿಷ್ಟ್ಯತೆ ವ್ಯಕ್ತವಾಗುತ್ತದೆ. ಅಧ್ಯಯನಕ್ಕೆ ಈ ಪ್ರದೇಶದ ಮಿತಿಯು ಯಾವುದೇ ರೀತಿಯಿಂದಲೂ ಆ ಕಾಲದ ಚರಿತ್ರೆಯ ತಿಳುವಳಿಕೆಗೆ ಅಡ್ಡಿಯನ್ನುಂಟು ಮಾಡಲಾರದು. ಇನ್ನು ಕೊಪ್ಪಳ ಪ್ರದೇಶವು ರಾಯಚೂರು ದೋ-ಅಬ್‌ದಲ್ಲಿ ಸೇರಿದ್ದರೂ ಅದು ಹೆಚ್ಚಾಗಿ ವಿಜಯನಗರದ ಅರಸರ ಆಧೀನದಲ್ಲಿ ಉಳಿದು ಬಂದಿತೆಂಬುದು ಇಲ್ಲಿ ಗಮನಿಸಬೇಕಾದ ಸಂಗತಿ. ಈ ಹಿನ್ನಲೆಯಲ್ಲಿ ಪ್ರಸ್ತುತ ಕೊಪ್ಪಳ ಜಿಲ್ಲಾ ಪ್ರದೇಶದ ಅಧ್ಯಯನ ವ್ಯಾಪ್ತಿಯು ಒಂದು ಪ್ರದೇಶದ ಚರಿತ್ರೆ ಮತ್ತು ಸಂಸ್ಕೃತಿಯ ಪರಿಪೂರ್ಣ ಅನಾವರಣವನ್ನು ಉಂಟುಮಾಡಬಲ್ಲದೆಂದು ಹೇಳಬಹುದು.

ವಿಜಯನಗರದ ಕಾಲಘಟ್ಟಕ್ಕೆ ಸಂಬಂಧಿಸಿದಂತೆ ಕೊಪ್ಪಳ ಜಿಲ್ಲೆಯ ಏಳು ತಾಲೂಕುಗಳಲ್ಲಿ ಲಭ್ಯವಿರುವ ಶಾಸನ, ದೇವಾಲಯಗಳು, ಶಿಲ್ಪಗಳು, ಕೆರೆ, ಬಾವಿಗಳನ್ನು ಇಲ್ಲಿ ವಿವಿಧ ಆಯಾಮಗಳ ಮೂಲಕ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಈ ಅಂಶಗಳನ್ನು ಒಳಗೊಂಡ ವಿಷಯ ವ್ಯಾಪ್ತಿಯು ವಿಜಯನಗರ ಕಾಲದಲ್ಲಿಯ ಕೊಪ್ಪಳ ಪರಿಸರವನ್ನು ತೆರೆದಿಡಬಹುದಾದ ಸಾಧ್ಯತೆ ಹೊಂದಿದೆ.

ಅಧ್ಯಯನದ ವಿಧಾನ

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ವಿಷಯ ಹಾಗೂ ಪ್ರಾದೇಶಿಕ ಕ್ಷೇತ್ರಕ್ಕೆ ಸಂಬಂಧಿಸಿದ ಪೂರ್ವ ಅಧ್ಯಯನಗಳನ್ನು, ಪ್ರಕಟಿತ ಸಾಹಿತ್ಯಿಕ ಆಕರಗಳನ್ನು ಸಂಗ್ರಹಿಸಲಾಯಿತು. ನಂತರ

ಪ್ರಾದೇಶಿಕ ಕ್ಷೇತ್ರಕಾರ್ಯ ಕೈಗೊಂಡು ಮಾಹಿತಿ ಸಂಗ್ರಹಿಸಲಾಯಿತು. ಪರಸ್ಪರ ಲಭ್ಯ ಮಾಹಿತಿಯ ಕ್ರೋಢೀಕರಣ, ಸಂಯೋಜನೆ ಹಾಗೂ ಅಂತಿಮವಾಗಿ ವಿಷಯವನ್ನು ವಿಶ್ಲೇಷಣಾತ್ಮಕವಾಗಿ ನಿರೂಪಿಸುವ ವಿವಿಧ ಅಧ್ಯಯನ ವಿಧಾನಗಳನ್ನು ಅನುಸರಿಸಲಾಯಿತು. ಈ ವಿಧಾನಗಳಿಂದ ಪ್ರಸ್ತುತ ಮಹಾಪ್ರಬಂಧವನ್ನು ರಚಿಸಲಾಗಿದೆ.

ವಿಜಯನಗರ ಚರಿತ್ರೆಗೆ ಹಾಗೂ ಕೊಪ್ಪಳ ಜಿಲ್ಲೆಗೆ ಸಂಬಂಧಿಸಿದಂತೆ ಈವರೆಗೆ ನಡೆದ ಅಧ್ಯಯನಗಳನ್ನು ಪರಿಶೀಲಿಸಿ ಅವಶ್ಯಕ ಮಾಹಿತಿಯನ್ನು ಪಡೆದುಕೊಳ್ಳಲಾಯಿತು. ವಿಶೇಷವಾಗಿ ಕೊಪ್ಪಳ ಜಿಲ್ಲೆಗೆ ಸಂಬಂಧಿದಂತೆ ವಿಜಯನಗರ ಕಾಲದ ರಾಜಕೀಯ ಹಾಗೂ ಸಾಂಸ್ಕೃತಿಕ ಚರಿತ್ರೆಗೆ ಸಂಬಂಧಿಸಿದಂತಹ ಎಲ್ಲ ಬಗೆಯ ಸಾಹಿತ್ಯ ಆಕರಗಳನ್ನು ಜಿಲ್ಲೆಗೆ ಸಂಬಂಧಿಸಿದ ಶಾಸನಗಳು, ದೇವಾಲಯಗಳು, ಮೂರ್ತಿಶಿಲ್ಪಗಳು ಸ್ಮಾರಕಶಿಲ್ಪಗಳ ಕುರಿತಾಗಿ ಬಂದ ಸರ್ವೇಕ್ಷಣಾ ವರದಿಗಳನ್ನು, ಬಿಡಿಯಾದ ಬರಹಗಳನ್ನು, ನಿರ್ದಿಷ್ಟ ಚಾರಿತ್ರಿಕ ಸ್ಥಳಗಳ ಇಲ್ಲವೆ ದೇವಾಲಯ, ಸ್ಮಾರಕಗಳ ಕುರಿತಾಗಿ ಬಂದ ಬರಹಗಳನ್ನು, ಬೇರೆ ಜಿಲ್ಲೆಯ ಇತಿಹಾಸ ಹಾಗೂ ಸಂಸ್ಕೃತಿ ನಿರೂಪಣೆಯಲ್ಲಿ ಪ್ರಾಸಂಗಿಕವಾಗಿ ಬಂದ ಕೊಪ್ಪಳ ಜಿಲ್ಲೆಯ ವಿಜಯನಗರ ಕಾಲಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಸಂಗ್ರಹಿಸಲಾಯಿತು. ಕೊಪ್ಪಳ ಜಿಲ್ಲೆಯ ಏಳು ತಾಲೂಕುಗಳಲ್ಲಿ ಕ್ಷೇತ್ರಕಾರ್ಯ ಕೈಗೊಳ್ಳಲಾಯಿತು. ಕ್ಷೇತ್ರಕಾರ್ಯದಲ್ಲಿ ವಿಜಯನಗರ ಕಾಲಕ್ಕೆ ಸಂಬಂಧಿಸಿದ ಮೌಖಿಕ ಪರಂಪರೆಯ ಮಾಹಿತಿಯ ಜೊತೆಗೆ ವಿಜಯನಗರ ಕಾಲದ ಶಾಸನ, ದೇವಾಲಯ, ಮೂರ್ತಿಶಿಲ್ಪ, ಹಾಗೂ ಇತರ ಸ್ಮಾರಕಗಳ ಭೌತಿಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಟಿಪ್ಪಣಿ, ಛಾಯಾಚಿತ್ರಗಳ ಮೂಲಕ ಸ್ಮಾರಕ ಹಾಗೂ ಮೂರ್ತಿಶಿಲ್ಪಗಳ ಖಚಿತ ವಿವರಣೆಯನ್ನು ಪಡೆದುಕೊಂಡು ಅಧ್ಯಯನಕ್ಕೆ ಒಳಪಡಿಸಲಾಗಿದೆ.

೧.೪ ಪೂರ್ವ ಅಧ್ಯಯನಗಳ ಸಮೀಕ್ಷೆ

ಕೊಪ್ಪಳ ಪ್ರದೇಶಕ್ಕೆ ಸಂಬಂಧಿಸಿದಂತೆ ಅನೇಕ ಅಧ್ಯಯನಗಳು ಈಗಾಗಲೇ ನಡೆದಿವೆ. ಅವುಗಳಿಂದ ಪ್ರದೇಶದ ಚರಿತ್ರೆಯನ್ನು ಪ್ರಾಗಿತಿಹಾಸ ಕಾಲದಿಂದ ಹಿಡಿದು ವಿಜಯನಗರೋತ್ತರ ಕಾಲದವರೆಗೆ ತಕ್ಕಮಟ್ಟಿಗೆ ಗ್ರಹಿಸಲು ಸಾಧ್ಯವಾಗಿದೆ. ಅಲ್ಲದೆ ಚರಿತ್ರೆ ಅಷ್ಟೇ ಅಲ್ಲ ಸಮಕಾಲೀನ ಬದುಕಿನ ವಿವಿಧ ಸಂಗತಿಗಳ ಮೇಲೂ ಈ ಅಧ್ಯಯನಗಳು ಬೆಳಕನ್ನು ಚೆಲ್ಲಿವೆ. ಆ ಕೆಲವು ಪ್ರಮುಖ ಅಧ್ಯಯನಗಳು ಇಂತಿವೆ.

ಸುರೇಶ ಕೆ. ಎಂ., ವಾಸುದೇವ ಬಡಿಗೇರ, ಸೋಮಶೇಖರ ಎಸ್. ವೈ., ಕೊಟ್ರೇಶ್ ಮಾಡಲಗೇರಿ ಅವರ ಸಂಪಾದನೆಯಲ್ಲಿ *ಕರ್ನಾಟಕ ದೇವಾಲಯ ಕೋಶ : ಕೊಪ್ಪಳ ಜಿಲ್ಲೆ* ಕೃತಿಯು ಕೊಪ್ಪಳ ಜಿಲ್ಲೆಯ ಪ್ರಮುಖ ದೇವಾಲಯಗಳ ವಾಸ್ತು ವಿವರಗಳನ್ನೊಳಗೊಂಡಿದೆ. ಇದರಲ್ಲಿ ವಿಜಯನಗರಕಾಲಕ್ಕೆ ಸಂಬಂಧಿಸಿದ ದೇವಾಲಯಗಳ ಕುರಿತು ಚರ್ಚಿಸಿದ್ದಾರೆ.[೧] ಅ. ಸುಂದರ ಅವರ *ಕರ್ನಾಟಕದ ಪ್ರಾಗಿತಿಹಾಸ ಕಾಲದ ಕಲೆ* ಈ ಪುಸ್ತಕದಲ್ಲಿ ಪ್ರಾಸಂಗಿಕವಾಗಿ

ಕೊಪ್ಪಳ ಪ್ರದೇಶದ ಕೆಲವೊಂದು ಪ್ರಾಚೀನ ನೆಲೆಗಳು ಹಾಗೂ ಗವಿವರ್ಣ ಚಿತ್ರಗಳನ್ನು ಕುರಿತಾಗಿ ವಿವರಿಸಲಾಗಿದೆ.

ರಾಮಚಂದ್ರ ರಾವ್ ಎಸ್. ಕೆ. ಅವರು *ಭಾರತೀಯ ದೇವಾಲಯ ನೆಲೆ-ಹಿನ್ನೆಲೆ* ಎಂಬ ಗ್ರಂಥದಲ್ಲಿ ದೇವಾಲಯಗಳು ಸಿಂಧೂ ನಾಗರಿಕತೆಯಿಂದ ಮೊದಲುಗೊಂಡು, ಅವು ಮುಂದೆ ಪಡೆದ ಕಲ್ಪನೆ, ಬೆಳವಣಿಗೆ, ಸಮಾಧಿ, ಚೈತ್ಯ, ಸ್ತೂಪಗಳು, ಭಾರತೀಯ ದೇವಾಲಯಗಳ ಹಿನ್ನಲೆಯಲ್ಲಿ ಗಳಿಸಿರುವ ಪಾತ್ರ, ಪ್ರಕೃತಿ, ಪೂಜೆ, ಮೊದಲಾದವುಗಳನ್ನು ಕುರಿತು ಚರ್ಚಿಸಿದ್ದಾರೆ.[೨]

ಶಾಂತಕುಮಾರಿ ಎಸ್. ಎಲ್. ಅವರು *ಕುಕನೂರು ಒಂದು ಸಾಂಸ್ಕೃತಿಕ ಸಮೀಕ್ಷೆ* ಎಂಬ ಕೃತಿಯಲ್ಲಿ ಕುಕನೂರಿನ ಧಾರ್ಮಿಕ ಕ್ಷೇತ್ರದ ಚಾರಿತ್ರಿಕ ಅಂಶಗಳ ಬಗ್ಗೆ, ಈ ಸ್ಥಳದ ಸುತ್ತ ಮುತ್ತ ದೊರೆತಿರುವ ಶಾಸನಗಳ ಮಾಹಿತಿಯನ್ನು ನೀಡಿದ್ದಾರೆ. ಇವುಗಳ ಆಧಾರದ ಮೇಲೆ ಸುಮಾರು ೭ನೆಯ ಶತಮಾನದಿಂದ ೧೬-೧೭ನೆಯ ಶತಮಾನದವರೆಗೂ ಕರ್ನಾಟಕವನ್ನು ಯಶಸ್ವಿಯಾಗಿ ಆಳಿ ತಮ್ಮದೇ ಆದ ಪ್ರಭಾವವನ್ನು ಕನ್ನಡ ಜನತೆಯಲ್ಲಿ ಮೂಡಿಸಿ ಕಣ್ಮರೆಯಾಗಿರುವ ಬಾದಾಮಿಯ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಕಲಚೂರಿಗಳು, ಹೊಯ್ಸಳರು, ವಿಜಯನಗರ ಸಾಮ್ರಾಜ್ಯ ಮುಂತಾದ ರಾಜ್ಯಗಳ ಆಡಳಿತದ ಒಂದು ಭಾಗವಾಗಿತು. ಇದು ೩೦ ಗ್ರಾಮಗಳನ್ನೊಳಗೊಂಡ ಒಂದು ಆಡಳಿತ ಘಟಕವಾಗಿ ರಾಜಕೀಯ ರಂಗದಲ್ಲೂ ಸಾಕಷ್ಟು ಪ್ರಖ್ಯಾತಿಯನ್ನು ಪಡೆದಿತ್ತು ಎಂದು ತಿಳಿಸಿದೆ.[೩]

ಕನ್ನಡ ವಿಶ್ವವಿದ್ಯಾಯಲದ ಶಾಸನ ಸಂಪುಟ-೨, ಕೊಪ್ಪಳ ಜಿಲ್ಲೆ[೪], ಹಂಪ ನಾಗರಾಜಯ್ಯ ಅವರ *ಕೊಪ್ಪಳ ಶಾಸನಗಳು*[೫] ಮತ್ತು ಚನ್ನಬಸವ ಹಿರೇಮಠ ಅವರ *ಕೊಪ್ಪಳ ರಾಯಚೂರ ಜಿಲ್ಲೆಯ ಶಾಸನಗಳು*[೬] ಈ ಶಾಸನ ಸಂಪುಟಗಳು ಕೊಪ್ಪಳ ಜಿಲ್ಲೆಯ ಚರಿತ್ರೆಯನ್ನು ಕಟ್ಟಿಕೊಡುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ.

ಶರಣಬಸಪ್ಪ ಕೋಲ್ಕಾರ ಅವರ *ಶಿಲಾಯುಗದ ಗವಿಚಿತ್ರಗಳು* ಎಂಬ ಕೊಪ್ಪಳ ಜಿಲ್ಲೆಯ ಪ್ರಾಗಿತಿಹಾಸ ಕಾಲದ ಗವಿವರ್ಣ ಹಾಗೂ ಬಯಲು ಬಂಡೆ ಚಿತ್ರಗಳನ್ನು ಪ್ರಧಾನವಾಗಿಟ್ಟುಕೊಂಡ ನಡೆಸಿದ ಅಧ್ಯಯನವು ಶಿಲಾಯುಗ ಕಾಲದ ಜನ ಜೀವನವನ್ನು ಅರಿಯುವಲ್ಲಿ ತುಂಬಾ ಮಹತ್ವದ ಕೃತಿಯಾಗಿದೆ.[೭] ಅವರದೆ *ಕೊಪ್ಪಳ-ಹಂಪಿ ಪ್ರದೇಶದ ಪ್ರಾಗಿತಿಹಾಸ ಕಾಲದ ಕಲೆ* ಎಂಬ ಕೃತಿಯಲ್ಲಿ ಕೊಪ್ಪಳ ಜಿಲ್ಲೆಯ ಪ್ರಾಗಿತಿಹಾಸ ಕಾಲದ ಕಲೆಯನ್ನು ಕುರಿತು ವಿವರಿಸಿದ್ದಾರೆ. ಈ ಕೃತಿಯು ಕೊಪ್ಪಳ ಜಿಲ್ಲೆಯ ಇತಿಹಾಸ ಪೂರ್ವ ಕಾಲದ ಇತಿಹಾಸ ಕುರಿತು ಮಾಹಿತಿ ನೀಡುವ ಮಹತ್ವದ ಕೃತಿಯಾಗಿದೆ.[೮] ಇವರು *ಕನಕಗಿರಿ ಪ್ರದೇಶದ ಸ್ಮಾರಕಗಳು ಮತ್ತು ಮೂರ್ತಿಶಿಲ್ಪಗಳು*(ಅಪ್ರಕಟಿತ) ಎಂಬ ಎಂ.ಫಿಲ್ ಸಂಪ್ರಬಂಧದಲ್ಲಿ ವಿಜಯನಗರ ಅರಸರ ಮಾಂಡಲಿಕರಾದ ಕನಕಗಿರಿ ಅರಸರ ರಾಜಕೀಯ, ಆಡಳಿತ, ಶಾಸನ, ದೇವಾಲಯ, ಮೂರ್ತಿಶಿಲ್ಪ, ಸ್ಮಾರಕ ಶಿಲ್ಪಗಳನ್ನು ಕುರಿತು ವಿವರವಾದ ವಿಶ್ಲೇಷಣೆ ಮಾಡಿದ್ದಾರೆ.[೯] ಇದೇ ಲೇಖಕರ *ವಿಜಯನಗರದ ಮಾತೃಸ್ಥಾನ ಆನೆಗೊಂದಿ*[೧೦],

ಆನೆಗುಂದಿ[೧೧] ಮತ್ತು *ಹಿರೇಜಂತಗಲ್ ಇತಿಹಾಸ-ವಾಸ್ತುಶಿಲ್ಪಕಲೆ* [೧೨] ಕೃತಿಗಳಲ್ಲಿ ವಿಜಯನಗರ ಪರಿಸರದ ಚರಿತ್ರೆ, ಕಲೆ, ಸಂಸ್ಕೃತಿ ಸಂಶೋಧನಾ ಲೇಖನಗಳಲ್ಲಿ[೧೩] ವಿಜಯನಗರ ಕಾಲಕ್ಕೆ ಸಂಬಂಧಸಿದ ಶಾಸನ, ದೇವಾಲಯ, ಮೂರ್ತಿಶಿಲ್ಪ, ಸ್ಮಾರಕ ಶಿಲ್ಪ, ಕೋಟೆಗಳು ಮೊದಲಾದ ವಿಷಯಗಳನ್ನು ಕುರಿತು ಚರ್ಚಿಸಲಾಗಿದೆ.

ಮಹದೇವ ಸಿ. ಅವರು *ವಿಜಯನಗರದ ಗಾರೆಶಿಲ್ಪ* ಎಂಬ ಕೃತಿಯಲ್ಲಿ ವಿಜಯನಗರದ ಗಾರೆಶಿಲ್ಪಗಳ ರಚನಾಕಾಲ, ಸ್ಥಾನ ಮತ್ತು ವಸ್ತು, ಗೂಡು ಶಿಲ್ಪಗಳ ರಚನೆ, ಶೈವ, ವೈಷ್ಣವ, ಮಿಥುನ ಶಿಲ್ಪಗಳನ್ನು ಕುರಿತು ವಿವರಿಸಿದ್ದಾರೆ.[೧೪] ಇದೇ ಲೇಖಕರ *ಕುಮ್ಮಟದುರ್ಗದ ಅರಸರು* ಈ ಕೃತಿಯಲ್ಲಿ ಕೊಪ್ಪಳ ಜಿಲ್ಲೆಯ ಕುಮ್ಮಟದುರ್ಗದಿಂದ ಆಳಿದ ಮುಮ್ಮಡಿ ಸಿಂಗೆನಾಯಕ, ಕಂಪಿಲರಾಯ ಹಾಗೂ ಕುಮಾರರಾಮರ ಇತಿಹಾಸವನ್ನು ನಿರೂಪಿಸಲಾಗಿದೆ. ಜೊತೆಗೆ ಕುಮ್ಮಟದುರ್ಗದ ಪ್ರಾಚ್ಯಾವಶೇಷಗಳನ್ನು ಪರಿಚಯಿಸಲಾಗಿದೆ.[೧೫] ಶೇಷಶಾಸ್ತ್ರಿ ಆರ್. ಅವರು *ಕರ್ನಾಟಕದ ವೀರಗಲ್ಲುಗಳು* ಎಂಬ ಕೃತಿಯಲ್ಲಿ ಕರ್ನಾಟಕದ ಸ್ಮಾರಕ ಶಿಲ್ಪಗಳ ಬಗೆಗೆ ಸಮಗ್ರವಾಗಿ ಮೊದಲಿಗೆ ಅಧ್ಯಯನ ಮಾಡಿದ್ದಾರೆ. ಈ ಕೃತಿಯಲ್ಲಿ ಕೊಪ್ಪಳ ಜಿಲ್ಲೆಗೆ ಸಂಬಂಧಿಸಿದಂತೆ ಆನೆಗೊಂದಿ, ಕಡೇಬಾಗಿಲು ಈ ಪ್ರದೇಶದಲ್ಲಿರುವ ವೀರಗಲ್ಲು, ವೀರಮಾಸ್ತಿಗಲ್ಲು, ಮಾಸ್ತಿಗಲ್ಲುಗಳ ಬಗೆಗೆ ವಿಶ್ಲೇಷಿಸಿದ್ದಾರೆ.[೧೬]

ಪರಮಶಿವಮೂರ್ತಿ ಡಿ. ವಿ. ಅವರ *ಕನ್ನಡ ಶಾಸನ ಶಿಲ್ಪಗಳು* ಎಂಬ ಕೃತಿಯಲ್ಲಿ ವೀರಗಲ್ಲು ಶಿಲ್ಪಗಳನ್ನು ಕ್ಷೇತ್ರಕಾರ್ಯದ ಹಿನ್ನೆಲೆಯೊಂದಿಗೆ ಚರ್ಚಿಸಲಾಗಿದೆ. ಕೊಪ್ಪಳ ಜಿಲ್ಲೆಯ ಕೊಪ್ಪಳ, ಆನೆಗೊಂದಿ, ಹಾಲಳ್ಳಿ, ಈ ಪ್ರದೇಶದಲ್ಲಿರುವ ಸ್ಮಾರಕ ಶಿಲ್ಪಗಳ ಬಗ್ಗೆ ವಿವರಿಸಿದ್ದಾರೆ.[೧೭] ಇದೇ ಲೇಖಕರ *ಕೃಷ್ಣದೇವರಾಯನ ಶಾಸನ ಸಂಪುಟ* ದಲ್ಲಿ ಕೃಷ್ಣದೇವರಾಯನ ಕರ್ನಾಟಕ, ಆಂದ್ರಪ್ರದೇಶ, ತಮಿಳುನಾಡು ಮತ್ತು ಮಹಾರಾಷ್ಟ್ರಗಳಲ್ಲಿ ದೊರೆತಿರುವ ಕನ್ನಡ ಭಾಷೆಯ ಶಾಸನಗಳ ಸಂಗ್ರಹವಾಗಿದೆ. ಕರ್ನಾಟಕದ ಕೊಪ್ಪಳ ಜಿಲ್ಲೆಯ ಕಿಡಿದಾಳು, ಕೊಪ್ಪಳ, ಗಿಣಿಗೇರಿ, ಗೊಂಡಬಾಳು, ಬಂಡಿಹರ್ಲಾಪುರ, ಹತ್ತೋಟಿ, ಕನಕಗಿರಿ, ಕೆಸರಟ್ಟಿಯಲ್ಲಿರುವ ಕೃಷ್ಣದೇವರಾಯನ ಕಾಲಕ್ಕೆ ಸಂಬಂಧಿಸಿದ ಶಾಸನಗಳನ್ನು ಕುರಿತು ಚರ್ಚಿಸಿದ್ದಾರೆ. ಪರಮಶಿವಮೂರ್ತಿ ಡಿ. ವಿ., ವಾಸುದೇವ ಬಡಿಗೇರ, ವಿರೂಪಾಕ್ಷಿ ಪೂಜಾರಹಳ್ಳಿ ಅವರ ಸಂಪಾದಕತ್ವದ *ಕೃಷ್ಣದೇವರಾಯ ಆಯ್ದ ಲೇಖನ* ಸಂಪುಟದಲ್ಲಿ ಕೃಷ್ಣದೇವರಾಯನಿಗೆ ಸಂಬಂಧಿಸಿದ ಲೇಖನಗಳನ್ನು ಪ್ರಕಟಿಸಿದ್ದಾರೆ. ಈ ಲೇಖನಗಳು ನನ್ನ ಅಧ್ಯಯನಕ್ಕೆ ಸಂಬಂಧಿಸಿದ ಪೂರಕವಾದ ಮಾಹಿತಿಯನ್ನು ಒದಗಿಸುತ್ತದೆ.[೧೮]

ಸೋಮಶೇಖರ್ ಎಸ್. ವೈ. ಅವರು *ವಿಜಯನಗರ ಕಾಲದ ಸೈನ್ಯ ವ್ಯವಸ್ಥೆ ಮತ್ತು ಯುದ್ಧನೀತಿ* ಎಂಬ ಕೃತಿಯಲ್ಲಿ ಯುದ್ಧದ ಬಗೆಗೆ ಚರ್ಚಿಸಿದ್ದಾರೆ. ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ಹೂಲಿಕೇರಿ, ಕೊಪ್ಪಳದ ನಿಟ್ಟಾಲಿ ಪ್ರದೇಶದಲ್ಲಿ ದೊರೆತಿರುವ ವೀರಗಲ್ಲುಗಳನ್ನು ಕುರಿತು ವಿವರಿಸಿದ್ದಾರೆ.[೧೯] ಸುಜಾತ ಮಲ್ಲನಗೌಡ ಅವರ *ರಾಯಚೂರು ಕೊಪ್ಪಳ ಜಿಲ್ಲೆಯ ಕೋಟೆಗಳನ್ನು* ಕುರಿತಾದ ಪಿಎಚ್.ಡಿ ಮಹಾಪ್ರಬಂಧದಲ್ಲಿ ಕೊಪ್ಪಳ ಜಿಲ್ಲೆಯ ವಿವಿಧ ಅರಸು ಮನೆತನಕ್ಕೆ ಸಂಬಂಧಿಸಿದ

ಕೋಟೆಗಳನ್ನು ಕುರಿತು ವಿವರಿಸಿದ್ದಾರೆ. ಅದರಲ್ಲಿ ವಿಜಯನಗರ ಕಾಲಕ್ಕೆ ಸಂಬಂಧಿಸಿದ ಕೋಟೆಗಳ ಬಗ್ಗೆ ಮಾಹಿತಿಯನ್ನು ಒದಗಿಸುತ್ತದೆ.[೨೦]

ಸತೀಶ, ಕೆ. ಅವರು *ವಿಜಯನಗರ ಕಾಲದ ಶೈವ ದೇವಾಲಯಗಳು* (ಕರ್ನಾಟಕ), ಎಂಬ ಕೃತಿಯಲ್ಲಿ ವಿಜಯನಗರ ಕಾಲದ ಶೈವದೇವಾಲಯಗಳ ಬಗ್ಗೆ ವಿವರಿಸಿದ್ದಾರೆ. ಅದರಲ್ಲಿ ವಿಜಯನಗರ ಕಾಲದ ಧಾರ್ಮಿಕವಾಗಿ, ಪಾಶುಪತ, ಕಾಳಾಮುಖ, ಶೈವ, ವೀರಶೈವ ದೇವಾಲಯಗಳ ಬೆಳವಣಿಗೆ, ವಿಜಯನಗರ ದೇವಾಲಯಗಳ ವೈಶಿಷ್ಟ್ಯಗಳು, ವಿಜಯನಗರ ಕಾಲದ ಶೈವ ದೇವಾಲಯಗಳು, ಶೈವದೇವಾಲಯಗಳ ಸಾಂಸ್ಕೃತಿಕ ಚಿತ್ರಣವನ್ನು ಹಾಗೂ ಶೈವ ದೇವಾಲಯಗಳ ಕೋಷ್ಠಕವನ್ನು ನೀಡಿದ್ದಾರೆ. ಆದರೆ ಈ ಕೃತಿಯಲ್ಲಿ ಕೊಪ್ಪಳ ಜಿಲ್ಲೆಯ ವಿಜಯನಗರ ಕಾಲದ ಯಾವುದೇ ಶೈವ ದೇವಾಲಯದ ಬಗ್ಗೆ ಚರ್ಚಿಸಿಲ್ಲ.[೨೧] ಭಟಸೂರಿ ಕೆ.ಜಿ. ಅವರು *Sculptures in the Government museum Raichur* ಎಂಬ ಕೃತಿಯಲ್ಲಿ ರಾಯಚೂರಿನ ನವರಂಗ ದರ್ವಾಜ್‌ನಲ್ಲಿರುವ ವಸ್ತುಸಂಗ್ರಹಾಲಯದಲ್ಲಿ ಆನೆಗೊಂದಿ ಮತ್ತು ಗಂಗಾವತಿಯ ವಿಷ್ಣು, ಗಣೇಶ, ಆಂಜನೇಯ, ನೃತ್ಯ, ಕೋಲಾಟ ಶಿಲ್ಪಗಳು ಹೀಗೆ ಮೊದಲಾದ ವಿಜಯನಗರ ಕಾಲಕ್ಕೆ ಸಂಬಂಧಿಸಿದ ಶಿಲ್ಪಗಳನ್ನು ಕುರಿತು ವಿವರಿಸಿದ್ದಾರೆ.[೨೨] ದೇವರಕೊಂಡಾರೆಡ್ಡಿಯವರ ಸಂಪಾದನೆಯಲ್ಲಿ ಪ್ರಕಟವಾದ *ಹಂಪಿ ಸಂಪುಟ* ದಲ್ಲಿ ವಿದ್ವಾಂಸರು ಕಲೆ, ಕ್ರೀಡೆ ಮತ್ತು ಕೌಶಲ ಕುರಿತಂತೆ ಬರೆದ ಹಲವು ಲೇಖನಗಳು ಸಹ ನನ್ನ ಅಧ್ಯಯನಕ್ಕೆ ಪೂರಕವಾದ ಮಾಹಿತಿಯನ್ನು ಒದಗಿಸುತ್ತದೆ.[೨೩]

ಶಿವರುದ್ರಸ್ವಾಮಿ ಎನ್. ಎಸ್. ಅವರ *vijayanagara temples in Karnataka* ಎಂಬ ಕೃತಿಯಲ್ಲಿ ಕರ್ನಾಟಕದಲ್ಲಿರುವ ವಿಜಯನಗರ ಕಾಲದ ದೇವಾಲಯಗಳ ವಾಸ್ತು ಲಕ್ಷಣಗಳನ್ನು ಮತ್ತು ಮೂರ್ತಿಶಿಲ್ಪಗಳನ್ನು ಕುರಿತು ವಿವರಿಸಲಾಗಿದೆ. ಮೂರ್ತಿಶಿಲ್ಪವನ್ನು ಶೈವ, ವೈಷ್ಣವ ಮತ್ತು ಲೌಕಿಕ ಶಿಲ್ಪಗಳು ಎಂದು ವಿಭಾಗಿಸಿಕೊಂಡು ವಿಶ್ಲೇಷಣೆಗೆ ಒಲಪಡಿಸಿದ್ದಾರೆ. ಈ ಕೃತಿಯು ಈ ಅಧ್ಯಯನಕ್ಕೆ ಪೂರಕವಾದ ಮಾಹಿತಿಯನ್ನು ನೀಡುತ್ತದೆ.[೨೪]

ಚಲುವರಾಜು ಅವರು *ಹಂಪಿಯ ಸ್ಮಾರಕಗಳಲ್ಲಿ ಜನಪದೀಯ ಅಂಶಗಳು* ಎಂಬ ಕೃತಿಯಲ್ಲಿ ವಿಜಯನಗರ ಕಾಲದ ಜನಪದರು ಪ್ರದರ್ಶಿಸುತ್ತಿದ್ದ ಕೆಲವು ಜನಪದ ಕಲೆಗಳಿಗೆ ಸಂಬಂಧಿಸಿದ ಕೊರವಂಜಿ, ಹಾವಾಡಿಗರು, ನರ್ತಕರು ಮೊದಲಾದ ಶಿಲ್ಪಗಳ ಬಗ್ಗೆ ವಿವರಿಸಿದ್ದಾರೆ. ಈ ಕೃತಿಯು ಈ ಅಧ್ಯಯನಕ್ಕೆ ಲೌಕಿಕ ಶಿಲ್ಪಗಳನ್ನು ಕುರಿತು ಪೂರಕವಾದ ಮಾಹಿತಿಯನ್ನು ನೀಡುತ್ತದೆ.[೨೫] ಗೋಪಾಲ್ ಅರ್. ಅವರ ಸಂಪಾದಕತ್ವದ *ಇತಿಹಾಸ ಮತ್ತು ಪುರಾತತ್ವ* ಪುಸ್ತಕದಲ್ಲಿ ಕೊಪ್ಪಳ ಜಿಲ್ಲೆಯ ಪ್ರಾಗಿತಿಹಾಸಕಾಲದಿಂದ ಆಧುನಿಕ ಜನಪರ ಹೋರಾಟದವರೆಗಿನ ಹಲವಾರು ಲೇಖನಗಳಿವೆ.[೨೬]

ಅಶ್ವಥ ಡಿ.ಎಸ್. ಅವರು *ಕೊಪ್ಪಳ ಒಂದು ಸಾಂಸ್ಕೃತಿಕ ಅಧ್ಯಯನ* ಎಂಬ ಕೃತಿಯಲ್ಲಿ ಕೊಪ್ಪಳದ ಪ್ರಾಗಿತಿಹಾಸಿಕ, ರಾಜಕೀಯ ಚರಿತ್ರೆ, ವಾಸ್ತುಶಿಲ್ಪ, ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ,

ಆರ್ಥಿಕ, ಶಾಸನಗಳು, ವೀರಗಲ್ಲುಗಳು, ನಿಶಿದಿಗಲ್ಲುಗಳನ್ನು ಕುರಿತು ವಿವರಿಸಿದ್ದಾರೆ.[೨೭] ಬಸವರಾಜ ಆಕಳವಾಡಿ ಸಂಪಾದನೆಯಲ್ಲಿ *ಆನೆಗೊಂದಿ : ಅವಲೋಕನ* ಕೃತಿಯಲ್ಲಿ ಕೊಪ್ಪಳ ಜಿಲ್ಲೆಯ ಪರಿಚಯ, ಭೌಗೋಳಿಕತೆ ಮತ್ತು ಪ್ರಾಗಿತಿಹಾಸ, ಪೌರಾಣಿಕ ಹಿನ್ನೆಲೆ, ಜಿಲ್ಲೆಯಲ್ಲಿಯ ರಾಮಾಯಣದ ಐತಿಹ್ಯಗಳು, ಚರಿತ್ರೆ, ನರಪತಿ ಸಂಸ್ಥಾನ, ಅರಸುಮನೆತನದ ಅರಸಿಯರು, ಧರ್ಮ ಮತ್ತು ಸಂಸ್ಕೃತಿ, ಶಾಸನಗಳು, ಕಲೆ ಮತ್ತು ವಾಸ್ತುಶಿಲ್ಪ, ಸಾಂಸ್ಕೃತಿಕ ನೆಲೆಗಳು, ಕೋಟೆಕೊತ್ತಲಗಳು, ನವವೃಂದಾವನ, ಅಂಜನಾದ್ರಿ, ನೀರಾವರಿ ವ್ಯವಸ್ಥೆ ಹೀಗೆ ಮೊದಲಾದ ವಿಷಯಗಳನ್ನು ಕುರಿತು ವಿವರಿಸಲಾಗಿದೆ.[೨೮] ಪಾಟೀಲ ಬಿ.ಸಿ. ಅವರು *ಕೊಪ್ಪಳ ಸಾಂಸ್ಕೃತಿಕ ಪರಂಪರೆ* ಕೃತಿಯಲ್ಲಿ ಕೊಪ್ಪಳ ನಗರದ ಇತಿಹಾಸವನ್ನು ಪ್ರಾಗಿತಿಹಾಸ ಕಾಲದಿಂದ ಆಧುನಿಕ ಕಾಲದವರೆಗೆ ಕಟ್ಟಿಕೊಡಲು ಪ್ರಯತ್ನಿಸಲಾಗಿದೆ.

ವಿನೋದಾ ಪಾಟೀಲ ಅವರ *ಕರ್ನಾಟಕದ ಪ್ರಾಚೀನ ಬಾವಿಗಳು* ಎಂಬ ಕೃತಿಯಲ್ಲಿ ಕರ್ನಾಟಕದ ಹಲವಾರು ಬಾವಿಗಳ ಚರಿತ್ರೆಯನ್ನು ತಿಳಿಸಿದ್ದಾರೆ. ಅದರಲ್ಲಿ ಕೊಪ್ಪಳ ಜಿಲ್ಲೆಯ ಕನಕಗಿರಿಯ ವೆಂಕಟಪತಿ ಬಾವಿಯ ಬಗ್ಗೆ ತಿಳಿಸಿದ್ದಾರೆ.[೨೯] ಈ ಗ್ರಂಥದಿಂದ ಕರ್ನಾಟಕದ ನೀರಾವರಿ ವ್ಯವಸ್ಥೆಯಲ್ಲಿ ಬಾವಿಗಳ ಮಹತ್ವ ತಿಳಿದುಬರುತ್ತದೆ. ಶ್ಯಾಮರಾವ ಪುಲುಮತಿ, ಅವರ *ವಿಜಯನಗರ ಕಲೆ ಮತ್ತು ಸಾಹಿತ್ಯ* ಎಂಬ ಕೃತಿಯು ವಿಜಯನಗರದ ಕಲೆ, ವಾಸ್ತುಶಿಲ್ಪ, ಸಾಹಿತ್ಯಕ್ಕೆ ಸಂಬಂಧಿಸಿದ ಮಾಹಿತಿಯನ್ನು ಒದಗಿಸುತ್ತದೆ. ಅದರಲ್ಲಿ ತುಂಗಭದ್ರಾ ನದಿಯ ದಡದಲ್ಲಿರುವ ಆನೆಗೊಂದಿಯ ಪ್ರದೇಶದಲ್ಲಿರುವ ಕೆಲವು ಶಿಲ್ಪಕಲೆಗಳನ್ನು ಕುರಿತು ವಿವರಿಸಲಾಗಿದೆ.[೩೦] ಹಿರೇಮಠ ಎಸ್.ಎಸ್. ಅವರ *ಕೊಪ್ಪಳ ಜಿಲ್ಲೆಯ ಜಾತ್ರೆಗಳು* ಎಂಬ ಪುಸ್ತಕದಲ್ಲಿ ಕೊಪ್ಪಳ, ಗಂಗಾವತಿ, ಯಲಬುರ್ಗಾ, ಕುಷ್ಠಗಿ ತಾಲೂಕುಗಳಲ್ಲಿರುವ ಜಾತ್ರೆ ಮತ್ತು ಜಾತ್ರೆಯಲ್ಲಿ ನಡೆದ ಪ್ರಮುಖ ಆಚರಣೆಗಳನ್ನು ಕುರಿತು ವಿವರಿಸಿದ್ದಾರೆ.[೩೧]

ಪರಮಶಿವಮೂರ್ತಿ ಡಿ.ವಿ ಅವರ *ಅತ್ತಿವಟ್ಟಿ ಶಾಸನ ಮತ್ತು ಸ್ಥಳೀಯ ಕೃಷಿ ವ್ಯವಸ್ಥೆ'* ಲೇಖನವು ವಿಜಯನಗರ ಅಧ್ಯಯನ ಸಂಪುಟ–೮ರಲ್ಲಿ ಪ್ರಕಟವಾಗಿದೆ. ಇದರಲ್ಲಿ ಅತ್ತಿವಟ್ಟಿ ಅಥವಾ ಹತೋಟಿ ಗ್ರಾಮದಲ್ಲಿರುವ ಶಾಸನ ಮತ್ತು ಅಲ್ಲಿರುವ ಬಾಲಕೃಷ್ಣನನ್ನು ಕುರಿತು ಚಿತ್ರಿಸಲಾಗಿದೆ. ಹಂಪಿಯ ಬಾಲಕೃಷ್ಣ ದೇವಾಲಯಕ್ಕೆ ಸಂಬಂಧಪಟ್ಟಂತೆ ಅನೇಕ ವಿಷಯಗಳನ್ನು ಹಾಗೂ ಪ್ರಸ್ತುತ ಅಧ್ಯಯನಕ್ಕೆ ಪೂರಕ ಮಾಹಿತಿಯನ್ನು ಒದಗಿಸುವ ಲೇಖನವಾಗಿದೆ.[೩೨] ಜಗದೀಶ ಅವರ *ಚಂದ್ರಮೌಳೇಶ್ವರ ದೇವಾಲಯ ನಿರ್ಮಾಣ ಕಾಲ* ಎಂಬ ಲೇಖನವು ವಿಜಯನಗರ ಅಧ್ಯಯನ ಸಂಪುಟ–೧ಳ ರಲ್ಲಿ ಪ್ರಕಟವಾಗಿದೆ. ಈ ಲೇಖನದಲ್ಲಿ ಗಂಗಾವತಿ ತಾಲೂಕಿನ ಹನುಮನಹಳ್ಳಿಯ ಚಂದ್ರಮೌಳೇಶ್ವರ ದೇವಾಲಯದ ಬಗ್ಗೆ ಚರ್ಚಿಸಿದ್ದಾರೆ. ಈ ಲೇಖನವು ಪ್ರಸ್ತುತ ಅಧ್ಯಯನಕ್ಕೆ ಪೂರಕ ಮಾಹಿತಿಯನ್ನು ಒದಗಿಸುವ ಲೇಖನವಾಗಿದೆ.[೩೩] ವಿರೂಪಾಕ್ಷಿ ಪೂಜಾರಹಳ್ಳಿ ಅವರು *ವಿಜಯನಗರ ಕಾಲದ ಮೀನುಗಾರಿಕೆ ಮತ್ತು ಅಂಬಿಗತನ* ಎಂಬ ಲೇಖನವು ವಿಜಯನಗರ ಅಧ್ಯಯನ ಸಂಪುಟ–೬ ರಲ್ಲಿ ಪ್ರಕಟವಾಗಿದೆ. ಈ ಲೇಖನದಲ್ಲಿ ಆನೆಗೊಂದಿಯಲ್ಲಿರುವ ಹುಟ್ಟನ್ನು

ಹಿಡಿದುಕೊಂಡಿರುವ ಅಂಬಿಗರ ಶಿಲ್ಪ ಹಾಗೂ ಅದರ ಕುರಿತು ಇರುವ ಐತಿಹ್ಯ ಮತ್ತು ಶಾಸನಗಳನ್ನು ಕುರಿತು ವಿವರಿಸಿದ್ದಾರೆ.[೩೪] ವಾಸುದೇವನ್ ಸಿ.ಎಸ್. ಅವರು *ಮಧ್ಯಯುಗೀನ ಕಾಲದ ಜನವಸತಿ ನೆಲೆ ಕಡೇಬಾಗಿಲು* ಎಂಬ ಲೇಖನವು ವಿಜಯನಗರ ಅಧ್ಯಯನ ಸಂಪುಟ–೧೩ ರಲ್ಲಿ ಪ್ರಕಟಗೊಂಡಿದೆ. ಇದರಲ್ಲಿ ಆದಿ ಇತಿಹಾಸಕಾಲದಿಂದ ಮಧ್ಯಯುಗೀನ ಕಾಲದ ವರೆಗಿನ ಚರಿತ್ರೆಯನ್ನು ಕಟ್ಟಿಕೊಟ್ಟಿದ್ದಾರೆ. ವಿಜಯನಗರ ಕಾಲದಲ್ಲಿ ನಿರ್ಮಿಸಲಾದ ಕೋಟೆ ಗೋಡೆ, ದ್ವಾರದ ಬಾಗಿಲು ಬಳಿಯ ಆಂಜನೇಯ ದೇವಾಲಯ, ವೀರಗಲ್ಲು ಮೊದಲಾದವುಗಳನ್ನು ಕುರಿತು ವಿವರಿಸಿದ್ದಾರೆ.[೩೫]

ನಾಗನೂರು ಎ.ವಿ. *Jainisam in Ballari, Raichur And Koppal District : A cultural Studies,*[೩೬] ಸುಶೀಲಾ ತಾಳಿಕೋಟಿಯವರು ಶೈವಧರ್ಮ ಪರಂಪರೆಗೆ ಕೊಪ್ಪಳ ಜಿಲ್ಲೆಯ ಕೊಡುಗೆ (೨೦೧೦) ಮತ್ತು ಗವಿಸಿದ್ದಪ್ಪ ಪಾಟೀಲರವರು *ಕುಕನೂರು : ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಅಧ್ಯಯನ* ಎಂಬ ಮಹಾಪ್ರಬಂಧಗಳಲ್ಲಿ ಕೊಪ್ಪಳ ಜಿಲ್ಲೆಯ ಚರಿತ್ರೆಯನ್ನು ಕುರಿತು ವಿವರಿಸಿದ್ದಾರೆ.

ರವಿ ಎನ್. ಚವ್ಹಾಣ ಅವರ *ಕುಷ್ಟಗಿ ತಾಲೂಕಿನ ಶಾಸನಗಳು ಮತ್ತು ಸ್ಮಾರಕಗಳು*, ಎಂಬ ಪಿಎಚ್.ಡಿ ಮಹಾಪ್ರಬಂಧದಲ್ಲಿ ಕುಷ್ಟಗಿ ತಾಲೂಕಿನ ಶಾಸನ, ದೇವಾಲಯ, ಮೂರ್ತಿಶಿಲ್ಪ, ಕೋಟೆ ಮತ್ತು ಜಲಮೂಲಗಳನ್ನು ಕುರಿತು ಚರ್ಚಿಸಿದ್ದಾರೆ. ಅದರಲ್ಲಿ ವಿಜಯನಗರ ಕಾಲಕ್ಕೆ ಸಂಬಂಧಿಸಿದ ಸ್ಮಾರಕಗಳ ಪೂರಕ ಮಾಹಿತಿಯನ್ನು ಒದಗಿಸುತ್ತವೆ.[೩೭]

ಕುಮಾರಿ ಶಾರದಾ ಮಲ್ಲಿಕಾರ್ಜುನ ಪಾಟೀಲ್ ಅವರ *ಕೊಪ್ಪಳ ಜಿಲ್ಲೆಯ ಕೆರೆ–ಬಾವಿಗಳು : ಚಾರಿತ್ರಿಕ ಅಧ್ಯಯನ* ಎಂಬ ಪಿಎಚ್.ಡಿ. ಮಹಾಪ್ರಬಂಧದಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ದೊರೆಯುವ ಪ್ರಾಗಿತಿಹಾಸ ಕಾಲದಿಂದ ಆಧುನಿಕ ಕಾಲದ ವರೆಗಿನ ಕೆರೆ, ಬಾವಿಗಳನ್ನು ಕುರಿತು ಚರ್ಚಿಸಿದ್ದಾರೆ. ಇವರು ವಿಜಯನಗರ ಕಾಲಕ್ಕೆ ಸಂಬಂಧಿಸಿದಂತೆ ಕೆಲವೊಂದು ಕೆರೆ ಬಾವಿಗಳನ್ನು ಮಾತ್ರ ವಿವರಿಸಿದ್ದಾರೆ. ಈ ಮಹಾಪ್ರಬಂಧವನ್ನು ಪೂರಕ ಮಾಹಿತಿಗಾಗಿ ಬಳಸಿಕೊಳ್ಳಲಾಗಿದೆ.[೩೮]

ಸಿದ್ಧಲಿಂಗಪ್ಪ ಕೊಟ್ನೆಕಲ್ ಅವರು *ಕೊಪ್ಪಳ ಜಿಲ್ಲೆಯ ಶಾಸನಗಳು ಮತ್ತು ಸಾಂಸ್ಕೃತಿಕ ಇತಿಹಾಸ*, ಎಂಬ ಕೃತಿಯಲ್ಲಿ ಕೊಪ್ಪಳ ಜಿಲ್ಲೆಯ ಶಾಸನಗಳ ಮೂಲಕ ರಾಜಕೀಯ, ಆರ್ಥಿಕ, ಸಾಮಾಜಿಕ, ಧಾರ್ಮಿಕ, ಶೈಷಣಿಕ, ಸಾಹಿತ್ಯಿಕ ಮೊದಲಾದ ವಿಷಯಗಳನ್ನು ಶಾಸನಗಳ ಹಿನ್ನೆಲೆಯಿಂದ ಚರ್ಚಿಸಿದ್ದಾರೆ.[೩೯] ಸಾಯಬಣ್ಣ ಕ. ಮೇಲಕಾರ ಅವರ *ಕೊಪ್ಪಳ ಜಿಲ್ಲೆಯ ಶಾಸನಗಳ ಸಾಂಸ್ಕೃತಿಕ ಚರಿತ್ರೆ ಮತ್ತು ಶಿಲಾಯುಗದ ಸಂಸ್ಕೃತಿ* ಎಂಬ ಕೃತಿಯಲ್ಲಿ ಪ್ರಾಗಿತಿಹಾಸಿಕ ಕಾಲದಿಂದ ವಿಜಯನಗರ ಕಾಲದವರೆಗೂ ಚರ್ಚಿಸಿದ್ದಾರೆ.[೪೦] ಸುಬಾಸ ಅವರು *ಕೊಪ್ಪಳ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ* ಎಂಬ ಪಿಎಚ್.ಡಿ. ಮಹಾಪ್ರಬಂಧದಲ್ಲಿ ಕೊಪ್ಪಳ ಜಿಲ್ಲೆಯ ಪ್ರಾರಂಭದಿಂದ ಹದಿನೆಂಟನೆಯ ಶತಮಾನದವರೆಗಿನ ಇತಿಹಾಸವನ್ನು ತಿಳಿಸಿದ್ದಾರೆ. ಇದರೊಂದಿಗೆ ಧಾರ್ಮಿಕ, ಲೌಕಿಕ, ರಕ್ಷಣಾತ್ಮಕ ಸ್ಮಾರಕಗಳು ಹಾಗೂ ಶಿಲ್ಪ, ವೀರಗಲ್ಲು, ಮಾಸ್ತಿಗಲ್ಲು, ನಿಸಧಿಗಳನ್ನು ಕುರಿತು ವಿವರಿಸಿದ್ದಾರೆ.[೪೧] ಈ

ಮೇಲಿನ ಮೂರು ಮಹಾಪ್ರಬಂಧಗಳನ್ನು ನನ್ನ ಅಧ್ಯಯನಕ್ಕೆ ಪೂರಕವಾಗಿ ಕೊಪ್ಪಳ ಜಿಲ್ಲೆಯ ಚಾರಿತ್ರಿಕ ಸಂಗತಿಗಳನ್ನು ತಿಳಿದುಕೊಳ್ಳಲು ಬಳಸಿಕೊಳ್ಳಲಾಗಿದೆ.

ಮಹೇಶ ಕೆ. ಅವರ *ಕೃಷ್ಣದೇವರಾಯನ ಕಾಲದ ವೈಷ್ಣವ ದೇವಾಲಯಗಳು*, ಎಂಬ ಪಿಎಚ್.ಡಿ ಮಹಾಪ್ರಬಂಧದಲ್ಲಿ ಕೃಷ್ಣದೇವರಾಯನ ಅವಧಿಯಲ್ಲಿ ಆಂಧ್ರಪ್ರದೇಶ, ಕರ್ನಾಟಕ, ತಮಿಳುನಾಡುಗಳಲ್ಲಿ ನಿರ್ಮಾಣವಾದ ದೇವಾಲಯಗಳ ವಾಸ್ತುಶಿಲ್ಪ ಮತ್ತು ಕಲೆ ಕುರಿತು ವಿವರಿಸಿದ್ದಾರೆ. ಕರ್ನಾಟಕದ ಕೊಪ್ಪಳ ಜಿಲ್ಲೆಯ ಕೆಸರಟ್ಟಿಯ ಕೃಷ್ಣದೇವಾಲಯ ಕುರಿತು ವಿವರಿಸಿದ್ದಾರೆ.[೪೨] ಸುಗಂಧ ಅವರು *History And Archeology Of Anegondi* ಎಂಬ ಪಿಎಚ್.ಡಿ ಮಹಾಪ್ರಬಂಧದಲ್ಲಿ ಆನೆಗೊಂದಿಯ ಭೌಗೋಳಿಕ, ಇತಿಹಾಸ, ಪಟ್ಟಣದ ವಿನ್ಯಾಸ, ಸೈನ್ಯ ವಾಸ್ತುಶಿಲ್ಪ, ಲೌಕಿಕ ವಾಸ್ತುಶಿಲ್ಪ, ಧಾರ್ಮಿಕ ವಾಸ್ತುಕಲೆ, ಯುದ್ಧವಿದ್ಯೆ, ಸ್ಮರಣಶಿಲ್ಪಗಳ ನಕ್ಷೆಗಳ ಬಗೆಗೆ ವಿವರಿಸಿದ್ದಾರೆ.[೪೩] ಪದ್ಮಜಾ ದೇಸಾಯಿ ಅವರ *ಹಂಪಿ ಪರಿಸರದ ವೈಷ್ಣವ ಶಿಲ್ಪಗಳು* ಎಂಬ ಪಿಎಚ್.ಡಿ ಮಹಾಪ್ರಬಂಧದಲ್ಲಿ ವೈಷ್ಣವ ಧರ್ಮದ ಪ್ರಾಚೀನತೆ, ವೈಷ್ಣವ ಆಗಮಗಳು ಮತ್ತು ಪುರಾಣಗಳು, ಈ ಹಿನ್ನೆಲೆಯಲ್ಲಿ ಶಿಲ್ಪಗಳ ರಚನಾ ವಿಧಾನ ಮತ್ತು ಪ್ರಕಾರಗಳು, ವೈಷ್ಣವ ಶಿಲ್ಪಗಳು ಹಾಗೂ ಧಾರ್ಮಿಕ ಸ್ಥಿತಿಗತಿಗಳನ್ನು ಕುರಿತು ವಿವರಿಸಿದ್ದಾರೆ. ಅದರಲ್ಲಿ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಆನೆಗೊಂದಿಯ ಸಣಾಪುರದ ಕೆಲವೊಂದು ವೈಷ್ಣವ ಶಿಲ್ಪಗಳನ್ನು ಕುರಿತು ಚರ್ಚಿಸಿದ್ದಾರೆ.[೪೪] ಹೇಮಾವತಿ ಶಿ. ಮೆಣಸಗಿ ಅವರು *ಹಂಪಿ ಪರಿಸರದ ಶೈವ ಶಿಲ್ಪಗಳು* ಎಂಬ ಪಿಎಚ್.ಡಿ ಮಹಾಪ್ರಬಂಧದಲ್ಲಿ ಶೈವಧರ್ಮದ ಪ್ರಾಚೀನತೆ, ಶೈವಾಗಮಗಳು, ಶಿವಲಿಂಗಗಳು, ಚಂದ್ರಶೇಖರ, ಉಮಾಮಹೇಶ್ವರ, ಗಜಾಸಂಹಾರ, ವೀರಭದ್ರ, ಭೈರವ, ಮೈಲಾರ, ದಕ್ಷಿಣಾಮೂರ್ತಿ ಹೀಗೆ ಮೊದಲಾದ ಶಿಲ್ಪಗಳನ್ನು ಕುರಿತು ತಿಳಿಸಿದ್ದಾರೆ. ಅವುಗಳಲ್ಲಿ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಆನೆಗೊಂದಿ, ಪಂಪಾಸರೋವರ, ಕೃಷ್ಣಾಪುರ ಗ್ರಾಮಗಳಲ್ಲಿರುವ ವಿಜಯನಗರ ಕಾಲದ ಶೈವಶಿಲ್ಪಗಳ ಕುರಿತು ವಿವರಿಸಿದ್ದಾರೆ.[೪೫] ನಾಗರಾಜಪ್ಪ ಎಸ್. ಅವರು *ಹಂಪಿ ಪರಿಸರದ ಲೌಕಿಕ ಶಿಲ್ಪಗಳು* ಎಂಬ ಪಿಎಚ್.ಡಿ ಮಹಾಪ್ರಬಂಧದಲ್ಲಿ ಶಿಲೆ, ಲೋಹ, ಗಾರೆ, ಮಣ್ಣು, ಕಾಷ್ಟ ಮತ್ತು ಇತರೆ ಶಿಲ್ಪಗಳು, ನಿರೂಪಣಾತ್ಮಕ ಶಿಲ್ಪಗಳು, ಬಿಡಿ ಶಿಲ್ಪಗಳು, ಶಿಲ್ಪಗಳ ವೈವಿಧ್ಯತೆ, ಶಿಲ್ಪಗಳ ಸಾಂಸ್ಕೃತಿಕ ಅಂಶಗಳ ಕುರಿತು ಚರ್ಚಿಸಿದ್ದಾರೆ. ಈ ಪ್ರಬಂಧದಲ್ಲಿ ಆನೆಗೊಂದಿಯ ಲೌಕಿಕ ಶಿಲ್ಪಗಳನ್ನು ಕುರಿತು ತಿಳಿಸಿದ್ದಾರೆ. ಈ ಅಂಶಗಳು ಪ್ರಸ್ತುತ ಅಧ್ಯಯನಕ್ಕೆ ಮಾಹಿತಿಯನ್ನು ನೀಡುತ್ತವೆ.[೪೬] ಮಂಜಣ್ಣ ಪಿ.ಬಿ. ಅವರು *ವಿಜಯನಗರ ಕಾಲದ ಕ್ರೀಡೆ ಮತ್ತು ವಿನೋದಾವಳಿ*, ಎಂಬ ಪಿಎಚ್.ಡಿ ಮಹಾಪ್ರಬಂಧದಲ್ಲಿ ಕ್ರೀಡೆಗಳನ್ನು ದೈಹಿಕ, ಬೌದ್ಧಿಕ, ಮನರಂಜನಾತ್ಮಕ ಹಾಗೂ ವಿನೋದಾವಳಿಗಳು, ಕ್ರೀಡೆ ಮತ್ತು ವಿನೋದಾಳಿಗಳ ಸ್ಥಿತ್ಯಂತರಗಳನ್ನು ಕುರಿತು ವಿವರಿಸಿದ್ದಾರೆ. ನನ್ನ ಅಧ್ಯಯನಕ್ಕೆ ಪೂರಕವಾದ ಮಾಹಿತಿಯನ್ನು ನೀಡುತ್ತದೆ.[೪೭]

ಈ ಮೇಲಿನ (೩೭ ರಿಂದ ೪೭ರ ಅಡಿಟಿಪ್ಪಣಿಯ) ಪಿಎಚ್.ಡಿ ಮಹಾಪ್ರಬಂಧಗಳು

ವಿಜಯನಗರ ಕೇಂದ್ರಿತವಾಗಿ ನಡಸಿದ ಅಧ್ಯಯನಗಳಾಗಿದ್ದು, ಅದರಲ್ಲೂ ಮುಖ್ಯವಾಗಿ ಹಂಪಿಯನ್ನು ಕೇಂದ್ರವನ್ನಾಗಿ ಇಟ್ಟುಕೊಂಡು ಹಲವು ಶಿಲ್ಪಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿವೆ. ಪ್ರತಿಯೊಂದು ಅಧ್ಯಯನವು ತನ್ನದೆಯಾದ ಮಾನದಂಡ ಮತ್ತು ಉದ್ದೇಶವನ್ನು ಇಟ್ಟುಕೊಂಡು ನಡೆಸಿದವುಗಳಾಗಿವೆ. ಈ ಅಧ್ಯಯನಗಳು ಪ್ರಸ್ತುತ ಅಧ್ಯಯನಕ್ಕೆ ಪೂರಕವಾದ ಮಾಹಿತಿ ಒದಗಿಸುವಂತಹವುಗಳಾಗಿವೆ. ಹೀಗಾಗಿ ಇವುಗಳನ್ನು ಸಮೀಕ್ಷೆಗೆ ಒಳಪಡಿಸಲಾಗಿದೆ.

೧.೫ ಅಧ್ಯಯನ ಸ್ವರೂಪ

"ಕೊಪ್ಪಳ ಜಿಲ್ಲೆಯ ವಿಜಯನಗರ ಕಾಲದ ಸ್ಮಾರಕಗಳು" ಎನ್ನುವ ಪ್ರಸ್ತುತ ಅಧ್ಯಯನದ ಸ್ವರೂಪವು ಪ್ರಧಾನವಾಗಿ ವಿಜಯನಗರ ಕಾಲಕ್ಕೆ ಸಂಬಂಧಿಸಿದಂತೆ ಕೊಪ್ಪಳ ಜಿಲ್ಲೆಯ ರಾಜಕೀಯ ಹಾಗೂ ಸಾಂಸ್ಕೃತಿಕ ಚರಿತ್ರೆಯನ್ನು ನಿರೂಪಿಸುವುದಾಗಿದೆ. ಆ ಉದ್ದೇಶವನ್ನು ಒಳಗೊಂಡಂತೆ ಪ್ರಸ್ತುತ ಸಂಪ್ರಬಂಧವು ಏಳು ಅಧ್ಯಾಯಗಳನ್ನು ಒಳಗೊಂಡಿದೆ. ಅಧ್ಯಯನದ ಅನುಕೂಲಕ್ಕೆ ತಕ್ಕಂತೆ ಅನೇಕ ಉಪಶೀರ್ಷಿಕೆಗಳನ್ನು ಹಾಕಿಕೊಳ್ಳಲಾಗಿದೆ. ಅದರ ಸ್ವರೂಪ ಈ ಕೆಳಗಿನಂತಿದೆ.

ಪ್ರಸ್ತಾವನೆ, ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ, ಮಹತ್ವ, ಪೂರ್ವ ಅಧ್ಯಯನಗಳ ಸಮೀಕ್ಷೆ

ಭೌಗೋಳಿಕತೆ ಮತ್ತು ಚರಿತ್ರೆ

ವಾಸ್ತುರಚನೆ

ಮೂರ್ತಿಶಿಲ್ಪ

ಸ್ಮಾರಕಶಿಲ್ಪ

ನೀರಾವರಿ ವ್ಯವಸ್ಥೆ

ಸಮಾರೋಪ

ಮೊದಲನೆಯ ಅಧ್ಯಾಯವು ಪ್ರಸ್ತಾವನೆಯಾಗಿದ್ದು, ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ, ಮಹತ್ವ ಖಚಿತಪಡಿಸಿಕೊಳ್ಳಲಾಗಿದೆ. ಇದುವರೆಗಿನ ನಡೆದ ಪೂರ್ವಅಧ್ಯಯನಗಳ ಸಮೀಕ್ಷೆಯ ವಿವರಣೆಗಳನ್ನು ತಿಳಿಸಲಾಗಿದೆ. ಕೊಪ್ಪಳ ಜಿಲ್ಲೆಯ ಏಳು ತಾಲೂಕುಗಳಲ್ಲಿರುವ ವಿಜಯನಗರ ಕಾಲದ(ಕ್ರಿ.ಶ. ೧೩೩೬-೧೫೬೫) ವರೆಗಿನ ಸ್ಮಾರಕಗಳನ್ನ ಸಮಗ್ರವಾಗಿ ಅಧ್ಯಯನ ಮಾಡುವುದು ಅಧ್ಯಯವಾಗಿನದ ಉದ್ದೇಶವಾಗಿದೆ.

ಇಗಾಗಲೇ ಉದ್ದೇಶದಲ್ಲಿ ತಿಳಿಸಿದಂತೆ ಅಧ್ಯಯನದ ವ್ಯಾಪ್ತಿಯನ್ನು ಭೌಗೋಳಿಕವಾಗಿ ಜಿಲ್ಲೆಯ ಏಳು ತಾಲೂಕುಗಳನ್ನು ಒಳಪಡಿಸುವುದು ಮತ್ತು ವಿಷಯ ವ್ಯಾಪ್ತಿಯನ್ನ ಕುರಿತಂತೆ ವಿಜಯನಗರ ಅರಸರ ಕಾಲಾವಧಿಯ ಕ್ರಿ.ಶ. ೧೩೩೬-೧೫೬೫ರ ವರೆಗೆ ಒಳಪಡಿಸಲಾಗಿದೆ. ಸಂದರ್ಭಕ್ಕೆ ಅನುಗುಣವಾಗಿ ನೆರೆಯ ಜಿಲ್ಲೆಯ ವಿಜಯನಗರ ಕಾಲದ ಸ್ಮಾರಕಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ವಿಷಯಕ್ಕೆ ಸಂಬಂಧಿಸಿದಂತೆ ವಿಜಯನಗರ ಪೂರ್ವ ಮತ್ತು ವಿಜಯನಗರ ಕಾಲದ ಸ್ಮಾರಕಗಳನ್ನು ಬಳಸಿಕೊಳ್ಳಲಾಗಿದೆ.

ಎರಡನೆಯ ಅಧ್ಯಾಯವು ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆಯಾಗಿದೆ. ಇಲ್ಲಿ ಕೊಪ್ಪಳ ಜಿಲ್ಲೆಯ ಭೌಗೋಳಿಕತೆ, ಪ್ರಾಗಿತಿಹಾಸ ಹಾಗೂ ಚರಿತ್ರೆಯನ್ನು ಕುರಿತು ವಿವರಿಸಲಾಗಿದೆ. ಚಾರಿತ್ರಿಕ ಅವಧಿಯನ್ನು ಈ ಪರಿಸರವು ಪ್ರತ್ಯಕ್ಷವಾಗಿ ಇಲ್ಲದೇ ಪರೋಕ್ಷವಾಗಿ ಎಲ್ಲ ಅರಸರ ಆಳ್ವಿಕೆಗೆ ಒಳಪಟ್ಟಿದೆ. ಅದರಲ್ಲಿ ಮೌರ್ಯರು, ಶಾತವಾಹನರು, ಕದಂಬರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣಚಾಲುಕ್ಯರು, ಕುಮ್ಮಟದ ಅರಸರು, ವಿಜಯನಗರ ಅರಸರು ಹಾಗೂ ಕನಕಗಿರಿ ಪಾಳೆಯಗಾರರು ಈ ಪ್ರದೇಶದಲ್ಲಿ ಆಳ್ವಿಕೆ ಮಾಡಿದ್ದು ಅವರ ರಾಜಕೀಯ ಚರಿತ್ರೆ ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ.

ಮೂರನೆಯ ಅಧ್ಯಾಯವು ವಾಸ್ತುರಚನೆಗೆ ಸಂಬಂಧಿಸಿದ್ದು ಅದರಲ್ಲಿ ಕೊಪ್ಪಳ ಜಿಲ್ಲಾ ವ್ಯಾಪ್ತಿಯಲ್ಲಿರುವ ವಿಜಯನಗರ ಕಾಲದ ದೇವಾಲಯಗಳ ವಾಸ್ತುರಚನೆಯನ್ನು ಕುರಿತು ವಿವೇಚಿಸಲಾಗಿದೆ. ಇನ್ನು ರಕ್ಷಣಾವಾಸ್ತುವಿನಲ್ಲಿ ವಿಜಯನಗರ ಕಾಲದ ಕೋಟೆಗಳ ರಚನೆ, ಅವುಗಳ ಸ್ಥಿತಿಗತಿ, ರಚನಾ ವಿನ್ಯಾಸ ಕುರಿತು ಚರ್ಚಿಸಲಾಗಿದೆ. ಕೊಪ್ಪಳ ಜಿಲ್ಲಾ ಪ್ರದೇಶವು ವಿಜಯನಗರಕ್ಕೆ ತೀರ ನೆರೆ ಪ್ರದೇಶವಾಗಿದ್ದರಿಂದ ಇಲ್ಲಿ ತಕ್ಕಮಟ್ಟಿಗೆ ವಿಜಯನಗರ ಕಾಲದಲ್ಲಿ ದೇವಾಲಯ ಸ್ಮಾರಕಗಳು, ಕೋಟೆಗಳು ನಿರ್ಮಾಣವಾದವು. ಆನೆಗೊಂದಿ, ಹಿರೇಜಂತಕಲ್, ಕನಕಗಿರಿ ಈ ಕಾಲದ ದೇವಾಲಯಗಳ ಕೇಂದ್ರ ನೆಲೆಗಳಾಗಿವೆ. ಇಲ್ಲಿಯ ದೇವಾಲಯಗಳ ಜೊತೆಗೆ ಜಿಲ್ಲೆಯಾದ್ಯಂತ ಇರುವ ದೇವಾಲಯಗಳ ವಾಸ್ತು ವಿವರವನ್ನು ಚರ್ಚಿಸಲಾಗಿದೆ. ಜೊತೆಗೆ ಆನೆಗೊಂದಿ, ಕನಕಗಿರಿ, ಮುಂತಾದೆಡೆ ವಿಜಯನಗರ ಕಾಲದ ಕೋಟೆಗಳು ನಿರ್ಮಾಣವಾಗಿವೆ. ಈ ಕೋಟೆಗಳ ರಚನೆಯ ಬಗೆಗೆ ಚರ್ಚಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಮೂರ್ತಿಶಿಲ್ಪಗಳ ಬಗ್ಗೆ ಚರ್ಚಿಸಲಾಗಿದೆ. ವಿಜಯನಗರ ಕಾಲದ ಮೂರ್ತಿಶಿಲ್ಪಗಳನ್ನು ಧಾರ್ಮಿಕ, ಲೌಕಿಕ ಮತ್ತು ಗಾರೆಶಿಲ್ಪ ಶಿಲ್ಪಗಳಾಗಿ ವಿಂಗಡಿಸಿಕೊಂಡು ಮತ್ತೆ ಧಾರ್ಮಿಕ ಶಿಲ್ಪಗಳಲ್ಲಿ ಶೈವ, ವೈಷ್ಣವ ಮತ್ತು ಶಾಕ್ತ ಶಿಲ್ಪಗಳಾಗಿ, ಲೌಕಿಕ ಶಿಲ್ಪಗಳಲ್ಲಿ ನೃತ್ಯ, ಕೋಲಾಟದ, ವಾದ್ಯಗಾರರು, ಹಾವಾಡಿಗರು, ಮಿಥುನ, ದ್ವಾರಪಾಲಕರ, ಪ್ರಾಣಿ–ಪಕ್ಷಿ ಶಿಲ್ಪಗಳಾಗಿ ವಿಂಗಡಿಸಿಕೊಂಡು ವಿಶ್ಲೇಷಿಸಲಾಗಿದೆ.

ಐದನೆಯ ಅಧ್ಯಾಯವು ಸ್ಮಾರಕಶಿಲ್ಪಗಳ ಕುರಿತಾಗಿದ್ದು ಅದರಲ್ಲಿ ವೀರಗಲ್ಲು, ಬಂದೂಕು ವೀರಗಲ್ಲು, ಮಾಸ್ತಿಗಲ್ಲು, ವೀರ ಮಾಸ್ತಿಗಲ್ಲು ಮತ್ತು ನಿಷಧಿಗಲ್ಲು ಶಿಲ್ಪಗಳೆಂದು ವಿಂಗಡಿಸಿಕೊಂಡು ಚರ್ಚಿಸಲಾಗಿದೆ. ಬಂದೂಕು ವೀರಗಲ್ಲಿನಲ್ಲಿ ಬಂದೂಕು ಹಿಡಿದುಕೊಂಡ, ಪ್ರಯೋಗಿಸುತ್ತಿರುವ, ಪಕ್ಕದಲ್ಲಿ ಬಂದೂಕಿರುವ ಶಿಲ್ಪಗಳಾಗಿ ವಿಂಗಡಿಸಿಕೊಂಡು ವಿಶ್ಲೇಷಿಸಲಾಗಿದೆ.

ಆರನೆಯ ಅಧ್ಯಾಯವು ವಿಜಯನಗರ ಕಾಲದ ನೀರಾವರಿ ವ್ಯವಸ್ಥೆ ಕುರಿತದ್ದಾಗಿದೆ. ವಿಜಯನಗರದ ಅರಸರು ನೀರಾವರಿಗೆ ವಿಶೇಷ ಆದ್ಯತೆಯನ್ನು ನೀಡಿದ್ದರು ಹಾಗಾಗಿ ನದಿಯಲ್ಲಿ ಅಣೆಕಟ್ಟುಗಳನ್ನು ನಿರ್ಮಿಸಿ ಅದರಿಂದ ಕಾಲುವೆಗಳ ಮೂಲಕ ಜಮೀನುಗಳಿಗೆ ನೀರನ್ನು ಒದಗಿಸಿದರು

ಹಾಗೂ ಕೆರೆ, ಬಾವಿಗಳನ್ನು ನಿರ್ಮಿಸಿದ್ದಾರೆ. ಈ ಎಲ್ಲ ನೀರಾವರಿ ವ್ಯವಸ್ಥೆಯ ಸಾಧನಗಳನ್ನು ಅಣೆಕಟ್ಟು, ಕಾಲುವೆ, ಕೆರೆ, ಬಾವಿಗಳಾಗಿ ವಿಂಗಡಿಸಿಕೊಂಡು ಅವುಗಳ ವಾಸ್ತು ವಿಶೇಷತೆಯ ಬಗ್ಗೆ ವಿವರಿಸಲಾಗಿದೆ.

ಏಳನೆಯ ಅಧ್ಯಾಯವು ಉಪಸಂಹಾರವಾಗಿದ್ದು, ಪ್ರಸ್ತುತ ಅಧ್ಯಯನದಲ್ಲಿ ಕಂಡುಕೊಂಡ ಫಲಿತಗಳನ್ನು ವಿವರವಾಗಿ ತಿಳಿಸಲಾಗಿದೆ. ಅನುಬಂಧದಲ್ಲಿ ಆಕರ ಗ್ರಂಥಗಳು, ಪದಕೋಶ, ವಕ್ತೃಗಳ ವಿವರ, ನಕ್ಷೆ, ತಲನಕ್ಷೆ ಮತ್ತು ಛಾಯಾಚಿತ್ರಗಳನ್ನು ವಿಷಯಕ್ಕೆ ಪೂರಕ ಮಾಹಿತಿಯಾಗಿ ನೀಡಲಾಗಿದೆ.

ಅಡಿಟಿಪ್ಪಣಿಗಳು

೧. ಸುರೇಶ ಕೆ. ಎಂ., ವಾಸುದೇವ ಬಡಿಗೇರ, ಸೋಮಶೇಖರ ಎಸ್.ವೈ., ಕೊಟ್ರೇಶ್ ಮಾಡಲಗೇರಿ, ೨೦೦೧, ***ಕರ್ನಾಟಕ ದೇವಾಲಯ ಕೋಶ : ಕೊಪ್ಪಳ ಜಿಲ್ಲೆ,*** ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ರಾಮಚಂದ್ರ ರಾವ್ ಎಸ್.ಕೆ., ೧೯೭೯, ***ಭಾರತೀಯ ದೇವಾಲಯ ನೆಲೆ-ಹಿನ್ನೆಲೆ,*** ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

೩. ಶಾಂತಕುಮಾರಿ ಎಸ್. ಎಲ್., ೧೯೭೫, ***ಕುಕನೂರು ಒಂದು ಸಾಂಸ್ಕೃತಿಕ ಸಮೀಕ್ಷೆ,*** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೪. ಕನ್ನಡ ವಿಶ್ವವಿದ್ಯಾಯಲದ ಶಾಸನ ಸಂಪುಟ-೨, ***ಕೊಪ್ಪಳ ಜಿಲ್ಲೆ,*** ೧೯೯೯, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫. ಹಂಪ ನಾಗರಾಜಯ್ಯ, ೧೯೯೮, ***ಕೊಪ್ಪಳ ಶಾಸನಗಳು,*** ರತ್ನತ್ರಯ ಪ್ರಕಾಶನ, ಮೈಸೂರು.

೬. ಚನ್ನಬಸವ ಹಿರೇಮಠ, ೧೯೯೯, ***ಕೊಪ್ಪಳ ರಾಯಚೂರ ಜಿಲ್ಲೆಯ ಶಾಸನಗಳು,*** ಚೇತನ ಪ್ರಕಾಶನ, ಮಸ್ಕಿ.

೭. ಶರಣಬಸಪ್ಪ ಕೋಲ್ಕಾರ, ೨೦೧೦, ***ಶಿಲಾಯುಗದ ಗವಿಚಿತ್ರಗಳು,*** ಬಸವ ಪ್ರಕಾಶನ ಮತ್ತು ಪುಸ್ತಕ ವ್ಯಾಪಾರಿಗಳು, ಗುಲಬರ್ಗಾ.

೮. -----, ೨೦೦೨, ***ಕೊಪ್ಪಳ-ಹಂಪಿ ಪ್ರದೇಶದ ಪ್ರಾಗಿತಿಹಾಸ ಕಾಲದ ಕಲೆ,*** ಪಿಎಚ್.ಡಿ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೯. -----, ೧೯೯೧, ***ಕನಕಗಿರಿ ಪ್ರದೇಶದ ಸ್ಮಾರಕಗಳು ಮತ್ತು ಮೂರ್ತಿಶಿಲ್ಪಗಳು,*** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೦. -----, ೨೦೧೩, ***ವಿಜಯನಗರದ ಮಾತೃಸ್ಥಾನ ಆನೆಗೊಂದಿ,*** ಬಸವ ಪ್ರಕಾಶನ ಮತ್ತು ಪುಸ್ತಕ ವ್ಯಾಪಾರಿಗಳು, ಗುಲಬರ್ಗಾ.

೧೧. -----, ೨೦೦೮, ***ಆನೆಗೊಂದಿ,*** ಹೈದ್ರಾಬಾದ ಕರ್ನಾಟಕ ಅಭಿವೃದ್ಧಿ ವಿಭಾಗ ಸೇಡಂ.

೧೨. -----, ೨೦೦೯, ***ಹಿರೇಜಂತಗಲ್ ಇತಿಹಾಸ-ವಾಸ್ತುಶಿಲ್ಪಕಲೆ,*** ಕಲ್ಮಠ ಶ್ರೀ ಚನ್ನಬಸವ ಸ್ವಾಮಿ ಮಹಿಳಾ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಗಂಗಾವತಿ.

೧೩. -----, ೨೦೧೨, ***ವಿಜಯನಗರ ಪರಿಸರ ಚರಿತ್ರೆ, ಕಲೆ, ಸಂಸ್ಕೃತಿ,*** ಕಿಕ್ಕೇರಿ ಪಬ್ಲಿಕೇಷನ್ಸ್, ಬೆಂಗಳೂರು.

೧೪. ಮಹದೇವ ಸಿ., ೨೦೧೫ (ದ್ವಿತೀಯ ಮುದ್ರಣ), ***ವಿಜಯನಗರದ ಗಾರೆಶಿಲ್ಪ,*** ಪ್ರಾಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೫. -----, ೨೦೦೯ ***ಕುಮ್ಮಟದುರ್ಗದ ಅರಸರು,*** ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೧೬. ಶೇಷಶಾಸ್ತ್ರಿ ಆರ್., ೨೦೦೪, ***ಕರ್ನಾಟಕದ ವೀರಗಲ್ಲುಗಳು,*** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೭. -----, ೧೯೯೯, ***ಕನ್ನಡ ಶಾಸನಶಿಲ್ಪ,*** ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೧೮. ಪರಮಶಿವಮೂರ್ತಿ ಡಿ.ವಿ., ವಾಸುದೇವ ಬಡಿಗೇರ ಮತ್ತು ವಿರೂಪಾಕ್ಷ ಪೂಜಾರಹಳ್ಳಿ (ಸಂ.), ೨೦೦೮, ***ಕೃಷ್ಣದೇವರಾಯ ಆಯ್ದ ಲೇಖನ ಸಂಪುಟ,*** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೯. ಪೂರ್ವೋಕ್ತ,

೨೦. ಸುಜಾತ ಮಲ್ಲನಗೌಡ, ೨೦೦೦, ***ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯ ಕೋಟೆಗಳು*** ಒಂದು ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೨೧. ಸತೀಶ ಕೆ., ೨೦೦೮, ***ವಿಜಯನಗರ ಕಾಲದ ಶೈವ ದೇವಾಲಯಗಳು*** (ಕರ್ನಾಟಕ), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೨೨. ಭಟಸೂರಿ ಕೆ. ಜಿ., ೧೯೯೭, ***Sculptures in the Government museum Raichur,*** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

೨೩. ದೇವರಕೊಂಡಾರೆಡ್ಡಿ (ಸಂ.), ೨೦೦೬, ***ಹಂಪಿ ಸಂಪುಟ ಕಲೆ, ಕ್ರೀಡೆ ಮತ್ತು ಕೌಶಲ,*** ಕನ್ನಡ ವಿಶ್ವವಿದ್ಯಾಲಯಗಳು, ಹಂಪಿ, ವಿದ್ಯಾರಣ್ಯ.

೨೪. ಶಿವರುದ್ರಸ್ವಾಮಿ ಎನ್.ಎಸ್., ೧೯೯೧, ***Vijayangara temples in Karnataka,*** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

೨೫. ಚಲುವರಾಜು, ೨೦೦೨, ***ಹಂಪಿಯ ಸ್ಮಾರಕಗಳಲ್ಲಿ ಜನಪದೀಯ ಅಂಶಗಳು,*** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೨೬. ಗೋಪಾಲ್ ಆರ್. (ಸಂ.), ೨೦೧೦, ***ಕೊಪ್ಪಳ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ,*** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

೨೭. ಅಶ್ವಥ ಡಿ.ಎಸ್., ೨೦೦೩, ***ಕೊಪ್ಪಳ ಒಂದು ಸಾಂಸ್ಕೃತಿಕ ಅಧ್ಯಯನ,*** ಹಿಮಾನಿ ಪ್ರಕಾಶನ, ಬೆಂಗಳೂರು.

೨೮. ಬಸವರಾಜ ಆಕಳವಾಡಿ (ಸಂ.), ೨೦೧೧, ***ಆನೆಗೊಂದಿ : ಅವಲೋಕನ ಇತಿಹಾಸ ಮತ್ತು ಪರಂಪರೆ ಸಮೀಕ್ಷೆ,*** ಆನೆಗೊಂದಿ ಉತ್ಸವ ಸಮಿತಿ, ಜಿಲ್ಲಾಡಳಿತ ಕೊಪ್ಪಳ.

೨೯. ವಿನೋದಾ ಪಾಟೀಲ್, ೨೦೦೬, ***ಕರ್ನಾಟಕದ ಪ್ರಾಚೀನ ಬಾವಿಗಳು,*** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

೩೦. ಶ್ಯಾಮರಾವ್, ಪುಲುಮತಿ, ೧೯೫೬, ***ವಿಜಯನಗರದ ಕಲೆ ಮತ್ತು ಸಾಹಿತ್ಯ,*** ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ, ಮೈಸೂರು ಸರಕಾರ, ಬೆಂಗಳೂರು.

೩೧. ಹಿರೇಮಠ ಎಸ್.ಎಸ್., ೨೦೦೦, ***ಕೊಪ್ಪಳ ಜಿಲ್ಲೆಯ ಜಾತ್ರೆಗಳು,*** ಗ್ರಾಮ ಸಂಸ್ಕೃತಿ ಮಾಲೆ, ಕನ್ನಡ ಪುಸ್ತಕ ಪ್ರಾದಿಕಾರ, ಬೆಂಗಳೂರು.

೩೨. ಪರಮಶಿವ ಮೂರ್ತಿ ಡಿ.ವಿ., (ಲೇ.,) ***ಅತ್ತಿವಟ್ಟಿ ಶಾಸನ ಮತ್ತು ಸ್ಥಳೀಯ ಕೃಷಿ ವ್ಯವಸ್ಥೆ,*** ರಾಮಕೃಷ್ಣ ಕೆ.ಆರ್., ಗೋಪಾಲ್.ಆರ್., ಗಂಗಾಧರ ಟಿ.ಎಸ್. (ಸಂ), ***ವಿಜಯನಗರ ಅಧ್ಯಯನ ಸಂಪುಟ-೮,*** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ.

೩೩. ಜಗದೀಶ (ಲೇ.), ೨೦೦೮, ***ಚಂದ್ರಮೌಳೇಶ್ವರ ದೇವಾಲಯ ನಿರ್ಮಾಣ ಕಾಲ,*** ಗೋಪಾಲ್ ಆರ್., ಚಿಕ್ಕಮಾರೇಗೌಡನ ಬಿ.ಎಂ., ಗಂಗಾಧರ ಟಿ.ಎಸ್.(ಸಂ.) ವಿಜಯನಗರ ಅಧ್ಯಯನ ಸಂಪುಟ-೧೪, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ ಮೈಸೂರು.

೩೪. ವಿರೂಪಾಕ್ಷ ಪೂಜಾರಹಳ್ಳಿ(ಲೇ.), ***ವಿಜಯನಗರ ಕಾಲದ ಮೀನುಗಾರಿಕೆ ಮತ್ತು ಅಂಬಿಗತನ,*** ಕೃಷ್ಣಪ್ಪ ಎಂ.ಡಿ., ತಳವಾರ ಹೆಚ್.ಟಿ.(ಸಂ.), ೨೦೦೧, ವಿಜಯನಗರ ಅಧ್ಯಯನ ಸಂಪುಟ-೬, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ.

೩೫. ವಾಸುದೇವನ ಸಿ.ಎಸ್.(ಲೇ.), ೨೦೦೮, ***ಮಧ್ಯಯುಗೀನ ಕಾಲದ ಜನವಸತಿ ನೆಲೆ ಕಡೇಬಾಗಿಲು,*** ವಿಜಯನಗರ ಅಧ್ಯಯನ ಸಂಪುಟ-೧೩, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ.

೩೬. ನಾಗನೂರು ಎ.ವಿ. ೨೦೦೨, **Jainisam in Ballari, Raichur And Koppal District : A cultural Studies,** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೩೭. ರವಿ ಎನ್. ಚವ್ಹಾಣ, ೨೦೧೧, ***ಕುಷ್ಟಗಿ ತಾಲೂಕಿನ ಶಾಸನಗಳು ಮತ್ತು ಸ್ಮಾರಕಗಳು,*** ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೮. ಕುಮಾರಿ ಶಾರದಾ ಮಲ್ಲಿಕಾರ್ಜುನ ಪಾಟೀಲ್, ೨೦೧೭, ***ಕೊಪ್ಪಳ ಜಿಲ್ಲೆಯ ಕೆರೆ ಬಾವಿಗಳ ಚಾರಿತ್ರಿಕ ಅಧ್ಯಯನ,*** ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೯. ಸಿದ್ಧಲಿಂಗಪ್ಪ ಕೊಟ್ನೆಕಲ್, ೨೦೧೦, ***ಕೊಪ್ಪಳ ಜಿಲ್ಲೆಯ ಶಾಸನಗಳು ಮತ್ತು ಸಾಂಸ್ಕೃತಿಕ***

ಇತಿಹಾಸ, ಮೇಘನಾ ಪ್ರಕಾಶನ, ಕೊಪ್ಪಳ.

೪೦. ಸಾಯಬಣ್ಣ ಕ. ಮೇಲಕಾರ, ೨೦೧೧, ***ಕೊಪ್ಪಳ ಜಿಲ್ಲೆಯ ಶಾಸನಗಳ ಸಾಂಸ್ಕೃತಿಕ ಚರಿತ್ರೆ ಮತ್ತು ಶಿಲಾಯುಗದ ಸಂಸ್ಕೃತಿ,*** ಭಾರತ ಸಿಂಧುರಶ್ಮಿ ಪ್ರಕಾಶನ, ಧಾರವಾಡ

೪೧. ಸುಬಾಸ, ೨೦೧೩, ***ಕೊಪ್ಪಳ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ,*** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೪೨. ಮಹೇಶ. ಕೆ., ೨೦೦೨, ***ಕೃಷ್ಣದೇವರಾಯನ ಕಾಲದ ವೈಷ್ಣವ ದೇವಾಲಯಗಳು,*** ಪಿಎಚ್.ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪೩. ಸುಗಂದಾ, ೧೯೮೬, ***History and Archeology of Anegondi,*** ಪೂನಾ ವಿಶ್ವವಿದ್ಯಾಲಯ, ಪುನಾ

೪೪. ಪದ್ಮಜಾ ದೇಸಾಯಿ, ೨೦೧೫, ***ಹಂಪಿ ಪರಿಸರದ ವೈಷ್ಣವ ಶಿಲ್ಪಗಳು,*** ಕನ್ನಡ ವಿಶ್ವವಿದ್ಯಾಲಯ, ಹಂಪಿ

೪೫. ಹೇಮಾವತಿ ಶಿ. ಮೆಣಸಗಿ, ೨೦೧೬, ***ಹಂಪಿ ಪರಿಸರದ ಶೈವ ಶಿಲ್ಪಗಳು,*** ಕನ್ನಡ ವಿಶ್ವವಿದ್ಯಾಲಯ, ಹಂಪಿ

೪೬. ನಾಗರಾಜಪ್ಪ ಎಸ್., ೨೦೧೫, ***ಹಂಪಿ ಪರಿಸರದ ಲೌಕಿಕ ಶಿಲ್ಪಗಳು,*** ಕನ್ನಡ ವಿಶ್ವವಿದ್ಯಾಲಯ, ಹಂಪಿ

೪೭. ಮಂಜಣ್ಣ ಪಿ.ಬಿ., ೨೦೧೬, ***ವಿಜಯನಗರ ಕಾಲದ ಕ್ರೀಡೆ ಮತ್ತು ವಿನೋದಾವಳಿ,*** ಕನ್ನಡ ವಿಶ್ವವಿದ್ಯಾಲಯ, ಹಂಪಿ

ಅಧ್ಯಾಯ : ಎರಡು

ಕೊಪ್ಪಳ ಜಿಲ್ಲಾ ಪ್ರದೇಶ : ಹಿನ್ನೆಲೆ

======================

೨.೧ ಭೌಗೋಳಿಕ

೨.೨ ಚಾರಿತ್ರಿಕ

ಅಧ್ಯಾಯ : ಎರಡು
ಕೊಪ್ಪಳ ಜಿಲ್ಲಾ ಪ್ರದೇಶ : ಹಿನ್ನೆಲೆ

ಭೌಗೋಳಿಕ ಪರಿಸರ ಮತ್ತು ಪ್ರಾಗಿತಿಹಾಸ ಚರಿತ್ರೆ ಮತ್ತು ಭೂಗೋಳ ಅಧ್ಯಯನಗಳ ಮಧ್ಯೆ ನಿಕಟವಾದ ಸಂಬಂಧವಿದೆ. ಇತಿಹಾಸವು ಸಮಾಜದಲ್ಲಿ ಬಾಳುತ್ತಿರುವ ಜನರ ಜೀವನವನ್ನು ಭೌಗೋಳಿಕ ಮತ್ತು ಭೌತ ಪರಿಸರಕ್ಕೆ ಸಂಬಂಧಿಸಿದಂತೆ ವಿವರಿಸುವ ಶಾಸ್ತ್ರವಾಗಿದೆ. ಈ ಹಿನ್ನಲೆಯಲ್ಲಿ ಯಾವುದೇ ಒಂದು ಪ್ರದೇಶದ ಚರಿತ್ರೆ ರೂಪಗೊಳ್ಳುವಲ್ಲಿ ಅಲ್ಲಿಯ ಭೌಗೋಳಿಕ ಪರಿಸರದ ಪಾತ್ರ ಮಹತ್ವದಾಗಿರುತ್ತದೆ. ಆಯಾ ಪ್ರದೇಶಗಳ ನದಿ, ಬೆಟ್ಟ, ಕಾಡು, ಸಸ್ಯ, ಪ್ರಾಣಿ ಮತ್ತು ಹವಾಮಾನಗಳು ಆ ಪರಿಸರದ ಮಾನವ ಜೀವನದ ಸಂಸ್ಕೃತಿಯನ್ನು ರೂಪಿಸುತ್ತವೆ. ಅಂದರೆ ಆಯಾ ಭೌಗೋಳಿಕ ಪರಿಸರದ ಲಕ್ಷಣಗಳಿಗೆ ಅನುಗುಣವಾಗಿ ಮಾನವನ ಬದುಕಿನ ರೀತಿ ನೀತಿಗಳು ಬೆಳೆದು ಬರುತ್ತವೆ. ಅವನ ಗುಣ ಸ್ವಭಾವ, ವರ್ತನೆಗಳು ಕೂಡ ಭೌಗೋಳಿಕ ಪರಿಸರದಿಂದ ಪ್ರೇರಿತವಾಗಿರುತ್ತವೆ. ಆದ್ದರಿಂದ ಮಾನವನ ಜೀವನ ಪದ್ಧತಿ ಅಥವಾ ಆ ಪ್ರದೇಶದ ಇತಿಹಾಸವನ್ನು ಅರಿಯುವಲ್ಲಿ ಆ ಪ್ರದೇಶದ ಭೌಗೋಳಿಕ ಪರಿಸರದ ತಿಳುವಳಿಕೆ ಅತ್ಯವಶ್ಯಕವಾಗಿರುತ್ತದೆ. ಪ್ರಾರಂಭದಿಂದಲೂ ಜಗತ್ತಿನಲ್ಲಿ ಆಗುತ್ತ ಬಂದಿರುವ ಸ್ಥಿತ್ಯಂತರಗಳ ಕುರಿತ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ನೀಡಲು ಯತ್ನಿಸುವ ಸಂದರ್ಭದಲ್ಲಿ ಅಲ್ಲಿನ ಜನರ ಜೀವನ, ಸಂಸ್ಕೃತಿ ಆ ನೆಲೆಯ ಭೂಲಕ್ಷಣಕ್ಕೂ ಇರುವ ಸಂಬಂಧವನ್ನು ಸರಿಯಾಗಿ ಅರಿತುಕೊಳ್ಳಬೇಕಾಗುತ್ತದೆ[೧]

೨.೧ ಕೊಪ್ಪಳ ಜಿಲ್ಲೆಯ ಭೌಗೋಳಿಕ ಸನ್ನಿವೇಶ

ಕೊಪ್ಪಳ ಜಿಲ್ಲೆಯು ಕರ್ನಾಟಕ ರಾಜ್ಯದ ಮಧ್ಯಭಾಗದಲ್ಲಿದೆ. ಜಿಲ್ಲೆಯು ಅಕ್ಷಾಂಶ ೧೫೦ – ೧೫೧, ರೇಖಾಂಶ ೭೫೦ – ೭೬೧ ಚದರ ಮೀಟರ್ ವಿಸ್ತಾರ ಹೊಂದಿದೆ. ಉತ್ತರದಲ್ಲಿ ಬಾಗಲಕೋಟೆ, ದಕ್ಷಿಣದಲ್ಲಿ ಬಳ್ಳಾರಿ ಜಿಲ್ಲೆ, ಪೂರ್ವದಲ್ಲಿ ರಾಯಚೂರು ಜಿಲ್ಲೆ, ಪಶ್ಚಿಮದಲ್ಲಿ ಗದಗ ಜಿಲ್ಲೆ, ರಾಯಚೂರು ಜಿಲ್ಲೆಯು ತುಂಗಭದ್ರ ನದಿಯನ್ನು ಗಡಿಗಳಾಗಿ ಹೊಂದಿದೆ. ಈ

ಹಿಂದೆ ರಾಯಚೂರು ಜಿಲ್ಲೆಯ ಭಾಗವಾಗಿದ್ದು ಚಾರಿತ್ರಿಕವಾಗಿ ಎಡದೊರೆನಾಡು, ಇರ್ಚ್ಬಾಸಿರ, ದೊ-ಆಬ್ ಎಂದು ಕರೆಯಲ್ಪಟ್ಟಿದೆ. ರಾಯಚೂರು ಜಿಲ್ಲೆಯಿಂದ ೦೧. ೦೪. ೧೯೯೮ ರಂದು ಬೇರ್ಪಟ್ಟು ಸ್ವತಂತ್ರ ಜಿಲ್ಲೆಯಾಗಿ ಅಸ್ತಿತ್ವಕ್ಕೆ ಬಂದ ಕೊಪ್ಪಳ ಜಿಲ್ಲೆಯಲ್ಲಿ ಪ್ರಸ್ತುತ ಕೊಪ್ಪಳ, ಯಲಬುರ್ಗಿ, ಕುಷ್ಟಗಿ, ಗಂಗಾವತಿ, ಕನಕಗಿರಿ, ಕಾರಟಗಿ, ಕುಕನೂರು ತಾಲೂಕುಗಳಿವೆ.

ಕೊಪ್ಪಳ ಜಿಲ್ಲೆಯನ್ನು ಒಳಗೊಂಡಿರುವ ದಖ್ಖನ್ ಪ್ರಸ್ಥಭೂಮಿಯು ಅತ್ಯಂತ ಪ್ರಾಚೀನ ನಿರ್ಮಾಣವೆಂದು, ಆದಿಕಲ್ಪಯುಗಕ್ಕೆ ಸೇರಿದ್ದು ಸುಮಾರು ಮುನ್ನೂರು ಕೋಟಿ ವರ್ಷಗಳ ಪ್ರಾಚೀನವಾದದೆಂದು ಭೂವಿಜ್ಞಾನಿಗಳು ಅಭಿಪ್ರಾಯಪಡುತ್ತಾರೆ. ಸಾಗರದ ಭೂಪ್ರದೇಶವಾಗಿದ್ದ ಈ ಪ್ರದೇಶ ಮೇಲೆದ್ದು ಕಾಲಾಂತರದಲ್ಲಿ ಹಲವಾರು ಮಾರ್ಪಾಡುಗಳನ್ನು ಹೊಂದಿ ಸಸ್ಯ ಮತ್ತು ಪ್ರಾಣಿಗಳ ವಸತಿಗೆ ತಕ್ಕುದಾಗಿ ಇಂದಿನ ಸ್ಥಿತಿಗೆ ಬಂದಿದೆ. ಈ ಭೂ ಭಾಗವು ಸಮುದ್ರ ಪಾತಳಯಿಂದ ೨,೩೫೭ ಅಡಿ ಎತ್ತರದಲ್ಲಿದೆ.[೨] ಈ ಪ್ರದೇಶವು ಬೆಟ್ಟಗುಡ್ಡ, ನದಿ, ಫಲವತ್ತಾದ ನೆಲ, ವೈವಿಧ್ಯಮಯವಾದ ಸಸ್ಯ, ಪ್ರಾಣಿ ಸಂಪತ್ತಿನಿಂದ ಕೂಡಿದ್ದು, ಇಲ್ಲಿಯ ಮಾನವ ಚರಿತ್ರೆಯ ಮೇಲೆ ಅಪಾರವಾದ ಪ್ರಭಾವ ಬೀರಿದೆ. ಅನೇಕ ರಾಜಕೀಯ, ಸಾಂಸ್ಕೃತಿಕ ಸಂಗತಿಗಳ ಏಳು ಬೀಳಿಗೆ ಈ ಪ್ರದೇಶ ಸಾಕ್ಷಿಯಾಗಿದೆ.

ನದಿ, ಹಳ್ಳ, ಕೆರೆಗಳು

ತುಂಗಭದ್ರಾ ನದಿ

ತುಂಗಭದ್ರಾ ನದಿಯು ಕೊಪ್ಪಳ ಜಿಲ್ಲೆಯಲ್ಲಿ ಹರಿಯುವ ಏಕೈಕ ನದಿಯಾಗಿದೆ. ಕೃಷ್ಣ ನದಿಯ ಉಪನದಿಯಾದ ಇದು ಚಿಕ್ಕಮಗಳೂರು ಜಿಲ್ಲೆಯ ಪಶ್ಚಿಮ ಘಟ್ಟದ ವರಹ ಪರ್ವತದ ಗಂಗಾಮೂಲದಲ್ಲಿ ತುಂಗಾ ಮತ್ತು ಭದ್ರಾ ಎಂಬ ಎರಡು ಶಾಖೆಗಳಾಗಿ ಹರಿದು ಕೂಡಲಿಯಲ್ಲಿ(ಶಿವಮೊಗ್ಗ ಜಿಲ್ಲೆ) ಸಂಗಮವಾಗಿ ತುಂಗಭದ್ರಾ ಎನಿಸುತ್ತದೆ.[೩] ಈ ನದಿಯ ಉಲ್ಲೇಖಗಳು ರಾಮಾಯಣ, ಮಹಾಭಾರತ ಹಾಗೂ ಪುರಾಣಗಳಲ್ಲಿವೆ. ಮಹಾಭಾರತದಲ್ಲಿ ಜಾಹ್ನವಿ ಮತ್ತು ಕೃಷ್ಣವನಿಗಳ ಜೊತೆಗೆ ತುಂಗಾವನಿ ಎಂದು ಉಲ್ಲೇಖ ಬಂದಿದೆ.[೪] ಈ ನದಿಯು ಕೊಪ್ಪಳ ಜಿಲ್ಲೆಯ ಕೆಸಲಾಪುರ ಎಂಬ ಗ್ರಾಮದ ಬಳಿ ಪ್ರವೇಶಿಸುತ್ತದೆ. ಕೊಪ್ಪಳ ಹಾಗೂ ಗಂಗಾವತಿ ತಾಲೂಕಿನ ದಕ್ಷಿಣದ ಮೇರೆಗುಂಟ ಹರಿದು ಮುಂದೆ ಮುಕ್ಕುಂದಿ ಗ್ರಾಮದಿಂದ ರಾಯಚೂರು ಜಿಲ್ಲೆಯನ್ನು ಪ್ರವೇಶಿಸುತ್ತದೆ. ಜಿಲ್ಲೆಯಲ್ಲಿ ಈ ನದಿಯ ಹರಿವು ಬಹುಮಟ್ಟಿಗೆ ಬೆಟ್ಟಗುಡ್ಡಗಳ ನಡುವೆ ಸಾಗುತ್ತದೆ. ಪ್ರಸಿದ್ಧ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಸ್ಥಳಗಳಾದ ಹುಲಿಗಿ, ಶಿವಪುರ, ಆನೆಗೊಂದಿ, ಹಂಪಿ, ವೆಂಕಟಾಪುರ, ಕಂಪ್ಲಿಗಳು ಜಿಲ್ಲೆಯ ಗಡಿಗೆ ಹೊಂದಿಕೊಂಡಂತೆ ನದಿಯ ಎಡ ಬಲ ದಂಡೆಗಳಲ್ಲಿವೆ. ಪ್ರಾಚೀನ ಕಾಲದಿಂದಲೂ ಕುಡಿಯಲು ಹಾಗೂ ಕೃಷಿಗೆ ನೀರು ಒದಗಿಸುತ್ತ ಬಂದಿರುವ ಈ ನದಿ ಕೊಪ್ಪಳ ಜಿಲ್ಲೆಯ ಜೀವನಾಡಿಯಾಗಿದೆ. ಈ ನದಿಯ ನೀರು ತುಂಬಾ ಸಿಹಿಯಾಗಿದ್ದು, ಗಂಗಾ ಸ್ನಾನ ತುಂಗಾ ಪಾನ ಎಂಬ ನಾಣ್ನುಡಿ ಈ ಭಾಗದಲ್ಲಿ ಪ್ರಚಲಿತದಲ್ಲಿದೆ. ತುಂಗಭದ್ರಾ ನದಿಗೆ

ಕಲ್ಯಾಣ ಚಾಲುಕ್ಯರ ಕಾಲದಲ್ಲೇ ಅಣೆಕಟ್ಟುಗಳನ್ನು ಕಟ್ಟಿ ಕಾಲುವೆಗಳ ಮೂಲಕ ಜಮೀನುಗಳಿಗೆ ನೀರು ಒದಗಿಸಿರುವುದು ಶಾಸನಗಳ ಮೂಲಕ ತಿಳಿಯುತ್ತದೆ.[೫] ವಿಜಯನಗರ ಸಾಮ್ರಾಜ್ಯ ಕಾಲದಲ್ಲಿ ಈ ನದಿಗೆ ಅಲ್ಲಲ್ಲಿ ಅನೇಕ ಅಣೆಕಟ್ಟುಗಳನ್ನು ಕಟ್ಟಲಾಗಿದೆ. ಈ ಅಣೆಕಟ್ಟಗಳಿಗೆ ಕಾಲುವೆಗಳನ್ನು ನಿರ್ಮಿಸಿ ಅವುಗಳ ಮೂಲಕ ಭೂಮಿಗೆ ನೀರು ಒದಗಿಸಿದ ವಿಸ್ತೃತ ಪ್ರಯತ್ನವನ್ನು ಕಾಣುತ್ತೇವೆ. ಅದಕ್ಕೆ ಸಾಕ್ಷಿಯಾಗಿ ತುಂಗಭದ್ರ ನದಿಗೆ ಜಿಲ್ಲೆಯ ವ್ಯಾಪ್ತಿಯಲ್ಲಿ ಶಿವಪುರ ಅಣೆಕಟ್ಟು, ಸಣಾಪುರ ಅಣೆಕಟ್ಟು, ಮೊಟ್ಟಿಕಟ್ಟೆ ಅಣೆಕಟ್ಟು, ಗಂಗಾವತಿ ಮೇಲು ಕಾಲುವೆ, ಕೆಳ ಕಾಲುವೆ ಅಣೆಕಟ್ಟುಗಳು ಹಾಗೂ ಅವುಗಳಿಗೆ ನಿರ್ಮಿಸಲಾದ ಕಾಲುವೆಗಳು ಇಂದಿಗೂ ಬಳಕೆಯಲ್ಲಿವೆ. ಇವುಗಳಲ್ಲಿ ಒಂದನ್ನು ವಿಜಯನಗರ ಕಾಲುವೆ ಎಂದು ಕರೆಯುತ್ತಾರೆ. ವಿಶೇಷವಾಗಿ ಕೊಪ್ಪಳದ ಹಿಟ್ನಾಳ, ಹುಲಿಗಿ ಭಾಗ, ಬಂಡಿಹರ್ಲಾಪುರ ಭಾಗ, ಗಂಗಾವತಿ ಭಾಗ, ಆನೆಗೊಂದಿ, ಹಿರೇಜಂತಗಲ್ಲು, ಚಿಕ್ಕಜಂತಗಲ್ಲು ಗ್ರಾಮ ಪರಿಸರದ ಆರ್ಥಿಕ ಸಮೃದ್ಧಿಗೆ ಈ ಕಾಲುವೆಗಳ ಕೊಡುಗೆ ಅಪಾರವಾಗಿದೆ.

ಹಳ್ಳಗಳು

ಕೊಪ್ಪಳ ಜಿಲ್ಲಾ ಪ್ರದೇಶದಲ್ಲಿ ಅನೇಕ ಹಳ್ಳ ಕೆರೆಗಳಿವೆ. ಹಳ್ಳಗಳು ಪ್ರಾಚೀನ ಕಾಲದಿಂದಲೂ ಇದ್ದು ಕೃಷಿ ಮತ್ತು ಕುಡಿಯುವ ನೀರಿಗೆ ಅನುಕೂಲವಾಗಿವೆ. ಯಲಬುರ್ಗಾ, ಮಸಾರಿಹಂಚಿನಾಳ, ಮಂಗಳೂರು ಹಳ್ಳಗಳು(ಯಲಬುರ್ಗಾ ತಾಲೂಕು), ಬಿಚುಗಲ್ಲು, ನಿಡಶೇಸಿ, ಹನುಮಸಾಗರ, ಹುಲಿಯಾಪುರ(ಕುಷ್ಟಗಿ ತಾಲೂಕು), ಮರಳಿ, ಸಿದ್ಧಾಪುರ, ಕನಕಗಿರಿ (ಗಂಗಾವತಿ ತಾಲೂಕು) ಹಳ್ಳಗಳು ಜಿಲ್ಲೆಯ ಪ್ರಮುಖ ಹಳ್ಳಗಳಾಗಿವೆ. ಕೊಪ್ಪಳದ ಹಿರೇಹಳ್ಳಕ್ಕೆ ಕಿನ್ನಾಳ ಗ್ರಾಮದ ಹತ್ತಿರ ಚಿಕ್ಕ ಅಣೆಕಟ್ಟು ನಿರ್ಮಿಸಲಾಗಿದೆ. ಕೊಪ್ಪಳದ ಅಗಳಕೆರೆ, ಹುಲಿಕೆರೆ, ತಾವರಗೆರೆಯ ರಾಯರಕೆರೆ, ಯಲಬುರ್ಗಾದ ಕೆಂಪುಕೆರೆ, ಗಂಗಾವತಿಯ ಚಿಕ್ಕಬೆಣಕಲ್ಲುಕೆರೆ, ರಾಯರಕೆರೆ, ತಿಪ್ಪನಾಳಕೆರೆ, ಕಾಟಪುರಕೆರೆ, ಲಕ್ಷ್ಮಿಪುರಕೆರೆ, ರಾಮಲಿಂಗನಕೆರೆ, ಕರಡೋಣಕೆರೆ, ವಿಠಲಾಪುರಕೆರೆ ಮುಂತಾದವು ಪ್ರಮುಖ ಕೆರೆಗಳಾಗಿದ್ದು ಚಾರಿತ್ರಿಕ ಕಾಲದಿಂದಲೂ ಮಾನವನ ಜೀವನ ನಿರ್ವಹಣೆಗೆ ಸಹಕಾರಿಯಾಗಿವೆ. ಈ ನದಿ, ಹಳ್ಳ, ಕೆರೆಗಳ ಪರಿಸರದಲ್ಲಿ ಅನೇಕ ಪ್ರಾಚೀನ ನೆಲೆಗಳು ಕಂಡುಬಂದಿವೆ. ಹಾಗಾಗಿ ಮಾನವ ಜೀವನ ವಿಕಾಸ ಕ್ರಮದಲ್ಲಿ ಈ ಜಲಮೂಲಗಳ ಪ್ರಭಾವವನ್ನು ಗುರುತಿಸಬಹುದು.

ಬೆಟ್ಟ, ಅರಣ್ಯ, ಸಸ್ಯ

ಕೊಪ್ಪಳ ಜಿಲ್ಲೆಯಲ್ಲಿ ಪ್ರಸ್ತುತ ೨೯,೪೫೧ ಹೆಕ್ಟೇರ ವಿಸ್ತೀರ್ಣದ ಅರಣ್ಯ ಪ್ರದೇಶ ಇದೆ. ಇದು ಜಿಲ್ಲೆಯ ಭೌಗೋಳಿಕ ಪ್ರದೇಶದ ಶೇಕಡ ೫.೩೩ ರಷ್ಟು ಮಾತ್ರ ಆಗಿದೆ. ಪ್ರಾಚೀನ ಕಾಲದಲ್ಲಿ ಇಲ್ಲಿ ಅರಣ್ಯ ಪ್ರದೇಶದ ವಿಸ್ತಾರ ಹೆಚ್ಚಿಗೆ ಇದ್ದಿರಬೇಕು. ವಿಶೇಷವಾಗಿ ಜಿಲ್ಲೆಯ ಕೊಪ್ಪಳ ಮತ್ತು ಗಂಗಾವತಿ ತಾಲೂಕುಗಳನ್ನು ಒಳಗೊಂಡಂತೆ ವಿಸ್ತರಿಸುವ ಏಳು ಗುಡ್ಡ ಪ್ರದೇಶವು ಸ್ವಲ್ಪ ದಟ್ಟವಾದ ಅರಣ್ಯ ಹೊಂದಿದೆ. ಇದು ಪೂರ್ವ ಪಶ್ಚಿಮವಾಗಿ ಸುಮಾರು ೩೫ ಕಿ.ಮೀ. ದಕ್ಷಿಣ-ಉತ್ತರವಾಗಿ ಸುಮಾರು ೨೦ ಮೀಟರ ವಿಸ್ತೃತವಾಗಿದ್ದು ಈ ಸಾಲುಗಳಲ್ಲಿ ಗಂಗಾವತಿಯ ನಿಷದಿಗುಡ್ಡ ೫೪೦

ಮೀಟರ, ಎಮ್ಮಿಗುಡ್ಡ ೮೨೧ ಮೀಟರ, ಕುಮಾರ ರಾಮನ ಗುಡ್ಡ ೬೯೨ ಮೀಟರ್ ಸಮುದ್ರಮಟ್ಟದಿಂದ ಎತ್ತರವಾಗಿವೆ. ಜಿಲ್ಲೆಯ ಪೂರ್ವದ ಗಡಿಗೆ ಹೊಂದಿಕೊಂಡಿರುವ ಗಂಗಾವತಿ ತಾಲೂಕಿನ ಮೊರೆ(ಮೌರ್ಯರಗುಡ್ಡ) ಗುಡ್ಡ ೫೯೦ ಮೀಟರ ಎತ್ತರವಾಗಿದೆ. ಕೊಪ್ಪಳದ ಗವಿಮಠ ಗುಡ್ಡ, ಮಲ್ಲೆಮಲ್ಲಪ್ಪನಗುಡ್ಡ, ಬಹಾದೂರಬಂಡೆ ಗುಡ್ಡ, ಕುಷ್ಟಗಿಯ ಹನುಮಸಾಗರ ಗುಡ್ಡ, ತಾವರಗೆರೆಯ ಗಾಣಗಿತ್ತಿಗುಡ್ಡ, ಯಲಬುರ್ಗಿಯ ಗೌರಿಯ ಬೆಟ್ಟ, ಕಾರಟಗಿಯ ಹತ್ತಿರ ದೇವಿಗುಡ್ಡ, ಲಕ್ಷ್ಮೀಗುಡ್ಡ ಪ್ರಮುಖ ಬೆಟ್ಟಗಳಾಗಿವೆ. ಇವು ಹೆಚ್ಚಾಗಿ ಕಣಶಿಲೆಯ ಬೆಟ್ಟಗಳು. ಗಂಗಾವತಿಯ ಬಳಿಯ ದೇವಘಾಟ ಶಾಸನದಲ್ಲಿ ಕಿಷ್ಕಿಂಧ ಪರ್ವತದ[೬] ಮತ್ತು ಕೊಪ್ಪಳದ ಹುಲಿಗಿಯ ಶಾಸನದಲ್ಲಿ ಕಿಷ್ಕಿಂದ ಪರ್ವತ, ಋಷ್ಯಮುಖ ಪರ್ವತಗಳ ಬಗ್ಗೆ ಉಲ್ಲೇಖಗಳಿವೆ.[೭] ಆನೆಗುಂದಿ ಬೆಟ್ಟಗಳು ಈ ಕಿಷ್ಕಿಂದ ಪರ್ವತಗಳಾಗಿವೆ. ಹಂಪಿಯ ವಿಜಯವಿಠಲ ದೇವಾಲಯಕ್ಕೆ ಎದುರಿಗೆ ತುಂಗಭದ್ರಾ ನದಿಯ ಎಡತೀರದ ಮೇಲೆ ಇರುವ ನಡುಗಡ್ಡೆಯ ಬೆಟ್ಟವೇ ಋಷ್ಯಮುಖ ಪರ್ವತ[೮] ಎಂಬ ನಂಬಿಕೆಯಿದೆ. ಇಲ್ಲಿ ಸಂಗಮರ ಕಾಲದ ಚಂದ್ರಮೌಳೇಶ್ವರ ದೇವಾಲಯವಿದೆ.

ಜಿಲ್ಲೆಯಾದ್ಯಂತ ಆನೆಬೇಟೆ(ತಾವರಗೆರೆ), ಹುಲಿಬೇಟೆ(ಅಬ್ಬಿಗೇರಿ), ಚಿರತೆಬೇಟೆ (ಕಡೇಬಾಗಿಲು) ವೀರಗಲ್ಲುಗಳು ಕಂಡುಬರುತ್ತವೆ. ತುಂಗಭದ್ರಾ ನದಿಯಲ್ಲಿ ಮೊಸಳೆಗಳು ಮತ್ತು ನೀರುನಾಯಿಗಳಿವೆ. ಗಂಗಾವತಿ ತಾಲೂಕಿನ ನದಿಯ ಈ ಪ್ರದೇಶವನ್ನು ನೀರುನಾಯಿ ಸಂರಕ್ಷಿತ ಪ್ರದೇಶ ಎಂದು ಕರ್ನಾಟಕ ಸರಕಾರ ಘೋಷಿಸಿದೆ.

ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ ಸಾಮಾನ್ಯವಾಗಿ ಅಲ್ಲಲ್ಲಿ ಬಾಗಿ, ಮರಡಿ, ಬೇವು, ಜಾಲಿ, ಕಕ್ಕೆ, ಹುಣಸೆ, ಮತ್ತಿ, ಜಾಲಾರಿ, ಹೊನ್ನೆ, ಸಿತಾಫಲ, ಅಶ್ವಥ, ಬಿದಿರು, ಮುಂತಾದ ಗಿಡಗಂಟೆಗಳಿವೆ. ಗಂಗಾವತಿ ತಾಲೂಕಿನ ಮಲ್ಲಾಪುರದ ಖಾನಸಾಬನ ಗವಿಯಲ್ಲಿ ಮರದ ಚಿತ್ರಗಳಿವೆ. ಇವು ಕಬ್ಬಿಣಯುಗದ ಬೃಹತ್‌ಶಿಲಾಯುಗ ಕಾಲಕ್ಕೆ ಸೇರಿದವೆಂದು ವಿದ್ವಾಂಸರು ಗುರುತಿಸಿದ್ದಾರೆ. ಇದೇ ಅವಧಿಯ ಕೊಪ್ಪಳ ತಾಲೂಕಿನ ಬಿಳೆಬಾವಿಯ ಗವಿವರ್ಣ ಚಿತ್ರಗಳಲ್ಲಿ ಹೂವಿನ ಗಿಡಗಳ ಚಿತ್ರಗಳಿವೆ. ಈ ಪ್ರದೇಶಗಳಲ್ಲಿ ಅಧಿಕವಾಗಿ ಕರಡಿ, ಚಿರತೆ, ನರಿ, ತೋಳ, ಮೊಲ, ಚಿಪ್ಪು ಹಂದಿ, ಕಾಡು ಹಂದಿ, ಮುಳ್ಳು ಹಂದಿ, ಕತ್ತೆ ಕಿರುಬ, ನಾಗರಹಾವು, ಕೆರೆ ಹಾವು, ನವಿಲು, ಕಾಡುಕೋಳಿ, ಬಾವಲಿ ಕೊಕ್ಕರೆ, ಕೌಜುಗ, ಗಿಳಿ, ಪಾರಿವಾಳ, ಕಾಗೆ, ಗುಬ್ಬಿ, ಮುಂತಾದ ಪ್ರಾಣಿ ಪಕ್ಷಿಗಳಿವೆ. ಏಳುಗುಡ್ಡ ಪರಿಸರದಲ್ಲಿ ಮಂಗಗಳು, ಕೊಪ್ಪಳ ಯಲಬುರ್ಗಾ ತಾಲೂಕಿನಲ್ಲಿ ಜಿಂಕೆ, ಕೃಷ್ಣಮೃಗಗಳು ಅಧಿಕ ಸಂಖ್ಯೆಗಳಲ್ಲಿವೆ. ಆನೆಗೊಂದಿಯ ಗವಿವರ್ಣಚಿತ್ರಗಳಲ್ಲಿ ಆನೆಯ ಚಿತ್ರಗಳು ಕಂಡುಬಂದಿರುವುದರಿಂದ ಪ್ರಾಯಶಃ ಇಲ್ಲಿ ಹಿಂದೆ ಆನೆಗಳು ಇದ್ದವೆಂದು ತೊರುತ್ತದೆ.[೯]

ಮಣ್ಣು, ಶಿಲೆ, ಖನಿಜ

ಜಿಲ್ಲೆಯಲ್ಲಿ ಪ್ರಧಾನವಾಗಿ ಕಪ್ಪು, ಕೆಂಪು ಭೂಮಿ ಇದೆ. ಕೆಲವು ಕಡೆ ಕ್ಷಾರ(ಸವಳು) ಭೂಮಿ ಇದೆ. ಕುಷ್ಟಗಿ ಮತ್ತು ಯಲಬುರ್ಗಾ ತಾಲೂಕಿನ ಪ್ರದೇಶ ಹೆಚ್ಚಾಗಿ ಕಪ್ಪು ಮತ್ತು ಕೆಂಪು

ಮಣ್ಣಿನಿಂದ ಕೂಡಿದೆ. ತುಂಗಭದ್ರಾ ನದಿಯ ತೀರದಲ್ಲಿ ಮರಳು ಮಿಶ್ರಿತ ಕೆಂಪು ಜೇಡಿ ಮಣ್ಣು ಇದೆ. ಗಂಗಾವತಿಯ ಹುಲಿಹೈದರ ಹತ್ತಿರ ಕಾವಿ ಮಣ್ಣು ಇದೆ. ಜಿಲ್ಲೆಯ ಬೇರೆ ಬೇರೆ ಭಾಗದಲ್ಲಿ ಮಳೆಯ ಪ್ರಮಾಣಕ್ಕೆ ತಕ್ಕಂತೆ ಬೇರೆ ಬೇರೆ ಮಣ್ಣು ಕಂಡುಬರುತ್ತದೆ. ಇದು ಈ ಪ್ರದೇಶದ ಪ್ರಾಕೃತಿಕ ವೈಶಿಷ್ಟ್ಯ ಎನ್ನಬಹುದು.[೧೦]

ಶಿಲೆ

ಕೊಪ್ಪಳ ಜಿಲ್ಲೆಯ ಬಹು ಭಾಗವು ಆರ್ಕಿಯನ್ ಶಿಲಾ ಸಮುದಾಯದಿಂದ ಕೂಡಿದೆ. ಹನುಮಸಾಗರದ ಬಳಿ ಕಲಾದಿಗಿ ಶ್ರೇಣಿಗೆ ಸೇರುವ ಮರುಳುಗಲ್ಲು ಮತ್ತು ಪೆಂಟಿಗಲ್ಲಿನ ಬೆಟ್ಟಗಳಿವೆ. ವಿಶೇಷವಾಗಿ ಜಿಲ್ಲೆಯಲ್ಲಿ ಕಣಶಿಲೆಯ ಅಪಾರ ಸಂಪತ್ತು ಇದೆ. ಆನೆಗೊಂದಿಯ ಸಮೀಪದಲ್ಲಿ ಕೊರಂಡಮ್ ರೂಬಿ ಶಿಲೆಗಳು,[೧೧] ಕೊಪ್ಪಳದ ಮಾದಿನೂರು, ಬೂದಗುಂಪದ ಲಕ್ಷ್ಮೀಗುಡ್ಡ, ಕುಷ್ಟಗಿಯ ಕೂಡಲೂರ ಬಳಿ ಬಳಪದ ಕಲ್ಲುಗಳಿವೆ. ಕುಕನೂರಿನಲ್ಲಿ ಹಿಮಾಲಯ ಬ್ಲೂ ಎಂದು ಖ್ಯಾತಿ ಪಡೆದಿರುವ ಸಿಣಿಕಲ್ಲು(gneiss)ಗಳಿವೆ. ಇಟಗಿಯ ಮಹಾದೇವ ದೇವಾಲಯವನ್ನು ತಿಳಿಹಸಿರು ಶಿಲೆಯಲ್ಲಿ ನಿರ್ಮಿಸಲಾಗಿದೆ. ಕುಕನೂರಿನ ನವಲಿಂಗೇಶ್ವರ, ಹನುಮಸಾಗರದ ಚಂದ್ರಲಿಂಗೇಶ್ವರ, ಪುರ್ತಗೇರಿಯ ದೇವಾಲಯಗಳನ್ನು ಕೆಂಪು ಮರಳುಗಲ್ಲಿನಲ್ಲಿ ನಿರ್ಮಿಸಲಾಗಿದೆ. ಹಿರೇಬೆಣಕಲ್ಲು ಮತ್ತು ಸುತ್ತಮುತ್ತಲಿನ ಬೃಹತಶಿಲಾಯುಗದ ಸಮಾಧಿಗಳನ್ನು ಕ್ರಿ.ಶ ೧೩ನೆಯ ಶತಮಾನದ ಕುಮ್ಮಟ ಅರಸರ ಸ್ಮಾರಕಗಳನ್ನು, ಕನಕಗಿರಿಯ ಪಾಳೆಗಾರರ ಸ್ಮಾರಕಗಳನ್ನು ಪ್ರಧಾನವಾಗಿ ಕಣಶಿಲೆಯಲ್ಲಿ ನಿರ್ಮಿಸಲಾಗಿದೆ

ಖನಿಜ ಸಂಪತ್ತು

ಕಬ್ಬಿಣದ ಅದಿರು

ಬಳ್ಳಾರಿ, ಚಿತ್ರದುರ್ಗ ಜಿಲ್ಲೆಗಳಿಗೆ ಹೋಲಿಸಿದರೆ ಈ ಜಿಲ್ಲೆಯಲ್ಲಿ ಲಭ್ಯವಿರುವ ಕಬ್ಬಿಣದ ಅದಿರು ಕೆಳದರ್ಜೆಯದು. ಕುಷ್ಟಗಿ ತಾಲೂಕಿನ ಜಾಜಿಗುಡ್ಡ, ಕಲ್ಮಂಗಿ, ಮ್ಯಾದಾರಡೋಕಿ ಮತ್ತು ನಂದಿಹಳ್ಳಿ ನಿಕ್ಷೇಪಗಳು ಉಲ್ಲೇಖಿಸಲು ಅರ್ಹವಾಗಿವೆ. ಕೋನಾಪುರ ಮತ್ತು ಜಾಜಿಗುಡ್ಡದ ಕಬ್ಬಿಣದ ಅದಿರನ್ನು ವಿಶ್ಲೇಷಿಸಲಾಗಿ ಕಬ್ಬಿಣದ ಅಂಶ ೧೯.೫೦% ದಿಂದ ೪೩.೯% ರಷ್ಟು ಇರುವುದಾಗಿ ತಿಳಿದು ಬಂದಿದೆ. ಸದ್ಯದ ಪರಿಸ್ಥಿತಿಯಲ್ಲಿ ಈ ಕಬ್ಬಿಣದ ನಿಕ್ಷೇಪಗಳನ್ನು ಬಳಸುವಂತಿಲ್ಲ. ಈಗ ಬಳಸುತ್ತಿರುವ ಉನ್ನತ ದರ್ಜೆಯ ಕಬ್ಬಿಣದ ಅದಿರು ಮುಗಿದ ನಂತರ ಇಂತಹ ಕಡಿಮೆ ದರ್ಜೆಯ ಅದಿರಿಗೆ ಬೇಡಿಕೆ ಬರುತ್ತದೆ. ಸದ್ಯಕ್ಕೆ ಈ ಕೊಪ್ಪಳ ಜಿಲ್ಲೆಯಲ್ಲಿ ಕಬ್ಬಿಣದ ಅದಿರಿನ ಯಾವ ಗಣಿ ಗುತ್ತಿಗೆ ಮಂಜೂರು ಆಗಿಲ್ಲ.[೧೨]

ಬೆಣಚು

ಇದು ಒಂದು ಸಾಮಾನ್ಯ ಖನಿಜ. ಇದರ ರಾಸಾಯನಿಕ ವಸ್ತು ಸಿಲಿಕಾನ್ ಡೈ ಆಕ್ಸೈಡ್(sio2), ಇದೆ. ಬಹುಪಾಲು ಈ ಬೆಣಚು ಖನಿಜೋದ್ಯಮಕ್ಕೆ ಉಪಯುಕ್ತವಲ್ಲ. ಇದರ

ಪ್ರಮಾಣ ಶೇಕಡ ೯೯ ಕ್ಕಿಂತ ಹೆಚ್ಚಾಗಿದ್ದರೆ ಗಾಜು ತಯಾರಿಕೆಗೆ, ಫೆರ್ರೋಸಿಲಿಕಾನ್ ಮತ್ತು ಅಗ್ನಿ ನಿರೋಧಕ ಇಟ್ಟಿಗೆಗಳ ನಿರ್ಮಾಣಕ್ಕೆ ಉಪಯೋಗವಾಗುತ್ತದೆ. ಇಂಥ ಒಳ್ಳೆಯ ಗುಣಮಟ್ಟದ ಬೆಣಚಿನ ಸಿರಗಳು(Quartz Reef) ಈ ಜಿಲ್ಲೆಯಲ್ಲಿ ತುಂಬಾ ಅಪರೂಪ, ಆದರೂ ಕೊಪ್ಪಳದಿಂದ ಮುನಿರಾಬಾದಿನ ಮಧ್ಯದಲ್ಲಿರುವ ಕಣಶಿಲೆಯ ಸಮುದಾಯದಲ್ಲಿ(Granite Complex) ಕೆಲವು ಬೆಣಚಿನ ಸಿರಗಳಿವೆ. ಹಾಗೆಯೇ ಕುಷ್ಟಗಿ ತಾಲೂಕಿನಲ್ಲಿ ಕೆಲವು ಸಿರಗಳಿವೆ. ಇದಲ್ಲದೆ ಗಂಗಾವತಿ ತಾಲೂಕಿನ ಕನಕಗಿರಿಯ ಬಳಿ ಹಸಿರು ಬೆಣಚಿನ ಸಿರಗಳಿವೆ. ಆದರೆ ಇದು ಅಷ್ಟೊಂದು ಒಳ್ಳೆಯ ಗುಣಮಟ್ಟವಲ್ಲ, ಆದ್ದರಿಂದ ಇಲ್ಲಿ ಹಿಂದೆ ಇದ್ದ ಗಣಿ ಗುತ್ತಿಗೆಯು ಸದ್ಯ ಸ್ಥಗಿತಗೊಂಡಿದೆ.[೧೩]

ಬಳಪದ ಕಲ್ಲು

ಈ ಜಿಲ್ಲೆಯ ಕೊಪ್ಪಳ ನಗರದ ಉತ್ತರದಲ್ಲಿರುವ ಮಾದಿನೂರ – ಮುದ್ಲಾಪುರ ಪ್ರದೇಶದಲ್ಲಿ ಬಳಪದ ಕಲ್ಲಿನ ನಿಕ್ಷೇಪಗಳಿವೆ. ಈ ಬಳಪದ ಕಲ್ಲು ಕೆಳಮಟ್ಟದ್ದಾಗಿರುವುದರಿಂದ ಟಾಲ್ಕಂ ಪೌಡರ್(Taleum powder) ತಯಾರಿಕೆಯಲ್ಲಿ ಬಳಸುವುದು ಸಾಧ್ಯವಿಲ್ಲ. ಆದರೆ ೧೯೮೦ರ ದಶಕದಲ್ಲಿ ಇಲ್ಲಿ ಎರಡು ಗಣಿ ಗುತ್ತಿಗೆಗಳು(Mining Lease) ಕಾರ್ಯನಿರತವಾಗಿದ್ದವು. ಆಗ ಈ ಬಳಪದ ಕಲ್ಲನ್ನು ಹೊಸಪೇಟೆಯಲ್ಲಿದ್ದ ಕ್ರಿಮಿನಾಶಕ ಮಡ್ಡಿಯ(Insecticide powder) ಉತ್ಪಾದನೆಯಲ್ಲಿ ಫಿಲ್ಲರ್(Filler) ಆಗಿ ಉಪಯೋಗಿಸಲಾಗುತ್ತಿತ್ತು. ಕೆಲ ದಶಕಗಳ ಹಿಂದೆ ಈ ಕ್ರಿಮಿನಾಶಕ ಘಟಕ ಮುಚ್ಚಲಾಯಿತು. ಅದರ ಪರಿಣಾಮವಾಗಿ ಈ ಗಣಿ ಗುತ್ತಿಗೆಯು ಸ್ಥಗಿತಗೊಂಡಿದೆ.[೧೪]

ಉಪಖನಿಜ ಸಂಪತ್ತು

ಕಣಶಿಲೆ, ಮರಳುಗಲ್ಲು, ಮತ್ತಿತರ ಕಣಶಿಲೆ ಸಂಬಂಧಿತ ಶಿಲೆಗಳನ್ನು ಈ ಜಿಲ್ಲೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಅಲಂಕರಣ ಶಿಲೆಯಾಗಿ(Ornamentel Stones = OST) ಉತ್ಪಾದಿಸಲಾಗುತ್ತಲಿದೆ. ಈ ವಿಭಾಗದಲ್ಲಿ ಕೊಪ್ಪಳ ಜಿಲ್ಲೆಯು ಪ್ರಮುಖ ಉತ್ಪಾದನಾ ಕೇಂದ್ರಗಳನ್ನು ಹೊಂದಿದೆ.

ಕೊಪ್ಪಳದ ಬಳಿ ಇರುವ ಸೈನೈಟ್ ಶಿಲೆ(Synite) ಮತ್ತು ಯಲಬುರ್ಗಾ ತಾಲೂಕಿನ ಕುಕನೂರಿನ ಸುತ್ತುಮುತ್ತಲ ಪ್ರದೇಶದಲ್ಲಿ ಲಭ್ಯವಿರುವ ತಿಳಿಕೆಂಪುವರ್ಣದ ಫೆಲ್ಸಾಪಾರ ಖನಿಜದ ಹಾಗೂ ಕಪ್ಪು ವರ್ಣದ ಖನಿಜಗಳ ಪಟ್ಟಿಗಳುಳ್ಳ ಕಣಶಿಲೆ(Granite) ಹಾಗೂ ಕುಷ್ಟಗಿ ತಾಲೂಕಿನ(ಸೇಬಿನ ಕಟ್ಟೆ ಹೂಲಿಗೇರಿ ಇತ್ಯಾದಿ ಹಳ್ಳಿ) ಕೆಲ ಹಳ್ಳಿಗಳಲ್ಲಿ ಲಭ್ಯವಿರುವ ಗುಲಾಬಿ ವರ್ಣದ ಕಣಶಿಲೆ(pink Granite) ಇವುಗಳಿಂದ ಅಲಂಕರಣಶಿಲೆಯ ಬ್ಲಾಕುಗಳನ್ನು ಗಣಿ ಮಾಡಿ ಹೊರದೇಶಗಳಿಗೂ ಮತ್ತು ದೇಶದ ಇತರ ಪ್ರದೇಶಗಳಿಗೂ ರವಾನಿಸಲಾಗುತ್ತದೆ. ಈ ಶಿಲೆಗಳಿಗೆ ಉದ್ಯಮಿಗಳು ಬೇರೆ ಬೇರೆ ವಾಣಿಜ್ಯದ ಹೆಸರುಗಳನ್ನು ನೀಡಿದ್ದಾರೆ. ಉದಾಹರಣೆಗೆ ಕುಕನೂರಿನ ಸಿಣಕಲ್ಲಿಗೆ ಹಿಮಾಲಯನ್ ಬ್ಲೂ(Himalayan Blue) ಎಂದು ಕರೆಯಲಾಗುತ್ತದೆ.

ಗುಲಾಬಿ ಕಣಶಿಲೆಗೆ ಗುಲಾಬಿ ರೋಜ(Pink Rose) ಎಂದು ಕರೆಯಲಾಗುತ್ತದೆ. ಅಂತೆಯೇ ಈ ಜಿಲ್ಲೆಯಲ್ಲಿ ಕಣಶಿಲೆ ಮತ್ತು ತತ್ಸಂಬಂಧಿತ ಶಿಲೆಗಳನ್ನು ಕಟ್ಟಡ ನಿರ್ಮಾಣಕ್ಕಾಗಿ(Building Stone) ಉಪಯೋಗಿಸಲಾಗುತ್ತದೆ. ಈ ಜಿಲ್ಲೆಯಲ್ಲಿ ಅಂಥ ೨೨ ಗಣಿ ಗುತ್ತಿಗೆಗಳು ಇವೆ.[೧೫]

ಖನಿಜ ಸಂಪನ್ಮೂಲಗಳ ಬಳಕೆ : ದೇವಾಲಯಗಳ ನಿರ್ಮಾಣ

ಜಿಲ್ಲೆಯಲ್ಲಿ ಕೊಪ್ಪಳ, ಮಾದಿನೂರು, ಕುಕನೂರು, ಮುಧೋಳ, ಕನಕಗಿರಿ, ಹಿರೇಜಂತಗಲ್, ಪುರ ಇತ್ಯಾದಿ ಸ್ಥಳಗಳಲ್ಲಿ ಪ್ರಮುಖ ದೇವಾಲಯಗಳಿವೆ. ಈ ದೇವಾಲಯಗಳನ್ನು ಸ್ಥಳೀಯವಾಗಿ ಲಭ್ಯವಿರುವ ಶಿಲೆಗಳಿಂದಲೇ ನಿರ್ಮಿಸಲಾಗಿದೆ. ಯಲಬುರ್ಗಾ ತಾಲೂಕಿನ ಇಟಗಿ ಮಹಾದೇವ, ಮುಧೋಳದ ತ್ರಿಲಿಂಗೇಶ್ವರ, ಮಲ್ಲಿಕಾರ್ಜುನ ದೇವಾಲಯ ಮತ್ತು ಹರಿಹರ ದೇವಾಲಯಗಳನ್ನು ಕಟ್ಟಲು ಬಳಪದ ಕಲ್ಲನ್ನು(soap stone) ಉಪಯೋಗಿಸಲಾಗಿದೆ. ಮಾದಿನೂರು ಮುದಲಾಪುರದ ಬಳಪದ ಕಲ್ಲನ್ನು ಸಮೀಪದ ಇಟಗಿ ಮಹಾದೇವ ದೇವಾಲಯ ಮತ್ತು ಕೊಪ್ಪಳದಲ್ಲಿರುವ ಬಸದಿಯ ನಿರ್ಮಾಣಕ್ಕೆ ಬಳಸಿರಬಹುದೆಂದು ಊಹಿಸಲಾಗಿದೆ. ಮುಧೋಳದ ದೇವಾಲಯದ ಕೇಂದ್ರಗಳು ಸದರಿ ಬಳಪದ ಕಲ್ಲಿನ ನಿಕ್ಷೇಪಗಳಿಂದ ದೂರದಲ್ಲಿವೆ ಆದ್ದರಿಂದ ಇದೇ ಬಗೆಯ ಸಣ್ಣ ಸಣ್ಣ ಬಳಪದ ಕಲ್ಲಿನ ನಿಕ್ಷೇಪಗಳು ಮುಧೋಳದ ಸಮೀಪದ ಸುತ್ತಮುತ್ತಲಿನ ಪ್ರದೇಶದಲ್ಲಿ ಇರಬಹುದು. ಅವುಗಳ ಸರ್ವೇಕ್ಷಣೆ ಆಗಿಲ್ಲ. ಆದ್ದರಿಂದ ನಿರ್ದಿಷ್ಟವಾಗಿ ಈ ಶಿಲೆಯ ಮೂಲಸ್ಥಾನಗಳನ್ನು ಹೇಳುವುದು ಸದ್ಯಕ್ಕೆ ಸಾಧ್ಯವಿಲ್ಲ. ಮಾದಿನೂರಿನ ಸೋಮೇಶ್ವರ ದೇವಾಲಯವನ್ನು ಸಿಣಕಲ್ಲಿನಿಂದ, ಮುಂಡರಗಿಯ ಸಿದ್ಧೇಶ್ವರ ದೇವಾಲಯವನ್ನು ಸ್ಥಳೀಯವಾಗಿ ಲಭ್ಯವಿರುವ ಕಣಶಿಲೆಯಿಂದ ಮತ್ತು ಕನಕಗಿರಿ, ಹಿರೇಜಂತಗಲ್, ಪುರದ ದೇವಾಲಯಗಳನ್ನು ಸ್ಥಳೀಯವಾಗಿ ಲಭ್ಯವಿರುವ ಕಣಶಿಲೆಯಿಂದ ಮತ್ತು ತತ್ಸಂಬಂಧಿತ ಶಿಲೆಗಳಿಂದ ನಿರ್ಮಿಸಲಾಗಿದೆ. ಕುಕನೂರಿನ ಪಂಚಲಿಂಗೇಶ್ವರ ಮತ್ತು ಮಹಾಮಾಯಿ ದೇವಾಲಯಗಳನ್ನು ನೆರೆಯ ರೋಣ ತಾಲೂಕಿನಲ್ಲಿ ಲಭ್ಯವಿರುವ ಮರುಳುಗಳ್ಳಿನಿಂದ(sand stone) ನಿರ್ಮಿಸಿರಬಹುದೆಂದು ಊಹಿಸಬಹುದಾಗಿದೆ.[೧೬]

ಜಿಲ್ಲೆಯ ಎಲ್ಲಾ ಕೋಟೆಗಳನ್ನು ಕಣಶಿಲೆಯಿಂದ ನಿರ್ಮಿಸಲಾಗಿದೆ. ಈ ಶಿಲೆಯ ದೊಡ್ಡ ದೊಡ್ಡ ಸೈಜುಗಲ್ಲುಗಳನ್ನು ಎತ್ತರಕ್ಕೆ ಒಯ್ದು, ಅಲ್ಲಿ ಒಂದು ನಿರ್ದಿಷ್ಟ ಯೋಜನೆಯಂತೆ ಜೋಡಿಸಿ ಅತ್ಯಂತ ಸುಭದ್ರಗೋಡೆಗಳನ್ನು ನಿರ್ಮಿಸಿದ್ದಾರೆ. ಅದು ಅವರ ನೈಪುಣ್ಯ ಮತ್ತು ತಜ್ಞತೆಗೆ ಸಾಕ್ಷಿಯಾಗಿದೆ. ಹೀಗೆ ಪ್ರಾಚೀನ ಕುರುಹುಗಳಾದ ಸ್ಮಾರಕಗಳು ರೂಪುಗೊಳ್ಳಲು ಆಯಾ ಪ್ರದೇಶದ ಭೌಗೋಳಿಕ ಸನ್ನಿವೇಶ ಪ್ರಭಾವ ಬೀರಿರುವುದನ್ನು ಇಲ್ಲಿ ಗುರುತಿಸಬಹುದು.

ಹವಾಮಾನ ಮತ್ತು ಮಳೆ

ಕೊಪ್ಪಳ ಜಿಲ್ಲೆಯು ಸಮುದ್ರ ಪಾತಳಿಯಿಂದ ಎತ್ತರದಲ್ಲಿದ್ದು, ಪರ್ಜನ್ಯ ಛಾಯಾ ಪ್ರದೇಶದಲ್ಲಿರುವುದರಿಂದ ಇಲ್ಲಿನ ಹವಾಗುಣ ಸಾಮಾನ್ಯವಾಗಿ ತಂಪು ಆಗಿರದೇ ಒಣಹವೆ ಬಿಸಿಲು ಮತ್ತು ಶೆಕೆಯಿಂದ ಕೂಡಿರುತ್ತದೆ. ಬೇಸಿಗೆಯಲ್ಲಿ ಅತಿ ಉಷ್ಣ, ಚಳಿಗಾಲದಲ್ಲಿ ಅತಿ ಚಳಿ ಇಲ್ಲಿಯ

ವೈಶಿಷ್ಟ್ಯ. ಇಲ್ಲಿಯ ವಾಡಿಕೆ ಮಳೆಯ ಪ್ರಮಾಣ ೫೯೯ ಮೀ.ಮೀ. ಇದ್ದು, ವಾಸ್ತವಿಕ ಸರಾಸರಿ ಮಳೆ ೪೮೯ ಮೀ.ಮೀ. ದಾಖಲೆಯಾಗಿದೆ. ಅತಿ ಉಷ್ಣ ಪ್ರದೇಶವಾಗಿದ್ದರಿಂದ ಇಲ್ಲಿನ ಜನರು ಹೆಚ್ಚಾಗಿ ಮಣ್ಣಿನ ಮನೆಗಳು, ಹುಲ್ಲಿನ ಜೋಪಡಿಗಳಲ್ಲಿ ವಾಸಿಸುತ್ತಿದ್ದರು ಮತ್ತು ಪುರುಷರು ಖಾದಿಯ ಧೋತಿ, ಖಾದಿಯ ವಸ್ತ್ರಗಳನ್ನು ಬಿಳಿ ಬಟ್ಟೆಗಳನ್ನು ಧರಿಸುತ್ತಿದ್ದರು. ತಲೆಗೆ ರುಮಾಲು ಸುತುತ್ತಿದ್ದರು. ಸ್ತ್ರೀಯರು ಕೂಡಾ ಹತ್ತಿಯ ಸೀರೆಗಳನ್ನೇ ಧರಿಸುತ್ತಿದ್ದರು.

೨.೨. ಪ್ರಾಗಿತಿಹಾಸ

ಕೊಪ್ಪಳ ಜಿಲ್ಲೆಯ ಪ್ರದೇಶವು ಭೌಗೋಳಿಕವಾಗಿ ಬೆಟ್ಟಗುಡ್ಡ ಫಲವತ್ತಾದ ಭೂಮಿ ಮತ್ತು ಜಲಮೂಲಗಳನ್ನು ಹೊಂದಿರುವುದರಿಂದ ಪ್ರಾಚೀನ ಕಾಲದಿಂದಲೂ ಇದು ಮಾನವನ ವಸತಿ ನೆಲೆಯಾಗಿದೆ. ಜಿಲ್ಲೆಯಲ್ಲಿ ನಡೆದ ಸಂಶೋಧನೆಗಳು ಇಲ್ಲಿ ವಾಸಿಸಿದ ಆದಿಮಾನವನ ಪ್ರಾಚ್ಯವಶೇಷಗಳು, ನೆಲೆಗಳು, ಶಿಲಾಸಮಾಧಿಗಳು ಮತ್ತು ಗವಿವರ್ಣಚಿತ್ರಗಳನ್ನು ಬೆಳಕಿಗೆ ತಂದಿದ್ದು. ಅವುಗಳ ಮೂಲಕ ಇಲ್ಲಿ ವಾಸಿಸಿದ ಆದಿ ಮಾನವನ ಜೀವನ ಸಂಸ್ಕೃತಿಯನ್ನು ತಿಳಿದುಕೊಳ್ಳಬಹುದಾಗಿದೆ. ಕ್ರಿ.ಶ. ೧೮೩೫ರ ಸುಮಾರಿನಲ್ಲಿ ಮೊಟ್ಟಮೊದಲಿಗೆ ಜಿಲ್ಲೆಯ ಹಿರೇಬೆಣಕಲ್ಲಿನ ಶಿಲಾ ಸಮಾಧಿಗಳನ್ನು ರೆ. ಜಿ. ಕೆಯಿಸ್ ಅವರು ಶೋಧಿಸುತ್ತಾರೆ. ಜಿಲ್ಲೆಯ ಪ್ರಾಗಿತಿಹಾಸ ಅಧ್ಯಯನಕ್ಕೆ ಸಂಬಂಧಿಸಿದಂತೆ ಇದು ಮೊದಲ ಶೋಧವಾಗಿದೆ. ಈ ಸಂಗತಿಯನ್ನು ಕರ್ನಲ್ ಮೆಡೂಸ್ ಟೈಲರ್ ಅವರು ಕ್ರಿ.ಶ. ೧೮೩೫ರ ರಾಯಲ್ ಏಷ್ಯಾಟಿಕ್ ಸೊಸೈಟಿಯ ಬಾಂಬೆ ಶಾಖೆಯ ಜರ್ನಲ್ ಸಂಖ್ಯೆ ೪ ರಲ್ಲಿ ಪ್ರಕಟಿಸಿದ್ದಾರೆ.[೧೨] ಇದಾದ ನಂತರ ಹಿಂದಿನ ಹೈದರಬಾದ್ ರಾಜ್ಯದ ಭೂ ವಿಜ್ಞಾನ ಸರ್ವೇಕ್ಷಣ ಇಲಾಖೆಯ ಅಧಿಕಾರಿ ಕ್ಯಾಪ್ಟನ್ ಲಿಯೋನಾರ್ಡೋಮನ್(ಕ್ರಿ.ಶ. ೧೯೩೪) ಗೋರ್ಡನ್ ಡಿ.ಹೆಚ್.(ಕ್ರಿ.ಶ. ೧೯೫೧) ಆಲ್ಚಿನ್ ಎಫ್.ಆರ್.(ಕ್ರಿ.ಶ. ೧೯೫೬, ಕ್ರಿ.ಶ. ೧೯೭೩), ಸುಂದರ ಅ.(ಕ್ರಿ.ಶ. ೧೯೬೧–೬೨, ಕ್ರಿ.ಶ. ೧೯೭೯– ೧೯೯೦) ಮತ್ತು ಪದ್ದಯ್ಯ ಕೆ.(ಕ್ರಿ.ಶ. ೧೯೭೩) ರವರು ಜಿಲ್ಲೆಯಲ್ಲಿ ಸಂಶೋಧನೆಗಳನ್ನು ಕೈಗೊಂಡು ಪ್ರಾಗಿತಿಹಾಸ ಕಾಲದ ವಿವಿಧ ಘಟ್ಟಗಳ ಬಗೆಗೆ ಮಾಹಿತಿಯನ್ನು ಹೊರಹಾಕಿದ್ದಾರೆ. ತದನಂತರ ಬಿ. ಸಿ. ಪಾಟೀಲ್, ಶರಣಬಸಪ್ಪ ಕೋಲ್ಕಾರ ಅವರು ಜಿಲ್ಲೆಯಲ್ಲಿ ಸೂಕ್ಷ್ಮ ಶಿಲಾಯುಗದಿಂದ ಹಿಡಿದು ಆದಿ ಚಾರಿತ್ರಿಕ ಕಾಲದವರೆಗಿನ ವಸತಿ ನೆಲೆಗಳು ಮತ್ತು ಗವಿವರ್ಣ ಬಯಲುಬಂಡೆ ಚಿತ್ರಗಳನ್ನು ಶೋಧಿಸಿದ್ದಾರೆ. ಈ ಎಲ್ಲಾ ಸಂಶೋಧನಾ ಅಧ್ಯಯನಗಳು ಮತ್ತು ಕೊಪ್ಪಳ ಜಿಲ್ಲೆಯ ಆನೆಗೊಂದಿ, ಜಿಲ್ಲೆಯ ಸಮೀಪದ ಹುಣಸಗಿ ನಿಟ್ಟೂರು, ಮಸ್ಕಿ, ಪಿಕ್ಲಿಹಾಳ್, ತೆಕ್ಕಲಕೋಟೆ, ಸಂಗನಕಲ್ಲುಗಳಲ್ಲಿ ನಡೆದ ಉತ್ಖನನಗಳ ವರದಿಗಳೊಂದಿಗೆ ಸಮೀಕರಿಸಿ ಕೊಪ್ಪಳ ಜಿಲ್ಲೆಯ ಪ್ರಾಗಿತಿಹಾಸವನ್ನು ಆದಿಹಳೆಶಿಲಾಯುಗದಿಂದ ಇತಿಹಾಸ ಆರಂಭಕಾಲದವರೆಗೆ ತಿಳಿದುಕೊಳ್ಳಲು ಸಾಧ್ಯವಿದೆ. ಹೀಗೆ ತಿಳಿದ ಮಟ್ಟಿಗೆ ಹಳೆಶಿಲಾಯುಗದಲ್ಲಿ ಆದಿಹಳೆಶಿಲಾಯುಗ, ಮಧ್ಯಶಿಲಾಯುಗ, ಅಂತ್ಯ ಹಳೆಶಿಲಾಯುಗ, ಸೂಕ್ಷ್ಮಶಿಲಾಯುಗ ಈ ಕೊನೆಹಂತದಿಂದ ಮತ್ತೆ

ಅನುಕ್ರಮವಾಗಿ ನೂತನ ಶಿಲಾಯುಗ ಇದರಲ್ಲಿ ಶಿಲಾ ತಾಮ್ರಯುಗದ ಹಂತ, ಕಬ್ಬಿಣ ಯುಗದ ಬೃಹತ್ ಶಿಲಾಯುಗ ಮತ್ತು ಇತಿಹಾಸ ಆರಂಭದ ಹಂತವನ್ನು ಸ್ಪಷ್ಟವಾಗಿ ಗುರುತಿಸಲಾಗಿದೆ. ಹೀಗೆ ಕೊಪ್ಪಳ ಜಿಲ್ಲೆಯಲ್ಲಿ ನಡೆದ ಶೋಧನೆಗಳು ಮತ್ತು ಅಧ್ಯಯನದ ವೈಜ್ಞಾನಿಕ ಕ್ರಮದಿಂದ ತಿಳಿದು ಬಂದಂತೆ ಕೊಪ್ಪಳ ಜಿಲ್ಲೆಯ ಪ್ರಾಗಿತಿಹಾಸ ಕಾಲದ ಜೀವನ ಸಂಸ್ಕೃತಿಯನ್ನು ಈ ಕೆಳಗಿನಂತೆ ಸಂಗ್ರಹಿಸಬಹುದು.

ಹಳೆಶಿಲಾಯುಗ ಸಂಸ್ಕೃತಿ

ಕರ್ನಾಟಕದಲ್ಲಿ ಮಾನವ ವಾಸ್ತವ್ಯದ ಪ್ರಾಚೀನವು ಆದಿ ಹಳೆಶಿಲಾಯುಗದಿಂದ ಕಂಡು ಬರುತ್ತದೆ. ಈ ಯುಗದಲ್ಲಿ ಶಿಲಾಯುಧಗಳನ್ನು ಮಚ್ಚು, ಕತ್ತಿ ಮಾದರಿ ಮತ್ತು ದ್ವಿಮುಖ ಕೈಕೊಡಲಿ ಹಾಗೂ ಸಿಳುಗತ್ತಿ ಮಾದರಿ ಎಂಬ ಎರಡು ರೀತಿಯಲ್ಲಿ ತಯಾರಿಸುತ್ತಿದ್ದರು. ಕರ್ನಾಟಕ ಸಹಿತ ದಖ್ಖನ ಪ್ರಸ್ಥಭೂಮಿಯಲ್ಲಿ ಎರಡನೇ ಮಾದರಿಯ ಸಂಪ್ರದಾಯವು ವಿಶೇಷವಾಗಿದೆ.

ಈ ಮಾದರಿಗೆ ಸಂಬಂಧಿಸಿದಂತೆ ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ಹನುಮಸಾಗರದಲ್ಲಿ ಕೈಕೊಡಲಿ ಮತ್ತು ಮಚ್ಚುಗತ್ತಿಗಳು ದೊರಕಿವೆ. ಇದರಿಂದ ಇಂದಿಗೆ ೭ ಲಕ್ಷ ದಿಂದ ೧.೨೫ ಲಕ್ಷ ವರ್ಷದ ಪೂರ್ವದಲ್ಲಿ ಆದಿ ಮಾನವ ಇಲ್ಲಿ ವಾಸವಾಗಿದ್ದ ಎಂಬುದಾಗಿ ತಿಳಿದು ಬರುತ್ತದೆ. ಕಾಡು ಪ್ರಾಣಿಗಳನ್ನು ಬೇಟೆ ಆಡುವುದು ಹಾಗೂ ಗಡ್ಡೆ – ಗೆಣಸು, ಸಸ್ಯಗಳನ್ನು ಸಂಗ್ರಹಿಸುವುದು ಈ ಯುಗದ ಮಾನವನ ಪ್ರಮುಖ ಜೀವನ ಕ್ರಮವಾಗಿತ್ತು.

ಮಧ್ಯ ಹಳೆಶಿಲಾಯುಗ ಸಂಸ್ಕೃತಿ

ಈ ಸಂಸ್ಕೃತಿಯ ಕೆಲವು ನೆಲೆಗಳನ್ನು ಕೃಷ್ಣ, ತುಂಗಭದ್ರಾ ಪ್ರದೇಶಗಳಲ್ಲಿ ಮತ್ತು ಮರಳಬಾವಿ ಮೊದಲಾದ ಪ್ರದೇಶಗಳಲ್ಲಿ ಶೋಧಿಸಲಾಗಿದೆ. ಈ ಕಾಲದಲ್ಲಿ ಶಿಲಾಯುಗದ ತಯಾರಿಕೆಗೆ ಪ್ರಧಾನವಾಗಿ ಚರ್ಟ ಶಿಲೆ(ಚಕಮಕಿಕಲ್ಲು), ಜಾಸ್ಪರಗಳನ್ನು ಅಧಿಕ ಪ್ರಮಾಣದಲ್ಲಿ ಬಳಸಲಾಗಿತ್ತು. ಇವು ಬೆಲೆಬಾಳುವ ಶಿಲೆಗಳಾಗಿವೆ. ಈ ಯುಗದ ಉಪಕರಣಗಳನ್ನು ಚಕ್ಕೆಕಲ್ಲಿನಲ್ಲಿ ಮಾಡಲಾಗಿದೆ. ಆದರಿಂದ ಇವುಗಳನ್ನು ತಯಾರಿಸುವ ಕೆಲಸಕ್ಕೆ ಚಕ್ಕೆ ಉದ್ಯಮ ಎಂದು ಕರೆಯಲಾಗಿದೆ. ಇಂತಹ ಉದ್ಯಮ ನೆಲೆಯೊಂದು ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ಕಮ್ಮಲ್‌ದಿನ್ನಿ, ಹನುಮಸಾಗರದಲ್ಲಿ[೧೮] ಕಂಡುಬರುತ್ತವೆ. ಜಿಲ್ಲೆಯಲ್ಲಿ ಅಂತ್ಯ ಶಿಲಾಯುಗದ ಯಾವ ನೆಲೆಗಳು ಕಂಡು ಬಂದಿಲ್ಲ ಆದರೆ ಈ ಪ್ರದೇಶಕ್ಕೆ ಸಮೀಪದ ನೆಲೆಯೆಂದರೆ ಸಾಲ್ವಡಗಿಯ ಹತ್ತಿರ ಮೇರಲಬಾವಿ. ಇದನ್ನು ಕ್ರಿ.ಶ. ೧೯೬೯ರಲ್ಲಿ ಪದ್ದಯ್ಯ ಕೆ. ನವರು ಶೋಧಿಸಿದ್ದಾರೆ. ಅವರು ಗುಲಬಾಲ್, ಬೆನಹಟ್ಟಿ ಮತ್ತು ಹುಣಸಗಿ ನೆಲೆಗಳಲ್ಲಿ ಹೆಚ್ಚಿಗೆ ಅನ್ವೇಷಣೆ ಮಾಡಿದ್ದಾಗ ಇದು ಮಧ್ಯ ಹಳೆಶಿಲಾಯುಗ ಹಾಗೂ ಸೂಕ್ಷ್ಮ ಶಿಲಾಯುಗದ ಹಿಂದಿನ ಹಂತದಲ್ಲಿ ಇದದ್ದು ಗೊತ್ತಾಯಿತ್ತು.

ಒಟ್ಟಿನಲ್ಲಿ ಹಳೆಶಿಲಾಯುಗದ ಮಾನವನ ದೈನಂದಿನ ಕಾರ್ಯ ಚಟುವಟಿಕೆಗಳನ್ನು ಆಹಾರ ಸಂಗ್ರಹಣೆ ಮತ್ತು ಬೇಟೆಗಾರ ಸಂಸ್ಕೃತಿ ಎಂದು ಕರೆಯಲಾಗಿತ್ತು. ಅಲ್ಲದೇ ಈ ಕಾಲದಲ್ಲಿ

ಉಪಕರಣಗಳನ್ನು ಯಾವ ಉದ್ದೇಶಕ್ಕಾಗಿ ಉಪಯೋಗಿಸುತ್ತಿದ್ದರು ಎಂಬುದು ನಿಗೂಢವಾಗಿಯೇ ಇದೆ. ಅವುಗಳ ಆಕಾರಗಳನ್ನು ಗಮನಿಸಿ ಪ್ರಾಣಿ ಬೇಟೆ ಅವುಗಳ ಚರ್ಮಗಳನ್ನು ಬೇರ್ಪಡಿಸುವುದು ಮಾಂಸಗಳನ್ನು ತುಂಡು ಮಾಡುವುದು. ಗಡ್ಡೆ ಗೆಣಸು, ಕಂಟಿಗಳನ್ನು ಅಗೆದು ತೆಗೆಯುವುದಕ್ಕೆ ಮುಂತಾದ ಉದ್ದೆಶಗಳಿಗಾಗಿ ಬಳಸಿರಬೇಕೆಂದು ತರ್ಕಿಸಲಾಗಿದೆ.

ಸೂಕ್ಷ್ಮಶಿಲಾಯುಗ ಸಂಸ್ಕೃತಿ

ಹಳೆಶಿಲಾಯುಗ ಮತ್ತು ನೂತನ ಶಿಲಾಯುಗದ ನಡುವಿನ ಸಾಂಸ್ಕೃತಿಕ ಹಂತಗಳನ್ನು ಮಧ್ಯ ಇಲ್ಲವೇ ಸೂಕ್ಷ್ಮಶಿಲಾಯುಗ ಎಂದು ಕರೆಯಲಾಗಿದೆ. ಇದರ ಕಾಲಾವಧಿಯು ಹಿಂದಿನ ಶಿಲಾಯುಗ ಸಂಸ್ಕೃತಿಯ ಕಾಲ ವ್ಯಾಪ್ತಿಯಿಂದ ತೀರ ಕಡಿಮೆ. ಸೂಕ್ಷ್ಮ ಶಿಲಾಯುಗದ ಜನರು ಚರ್ಟ್, ಜಾಸ್ಪರ್, ಅಗೇಟ್, ಚಾಲ್ಸಿಡೋನಿ, ಕಾರ್ನೀಲಿಯನ್, ಕ್ರಿಸ್ಟಲ್ ಮುಂತಾದ ಶಿಲೆಗಳಿಂದ ಆಯುಧ ಉಪಕರಣಗಳನ್ನು ತಯಾರಿಸುತ್ತಿದ್ದರು.[೧೯] ಇವು ಗಾತ್ರದಲ್ಲಿ ಚಿಕ್ಕದಾಗಿರುತ್ತವೆ. ಆದರಿಂದ ಇವುಗಳ ಸಾಂಸ್ಕೃತಿಕ ಹಂತವನ್ನು ಸೂಕ್ಷ್ಮಶಿಲಾಯುಗ ಎಂದು ಹೆಸರಿಸಲಾಗಿದೆ. ಕೊಪ್ಪಳ ಜಿಲ್ಲೆಯ ಇಂದರಗಿ ಹಾಗೂ ವಾನಭದ್ರೇಶ್ವರ ಬೆಟ್ಟಗಳಲ್ಲಿ ಈ ಸಂಸ್ಕೃತಿಯ ಬ್ಲೇಡ್‌ಗಳನ್ನು ಶರಣಬಸಪ್ಪ ಕೋಲ್ಕಾರವರು[೨೦] ಶೋಧಿಸಿದ್ದಾರೆ. ಇದರಿಂದ ಜಿಲ್ಲೆಯಲ್ಲಿ ಸೂಕ್ಷ್ಮಶಿಲಾಯುಗದ ಮಾನವನ ಅಸ್ತಿತ್ವದ ಬಗ್ಗೆ ತಿಳಿದುಬರುತ್ತದೆ. ಮಾನವ ಜೀವನ ಸಾಂಸ್ಕೃತಿಕ ಮುನ್ನಡೆಯಲ್ಲಿ ಈ ಹಂತದ ಪಾತ್ರ ಗಮನಾರ್ಹವಾಗಿದೆ. ಬೇಟೆ ಆಡುವುದು ಮೀನು ಹಿಡಿಯುವುದು, ಆಹಾರ ಸಂಗ್ರಹಣೆ, ಬೇಸಾಯ ಮಾಡುವುದು ಈ ಅವಧಿಯ ಪ್ರಮುಖ ಲಕ್ಷಣಗಳಾಗಿವೆ. ಇದನ್ನು ಸ್ಥಿತ್ಯಂತರ ಶಿಲಾಯುಗ ಎಂತಲೂ ಕರೆಯಲಾಗಿದೆ. ಇಂಗಾಲ್–೧೪ ಕಾಲನಿರ್ಣಯ ಅನ್ವಯ ಈ ಸಂಸ್ಕೃತಿಯು ಇಂದಿಗೆ ೨೫೦೦ ವರ್ಷದಿಂದ ೧೦,೦೦೦ ವರ್ಷಗಳಷ್ಟು ಪೂರ್ವದಲ್ಲಿ ಇತ್ತು ಎಂದು ಗೊತ್ತಾಗುತ್ತದೆ.

ನೂತನ ಶಿಲಾಯುಗ – ಶಿಲಾತಾಮ್ರಯುಗ

ಉಜ್ಜಿ ನಯಗೊಳಸಿದ ಆಯುಧಗಳನ್ನು ಬಳಸಿರುವುದು, ನದಿತೀರದ ಫಲವತ್ತಾದ ಭೂಮಿಯಲ್ಲಿ ನೆಲೆಸುವಿಕೆ, ಸುಟ್ಟಮಣಿನ ಪಾತ್ರೆಗಳನ್ನು ಉಪಯೋಗಿಸುವಿಕೆ, ನಾಯಿ, ಆಕಳು, ಎತ್ತು ಮುಂತಾದ ಪ್ರಾಣಿಗಳನ್ನು ಸಾಕುವುದು ಇಂಥ ಲಕ್ಷಣಗಳಿಂದ ಕೂಡಿದ ಮಾನವ ಸಂಸ್ಕೃತಿಯನ್ನು ನವಶಿಲಾಯುಗ ಸಂಸ್ಕೃತಿಯೆಂದು ಕರೆಯಲಾಗಿದೆ. ಈ ಸಂಸ್ಕೃತಿಯ ಜನರು ತಾಮ್ರದ ಅದಿರುಗಳನ್ನು ಸಂಸ್ಕರಿಸಿ ಲೋಹದ ಬಳಕೆಯನ್ನು ಕಂಡುಕೊಳ್ಳುತ್ತಾರೆ.[೨೧] ತಾಮ್ರದಿಂದ ಕತ್ತಿ, ಬಾಣ, ಆಭರಣಗಳನ್ನು ಮಾಡಿಕೊಳ್ಳುತ್ತಾರೆ. ಹಾಗಾಗಿ ಈ ಹಂತದಲ್ಲಿಯ ಸಂಸ್ಕೃತಿಯನ್ನು ಶಿಲಾತಾಮ್ರಯುಗ ಎಂದು ಕರೆಯಲಾಗುತ್ತದೆ. ಕೊಪ್ಪಳ ಜಿಲ್ಲೆಯ ತಾವರಗೇರಾ, ವೆಂಕಟಪುರ(ಕುಷ್ಟಗಿ ತಾಲೂಕು), ಕೊಪ್ಪಳ, ಗವಿಮಠ ಕೊಪ್ಪಳ, ಬೇವಿನಹಾಳ, ಶಿವಪುರ, ಮುಸಲಾಪುರ ಬಂಡಿಹರ್ಲಾಪುರ, ಇಂದರಗಿ, (ಕೊಪ್ಪಳ ತಾಲೂಕು) ಕಾತ್ರಾಳ ಕೆರೆಹಳ್ಳಿ ಜಗಕುಂಟೆ, ಲಿಂಗನಬಂಡಿ, ತಿಪ್ಪನಹಾಳ್(ಯಲಬುರ್ಗಾ ತಾಲೂಕು), ಆನೆಗೊಂದಿ, ಅರಳಿಹಳ್ಳಿ, ಕುಂಟೋಜಿ, ಹೊಸಕೇರಾ, ವೆಂಕಟಾಪುರ, ರಾಮದುರ್ಗಾ,

ಆರ್ಹಾಳ, ಕನಕಗಿರಿ ಚಿಕ್ಕಬೆನಕಲ್, ನಂದಿಹಳ್ಳಿ, ಪನ್ನಾಪುರ, ನಾರಾಯಣಪುರ, ಹಿರೇಜಂತಗಲ್, ಸಿಂಗನಹಾಳು, ಅಂಜನಹಳ್ಳಿ, ಕೇಸರಹಟ್ಟಿ, ಹೆಬ್ಬಾಳ, ಬಂಡಿಹರ್ಲಾಪುರ, ಹಿರೇಬೆಣಕಲ್, ಮುಸಲಾಪುರ, ಎಮ್ಮಿಗುಡ್ಡ, ಅಗೋಲಿ, ಮಲ್ಲಾಪುರ, ಸಂಗಾಪುರ, ಬೇವಿನ ಹಾಳು(ಗಂಗಾವತಿ ತಾಲೂಕಿ)ನಲ್ಲಿ ಈ ಸಂಸ್ಕೃತಿಯ ನೆಲೆಗಳು ಕಂಡು ಬಂದಿವೆ. ಆನೆಗೊಂದಿಯ ಕಡೇಬಾಗಿಲಿನ ಗುಡ್ಡದ ಮೇಲೆ ಈ ಯುಗಕ್ಕೆ ಸಂಬಂಧಿಸಿದ ನೆಲೆಯಲ್ಲಿ ಉತ್ಖನನ ನಡೆದಿದೆ.[೨೨] ಈ ಎಲ್ಲಾ ನೆಲೆಗಳ ಅಧ್ಯಯನ, ಉತ್ಖನನ ಮತ್ತು ಶೋಧನೆಗಳಿಂದ ಕೊಪ್ಪಳ ಪ್ರದೇಶದಲ್ಲಿ ಸುಮಾರು ೩೦೦೦ ವರ್ಷಗಳ ಹಿಂದೆಯೇ ಒಂದು ಸಾಧಾರಣ ಗ್ರಾಮ ಜೀವನ ಪದ್ಧತಿ ಬೆಳೆದಿತೆಂಬುದು ಸ್ಪಷ್ಟವಾಗುತ್ತದೆ. ಈ ಜನರ ಸಾಂಸ್ಕೃತಿಕ ಅಭಿವ್ಯಕ್ತಿಗಳಾಗಿ ಗವಿವರ್ಣಚಿತ್ರಗಳು ಮತ್ತು ಮಣ್ಣಿನ ಗೊಂಬೆಗಳು ಕೂಡ ಕಂಡು ಬಂದಿವೆ. ಆದರಿಂದ ಮಾನವ ಸಾಂಸ್ಕೃತಿಕ ಇತಿಹಾಸದಲ್ಲಿ ಇದೊಂದು ಮಹತ್ವದ ಕೊಡುಗೆ. ಇನ್ನೊಂದು ಮುಖ್ಯಾಂಶವೆಂದರೆ ಲೋಹ ತಂತ್ರಜ್ಞಾನ ತಾಮ್ರ ಇಲ್ಲವೇ ಕಂಚಿನ ವಸ್ತುಗಳ ಬಳಕೆಯಿಂದ ಇವರಿಗೆ ತಾಮ್ರದ ಅದಿರಿನ ನಿಕ್ಷೇಪ ಗುರುತಿಸುವುದು ಮತ್ತು ಅದರಿಂದ ತಾಮ್ರ ಲೋಹ ತಯಾರಿಸುವ ತಾಂತ್ರಿಕತೆ ತಿಳಿದಿತ್ತು ಎಂಬುದು ಸ್ಪಷ್ಟವಾಗುತ್ತದೆ.

ಕಬ್ಬಿಣ ಯುಗದ ಬೃಹತ್ ಶಿಲಾಯುಗ

ಕಬ್ಬಿಣ ಯುಗ ಬೃಹತ ಶಿಲಾಯುಗದ ಸಂಸ್ಕೃತಿಯ ಜನರ ವೈಶಿಷ್ಟ್ಯವೆಂದರೆ ಸತ್ತವರ ಸಂಸ್ಕಾರ ಮಾಡುವ ಕ್ರಮ. ಬೆಟ್ಟದ ಬಂಡೆಗಳನ್ನು ಎಬ್ಬಿಸಿ ದೊಡ್ಡ ದೊಡ್ಡ ಕಲ್ಲುಬಂಡೆಗಳನ್ನು ಉಪಯೋಗಿಸಿ ಸಮಾಧಿಗಳನ್ನು ಕಟ್ಟುತ್ತಿದ್ದರು. ಇವುಗಳಲ್ಲಿ ಶವದ ಅವಶೇಷಗಳನ್ನು ಗಡಿಗೆ ಮಡಿಕೆಗಳನ್ನು ಮತ್ತು ಕಬ್ಬಿಣ ಉಪಕರಣಗಳನ್ನು ಇಡುತ್ತಿದ್ದರು. ಈ ಜನರ ವಾಸದ ನೆಲೆಗಳ ಸಮೀಪ ಇಂತಹ ನೂರಾರು ಶಿಲಾಸಮಾಧಿಗಳು ಕಂಡು ಬರುತ್ತವೆ. ಈ ಜನರು ಕಬ್ಬಿಣ ಉಪಯೋಗ ಅರಿತಿದ್ದರು ಆದರಿಂದ ಇವರ ಸಂಸ್ಕೃತಿಯನ್ನು ಕಬ್ಬಿಣ ಯುಗದ ಶಿಲಾ ಸಂಸ್ಕೃತಿ ಎಂದು ಕರೆಯುತ್ತಿದ್ದರು.

ಕೊಪ್ಪಳ ಜಿಲ್ಲೆಯಲ್ಲಿ ಈ ಸಂಸ್ಕೃತಿಯ ಅನೇಕ ನೆಲೆಗಳು ಕಂಡು ಬಂದಿವೆ. ಕೊಪ್ಪಳ ತಾಲೂಕಿನ ಕೊಪ್ಪಳ ಬಿಳೇಬಾವಿ, ಬಂಡಿಹರ್ಲಾಪುರ, ಶಿವಪುರ,[೨೩] ಕುಷ್ಟಗಿ ತಾಲೂಕಿನ ತಾವರಗೇರಾ, ವೆಂಕಟಪುರ, ಭೋದೂರು, ಗಂಗನಾಳ, ಟಕ್ಕಳಿಕಿ, ಯಲಬುರ್ಗಾ ತಾಲೂಕಿನ ಜಡ್ಡವಾಳ, ತಿಪ್ಪನಾಳ,[೨೪] ಗಂಗಾವತಿ ತಾಲೂಕಿನ ಹಿರೇಬೆಣಕಲ್ಲು, ಚಿಕ್ಕಬೆಣಕಲ್ಲು, ಎಮ್ಮಿಗುಡ್ಡ, ಮಲ್ಲಾಪುರ, ಗಡ್ಡಿ, ಬಂಡ್ರಾಳ, ಸಂಗಾಪುರ,[೨೫] ಮುಂತಾದ ಸ್ಥಳಗಳಲ್ಲಿ ಬೃಹತ ಶಿಲಾಯುಗದ ನೆಲೆಗಳಿವೆ. ವಿಶೇಷವಾಗಿ ಹಿರೇಬೆಣಕಲ್ಲಿನ ಮೋರೆರ ಗುಡ್ಡದಲ್ಲಿ ನೂರಾರು ಶಿಲಾ ಸಮಾಧಿಗಳು ಇವೆ. ಇಷ್ಟೊಂದು ವೈವಿಧ್ಯ ಮತ್ತು ವಿಫುಲ ಸಂಖ್ಯೆಯ ಸಮಾಧಿಯಿಂದ ಈ ನೆಲೆ ದಕ್ಷಿಣ ಭಾರತದ ಬೃಹತ ಶಿಲಾಯುಗದ ನೆಲೆಯಲ್ಲೆ ತುಂಬಾ ಮಹತ್ವದ ನೆಲೆಯಾಗಿದೆ.

ಈ ಸಂಸ್ಕೃತಿಯ ಮೂರು ಕಲ್ಲುಗೊಂಬೆಗಳು ಜಿಲ್ಲೆಯಲ್ಲಿ ಕಂಡು ಬಂದಿವೆ. ಹಿರೇಬೆಣಕಲ್ಲಿನಲ್ಲಿ ದೊಡ್ಡ ಕಲ್ಲುಗೊಂಬೆ ಇದ್ದರೆ ಅಗೋಲಿ ಮತ್ತು ಕಲ್ಲಪ್ಪನ ಕ್ಯಾಂಪಗಳಲ್ಲಿ ಮಧ್ಯಮ ಪ್ರಮಾಣದ

ಕಲ್ಲುಗೊಂಬೆಗಳಿವೆ. ಬೃಹತ ಶಿಲಾಯುಗದ ಸಮಾಧಿಗಳ ಮುಂದೆ ಮಾನವ ಆಕಾರದ ಕಲ್ಲುಗೊಂಬೆಗಳನ್ನು ನಿಲ್ಲಿಸುವುದು ಈ ಸಂಸ್ಕೃತಿಯ ಲಕ್ಷಣವಾಗಿತ್ತು. ಈ ಕಾಲದಲ್ಲಿ ಗ್ರಾಮ ಜೀವನ ಪದ್ಧತಿ ಇದ್ದರು ಕೂಡ ನಾಗರಿಕ ಸಂಸ್ಕೃತಿಗೆ ಪೀಠಿಕೆ ಹಾಕಿದವರು ಇವರೆ. ಇದಕ್ಕೆ ಮುಖ್ಯ ಕಾರಣ ಕಬ್ಬಿಣದ ಶೋಧ. ಈ ಲೋಹದ ಬಳಕೆಯಿಂದ ಕ್ರಮೇಣ ಕಲ್ಲಿನ ಉಪಕರಣಗಳನ್ನು ಮಾಡುವ ಅವಶ್ಯಕತೆ ಇಲ್ಲದಂತೆ ಆಗಿ ಶಿಲಾಯುಗ ಕೊನೆಗೊಂಡಿತು. ಕಬ್ಬಿಣದ ಉಪಕರಣಗಳಿಂದ ಕಾಡು ಕಡಿದು ಕೃಷಿ ಭೂಮಿ ವಿಸ್ತರಿಸಿಕೊಳ್ಳಲು ಅನುಕೂಲವಾಯಿತು. ಇದ್ದರಿಂದ ಉತ್ಪತ್ತಿ ಅಧಿಕವಾಗಿ ಆರ್ಥಿಕ ಪರಿಸ್ಥಿತಿ ಉತ್ತಮವಾಯಿತು. ಈ ಎರಡು ಸಂಗತಿಗಳು ರಾಜಕೀಯ ಪರಂಪರೆಗೆ ಬುನಾದಿಯನ್ನು ಹಾಕಿದವು, ಆದ್ದರಿಂದ ಮಾನವನ ಸಾಂಸ್ಕೃತಿಕ ಬೆಳವಣಿಗೆಯ ಇತಿಹಾಸದಲ್ಲಿ ಇದೊಂದು ಮುಖ್ಯಘಟ್ಟ. ಈ ಸಂಸ್ಕೃತಿಯ ಕಾಲವನ್ನು ಸುಮಾರು ಕ್ರಿ.ಪೂ. ೧೦೦೦ ರಿಂದ ಕ್ರಿ.ಪೂ. ೨೦೦ ಎಂದು ತರ್ಕಿಸಲಾಗಿದೆ.

ಗವಿವರ್ಣ ಮತ್ತು ಬಯಲು ಬಂಡೆ ಚಿತ್ರಗಳು

ಪ್ರಾಗಿತಿಹಾಸ ಕಾಲದ ಜನರು ಕಲೆ ಮತ್ತು ಭಾವನೆಗಳ ಅಭಿವ್ಯಕ್ತಿಯ ನಿದರ್ಶನವಾಗಿ ಅವರ ವಸತಿ ನೆಲೆ ಹಾಗೂ ಸುತ್ತಮುತ್ತಲಿನ ಗವಿ ಕಲ್ಲಾಸರೆಗಳಲ್ಲಿ ವರ್ಣಚಿತ್ರಗಳನ್ನು ರಚಿಸಿದ್ದಾರೆ ಮತ್ತು ಬಯಲು ಬಂಡೆಗಳಲ್ಲಿ ಇವರು ಕೊರೆದ ಕುಟ್ಟಿದ ಚಿತ್ರಗಳು ಕಂಡುಬರುತ್ತವೆ. ಕೊಪ್ಪಳ ಜಿಲ್ಲೆಗೆ ಸಂಬಂಧಿಸಿದಂತೆ ನೂತನ ಶಿಲಾ ತಾಮ್ರಯುಗ, ಕಬ್ಬಿಣಯುಗದ ಬೃಹತಶಿಲಾಯುಗ ಮತ್ತು ಆದಿಚಾರಿತ್ರಿಕ ಕಾಲಕ್ಕೆ ಸೇರುವ ನೂರಾರು ಚಿತ್ರಗಳನ್ನು ಲಿಯೋನಾರ್ಡೋಮನ್, ಅ. ಸುಂದರ, ಬಿ.ಸಿ. ಪಾಟೀಲ್[೨೬] ಮತ್ತು ಶರಣಬಸಪ್ಪ ಕೋಲ್ಕಾರ ಶೋಧಿಸಿ ಅಧ್ಯಯನ ಮಾಡಿದ್ದಾರೆ. ಇವರ ಅಧ್ಯಯನಗಳ ಅನ್ವಯ ಈ ಚಿತ್ರಗಳಿಂದ ಆಯಾ ಕಾಲದ ಪಶುಪಾಲನೆ, ಬೇಟೆಗಾರಿಕೆ, ಮನೋರಂಜನೆ, ಮೈಥುನ, ನಂಬಿಕೆ, ಕಲೆ ಮುಂತಾದ ಸಾಮಾಜಿಕ ಬದುಕಿನ ಸಂಗತಿಗಳನ್ನು ಆ ಕಾಲದ ಪ್ರಾಣಿ ಸಂಪತ್ತನ್ನು ತಿಳಿದುಕೊಳ್ಳಬಹುದಾಗಿದೆ. ಚಿತ್ರಗಳ ಸಂಖ್ಯಾದೃಷ್ಟಿಯಿಂದ ರಾಜ್ಯದಲ್ಲಿ ಅತಿ ಹೆಚ್ಚಿನ ಚಿತ್ರಗಳು ಕಂಡು ಬಂದಿರುವುದು ಕೊಪ್ಪಳ ಜಿಲ್ಲೆಯಲ್ಲಿ ಹಾಗಾಗಿ ಕೊಪ್ಪಳ ಹಂಪಿ ಪರಿಸರವನ್ನು ಪ್ರಾಗಿತಿಹಾಸ ಕಾಲದ ಗವಿವರ್ಣಗಳ ಚಿತ್ರದ ದೃಷ್ಟಿಯಿಂದ ಕರ್ನಾಟಕದ ಭಿಂಬೆಟ್ಕಾ ಎಂದು ವಿದ್ವಾಂಸರು ಕರೆದಿದ್ದಾರೆ. ಈ ಚಿತ್ರಗಳು ಶಿಲಾ ತಾಮ್ರಯುಗದ ಕೊನೆಯ ಹಂತ ಕ್ರಿ.ಪೂ. ಸುಮಾರು ೧೪೦೦-೮೦೦ ಮತ್ತು ಬೃಹತ ಶಿಲಾಯುಗದ ಆದಿಮಧ್ಯ ಭಾಗಕ್ಕೆ ಕ್ರಿ.ಪೂ. ೧೦೦೦-೫೦೦ ಸೇರುತ್ತದೆ.

ಒಟ್ಟಿನಲ್ಲಿ ತುಂಗಭದ್ರಾ ನದಿ ತೀರದ ಕೊಪ್ಪಳ ಜಿಲ್ಲೆಯ ನದಿಯ ಭಾಗವು ಬೆಟ್ಟ ಗುಡ್ಡಗಳಿಂದ ಆವೃತ್ತವಾಗಿದ್ದರೆ ಉಳಿದೆಡೆ ಬಯಲು ಪ್ರದೇಶದಿಂದ ಕೂಡಿದೆ. ಫಲವತ್ತಾದ ಭೂಮಿ ನೀರಿನ ಲಭ್ಯತೆ ಹಾಗೂ ವಾಸಯೋಗ್ಯ ಹವಾಮಾನದಿಂದಾಗಿ ಇದು ಪ್ರಾಚೀನ ಕಾಲದಿಂದಲೂ ಮಾನವನ ಜೀವನ ಚಟುವಟಿಕೆಗೆ ಪ್ರಶಸ್ತ್ಯವಾಗಿತ್ತು. ಆದ್ದರಿಂದ ಆದಿ ಹಳೆಶಿಲಾಯುಗದಿಂದಲೇ ಮಾನವನ

ವಾಸ್ತವ್ಯದ ಇತಿಹಾಸ ತಿಳಿದು ಬರುತ್ತದೆ. ಅಲ್ಲಿಂದ ಮನುಷ್ಯ ಸಂಸ್ಕೃತಿ ಮಧ್ಯ ಹಳೆಶಿಲಾಯುಗ, ಅಂತ್ಯಶಿಲಾಯುಗದಲ್ಲಿ ಮುನ್ನಡೆದು ಸೂಕ್ಷ್ಮಶಿಲಾಯುಗದ ಹಂತದಲ್ಲಿ ಸಾಕಷ್ಟು ಪರಿವರ್ತನೆಯನ್ನು ಕಂಡಿತು. ಮುಂದೆ ನವ ಶಿಲಾಯುಗದ, ಕಾಲದ ಹೊತ್ತಿಗೆ ಕೃಷಿ ಸಂಸ್ಕೃತಿ ಪ್ರಾರಂಭವಾಗಿ ಶಿಲಾ ತಾಮ್ರಯುಗ ಮತ್ತು ಕಬ್ಬಿಣ ಯುಗದ ಬೃಹತ ಶಿಲಾಯುಗದಲ್ಲಿ ಸಾಕಷ್ಟು ಪ್ರಗತಿದಾಯಕವಾಗಿ ಮುನ್ನಡೆದು ನಾಗರಿಕತೆಯ ಹಂತಕ್ಕೆ ಕಾಲು ಇಟ್ಟಿತು.

೨.೩. ಚರಿತ್ರೆ

ಮೌರ್ಯರು

ಭಾರತದ ಮೊದಲ ಸಾಮ್ರಾಟರೆನಿಸಿದ ಮೌರ್ಯರ ಅಧಿಕಾರ ವ್ಯಾಪ್ತಿಯಲ್ಲಿ ಕೊಪ್ಪಳ ಪ್ರದೇಶವು ಸೇರಿತ್ತೆಂಬ ಸಂಗತಿ ಇಲ್ಲಿಯ ಅಶೋಕನ ಶಾಸನಗಳಿಂದ ಸ್ಪಷ್ಟವಾಗುತ್ತದೆ. ಮೌರ್ಯ ಚಕ್ರವರ್ತಿ ಅಶೋಕ ಹಾಕಿಸಿದ ಶಿಲಾ ಶಾಸನಗಳಲ್ಲಿ ಕೊಪ್ಪಳದ ಗವಿಮಠ ಹಿಂಬದಿಯಲ್ಲಿ ಮತ್ತು ಪಾಲ್ಕಿಗುಂಡು ಬೆಟ್ಟಗಳಲ್ಲಿ ದೊರೆತ ಶಾಸನಗಳು ಅತ್ಯಂತ ಮಹತ್ವದಾಗಿವೆ. ಈ ಶಾಸನಗಳು ಅಶೋಕನ ಆಳ್ವಿಕೆಯ ಕ್ರಿಪೂ. ೨೭೩ ರಿಂದ ೨೩೩ರ ನಡುವಿನ ಕಾಲಕ್ಕೆ ಸಂಬಂಧಿಸಿದವುಗಳಾಗಿವೆ. ಇವುಗಳಲ್ಲಿ ಪಾಲ್ಕಿಗುಂಡಿಯಲ್ಲಿರುವ ಅಶೋಕನ ಶಾಸನವು ಬಹಳಷ್ಟು ತೃಟಿತಗೊಂಡಿದೆ. ಆದರೆ ಈ ಎರಡೂ ಶಾಸನಗಳಲ್ಲಿ ಬರುವ ವಿಚಾರಗಳು ಒಂದೇ ಎಂಬುದು ಮಾತ್ರ ಸ್ಪಷ್ಟ. ಕೊಪ್ಪಳದ ಗವಿಮಠದ ಹಿಂಬದಿಯಲ್ಲಿರುವ ಶಾಸನವು 'ದೇವನಾಂಪ್ರಿಯ'ನಾದ ಅಶೋಕನು ತನ್ನ ಸಾಮ್ರಾಜ್ಯದ ಪ್ರಜೆಗಳಿಗೆ ಅವರು ಆಚರಿಸಬೇಕಾದ ಧರ್ಮದ ಬಗೆಗೆ ತಿಳಿಯ ಹೇಳಿದ್ದನ್ನು ವಿವರಿಸುತ್ತದೆ. ಕೊಪ್ಪಳ ಪ್ರದೇಶಕ್ಕೆ ಹತ್ತಿರವಿರುವ ರಾಯಚೂರು ಜಿಲ್ಲೆಯ ಮಸ್ಕಿಯಲ್ಲಿ ದೊರೆತಿರುವ ಶಾಸನವು ಸಹ ಇದೇ ವಿಷಯವನ್ನು ಸಾರುತ್ತದೆ. ಜೊತೆಗೆ ಅಶೋಕನ ಸಾಮ್ರಾಜ್ಯದಲ್ಲಿ ದಕ್ಷಿಣ ಪ್ರಾಂತ್ಯದ ಪ್ರಮುಖ ಸ್ಥಳವಾಗಿದ್ದ ಸುವರ್ಣಗಿರಿಯು ಮಸ್ಕಿಯ ಬಳಿಯಲ್ಲಿಯೇ ಇತ್ತೆಂಬುದು ಕೆಲವು ವಿದ್ವಾಂಸರ ಅಭಿಪ್ರಾಯವಾಗಿದೆ. ಕೊಪ್ಪಳ ಜಿಲ್ಲೆಯ ಈಗಿನ ಕನಕಗಿರಿಯೇ ಆ ಸುವರ್ಣಗಿರಿಯೆಂಬುದು ಇನ್ನು ಕೆಲವರ[೨೭] ಅಭಿಪ್ರಾಯವಾಗಿದೆ. ಅದೇನೇ ಇದ್ದರೂ ಕೊಪ್ಪಳ ಪ್ರದೇಶ ಮೌರ್ಯ ಸಾಮ್ರಾಜ್ಯದ ಪ್ರಮುಖ ಭಾಗವಾಗಿದ್ದು ಪ್ರಾಂತೀಯ ರಾಜಧಾನಿ ಸಹ ಈ ಪ್ರದೇಶದಲ್ಲಿಯೇ ಇತ್ತೆಂಬುದಕ್ಕೆ ಹಲವು ಸಾಕ್ಷಿಗಳಿವೆ. ಕೊಪ್ಪಳದ ಶಾಸನದಂತೆ ಮಸ್ಕಿ ಶಾಸನದಲ್ಲಿ 'ದೇವನಾಂಪ್ರಿಯ ಅಶೋಕಸ್', 'ಪ್ರಿಯದರ್ಶಿ' ಎಂದು ಕರೆಯಲ್ಪಡುವ ಅಶೋಕನ ಹೆಸರು ಕಂಡು ಬರುವುದರಿಂದ ಈ ಶಾಸನಗಳ ಮಹತ್ವ ಹೆಚ್ಚಿದೆ.[೨೮] ಇದರಿಂದಾಗಿ ಅಶೋಕನ ಕಾಲದಲ್ಲಿ ಈ ಪ್ರದೇಶದಲ್ಲಿ ಬೌದ್ಧಧರ್ಮ ಪ್ರಬಲವಾಗಿತ್ತೆಂದು ತಿಳಿದು ಬರುತ್ತದೆ.

ಶಾತವಾಹನರು

ಮೌರ್ಯರ ನಂತರ ದಖನ್‌ನಲ್ಲಿ ಶಾತವಾಹನರು ಪ್ರಬಲರಾದರು ಅವರ ಆಡಳಿತ ವ್ಯಾಪ್ತಿಯಲ್ಲಿ ಕೊಪ್ಪಳ ಜಿಲ್ಲಾ ಪ್ರದೇಶವು ಸೇರಿದ್ದಿತು. ಜಿಲ್ಲೆಯ ಚಿಕ್ಕಸಿಂದೋಗಿ (ಕೊಪ್ಪಳ ತಾ.)

ಶ್ಯಾಡಲಗೇರಿ (ಕುಷ್ಟಗಿ ತಾ.)ಗಳಲ್ಲಿ ಶಾತವಾಹನ ಕಾಲದ ಪಂಚ್‌ಮಾರ್ಕಿನ ನಾಣ್ಯಗಳು ದೊರೆತಿವೆ. ಇವು ಶಾತವಾಹನರ ಆಡಳಿತಕ್ಕೆ ಸಾಕ್ಷಿಯಾಗಿವೆ.

ಬಾದಾಮಿ ಚಾಲುಕ್ಯರು

ಬಾದಾಮಿ ಚಾಲುಕ್ಯರ ಶಾಸನಗಳು ಕೊಪ್ಪಳ ಜಿಲ್ಲೆಯ ಹಲಗೇರಿ, ಇಟಗಿ ಮತ್ತು ಕುಕನೂರುಗಳಲ್ಲಿ ದೊರೆತಿವೆ. ಕ್ರಿ.ಶ. ೭ನೆಯ ಶತಮಾನದ ಹಲಗೇರಿ ಶಾಸನವು[೨೯] ವಿಜಯಾದಿತ್ಯನ ಕಾಲದ್ದಾಗಿದ್ದು, ಕೊಪಣದ ಮೊದಲ ಉಲ್ಲೇಖ ನೀಡುತ್ತದೆ. ಶಾಸನ ಕೊಪಣದ ಮೂರು ಜಾತಿ, ಗುತ್ತಿಯ ಮುಖ್ಯಸ್ಥ ಅಂಗ ರಾಜನನ್ನು ಕುರಿತು ಉಲ್ಲೇಖಿಸಿದೆ. ಇಟಗಿಯ ಶಾಸನವೊಂದು[೩೦] ಯುದ್ಧಮಲ್ಲ ಸತ್ಯಾಶ್ರಯನ ಕಾಲಕ್ಕೆ ಸೇರಿದೆ. ಈ ಶಾಸನಗಳ ಆಧಾರದಿಂದ ಈ ಪ್ರದೇಶವು ಬಾದಾಮಿ ಚಾಲುಕ್ಯರ ಆಳ್ವಿಕೆಗೆ ಒಳಪಟ್ಟಿತೆಂಬುದು ಸ್ಪಷ್ಟವಾಗಿದೆ.

ರಾಷ್ಟ್ರಕೂಟರು

ರಾಷ್ಟ್ರಕೂಟರು ಕ್ರಿ.ಶ.೭೫೭ರಲ್ಲಿ ಬಾದಾಮಿ ಚಾಲುಕ್ಯರ ಸಾರ್ವಭೌಮತ್ವವನ್ನು ಕೊನೆಗಾಣಿಸಿ ಅಧಿಕಾರಕ್ಕೆ ಬಂದರು. ಇವರು ಕ್ರಿ.ಶ.೯೭೩ರ ವರೆಗೆ ಆಳ್ವಿಕೆಯನ್ನು ಮಾಡಿದರು. ಕೊಪ್ಪಳ ಜಿಲೆಯಲ್ಲಿ ಕೊಪ್ಪಳ, ಇಟಗಿ, ಅರಕೇರಿ, ಸಂಕನೂರು, ಅಳವಂಡಿ, ಬೆಟಗೇರಿ ಗ್ರಾಮಗಳಲ್ಲಿ ರಾಷ್ಟ್ರಕೂಟರಿಗೆ ಸಂಬಂಧಿಸಿದ ಶಾಸನಗಳು ದೊರೆತಿವೆ. ಇವು ಇಂದ್ರ, ನೃಪತುಂಗ, ಪ್ರಭೂತವರ್ಷ ಗೋವಿಂದ, ಇಮ್ಮಡಿ ಕೃಷ್ಣ, ಮುಮ್ಮಡಿ ಕೃಷ್ಣ ಮತ್ತು ಖೊಟ್ಟಿಗನ ಆಳ್ವಿಕೆಗೆ ಸೇರಿದವುಗಳಾಗಿವೆ.

ಕೊಪ್ಪಳದ ಕ್ರಿ.ಶ. ೮೮೩ ಶಾಸನದಲ್ಲಿ[೩೧] ಇಂದ್ರನ ಆಳ್ವಿಕೆಯ ಕಾಲದಲ್ಲಿ ಕುಪಂದ ದಂಡನಾಯಕ ಮಾಮರಸನು ಭೇಟಿ ನೀಡಿ ಕದಂಬವಂಶದ ಮಹಾಸಾಮಂತ ದಡಿಯಮರಸನು ಕಟ್ಟಿಸಿದ ಬಸದಿಗೆ ದಾನ ನೀಡಿದ. ಆದರೆ ಈ ಕಾಲಕ್ಕೆ ಆಳುತ್ತಿದ್ದವನು ಇಂದ್ರನಲ್ಲ ರಾಷ್ಟ್ರಕೂಟ ಇಮ್ಮಡಿ ಕೃಷ್ಣ. ನೃಪತುಂಗನ ಕಾಲದ ಶಾಸನವೊಂದು[೩೨] ವೀರಯೋಧನ ಮರಣವನ್ನು ಉಲ್ಲೇಖಿಸಿದೆ. ಇಮ್ಮಡಿ ಕೃಷ್ಣನ ಕಾಲಕ್ಕೆ ಮಹಾ ಶ್ರೀಮಂತನು ಬೆಳವೋಲ-೩೦೦ ಆಳುತ್ತಿದ್ದಾಗ, ಕ್ರಿ.ಶ. ೮೯೭ರಲ್ಲಿ ಮುದುವೊಳಲಿನಲ್ಲಿ ನಡೆದ ಕಾಳಗದಲ್ಲಿ ಸಮ್ಮಗಾರ ಚಂದನು ಮರಣ ಹೊಂದಿದನ್ನು ತಿಳಿಸುತ್ತದೆ.[೩೩] ಕ್ರಿ.ಶ. ೯೩೯ರಲ್ಲಿ ಮುಮ್ಮಡಿ ಕೃಷ್ಣನು ಆಳ್ವಿಕೆ ಮಾಡುತ್ತಿರುವಾಗ ಅವನ ಕೈಕೆಳಗೆ ಬೂತುಗ ಪೆರ್ಮಾನಡಿ ಆಳುತ್ತಿದ್ದ. ಇವನ ಕೈಕೆಳಗೆ ಬುಟ್ಟಯ್ಯನೆಂಬುವನ್ನು ಎಡದೊರೆ-೨೦೦೦ ಆಳುತ್ತಿದ್ದನು. ಬೂತುಗ ಪೆರ್ಮಾನಡಿ ಬೆಳ್ವೊಲ-೩೦೦, ಮಾಸವಾಡಿ-೧೪೦, ಕುಕನೂರು-೩೦, ಕೆಳವಾಡಿ-೩೦೦ ಆಳುತ್ತಿದ್ದಾಗ ದಾನ ನೀಡಿದ್ದನ್ನು ಇಟಗಿಯ ಶಾಸನ[೩೪] ತಿಳಿಸುತ್ತದೆ. ಇದು ಮುಮ್ಮಡಿ ಕೃಷ್ಣನ ಮೊದಲ ವರ್ಷವಾಗಿರುತ್ತದೆ. ಹೊಸಕೇರಿಯ ಶಾಸನವು[೩೫] ಮುಮ್ಮಡಿ ಕೃಷ್ಣನ ಹೆಸರನ್ನು ಉಲ್ಲೇಖಿಸಿದೆ. ಕ್ರಿ.ಶ. ೯೬೪ರ ಉಪ್ಪಿನ ಬೆಟಗೇರಿ ಶಾಸನದಲ್ಲಿ[೩೬] ಇದೇ ಕೃಷ್ಣನ ಆಳ್ವಿಕೆಯ ಉಲ್ಲೇಖವಿದ್ದು, ಅವನ ಕೈಕೆಳಗೆ ಯಾದವ ವಂಶದ ಶಂಕರಗಂಡನು ರಾಜ್ಯಭಾರ ಮಾಡುತ್ತಿದ್ದಂತೆ ತಿಳಿಸುತ್ತದೆ. ಕುಕನೂರು ತಾಮ್ರ ಶಾಸನವು[೩೭] ಮಾರಸಿಂಹನ ಕಾಲದ್ದಾಗಿದ್ದು(ಕ್ರಿ.ಶ. ೯೬೯), ಇದರಲ್ಲಿ ನಾಲ್ಕನೇ ಇಂದ್ರನನ್ನು

ಪಟ್ಟಕ್ಕೆ ಕುಳ್ಳಿರಿಸಿ ಪ್ರಶಂಸೆಗೊಳಗಾದನೆಂಬ ಸಂಗತಿಯಿದೆ. ರಾಷ್ಟ್ರಕೂಟ ಖೊಟ್ಟಿಗನ ಕಾಲದ ಇಟಗಿಯ ಶಾಸನದಲ್ಲಿ[೩೮] ಗಂಗ ಮಾಂಡಲಿಕರ ವಿಶೇಷಣಗಳಾದ ಪೆರ್ಮಾನಡಿ, ನಂದಗಿರಿನಾಥ ಎಂಬ ಬಿರುದುಗಳಿವೆ.

ಗಂಗರು

ಗಂಗರು ಸಾರ್ವಭೌಮ ಅರಸರಲ್ಲದಿದ್ದರೂ ಪ್ರಭಾವಯುತ ಮಾಂಡಲಿಕರಾಗಿದ್ದರು. ಇವರ ಆಳ್ವಿಕೆಯ ಪ್ರದೇಶಕ್ಕೆ ಗಂಗವಾಡಿ–೯೬೦೦೦ ಎಂಬ ಹೆಸರಿತ್ತು. ಕೊಪ್ಪಳ ಜಿಲ್ಲೆಯಲ್ಲಿ ಗಂಗರ ಚರಿತ್ರೆಗೆ ಸಂಬಂಧಿಸಿದಂತೆ ಕುಕನೂರು, ಹೆಬ್ಬಾಳ, ಇಟಗಿ ಮತ್ತು ಕೊಪ್ಪಳಗಳಲ್ಲಿ ಶಾಸನಗಳು ದೊರಕಿವೆ. ಕ್ರಿ.ಶ. ೯೩೯ರ ಇಮ್ಮಡಿ ಬುತುಗನ ಶಾಸನವು[೩೯] ಇಟಗಿಯಲ್ಲಿ ದೊರತಿದ್ದು, ಇದರಲ್ಲಿ ಬೂತುಗನಿಗೆ ರಾಷ್ಟ್ರಕೂಟ ಮುಮ್ಮಡಿ ಕೃಷ್ಣನು ತುಂಗಭದ್ರೆಯ ಉತ್ತರ ಭಾಗಗಳಾದ ಎಡದೊರೆ–೨೦೦೦, ಬೆಳ್ವೊಲ–೩೦೦, ಮಾಸವಾಡಿ–೧೪೦, ಕುಕನೂರ–೩೦, ಕೆಳವಾಡಿ–೩೦೦, ಮುಂತಾದವನ್ನು ನೀಡಿದಂತೆ ತಿಳಿಯುತ್ತದೆ. ಆತಕೂರು ಶಾಸನದಲ್ಲಿ ಬೂತುಗನು ತಕ್ಕೋಲಂ ಯುದ್ಧದಲ್ಲಿ ಚೋಳ ರಾಜಾದಿತ್ಯನನ್ನು ಕೊಂದ ಮೇಲೆ ಅವನಿಗೆ ಇವುಗಳನ್ನು ಬಳುವಳಿ ನೀಡಿದಂತೆ ಹೇಳಿದೆ. ಆದರೆ ಈ ಇಟಗಿ ಶಾಸನವು ಸ್ಪಷ್ಟವಾಗಿ ಕ್ರಿ.ಶ. ೯೩೯ಕ್ಕೆ ಬೂತುಗ ರೇವಕ ನಿಮ್ಮಡಿಯನ್ನು ಮದುವೆಯಾಗಿದ್ದನ್ನು ಹಾಗೂ ಈ ಪ್ರದೇಶಗಳನ್ನು ಬಳುವಳಿಯಾಗಿ ಪಡೆದಿದ್ದನ್ನ ತಿಳಿಸುತ್ತದೆ. ಕ್ರಿ.ಶ. ೯೩೯ಕ್ಕೆ ಆತ ಇಟಗಿಗೆ ಬಂದಿದ್ದಂತೆ ಈ ಶಾಸನ ಸೂಚಿಸುತ್ತದೆ. ಇಮ್ಮಡಿ ಮಾರಸಿಂಹನ ಕಾಲದ ಕುಕನೂರಿನ ತ್ರಾಮಶಾಸನದಲ್ಲಿ ಗಂಗರ ಪಾರಂಪರಿಕ ವಂಶಾವಳಿಯನ್ನು ವಿವರವಾಗಿ ನೀಡಲಾಗಿದೆ. ಗಂಗವಂಶದ ಮೊದಲ ಅರಸ ಕೊಂಗುಣಿವರ್ಮನಿಂದ ಹಿಡಿದು ಇಮ್ಮಡಿ ಮಾರಸಿಂಹನವರೆಗೆ ಆಳಿದ ರಾಜರನ್ನು ಇದು ಉಲ್ಲೇಖಿಸುತ್ತದೆ. ಈ ತಾಮ್ರ ಶಾಸನದ ಮುದ್ರಿಕೆ ಮೇಲೆ ಕೆತ್ತಿದ ಗಂಗರ ಗಜಲಾಂಛನದ ಚಿತ್ರ ತುಂಬ ಸುಂದರವಾಗಿದೆ. ಕ್ರಿ.ಶ. ೯೬೮ರ ಒಂದು ತಾಮ್ರಶಾಸನದಲ್ಲಿ[೪೦] ಮಾರಸಿಂಹನ ಅನೇಕ ಬಿರುದುಗಳನ್ನು ನೀಡಲಾಗಿದೆ. ಇವನ ಅಕ್ಕ ಕುಂದಣಸ್ವಾಮಿಯು ಕಾಳಪಾರ್ಯ್ಯ ಎಂಬ ಬ್ರಾಹ್ಮಣನಿಗೆ ಅಡ್ಡವುರಗೆ ಎಂಬ ಗ್ರಾಮವನ್ನು ನೀಡಿದಂತೆ ತಿಳಿಸುತ್ತದೆ. ಈ ಕಾಲಕ್ಕೆ ಮುಮ್ಮಡಿ ಕೃಷ್ಣನು ಮೃತನಾಗಿದ್ದು, ಗಂಗ ಮಾರಸಿಂಹನು ಕೃಷ್ಣನ ದಂಡಯಾತ್ರೆಗಳನ್ನು ರಾಷ್ಟ್ರಕೂಟರ ಪರವಾಗಿ ಮುಂದುವರಿಸುತ್ತಾನೆ.

ಕ್ರಿ.ಶ. ೯೬೭–೬೮ರ ಇಟಗಿ ಶಾಸನದಲ್ಲಿ[೪೧] ರಾಷ್ಟ್ರಕೂಟ ಖೋಟ್ಟಿಗನ ಉಲ್ಲೇಖವಿದ್ದು, ಈತ ಕೃಷ್ಣನ ಮರಣಾನಂತರ ಪಟ್ಟಕ್ಕೆ ಬಂದವನು. ಇವನ ಮಾಂಡಲಿಕನಾಗಿ ಗಂಗ ಪೆರ್ಮಾನಡಿಯಿದ್ದಂತೆ ತಿಳಿಯುತ್ತದೆ. ಈ ಪೆರ್ಮಾನಡಿ ಇಮ್ಮಡಿ ಮಾರಸಿಂಹನೆ ಆಗಿರುತ್ತಾನೆ.

ಹೆಬ್ಬಾಳದ ಕ್ರಿ.ಶ. ೧೧ನೆಯ ಶತಮಾನದ ಶಾಸನದಲ್ಲಿ[೪೨] ಗಂಗರ ಪಾರಂಪರಿಕ ಬಿರುದುಗಳುಳ್ಳ ಗಂಗರಸನ ಉಲ್ಲೇಖವಿದ್ದು, ಬಹುಶಃ ಇದು ಈ ಪ್ರದೇಶದಲ್ಲಿ ಆಳ್ವಿಕೆ ನಡೆಸಿದ ಮಾರಸಿಂಹನದಾಗಿರಬಹುದು. ಮುಂದೆ ಗಂಗರ ಆಳ್ವಿಕೆಯ ಶಾಸನಗಳು ದೊರೆಯುವುದಿಲ್ಲ.

ಆದರೆ ಕೊಪ್ಪಳದ ನಿಸಿಧಿ ಶಾಸನಗಳಲ್ಲಿ ಅವರ ಬಗ್ಗೆ ಹೆಚ್ಚಿನ ವಿವರಗಳು ದೊರೆಯುತ್ತವೆ. ಕೆಲವು ಶಾಸನಗಳಲ್ಲಿ ರಾಜರ ಹೆಸರು ಸ್ವಷ್ಟವಾಗಿಲ್ಲ. ಬಹುಶಃ ರಾಷ್ಟ್ರಕೂಟ ಮುಮ್ಮಡಿ ಕೃಷ್ಣನ ಮರಣ, ಗಂಗ ಇಮ್ಮಡಿ ಬೂತುಗನ ಮರಣದ ಜೊತೆಗೆ ಗಂಗ ಬೂತುಗನ ಮಗ ಆರುಮೊಳಿದೇವನ ಮರಣ, ಶಿಥಿಲವಾಗುತ್ತಿದ್ದ ರಾಷ್ಟ್ರಕೂಟ ಆಡಳಿತ ಹಾಗೂ ಕ್ರಿ.ಶ. ೯೭೩ರಲ್ಲಾದ ರಾಷ್ಟ್ರಕೂಟ ರಾಜ್ಯದ ಅವಸಾನ ಈ ಎಲ್ಲ ಘಟನೆಗಳಿಂದ ಭ್ರಮನಿರಸನಗೊಂಡ ಗಂಗರ ರಾಣಿವಾಸದ ಸ್ತ್ರೀಯರು ಒಬ್ಬೊಬ್ಬರಾಗಿ ಸನ್ಯಾಸನವನ್ನು ಸ್ವೀಕರಿಸಿ ಕುಪಣದಲ್ಲಿ ಮುಡಿಪಿರುತ್ತಾರೆ. ಹೀಗೆ ಮುಡಿಪಿದವರಲ್ಲಿ ಗಂಗರಾಜನ ಪತ್ನಿ ಪೊಲೆಯಬ್ಬೆಯ ಮಗಳು ಎರೆಯಬ್ಬೆ[೪೩] ಮುಕುಟ ಚೂಡಾಮಣಿಗಿಂತ(ಇಮ್ಮಡಿ ಮಾರಸಿಂಹ) ಚಿಕ್ಕವಳಾದ ಚಿನ್ದಿಬ್ಬರಸಿ[೪೪] ಕ್ರಿ.ಶ. ೯೭೩ರಲ್ಲಿ ಗಂಗಬೂತುಗನ ಪತ್ನಿ ಪದ್ಮಬ್ಬರಸಿ ಮುಡಿಪಿರುತ್ತಾಳೆ. ಕ್ರಿ.ಶ. ೯೮೭ಕ್ಕೆ ಮೊದಲೇ ಕುಂದಣಸಾಮಿ ಸತ್ತಿರುತ್ತಾಳೆ.[೪೫] ಕ್ರಿ.ಶ. ೯೮೭ರಲ್ಲಿ ರಾಯನ ಪತ್ನಿ ಚಂಗಬ್ಬೆ, ಕ್ರಿ.ಶ. ೯೮೭ರಲ್ಲಿ ಚಲದಂಕಗಂಗನ ಮಗನಾದ ಚವಾಸವ ಮತ್ತು ಅವನ ಪತ್ನಿ ಕಾವಣಬ್ಬರಸಿಯ ಮಗಳು ರಂಬಲದೇವಿ(ಚಲುಕ್ಯವಂಶದ ಬಿಕ್ಕಲದೇವನ ಪತ್ನಿ) ಮುಡುಪುತ್ತಾರೆ.[೪೬] ಕ್ರಿ.ಶ. ೯೯೨ರಲ್ಲಿ ಗಂಗವಂಶದ ಎರೆಯಗಂಗನ ಮಗಳು ಗೋನಬ್ಬೆಕಂತಿ ಮುಡಿಪುತ್ತಾಳೆ.[೪೭] ಕ್ರಿ.ಶ. ೯೯೮ರಲ್ಲಿ ಗಂಗ ಬೂತುಗನ ಮಗಳು ಮಾರಸಿಂಹನ ಅಕ್ಕ ಹಾಗೂ ಚಾಳುಕ್ಯ ಹರಿಗನ ಪತ್ನಿ ಜೆಜ್ಜಬರಸಿ ಕೊನೆಯುಸಿರೆಳೆಯುತ್ತಾಳೆ.[೪೮] ಗಂಗಬೂತುಗ ಮತ್ತು ಅವನ ಪತ್ನಿ ಪದ್ಮಾವತಿಯ ಮಗಳು ಎರೆಗಂಗನ ಅಕ್ಕ ಮಲ್ಲಪ್ಪನ ಪತ್ನಿಯಾದ ಬಿಜ್ಜಬ್ಬರಸಿ ಆರಾಧನಾ[೪೯] ವಿಧಾನದಿಂದ ಮುಡಿಪುತ್ತಾಳೆ.[೫೦] ಕ್ರಿ.ಶ. ೧೦೨೩ರಲ್ಲಿ ಗಂಗರ ಅರಸ ರಾಜಮಲ್ಲನ ಪತ್ನಿ ಕಂಚಿಯಬ್ಬರಸಿ ಕುಪಣದಲ್ಲಿ ದೀಕ್ಷೆಯನ್ನು ಕೈಗೊಳ್ಳುತ್ತಾಳೆ.[೫೧] ಕ್ರಿ.ಶ. ೧೦೩೦ರ ಶಾಸನವೊಂದರಲ್ಲಿ[೫೨] ಇಮ್ಮಡಿ ಜಯಸಿಂಹನ ಪತ್ನಿ ಬೊನ್ನಾಧೇವಿಯ ತಾಯಿ ರೇವಕ್ಕನಿಮ್ಮಡಿ ಸತ್ತ ಉಲ್ಲೇಖವಿದೆ. ಈಕೆ ಬಹುಶಃ ಗಂಗವಂಶದವಳಿರಬೇಕು. ಇಲ್ಲಿಂದ ಮುಂದೆ ಗಂಗರ ಉಲ್ಲೇಖ ಕೊಪ್ಪಳ ಜಿಲ್ಲೆಯಲ್ಲಿ ಕಾಣಬರುವುದಿಲ್ಲ.

ಕಲ್ಯಾಣ ಚಾಲುಕ್ಯರು

ಕ್ರಿ.ಶ. ೯೭೩ರಲ್ಲಿ ರಾಷ್ಟ್ರಕೂಟರ ಆಳ್ವಿಕೆಯನ್ನು ಕೊಣೆಗಾಣಿಸಿ ಇಮ್ಮಡಿ ತೈಲಪನು ಕಲ್ಯಾಣದಲ್ಲಿ ಚಾಲುಕ್ಯ ರಾಜ್ಯ ಸ್ಥಾಪನೆ ಮಾಡುತ್ತಾನೆ. ಇದಕ್ಕೆ ಮೊದಲು ಬೇರೆ ಬೇರೆ ಸ್ಥಳಗಳಲ್ಲಿ ರಾಷ್ಟ್ರಕೂಟರ ಸಾಮಂತರಾಗಿ ಇವರು ರಾಜ್ಯಭಾರ ಮಾಡುತ್ತಿರುತ್ತಾರೆ ಮತ್ತು ರಾಷ್ಟ್ರಕೂಟರು ಮತ್ತು ಗಂಗರು ಇವರೊಂದಿಗೆ ವೈವಾಹಿಕ ಸಂಬಂಧ ಹೊಂದಿದ್ದರು.

ಕೊಪ್ಪಳ ಜಿಲ್ಲೆಯಲ್ಲಿ ಇವರ ಆಳ್ವಿಕೆಯ ಕುರುಹಾಗಿ ಅನೇಕ ಶಾಸನಗಳು ದೊರೆತಿವೆ. ಮಾದಿನೂರಿನ ಕ್ರಿ.ಶ. ೯೭೩ರ ಶಾಸನ ಇವರ ಆಳ್ವಿಕೆ ಆರಂಭದ್ದಾಗಿದ್ದು, ಚಾಳಕ್ಯ ತೈಲಪನು ತನ್ನ ಆಳ್ವಿಕೆಯ ಮೊದಲ ವರ್ಷದಲ್ಲಿ ಬ್ರಹ್ಮಾಂಡಕ್ರತು ಎಂಬ ಯಾಗವನ್ನು ಮಾಡಿದಂತೆ ಹೇಳಿದೆ. ಬಹುಶಃ ರಾಷ್ಟ್ರಕೂಟರನ್ನು ಸೋಲಿಸಿ ತಾನು ಪಟ್ಟಕ್ಕೆ ಬಂದ ಕಾರಣಕ್ಕಾಗಿ ಈ ಯಾಗ ಮಾಡಿಸಿರಬಹುದು. ಶಾಸನದಲ್ಲಿ ಇವನನ್ನು ಚಾಲುಕ್ಯಾಭರಣ, ಪಾಂಚಾಲಮದೇಭಪಂಚಾನನ,

ರಟ್ಟಘರಟ್ಟ, ನೂರ್ವಡಿತೇಜ, ಆಹವಮಲ್ಲೆ ಮುಂತಾಗಿ ಕರೆಯಲಾಗಿದೆ. ಕೊಪ್ಪಳದ ಕ್ರಿ.ಶ. ೯೮೭ರ ಶಾಸನದಲ್ಲಿ ಗಂಗವಂಶದ ವಾಸವನ ಮಗಳಾದ ರಂಬಲದೇವಿಯನ್ನು ಚಾಲುಕ್ಯರ ರಾಜ ಬಿಕ್ಕಲದೇವನಿಗೆ ಮದುವೆ ಮಾಡಿದ್ದಂತೆ ಹೇಳಿದೆ. ಈ ಬಿಕ್ಕಲದೇವನಿಗೂ ಆಹವಮಲ್ಲನಿಗೂ ಇದ್ದ ಸಂಬಂಧ ತಿಳಿಯುವುದಿಲ್ಲ.[೫೩] ಕ್ರಿ.ಶ. ೯೮೮ರಲ್ಲಿ ಆಹವಮಲ್ಲನು ತುಂಗಭದ್ರೆಯ ದಕ್ಷಿಣ ತಡಿಯ ಪಂಪಾಬೀಡಿನಲ್ಲಿದ್ದಂತೆ ತಿಳಿಯುತ್ತದೆ.[೫೪] ತಳಕಲ್ಲಿನ ಕ್ರಿ.ಶ. ೯೯೧ರ ಶಾಸನದಲ್ಲಿ ಆಹವಮಲ್ಲನ ಸಾಮಂತ ಸೋಭನರಸನು ಎರಡರುನೂರು ಮತ್ತು ಬನವಾಸಿ-೧೨೦೦೦ನ್ನು ಆಳುತ್ತಿದ್ದಂತೆಯೂ ಅವನ ಮಾಂಡಲಿಕ ಸಾವಿರಯಣ್ಣನು ಕುಕನೂರು-೩೦ನ್ನು ಆಳುತ್ತಿದ್ದಂತೆಯೂ ಉಲ್ಲೇಖವಿದೆ. ಹಿರೇಮನ್ನಾಪುರದ ಕ್ರಿ.ಶ. ೯೯೭ರ ಶಾಸನವು ಜಯಸಿಂಹನ ಕಾಲಕ್ಕೆ ಸೇರಿದ್ದರೂ ಆಗ ಜಯಸಿಂಹನ ಆಳ್ವಿಕೆ ಇರುವುದಿಲ್ಲ. ಈ ಕಾಲಕ್ಕೆ ಸತ್ಯಾಶ್ರಯನು ಪಟ್ಟಕ್ಕೆ ಬಂದಿರುತ್ತಾನೆ. ಬಳಗೇರಿ ಮತ್ತು ಕಲ್ಲೂರು ಶಾಸನಗಳು[೫೫] ಕ್ರಿ.ಶ. ೧೦೦೨ಕ್ಕೆ ಸೇರಿದ್ದು, ಸೋಬನರಸನು ಸತ್ಯಾಶ್ರಯನ ಸಾಮಂತನಾಗಿ ಮುಂದುವರೆದುದ್ದನ್ನು ತಿಳಿಸುತ್ತದೆ. ಕುಕನೂರಿನ ಕ್ರಿ.ಶ. ೧೦೦೫ರ ಶಾಸನದಲ್ಲಿ[೫೬] ಇರೆವಬೆಡಂಗನ ಉಲ್ಲೇಖವಿದ್ದು, ಕುಕನೂರಿನ ಎರಡು ದೇವಾಲಯಗಳ ಕಲಶಗಳನ್ನು ಸ್ಥಾಪಿಸಿದಂತೆ ತಿಳಿಯುತ್ತದೆ. ಕೊಪ್ಪಳದ ಕ್ರಿ.ಶ. ೧೦೦೮ರ ಶಾಸನದಲ್ಲಿ[೫೭] ವಿಕ್ರಮಾದಿತ್ಯನ ಮೊದಲ ವರ್ಷದ ಉಲ್ಲೇಖವಿದ್ದು ಇವನು ಐದನೆಯ ವಿಕ್ರಮಾದಿತ್ಯನಾಗಿರುತ್ತಾನೆ. ಸಾಮಿಕುಮಾರ ಎಂಬುವವನು ಬಿಚ್ಚಕುನ್ದೆ ಗ್ರಾಮದಲ್ಲಿ ನಾಗದೇವ ಬಸದಿಯನ್ನು ಕಟ್ಟಿಸಿದ. ಈ ನಾಗದೇವ ಬಹುಶಃ ಚಾಳುಕ್ಯರ ದಂಡನಾಯಕರಲ್ಲಿ ಒಬ್ಬನಾದ ಅತ್ತಿಮಬ್ಬೆಯ ಗಂಡ ನಾಗದೇವನೇ ಇದ್ದಿರಬಹುದು. ಈ ಕಾಲಕ್ಕೆ ಆತ ಸತ್ತಿದ್ದು ಅವನ ನೆನಪಿನಲ್ಲಿ ನಾಗದೇವ ಬಸದಿ ಕಟ್ಟಿಸಿ ಅವನ ಹೆಸರಿನ ನಾಗದೇವನ ಸವಣ್ವಾದ ಗಡಿಂಬ ಎಂಬ ಅಳತೆಕೋಲನ್ನು ಹಾಕಿಸಿರುತ್ತಾರೆ. ಈ ಶಾಸನ ದೊರೆತ ಸ್ಥಳದಲ್ಲಿನ ಕಟ್ಟಡದ ಅವಶೇಷವೇ ಈ ನಾಗದೇವ ಬಸದಿಯಾಗಿರಬಹುದು. ಗೋತಗಿಯ ಕ್ರಿ.ಶ. ೧೦೨೪ರ ಶಾಸನ[೫೮] ಜಗದೇಕಮಲ್ಲನು ಕಲ್ಯಾಣದಿಂದ ರಾಜ್ಯಭಾರ ಮಾಡುತ್ತಿದ್ದಂತೆ ಅವನ ಪತ್ನಿ ಪದ್ಮಲದೇವಿ ಕರಡಿಕಲ್ಲು-೩೦೦ನ್ನು ಆಳುತ್ತಿದ್ದಂತೆ ತಿಳಿಸಿದೆ. ಇವನ ಇನ್ನೊಬ್ಬ ಪತ್ನಿಯಾದ ಬೊಂಥಾದೇವಿಯ ಉಲ್ಲೇಖ ಕ್ರಿ.ಶ. ೧೦೩೦ರ ಶಾಸನದಲ್ಲಿ[೫೯] ಬಂದಿದೆ. ಬೊಂಥಾದೇವಿಯ ತಾಯಿ ರೇವಕನಿಮ್ಮಡಿ ಕ್ರಿ.ಶ. ೧೦೪೫ರಲ್ಲಿ ತ್ರೈಲೋಕ್ಯಮಲ್ಲನು ಮೊದಗನೂರ ಬೀಡಿನಲ್ಲಿದ್ದಂತೆ ತಿಳಿಯುತ್ತದೆ. ಸೋಮೇಶ್ವರ ಬೆಟ್ಟದ ಶಾಸನದಲ್ಲಿ ಕ್ರಿ.ಶ. ೧೦೫೩ರಲ್ಲಿ ಇದೇ ಅರಸನು ಆಳುತ್ತಿದ್ದಾಗ ಕದಂಬ ಕುಲದ ಪಂಪರಸನ ಉಲ್ಲೇಖ ಬರುತ್ತದೆ. ಈ ಕದಂಬ ಅರಸ ಕರಡಿಕಲ್ಲಿನ ಕದಂಬ ವಂಶದವನಿರಬಹುದು. ವಿಪ್ರದ ಕ್ರಿ.ಶ. ೧೦೫೯ರ ಶಾಸನದಲ್ಲಿ[೬೦] ಸೋಮೇಶ್ವರ ಈ ಸ್ಥಳಕ್ಕೆ ಬಂದು ದೇವಪೂಜೆ, ನದಿಪೂಜೆಯನ್ನು ಮಾಡಿಸಿದಂತೆ ಉಲ್ಲೇಖವಿದೆ. ಈ ಶಾಸನದಲ್ಲಿ ಕಿಷ್ಕಿಂದೆಯ ಹಾಗೂ ವಿಪ್ರದ ೩೩ ಕೋಟಿ ದೇವರುಗಳ ಉಲ್ಲೇಖವಿದೆ. ಅಳವಂಡಿಯ ಕ್ರಿ.ಶ. ೧೦೬೧ರ ಶಾಸನದಲ್ಲಿ[೬೧] ಕರುವ ಗುಲ್ಲಿಮಯ್ಯ ಎಂಬುವನು ಅಳವಂಡಿಯಲ್ಲಿ ತೋಟ, ಬಾವಿ, ಕಲ್ಲದೇಗುಲ, ಸತ್ರ, ಊರಬಾಗಿಲನ್ನು

ಮಾಡಿಸಿದನೆಂದಿದೆ ಮುಧೋಳ ಶಾಸನದಲ್ಲಿಯೂ[೬೨] ಈ ತ್ರೈಲೋಕ್ಯಮಲ್ಲನ ಉಲ್ಲೇಖ ಬರುತ್ತದೆ. ಹುಲಿಗಿಯ ಕ್ರಿ.ಶ. ೧೦೮೮ರ ಶಾಸನವು[೬೩] ತ್ರಿಭುವನಮಲ್ಲ ಆರನೆಯ ವಿಕ್ರಮಾದಿತ್ಯನು ಕಲ್ಯಾಣದಿಂದ ಆಳುತ್ತಿದ್ದುದನ್ನು ಉಲ್ಲೇಖಿಸಿದೆ. ವಿಪ್ರದ ಕ್ರಿ.ಶ. ೧೦೯೪ರ ಶಾಸನದಿಂದ ತ್ರಿಭುವನಮಲ್ಲನ ಸಾಮಂತ ತ್ರಿಭುವನಮಲ್ಲ ವೀರಪಾಂಡ್ಯನು ನೊಳಂಬರ ಪಾರಂಪರಿಕ ಬಿರುದುಗಳನ್ನು ಧರಿಸಿರುವುದನ್ನು ತಿಳಿಯಬಹುದಾಗಿದೆ. ಕ್ರಿ.ಶ. ೧೦೯೯ರಲ್ಲಿ ತ್ರಿಭುವನಮಲ್ಲನ ಕಾಲದ ಶಾಸನ[೬೪] ಅನೇಕ ವ್ಯಾಪಾರಿಗಳನ್ನು ಹೆಸರಿಸಿದೆ. ಹೆರೂರಿನ ಶಾಸನದಲ್ಲಿ[೬೫] ಈ ವ್ಯಾಪಾರಿಗಳನ್ನು ಚಾಳುಕ್ಯರಾಯುರ ಕುಲದಯ್ವದೊಕ್ಕಲುಗಳೆಂದು ಕರೆಯಲಾಗಿದೆ. ಮಂಕಲ್ಕೇರಿಯ ಕ್ರಿ.ಶ. ೧೧೨೩ರ ಶಾಸನವು ಈ ರಾಜನು ಜಯಂತಿಪುರದ ನೆಲೆವೀಡಿನಲ್ಲಿದ್ದಂತೆ ಹೇಳಿದೆ. ಕ್ರಿ.ಶ. ೧೧೨೮ರವರೆಗೆ ಇವನ ಶಾಸನಗಳು ಈ ಜಿಲ್ಲೆಯಲ್ಲಿ ದೊರೆತಿವೆ.

ಕುಕನೂರಿನ ಕ್ರಿ.ಶ. ೧೧೨೯ರ ಶಾಸನ ಭೂಲೋಕಮಲ್ಲನ ಆಳ್ವಿಕೆಯನ್ನು ಹೆಸರಿಸಿದೆ. ಕಲ್ಲೂರಿನ ಕ್ರಿ.ಶ. ೧೧೩೨ರ ಶಾಸನದಲ್ಲಿ[೬೬] ಆಚರಸನ ಮಗ ಪೆರ್ಮಾಡಿಯು ಕುಕನೂರು-೩೦ನ್ನು ಆಳುತ್ತಿದ್ದಂತೆ ಹೇಳಿ ಈ ಶಾಸನದಲ್ಲಿ ಬರುವ ವಡ್ಡರಾವುಳದ ಅಧಿಕಾರ ಮಹೇಶ್ವರಯ್ಯನನ್ನು ಶಾಸನದಲ್ಲಿ ಬಹುವಾಗಿ ಹೊಗಳಲಾಗಿದೆ. ಕ್ರಿ.ಶ. ೧೧೩೬ರ ಶಾಸನ[೬೭] ತ್ರಿಭುವನಮಲ್ಲನ ಹೆಂಡತಿ ರೆಬ್ಬಲದೇವಿಯನ್ನು ಹೆಸರಿಸಿದೆ. ಈಕೆ ಭೂಲೋಕಮಲ್ಲನ ತಾಯಿಯಾಗಿರಬಹುದು. ಕುಕನೂರಿನ ಕ್ರಿ.ಶ. ೧೧೪೦ರ ಶಾಸನವು[೬೮] ತೈಲಪನಿಂದ ಇಮ್ಮಡಿ ಜಗದೇಕಮಲ್ಲನವರೆಗೆ ವಂಶಾವಳಿಯನ್ನು ನೀಡಿದೆ. ಬೆಳ್ವೊಲನಾಡಿನ ಕುಕನೂರಿನಲ್ಲಿ ೪೮ ಕೇರಿಗಳಿದ್ದಂತೆ ಇದೇ ಶಾಸನ ತಿಳಿಸುತ್ತದೆ. ಇದೇ ಊರಿನ ಕ್ರಿ.ಶ. ೧೧೪೩ ಮತ್ತು ೧೧೪೯ರ ಶಾಸನಗಳು ಜಗದೇಕಮಲ್ಲನನ್ನು ಹೆಸರಿಸುತ್ತದೆ. ಕಲ್ಲೂರು ಮತ್ತು ಮುಧೋಳಿನ ಕ್ರಿ.ಶ. ೧೧೫೪ರ ಶಾಸನಗಳಲ್ಲಿ, ಅಳವಂಡಿ ಮತ್ತು ಕುಕನೂರಿನ ಕ್ರಿ.ಶ. ೧೧೫೭ರ ಶಾಸನಗಳಲ್ಲಿ ಚಾಲುಕ್ಯ ತ್ರೈಲೋಕ್ಯಮಲ್ಲನ ಆಳ್ವಿಕೆಯ ಉಲ್ಲೇಖವಿದೆ. ಇಲ್ಲಿಂದ ಮುಂದೆ ಕ್ರಿ.ಶ. ೧೧೮೫ರ ವರೆಗೆ ಚಾಲುಕ್ಯರ ಶಾಸನಗಳು ಈ ಜಿಲ್ಲೆಯಲ್ಲಿ ದೊರೆಯುವುದಿಲ್ಲ.

ಕಲ್ಲೂರಿನ ಕ್ರಿ.ಶ. ೧೧೮೫ರ ಶಾಸನ[೬೯] ಚಾಲುಕ್ಯ ತ್ರಿಭುವನೈಕ್ಯಮಲ್ಲನನ್ನು ಹೆಸರಿಸುತ್ತಿದ್ದು ಇವನ ಸಾಮಂತನಾಗಿ ಸಿಂಧವಂಶದ ವೀರಬಿಜ್ಜಳ ಮತ್ತು ವಿಕ್ರಮದೇವನಿದ್ದಂತೆ ಉಲ್ಲೇಖ ಬರುತ್ತದೆ. ಅದೇ ಗ್ರಾಮದ ಕ್ರಿ.ಶ. ೧೧೮೯ರ ಶಾಸನದಲ್ಲಿ ಭೂಲೋಕಮಲ್ಲನ ಉಲ್ಲೇಖವಿದೆ. ಮಾದಿನೂರಿನ ಕ್ರಿ.ಶ. ೧೦೯೦ರ ಶಾಸನದಲ್ಲಿ ಸೋವಿದೇವನ ಉಲ್ಲೇಖವಿದ್ದು ಇವನು ಯಾರೆಂಬುದು ಸ್ಪಷ್ಟವಾಗುತ್ತಿಲ್ಲ.

ನೊಳಂಬರು

ನೊಳಂಬರು ಪಾರಂಪರಿಕವಾಗಿ ಬಂದ ನೊಳಂಬವಾಡಿ-೩೨೦೦೦ರ ಅರಸರು. ಇವರು ಆರಂಭದಲ್ಲಿ ಹೇಮಾವತಿಯನ್ನು ರಾಜಧಾನಿಯಾಗಿ ಹೊಂದಿದ್ದರು ಆನಂತರ ಕಂಪಿಲೆಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡರು. ತುಂಗಭದ್ರಾ ನದಿ ಇವರ ಪ್ರಾಂತ್ಯಕ್ಕೆ ಸಹಜ ಗಡಿಯಾದ್ದರಿಂದ ಈ ನೊಳಂಬವಾಡಿ-೩೨೦೦೦ ಪ್ರದೇಶ ಈ ನದಿಯ ಉತ್ತರಕ್ಕೆ ಹಬ್ಬಲಿಲ್ಲ. ಜೊತೆಗೆ ನೊಳಂಬರು

ಈ ನದಿಯಿಂದ ಉತ್ತರಕ್ಕೆ ಆಳ್ವಿಕೆ ನಡೆಸಿದ ಬಗ್ಗೆ ದಾಖಲೆ ಸಿಗುವುದಿಲ್ಲ. ಆದರೆ ಗಂಗಾವತಿ ತಾಲೂಕಿನ ವಿಪ್ರವನ್ನು ಕೆಲವು ಕಾಲ ನೆಲೆವೀಡನ್ನಾಗಿ ಇವರು ಮಾಡಿಕೊಂಡಿದ್ದಂತೆ ಕಲ್ಕಂಬ ಮತ್ತು ಹಳೇನಲ್ಲುಗ್ಡಿ ಶಾಸನಗಳಿಂದ ತಿಳಿಯುತ್ತದೆ.[೨೦] ಆದರೆ ಈ ವಂಶದ ಕೆಲವು ಸ್ತ್ರೀಯರು ಕೊಪ್ಪಳದಲ್ಲಿ ಧಾರ್ಮಿಕ ವಿಧಿಯಿಂದ ಮುಡಿಪಿರುವುದು ತಿಳಿಯುತ್ತದೆ. ಇಲ್ಲಿನ ನಿಸಿಧಿ ಶಾಸನಗಳಲ್ಲಿ ಪಲ್ಲವರಾಮನ ಉಲ್ಲೇಖ ಬಂದಿದ್ದು, ಇವನು ನೊಳಂಬರಾಜನಾಗಿರಬಹುದು. ಕ್ರಿ.ಶ. ೯೮೯ರ ಶಾಸನ ಪರಿಯಬ್ಬರಸಿಯು ಪಲ್ಲವರಾಜನ ಪತ್ನಿಯೆಂದು ತಿಳಿಸುತ್ತದೆ. ಈ ಪಲ್ಲವರಾಜನು ಇರೆವನೊಳಂಬ ದಿಲೀಪನ ಮಗನಾದ ಇರೆವನೊಳಂಬ ನೊಳಿಪಯ್ಯನಿರಬಹುದು.

ಕೊಪ್ಪಳದ ಕ್ರಿ.ಶ. ೧೦೩೧ರ ಶಾಸನ ಚಿಣ್ಣಕಬ್ಬೆಯ ಪತಿ ದಿಲೀಪನೆಂದೂ ಈಕೆಯ ಮಗ ಗುಣದಬೆಡಂಗನೆಂದೂ ತಿಳಿಸಿದೆ. ಈ ದಿಲೀಪನು ಕ್ರಿ.ಶ. ೯೫೦ರಲ್ಲಿ ಆಳಿದ ದಿಲೀಪನಾಗಿರಲಾರ, ಕ್ರಿ.ಶ. ೯೭೦ರ ನಂತರ ಆಳಿದ ನೊಳಂಬರಾಜರಲ್ಲಿ ಒಬ್ಬನಾಗಿರಬೇಕು. ಈ ರಾಜರಲ್ಲಿ ಗುಣದಬೆಡಂಗ ಎಂಬ ವಿಶೇಷಣ ಯಾರಿಗಿತ್ತೆಂಬ ಬಗ್ಗೆ ಸ್ಪಷ್ಟವಿಲ್ಲ. ಆರನೆಯ ವಿಕ್ರಮಾದಿತ್ಯನ ಕಾಲದ ವಿಪ್ರದ ಶಾಸನದಲ್ಲಿ ನೊಳಂಬರ ಬಿರುದುಗಳನ್ನು ಸ್ವೀಕರಿಸಿದ್ದರು, ಈ ತ್ರಿಭುವನಮಲ್ಲ ಪಾಂಡ್ಯನು ಉಚ್ಚಂಗಿಯ ಪಾಂಡ್ಯ ಅರಸನಾಗಿದ್ದಾನೆ.

ಕಳಚೂರ್ಯರು

ಕಳಚೂರಿಗಳ ಶಾಸನಗಳು ಕೊಪ್ಪಳ ಜಿಲ್ಲೆಯ ಕುಕನೂರ, ಹಲಗೇರಿ, ಕವಲೂರು, ಪುರ, ಇಟಗಿ, ಅಳವಂಡಿ ಮುಂತಾದ ಗ್ರಾಮಗಳಲ್ಲಿ ದೊರೆತಿವೆ. ಕುಕನೂರಿನಲ್ಲಿ ಕ್ರಿ.ಶ. ೧೧೬೩ರ ಶಾಸನವು[೨೧] ಇಮ್ಮಡಿ ಬಿಜ್ಜಳನ ಆಳ್ವಿಕೆಗೆ ಸೇರಿದ್ದು. ಹಂಪೆಯ ವಿರೂಪಾಕ್ಷನ ಸನ್ನಿಧಿಯಲ್ಲಿ ಮಾಡಿದ ದಾನದ ಬಗ್ಗೆ ತಿಳಿಸುತ್ತದೆ. ಈ ಶಾಸನ ಬಿಜ್ಜಳನ ಕೈಕೆಳಗೆ ಅಮ್ಮಣರಸ, ಬೊಪ್ಪಣ್ಣನಾಯಕ, ಬೀವರಸ ಸಾಯಿದೇವ ವಿಟ್ಟಪ್ಪಯ್ಯ, ಬಲದೇವ ದಂಡನಾಯಕರನ್ನಲ್ಲದೆ ಕರಣಗಳಾದ ಮಧುಸೂಧನ ಆದಿತ್ಯದೇವ, ಸೋಮರಾಜ, ಬೊಪ್ಪದೇವ ಮತ್ತು ಚಾವುಂಡರನ್ನು ಹೆಸರಿಸಿದೆ. ಇದೇ ಗ್ರಾಮದ ಇನ್ನೊಂದ ಶಾಸನವು ಕಳಚೂರ್ಯ ಕನ್ನಮನಿಂದ ಸೋವಿದೇವನವರೆಗೆ ವಂಶಾವಳಿಯನ್ನು ನೀಡಿದ್ದು, ಸೋವಿದೇವನು ಮೊದೆಯನೂರ ನೆಲೆವೀಡಿನಲ್ಲಿದ್ದಂತೆ ತಿಳಿಸುತ್ತದೆ. ಇವನ ದಂಡಾಧೀಶನಾಗಿ ತೇಜಿರಾಜನಿರುತ್ತಾರೆ. ಕ್ರಿ.ಶ. ೧೧೭೧ರಲ್ಲಿನ ಚಳಗೇರಾ ಶಾಸನ ಇವನ ಇನ್ನೊಬ್ಬ ದಂಡಾಧೀಶನಾದ ಬೂಚಿರಾಜನನ್ನು ಹೆಸರಿಸಿದೆ. ಕವಲೂರಿನ ಕ್ರಿ.ಶ. ೧೧೭೭ರ ಕಾಲಕ್ಕೆ ಸೇರಿದ ಸಂಕಮದೇವನ ಶಾಸನದಲ್ಲಿ[೨೨] ಏಚಿಮಯ್ಯ ನಾಯಕನೆಂಬುವವನು ಕವಲೂರಿನಲ್ಲಿ ಹರಿಹರ ದೇವಾಲಯವನ್ನು ನಿರ್ಮಿಸಿ, ಅದರ ಪೂಜಾಕಾರ್ಯಗಳಿಗೆ ಭೂದಾನ ನೀಡುತ್ತಾನೆ. ಕುಕನೂರಿನ ಕ್ರಿ.ಶ. ೧೧೭೮ರ ಶಾಸನದಲ್ಲಿ[೨೩] ಸಂಕಮದೇವನು ಮೊದೆಗನೂರಿನಲ್ಲಿದ್ದಾಗ ಇವನ ಸೇನಾನಿ ಧಂನುಗಿ (ಧನ್ಯ ಚಮೂಪನು) ಬೆಳ್ವೊಲ-೩೦೦ನ್ನು ಆಳುತ್ತಿದ್ದ ಇವನು ತನ್ನ ತಾಯಿ ಚಂಡಾಬಾಯಿ, ಅಕ್ಕ ಲಳಿಯದೇವಿಯರೊಡಗೂಡಿ ಕುಕನೂರಿಗೆ ಬಂದು ಜೇಷ್ಠಾದೇವಿಯ ಪೂಜೆ ಮಾಡಿಸಿದುದನ್ನು

ಉಲ್ಲೇಖಿಸುತ್ತದೆ. ಕವಲೂರ ಕ್ರಿ.ಶ. ೧೧೭೯ರ ಶಾಸನದಲ್ಲಿ[೨೪] ಸಂಕಮದೇವನು ಕೌರೂರ ಹರಿಹರೇಶ್ವರ ದೇವಾಲಯಕ್ಕೆ ಎಡೆಹಳ್ಳಗೇರಿಯನ್ನು ದತ್ತಿಯಾಗಿ ಬಿಡುತ್ತಾನೆ. ಇವನ ಮಾಂಡಲಿಕ ಬಾಚಿದೇವನಾಗಿರುತ್ತಾನೆ. ಅಳವಂಡಿಯಲ್ಲಿ ದೊರೆತ ಶಾಸನವೊಂದು[೨೫] ಕಳಚೂರ್ಯ ಆಹವಮಲ್ಲನ ಕಾಲಕ್ಕೆ ಸೇರಿದ್ದು, ಅಳವಂಡಿಯ ಮಹಾಜನರಿಗೆ ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ. ಕ್ರಿ.ಶ. ೧೧೮೩ರ ಶಾಸನವು[೨೬] ಕಳಚೂರ್ಯ ಸಿಂಗಣ ದೇವನ ಕಾಲದ್ದಾಗಿದ್ದು, ಕುಕನೂರ ಜ್ಯೇಷ್ಠಾದೇವಿಗೆ ಕುಕನೂರನ್ನು ಸರ್ವಮಾನ್ಯವಾಗಿ ನೀಡಿದುದನ್ನು ತಿಳಿಸುತ್ತದೆ.

ಕುಮ್ಮಟದುರ್ಗದ ಅರಸರು

ಕುಮ್ಮಟದುರ್ಗದ ಅರಸರಿಗೆ ಸಂಬಂಧಿಸಿದ ಎರಡು ಶಾಸನಗಳು ಕುಮ್ಮಟದುರ್ಗದಲ್ಲಿ ದೊರೆತ ಇವು ವೀರಗಲ್ಲುಗಳಾಗಿದ್ದು ಒಂದು ಶಾಸನವು ಕಾಲಯುಕ್ತವಾಗಿದೆ. ಕ್ರಿ.ಶ. ೧೩೧೫ರಲ್ಲಿ ಸುರತಾಣದಳವು ನೇಮಿಯ ನೇತೃತ್ವದಲ್ಲಿ ಕುಮ್ಮಟದುರ್ಗಕ್ಕೆ ಮುತ್ತಿಗೆ ಹಾಕಿದಂತೆ ತಿಳಿಸುತ್ತದೆ. ಈ ಯುದ್ಧದಲ್ಲಿ ಗಡೆಸಿಂಗನಾಯ್ಕ ಮತ್ತು ಅವನ ತಮ್ಮ ರಾಮನಾಯ್ಕರು ಸತ್ತಂತೆ ತಿಳಿಯುತ್ತದೆ.[೨೭] ಕ್ರಿ.ಶ. ೧೩೨೩ರಲ್ಲಿ ಮುಮ್ಮಡಿಸಿಂಗನ ಮೇಲೆ ಹೊಯ್ಸಳರು ದಾಳಿಮಾಡಿದಂತೆ ಉಲ್ಲೇಖವಿದೆ. ಈ ಮುಮ್ಮಡಿಸಿಂಗನು ಎರಂಬರಗೆಯನ್ನು ಹಿಡಿದಾಗ ಅಲ್ಲಿದ್ದ ಜೈನರಿಗೆ ಕಿರುಕುಳ ನೀಡಿ, ಅವರ ಬಸದಿಗಳನ್ನು ನಾಶಮಾಡಿದಂತೆ ಶಾಸನವೊಂದು[೨೮] ತಿಳಿಸುತ್ತದೆ.

ಮುಮ್ಮಡಿ ಸಿಂಗನ ಮಗ ಕಂಪಿಲದೇವರಾಯ. ಇವನು ರಾಜಧಾನಿಯನ್ನು ಹೊಸಮಲೆಯಿಂದ ಕಮ್ಮಟದುರ್ಗಕ್ಕೆ ಸ್ಥಳಾಂತರಿಸುತ್ತಾನೆ. ಇವನ ಪತ್ನಿ ಗುಜ್ಜಲವಂಶದ ಹರಿಹರದೇವಿ. ಇವನ ಕಾಲದಲ್ಲಿ ನೇಮಿಖಾನನು ಕಮ್ಮಟದುರ್ಗದ ಮೇಲೆ ದಾಳಿ ಮಾಡುತ್ತಾನೆ. ಆಗ ನೇಮಿಖಾನ ಸೋತಿರಬಹುದು. ಕಂಪಿಲನ ಮಗ ರಾಮನಾಥ ಇವನನ್ನು ಹೆಸರಿಸುವ ಶಾಸನಗಳು ದೊರೆಯದಿದ್ದರೂ ಇವನ ಹೆಸರಿನಲ್ಲಿ ಕಟ್ಟಿದ ದೇವಾಲಯಗಳ ಬಗ್ಗೆ ಮಾಹಿತಿ ಸಿಗುತ್ತದೆ. ವಿಜಯನಗರದ ಅರಸ ವಿರೂಪಾಕ್ಷನ ಅಗೋಲಿಯ ರಾಮನಾಥದೇವರಿಗೆ ಹರಿವಾಣ ನೀಡಿದಂತೆ ಹೇಳಿದ್ದು, ಈ ಶಾಸನದಲ್ಲಿ ದಾನಕ್ಕೆ ತಪ್ಪಿದವರು ರಾಮನಾಥನ ಲೆಂಕರು ಎಂಬ ಉಲ್ಲೇಖವಿದೆ. ಇದು ಕುಮಾರರಾಮನ ನೆನಪಿಗಾಗಿ ಕಟ್ಟಿದ ದೇವಾಲಯವೇ ಆಗಿದೆ. ಕೃಷ್ಣದೇವರಾಯನ ಕಾಲದಲ್ಲಿ ಈ ಕುಮಾರರಾಮನ ಆರಾಧನೆಗೆ ಸಂಬಂಧಿಸಿದಂತೆ ಕೊನೇರಿನಾಯ್ಕನ ಮಗಳು ಗೋಪಯಿ ಹೊಸಮಲೆಯಲ್ಲಿ ರಾಮನಾಥನ ದೇವಾಲಯ ಕಟ್ಟಿಸಿದ್ದಲ್ಲದೆ ಅಲ್ಲಿ ಪೂಜೋಪಕರಣಗಳನ್ನು ದಾನ ನೀಡುತ್ತಾಳೆ. ಆಕೆ ಕಮ್ಮಟದುರ್ಗದಲ್ಲಿಯೂ ರಾಮನಾಥನ ದೇವಾಲಯವನ್ನು ನಿರ್ಮಿಸಿರಬೇಕು.[೨೯] ಆನೆಗೊಂದಿಯಲ್ಲಿಯೂ ರಾಮನಾಥನ ದೇವಾಲಯವಿದ್ದ (ಮನೆ) ಉಲ್ಲೇಖವಿದೆ.[೩೦]

ವಿಜಯನಗರ ಅರಸರು

ಕ್ರಿ.ಶ. ೧೩೩೬ರಲ್ಲಿ ಉದಯಿಸಿದ ವಿಜಯನಗರ ಸಾಮ್ರಾಜ್ಯವು ದಕ್ಷಿಣಭಾರತದ ಇತಿಹಾಸದಲ್ಲಿ

ವಿಶೇಷ ಸ್ಥಾನವನ್ನು ಪಡೆದಿದೆ. ದಕ್ಷಿಣದಲ್ಲಿ ರಾಜಕೀಯ ಸಾರ್ವಭೌಮತ್ವವನ್ನು ಸ್ಥಾಪಿಸಿ ಧರ್ಮ, ಸಂಸ್ಕೃತಿ, ಕಲೆ, ವಾಸ್ತುಶಿಲ್ಪ, ಸಂಗೀತ, ನೃತ್ಯ, ಲಲಿತಕಲೆಗಳನ್ನು ಅಪಾರವಾಗಿ ಪೋಷಿಸಿತು. ಕೊಪ್ಪಳ ಜಿಲ್ಲಾ ಪ್ರದೇಶವು ವಿಜಯನಗರ ಸಾಮ್ರಾಜ್ಯ ವ್ಯಾಪ್ತಿಯಲ್ಲಿತ್ತು.

ಒಂದನೇ ಹರಿಹರ

ವಿಜಯನಗರವನ್ನು ಆಳಿದ ನಾಲ್ಕು ಮನೆತನಗಳಲ್ಲಿ ಸಂಗಮ ವಂಶವು ಮೊದಲನೆಯದಾಗಿದ್ದು, ಒಂದನೇ ಹರಿಹರನು ಅದರ ಸ್ಥಾಪಕನು. ಈತನ ತಂದೆ ಸಂಗಮ ಆದ್ದರಿಂದ ಈ ವಂಶಕ್ಕೆ ಸಂಗಮ ಮನೆತನವೆಂದ ಹೆಸರು ಬಂದಿತು. ಹರಿಹರನು ವಿಜಯನಗರ ಸಾಮ್ಯಾಜ್ಯವನ್ನು ಸ್ಥಾಪಿಸಿ ಆಳ್ವಿಕೆ ನಡೆಸಿದನು. ವಿಜಯನಗರದ ಮೊದಲ ರಾಜಧಾನಿ ಕೊಪ್ಪಳ ಜಿಲ್ಲಾ ಪ್ರದೇಶದ ಆನೆಗೊಂದಿಯೇ ಆಗಿದ್ದಿತು. ಹರಿಹರನಿಗೆ ಅವನ ಸೋದರರ ಸಹಕಾರ ದೊರಕಿತು. ಅವರನ್ನು ಬೇರೆ ಬೇರೆ ಪ್ರಾಂತಗಳ ಗವರ್ನರುಗಳನ್ನಾಗಿ ನೇಮಿಸಲಾಗಿತ್ತು. ಕಂಪಣ್ಣನು ಆಂದ್ರ ಪ್ರದೇಶದ ನೆಲ್ಲೂರು ಮತ್ತು ಕಡಪಾ ಜಿಲ್ಲೆಗಳನ್ನು ಒಳಗೊಂಡ ಉದಯಗಿರಿ ರಾಜ್ಯದ ರಾಜ್ಯಪಾಲನಾದನು. ಯುವರಾಜನಾದ ಬುಕ್ಕನು ದೋರಸಮುದ್ರದಲ್ಲಿ ಇದ್ದುಕೊಂಡು ರಾಜ್ಯದ ಮಧ್ಯಪ್ರಾಂತವನ್ನು ಆಳುತ್ತಿದ್ದನು. ಮಾರಪ್ಪನು ಪಶ್ಚಿಮ ಕರಾವಳಿ ಪ್ರದೇಶವಾದ ಮತೆ ರಾಜ್ಯದ ರಾಜ್ಯಪಾಲನಾಗಿದ್ದನು. ಅವನ ರಾಜಧಾನಿ ಚಂದ್ರಗುತ್ತಿ. ಮುದ್ದಪನು ಮುಳಬಾಗಿಲಿನಿಂದ ಆಡಳಿತ ನಡೆಸುತ್ತಿದ್ದನು.[೮೧] ಅವನು ದೃಢನಿರ್ಧಾರದ, ದೂರದೃಷ್ಟಿಯಿದ್ದ ವ್ಯಕ್ತಿ ಮತ್ತು ಅಪ್ರತಿಮ ಜಯಶಾಲಿಯೂ ಸಮರ್ಥನಾಯಕನೂ ಸಂಘಟನ ಶಕ್ತಿಯುಳ್ಳವನೂ ಆಗಿದ್ದನು. ಹರಿಹರನು ರಾಜ್ಯವನ್ನು ಸ್ಥಾಪಿಸಿದುದು ಮಾತ್ರವಲ್ಲದೆ, ಉತ್ತರ ಸರಕಾರವನ್ನು ರೂಪಿಸಿ ರಾಜ್ಯದಲ್ಲಿ ಶಾಂತಿ ಸುಭದ್ರತೆಗಳು ನಿಲ್ಲುವಂತೆ ಮಾಡಿ, ಅರಾಜಕ ಸ್ಥಿತಿಯನ್ನು ಹೋಗಲಾಡಿಸಿ ಸುವ್ಯವಸ್ಥೆಯನ್ನು ಮೂಡಿಸಿದ ಕೀರ್ತಿಯೂ ಅವನಿಗೆ ಸಲ್ಲುತ್ತದೆ.

ಕೊಪ್ಪಳ ಜಿಲ್ಲೆಯ ಕೊಪ್ಪಳ, ಗಂಗಾವತಿ, ಆನೆಗೊಂದಿಯಲ್ಲಿ ಹರಿಹರನಿಗೆ ಸಂಬಂಧಿಸಿ ಶಾಸನಗಳು ದೊರತಿವೆ. ಕ್ರಿ.ಶ. ೧೩೪೨ರ ಆನೆಗೊಂದಿಯ ಶಾಸನವೇ ಈ ಜಿಲ್ಲೆಯಲ್ಲಿ ಸಂಗಮವಂಶದವರ ಬಗ್ಗೆ ದೊರೆಯುವ ಮೊದಲ ಶಾಸನ. ಒಂದನೇ ಹರಿಹರನ ದಂಡನಾಯಕನಾದ ಬೈಚದಂಡ ನಾಯಕನ ಮಗ ಇರುಗಪನು ಶಿಲಾಚೈತ್ಯಾಲಯವನ್ನು ನಿರ್ಮಿಸಿ ದಾನ ನೀಡಿದ ವಿವರವಿದೆ. ಈ ಶಾಸನ[೮೨] ಜೈನ ಗುರುಗಳ ವಂಶಾವಳಿಯನ್ನು ತಿಳಿಸುತ್ತದೆ. ಕ್ರಿ.ಶ ೧೩೪೬ರ ಕೊಪ್ಪಳ ಶಾಸನವು[೮೩] ಅರಿರಾಯ ವಿಭಾಡ, ಭಾಷೆಗೆ ತಪ್ಪುವರಾಯರ ಗಂಡ ಸಮುದ್ರಾಧಿಪತಿ ಶ್ರೀವೀರ ಹರಿಹರ ಮಹಾರಾಜ ಎಂಬ ಬಿರುದಳ್ಳ ಶ್ರೀವೀರಹರಿಹರನು ಮೂಲಸಂಘದ ಬಲಾತ್ಕಾರ ಗಣದ ಸರಸ್ವತಿಗಚ್ಛಕ್ಕೆ ಸೇರಿದ ವಾದೀಶ್ವರ, ವಾದಿಪಿತಾಮಹ, ರಾಯರಾಜಗುರು ಸಕಲ ವಿದ್ವಜ್ಜನ ಚಕ್ರವರ್ತಿ ಮುಂತಾದ ವಿಶೇಷಣೆಗಳನ್ನು ಹೊಂದಿದ್ದು, ಅನಂತ ಕೀತಿಯ ಪ್ರಿಯಶಿಷ್ಯನಾದ ಸಿಂಹನಂದಾಚಾರ್ಯನ ನಿಸಿದಿಯನ್ನು ಹರಿಹರ ಮತ್ತು ಭವ್ಯಜನರು ಸೇರಿ ಮಾಡಿಸುತ್ತಾರೆ. ಕ್ರಿ.ಶ

೧೩೪೯ರ ಆನೆಗೊಂದಿ ಶಾಸನವು[೪೪] ಅರಿರಾಯ ವಿಭಾಡ, ಭಾಷೆಗೆ ತಪ್ಪುವ ರಾಯರಗಂಡ, ಪೂರ್ವ ಪಶ್ಚಿಮ ಸಮುದ್ರಾಧಿಪತಿ ಎಂಬ ಬಿರುದಳ್ಳ ಹರಿಹರನಾಥನ ಮಗ ಸಾವಣ್ಣವೊಡೆಯನ್ನು ಹಸ್ತಿನಾಪುರ ಕಪಿಲೇಶ್ವರ ದೇವರಿಗೆ ದಾನ ಕೊಟ್ಟ ವಿವರವಿದೆ. ಇಲ್ಲಿ ದೊರೆತಿರುವ ಸಿದ್ಧವಂಶಾವಳಿಗಳು ಸಾವಣನನ್ನು ಒಂದನೇ ಹರಿಹರ ತಮ್ಮನಾದ ಕಂಪಣನ ಮಗನೆಂದು ತಿಳಿಸಿವೆ. ಆದರೆ ಪ್ರಸ್ತುತ ಶಾಸನದಲ್ಲಿ ಸ್ಪಷ್ಟವಾಗಿ ಅವನನ್ನು ಹರಿಹರನ ಮಗನೆಂದೇ ಹೇಳಲಾಗಿದೆ.

ಬುಕ್ಕರಾಯ

ಹರಿಹರನಿಗೆ ಆಡಳಿತದಲ್ಲಿ ನೆರವಾಗಿ ರಾಜ್ಯ ಸ್ಥಾಪನೆಯಲ್ಲಿ ಪ್ರಮುಖ ಪಾತ್ರವಹಿಸಿದ್ದ ಈತ ಸಿಂಹಾಸನಾರೂಢನಾದ ಅನಂತರ ಎರಡು ದಶಕಗಳ ಕಾಲ ಅಧಿಕಾರದಲ್ಲಿ ಮುಂದುವರಿದು ರಾಜ್ಯವನ್ನು ವಿಸ್ತರಿಸಿ ಬಲಪಡಿಸುತ್ತಾನೆ. ಬುಕ್ಕನು ದಕ್ಷ ಆಡಳಿತಗಾರ ಮತ್ತು ಪರಧರ್ಮ ಸಹಿಷ್ಣನಾಗಿದನು. ಇವನ ಕಾಲದಲ್ಲಿ ಪ್ರಮುಖ ಘಟನೆಯೆಂದರೆ ಅಂದು ಶ್ರವಣಬೆಳಗೊಳದಲ್ಲಿ ನಡೆದ ಮತೀಯ ಕಲಹ. ವಿಜಯನಗರ ಸಾಮ್ರಾಜ್ಯದಲ್ಲಿ ಅನೇಕ ಜಾತಿ, ಮತ, ಪಂಗಡಗಳಿಗೆ ಸೇರಿದ ಜನರು ನೆಲೆಸಿದರು. ಅವರಲ್ಲಿ ಈ ಕಾಲಕ್ಕೆ ಜೈನ ಮತ್ತು ಶ್ರೀ ವೈಷ್ಣವ ಈ ಮತೀಯರಲ್ಲಿ ಕಲಹವು ಉಂಟಾಗಿ ವಿಕೋಪಕ್ಕೆ ಹೋಯಿತು. ಬಲಿಷ್ಠರಾದ ಶ್ರೀವೈಷ್ಣವರಿಂದ ದುರ್ಬಲರಾದ ಜೈನರಿಗೆ ಹೆಚ್ಚು ಹೆಚ್ಚು ಹಿಂಸೆಯು ಆಗಲಾರಂಭಿಸಿತು. ಕೊಪ್ಪಳ ಪ್ರದೇಶದ ಆನೆಗೊಂದಿ ಸಹಿತ ಇತರ ಸ್ಥಳಗಳ ಜೈನರು ಬುಕ್ಕರಾಯನಲ್ಲಿಗೆ ದೂರನ್ನೊಯ್ದರು. ಆಗ ರಾಯನು ಉಭಯ ಮತದ ಮುಂದಾಳುಗಳನ್ನು ಓಲಗಕ್ಕೆ ಕರೆಯಿಸಿ ಜೈನರ ಕೈಯನ್ನು ಶ್ರೀ ವೈಷ್ಣವರ ಕೈಯಲ್ಲಿ ಕೊಟ್ಟು ವೈಷ್ಣವ ದರ್ಶನಕ್ಕೂ ಜೈನ ದರ್ಶನಕ್ಕೂ ಭೇದವಿಲ್ಲ ವೈಷ್ಣವರೂ ಜೈನರೂ ಒಂದು ಬೇಧವಾಗಿ ಕಾಣಲಾಗದು ಎಂದು ತಿಳಿಸಿದರು. ದಕ್ಷಿಣ ಭಾರತದ ಧಾರ್ಮಿಕ ಇತಿಹಾಸದಲ್ಲಿ ಅಜರಾಮರವಾದ ಈ ಜೈನ, ಶ್ರೀವೈಷ್ಣವ ಒಡಂಬಡಿಕೆಯೂ ವಿಜಯನಗರದ ಅರಸರು ತಮ್ಮ ಸಾಮ್ರಾಜ್ಯದೊಳಗಿನ ಎಲ್ಲ ಧರ್ಮಮತದವರಿಗೆ ಅರ್ಪಿಸಿದ ಹಿರಿದಾದ ಅಧಿಕಾರ ಪತ್ರವೇ ಆಗಿದೆ.[೪೫]

ಕೊಪ್ಪಳ ಜಿಲ್ಲೆಯಲ್ಲಿ ಕ್ರಿ.ಶ. ೧೩೫೭ರ ಆನೆಗೊಂದಿಯ ಶಾಸನದಲ್ಲಿ[೪೬] ಪ್ರಧಾನಿ ಬುಳ್ಳರಾಜನ ಪತ್ನಿ ಕಾಳುಬಾಯಿಯು ಸಾಮ್ಯಕ್ತ್ಯವ್ರತ ಪೂರ್ವಕವಾಗಿ ಬಾಲಚಂದ್ರಯೋಗೀಂದ್ರನ ಪಾದಕಮಲಗಳಲ್ಲಿ ದೀಕ್ಷೆ ಸ್ವೀಕರಿಸಿ ಮುಡುಪಿದುದನನ್ನು ತಿಳಿಸುತ್ತದೆ. ಬಹುಶಃ ಬುಕ್ಕನ ಪ್ರಧಾನಿಗಳಲ್ಲಿ ಈತನು ಒಬ್ಬ. ಕ್ರಿ.ಶ. ೧೩೬೬ರ ಹಂಪಿಯ ಶಾಸನದಲಿ[೪೭] ಶ್ರೀ ಮನಮಹಾಮಂಡಳೇಶ್ವರ, ಅರಿರಾಯವಿಭಾಡ ಭಾಷೆಗೆ ತಪ್ಪುವ ರಾಯರಗಂಡ, ಪೂರ್ವಪಶ್ಚಿಮ ಸಮುದ್ರಾಧಿಪತಿಯಾದ ವೀರಬುಕ್ಕಣ ಒಡೆಯನು ಹಸ್ತಿನಾವತಿ (ಆನೆಗೊಂದಿ)ಯಿಂದ ಆಳುತ್ತಿದ್ದಂತೆ ತಿಳಿಸುತ್ತದೆ. ಈತನ ಮಹಾಪ್ರಧಾನನಾದ ಬಸವೆದಣ್ಣಾಯಕನು ವಿರೂಪಾಕ್ಷದೇವರ ಸೇವೆಗಾಗಿ ರಾಮಾಪುರದ ಕೆರೆಯ ಕೆಳಗೆ ಭೂದಾನ ಮಾಡಿದ್ದನ್ನು ತಿಳಿಸುತ್ತದೆ. ಇದರಿಂದ ಬುಕ್ಕರಾಯನಿಗೆ ಬಸವೆದಣ್ಣಾಯಕನೆಂಬ ಮಹಾಪ್ರಧಾನನಿದ್ದುದು ಸ್ಪಷ್ಟವಾಗುತ್ತದೆ. ಈ ಶಾಸನದಿಂದ ಬುಕ್ಕರಾಯನ ಬಿರುದುಗಳು ಹಾಗೂ ಆತನು ಆನೆಗೊಂದಿಯಿಂದ

ಆಳ್ವಿಕೆ ಮಾಡಿದ್ದನೆಂಬುದನ್ನು ತಿಳಿಸುತ್ತದೆ. ಕಾಲದ ಉಲ್ಲೇಖವಿಲ್ಲದ ಒಂದು ಶಾಸನವು[೮೮] ವೀರಬುಕ್ಕರಾಯನ ಪಟ್ಟದಲ್ಲಿನ ಸಿಂಘಾರದ ಹೆಬ್ಬಾಗಿಲಿನ ಉತ್ತರಕ್ಕೆ ಮೂಲೆಯ ಬಂಡೆಯ ಮೇಲಿರುವ ಆನೆಗೊಂದಿಯ ಕೊತ್ತಳಕ್ಕೆ ಮಂಗಳದಾಯಕವಾಗಲೆಂದು ತಿಳಿಸುತ್ತದೆ.

ಇಮ್ಮಡಿ ಹರಿಹರ

ಕ್ರಿ.ಶ. ೧೩೭೭ರಲ್ಲಿ ಇವನ ತಂದೆ ಬುಕ್ಕರಾಯನ ಉತ್ತರಾಧಿಕಾರಿಯಾಗಿ ಆಡಳಿತ ಸೂತ್ರವಹಿಸಿಕೊಂಡನು. ಈತನು ಸಾಮ್ರಾಜ್ಯವನ್ನು ಕೃಷ್ಣ ತೀರದವರೆಗೂ ವಿಸ್ತರಿಸಿದನು.[೮೯] ಹಾಗೂ ಇಮ್ಮಡಿ ಹರಿಹರನಿಗೆ ಪ್ರಾರಂಭದಲ್ಲಿ ಕಷ್ಟಗಳಿದ್ದರೂ ಅವನು ರಾಜ್ಯವನ್ನು ವಿಸ್ತರಿಸಿದನು. ಪ್ರಜೆಗಳ ಯೋಗಕ್ಷೇಮವನ್ನು ನೋಡಿಕೊಂಡನು. ಭಾರಿಕ್ಷಾಮವು ಉಂಟಾದಾಗ ಈತನು ಪ್ರಜೆಗಳಿಗೆ ಎಲ್ಲಾ ಬಗೆಯ ಸೌಲಭ್ಯಗಳನ್ನು ಒದಗಿಸಿಕೊಟ್ಟನು. ಮುನ್ನೆಚ್ಚರಿಕೆಯ ಕ್ರಮವಾಗಿ ನದಿಗಳಿಗೆ ಕಟ್ಟೆಹಾಕಿ, ಕಾಲುವೆಗಳನ್ನು ತೋಡಿಸಿ, ಕೆರೆಗಳನ್ನು ನಿರ್ಮಿಸಿದನು. ರಾಜಪೋಷಣೆಯಿಂದಾಗಿ ವ್ಯಾಪಾರ ವಾಣಿಜ್ಯಗಳು ಅಭಿವೃದ್ಧಿ ಹೊಂದಿದುವು. ಈತನ ಆಳ್ವಿಕೆಯಲ್ಲಿ ವೇದಗಳ ಮೇಲಿನ ಭಾಷ್ಯ ರಚನೆಯ ಕಾರ್ಯ ಪೂರ್ಣಗೊಂಡಿತು. ವೈದಿಕ ಮಾರ್ಗ ಸ್ಥಾಪನಾಚಾರ್ಯ ಎಂಬ ಬಿರುದಿನಿಂದ ಕರೆಸಿಕೊಂಡನು. ಕನ್ನಡ ಸಾಹಿತ್ಯಕ್ಕೆ ನೀಡಿದ ಆಶ್ರಯ–ಪೋಷಣೆಗಳಿಂದಾಗಿ ಈತನನ್ನು ಕರ್ನಾಟಕ ವಿದ್ಯಾವಿಲಾಸನೆನಿಸಿಕೊಂಡ.[೯೦] ಹರಿಹರನನ್ನು ಶಾಸನಗಳಲ್ಲಿ[೯೧] ಅರಿರಾಯ ವಿಭಾಡ, ಅಶ್ವಪತಿ, ಉಭಯರಾಯವಿಗ್ರಹವಿನೋದ, ಏಕಾಂಗವೀರ, ಕರ್ನಾಟಕ ವಿದ್ಯಾವಿಲಾಸ, ಗಜಪತಿ, ಭಾಷಾತಿಲಂಗಿ, ಚತುಸಮುದ್ರಾಧಿಪತಿ, ಶ್ರೀ ಮಹಾರಾಜಾಧಿರಾಜ, ರಾಜಪರಮೇಶ್ವರ ವೀರಪ್ರತಾಪ ಎಂದು ಮೊದಲಾಗಿ ಹೊಗಳಿಕೆಗಳಿವೆ.

ಕೊಪ್ಪಳ ಜಿಲ್ಲೆಯಲ್ಲಿ ಇಮ್ಮಡಿ ಹರಿಹರನಿಗೆ ಸಂಬಂಧಿಸಿದ ಶಾಸನವು ಯಲಬುರ್ಗಾ ತಾಲೂಕಿನ ಕುಕನೂರು ಗ್ರಾಮದಲ್ಲಿ ದೊರೆಯುತ್ತದೆ. ಈ ಶಾಸನವು ಅಗ್ರಹಾರಕ್ಕೆ ಸಂಬಂಧಿಸಿದೆ. ಕಲ್ಯಾಣ ಚಾಲುಕ್ಯರು ಮತ್ತು ಕಲಚೂರಿಗಳ ಕಾಲದಲ್ಲಿ ಉಚ್ಚ ಸ್ಥಿತಿಯಲ್ಲಿದ್ದ ಈ ಅಗ್ರಹಾರವು ಕ್ರಿ.ಶ. ೧೩೭೯ರ ಹೊತ್ತಿಗೆ ನಾಶವಾಯಿತು. ಇದನ್ನು ಹರಿಹರನು ಜೀರ್ಣೋದ್ಧಾರಗೊಳಿಸಿದ್ದು[೯೨] ಶಾಸನದಲ್ಲಿ ಈ ರೀತಿ ಇದೆ. "ಶ್ರೀ ವೀರ ಪ್ರತಾಪ ಹರಿಹರ ಮಹಾರಾಯರು ಅನಾದಿ ಅಗ್ರಹಾರವಾದ ಕುಕನೂರು ಸಾನಿರ್ವ್ವೆರ್ಗ್ಗೆಮುಖ್ಯರಾದ ಶ್ರೀಮಾನ್ ಮಹಾಸ್ಥಾನದಾಚಾರ್ಯರಾದ ಗಂಡಿನ ಭಟ್ಟಪ್ಪಯ್ಯಗಳಿಗೆ ಕೊಟ್ಟ ಕುಕನೂರು ಗ್ರಾಮದ ಪ್ರಭುತ್ವಕ್ಕೆ ಸಲ್ಲುವ ತೇಜಸಾಮ್ಯವೆಂತೆಂದರೆ ಕುಕನೂರು ಅಗ್ರಹಾರವು ಖಿಲವಾಗಿಹೋದಲ್ಲಿ ಜೀರ್ಣ್ಣೋದ್ಧಾರವಂ ಮಾಡಿ ಕುಕನೂರ ಶ್ರೀಮಹಾಮಾಯಾ ಅಂಗರಂಗ ಭೋಗಕ್ಕೆಂದು ಚತುರ್ವೇದಾಧ್ಯಯನ ಸ್ಥಾಪನೆಗಂ ಸಮರ್ಪಿಸಿದ ಕುಕನೂರು ಗ್ರಾಮಕ್ಕೆ ಸಲ್ಲುವ -----" ಎಂದಿದೆ. ಇದರಿಂದ ಕುಕನೂರು ಅಗ್ರಹಾರವು ಕಾರಣಾಂತರಗಳಿಂದ ಹೀನಸ್ಥಿತಿಗೆ ಬಂದಿತ್ತೆಂದೂ ಹರಿಹರರಾಯನ್ನು ಅದನ್ನು ಜೀರ್ಣ್ಣೋದ್ಧಾರ ಮಾಡಿ ಅದು ಜನವಸತಿಗೆ ಯೋಗ್ಯವನ್ನಾಗಿಸಿ ಶ್ರೀಮಹಾಮಾಯೆಯ ಪೂಜೆಗೋಸ್ಕರವೂ, ಚತುರ್ವೇದಾಧ್ಯನದ ಸಲುವಾಗಿಯೂ,

ಅಲ್ಲಿಯ ೧೦೦೦ ಮಹಾಜನರಲ್ಲಿ ಮುಖ್ಯರಾದ ಗಂಡಿನ ಭಟ್ಟಪ್ಪಯ್ಯ ಎನ್ನುವವರಿಗೆ ಅದನ್ನು ದಾರಪೂರ್ವಕವಾಗಿ ಕೊಟ್ಟನೆಂದು ವಿಶದ ಪಡಿಸುತ್ತದೆ. ಈ ಅಗ್ರಹಾರವು ಹಾಳಾಗಿ ಹೀನ ಸ್ಥಿತಿಗೆ ಬಂದುದಕ್ಕೆ ಕಾರಣಗಳು ತಿಳಿದುಬಂದಿಲ್ಲವಾದರೂ ರಾಜಕೀಯ ಸ್ಥಿತಿಗತಿಗಳು ಈ ಬದಲಾವಣೆಗಳಿಗೆ ಕಾರಣವಿರಬಹುದೆನ್ನಲಾಗಿದೆ. ಆದರೆ ಇಲ್ಲಿಯ ಅಧಿದೇವತೆ ಮಹಾಮಾಯೆಗೆ ಸಂಬಂಧಿಸಿದಂತೆ ಒಂದೆರಡು ಅಖ್ಯಾಯಿಗಳಿವೆ. ಹರಿಹರ ರಾಯನು ಪುನಃ ೧೦೦೦ ಮಹಾಜನರಿಗೆ ದಾನಕೊಟ್ಟ ವಿಚಾರವನ್ನು ತಿಳಿಸುತ್ತದೆ. ಹೀಗೆ ಮೊದಲಿಗೆ ಒಂದು ಸಾವಿರವಿದ್ದ ಅವರ ಸಂಖ್ಯೆಯಲ್ಲಿ ಬದಲಾವಣೆಯಾದುದಕ್ಕೆ ಕಾರಣವು ತಿಳಿದುಬಂದಿಲ್ಲ.[೯೩]

ಹರಿಹರ ರಾಯನು ಕ್ರಿ.ಶ. ೧೪೦೪ರಲ್ಲಿ ತೀರಿದನು. ೨ನೇ ಹರಿಹರನಿಗೆ ಇಬ್ಬರು ಪತ್ನಿಯರು, ಪಂಪಾದೇವಿ ಮತ್ತು ಮಲ್ಲಾದೇವಿ, ನಾಲ್ಕು ಜನ ಪುತ್ರರು ೨ನೇ ಬುಕ್ಕ, ೨ನೇ ವಿರೂಪಾಕ್ಷ, ೧ನೇ ದೇವರಾಯ ಮತ್ತು ಚಿಕ್ಕರಾಯ ಇವರಲ್ಲಿ ಮೊದಲ ಮೂವರು ಸಿಂಹಾಸನಕ್ಕೆ ತಮ್ಮ ಹಕ್ಕನ್ನು ಮುಂದಿಟ್ಟರು. ಕ್ರಿ.ಶ. ೧೪೦೪ – ೧೪೦೬ರ ನಡುವೆ ಇಬ್ಬರು ಕಾದಾಡಿ ಬಗೆಹರಿಸಿಕೊಂಡರು. ಬುಕ್ಕನು ಅಕಾಲ ಮೃತ್ಯುವಿಗೆ ತುತ್ತಾದನು. ವಿರೂಪಾಕನನ್ನು ಬುಕ್ಕನೇ ನಿವಾರಿಸಿದ್ದನು. ಹಾಗಾಗಿ ಎರಡು ವರ್ಷಗಳ ನಂತರ ಕ್ರಿ.ಶ. ೧೪೦೬ರಲ್ಲಿ ೧ನೇ ದೇವರಾಯನು ಅರಸನಾದನು.[೯೪] ಆನೆಗೊಂದಿಯ ಕ್ರಿ.ಶ. ಸು.೧೩೮೨ಕ್ಕೆ ಹರಿಹರನ ಮಗ ಕಂಪಭೂಪಾಲನು ತುಂಗಭದ್ರಾ ತೀರದಲ್ಲಿ ಸೋಪಾನ ಮಾಡಿಸಿದಂತೆ ಹೇಳಿದೆ.[೯೫]

ಪ್ರೌಢ ದೇವರಾಯ

ವಿಜಯನಗರವು ಕಂಡ ಪ್ರಮುಖ ಚಕ್ರವರ್ತಿಗಳಲ್ಲಿ ಎರಡನೆಯ ದೇವರಾಯನು ಒಬ್ಬನಾಗಿದ್ದಾನೆ. ಈತನು ಸಂಗಮ ವಂಶದ ದೊರೆಗಳಲೆಲ್ಲಾ ಅತ್ಯಂತ ಶ್ರೇಷ್ಠ ದೊರೆಯಾಗಿದ್ದಾನೆ. ಈತನಿಗೆ ಪ್ರೌಢದೇವರಾಯ ಎಂಬ ಹೆಸರು ಇದೆ. ಈತನ ಕಾಲದ ಕೆಲವು ಶಾಸನಗಳು ಜಿಲ್ಲೆಯಲ್ಲಿ ದೊರೆತಿವೆ. ಕನಕಗಿರಿಯ ಕ್ರಿ.ಶ. ೧೪೩೬ರ ಶಾಸನದಲ್ಲಿ[೯೬] ವಿಜಯನಗರದ ಪ್ರಭುದೇವರಾಯನು ಕನಕಗಿರಿಪೇಟೆಯನ್ನು ಕನಕಗಿರಿನಾಥದೇವರ ಅಮೃತಪಡಿ ನೈವೇದ್ಯಕ್ಕಾಗಿ ಬಿಡುತ್ತಾನೆ. ಆನೆಗೊಂದಿಯ ಕ್ರಿ.ಶ. ೧೪೩೭ರ ಶಾಸನದಲ್ಲಿ[೯೭] ವೀರಪ್ರಉಡಪ್ರತಾಪದೇವನ ಅಳಿಯ ತಿರುವೆಂಕಟನು ಸಂಗಮರಾಯನೊಂದಿಗೆ ಸೇರಿ ಆನೆಗುಂದಿಯ ಬಯಿರವದೇವರಿಗೆ ಏನನ್ನೋ ಮಾಡಿಸಿದಂತೆ ತಿಳಿಯುತ್ತದೆ.

ವಿರೂಪಾಕ್ಷ

ಪ್ರೌಢದೇವರಾಯನ ಉತ್ತರಾಧಿಕಾರಿ ಮಲ್ಲಿಕಾರ್ಜುನನ ನಂತರ ಪ್ರೌಡದೇವರಾಯನ ತಮ್ಮನ ಮಗನಾದ ವಿರುಪಾಕ್ಷನು ಪಟ್ಟಕ್ಕೆ ಬಂದನು. ಈತನ ಕಾಲದ ಅಚಲಾಪುರದ ಕ್ರಿ.ಶ ೧೫೫೭ರ ಶಾಸನದಲ್ಲಿ[೯೮] ಜಂಗಮರಹಳ್ಳಿಯ ಕೆರೆ ಒಡೆದಿದ್ದು, ಇದನ್ನು ರಾಜಕೊಂಡ ಉಪ್ಪಾರ ಮದನಬೋವನ ಮಗ ಕನಕನಬೋವ, ಯಲಬೋವನ ಮಗ ತಿಂಮಬೋವ, ವೇಮುಲ

ತಿಂಮನಬೋವನ ಮಗ ಯಲಬೋವ ಈ ಮೂವರು ಒಡೆದಿದ್ದ ಕೆರೆಯನ್ನು ಜೀರ್ಣೋದ್ಧಾರ ಮಾಡುತ್ತಾರೆ. ಇದಕ್ಕಾಗಿ ಜಂಗಮರ ಹಳ್ಳಿಯ ಕಾಮಣಗವುಡ, ಮಲ್ಲಣಗವುಡ, ಸೇನಬೋವ ತಿಂಮಣ ಮುಂತಾದವರು ಸೇರಿ ಇದಕ್ಕಾಗಿ ಇವರಿಗೆ ೧೧ ಕೊಳಗ ಗದ್ದೆ ನೀಡುತ್ತಾರೆ. ಇದರೊಂದಿಗೆ ಒಂದು ವರಹದ ಹೊಲವನ್ನು ನೀಡಿದಂತೆ ಉಲ್ಲೇಖವಿದೆ.

ನರಸಿಂಹ ದೇವರಾಯ

ಸಂಗಮವಂಶದ ನಂತರ ಸಾಳುವ ನರಸಿಂಹನು ಕ್ರಿ.ಶ.೧೪೪೫ರಲ್ಲಿ ಅಧಿಕಾರಕ್ಕೆ ಬಂದನು. ಈತನ ಕಾಲದ ಒಂದು ಶಾಸನ ಕನಕಗಿರಿಯಲ್ಲಿದೆ. ಕ್ರಿ.ಶ. ೧೪೮೮ರ ಶಾಸನದಲ್ಲಿ[೯೯] ನರಸಿಂಗದೇವರಾಯನು ರಾಜ್ಯವನ್ನು ಆಳುತ್ತಿದ್ದು ಕನಕಗಿರಿನಾಥಸ್ವಾಮಿಯ ಅಮೃತಪಡಿಗೆ ಕನಕಗಿರಿಯ ವಾಯುವ್ಯ ದಿಕ್ಕಿನ ಗೋಡಿರಹಾಳ ಗ್ರಾಮವನ್ನು ಮತ್ತು ಅದಕ್ಕೆ ಸೇರುವ ಗೊವರಹಾಳನ್ನು ನೀಡುತ್ತಾನೆ.

ನರಸನಾಯಕ

ಕ್ರಿ.ಶ. ೧೫ನೆಯ ಶತಮಾನ ಶಾಸನದಲ್ಲಿ[೧೦೦] ಕಪಿಲೇಶ್ವರದೇವರಿಗೆ ಸೇರಿದ ಹದಿನೈದು ಕೊಳಗ ಗದ್ದೆ ಮಾನ್ಯವನ್ನು ನರಸಣನಾಯಕನಿಗೆ ಸಮರ್ಪಿಸಿದಂತೆ ಸೂಚಿಸುತ್ತದೆ. ಸಾನಾಪುರದ ಶಾಸನದಲ್ಲಿ[೧೦೧] ಸಿದ್ದದೇವರ ಪೂಜೆಗಾಗಿ ನರಸನಾಯಕನು ಆರು ವರಹ ದಾನ ಮಾಡಿದುದನ್ನು ಈ ಶಾಸನ ಉಲ್ಲೇಖಿಸುತ್ತದೆ. ಈತನು ಕೃಷ್ಣದೇವರಾಯನ ತಂದೆಯಾಗಿದ್ದಾನೆ.

ಕೃಷ್ಣದೇವರಾಯ

ವಿಜಯನಗರ ಸಾಮ್ರಾಜ್ಯದಲ್ಲಿ ಅತ್ಯಂತ ಶ್ರೇಷ್ಠನೂ ಸಮರ್ಥನೂ ಆದ ದೊರೆ ಕೃಷ್ಣದೇವರಾಯ. ಈತನ ಆಳ್ವಿಕೆಯು ತುಳುವ ವಂಶದಲ್ಲಿಯೇ ಸಮರ್ಥವಾದುದು. ಕೃಷ್ಣದೇವರಾಯನು ಕ್ರಿ.ಶ. ೧೫೦೯ ರಿಂದ ಕ್ರಿ.ಶ.೧೫೨೯ರವರೆಗೆ ಆಳ್ವಿಕೆಯನ್ನು ನಡೆಸಿದನು. ಈತನು ಒಟ್ಟು ಎರಡು ದಶಕಗಳ ಕಾಲ ವಿಜಯನಗರ ಸಾಮ್ರಾಜ್ಯದ ವಿಜಯ ಪತಾಕೆಯನ್ನು ಹಾರಿಸಿದನು. ಕೃಷ್ಣದೇವರಾಯನ ಆಳ್ವಿಕೆಯ ಕಾಲವು ಹಲವಾರು ದೃಷ್ಟಿಗಳಿಂದ ದಕ್ಷಿಣ ಭಾರತ ಇತಿಹಾಸದ ಏಕೈಕ ಸುವರ್ಣಯುಗವಾಗಿತ್ತು. ಈತನ ಕಾಲದ ಹಲವು ಶಾಸನಗಳು ಕೊಪ್ಪಳ ಜಿಲ್ಲೆಯಲ್ಲಿ ದೊರೆತಿವೆ. ಗೊಂಡಬಾಳು ಗ್ರಾಮದ ಕ್ರಿ.ಶ. ೧೫೧೨ರ ಶಾಸನದಲ್ಲಿ[೧೦೨] ಗೊಂಡಬಾಳು ಗ್ರಾಮವನ್ನು ಅಗ್ರಹಾರವನ್ನು ಪ್ರಭಾಕರ ಎಂಬುವವನಿಗೆ ದಾನ ನೀಡಿದ ಗೊಂಡಬಾಳ ಅಗ್ರಹಾರದ ಸೀಮೆಯನ್ನು ತಿಳಿಸುವ ಶಾಸನವಿದ್ದು ಇದು ಯಾವ ಯಾವ ದಿಕ್ಕಿನಲ್ಲಿ ಮರ, ಒರಳು ಕಲ್ಲು, ಗುಂಡು, ವಾಮನ ಮುದ್ರೆ ಕಲ್ಲು, ಲಿಂಗಮುದ್ರೆ ಕಲ್ಲು, ಮುಕ್ಕೊಡೆಯ ಕಲ್ಲುಗಳು ಇವೆಯೆಂದು ವಿವರವಾಗಿ ತಿಳಿಸುವ ಶಾಸನವಿದಾಗಿದೆ. ಈ ಶಾಸನವನ್ನು ಬರೆದವನು ಕೊಪಣದ ಕಂಮರ ಓಜನ ಮಗನಾದ ರಾಮೋಜ ಎಂದಿದೆ.

ಬಂಡಿಹರ್ಲಾಪುರ ಗ್ರಾಮದ ಕ್ರಿ.ಶ. ೧೫೧೩ರ ಶಾಸನದಲ್ಲಿ[೧೦೩] ಕೃಷ್ಣರಾಯ ಮಹಾರಾಯನು ಶ್ರೀ ವಿಠಲದೇವರ ಅಮೃತಪಡಿ, ನೈವೇದ್ಯ, ಅಂಗರಂಗ ವೈಭೋಗ, ಫಾಲ್ಗುಣಮಾಸ, ವೈಶಾಖದ

ರಥೋತ್ಸವ, ನಿತ್ಯ, ಪಕ್ಷಮಾಸ ಮತ್ತು ಸಂವತ್ಸರದ ಉತ್ಸವಗಳಿಗೆ, ನಿತ್ಯನೈಮಿತ್ತಿಕ ದೀಪಾರಾಧನೆ ಮುಂತಾದ ಪುಣ್ಯತಿಥಿಗಳಲ್ಲಿ ಮಾಡುವ ಮಹಾಪೂಜೆ, ಮಹಾನೈವೇದ್ಯಕ್ಕೆಂದ ಹುಲಿಗೆಯ ಮಾಗಣಿಗೆ ಸಲುವ ಹರಿಹರಪುರವನ್ನು ಸಮರ್ಪಿಸುತ್ತಾನೆ. ಈ ಗ್ರಾಮದ ನೀರಾರಂಬ, ಕಾಡರಂಬ, ತಳವಾರಿಕೆ ಸುಂಕ, ಜೋಡಿ ಬಿರಾಡ, ಸಕಲ ಸುವರ್ಣದ ಆದಾಯ, ಬತ್ತದ ಆದಾಯ ಎಲ್ಲವನ್ನು ಅವನ ತಂದೆ ನರಸಣನಾಯಕನಿಗೂ ತಾಯಿ ನಾಗಾಜಿ ಅಮ್ಮನಿಗೂ ಪುಣ್ಯವಾಗಲಿಯೆಂದು ಆಂಗೀರಸ ಸಂವತ್ಸರದ ಪಾಲ್ಗುಣ ಬ.೩೦ ಸೋಮವಾದಂದು ದಾನ ನೀಡಿದ ಉಲ್ಲೇಖವಿದೆ.

ಕಿಡಿದಾಳ ಗ್ರಾಮದ ಕ್ರಿ.ಶ. ೧೫೧೪ರ ಶಾಸನದಲ್ಲಿ[೧೦೪] ಅಂಗ, ಕಲಿಂಗ, ಗುರ್ಜರ, ಮಗಧ, ಲಾಟ, ಕರ್ನಾಟಕ, ಗೌಳ, ಮಾಳವ, ರೇವಣ, ಕೊಂಕಣ, ಬಡಗಣ, ಮೂಡಣ, ಪಾಂಚಾಳ, ಕೇರಳ, ಹಮ್ಮೀರ ಮತ್ತು ಸಿಂಹಳ ಈ ದೇಶಗಳಲ್ಲದೆ ಗಿರಿದುರ್ಗ, ವನದುರ್ಗ, ಜಲದುರ್ಗಗಳ ಗದ್ದೆಗಳನ್ನು ಗೆದ್ದಯಿಶ್ವರ ನಾರಸಿಂಹನ ಮಗನಾದ ಶ್ರೀಕೃಷ್ಣದೇವರಾಯನು ಹೊಸವೂರು ಮಹಮಯಿಯ ಅಮೃತಪಡಿ ನೈವೇದ್ಯಕ್ಕೆ ಪಡುವ ನಾಡೊಳಗಣ ಕೂಪಣ ವೆಂಠಿಯಕೆ ಸೇರಿದ ಕಿಡಿದಾಳು ಗ್ರಾಮವನ್ನು ನೀಡಿರುವ ವಿಷಯವನ್ನು ಉಲ್ಲೇಖಿಸುತ್ತವೆ.

ಕೊಪ್ಪಳದ ಕ್ರಿ.ಶ. ೧೫೨೧ರ ಶಾಸನದಲ್ಲಿ[೧೦೫] ಕೃಷ್ಣ ದೇವರಾಯನು ಆಳುತ್ತಿರುವಾಗ ಭಂಡಾರದ ಅಪ್ಪರಸಯ್ಯನ ಮಗನಾದ ಭಂಡಾರದ ತಂಮ್ಮಪ್ಪನು ಕೊಪ್ಪಣದ ಚೆಂನ್ನಕೇಶದೇವರಿಗೆ ಹಿರಿಯ ಸಿಮ್ಮೊಗಿ (ಈಗಿನ ಹಿರೇಸಿಂಧೋಗಿ) ಗ್ರಾಮವನ್ನು ದಾನವಾಗಿ ನೀಡಿದ ವಿಷಯವಿದೆ.

ಹತೋಟಿ ಗ್ರಾಮದ ಕ್ರಿ.ಶ. ೧೫೧೫ ಶಾಸನದಲ್ಲಿ[೧೦೬] ಕೃಷ್ಣರಾಯ ಮಹಾರಾಯನು ಬಾಲಕೃಷ್ಣ ದೇವರ ಪ್ರತಿಷ್ಠಾ ಕಾಲದಲ್ಲಿ ದೇವರ ಅಮೃತಪಡಿ, ಅಂಗಭೋಗ, ರಂಗಭೋಗ, ಚೈತ್ರಮಾಸದ ರಥೋತ್ಸವ ನಿತ್ಯ ನೈಮಿತ್ತಿಕ ದೀಪೋತ್ಸವ, ಪುಣ್ಯ ದಿನಗಳು, ದಿನ, ಪಕ್ಷ ಮಾಸಗಳಲ್ಲಿ ನಡೆಯುವ ಉತ್ಸವಗಳ ವೆಚ್ಚಕ್ಕಾಗಿ ಹುಲಿಗಿಯ ಮಾಗಣಿಯಲ್ಲಿನ ಅತ್ತಿವಟ್ಟಿಯ ಗ್ರಾಮವನ್ನು ಸಮರ್ಪಿಸುತ್ತಾನೆ.

ಈ ಶಾಸನವು ಹಲವು ದೃಷ್ಟಿಗಳಿಂದ ಬಹಳ ಮುಖ್ಯವಾಗಿದೆ. ಮೊದಲನೆಯದಾಗಿ ಅತ್ತವಟ್ಟಿ ಗ್ರಾಮವು ಎಲ್ಲಿತ್ತು ಎಂಬುದು ಈವರೆಗೆ ತಿಳಿದಿರಲಿಲ್ಲ. ಈ ಶಾಸನವು ದೊರಕಿದ ಸ್ಥಳವಾದ ಹಾಳೂರು ಹತೋಟಿಯೇ ಶಾಸನಸ್ಥ ಅತ್ತಿವಟ್ಟಿ ಗ್ರಾಮವಾಗಿದ್ದಕ್ಕೆ ಸ್ಪಷ್ಟವಾದ ಆಧಾರಗಳಿಲ್ಲ, ಇದು ತುಂಗಭದ್ರೆಯ ಉತ್ತರ ದಡದಲ್ಲಿರುವ ನಗರಗಡ್ಡಿ ಮಠದ ದಾರಿಯಲ್ಲಿದೆ. ಎರಡನೆಯದಾಗಿ ಹಂಪಿಯ ಬಾಲಕೃಷ್ಣನ ಮೂಲ ಮೂರ್ತಿಯ ಬಗೆಗೆ ಇದ್ದ ಗೊಂದಲವನ್ನು ನಿವಾರಿಸಲು ಈ ಶಾಸನ ನೆರವಾಗುತ್ತದೆ. ಶಿವರಾಮಮೂರ್ತಿ ಸಿ. ಅವರು ಹೇಳಿಕೆಯ ಪ್ರಕಾರ ದೇವಾಲಯದಲ್ಲಿ ಪ್ರತಿಷ್ಠಾಪಿಸಿದ್ದ ಮೂರ್ತಿಯು ಪೀಠದಲ್ಲಿ ಕುಳಿತ ಕೃಷ್ಣನ ಮೂರ್ತಿಯೆಂದು ತಿಳಿದುಬರುತ್ತದೆ. ಎಸ್. ರಾಜಶೇಖರವರ ಹೇಳಿಕೆಯ ಪ್ರಕಾರ ಬಾಲಕೃಷ್ಣನ ದೇವಾಲಯದ ಮುಖಮಂಟಪದಲ್ಲಿರುವ ಕಂಬದಲ್ಲಿ ಅಂಬೆಗಾಲ ಬಾಲಕೃಷ್ಣಮೂರ್ತಿಯನ್ನು ಮತ್ತು ಅದರ ಮುಂದೆ ತ್ರಿಭಂಗಿಯಲ್ಲಿ ನಿಂತಿರುವ

ಕೃಷ್ಣದೇವರಾಯನ ಮೂರ್ತಿಯನ್ನು ಗುರುತಿಸಿರುವರು. ಈ ಕಾಲ್ಪನಿಕ ಆಧಾರಗಳನ್ನು ಹೊರತುಪಡಿಸಿದರೆ ಬಾಲಕೃಷ್ಣನ ಮೂರ್ತಿಯ ಬಗ್ಗೆ ಯಾವುದೇ ಸ್ಪಷ್ಟವಾದ ಆಧಾರಗಳಿಲ್ಲ. ಅತ್ತಿವಟ್ಟಿ ಶಾಸನದ ಮೇಲ್ಭಾಗದಲ್ಲಿ ಮತ್ತು ಕೆಳಭಾಗದಲ್ಲಿ ಬಲಗೈಯಲ್ಲಿ ಬೆಣ್ಣೆ ಹಿಡಿದ ಅಂಬೆಗಾಲಿನ ಕೃಷ್ಣನ ಮೂರ್ತಿಯನ್ನು ಕೆತ್ತಲಾಗಿದೆ. ಈ ಶಾಸನವನ್ನು ಬಾಲಕೃಷ್ಣವ ಪ್ರತಿಷ್ಠೆಯಾದ ದಿನವೇ ಹಾಕಿಸಿರುವಂತೆ ಈ ಶಾಸನದ ಮೇಲೆ ಕೆತ್ತಲಾಗಿರುವ ಮೂರ್ತಿಯು ಹಂಪಿಯ ಬಾಲಕೃಷ್ಣನ ಪ್ರತಿರೂಪವಾಗಿದೆ. ಶಿವರಾಮಮೂರ್ತಿಯವರು ಹೇಳುವಂತೆ ಮದ್ರಾಸ್ ಮ್ಯೂಸಿಯಂನಲ್ಲಿರುವ ಮೂರ್ತಿಯು ಮೂಲಮೂರ್ತಿಯಲ್ಲ. ಯಾವುದೋ ಕಾರಣದಿಂದ ಮೂಲಮೂರ್ತಿಯು ಭಗ್ನವಾಗಿರಬಹುದು. ಆಗ ಅದರ ಸ್ಥಳದಲ್ಲಿ ಕುಳಿತ ಭಂಗಿಯ ಕೃಷ್ಣನ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ.[೧೦೭] ಹೀಗಾಗಿ ಜಿಲ್ಲೆಯ ಈ ಶಾಸನಕ್ಕೆ ವಿಜಯನಗರದ ಚರಿತ್ರೆಯ ಸಂದರ್ಭದಲ್ಲಿ ಮಹತ್ವದ ಸ್ಥಾನವಿದೆ ಎನ್ನಬಹುದು.

ಕನಕಗಿರಿಯ ಗ್ರಾಮದ ಲಕ್ಷ್ಮೀನರಸಿಂಹ ದೇವಾಲಯದ ಪ್ರಾಕಾರದಲ್ಲಿರುವ ಕ್ರಿ.ಶ. ೧೫೨೫ರ ಶಾಸನದಲ್ಲಿ[೧೦೮] ಕೃಷ್ಣದೇವರಾಯನು ರಾಜ್ಯಭಾರ ಮಾಡುತ್ತಿದ್ದಾಗ ಕನಕಗಿರಿಯನಾಥ ದೇವರ ಅಮೃತಪಡಿಗೆ ಕನಕಗಿರಿಯ ಪೇಟೆಯ ಸ್ಥಳದ ಸುಂಕ, ತಳವಾರಿಕೆ ಸುಂಕ, ಚಂನ್ನಪುರ ತೋರಗಲ್ಲು ಸೀಮೆಯ ಯಡಗಲ್ಲು, ಕಳಸಗ್ರಾಮ, ನವಿಲೆ ಸೀಮೆಯಲ್ಲಿ ಬಯಿರಾಪುರ ಒಟ್ಟು ಮೂರು ಗ್ರಾಮಗಳನ್ನು ನೀಡುತ್ತಾನೆ.

ಕೆಸರಟ್ಟಿ ಗ್ರಾಮದ ಬಸವಣ್ಣ ದೇವಾಲಯದ ಸಮೀಪದಲ್ಲಿ ದೊರೆತ ಕ್ರಿ.ಶ. ೧೫೨೭ರ ಶಾಸನದಲ್ಲಿ[೧೦೯] ಕೃಷ್ಣದೇವರಾಯನು ರಾಜ್ಯಭಾರ ಮಾಡುತ್ತಿದ್ದಾಗ ಶಾಂಡಿಲ್ಯ ಗೋತ್ರದ ಕೊಂಡಜಟಿಯ ಮಗ ಕೃಷ್ಣಯ್ಯನು ಕೆಸರಟ್ಟಿಯಲ್ಲಿ ಕೃಷ್ಣದೇವರನ್ನು ಪ್ರತಿಷ್ಠೆ ಮಾಡಿಸಿ ಕೋಮಾರಪೆರುಮಾಳೆ ಮತ್ತು ಆತನ ತಮ್ಮ ರಾಮಂಜಯ್ಯನಿಗೆ ಸ್ಥಾನಿಕ ಪದವಿ ನೀಡುತ್ತಾನೆ. ಈ ಸ್ಥಾನಿಕರು ಕೃಷ್ಣಯ್ಯನ ಮಾತಿನಂತೆ ನಡೆಯಬೇಕೆಂದು ವಿಧಿಸುತ್ತಾನೆ. ಇದಲ್ಲದೆ ಭಾರದ್ವಾಜ ಗೋತ್ರದ ಜೆಟಿಯ ಮಗ ತಿಂಮಯ್ಯ ಗೌತಮ ಗೋತ್ರದ ಕೋಕತಿ ಮಗ ಹಜಪಯ್ಯ ಇವರಿಬ್ಬರು ಕೃಷ್ಣದೇವರ ಅಮೃತಪಡಿಗೆ ಇಕ್ಕುಳದ ಹೊಲ ನಾಗಳದ ಗದ್ದೆ ಹಾಗೂ ತೋಟವೊಂದನ್ನು ನೀಡುತ್ತಾರೆ.

ಅಚ್ಯುತದೇವರಾಯ

ಕೃಷ್ಣದೇವರಾಯನ ನಂತರ ಅವನ ಮಲಸಹೋದರ ಅಚ್ಯುತರಾಯನು (ಕ್ರಿ.ಶ. ೧೫೩೦–೧೫೪೨) ಪಟ್ಟಕ್ಕೆ ಬಂದನು. ಈತನ ಕಾಲದಲ್ಲಿ ಬಿಜಾಪುರದ ಆದಿಲ್‌ಶಾಹನು ಕೊಪ್ಪಳ ಪ್ರದೇಶವನ್ನು ಒಳಗೊಂಡ ರಾಯಚೂರ ದೋ–ಅಬ್ ವಶಪಡಿಸಿಕೊಂಡನು. ಈತನ ಕಾಲದ ಹಲವು ಶಾಸನಗಳು ಕೊಪ್ಪಳ ಜಿಲ್ಲೆಯಲ್ಲಿ ಕಂಡುಬಂದಿವೆ. ಅಚ್ಯುತರಾಯನು ಅಳಿಯ ರಾಮರಾಯನೊಡನೆ ಮೈತ್ರಿ ಬೆಳಸಿ ರಾಯಚೂರ ದೋ–ಅಬ್‌ನ್ನು ಮರಳಿ ಪಡೆದನು. ಹನುಮನಾಳ ಗ್ರಾಮದ ಕ್ರಿ.ಶ.

೧೫೩೬ರ ಶಾಸನವು[೧೧೦] ಅಚ್ಯುತದೇವರಾಯನ ಕಾಲದಲ್ಲಿ ಜೋಮನ ವೊಡೆಯನು ಅಚ್ಯುತರಾಯನಿಗೆ ಪುಣ್ಯವಾಗಬೇಕೆಂದು ಯಲಬರಿಗೆ ನಾರಸಿಂಹದೇವರ ಅಮೃತಪಡಿಗೆ ಗ್ರಾಮವೊಂದನ್ನು ನೀಡಿರುತ್ತಾನೆ. ಕನ್ನೇರುಮಡು ಗ್ರಾಮದ ಕ್ರಿ.ಶ. ೧೫೦೬ರ ಶಾಸನದಲ್ಲಿ[೧೧೧] ತಿಂತಿಣಿಯ ಗುಜಲ ಬೊಂಮಣನಾಯಕನ ಮಗ ಲಖುಮಣ ನಾಯಕ ಮತ್ತು ಬೊಮ್ಮನಾಗಿತಿ ಕಲ್ಲುಕೆರೆಯನ್ನು ಕಟ್ಟಿಸಿದ ಉಲ್ಲೇಖವಿದೆ. ಕಲ್ಲೂರು ಗ್ರಾಮದ ಕ್ರಿ.ಶ. ೧೫೩೭ ರ ಶಾಸನದಲ್ಲಿ[೧೧೨] ವೀರ ಅಚ್ಯುತರಾಯನು ಆಳುತ್ತಿದ್ದಾಗ ಕಾಶಿಯ ವಿಶ್ವನಾಥನಿಗೆ ಸಮಾನವಾದ ಕಲ್ಲೂರು ಕಲ್ಲಿನಾಥದೇವರಿಗೆ ಗುಜಲ ಹನುಮಂತನಾಯಕನ ಮಗ ಯಿಂಮಡಿ ಹನುಮಂತನಾಯಕ ಮತ್ತು ಕುಷ್ಟಗೆಯ ಗುಜಲಯಿಂಮಡಿ ಮರನದಿನಾಯಕನ ಮಗ ಮುಂಮಡಿ ಮಂಗಪನಾಯಕರು ದಾನ ನೀಡಿರುತ್ತಾರೆ. ಅಚ್ಚುತರಾಯನು ಇವರಿಗೆ ಪಾಲಿಸಿದ ಅಮರನಾಯಕತ್ವದ ಯಲಬರಿಗೆಯ ಪ್ರದೇಶಕ್ಕೆ ಸೇರುವ ಕಲ್ಲೂರು ಗ್ರಾಮದಾನವು ನಷ್ಟವಾಗಿತ್ತು. ಅದನ್ನು ಅಚ್ಯುತದೇವರಾಯನಿಗೆ ಪುಣ್ಯವಾಗಬೇಕೆಂದು ಆ ಗ್ರಾಮಕ್ಕೆ ಸಲ್ಲುವ ಸಕಲವನ್ನು ಪುನಃ ದೇವರಿಗೆ ಸಮರ್ಪಿಸುತ್ತಾರೆ. ಬಂಡಿಹಾಳ ಗ್ರಾಮದ ಕ್ರಿ.ಶ. ೧೫೩೭ರ ಶಾಸನದಲ್ಲಿ[೧೧೩] ಅಚ್ಯುತರಾಯನು ಆಳುತ್ತಿದ್ದಾಗ ಗುಜ್ಜಲ ಯಿಮ್ಮಡಿ ಯರಪನಾಯಕನ ಮಗ ಮುಮ್ಮಡಿ ಯರಪನಾಯಕನು ಮತ್ತು ಗುಜ್ಜಲ ಚಿಕ್ಕ ಹನುಮಂತನಾಯಕನ ಮಗ ಯಿಮ್ಮಡಿ ಹನುಮಂತನಾಯಕನು ಮಲ್ಲಿಕಾರ್ಜುನ ದೇವರಿಗೆ ದಾನ ನೀಡಿರುತ್ತಾರೆ. ಆನೆಗೊಂದಿಯ ಕ್ರಿ.ಶ. ೧೫೩೩ರ ಶಾಸನದಲ್ಲಿ[೧೧೪] ಅಚ್ಯುತದೇವರಾಯನು ಆಳುತ್ತಿದ್ದಾಗ ಆನೆಗುಂದಿ ಮಾಗುಣಿಯ ತಿಮ್ಮರಸಯ್ಯನು ಅಚ್ಯುತರಾಯನಿಗೆ ಪುಣ್ಯವಾಗಬೇಕೆಂದು ಮಹೇಶನ ಗುಡಿಗೆ ನೈವೇದ್ಯಕ್ಕೆ ದಾನ ನೀಡಿದಂತೆ ತಿಳಿಯುತ್ತದೆ. ಆನೆಗೊಂದಿಯ ಕ್ರಿ.ಶ. ೧೫೩೧ರ ಶಾಸನದಲ್ಲಿ[೧೧೫] ಅಚ್ಯುತದೇವರಾಯನ ಆಳ್ವಿಕೆಯಲ್ಲಿ ಆನೆಯಗೊಂದಿಯ ಉತ್ತರದ ಬಾಗಿಲ ಬಳಿ ಪ್ರತಿಷ್ಠಾಪಿಸಲಾದ ಬಸವರಾಜದೇವರಿಗೆ ಚವರದ ಕೋನಪ್ಪನಾಯಕನ ಮಗ ಮಾದೈಯ, ಪೆನುಗುಂಡೆಯ ನಾಗೈಯನು ದೇವರ ನಿತ್ಯನೈವೇದ್ಯಕ್ಕಾಗಿ ದಾನ ನೀಡಿ ಅರವಟಿಗೆಯನ್ನು ನಿರ್ಮಿಸಿದ್ದನ್ನು ತಿಳಿಸುತ್ತದೆ. ಕನಕಗಿರಿ ಗ್ರಾಮದ ಕ್ರಿ.ಶ. ೧೫೩೪ರ ಶಾಸನವು[೧೧೬] ಅಚ್ಯುತದೇವರಾಯನು ಆಳುತ್ತಿದ್ದಾಗ ಕನಕಗಿರಿನಾಥಸ್ವಾಮಿ ಅಮೃತಪಡಿ ನೈವೇದ್ಯ, ಪೂಜೆ, ದೀಪಾರಾಧನೆ ಅಂಗರಂಗ ವೈಭೋಗಗಳಿಗಾಗಿ ತಿರುನಾಳು, ಪಂಚಪರ್ವ ಮುಂತಾದವು ಸಾಂಗವಾಗಿ ನಡೆಯಬೇಕೆಂದು ಕುಸ್ಟಿಗೆ ಸೀಮೆಯಲ್ಲಿನ ಯಿಂಗಳದಹಾಳು, ಗುಡ್ಡ ಗಂಗಾವತಿಯ ಸೀಮೆಯಲ್ಲಿನ ಅಚುತರಾಯಮಲ್ಲಾಪುರ, ಸಿದ್ದನಹಾಳ, ರಾಮಾಪುರ ಈ ನಾಲ್ಕು ಗ್ರಾಮಗಳ ಚತುಸ್ಸೀಮೆಯೊಳಗಣ ನಿಧಿನಿಕ್ಷೇಪ ಜಲಪಾಷಾಣ ಮುಂತಾದವುಗಳ ಸಹಿತವಾಗಿ ನೀಡಿರುತ್ತಾನೆ.

ಸದಾಶಿವರಾಯ

ಅಚ್ಯುತದೇವರಾಯನ ನಂತರ ಅಳಿಯ ರಾಮರಾಯನು ಅಚ್ಯುತರಾಯನ ಸಹೋದರನ ಮಗನಾದ ರಂಗರಾಜನ ಮಗ ಸದಾಶಿವರಾಯನನ್ನು ಪಟ್ಟಕ್ಕೆ ತಂದನು. ಸದಾಶಿವರಾಯನಿಗೆ ಸಂಬಂಧಿಸಿದಂತೆ ಕೊಪ್ಪಳ ಜಿಲ್ಲೆಯಲ್ಲಿ ೧೨ ಶಾಸನಗಳು ದೊರೆಯುತ್ತವೆ. ಅವುಗಳ ವಿವರ ಈ ರೀತಿ ಇದೆ.

ಕುಷ್ಟಗಿ ತಾಲೂಕಿನ ತಾವರಗೆರೆಯ ವೀರಭದ್ರ ದೇವಾಲಯದ ಬಳಿಯ ಕ್ರಿ.ಶ. ೧೫೪೭ರ ಶಾಸನದಲ್ಲಿ[೧೧೭] ಶ್ರೀಮನ್ ಮಹಾರಾಜಾಧಿ ರಾಜ ಪರಮೇಶ್ವರ ಶ್ರೀ ವೀರಪ್ರತಾಪ ಶ್ರೀ ವೀರ ಸದಾಶಿವದೇವ ಮಹಾರಾಯರು ರಾಜ್ಯ ಭಾರ ಮಾಡುತ್ತಿದ್ದಾಗ ಅವನ ಕಾರ್ಯಕ್ಕೆ ಕರ್ತನಾದ ಅಳಿಯ ರಾಮರಾಜಯದೇವ ಮಹಾ ಅರಸುಗಳು ತಾವರಕೆರೆಯ ತಿಂಮೋಜ, ಕೊಂಡೋಜ, ಭದ್ರೋಜ ಇವರ ಭಿನ್ನಹವನ್ನು ಕೇಳಿ ಸ್ವಾಮಿಗೆ ಪುಣ್ಯವಾಗಲೆಂದು ತಾವರೆಕೆರೆಯ ಸೀಮೆಯ ೧೩೦ ಗ್ರಾಮಗಳ ಕ್ಷೌರಿಕರಿಗೆ ಅಂನು ಪನ್ನು ಬಿಟ್ಟು ಬಿರಾಡ ಎಲ್ಲವನ್ನು ಮನ್ನಾ ಮಾಡಿದ ಉಲ್ಲೇಖವಿದೆ.

ಕುಷ್ಟಗಿ ತಾಲೂಕಿನ ಪುರದ ಸೋಮೇಶ್ವರ ದೇವಾಲಯದ ಪ್ರಾಕಾರದ ಬಾಗಿಲ ಬಳಿ ಇರಿಸಿರುವ ಕ್ರಿ.ಶ. ೧೫೪೭ರ ದಾನ ಶಾಸನವು[೧೧೮] ಮನ್ನಮಹಾ ತ್ರಿಪುರ ಸಂಹಾರ ನಂದಿವಾಹನ ಶ್ರೀಪಾರ್ವತಿರಮಣನಾದಂಥಾ ಶ್ರೀಪುರದ ಸೋಮೇಶ್ವರ ಮಹಾಲಿಂಗಗೆ ಅರ್ಕಾಜೆ ತಂಮಪನಾಯಕರ ಮಗ ವಿರುಪಣ ನಾಯಕನು ಕೊಟ್ಟ ದಾನದ ವಿವರವಿದೆ. ಸದಾಶಿವರಾಯನನ್ನು ರಾಜ ರಾಜಪರಮೇಶ್ವರ, ವೀರಪ್ರತಾಪ, ಶ್ರೀವೀರಸದಾಶಿವರಾಯ, ಮಹಾರಾಯರೂ ಎಂದು ಹೊಗಳಿದೆ. ವೀರಸದಾಶಿವದೇವರಾಯನು ಕೃಷ್ಣನಾಯಕನಿಗೆ ಅಮರ ಮಾಗಣಿಯಾಗಿ ನೀಡಿದ ತಾವರಗೆರೆ ಸೀಮೆಯ ಪುರಗ್ರಾಮದಲ್ಲಿ ಸೋಮೇಶ್ವರ ಮಹಾಲಿಂಗಕ್ಕೆ ಊರಿನ ಪಶ್ಚಿಮಕ್ಕೆ ಮಡೆಹೊಲ, ಗದ್ದೆ, ಹುಣಸೆಮರಗಳು, ಸೆಟರ ಕಾಣಿಕೆ, ನಾಡ ತಳವಾರಿಕೆ ಗವುಡಮಾನ್ಯದ ಹಣ, ಅಂಗಡಿ, ಗಾಣ, ಮಗ್ಗ, ಸಿದ್ದಾಯ ಕಡ್ಡಾಯ, ವೋಜರು ತರುವ ಹಣ, ಕುಂಬಾರ ತರುವ ಹಣ, ಉಪ್ಪಿನಮೋಳೆ, ಮುಂತಾದ ಸಕಲ ಸುವರ್ಣಾದಾಯ, ಭತ್ತದ ಆದಾಯವನ್ನು ಪುಣ್ಯಕಾಲದಲ್ಲಿ ದತ್ತಿಯಾಗಿ ಬಿಟ್ಟರು. ಇದಲ್ಲದೆ ಸದಾಶಿವದೇವರಾಯನಿಗೆ ಆಯುಷ್ಯಾಭಿವೃದ್ಧಿಯಾಗಬೇಕೆಂದೂ ಕೃಷ್ಣಪನಾಯಕನಿಗೆ ಪುಣ್ಯವಾಗಬೇಕೆಂದೂ ವಿರುಪಣನಾಯಕನು ಹಸ್ತಿನಾವತಿ ವಳಿತಕ್ಕೆ ಸೇರುವ ಕೆಳವಡಿನಾಡೋಳಗೆ ಕೆಲವು ದಾನಗಳನ್ನು ನೀಡಿದ ವಿಷಯವಿದೆ.

ಕುಷ್ಟಗಿ ತಾಲೂಕಿನ ಪುರ ಗ್ರಾಮದ ಸೋಮೇಶ್ವರ ದೇವಾಲಯದ ಪ್ರವೇಶದ್ವಾರದಲ್ಲಿನ ಕ್ರಿಶ ಸುಮಾರು ೧೪೪೬ರ ಶಾಸನದ[೧೧೯] ಸ್ವಲ್ಪಭಾಗವು ತ್ರುಟಿತವಾಗಿದ್ದು ಉಳಿದ ಭಾಗದ ವಿವರ ಹೀಗಿದೆ. ಈ ಶಾಸನದಲ್ಲಿಯು ಸದಾಶಿವರಾಯುನನ್ನು ಮಹಾರಾಜಾಧಿರಾಜ, ಶ್ರೀವೀರಪ್ರತಾಪದೇವರಾಯ, ಮಹಾರಾಜ ಎಂದೆಲ್ಲ ಹೊಗಳಿದೆ. ಜಂಬೂದ್ವೀಪದ ಕೃಷ್ಣವೇಣಿ ತುಂಗಭದ್ರಾ ನದಿಯ ಮಧ್ಯದ ಮುದುಗಲವೇಂಠೆದೊಳಗೆ ಶ್ರೀಸೋಮನಾಥ ದೇವರಿಗೆ ದಾನ ಕೊಟ್ಟ ಉಲ್ಲೇಖವಿದೆ. ಪುರದ ಹೊಲದವೊಳ, ಬನದಾಯವೆಯು ವೋಹಿಲಾಪುರದ ಅಗ್ನೇಯ ಭಾಗದಲ್ಲಿ ಕೆರೆಯನ್ನು ಕಟ್ಟಿಸಿ ಪ್ರತಾಪದೇವರಾಯನಿಗೆ ಪುಣ್ಯವಾಗಬೇಕೆಂದು ದೇವರ ನೈವೇದ್ಯಕ್ಕೆ ತ್ರಿಸಂಧ್ಯಾ ಕಾಲದಲ್ಲಿ ಶ್ರೀ ಸಜ್ಜನ ಶುದ್ಧ ಶಿವಾಚಾರ ಸಂಪನ್ನ ಸೋಮಯದೇವ ಅಯ್ಯನವರಿಗೆ ದೇವರ ನೈವೆದ್ಯಕ್ಕೆ ನೆಲ್ಲುಯಿಲ್ಲವೆಂದು ವೋಹಿಲಾಪುರದ ಹೊಲದ ಒಳಗೆ ಬನದಯವೆಗಳೂ ದರ್ಮ್ಮಕೆ ಕಟ್ಟಿಸಿ ಕೊಟ್ಟ ಕೆರೆಯ ಶಿಲಾಶಾಸನ ಹಾಕಿಸಿದರ ಬಗ್ಗೆ ತಿಳಿಸುತ್ತದೆ.

ಯಲಬುರ್ಗಾ ತಾಲೂಕಿನ ಕುಕನೂರು ಚಾವಡಿಯ ಬಳಿ ಇರುವ ಕ್ರಿಶ ೧೫೪೭ರ ಶಾಸನದಲ್ಲಿ[೧೨೦] ಶ್ರೀಮಂಮಹಾರಾಜಾಧಿರಾಜ ರಾಜಪರಮೇಶ್ವರ ವೀರಪ್ರತಾಪ ಶ್ರೀಸದಾಶಿವರಾಯ ಮಹಾರಾಯರು ಪೃಥ್ವೀರಾಜ್ಯಂಗೆಯುತ್ತಂಯಿರಲು ಶ್ರೀ ಸದಾಶಿವರಾಯ ಮಹಾರಾಯನು ಆಳುತ್ತಿದ್ದಾಗ ಅವನ ಕಾರ್ಯಕ್ಕೆ ಕರ್ತನಾದ ಅಳಿಯ ರಾಮರಾಜಯ್ಯ ದೇವ ಮಹಾ ಅರಸುಗಳು ಊಳಿಗದ ಕೊಂಡೋಜನ ಬಿನ್ನಹವನು ಕೇಳಿ ಶ್ರೀ ಸದಾಶಿವರಾಯ ಮಹಾರಾಜರಿಗೆ ಪುಣ್ಯವಾಗಬೇಕೆಂದು ಸ್ವಾಮಿ ಆಳುವ ರಾಜ್ಯದೊಳಗೆ ನಾಯಂದರಿಗೆ ಅನ್ನು ಪನ್ನು ಬಿಟ್ಟ ಬಿರಾಡ ಮುಂತಾದ ತೆರಿಗೆಗಳಿಂದ ವಿನಾಯ್ತಿ ನೀಡುತ್ತಾನೆ

ಗಂಗಾವತಿ ತಾಲೂಕಿನ ನವಲಿ ಗ್ರಾಮದ ನಿಜಗುಣಸ್ವಾಮಿ ಹಿರೇಮಠದ ದವಾಖಾನೆ ಮುಂಭಾಗದಲ್ಲಿರುವ ಎರಡು ತ್ರುಟಿತ ಶಾಸನಗಳಲ್ಲಿ[೧೨೧] ಶ್ರೀಮನ್ ಮಹಾಮಂಡಲೇಶ್ವರ ರಾಜಧಿರಾಜ ರಾಜಪರಮೇಶ್ವರ, ವೀರ ಪ್ರತಾಪ, ಸದಾಶಿವರಾಯರಾಯರ ಕಾರ್ಯ ಮುಂದಿನ ಭಾಗವು ತ್ರುಟಿತವಾಗಿದೆ. ಈ ಶಾಸನದಲ್ಲಿ ವೀರಸದಾಶಿವದೇವರಾಯರ ಕಾರ್ಯ ಮುಂದಿನ ಭಾಗವು ತ್ರುಟಿತವಾಗಿದೆ. ಈ ಶಾಸನದಲ್ಲಿ ವೀರ ಸದಾಶಿವದೇವರಾಯನನ್ನು ಹೆಸರಿಸುತ್ತದೆ. ಇಲ್ಲಿಯ ಎರಡನೆಯ ತುಂಡು ಶಾಸನವು ಸದಾಶಿವರಾಯನನ್ನು ಹೆಸರಿಸುತ್ತದೆ. ಇಲ್ಲಿಯ ಎರಡನೆಯ ತುಂಡು ಶಾಸನವು ಸದಾಶಿವರಾಯರು ಹಾಕಿದ ಶಾಸನವನ್ನು ಅಲುಸಿದರ ಕೊಂಡಾರೆ ವರಣಸಿಲಿ ಬ್ರಾಹ್ಮಣ ಕೊಂದ ಪಾಪಕ್ಕೆ ಹೋಹರು ಎಂದು ಉಲ್ಲೇಖವಿದೆ. ಗಂಗಾವತಿ ತಾಲೂಕಿನ ಕನಕಗಿರಿ ಗ್ರಾಮದ ಪೇಟೆ ಬಸವಣ್ಣ ದೇವಾಲಯದ ಎಡಕ್ಕೆ ಬಿದ್ದಿರುವ ಕ್ರಿ.ಶ. ೧೫೫೧ ಶಾಸನದಲ್ಲಿ[೧೨೨] ಸದಾಶಿವದೇವರಾಯನು ಆಳುತ್ತಿದ್ದಾಗ ಮಹಾಮಂಡಳೇಶ್ವರ ಅಳಿಯ ತಿರುಮಲರಾಜನು ನಾವಿಂದರಾದ ತಿಂಮೋಜ, ಕೊಂಡೋಜರಿಗೆ ಕನಕಗಿರಿಯಲ್ಲಿ ಬಿಟ್ಟಬಿರಾಡ, ಅನ್ನು ಪನ್ನು ಮುಂತಾದ ತೆರಿಗೆಯನ್ನು ಬಿಟ್ಟಂತೆ ಉಲ್ಲೇಖವಿದೆ. ಆನೆಗೊಂದಿಯ ನಂಜಯ್ಯಸ್ವಾಮಿ ಹೊಲದ ಬಂಡೆಗಲ್ಲ ಮೇಲೆ ವೀರ ಪ್ರತಾಪದೇವರ ಗದ್ದೆಯನ್ನು ಹೆಸರಿದ್ದು, ಬಹುಭಾಗವು ತ್ರುಟಿತವಾಗಿದೆ.[೧೨೩]

ಕನಕಗಿರಿ ಪಾಳೆಯಗಾರರು

ಕ್ರಿ.ಶ. ೧೪೩೬ರಲ್ಲಿ ಗುಜ್ಜಲವಂಶದ ಪರಸಪ್ಪ ನಾಯಕನಿಂದ ಕನಕಗಿರಿಯಲ್ಲಿ ವಿಜಯನಗರ ಅಧೀನ ಪಾಳೆಯಪಟ್ಟು ಪ್ರಾರಂಭವಾಯ್ತು ಈ ವಂಶದ ಒಟ್ಟು ೧೨ ಜನ ನಾಯಕರು ಆಡಳಿತ ನಡೆಸಿದ್ದು ಅವರಲ್ಲಿ ಮೊದಲಿನ ೯ ಜನ ಕನಕಗಿರಿಯಿಂದಲೂ (೧೮೩೩ ರವರೆಗೆ) ಉಳಿದ ೩ ಜನ ಪಕ್ಕದ ಹುಲಿಹೈದರದಿಂದಲೂ (ಕ್ರಿಶ ೧೮೩೩ ರಿಂದ ೧೯೪೮) ಈ ಪ್ರದೇಶದಲ್ಲಿ ಆಡಳಿತ ನಡೆಸಿದರು. ಇದರಲ್ಲಿ ನವಾಬ ಉಡಚನಾಯಕ, ಇಮ್ಮಡಿ ಉಡಚನಾಯಕ, ಹಿರೇರಂಗಪ್ಪನಾಯಕ ಪ್ರಮುಖ ಪಾಳೆಯಗಾರರಾಗಿದ್ದರು. ನಾಯಕರು, ರಾಣಿಯರು ಆಡಳಿತ ಮತ್ತು ಸಾಮಾಜಿಕ, ಧಾರ್ಮಿಕ ವಿಷಯಗಳಲ್ಲಿ ಮಹತ್ವದ ಪಾತ್ರವಹಿಸಿರುವುದು ಗಮನಾರ್ಹವಾಗಿದೆ.

ಹೀಗೆ ಕೊಪ್ಪಳ ಜಿಲ್ಲಾ ಪ್ರದೇಶವು ವಿಜಯನಗರ ಸಾಮ್ರಾಜ್ಯದ ಬಹುಮುಖ್ಯ ಭಾಗವಾಗಿತ್ತೆಂಬುದು

ಈ ಶಾಸನಗಳಿಂದ ತಿಳಿಯುತ್ತದೆ.

ಅಡಿಟಿಪ್ಪಣಿಗಳು

೧. ವೆಂಕಟರತ್ನಂ ಎ.ವಿ. ಮತ್ತು ಪದ್ಮ ಎಂ.ಬಿ., ೨೦೦೩, *ಇತಿಹಾಸ ಸಂಶೋಧನಾ ಮಾರ್ಗ,* ಪು.೬೦

೨. ಚಂದ್ರಶೇಖರ್ ಎಚ್., ೧೯೯೩, *ರಾಯಚೂರು ನೈಸರ್ಗಿಕ ಸಂಪನ್ಮೂಲಗಳು ಮತ್ತು ಅವುಗಳ ಬಳಕೆಯ ಸ್ಥಿತಿಗತಿ ಮತ್ತು ಮುನ್ನೋಟ,* ತಿರುಳ್ಗನ್ನಡ, ಪು.೩೭

೩. ಸೂರ್ಯನಾರಾಯಣರಾವ್ ಬಿ.(ಮೂ.ಲೇ), ಬಾಲಸುಬ್ರಹ್ಮಣ್ಯ (ಅನು), ೨೦೦೦, *ಮರೆಯಲಾಗದ ಮಹಾಸಾಮ್ರಾಜ್ಯ ವಿಜಯನಗರ,* ಪು.೨೯

೪. ಅಭಿಶಂಕರ್ ಕೆ.(ಸಂ.), *ರಾಯಚೂರು ಡಿಸ್ಟ್ರಿಕ್ಸ್ ಗ್ಯಾಸೆಟಿಯರ್,* ಪು.೧೧

೫. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೨ ಕೊಪ್ಪಳ ತಾ. ಹುಲಿಗಿ, ಶಾ.ಸಂ. ೧೪೮

೬. ಅದೇ, *ಗಂಗಾವತಿ* ತಾ. ವಿಪ್ರ, ಶಾ.ಸಂ.೨

೭. ಅದೇ, *ಕೊಪ್ಪಳ* ತಾ. ಹುಲಿಗಿ, ಶಾ.ಸಂ.೧೪೮

೮. ಸಿದ್ಧಲಿಂಗೇಶ್ವರ ಸ್ವಾಮಿ(ಸಂ.), ೧೯೮೩, *ಶ್ರೀಪಂಪಾ ಮಹಾತ್ಮೆ,* ಪು.೩೨

೯. ಶರಣಬಸಪ್ಪ ಕೋಲ್ಕಾರ, ೨೦೧೦, *ಶಿಲಾಯುಗದ ಗವಿಚಿತ್ರಗಳು,* ಪು.೪೬

೧೦. ಬಂಗಾರಿ ವಿ.ಎಸ್, ೧೯೭೬, *ಕೊಪ್ಪಳ ನಾಡಿನ ಭೌಗೋಳಿಕ ದರ್ಶನ,* ಗವಿ ದೀಪ್ತಿ, ಪು. ೨೧೪-೨೪೫

೧೧. ಪ್ರಕಾಶ ಹುಣಸಗಿ, ೧೯೮೬, *ಗಂಗಾವತಿ ತಾಲೂಕು ದರ್ಶನ* ಪು.೧೦

೧೨. ಚಂದ್ರಶೇಖರ್, ಹೆಚ್, ೨೦೧೦, *ಕೊಪ್ಪಳ ಜಿಲ್ಲೆಯ ಖನಿಜ ಸಂಪತ್ತು ಮತ್ತು ದೇಗುಲಗಳ ಕಲೆ,* ಗೋಪಾಲ್ ಆರ್. ಕೊಪ್ಪಳ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪು.೩೨೦

೧೩. ಅದೇ, ಪು.೩೨೦-೩೨೧

೧೪ ಅದೇ, ಪು.೩೨೧

೧೫. ಅದೇ, ಪು.೩೨೧

೧೬. ಅದೇ, ಪು.೩೨೨

೧೭. ಅಭಿಶಂಕರ ಕೆ.(ಸಂ.), *ರಾಯಚೂರು ಡಿಸ್ಟ್ರಿಕ್ಟ್ ಗ್ಯಾಸೆಟಿಯರ್,* ಪು.೩೦

೧೮. ಲಕ್ಷ್ಮಣ ತೆಲಗಾವಿ, ೨೦೦೪, *ಮೌರ್ಯ ಮತ್ತು ಶಾತವಾಹನ ಯುಗ,* ಪು.೧೯೯

೧೯. ಶಿವತಾರಕ್ ಬಿ., ೨೦೦೧, *ಕರ್ನಾಟಕದ ಪುರಾತತ್ವ ನೆಲೆಗಳು,* ಪು.೧೭

೨೦. ಶರಣಬಸಪ್ಪ ಕೋಲ್ಕಾರ, ಪೂರ್ವೋಕ್ತ, ಪು.೫೧

೨೧. ಅದೇ, ಪು.೫೨

೨೨. ಲಕ್ಷ್ಮಣ ತೆಲಗಾವಿ, ೨೦೦೪, ಪೂರ್ವೋಕ್ತ, ಪು.೨೦೪-೨೦೫

೨೩. ಶಿವತಾರಕ್ ಕೆ.ಬಿ., ಪೂರ್ವೋಕ್ತ, ಪು.೭೯

೨೪. ಅದೇ, ಪು.೮೨

೨೫. ಅದೇ, ಪು.೮೦-೮೧

೨೬. ಶರಣಬಸಪ್ಪ ಕೋಲ್ಕಾರ, ೨೦೦೬, *ಹಂಪಿ ಪ್ರದೇಶದ ಪ್ರಾಗಿತಿಹಾಸಕಾಲದ ಕಲೆ,* ದೇವರಕೊಂಡಾರೆಡ್ಡಿ(ಸಂ.), ಹಂಪಿ ಸಂಪುಟ ಕಲೆ ಮತ್ತು ಕೌಶಲ, ಪು.೩

೨೭. ಗುರುರಾಜರಾವ್ ಬಿ.ಕೆ.(ಲೇ.), ೧೯೭೬, *ಕೊಪ್ಪಳ ನಾಡಿನ ಇತಿಹಾಸ,* ವೃಷಭೇಂದ್ರಸ್ವಾಮಿ ಎಸ್.ಎಂ.(ಸಂ), ಗವಿದೀಪ್ತಿ, ಪು.೧೧೮ ಮತ್ತು ಶ್ರೀನಿವಾಸ ರಿತ್ತಿ, ೧೯೭೮, ಅಶೋಕ ಶಾಸನಗಳು, ಪು.೪

೨೮. ಕನ್ನಡ ವಿಶ್ವವಿದ್ಯಾಲಯ ಶಾ.ಸಂ.-೨, ಕೊಪ್ಪಳ ತಾ. ಕೊಪ್ಪಳ, ಶಾ.ಸಂ.೨೮

೨೯. ಅದೇ, ಹಲಗೇರಿ, ಶಾ.ಸಂ.೨೨

೩೦. ಅದೇ, ಯಲಬುರ್ಗಾ ತಾ. ಇಟಗಿ, ಶಾ.ಸಂ.೬೪

೩೧. ಅದೇ, ಕೊಪ್ಪಳ ತಾ. ಕೊಪ್ಪಳ, ಶಾ.ಸಂ.೩೪

೩೨. ಅದೇ, ಕೊಪ್ಪಳ, ಶಾ.ಸಂ.೩೨

೩೩. ಅದೇ, ಯಲಬುರ್ಗಾ ತಾ. ಯಲಬುರ್ಗಾ, ಶಾ.ಸಂ. ೩೦

೩೪. ಅದೇ, ಇಟಗಿ, ಶಾ.ಸಂ.೬೫

೩೫. ಅದೇ, ಗಂಗಾವತಿ, ಶಾ.ಸಂ. ೧೧೧

೩೬. ಅದೇ, ಕೊಪ್ಪಳ, ಶಾ.ಸಂ.೧೧

೩೭ ಅದೇ, ಕೊಪ್ಪಳ, ಶಾ.ಸಂ.೫೬

೩೮. ಅದೇ, ಯಲಬುರ್ಗಾ, ತಾ., ಇಟಗಿ ಶಾ.ಸಂ.೬೩

೩೯. ಅದೇ, ಇಟಗಿ, ಶಾ.ಸಂ.೬೫

೪೦. ಅದೇ, ಕುಕನೂರು, ಶಾ.ಸಂ.೫೬

೪೧. ಅದೇ, ಇಟಗಿ, ಶಾ.ಸಂ.೬೩

೪೨. ಅದೇ, ಗಂಗಾವತಿ ತಾ. ಗಂಗಾವತಿ, ಶಾ.ಸಂ.೧೦೨

೪೩. ಅದೇ, ಸಿಂಗನಾಳ, ಶಾ.ಸಂ.೯೮

೪೪. ಅದೇ, ಬರಗೂರು, ಶಾ.ಸಂ.೧೦೧

೪೫. ಅದೇ, ಕನಕಗಿರಿ, ಶಾ.ಸಂ.೮೩

೪೬. ಅದೇ, ಸುಳೇಕಲ್, ಶಾ.ಸಂ.೮೪

೪೭ ಅದೇ, ಕೊಪ್ಪಳ, ಶಾ.ಸಂ.೧೧೩

೪೮. ಅದೇ, ಕೊಪ್ಪಳ, ಶಾ.ಸಂ.೯೯

೪೯. ಅದೇ, ನವಲಿ, ಶಾ.ಸಂ.೯೪

೫೦. ಅದೇ, ಕನಕಗಿರಿ, ಶಾ.ಸಂ.೭೯

೫೧. ಅದೇ, ಕೊಪ್ಪಳ ತಾ. ಕೊಪ್ಪಳ, ಶಾ.ಸಂ.೯೪

೫೨. ಅದೇ, ಕೊಪ್ಪಳ, ಶಾ.ಸಂ.೧೨೫

೫೩. ಅದೇ, ಕೊಪ್ಪಳ, ಶಾ.ಸಂ.೮೪

೫೪. ಅದೇ, ಗಂಗಾವತಿ, ಶಾ.ಸಂ.೫೩

೫೫. ಅದೇ. ಯಲಬುರ್ಗಾ ತಾ. ಕಲ್ಲೂರು, ಶಾ.ಸಂ.೧೦ ಮತ್ತು ಬಳಗೇರಿ ಶಾ.ಸಂ.೩೬

೫೬. ಅದೇ, ಯಲಬುರ್ಗಾ, ಶಾ.ಸಂ.೫೦

೫೭. ಅದೇ. ಕೊಪ್ಪಳ ತಾ. ಕೊಪ್ಪಳ, ಶಾ.ಸಂ.೪೫

೫೮. ಅದೇ. ಕುಷ್ಟಗಿ ತಾ. ಗೋತಗಿ, ಶಾ.ಸಂ.೩

೫೯. ಅದೇ. ಕೊಪ್ಪಳ ತಾ. ಕೊಪ್ಪಳ, ಶಾ.ಸಂ.೧೨೫

೬೦. ಅದೇ. ಗಂಗಾವತಿ ತಾ. ವಿಪ್ರ, ಶಾ.ಸಂ.೨

೬೧. ಅದೇ. ಕೊಪ್ಪಳ ತಾ. ಅಳವಂಡಿ, ಶಾ.ಸಂ.೬

೬೨. ಅದೇ. ಯಲಬುರ್ಗಾ ತಾ. ಮುಧೋಳ, ಶಾ.ಸಂ.೨೯

೬೩. ಅದೇ. ಕೊಪ್ಪಳ ತಾ. ಹುಲಿಗಿ, ಶಾ.ಸಂ.೧೪೮

೬೪. ಅದೇ. ಕುಷ್ಟಗಿ ತಾ. ಹನುಮನಾಳು, ಶಾ.ಸಂ.೨೨

೬೫. ಅದೇ. ಹೆರೂರು, ಶಾ.ಸಂ.೨

೬೬. ಅದೇ. ಯಲಬುರ್ಗಾ, ಶಾ.ಸಂ.೧೬

೬೭. ಅದೇ. ಕೊಪ್ಪಳ ತಾ. ಮಾದಿನೂರು, ಶಾ.ಸಂ.೨೬

೬೮. ಅದೇ. ಯಲಬುರ್ಗಾ ತಾ. ಯಲಬುರ್ಗಾ, ಶಾ.ಸಂ.೫೦

೬೯. ಅದೇ. ಯಲಬುರ್ಗಾ, ಶಾ.ಸಂ.೧೩

೭೦. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–೧, ಬಳ್ಳಾರಿ ಜಿಲ್ಲೆ, ಬಳ್ಳಾರಿ, ಶಾ.ಸಂ.೪೯

೭೧. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–೨, ಕೊಪ್ಪಳ ಜಿಲ್ಲೆ, ಯಲಬುರ್ಗಾ, ಶಾ.ಸಂ.೪೦

೭೨. ಅದೇ. ಕೊಪ್ಪಳ ತಾ. ಕೊಪ್ಪಳ, ಶಾ.ಸಂ.೩

೭೩. ಅದೇ. ಯಲಬುರ್ಗಾ ತಾ. ಯಲಬುರ್ಗಾ, ಶಾ.ಸಂ.೫೨

೭೪. ಅದೇ. ಕೊಪ್ಪಳ ತಾ. ಕೊಪ್ಪಳ, ಶಾ.ಸಂ.೩

೭೫. ಅದೇ. ಅಳವಂಡಿ, ಶಾ.ಸಂ.೯

೭೬. ಅದೇ. ಯಲಬುರ್ಗಾ ತಾ. ಯಲಬುರ್ಗಾ, ಶಾ.ಸಂ.೬೮

೭೭. ಅದೇ, ಕೊಪ್ಪಳ ತಾ. ಕೊಪ್ಪಳ, ಶಾ.ಸಂ.೧೬೪, ೧೬೫

೭೮. ಅದೇ, ಯಲಬುರ್ಗಾ ತಾ. ಯಲಬುರ್ಗಾ, ಶಾ.ಸಂ.೬

೭೯. ಅದೇ, ಕೊಪ್ಪಳ ತಾ. ಕೊಪ್ಪಳ, ಶಾ.ಸಂ.೧೬೭

೮೦. ಅದೇ, ಕೊಪ್ಪಳ, ಶಾ.ಸಂ.೧೬೬

೮೧. ಶಿವಣ್ಣ, ***ಕರ್ನಾಟಕ ಚರಿತ್ರೆ ಸಂಪುಟ–೩***, ಪು.೨೨

೮೨. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–೨ ಕೊಪ್ಪಳ ಜಿಲ್ಲೆ, ಗಂಗಾವತಿ ತಾ. ಆನೆಗೊಂದಿ, ಶಾ.ಸಂ.೨೧

೮೩. ಅದೇ, ಕೊಪ್ಪಳ ತಾ. ಕೊಪ್ಪಳ, ಶಾ.ಸಂ.೩೧

೮೪. ಅದೇ, ಗಂಗಾವತಿ ತಾ. ಆನೆಗೊಂದಿ, ಶಾ.ಸಂ.೨೮

೮೫. ದೇಸಾಯಿ ಪಿ. ಬಿ., ೨೦೦೮, ***ವಿಜಯನಗರ ಸಾಮ್ರಾಜ್ಯ***, ಪು.೩೦

೮೬. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–೨, ಕೊಪ್ಪಳ ಜಿಲ್ಲೆ, ಗಂಗಾವತಿ ತಾ. ಆನೆಗೊಂದಿ, ಶಾ.ಸಂ.೩೪

೮೭. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–೩, ಹಂಪಿ, ಶಾ.ಸಂ.೨೫೧

೮೮. ಅದೇ, ಹಂಪಿ, ಶಾ.ಸಂ.೩೩೩

೮೯. ಕನ್ನಡ ವಿಶ್ವಕೋಶ ಸಂಪುಟ, ಪು.೯೭೬

೯೦. ಶಿವಣ್ಣ, ಪೂರ್ವೋಕ್ತ, ಪು.೨೬

೯೧. ಸೋಮಶೇಖರ್ ಎಸ್. ವೈ., ೨೦೧೪, ***ಕರ್ನಾಟಕದ ಬಿರುದಾವಳಿಗಳು ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನ***, ಪು. ೧೫೮–೧೬೧

೯೨. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–೩, ಹಂಪಿ, ಶಾ.ಸಂ.೪೮

೯೩. ಶಾಂತಕುಮಾರಿ ಎಸ್.ಎಲ್., ೧೯೭೫, ***ಕುಕನೂರು ಒಂದು ಸಾಂಸ್ಕೃತಿಕ ಸಮೀಕ್ಷೆ***, ಪು. ೧೫

೯೪. ಶಿವಣ್ಣ, ಪೂರ್ವೋಕ್ತ, ಪು.೨೬

೯೫. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–೨, ಕೊಪ್ಪಳ ಜಿಲ್ಲೆ, ಗಂಗಾವತಿ ತಾ. ಆನೆಗೊಂದಿ, ಶಾ.ಸಂ.೩೯

೯೬. ಅದೇ, ಕನಕಗಿರಿ, ಶಾ.ಸಂ.೮೦

೯೭. ಅದೇ, ಆನೆಗೊಂದಿ, ಶಾ.ಸಂ.೨೦

೯೮, ಅದೇ, ಕೊಪ್ಪಳ ತಾ. ಅಚಲಾಪುರ, ಶಾ.ಸಂ.೧೬೨

೯೯. ಅದೇ, ಗಂಗಾವತಿ ತಾ. ಕನಕಗಿರಿ, ಶಾ.ಸಂ.೮೦

೧೦೦. ಅದೇ, ಚಿಕ್ಕರಾಮಾಪುರ, ಶಾ.ಸಂ.೬೪

೧೦೧. ಅದೇ, ಸಣಾಪುರ, ಶಾ.ಸಂ.೬೯

೧೦೨. ಅದೇ, ಗೊಂಡಬಾಳು ಶಾ.ಸಂ.೧೩೫ ಮತ್ತು ಪರಮಶಿವಮೂರ್ತಿ ಡಿ.ವಿ.(ಸಂ.),

ಕೃಷ್ಣದೇವರಾಯನ ಶಾಸನಗಳು ಸಂಪುಟ-೧, ಶಾ.ಸಂ.೨೫

೧೦೩. ಅದೇ, ಕೊಪ್ಪಳ ತಾ. ಬಂಡಿ ಹರ್ಲಾಪುರ, ಶಾ.ಸಂ೧೬೦

೧೦೪. ಅದೇ, ಕಿಡಿದಾಳು, ಶಾ.ಸಂ.೧೩೮

೧೦೫. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೨, ಕೊಪ್ಪಳ ಜಿಲ್ಲೆ, ಕೊಪ್ಪಳ, ಶಾ.ಸಂ.೩೯

೧೦೬. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೨, ಕೊಪ್ಪಳ ತಾ., ಹತೋಟಿ, ಶಾ.ಸಂ.೧೬೧

೧೦೭. ಪರಮಶಿವಮೂರ್ತಿ ಡಿ.ವಿ., ೨೦೦೩, *ಅತ್ತಿವಟ್ಟಿಯ ಶಾಸನ ಮತ್ತು ಸ್ಥಳೀಯ ಕೃಷಿ ವ್ಯವಸ್ಥೆ,* ವಿಜಯನಗರ ಅಧ್ಯಯನ ಸಂಪುಟ-೮ ಪು.೧೨೬

೧೦೮. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೨, ಕೊಪ್ಪಳ ತಾ. ಗಿಣಿಗೇರಿ, ಶಾ.ಸಂ.೧೩೯

೧೦೯. ಅದೇ, ಗಂಗಾವತಿ ತಾ. ಗಂಗಾವತಿ, ಶಾ.ಸಂ.೮೦

೧೧೦. ಅದೇ, ಗಂಗಾವತಿ, ಶಾ.ಸಂ.೭೩

೧೧೧. ಅದೇ. ಗಂಗಾವತಿ ತಾ. ಹನುಮನಾಳ, ಶಾ.ಸಂ.೯೦

೧೧೨. ಅದೇ, ಕನ್ನೇರುಮಡು, ಶಾ.ಸಂ.೯೦

೧೧೩. ಅದೇ, ಯಲಬುರ್ಗಾ ತಾ. ಕಲ್ಲೂರು, ಶಾ.ಸಂ. ೧೪

೧೧೪. ಅದೇ, ಬಂಡಿಹಾಳ, ಶಾ.ಸಂ.೨೨

೧೧೫. ಅದೇ, ಗಂಗಾವತಿ ತಾ. ಆನೆಗೊಂದಿ ಶಾ.ಸಂ೫೪

೧೧೬. ಅದೇ, ಆನೆಗೊಂದಿ, ಶಾ.ಸಂ.೫೫

೧೧೭. ಅದೇ, ಕನಕಗಿರಿ, ಶಾ.ಸಂ.೮೦

೧೧೮. ಅದೇ, ಕುಷ್ಟಗಿ ತಾ. ತಾವರಗೆರೆ, ಶಾ.ಸಂ.೧೦

೧೧೯. ಅದೇ, ಪುರ, ಶಾ.ಸಂ.೧೭

೧೨೦. ಅದೇ, ಪುರ, ಶಾ.ಸಂ.೧೨

೧೨೧. ಅದೇ, ಯಲಬುರ್ಗ ತಾ. ಕುಕನೂರು, ಶಾ.ಸಂ.೪೨

೧೨೨. ಅದೇ, ಗಂಗಾವತಿ ತಾ. ನವಲಿ, ಶಾ.ಸಂ.೯೪, ೯೫

೧೨೩. ಅದೇ, ಕನಕಗಿರಿ, ಶಾ.ಸಂ.೮೨

೧೨೪. ಅದೇ, ಚಿಕ್ಕರಾಮಾಪುರ, ಶಾ.ಸಂ.೬೬

ಅಧ್ಯಾಯ : ಮೂರು

ವಾಸ್ತುಶಿಲ್ಪ

=======================

ಅಧ್ಯಾಯ : ಮೂರು
ವಾಸ್ತುಶಿಲ್ಪ

'ಶಿಲ್ಪ' ಎನ್ನುವ ಶಬ್ದ ಮೊದಲು ಬಹಳ ವ್ಯಾಪಕವಾದ ಅರ್ಥವನ್ನು ಪಡೆದಿತ್ತು. ಪ್ರಸಿದ್ಧವಾದ ಅರವತ್ತುನಾಲ್ಕು ಕಲೆಗಳಿಗೆಲ್ಲಾ ***'ಶಿಲ್ಪ'*** ಎನ್ನುವ ಹೆಸರೇ ಅನ್ವಯವಾಗುತ್ತಿತ್ತು.[೧] ವಾಸ್ತುಶಿಲ್ಪ ಅದರಲ್ಲಿನ ಒಂದು ವಿಭಾಗವೆಂದು ಹೇಳಬಹುದು. ***'ವಾಸ್ತು'*** ಎಂದರೆ ವಸ್ತುಗಳಿಂದ ನಿರ್ಮಿತವಾದುದು ಎಂಬ ಅರ್ಥವಿರುವಂತೆ ತೋರುತ್ತದೆ. ಕೇವಲ ಕಟ್ಟಡದ ನಿರ್ಮಾಣಗಳಿಗೆ ಮಾತ್ರವಲ್ಲದೆ. ಪಟ್ಟಣ ನಿರ್ಮಾಣದ ಯೋಜನೆ, ಉದ್ಯಾನವನಗಳು, ರಸ್ತೆಗಳು ಕೊನೆಗೆ ಪೀಠೋಪಕರಣಗಳ ನಿರ್ಮಾಣವು ಸಹ ಈ ಪದದ ವ್ಯಾಪ್ತಿಯಲ್ಲಿ ಸೇರುತ್ತಿತ್ತು.[೨]

ಮನೆಯ ಸ್ವತಂತ್ರ ರಚನೆಯ ಕಲ್ಪನೆ, ಗರಿಗೆದರಿದಾಗ ಗುಹೆಯೊಂದಿಗೆ ಕಟ್ಟಡಗಳ ನಿರ್ಮಾಣವೂ ಮೂಡಿಬಂದಿತು. ***"ನಿವಾಸಾತ್ ಸರ್ವ ಭೂತಾನಾಂ ವಾಸ್ತುರಿತಿ ಶಬ್ದಿತ:"*** ಎಲ್ಲ ಪ್ರಾಣಿಗಳ ವಸತಿಗಾಗಿ ವಾಸ್ತು ಪದವು ಬಳಕೆಗೊಂಡಿದೆ.[೩] ಮಯಮತ ಗ್ರಂಥವು ವಾಸ್ತು ಶಬ್ದವನ್ನು ಎರಡು ಹಂತಗಳಲ್ಲಿ ವಿವರಿಸಿದ ಉಲ್ಲೇಖಗಳು ಸಿಗುತ್ತವೆ. ***ಅಮರ್ತ್ಯಾಶ್ಚೈ ಮರ್ತ್ಯಾಶ್ಚಯತ್ರಯತ್ರ ವಸಣತಿಹಿತದ್ವಸ್ತು ಇತಿಮತಂ***–ಮರ್ತ್ಯರು ಮತ್ತು ಅಮರ್ತ್ಯರು ವಾಸಿಸುವ ಸ್ಥಳಕ್ಕೆ ವಸ್ತು ಎಂದು ಹೆಸರು. ವಸ್ತುವನ್ನು ಆಶ್ರಯಿಸಿದ್ದು ವಾಸ್ತು. ***ಪ್ರಾಸಾದಾದೀನಿ ವಾಸ್ತೂನಿ ವಸ್ತುತ್ವಾತ್ ಸಂಶ್ರಯಾತ್***– ಪ್ರಾಸಾದ, ಹರ್ಮ್ಯ, ಸೌಧ ಇತ್ಯಾದಿಗಳು ವಸ್ತುವನ್ನು ಆಶ್ರಯಿಸಿದ್ದು, ವಾಸ್ತು ಎಂದೆನಿಸಿಕೊಳ್ಳುತ್ತದೆ. ಆದ್ದರಿಂದ ***'ವಾಸ್ತು'*** ಎಂದಲ್ಲಿ ವಸತಿಯೋಗ್ಯ ಭೂಮಿ ಹಾಗೂ ಆ ಭೂಮಿಯ ಮೇಲೆ ನಿಂತ ಕಟ್ಟಡ ಎರಡನ್ನೂ ಒಳಗೊಳ್ಳುತ್ತದೆ.[೪] ಭೂಮಿಯನ್ನು ಒಂದು ವಸ್ತುವೆಂದು ಪರಿಗಣಿಸಿ ಅದರ ಮೇಲೆ ಕೆತ್ತಲ್ಪಟ್ಟ ಗೃಹ, ಗುಡಿ, ಮುಂತಾದವುಗಳನ್ನು ವಾಸ್ತವೆಂದು ಹೇಳಲಾಗಿದೆ.[೫] ವಿಶಾಲವಾದ ಅರ್ಥದಲ್ಲಿ ವಾಸ್ತುವೆಂಬುದು ಭೂಮಿ, ಕಟ್ಟಡ, ವಾಹನ ಹಾಗೂ ಪರ್ಯಾಂಕಗಳನ್ನೊಳಗೊಂಡಿದೆ. ದೇವತಾ ಇಲ್ಲವೆ ಮಹಾತ್ಮರ ಸಂಕೇತ ಇಲ್ಲವೆ ಮೂರ್ತಿಗಳಿಗೋಸ್ಕರ ಮಾಡಿದ ಹಾಗೂ ಮನುಷ್ಯರು ವಾಸಿಸುವ ಸ್ಥಳ ಅಥವಾ ವಸತಿ, ವಾಸ್ತು ಎನಿಸುತ್ತದೆ.[೬]

ಸಾಮಾನ್ಯವಾಗಿ ಎಲ್ಲಾ ಕಲೆಗಳ ಹುಟ್ಟಿನ ಮೂಲದ ಬಗ್ಗೆ ಹೇಳುವಂತೆ ವಾಸ್ತುಶಿಲ್ಪದ ಹುಟ್ಟಿಗೂ ದೈವಿಕ ಮೂಲದ ಕಥೆಯನ್ನು ಕಾಣುತ್ತೇವೆ. ಬ್ರಹ್ಮನ ನಾಲ್ಕು ಮುಖಗಳಿಂದ ವಿಶ್ವಕರ್ಮ, ಮಯ, ತ್ವಷ್ಟ ಮತ್ತು ಮನು ಹುಟ್ಟಿದ್ದರು. ಇವರ ನಾಲ್ಕು ಜನ ಮಕ್ಕಳು ಕ್ರಮವಾಗಿ ಸ್ಥಪತಿ, ಸೂತ್ರಗ್ರಾಹಿ, ವರ್ಧಕಿ ಮತ್ತು ತಕ್ಷಕ ಎಂಬುವರು ಇವರಿಂದ ವಾಸ್ತುಕಲೆ ಬೆಳೆಯಿತು ಎನ್ನುತ್ತದೆ ಮಾನಸಾರ[೭] ಗ್ರಂಥ. ಈ ವಾಸ್ತು ಬೆಳವಣಿಗೆ ಕುರಿತು ಇರುವ ಕಥೆಗಳು ಏನೇ ಹೇಳಿದ್ದರು ವಾಸ್ತವದಲ್ಲಿ ವಾಸ್ತುವಿನ ನಿರ್ಮಾಣ ಆದಿಮಾನವರಿಂದಲೇ ಪ್ರಾರಂಭವಾಗಿತ್ತು.

ಮಾನವರು ತಮ್ಮ ಅಲೆಮಾರಿ ಜೀವನವನ್ನು ಬಿಟ್ಟು ಒಂದೆಡೆ ನೆಲೆ ನಿಲ್ಲಲು ಪ್ರಾರಂಭಿಸಿದಾಗ ಮೊದಲು ಆಶ್ರಯಿಸಿದ್ದು ನೈಸರ್ಗಿಕ ಗುಹೆ, ಮರದ ಪೊಟರೆಗಳನ್ನು. ಕ್ರಮೇಣ ಪ್ರಾಕೃತಿಕ ಮನೆಗಳ ನಿರ್ಮಾಣ ಮಾಡಿಕೊಂಡಿರಬೇಕು. ಅವರಲ್ಲಿ ದೇವರ ಕಲ್ಪನೆ ಬರುತ್ತಿದ್ದ ಹಾಗೇಯೇ ತನ್ನಂತೆಯೇ ದೇವರಿಗೂ ಒಂದು ವಾಸ್ತು ಸ್ಥಳವನ್ನು ನಿರ್ಮಿಸಿರಬೇಕು ಎನ್ನುವ ಕಲ್ಪನೆ ಬಂದಿರಬೇಕು. ಬಹುಶಃ ಇದು ಗುಹೆಗಳಿಂದಲೇ ಪ್ರಾರಂಭವಾಗಿರಬೇಕು. ಗುಹೆಗಳಲ್ಲಿ, ಮರದ ಪೊಟರೆಗಳಲ್ಲಿ ವಾಸಿಸುತ್ತಿದ್ದ ಆದಿಮಾನವರು ತಮ್ಮ ಅವಶ್ಯಕತೆಗಳ ಅನುಕೂಲಕ್ಕಾಗಿ ವಾಸಿಸುವ ರೀತಿಯನ್ನು ಬದಲಾಯಿಸಿಕೊಂಡು ಗುಹೆಗಳಿಂದ ಕ್ರಮೇಣ ಅನುಕೂಲಕರವಾದ ವಿವಿಧ ಮಾದರಿ, ವಿವಿಧ ವಾಸ್ತುಗಳ ಕಟ್ಟಡಗಳನ್ನು ಕಟ್ಟಿಕೊಳ್ಳುವುದು ಕಲಿತಿದ್ದು ನಾಗರಿಕತೆಯ ಜೀವನದ ಬಹುದೊಡ್ಡ ಹೆಜ್ಜೆ ಎನ್ನಬಹುದು. ಕ್ರಮೇಣ ಅನುಭವ ಬೆಳೆದಂತೆ ಸನ್ನಿವೇಶಗಳು ಬದಲಾದಂತೆ ತನ್ನ ಇರುವಿಕೆಯ ಸ್ಥಳಗಳಿಗೆ ಅನುಗುಣವಾಗಿ ಅಥವಾ ವಾಸದ ಜನರ ಅನುಗುಣವಾಗಿ ತನ್ನ ವಾಸ್ತು ರಚನೆಯಲ್ಲಿ ಬದಲಾವಣೆಯನ್ನು ಕಂಡುಕೊಂಡನು. ತಮ್ಮಲ್ಲಿ ಮೂಡಿದ ಸೌಂದರ್ಯದ ಪ್ರಜ್ಞೆಯನ್ನು ವಾಸ್ತು ರಚನೆಯಲ್ಲಿಯೂ ತಂದು ಕೊಂಡನು. ಇದು ವಾಸ್ತು ರಚನೆಯ ವಿನ್ಯಾಸಗಳ ಬೆಳವಣಿಗೆಗೆ ನಾಂದಿಯಾಯಿತು. ಸೌಂದರ್ಯದ ದೃಷ್ಟಿಯಿಂದ ಕಟ್ಟಡದ ಸುತ್ತಗೋಡೆ ಅದರ ಮೇಲೆ ವಿವಿಧ ಆಕಾರದ ಮಟ್ಟಿಗೆ ಮುಂಭಾಗದಲ್ಲಿ ಬಾಗಿಲು ಅದರ ಮೇಲೆ ಗಾಳಿ–ಬೆಳಕು ಬರಲು ಕಮಾನು, ತೆರವು ಹೀಗೆ ಅವನ ಮನೆ ರೂಪಗೊಂಡಿತ್ತು. ಇದು ವಾಸ್ತುಶಿಲ್ಪದ ಪ್ರಾಥಮಿಕ ಹೆಜ್ಜೆ.[೮] ಇತರ ಕಲೆಗಳಂತೆ ವಾಸ್ತುಶಿಲ್ಪವೂ ಆಯಾಕಾಲದ ಮತ್ತು ಆಯಾ ಜನಾಂಗದ ಆಂತರಿಕ ಆಕಾಂಕ್ಷೆ ಅನುಭವಗಳಿಗೆ ಕನ್ನಡಿಯನ್ನು ಹಿಡಿಯಬಲ್ಲುದೆಂಬುದು ***"Architecture is the matrix of civilization"*** ಎಂಬಂತೆ ಜಗತ್ತಿನ ಅತಿ ಪ್ರಾಚೀನ ನಾಗರಿಕತೆಗಳಾದ ಈಜಿಪ್ಟ, ಗ್ರೀಕ, ರೋಮ ಮತ್ತು ಸಿಂಧೂ ಇತ್ಯಾದಿಗಳಲ್ಲಿ ಬೆಳೆದು ಬಂದ ಕಟ್ಟಡಗಳಲ್ಲಿ ಕಾಣಬಹುದು. ನಾಗರಿಕತೆ ರೂಪಿಸಿದ ವಾಸ್ತುಶಿಲ್ಪವು ತನ್ನ ಗರ್ಭದಲ್ಲಿಟ್ಟು ನಾಗರಿಕತೆ ಎಂಬ ಶಿಶುವನ್ನು ಇದು ಬೆಳೆಸುತ್ತದೆ.[೯] ಕೆಲವೊಮ್ಮೆ ಇತಿಹಾಸ ರಚನೆಯಲ್ಲಿ ವಾಸ್ತು ರಚನೆಗಳು ಕೂಡ ಮಹತ್ವದ ಕುರುಹುಗಳನ್ನು ನೀಡಬಲ್ಲಗಳಾಗಿರುತ್ತವೆ. ಏಕೆಂದರೆ ಮಾನವ ಜನಾಂಗದ ಇತಿಹಾಸ ಆಯಾಕಾಲದ ವಾಸ್ತು ರಚನೆಗಳಲ್ಲಿ ಹಾಸುಹೊಕ್ಕಿರುತ್ತದೆ. ಇದು ಆಯಾ ಕಾಲದ ನಾಗರಿಕತೆಯ ಪ್ರತಿನಿಧಿಯಾಗಿರುತ್ತದೆ.

ಭಾರತದಲ್ಲಿ ದೇವಾಲಯ ವಾಸ್ತುರಚನೆಗಳ ಬೆಳವಣಿಗೆ

ಭಾರತದಲ್ಲಿ ಆದಿಮಾನವರ ನೆಲೆಗಳಾದ ಗುಹೆ ಮತ್ತು ಇತರ ನಿರ್ಮಾಣಗಳನ್ನು ಹೊರತು ಪಡಿಸಿ ಪೂರ್ಣಪ್ರಮಾಣದ ನಾಗರಿಕ ರಚನೆ ಎಂದು ಗುರುತಿಸುವಷ್ಟು ಇರುವ ರಚನೆಗಳನ್ನು ಹರಪ್ಪ ನಾಗರಿಕತೆಯಲ್ಲಿ ಗುರುತಿಸಬಹುದು. ಈ ನಾಗರಿಕತೆಯ ಪಟ್ಟಣಗಳ ಅವಶೇಷಗಳು ಭಾರತೀಯ ಸಂಸ್ಕೃತಿಯ ಅತಿ ಪ್ರಾಚೀನ ಕುರುಹುಗಳಾಗಿವೆ ಇಲ್ಲಿಯ ಅವಶೇಷಗಳು ಭಾರತವನ್ನು ಪ್ರಾಚೀನ ನಾಗರಿಕತೆಗಳ ಸಾಲಿನಲ್ಲಿ ಸೇರಿಸಿವೆ. ಈ ಕಾಲದಲ್ಲಿ ಅನೇಕ ವಾಸ್ತು ರಚನೆಗಳು ಕಂಡು ಬಂದಿವೆ. ಇಲ್ಲಿ ಕಾಣುವ ನಗರ ನಿರ್ಮಾಣದ ಕುಶಲತೆ ಮನೆಗಳ ರಚನೆಯಲ್ಲಿ ಕಂಡು ಬರುವ ಅಚ್ಚುಕಟ್ಟುತನ, ಒಳಚರಂಡಿ ವ್ಯವಸ್ಥೆ ಮತ್ತು ವಿಶಾಲವಾದ ರಸ್ತೆಗಳು ಇವು ಭಾರತೀಯ ವಾಸ್ತುರಚನೆಯ ಮೊದಲ ಕುರುಹುಗಳಾಗಿ ಕಂಡು ಬರುತ್ತವೆ.

ವಾಸ್ತು ರಚನೆಯಲ್ಲಿ ಹರಪ್ಪ ಸಂಸ್ಕೃತಿಯ ಜನರು ತೋರಿಸಿದ ಚಾಣಾಕ್ಷತೆ ಅನನ್ಯವಾಗಿದೆ. ಈ ಕಾಲಘಟ್ಟದಲ್ಲಿ ಹೆಚ್ಚಾಗಿ ಮಾನವ ವಾಸದ ಮನೆ, ಉಗ್ರಾಣ, ಸ್ನಾನದ ಕೊಳಗಳು, ನೀರಿನ ಚರಂಡಿಗಳು, ನೀರು ಸಂಗ್ರಹ ತೊಟ್ಟಿ ಈ ರೀತಿಯ ವಾಸ್ತು ರಚನೆಗಳನ್ನು ಗುರುತಿಸಲಾಗಿದೆ. ಈ ಕಾಲದ ಜನರು ಶುಚಿತ್ವಕ್ಕೆ ನೀಡಿದ ಒತ್ತು ಅವರ ರಚನೆಗಳ ತಾಂತ್ರಿಕತೆಯಲ್ಲಿ ಗುರುತಿಸಬಹುದು. ಇದೇ ಕಾಲಕ್ಕೆ ಅನೇಕ ಮೂರ್ತಿಶಿಲ್ಪಗಳು ಕಂಡು ಬಂದಿದ್ದರು ದೇವಾಲಯಗಳ ಸಂಕೀರ್ಣಗಳನ್ನು ಗುರುತಿಸಲಾಗಿಲ್ಲ.

ಭಾರತದಲ್ಲಿ ವೇದ ಕಾಲದಿಂದಲೂ ಧಾರ್ಮಿಕ ವಾಸ್ತು ನಿರ್ಮಾಣ ಪ್ರಚಲಿತವಾಗಿದೆ. ಯಜ್ಞವೇದಿಗಳ ನಿರ್ಮಾಣ, ಅವುಗಳ ಆಕಾರ ಹೀಗೆ ಹಲವಾರು ಅಂಶಗಳು ವೈದಿಕ ಕರ್ಮಭಾಗಗಳಲ್ಲಿ ದಾಖಲಾಗಿವೆ. ಈ ಕಾಲದಲ್ಲಿ ಆರ್ಯರು ಭಾರತಕ್ಕೆ ಪ್ರವೇಶ ಪಡೆದರು. ಅವರು ಯಜ್ಞಯಾಗಾದಿಗಳಿಗಾಗಿ ನಿರ್ಮಾಣಗೊಂಡ ಅನೇಕ ವಾಸ್ತುರಚನೆಗಳು ಕಮೇಣ ಮುಂದೆ ದೇವಾಲಯ ವಾಸ್ತುಗಳ ಶಾಸ್ತ್ರಬದ್ಧ ರಚನೆಗಳು ಕಂಡು ಬಂದಿರಬೇಕು. ಇದು ಕ್ರಮೇಣ ರಚನೆಯಲ್ಲಿ ಬೆಳವಣಿಗೆ ಹೊಂದಿ ಆಯಾಕಾಲಘಟ್ಟಕ್ಕೆ ಹೊಸ ಹೊಸ ಶೈಲಿಗಳು ಹುಟ್ಟಿಕೊಂಡು ಭಾರತದಾದ್ಯಂತ ಪ್ರಸರಿಸಿಕೊಂಡಿವೆ.

ಕರ್ನಾಟಕದಲ್ಲಿ ವಾಸ್ತುಶಿಲ್ಪ ರಚನೆ ಎಷ್ಟು ಪ್ರಾಚೀನ ಎನ್ನುವುದಕ್ಕೆ ಹೆಚ್ಚಿನ ಕುರುಹುಗಳು ಸಿಗುವುದಿಲ್ಲ. ಅಶೋಕನ ಕಾಲಕ್ಕೂ ಮೊದಲು ವಾಸ್ತುಶಿಲ್ಪಗಳಿದ್ದರೂ ಅವು ಉಳಿದಿಲ್ಲ. ಆಗಿನ ಕಟ್ಟಡಗಳು ಭರತಖಂಡದ ಬೇರೆ ಭಾಗಗಳಂತೆ ಇಲ್ಲಿಯೂ ಬಹುಶಃ ಮರಮಟ್ಟುಗಳಿಂದ ಕಟ್ಟಿದವಾಗಿದ್ದು ನಾಶವಾಗಿರಬಹುದು. ಅಶೋಕನ ಕಾಲದಲ್ಲಿ ಕರ್ನಾಟಕದಲ್ಲಿಯೂ ಸ್ತೂಪಗಳನ್ನು ಕಟ್ಟಿದ್ದಿರಬಹುದು.[೧೦] ಶಾತವಾಹನರ ಕಾಲದ ಶಿಲ್ಪ, ಸ್ಮಾರಕಗಳ ವಿಷಯದಲ್ಲಿಯೂ ನಾವು ಇದೇ ರೀತಿಯ ಅನಿಶ್ಚಿತ ಸ್ಥಿತಿಯಲ್ಲಿದ್ದೇವೆ[೧೧]. ಆದರೂ ಚಿತ್ತಾಪುರ ತಾಲೂಕಿನ ಕನಗನಹಳ್ಳಿಯಲ್ಲಿ, ಹಸರುಗುಂಡಗಿಯಲ್ಲಿ ಕಂಡುಬಂದ ಸ್ತೂಪದ ಅವಶೇಷಗಳು, ಸನ್ನತಿಯ ಕೋಟೆಯ ಅವಶೇಷ, ಬನವಾಸಿಯ ಚೈತ್ಯದ

ಅವಶೇಷ ವಡಗಾವ-ಮಾಧವಪುರದ ನಗರದ ಅವಶೇಷಗಳಿಂದ ತಕ್ಕಮಟ್ಟಿಗೆ ಶಾತವಾಹನ ಕಾಲದ ವಾಸ್ತು ಸ್ಮಾರಕಗಳ ಸ್ವರೂಪಗಳ ಬಗ್ಗೆ ತಿಳಿದುಕೊಳ್ಳಬಹುದಾಗಿದೆ. ಮುಂದೆ ಹಲವು ರಾಜಮನೆತನಗಳು ಬೆಳೆದು ಬಂದಂತೆ ಕರ್ನಾಟಕದಲ್ಲಿ ವಾಸ್ತುಶಿಲ್ಪವು ವಿವಿಧ ರೀತಿಯಲ್ಲಿ ಹಲುಸಾಗಿ ಬೆಳೆದು ಬಂದಿದೆ. ಕದಂಬರ ಕಾಲದ ಅವಶೇಷಗಳ ಗುಡ್ನಾಪುರದ ಉತ್ಖನನದಲ್ಲಿ ಕಂಡುಬಂದಿವೆ. ಬಾದಾಮಿ ಚಾಲುಕ್ಯರ ಕಾಲದಲ್ಲಿ ಧಾರ್ಮಿಕ ವಾಸ್ತುಶಿಲ್ಪ ವ್ಯವಸ್ಥಿತ ಬೆಳವಣಿಗೆಯಲ್ಲಿ ಮೊದಲ ಅಡಿ ಇರಿಸಿತು. ಚಾಲುಕ್ಯರು ಬಾದಾಮಿ, ಐಹೊಳೆ, ಪಟ್ಟದಕಲ್ ಮುಂತಾದೆಡೆ ನಾಗರ, ದ್ರಾವಿಡ ಹಾಗೂ ವೇಸರ ಶೈಲಿಯಲ್ಲಿ ಅದ್ಭುತವಾದ ದೇವಾಲಯಗಳನ್ನು ನಿರ್ಮಿಸಿದರು. ಇವರನ್ನು ಅನುಸರಿಸಿ ರಾಷ್ಟ್ರಕೂಟರು ಧಾರ್ಮಿಕ ವಾಸ್ತುಶೈಲಿಯನ್ನು ಮತ್ತಷ್ಟು ಉನ್ನತೀಕರಿಸಿದರು. ಎಲಿಫೆಂಟಾ, ಎಲ್ಲೋರಾಗಳಲ್ಲಿ, ಕರ್ನಾಟಕದ ಸಂಡೂರು, ಶಿರವಾಳ, ಕುಕನೂರ (ನವಲಿಂಗೇಶ್ವರ ದೇವಾಲಯ) ಮುಂತಾದೆಡೆ ಇವರ ಕಲಾ ಸ್ಮಾರಕಗಳನ್ನು ಗುರುತಿಸಬಹುದಾಗಿದೆ. ಇಲ್ಲಿರುವ ದೇವಾಲಯಗಳಲ್ಲಿನ ಕಲ್ಲಿನಲ್ಲಿ ಕೊರೆದ ವಾಸ್ತುರಚನೆಗಳು ಆಕರ್ಷಕವಾಗಿದ್ದು, ಅರಸರ ಪ್ರೋತ್ಸಾಹವನ್ನಷ್ಟೇ ಅಲ್ಲದೆ ಶಿಲ್ಪಿಗಳ ಕೈಚಳಕವನ್ನೂ ಎತ್ತಿ ತೋರಿಸುತ್ತವೆ. ಕೈಲಾಸ ದೇವಾಲಯವು ವಾಸ್ತುಶಿಲ್ಪದ ಅಚ್ಚರಿ ಎಂಬುದಾಗಿ ಪರಿಗಣಿಸಲ್ಪಟ್ಟಿದೆ. ರಾಷ್ಟ್ರಕೂಟ ಅವಧಿಯಲ್ಲಿ ನಿರ್ಮಾಣಗೊಂಡ ಅಸಂಖ್ಯಾತ ದೇವಾಲಯಗಳು, ಜೈನ ಬಸದಿಗಳು, ಬಾಹುಬಲಿ ಮೂರ್ತಿಗಳು ರಾಷ್ಟ್ರಕೂಟ ವಾಸ್ತುಶಿಲ್ಪ ಶೈಲಿಯ ವಿಶಿಷ್ಟಗಳಾಗಿ ಕಂಡು ಬರುತ್ತವೆ.

ಇವರ ನಂತರ ಬಂದ ಕಲ್ಯಾಣದ ಚಾಲುಕ್ಯರು ಕರ್ನಾಟಕದಲ್ಲಿ ದೇವಾಲಯ ವಾಸ್ತುಶಿಲ್ಪದ ಸುವರ್ಣಯುಗಕ್ಕೆ ನಾಂದಿ ಹಾಡಿದರೆಂದರೆ ತಪ್ಪಿಲ್ಲ. ಇವರ ಕಾಲದಲ್ಲಿ ನಿರ್ಮಾಣಗೊಂಡ ಸ್ಮಾರಕಗಳು ಆರಂಭಿಕ ಹಂತದಲ್ಲಿ ರಾಷ್ಟ್ರಕೂಟ ವಾಸ್ತುಶಿಲ್ಪ ಶೈಲಿಯ ಲಕ್ಷಣಗಳನ್ನು ಪಡೆದುಕೊಂಡಿದ್ದವು. ನಂತರ ಅವಧಿಯಲ್ಲಿ ಚಾಲುಕ್ಯರದ್ದೇ ಆದ ಶೈಲಿಯು ಬೆಳವಣಿಗೆ ಹೊಂದಿತು. ಚಾಲುಕ್ಯ ವಾಸುಶಿಲ್ಪ ಶೈಲಿಯಲ್ಲಿ ವಿಶೇಷವಾಗಿ ದ್ರಾವಿಡ ಮತ್ತು ನಾಗರ ಶೈಲಿಗಳ ಮೇಳವಿಕೆ ಇದೆಯೆಂದೂ, ಇದನ್ನೇ ವೇಸರ ಅಥವಾ ಭೂಮಿಜ ಎಂಬುದಾಗಿ ಹೆಸರಿಸಲಾಗಿದೆಯೆಂದೂ ಕಲಾ ಚರಿತ್ರೆಕಾರರು ಅಭಿಪ್ರಾಯ ಪಡುತ್ತಾರೆ. ವಾಸ್ತವಿಕವಾಗಿ ವೇಸರಶೈಲಿ ಇವರ ಕಾಲದಲ್ಲೇ ವಿಜೃಂಭಿಸಿದ್ದು ಸತ್ಯ. ಆ ಶೈಲಿಯಲ್ಲಿ ರಾಜ್ಯಾದ್ಯಂತ ನೂರಾರು ಸುಂದರ ದೇವಾಲಯಗಳನ್ನು ಇವರು ನಿರ್ಮಿಸಿದರು. ಇವರ ದೇವಾಲಯಗಳನ್ನು ಇಟಗಿ, ಲಕ್ಕುಂಡಿ, ಬಾಗಳಿ, ಮಾಗಳ, ಚೌಡಯ್ಯ ದಾನಪುರ, ಗಳಗನಾಥ, ಹಾನಗಲ್, ಬಳ್ಳಿಗಾವೆ ಮುಂತಾದೆಡೆ ಕಾಣಬಹುದು. ಈ ಅವಧಿಯಲ್ಲಿ ನಿರ್ಮಾಣಗೊಂಡ ದೇವಾಲಯಗಳು ತಮ್ಮ ಅಲಂಕಾರ, ಮೂರ್ತಿಶಿಲ್ಪದ ವೈಶಿಷ್ಟ್ಯತೆಗಳಿಗೆ ಹೆಸರುವಾಸಿಯಾಗಿದ್ದವು. ವೇಸರ ಶೈಲಿಯು ತನ್ನ ಔನತ್ಯದ ಪರಾಕಾಷ್ಠೆಯನ್ನು ಕಂಡುಕೊಂಡದ್ದು ಹೊಯ್ಸಳರ ಕಾಲದಲ್ಲಿ ಸುಮಾರು ೧೦೦ಕ್ಕೂ ಅಧಿಕ ದೇವಾಲಯಗಳು ಈ ಕಾಲದಲ್ಲಿ ನಿರ್ಮಾಣವಾದವು ಬೇಲೂರು, ಹಳೇಬೀಡು, ಸೋಮನಾಥಪುರ, ದೊಡ್ಡಗದ್ದವಳ್ಳಿ, ಮೇಲುಕೋಟೆ ಮುಂತಾದೆಡೆ ಇರುವ ಇವರ

ದೇವಾಲಯಗಳು ಒಂದು ರೀತಿಯಲ್ಲಿ ಸೂಕ್ಷ್ಮ ಕುಸುರಿ ಕೆತ್ತನೆಯಿಂದಾಗಿ ವಾಸ್ತು ವಿಸ್ಮಯಗಳಾಗಿವೆ. ಹೊಯ್ಸಳರ ನಂತರ ಕರ್ನಾಟಕ ಸಹಿತ ದಕ್ಷಿಣ ಭಾರತದಲ್ಲಿ ತಮ್ಮ ಪ್ರಾಬಲ್ಯ ಸ್ಥಾಪಿಸಿದ ವಿಜಯನಗರದರಸರು ತಮ್ಮ ಹಿಂದಿನ ವೇಸರ ಶೈಲಿಯನ್ನು ಕೈಬಿಟ್ಟು ಪ್ರಾಚೀನವಾದ ದ್ರಾವಿಡ ವಾಸ್ತುಶೈಲಿಯನ್ನು ಅನುಸರಿಸಿ ಅದನ್ನು ವಿಸ್ತೃತಗೊಳಿಸಿದರು ಹಾಗಾಗಿ ದ್ರಾವಿಡ ಶೈಲಿಯಲ್ಲಿ ವಿಜಯನಗರ ಶೈಲಿ ಔನತ್ಯದ ಹಂತವಾಗಿದೆ.

ವಿಜಯನಗರ ವಾಸ್ತುಶಿಲ್ಪ

ಹದಿನಾಲ್ಕನೆಯ ಶತಮಾನದಲ್ಲಿ ಪ್ರಾರಂಭವಾಗಿ ಹದಿನಾರನೆಯ ಶತಮಾನದಲ್ಲಿ ಉನ್ನತಿಯ ಪರಾಕಾಷ್ಠೆಯನ್ನು ಮುಟ್ಟಿದ ವಿಜಯನಗರ ವಾಸ್ತುಶಿಲ್ಪ ಶೈಲಿ ಇತರ ಬೇರೆ ಬೇರೆ ವಾಸ್ತುಶಿಲ್ಪ ಶೈಲಿಗಳಿಂದ ಪ್ರಭಾವಿತಗೊಂಡಿದೆ. ದೇವಾಲಯಗಳ ನಿರ್ಮಾಣದಲ್ಲಿ ಪೂರ್ವಕಾಲದ ಶೈಲಿಗಳ ಪ್ರಭಾವ ಸ್ಪಷ್ಟವಾಗಿ ಕಾಣುತ್ತದೆ. ಮೊದಮೊದಲು ನಿರ್ಮಾಣವಾದ ದೇವಾಲಯಗಳಲ್ಲಿ ಹೊಯ್ಸಳ, ಕದಂಬ ಶೈಲಿಯ ಮುಲಾಂಶಗಳೇ ಪ್ರಮುಖವಾಗಿದ್ದವು. ಆದರೆ ಆ ಮೇಲೆ ವಿಜಯನಗರದ ನೈಜಶೈಲಿಯೇ ವಿಕಾಸಗೊಂಡು ತನ್ನ ರೂಪವನ್ನು ತಾಳಿತು. ವಿಜಯನಗರದ ರಾಜರು ತಮ್ಮ ಸಾಮ್ರಾಜ್ಯದ ಉತ್ತರ ಭಾಗದಲ್ಲಿ ತಮ್ಮ ಕಾಲದವರೆಗೆ ಪರಂಪರೆಯಿಂದ ಬಂದ ಚಾಲುಕ್ಯ, ಕಾಕತೀಯ ಮತ್ತು ಹೊಯ್ಸಳ ಸಂಪ್ರದಾಯಗಳನ್ನು ಅಳವಡಿಸಿಕೊಂಡರು. ತಮ್ಮ ಸಾಮ್ರಾಜ್ಯದ ದಕ್ಷಿಣ ಪ್ರಾಂತ್ಯಗಳಲ್ಲಿ ದಕ್ಷಿಣದ ಪಾಂಡ್ಯರಲ್ಲಿ ಈಚೆಯವರೆಗಿನ ಬೆಳೆದುಬಂದ ಸಂಪ್ರದಾಯವನ್ನು ಅಳವಡಿಸಿಕೊಂಡರು. ತಮಿಳುನಾಡಿನ ದೇವಾಲಯಗಳು ಪಲ್ಲವ, ಚೋಳ, ಪಾಂಡ್ಯ ಶಿಲ್ಪಶಾಸ್ತ್ರವನ್ನು ಮುಂದುವರಿಸಿದೆ. ವಿಜಯನಗರದ ಶಿಲ್ಪಿಗಳು ಚಾಲುಕ್ಯ ಶೈಲಿಯ ದೇವಕೋಷ್ಟವನ್ನು ಅಳವಡಿಸಿದರು. ಎತ್ತರದ ತಳಪಾಯ ಹಾಗೂ ಅಲಂಕರಣಗಳು ಚಾಲುಕ್ಯ ಹೊಯ್ಸಳ ಶೈಲಿಯ ಪ್ರಭಾವವನ್ನು ವ್ಯಕ್ತಪಡಿಸುತ್ತವೆ. ಗೋಪುರ ಮತ್ತು ವಿಶಾಲ ಸಭಾಂಗಣ ಚೋಳ ಸಂಪ್ರದಾಯದ ಪ್ರಭಾವವನ್ನು ಎತ್ತಿ ತೋರಿಸುತ್ತವೆ. ಹೊಯ್ಸಳ ಶೈಲಿಯ ಹೂಗಳ ಕೆತ್ತನೆ ವಿಜಯನಗರದ ವಾಸ್ತುಶಿಲ್ಪಗಳಿಂದ ಅತಿಶಯವಾಗಿ ಅಭಿವೃದ್ಧಿಗೊಂಡಿತ್ತು.[೧೨]

ವಿಜಯನಗರ ವಾಸ್ತುಶೈಲಿಯ ಮುಖ್ಯಲಕ್ಷಣಗಳು (ಕೊಪ್ಪಳ ಜಿಲ್ಲೆಯನ್ನು ಅನುಲಕ್ಷಿಸಿ)

ವಿಜಯನಗರ ಶೈಲಿಯನ್ನು ಒಳಗೊಂಡ ಅನೇಕ ದೇವಾಲಯಗಳು ಹಂಪಿ, ಆನೆಗೊಂದಿ, ಹಿರೇಜಂತಗಲ್ಲ, ಕನಕಗಿರಿ, ವೆಂಕಟಗಿರಿ, ಮಲ್ಲಪ್ಪನಗುಡಿ, ಕಡ್ಡಿರಾಂಪುರ, ಅನಂತಶಯನಗುಡಿ, ಕಮಲಾಪುರ ಶ್ರೀರಂಗಪಟ್ಟಣ, ಬೇಲೂರು, ಗದಗ, ಶ್ರವಣಬೆಳಗೋಳ, ನಂಜನಗೂಡು ಕರ್ನಾಟಕ ಮುಂತಾದ ಸ್ಥಳಗಳಲ್ಲಿ ಹಾಗೂ ಅವಿಭಜಿತ ಆಂಧ್ರಪ್ರದೇಶದ ಲೇಪಾಕ್ಷಿ, ಪೆನುಗೊಂಡೆ, ಚಂದ್ರಗಿರಿ, ತಿರುಪತಿ, ಕಾಳಹಸ್ತಿ, ಶ್ರೀಶೈಲ, ನಂದ್ಯಾಲ, ಅಹೋಬಲಂ, ಮುಂತಾದ ಸ್ಥಳಗಳಲ್ಲಿ ಹಾಗೂ ತಮಿಳುನಾಡಿನ ತಿರುವಣ್ಣಾಮಲೆಗಳಲ್ಲಿ ಕಾಣಬಹುದು. ವಿಜಯನಗರ ಕಾಲದ ದೇವಾಲಯಗಳ ವಾಸ್ತು ಲಕ್ಷಣಗಳನ್ನು ಕೊಪ್ಪಳ ಜಿಲ್ಲೆಯನ್ನು ಅನುಲಕ್ಷಿಸಿ ಕೆಳಕಂಡಂತೆ ಗುರುತಿಸಬಹುದು.

ತಲವಿನ್ಯಾಸ

ವಿಜಯನಗರ ಕಾಲದ ದೇವಾಲಯಗಳ ತಲವಿನ್ಯಾಸ ಹೆಚ್ಚು ವಿಸ್ತಾರವಾಗಿರುತ್ತದೆ. ಈ ದೇವಾಲಯಗಳಲ್ಲಿ ಸಾಮಾನ್ಯವಾಗಿ ಗರ್ಭಗೃಹ, ಪ್ರದಕ್ಷಿಣಾಪಥ, ಸುಖನಾಸಿ, ಅರ್ಧಮಂಟಪ, ನವರಂಗ ಮತ್ತು ಮುಖಮಂಟಪಗಳಿರುತ್ತವೆ. ನವರಂಗಕ್ಕೆ ಮೂರು ಪ್ರವೇಶದ್ವಾರಗಳಿದ್ದು, ಪಕ್ಕದಲ್ಲಿರುವ ಪ್ರವೇಶದ್ವಾರಗಳು, ನವರಂಗವನ್ನು ಚಿಕ್ಕದ್ವಾರಮಂಟಪಗಳಿಗೆ ಕೂಡಿಸಿರುತ್ತವೆ. ದೇವಾಲಯದ ಸುತ್ತಲೂ, ನಿರ್ದಿಷ್ಟಪಡಿಸಿದ ದಿಕ್ಕಿನಲ್ಲಿ ಪರಿವಾರ ದೇವತೆಗಳಿಗಾಗಿ ಚಿಕ್ಕ ಗುಡಿಗಳಿರುತ್ತವೆ. ವಿಶಾಲವಾದ ಪ್ರಾಕಾರದ ಸುತ್ತಲೂ ಎತ್ತರವಾದ ಗೋಡೆಯಿದ್ದು ಪ್ರಾಕಾರವನ್ನು ಎರಡು ಅಥವಾ ಮೂರು ಕಡೆಗಳಿಂದ ಪ್ರವೇಶಿಸಲು ಬರುತ್ತದೆ. ಈ ಪ್ರವೇಶ ಮಂಟಪಗಳ ಮೇಲೆ ಎತ್ತರವಾದ ಗೋಪುರಗಳನ್ನು ಕಟ್ಟಿರುತ್ತಾರೆ. ಅಲ್ಲದೆ ಪ್ರಾಕಾರದಲ್ಲಿ ಕಲ್ಯಾಣ ಮಂಟಪ, ಉತ್ಸವ ಮಂಟಪಗಳಿರುತ್ತವೆ. ತಮಿಳುನಾಡಿನಲ್ಲಿರುವ ವಿಜಯನಗರ ಕಾಲದ ದೇವಾಲಯಗಳಲ್ಲಿ ಇನ್ನೂ ಅನೇಕ ಮಂಟಪಗಳಿರುವುದು ಸಾಮಾನ್ಯ. ಉದಾಹರಣೆಗೆ ಕೆಲವು ಸಲ ದೇವಾಲಯದ ಆವರಣದಲ್ಲಿ ಉಯ್ಯಾಲೆ ಮಂಟಪ, ವಸಂತ ಮಂಟಪ, ವಾಹನ ಮಂಟಪ, ಕನ್ನಡಿ ಮಂಟಪ ಮತ್ತು ರಂಗ ಮಂಟಪಗಳನ್ನು ಕಾಣಬಹುದು. ಜಿಲ್ಲೆಯ ಕನಕಗಿರಿಯ ಕನಕಾಚಲ ಲಕ್ಷ್ಮೀನರಸಿಂಹ ದೇವಾಲಯವು ಮೇಲೆ ಗಮನಿಸಿದಂತೆ ಬಹುಮಟ್ಟಿನ ವಾಸ್ತು ಭಾಗಗಳನ್ನು ಹೊಂದಿದೆ. ಅದರಂತೆ ಹಿರೇಜಂತಗಲ್ಲನ ಪ್ರಸನ್ನ ವಿರೂಪಾಕ್ಷ, ಆನೆಗೊಂದಿಯ ರಂಗನಾಥ ದೇವಾಲಯಗಳು ತಕ್ಕ ಮಟ್ಟಿಗೆ ಈ ರೀತಿಯ ತಲವಿನ್ಯಾಸವನ್ನು ಹೊಂದಿವೆ.

ಪ್ರದಕ್ಷಿಣಾಪಥ

ವಿಜಯನಗರ ಕಾಲದ ದೊಡ್ಡ ಗಾತ್ರದ ದೇವಾಲಯಗಳಲ್ಲಿ ಕಂಡು ಬರುವ ಲಕ್ಷಣಗಳಲ್ಲಿ ಪ್ರದಕ್ಷಿಣಾಪಥ ಒಂದು. ಗರ್ಭಗೃಹದ ಸುತ್ತಲೂ ಕಟ್ಟಿರುವ ಈ ಪಥ ಲಕ್ಷಣದಲ್ಲಿ ಹದಿನಾಲ್ಕನೆಯ ಶತಮಾನದ ಹಿಂದೆ ಕರ್ನಾಟಕದ ದೇವಾಲಯಗಳಲ್ಲಿ ಕಂಡು ಬರುವ ಪ್ರದಕ್ಷಿಣಾಪಥಕ್ಕಿಂತ ತೀರಾ ಭಿನ್ನವಾಗಿದೆ. ಇಂತಹ ಪ್ರದಕ್ಷಿಣಾಪಥವನ್ನು ಬಾಲಕೃಷ್ಣ, ವಿಜಯ ವಿಠಲ ಮುಂತಾದ ದೇವಾಲಯಗಳಲ್ಲಿ ನೋಡಬಹುದು. ವಿಜಯನಗರ ಪೂರ್ವದ ಪ್ರದಕ್ಷಿಣಾಪಥ ಗರ್ಭಗೃಹದ ಸುತ್ತಲೂ ಇದ್ದು ಇಲ್ಲಿ ಗರ್ಭಗೃಹದ ನೆಲಗಟ್ಟು ಮತ್ತು ಪ್ರದಕ್ಷಿಣಾಪಥದ ನೆಲಗಟ್ಟು ಒಂದಕ್ಕೊಂದು ಸಮನಾಗಿವೆ. ಇಂತಹ ಪ್ರದಕ್ಷಿಣಾಪಥಗಳನ್ನು ಬಾದಾಮಿಯ ಚಾಲುಕ್ಯ ಕಾಲದ ಐಹೊಳೆಯ ಮೇಗುತಿ, ದುರ್ಗ, ಹುಚ್ಚಿಮಲ್ಲಿ ದೇವಾಲಯಗಳಲ್ಲಿ, ಬಾದಾಮಿಯ ಮೇಲಿನ ಶಿವಾಲಯದಲ್ಲಿ, ಪಟ್ಟದಕಲ್ಲಿನ ಸಂಗಮೇಶ್ವರ, ವಿರೂಪಾಕ್ಷ ಮುಂತಾದ ದೇವಾಲಯಗಳಲ್ಲಿ ಕಾಣಬಹುದು. ಅಂದರೆ ಇಲ್ಲಿ ಪ್ರದಕ್ಷಿಣಾಪಥದ ನೆಲಗಟ್ಟು ಗರ್ಭಗಹದ ನೆಲಗಟ್ಟಿಗೆ ಸಮನಾಗಿರುತ್ತದೆ. ಆದರೆ ವಿಜಯನಗರದ ಪ್ರದಕ್ಷಿಣಾಪಥ ಗರ್ಭಗೃಹದ ನೆಲಗಟ್ಟಿಗಿಂತ ಕೆಳಮಟ್ಟದಲ್ಲಿದ್ದು ಸೋಪಾನವೊಂದರ ಮೂಲಕ ಕೆಳಗಿಳಿಯುವ ವ್ಯವಸ್ಥೆ ಇರುತ್ತದೆ. ಅಲ್ಲದೇ ಗರ್ಭಗೃಹಕ್ಕೂ ಮತ್ತು ಪ್ರದಕ್ಷಿಣಾಪಥಕ್ಕೂ ಮಧ್ಯ ಸುಮಾರು ಎರಡು ಅಡಿ ಖಾಲಿ ಜಾಗ ಇದೆ.

ಹೀಗಾಗಿ ಗರ್ಭಗೃಹದ ಗೋಡೆಗಳ ಕೆಳಭಾಗದ ಅಧಿಷ್ಠಾನದ ವಿವಿಧ ಭಾಗಗಳು ಸ್ಪಷ್ಟವಾಗಿ ಗೋಚರವಾಗುತ್ತವೆ. ವಿಜಯನಗರ ಕಾಲಕ್ಕಿಂತ ಮುಂಚಿನ ಪ್ರದಕ್ಷಿಣಾಪಥ ಗರ್ಭಗೃಹದ ಗೋಡೆಗೆ ಹೊಂದಿಕೊಂಡಿರುವದರಿಂದ ಗರ್ಭಗೃಹಕ್ಕೆ ಅಧಿಷ್ಠಾನವೇ ಇರುವುದಿಲ್ಲವೆಂದೇ ಹೇಳಬಹುದು. ಪ್ರದಕ್ಷಿಣಾಪಥ ಮತ್ತು ಗರ್ಭಗೃಹಗಳನ್ನು ಬೇರೆ ಬೇರೆಯಾಗಿ ಕಟ್ಟಿ ಪ್ರದಕ್ಷಿಣಾಪಥವನ್ನು ಕೆಳಮಟ್ಟದಲ್ಲಿ ಕಟ್ಟುವ ಪ್ರಯತ್ನದಲ್ಲಿಯ ಹಂತವೊಂದನ್ನು ಸಂಗಮ ಅರಸರ ಆಳ್ವಿಕೆಯ ಮೊದಲ ಕೆಳವರ್ಷಗಳಲ್ಲಿ ಕಟ್ಟಿದ ಕುರುಗೋಡಿನ ಹಿಂಡುಲಿ ಸಂಗಮೇಶ್ವರ ದೇವಾಲಯದಲ್ಲಿ ಕಾಣಬಹುದು. ಇಲ್ಲಿ ಪ್ರದಕ್ಷಿಣಾಪಥ ಗರ್ಭಗೃಹದ ನೆಲಮಟ್ಟಕ್ಕಿಂತ ಕೆಳಮಟ್ಟದಲ್ಲಿದ್ದು ಸೋಪಾನವೊಂದರ ಮೂಲಕ ಕೆಳಗಿಳಿಯುವ ವ್ಯವಸ್ಥೆಯಿದೆ. ಆದರೆ ಇಲ್ಲಿ ಗರ್ಭಗೃಹದ ಅಧಿಷ್ಠಾನವನ್ನು ಪ್ರದಕ್ಷಿಣಾಪಥದಿಂದ ಬೇರ್ಪಡಿಸದೆ ಎರಡೂ ಕೂಡಿಸಿ ಕಟ್ಟಲಾಗುತ್ತದೆ. ಅಲ್ಲದೆ ಗರ್ಭಗೃಹದ ಅಧಿಷ್ಠಾನವು ಗೋಡೆಯಂತಿದ್ದು ಇಲ್ಲಿ ಅಧಿಷ್ಠಾನದ ವಿವಿಧ ಭಾಗಗಳು ಕಂಡು ಬರುವದಿಲ್ಲ. ಈ ದೇವಾಲಯ ಹದಿನಾಲ್ಕನೆಯ ಶತಮಾನದ ಪೂರ್ವಾರ್ಧದಲ್ಲಿ ಕಟ್ಟಿದುದಾಗಿದೆ. ಇಲ್ಲಿಯ ಗರ್ಭಗೃಹದ ಮೇಲೆ ಕದಂಬರ ಶೈಲಿಯ ಶಿಖರವಿದೆ. ವಿಜಯನಗರ ಕಾಲದ ಪ್ರದಕ್ಷಿಣಾಪಥ ಸಂಪೂರ್ಣವಾಗಿ ಮುಚ್ಚಲ್ಪಟ್ಟಿರುತ್ತದೆ. ಕೆಲ ದೇವಾಲಯಗಳಲ್ಲಿ ಬೆಳಕು ಗಾಳಿ ಬರಲು ಬೆಳಕಿಂಡಿಗಳನ್ನು ಇರಿಸಲಾಗಿದೆ. ಕೊಪ್ಪಳ ಜಿಲ್ಲೆಯ ವಿಜಯನಗರ ಕಾಲದ ಯಾವುದೇ ದೇವಾಲಯಗಳಲ್ಲಿ ಪ್ರದಕ್ಷಿಣಾಪಥವು ಇರುವುದಿಲ್ಲ.

ಗರ್ಭಗೃಹ

ವಿಜಯನಗರ ಕಾಲದ ದೇವಾಲಯಗಳ ಗರ್ಭಗೃಹ ಸಾಮಾನ್ಯವಾಗಿ ಚೌಕಾಗಿರುತ್ತದೆ. ಆದರೆ ನಿದ್ರಿಸುತ್ತಿರುವ ಅಥವಾ ಒರಗಿರುವ ಭಂಗಿಯಲ್ಲಿರುವ ದೇವತೆಗಾಗಿ ದೇವಾಲಯವನ್ನು ಕಟ್ಟಿಸಿದಾಗ ಮಾತ್ರ ಗರ್ಭಗೃಹ ಸಮಚತುಷ್ಕೋನಾಕಾರದಲ್ಲಿರುತ್ತದೆ.

ವಿಜಯನಗರದ ಈಗಿನ ಅನಂತಶಯನ ಗುಡಿ(ಇದು ಹಳ್ಳಿಯ ಹೆಸರು)ಯಲ್ಲಿರುವ ಅನಂತಶಯನ ದೇವಾಲಯದ ಗರ್ಭಗೃಹ ಸಮಚತುಷ್ಕೋನಾಕಾರವಾಗಿದೆ. ಈ ಗರ್ಭಗೃಹದಲ್ಲಿ ಅನಂತಶಯನ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಲಾಗಿತ್ತು. ಸಮಚತುಷ್ಕೋನಾಕಾರದ ಗರ್ಭಗೃಹವನ್ನು ಕಟ್ಟಿದಾಗ ಸಮಚತುಷ್ಕೋನಾಕಾರಕ್ಕೆ ಸರಿಹೋಗುವಂತಹ ಶಿಖರವನ್ನು ಕಟ್ಟಲಾಗುತ್ತಿತ್ತು. ಇದು ಮೊದಲಿನಿಂದಲೂ ನಡೆದು ಬಂದ ಸಂಪ್ರದಾಯವಾಗಿದೆ. ಅನಂತಶಯನ ಗುಡಿಯ ದೇವಾಲಯದ ಶಿಖರ, ಶಾಲಾಶಿಖರವಾಗಿದೆ. ಮಹಾಬಲಿಪುರಂನಲ್ಲಿರುವ ಪಲ್ಲವ ಕಾಲದ ಭಿಮರಥ ತಲವಿನ್ಯಾಸದಲ್ಲಿ ಸಮಚತುಷ್ಕೋನಾಕಾರದಲ್ಲಿದ್ದು ಇದರ ಶಿಖರವೂ ಅದೇ ಆಕಾರದ ಶಾಲಾಶಿಖರವಾಗಿರುವದನ್ನು ಇಲ್ಲಿ ಸ್ಮರಿಸಬಹುದು. ಇದೇ ರೀತಿಯ ಗರ್ಭಗೃಹಗಳು ಕೊಪ್ಪಳ ಜಿಲ್ಲೆ ಗಂಗಾವತಿ ತಾಲೂಕಿನ ಹಿರೇಜಂತಗಲ್ಲ ಪಂಪಾವಿರೂಪಾಕ್ಷ ದೇವಾಲಯದ ಪಂಪಾಂಬಿಕೆ ಗೃರ್ಭಗೃಹ ಹಾಗೂ ಕನಕಗಿರಿ ಬಳಿಯ ಹನುಮನಾಳಿನ ವುಡಚಲಮ್ಮ ದೇವಾಲಯ, ನವಲಿಯ ವೀರಭದ್ರೇಶ್ವರ ದೇವಾಲಯಗಳಲ್ಲಿ ಕಾಣಬಹುದು. ಇವೆಲ್ಲ ವಿಜಯನಗರ ಕಾಲದ ದೇವಾಲಯಗಳು.

ಆದರೆ ಈ ಗರ್ಭಗೃಹಗಳಲ್ಲಿ ಆಯತಾಕಾರದ ಗರ್ಭಗೃಹಗಳನ್ನು ಶಯನಭಂಗಿಯ ದೇವತೆಯಿರದೆ ಸಮಭಂಗಿಯ ಶಿಲ್ಪಗಳೇ ಇವೆ. ಹಿರೇಜಂತಕಲ್ಲಿನ ಪಾರ್ವತಿಯ ಗರ್ಭಗೃಹದ ಬದಿಯಲ್ಲಿ ಒಂದು ಚಿಕ್ಕ ಉಗ್ರಾಣ ಕೋಣೆ ಇದ್ದೂ ಅವೇರಡು ಸೇರಿ ಆಯತಾಕಾರವಾಗುತ್ತದೆ. ಇನ್ನೂ ಹನುಮನಾಳದಲ್ಲಿ ಒಂದೇ ಗರ್ಭಗೃಹದಲ್ಲಿ ಎರಡು ಭಾಗಗಳನ್ನಾಗಿಸಿ ಬೇರೆ ಬೇರೆ ಶಿಲ್ಪಗಳನ್ನು ಪ್ರತಿಷ್ಠಾಪಿಸಲಾಗಿದೆ. ನವಲಿಯಲ್ಲಿ ಮೂರು ಭಾಗಗಳನ್ನಾಗಿಸಿ ಮೂರು ದೇವತಾ ವಿಗ್ರಹಗಳನ್ನಿರಿಸಲಾಗಿದೆ.

ಅಧಿಷ್ಠಾನ

ವಿಜಯನಗರದ ದೇವಾಲಯಗಳು ಎತ್ತರವಾದ ಅಧಿಷ್ಠಾನವನ್ನು ಹೊಂದಿರುತ್ತವೆ. ಹಜಾರರಾಮ ಮತ್ತು ವಿಠ್ಠಲ ದೇವಾಲಯಗಳಲ್ಲಿಯ ಅಧಿಷ್ಠಾನ ವಿವಿಧ ಬಗೆಯ ಭಾಗಗಳನ್ನು ಹೊಂದಿದ್ದು ಕೈ ಬಳೆಯಾಕಾರದ ಭಾಗ ಎದ್ದು ಕಾಣುತ್ತದೆ. ಕನಕಗಿರಿಯ ಕನಕಾಚಲ ಲಕ್ಷ್ಮೀನರಸಿಂಹ ದೇವಾಲಯದ ರಂಗಮಂಟಪ ಅಧಿಷ್ಠಾನದಲ್ಲಿ ಇದೇ ರೀತಿ ಕೈ ಬಳೆಯಾಕಾರದ ಕುಮುದ ಭಾಗ ಆಕರ್ಷಕವಾಗಿ ಗೋಚರಿಸುತ್ತದೆ. ವಿಠ್ಠಲ ದೇವಾಲಯದ ಅಧಿಷ್ಠಾನದ ತೀರ ಕೆಳಗಿನ ಭಾಗದಲ್ಲಿ ಕುದುರೆ ಮತ್ತು ಕುದುರೆ ವ್ಯಾಪಾರಿಗಳ ಶಿಲ್ಪಗಳನ್ನು ಕೆತ್ತಿದ್ದಾರೆ. ಇನ್ನೆರಡು ವಿಶಿಷ್ಟವಾದ ಅಧಿಷ್ಠಾನ ಭಾಗಗಳೆಂದರೆ ಬಹುಮುಖ ಕುಮುದ ಅಥವಾ ತ್ರಿಪಟ್ಟ ಕುಮುದ ಮತ್ತು ಪದ್ಮಭಾಗ. ಅಧಿಷ್ಠಾನದ ಮೇಲ್ಭಾಗದಲ್ಲಿ ಕಪೋತ ಭಾಗ ಸಾಮಾನ್ಯವಾಗಿ ಕಂಡು ಬರುತ್ತದೆ. ಚಿಕ್ಕ ಆಕಾರದ ದೇವಾಲಯಗಳಲ್ಲಿ ಗೋಡೆಗಳು ಸರಳವಾಗಿದ್ದರೆ ದೊಡ್ಡ ದೇವಾಲಯಗಳಲ್ಲಿ ಗೋಡೆಗಳು ಹೆಚ್ಚು ಅಲಂಕೃತವಾಗಿರುತ್ತವೆ. ಇಲ್ಲಿ ಹೊರಗೋಡೆಗಳನ್ನು ಸಮಮಟ್ಟದಲ್ಲಿ ವಿಂಗಡಿಸಿರುತ್ತಾರೆ. ಗೋಡೆಯ ಕೆಳಗಿನ ಭಾಗದಲ್ಲಿ ಅಧಿಷ್ಠಾನದಲ್ಲಿ ಕಂಡು ಬರುವ ವಿವಿದ ಭಾಗಗಳನ್ನು ಪುನರಾವರ್ತಿಸಿರುವದನ್ನು ಕಾಣಬಹುದು. ಇಂತಹ ರಚನೆ ವಿರೂಪಾಕ್ಷ, ವಿಠ್ಠಲ, ಬಾಲಕೃಷ್ಣ, ಪಟ್ಟಾಭಿರಾಮ ಮುಂತಾದ ದೇವಾಲಯಗಳಲ್ಲಿ ಕಂಡು ಬರುವಂತೆ ಜಿಲ್ಲೆಯ ವೆಂಕಟಗಿರಿಯ ವೆಂಕಟೇಶ್ವರ, ಹಿರೇಜಂತಗಲ್ಲಿನ ಪ್ರಸನ್ನ ವಿರೂಪಾಕ್ಷ ದೇವಾಲಯದ ಎರಡು ಪ್ರವೇಶ ಮಂಟಪಗಳ ಅಧಿಷ್ಠಾನಗಳು ಈ ರೀತಿ ಇವೆ. ಇದರ ಮೇಲಿನ ಭಾಗದಲ್ಲಿ ಕೋಷ್ಠಗಳು, ಅರ್ಧಕಂಬಗಳು, ಪಂಜರಗಳು, ತೋರಣಗಳು ಮತ್ತು ಮೂರ್ತಿಶಿಲ್ಪಗಳನ್ನು ಅಳವಡಿಸಿರುತ್ತಾರೆ. ಇವುಗಳಲ್ಲಿಯೇ ಅತಿ ವಿಶಿಷ್ಟವಾದುದೆಂದರೆ ಕುಂಭಪಂಜರ. ಕುಂಬಪಂಜರ ದ್ರಾವಿಡ ದೇವಾಲಯಗಳಲ್ಲಿ ಕಂಡುಬರುವ ವಿಶಿಷ್ಟ ಅಲಂಕರಣ. ಹಂಪೆಯ ದೇವಾಲಯಗಳಲ್ಲಿ ವಿವಿಧ ಬಗೆಯ ಕುಂಭಗಳನ್ನು ನೋಡಬಹುದು. ಕೆಲವು ಸಾದಾ ಇದ್ದರೆ ಕೆಲವು ಹೆಚ್ಚು ಅಲಂಕೃತವಾಗಿವೆ. ಈ ಕುಂಭಗಳ ಮೇಲ್ಭಾಗದಿಂದ ಅರ್ಧ ಕಂಬಗಳು ಉದ್ಭವಿಸಿ ಮೇಲಕ್ಕೆ ಹೋಗಿವೆ. ಅರ್ಧಕಂಬದ ತುದಿಯಲ್ಲಿ ಎಲೆಗಳ ಗೊಂಚಲನ್ನು ಬಿಡಿಸಲಾಗಿದೆ. ಹಿಂದೂ ದೇವಾಲಯಗಳ ಆರಂಭ ಕಾಲದಲ್ಲಿ ಕಂಬವು ಲಕ್ಷ್ಮೀ ಅಥವಾ ಸಿರಿ ಸಂಪದದ ಚಿನ್ಹೆಯಾಗಿತ್ತು. ಬರು ಬರುತ್ತ ಅದು ಒಂದು ಅಲಂಕಾರವಾಗಿ ಪರಿಣಮಿಸಿತು. ವಿಜಯನಗರ ಕಾಲದ ದೇವಾಲಯಗಳಲ್ಲಿ ಇದನ್ನು ಹೆಚ್ಚಾಗಿ ಗೋಡೆಗಳ ಅಲಂಕರಣೆಗೆ ಉಪಯೋಗಿಸಲಾಗಿದೆ.

ಗೋಡೆಗಳು

ಗೋಡೆಗಳ ಅಲಂಕಾರದಲ್ಲಿ ಮೂರ್ತಿಶಿಲ್ಪಗಳನ್ನು ಕೂಡ ಕೆತ್ತಿರುವದು ಕಂಡು ಬರುತ್ತದೆ. ಈ ಶಿಲ್ಪಗಳು ಪುರಾಣಗಳ ಮತ್ತು ಮಹಾಕಾವ್ಯಗಳಲ್ಲಿ ಬರುವ ಪ್ರಸಂಗಗಳನ್ನು ಪ್ರತಿನಿಧಿಸುತ್ತವೆ. ವಿರೂಪಾಕ್ಷ ದೇವಾಲಯದ ಹೊರಗೋಡೆಗಳ ಮೇಲೆ ಶಿವ ಪಾರ್ವತಿ, ಭಕ್ತ ಸಿರಿಯಾಳ ಮುಂತಾದ ಶೈವರಿಗೆ ಸಂಬಂಧಿಸಿದ ಮೂರ್ತಿಗಳಿದ್ದರೆ ಹಜಾರರಾಮ ದೇವಾಲಯದ ಹೊರಗೋಡೆಗಳ ಮೇಲೆ ರಾಮಾಯಣಕ್ಕೆ ಸಂಬಂಧಿಸಿದ ದೃಶ್ಯಗಳಿವೆ. ಅದೇ ರೀತಿ ವಿಜಯ ವಿಠಲ ದೇವಾಲಯದ ಸಂಕೀರ್ಣದ ಹೊರಭಾಗದಲ್ಲಿರುವ ಹಳೆಯ ಶಿವ ದೇವಾಲಯದ (ಇದೊಂದು ವೈಷ್ಣವ ದೇವಾಲಯ) ದ್ವಾರಮಂಟಪದ ಹೊರಗೋಡೆಗಳ ಮೇಲೆ ರಾಮಾಯಣದ ಸನ್ನಿವೇಶಗಳನ್ನು ಕೆತ್ತಲಾಗಿದೆ. ಜಿಲ್ಲೆಯ ದೇವಾಲಯಗಳ ಭಿತ್ತಿಗಳಲ್ಲಿ ಶಿಲ್ಪಗಳು ಕಂಡುಬರುವುದಿಲ್ಲ.

ಕಂಬಗಳು

ಹಂಪೆ ವಿಜಯನಗರದ ದೇವಾಲಯಗಳಲ್ಲಿ ಮುಖ್ಯವಾಗಿ ಎರಡು ವಿಧದ ಕಂಬಗಳನ್ನು ನೋಡಬಹುದು. ಚಿಕ್ಕ ದೇವಾಲಯಗಳಲ್ಲಿ ಮತ್ತು ದೊಡ್ಡ ದೇವಾಲಯಗಳ ನವರಂಗಗಳಲ್ಲಿ ಒಂದು ಪ್ರಕಾರದ ಕಂಬಗಳಿವೆ. ಇಂತಹ ಕಂಬಗಳು ಉದಾಹರಣೆಗೆ ಕಡಲೇಕಾಳು ಗಣೇಶನ ದೇವಾಲಯದ ಮಂಟಪದಲ್ಲಿವೆ. ಇವುಗಳ ಕಾಂಡಭಾಗದಲ್ಲಿ ಮೂರು ಚಚ್ಚೌಕ ಭಾಗಗಳಿದ್ದು ಪ್ರತಿಯೊಂದರ ಮಧ್ಯೆ ಎಂಟು, ಹದಿನಾರು ಮುಖದ ಭಾಗಗಳಿವೆ. ಈ ಕಂಬಗಳ ಕೆಳಗಿನ ಚಚ್ಚೌಕ ಭಾಗದ ಮೇಲ್ಭಾಗದಲ್ಲಿ ನಾಗಬಂಧಗಳಿವೆ. ಈ ನಾಗಬಂಧಗಳು ದ್ರಾವಿಡ ಶೈಲಿಯ ಪ್ರಭಾವವನ್ನು ಸೂಚಿಸುತ್ತವೆ. ಮೂರು ಚಚ್ಚೌಕದ ನಾಲ್ಕೂ ಮುಖಗಳಲ್ಲಿ ಮೂರ್ತಿ ಶಿಲ್ಪಗಳಿವೆ. ಕೆಲವು ದೇವಾಲಯಗಳಲ್ಲಿ ಇಂತಹ ಕಂಬಗಳಲ್ಲಿ ಚಚ್ಚೌಕದ ಭಾಗದಲ್ಲಿ ಯಾವುದೇ ಮೂತಿಗಳಿಲ್ಲದಿರುವ ಉದಾಹರಣೆಗಳೂ ಉಂಟು. ಸಾಮಾನ್ಯವಾಗಿ ಈ ಭಾಗದಲ್ಲಿ ಕಂಡು ಬರುವ ಮೂರ್ತಿ ಶಿಲ್ಪಗಳೆಂದರೆ ಕಾಲಿಂಗ ಮರ್ದನ, ಕೃಷ್ಣ, ಬಾಲಕೃಷ್ಣ, ಬೇಡರ ಕಣ್ಣಪ್ಪ, ವಿಷ್ಣುವಿನ ದಶಾವತಾರಗಳು, ಶಿವಲಿಂಗ, ಗರುಡ, ಹನುಮಂತ, ನರಸಿಂಹ, ಕೋಲಾಟ ಆಡುವವರು, ಮುದ್ದಳೆ ಬಾರಿಸುತ್ತಿರುವವರು ಮತ್ತು ನೃತ್ಯಗಾರರು. ಕಂಬದ ಮೇಲ್ಭಾಗದಲ್ಲಿ ಪುಷ್ಪಬೋದುಗೆ ಇರುತ್ತದೆ.

ಎರಡನೆಯ ಪ್ರಕಾರದ ಕಂಬಗಳು ವಿನ್ಯಾಸದಲ್ಲಿ ಕೆತ್ತನೆಯಲ್ಲಿ ರೂವಾರಿಯ ನೈಪುಣ್ಯತೆಗೆ ಸಾಕ್ಷಿಯಾಗಿವೆ. ಈ ಕಂಬಗಳು ಗಾತ್ರದಲ್ಲಿ ದೊಡ್ಡವು. ಕಂಬವನ್ನು ನೇರವಾಗಿ ಎರಡು ಭಾಗಗಳಾಗಿ ವಿಂಗಡಿಸಿ ಮೊದಲನೆಯ ಭಾಗದಲ್ಲಿ ಚಚ್ಚೌಕ ಪ್ರಧಾನವಾದ, ಮೇಲೆ ಹೇಳಿರುವ ಕಂಬಗಳ ವಿನ್ಯಾಸವಿದ್ದು ಇನ್ನೊಂದು ನೇರ ಭಾಗವನ್ನು ಕಾಲೆತ್ತಿ ನಿಂತ ಯಾಳಿಯಾಕಾರವಾಗಿಯೂ, ಕುದುರೆಯಾಕಾರವಾಗಿಯೂ, ಸಿಂಹದಾಕಾರವಾಗಿಯೂ ಕೆತ್ತಿರುತ್ತಾರೆ. ಕೆಲವು ಸಲ ಈ ರೀತಿ ಹಿಂಗಾಲ ಮೇಲೆ ನಿಂತ ಪ್ರಾಣಿಗಳ ಬದಲು ಚಿಕ್ಕ ಚಿಕ್ಕ ಪ್ರಮಾಣದ ಎರಡು, ನಾಲ್ಕು, ಎಂಟು, ಉಪ ಕಂಬಗಳನ್ನು ಕೆತ್ತಿರುತ್ತಾರೆ. ವಿಜಯ ವಿಠಲ ದೇವಾಲಯದ ಮುಖಮಂಟಪದಲ್ಲಿ ಇಂತಹ

ಉಪಕಂಬಗಳನ್ನು ಕಾಣಬಹುದು. ಆದರೆ ಇಲ್ಲಿ ಕಂಬಗಳನ್ನು ಕುಳಿತ ಸಿಂಹಗಳು ಹೊತ್ತು ನಿಂತಿವೆ. ಇವನ್ನು ಕೆಲವು ಸಲ ಸಂಗೀತ ಕಂಬಗಳೆಂದು ಕರೆಯುವ ವಾಡಿಕೆ ಇದೆ. ಈ ಕಂಬಗಳಿಗೂ ಪುಷ್ಪಬೋದುಗೆ ಇದೆ. ಇಂತಹ ಕಂಬಗಳು ನಿಸ್ಸಂಶಯವಾಗಿ ದ್ರಾವಿಡ ದೇವಾಲಯಗಳ ಕಂಬಗಳಿಂದ ಪ್ರಭಾವಿತವಾಗಿವೆ. ಪಲ್ಲವರ ಕಾಲದಿಂದಲೂ ಕಾಲೆತ್ತಿನಿಂತ ಸಿಂಹಗಳನ್ನೊಳಗೊಂಡ ಕಂಬಗಳು ರೂಢಿಯಲ್ಲಿದ್ದವು. ಮುಂದೆ ಚೋಳ, ಪಾಂಡ್ಯರ ಕಾಲದಲ್ಲಿ ಈ ಕಂಬಗಳ ವಿನ್ಯಾಸದಲ್ಲಿ ಬದಲಾವಣೆ ಮತ್ತು ಪ್ರಗತಿಯುಂಟಾಗಿ ಕೊನೆಗೆ ವಿಜಯನಗರ ಕಾಲದಲ್ಲಿ ಈ ಬಲಾವಣೆಯ ತುತ್ತ ತುದಿಯನ್ನು ಕಾಣುತ್ತೇವೆ. ಅದಕ್ಕಾಗಿಯೇ ಪರ್ಸಿ ಬ್ರೌನರು ವಿಜಯನಗರದ ದೇವಾಲಯಗಳಲ್ಲಿ ದ್ರಾವಿಡ ಶೈಲಿಯ ಪರಕಾಷ್ಠೆಯನ್ನು ಕಾಣಬಹುದೆಂದು ಹೇಳುತ್ತಾರೆ. ಜಿಲ್ಲೆಯ ಕನಕಗಿರಿ ಕನಕಾಚಲ ಲಕ್ಷ್ಮೀನರಸಿಂಹ, ಹಿರೇಜಂತಗಲ್ಲಿನ ಪ್ರಸನ್ನ ವಿರೂಪಾಕ್ಷೇಶ್ವರ ತಾವರಗೆರೆಯ ಶಿವಲಿಂಗನ ಗುಡಿಗಳಲ್ಲಿ ಸಂಯುಕ್ತ ಕಂಬಗಳಿದ್ದು ಗಮನ ಸೆಳೆಯುತ್ತವೆ. ಉಳಿದಂತೆ ಮೊದಲ ರೀತಿಯ ಕಂಬಗಳು ಹೆಚ್ಚಿನ ದೇವಾಲಯಗಳಲ್ಲಿವೆ.

ಮುಂಜೂರು

ವಿಜಯನಗರ ಕಾಲದ ದೇವಾಲಯಗಳಲ್ಲಿಯ ಮುಂಜೂರು ಹೆಚ್ಚು ಮುಂದೆ ಬಂದಿರುವುದಲ್ಲದೇ ಹೆಚ್ಚಾಗಿ ಬಾಗಿರುತ್ತದೆ. ಮುಂಜೂರಿನ ಹೊರಭಾಗದಲ್ಲಿ ಎಲೆ ಗೊಂಚಲಿನ ಕೆತ್ತನೆ ಸಾಮಾನ್ಯ. ಮುಂಜೂರಿನ ಒಳಭಾಗದಲ್ಲಿ ಉದ್ದಗಲ ಪಟ್ಟಿಗಳ ಜಂತೆಗಳ ವಿನ್ಯಾಸವನ್ನು ಕಾಣಬಹುದು. ವಿಠ್ಠಲ ದೇವಾಲಯದ ಮುಖಮಂಟಪದ ಮುಂಜೂರಿನ ಕೋನಗಳಲ್ಲಿ ಕೆಳಭಾಗದಲ್ಲಿ ಹಿಡಿಕೆಗಳನ್ನು ಕೆತ್ತಿದ್ದರೆ ಮೇಲ್ಭಾಗದಲ್ಲಿ ಕೊಕ್ಕೆಗಳನ್ನು ಕಟೆದಿದ್ದಾರೆ. ಕೊಪ್ಪಳ ಜಿಲ್ಲೆಯ ಗಂಗಾವತಿಯ ಹಿರೇಜಂತಗಲ್ಲ ಪ್ರಸನ್ನ ವಿರೂಪಾಕ್ಷ ದೇವಾಲಯದ ಮುಖಮುಂಟಪದಲ್ಲಿ ಸುಂದರವಾದ ಅರೆ ವೃತ್ತಾಕಾರದಲ್ಲಿ ಮುಂಭಾಗಿದ ಮುಂಜೂರು ಇದೆ.

ಭುವನೇಶ್ವರಿ

ವಿಜಯನಗರ ಕಾಲದ ದೇವಾಲಯಗಳಲ್ಲಿ ಭುವನೇಶ್ವರಿ ಹೆಚ್ಚು ಅಲಂಕೃತವಾಗಿರದೇ ಚಪ್ಪಟೆಯಾಗಿರುತ್ತದೆ. ನವರಂಗ ಮತ್ತು ಮುಖಮಂಟಪದ ಮಧ್ಯದ ಭುವನೇಶ್ವರಿ ಸಾಮಾನ್ಯವಾಗಿ ಹೆಚ್ಚು ಅಲಂಕೃತವಾಗಿರುತ್ತದೆ. ಹೂಗೊಂಚಲುಗಳನ್ನು, ಪದ್ಮಗಳನ್ನು, ಹಂಸಗಳನ್ನು, ಕೋಲಾಟವಾಡುವವರ ಶಿಲ್ಪಗಳನ್ನು ಇಲ್ಲಿ ಕಾಣಬಹುದು. ವಿರೂಪಾಕ್ಷ ದೇವಾಲಯದ ರಂಗಮಂಟಪದಲ್ಲಿಯ ಮಧ್ಯದ ಭುವನೇಶ್ವರಿ ವಿಶಾಲವೂ ಮತ್ತು ಚಪ್ಪಟೆಯಾಗಿದ್ದು ಇಲ್ಲಿ ತ್ರಿಪುರಸಂಹಾರ, ಮನ್ಮಥ ವಿಜಯ, ಗಿರಿಜಾ ಕಲ್ಯಾಣ ಮುಂತಾದ ಪ್ರಸಂಗಗಳಿಗೆ ಸಂಬಂಧಿಸಿದ ದೃಶ್ಯಗಳನ್ನು ವರ್ಣಚಿತ್ರಗಳಲ್ಲಿ ಬರೆದಿದ್ದಾರೆ. ತಾವರಗೆರೆಯ ಶಿವಲಿಂಗದ ಗುಡಿಯ ಭುವನೇಶ್ವರಿಯಲ್ಲಿ ಕೋಲಾಟವಾಡುವವರ ಶಿಲ್ಪಗಳಿವೆ.

ಸೋಪಾನಗಳು

ದೇವಾಲಯಗಳನ್ನು ಎತ್ತರವಾದ ಅಧಿಷ್ಠಾನದ ಮೇಲೆ ಕಟ್ಟಿರುವದರಿಂದ ಭಕ್ತರು ಮೇಲೆ ಏರಲು ಸೋಪಾನ ರಚಿಸಿರುವದು ಇನ್ನೊಂದು ಲಕ್ಷಣ. ಈ ಸೋಪಾನಗಳನ್ನು ನವರಂಗ ಪಕ್ಕದ

ಪ್ರವೇಶ ಮಂಟಪಗಳಿಗೆ ಅಥವಾ ಮುಖಮಂಟಪಗಳಿಗೆ ಅಳವಡಿಸಿದ್ದಾರೆ. ಈ ಸೋಪಾನಗಳ ಎರಡು ಬದಿಗೆ ಆನೆಗಳು ಇಲ್ಲವೇ ಸುರುಳ್ ಯಾಳಿಗಳ ಶಿಲ್ಪಗಳನ್ನು ನಿಲ್ಲಿಸಿರುವದು ಸಾಮಾನ್ಯ. ತಾವರಗೆರೆಯ ವೀರಭದ್ರ ದೇವಾಲಯದಲ್ಲಿ ಇಂತಹ ಆನೆಗಳಿಂದ ಬಂಧಿತ ಸೋಪಾನಗಳನ್ನು ಕಾಣಬಹುದು. ವಿರೂಪಾಕ್ಷ, ವಿಠಲ ಮತ್ತು ಬಾಲಕೃಷ್ಣ ದೇವಾಲಯಗಳಲ್ಲಿ ಸುರುಳಿ ಯಾಳಿಗಳನ್ನೊಳಗೊಂಡ ಸೋಪಾನಗಳಿವೆ.

ಶಿಖರಗಳು

ವಿಜಯನಗರ ಕಾಲದ ದೇವಾಲಯಗಳಲ್ಲಿಯ ಶಿಖರಕ್ಕೆ ಅಷ್ಟೇನೂ ಪ್ರಾಮುಖ್ಯವಿಲ್ಲ. ಇದು ಅಷ್ಟೇನು ಸುವ್ಯಕ್ತವಲ್ಲದ ಭಾಗವಾಗಿ ಪರಿಗಣಿತವಾಗಿದೆ. ಇದು ಎತ್ತರದಲ್ಲಿ ಕಡಿಮೆ. ಗರ್ಭಗೃಹದ ಮೇಲೆ ದ್ರಾವಿಡ ಶಿಖರವನ್ನು ಕಟ್ಟುವದು ಹೆಚ್ಚಾಗಿ ಬಳಕೆಯಲ್ಲಿತ್ತು. ಶಿಖರದ ಮೇಲ್ಭಾಗದಲ್ಲಿ ವೃತ್ತಾಕಾರದ ಇಲ್ಲವೇ ಅಷ್ಟಕೋನಾಕಾರದ ಸ್ತೂಪಿ ಇದ್ದು ಅದರ ಮೇಲ್ಭಾಗದಲ್ಲಿ ಕಳಶವನ್ನಿಡಲಾಗುತ್ತಿತ್ತು. ಈ ಶಿಖರಗಳು ಶಾಲ, ಕೂಟ ಮತ್ತು ಕರ್ಣಕೂಟಗಳಿಂದ ಕೂಡಿವೆ. ಹಜಾರರಾಮ ದೇವಾಲಯದ ದ್ರಾವಿಡ ಶಿಖರ ಹಂಪೆಯಲ್ಲಿರುವ ವಿಜಯನಗರದ ದೇವಾಲಯಗಳಲ್ಲಿ ಅತ್ಯಂತ ಹಳೆಯ ದ್ರಾವಿಡ ಶಿಖರವೆಂದೇ ಹೇಳಬಹುದು. ಕನಕಗಿರಿಯ ದೇವಾಲಯಗಳಲ್ಲಿ ಏಕತಲದ ದ್ರಾವಿಡ ವಿಮಾನ ಮಾದರಿಯ ಶಿಖರಗಳನ್ನು ನೋಡಬಹುದು. ಹಿರೇಜಂತಗಲ ದೇವಾಲಯದಲ್ಲೂ ಈ ರೀತಿ ಇದೆ. ಹಿರೇಜಂತಗಲ ಪಂಪಾಂಬಿಕೆ ಗರ್ಭಗೃಹದ ಮೇಲೆ ಕನಕಗಿರಿ ಬಳಿಯ ಹನುಮನಾಳಿನ ಉಡುಚಲಮ್ಮ ದೇವಾಲಯಗಳು ಶಾಲಮಾದರಿಯ ಶಿಖರವನ್ನು ಹೊಂದಿರುವುದು ಗಮನಾರ್ಹ ಸಂಗತಿಯಾಗಿದೆ.

ಪ್ರಾಕಾರಗೋಡೆ

ದೊಡ್ಡ ಪ್ರಮಾಣದಲ್ಲಿ ಕಟ್ಟಿದ ದೇವಾಲಯಗಳು ಸಾಮಾನ್ಯವಾಗಿ ವಿಶಾಲವಾದ ಪ್ರಾಕಾರಗಳನ್ನೊಳಗೊಂಡಿರುತ್ತವೆ. ಪ್ರಾಕಾರ ಗೋಡೆಗಳಿಗೆ ಹೊಂದಿಕೊಂಡು ಮಂಟಪಗಳು ಪ್ರವೇಶ ದ್ವಾರಗಳು ಇರುತ್ತವೆ. ಹಜಾರರಾಮ ದೇವಾಲಯದ ಪ್ರಾಕಾರದ ಗೋಡೆಯ ಹೊರ ಮತ್ತು ಒಳಭಾಗಗಳ ಮೇಲೆ ಮೂರ್ತಿ ಶಿಲ್ಪಗಳಿವೆ. ಒಳಗೋಡೆಯಲ್ಲಿ ರಾಮಾಯಣಕ್ಕೆ ಸಂಬಂಧಿಸಿದ ದೃಶ್ಯಗಳನ್ನು ಕೆತ್ತಿದ್ದಾರೆ. ಹೊರಭಾಗದಲ್ಲಿ ಆನೆ, ಕುದುರೆ, ಒಂಟೆ ಮುಂತಾದ ಪ್ರಾಣಿಗಳ ಸಾಲು ಚಿತ್ರಗಳಿವೆ. ಶ್ರೀಶೈಲದ ಮಲ್ಲಿಕಾರ್ಜುನ ದೇವಾಲಯದ ಪ್ರಾಕಾರದ ಗೋಡೆಗಳ ಮೇಲೆಯೂ ಸಾಲು ಶಿಲ್ಪಗಳಿವೆ. ಇಲ್ಲಿಯೂ ಆನೆ ಕುದುರೆಗಳ ಸಾಲುಗಳು, ಬೇಟೆಯ ದೃಶ್ಯಗಳು, ರತಿ ಮನಥ, ಗಜೇಂದ್ರ ಮೋಕ್ಷ, ಸಿಬಿ ಚಕ್ರವರ್ತಿಯ ಕಥೆ, ಗಿರಿಜಾ ಕಲ್ಯಾಣ ತ್ರಿಪುರ ಸಂಹಾರ, ಕಣ್ಣಪ್ಪ, ನಾಯನಾರ್, ರಾವಣನು ಶಿವನಿಗೆ ಶಿರಗಳನ್ನು ಅರ್ಪಿಸುತ್ತಿರುವ ದೃಶ್ಯ ಮುಂತಾದ ಶಿಲ್ಪಗಳಿವೆ. ಜಿಲ್ಲೆಯ ಕನಕಗಿರಿ ಕನಕಾಚಲಪತಿ ದೇವಾಲಯ, ಹಿರೇಜಂತಗಲ್ಲಿನ ಪ್ರಸನ್ನ ವಿರುಪಾಕ್ಷ, ಆನೆಗೊಂದಿಯ ರಂಗನಾಥ ದೇವಾಲಯಗಳು ಮಾತ್ರ ಪ್ರಾಕಾರಗೋಡೆಯನ್ನು ಹೊಂದಿವೆ. ಅದರಲ್ಲೂ ಕನಕಗಿರಿಯಲ್ಲಿ

ಮಾತ್ರ ಪರಿಪೂರ್ಣ ಪ್ರಾಕಾರಗೋಡೆ ನಿರ್ಮಾಣವಾಗಿದೆ. ಅದಕ್ಕೆ ಒಳಭಾಗದಲ್ಲಿ ನಾಲ್ಕು ಕಡೆಗಳಂತೆ ಹೊರಭಾಗದಲ್ಲಿ ದಕ್ಷಿಣ ಬದಿಗೆ ಕಂಬಗಳ ಮಂಟಪವನ್ನು ಹೊಂದಿರುವುದು ವಿಶೇಷವಾಗಿದೆ.

ದ್ವಾರ ಮಂಟಪಗಳು

ಹಂಪೆಯ ಮತ್ತು ಇತರ ಕಡೆ ಇರುವ ವಿಜಯನಗರ ಕಾಲದ ದೇವಾಲಯಗಳಲ್ಲಿ ದ್ವಾರ ಮಂಟಪಗಳ ಮೇಲೆ ಕಟ್ಟಿರುವ ಗೋಪುರಗಳು ವಿಶಿಷ್ಟ ಸ್ಥಾನ ಪಡೆದಿವೆ. ದ್ವಾರಮಂಟಪಗಳು ಶಿಲಾ ನಿರ್ಮಿತವಾಗಿದ್ದರೆ ಗೋಪುರಗಳು ಇಟ್ಟಿಗೆ, ಗಾರೆಗಳಿಂದ ಕಟ್ಟಲ್ಪಟ್ಟಿವೆ. ದ್ವಾರ ಮಂಟಪಗಳು ಸಾಕಷ್ಟು ವಿಶಾಲವಾಗಿದ್ದು ಎರಡು ಬದಿಗಳಲ್ಲಿ ಸುಂದರವಾಗಿ ಕಂಡರಿಸಿರುವ ಗಂಗೆ ಯಮುನೆಯರ ಮೂರ್ತಿಗಳನ್ನಾಗಲಿ ಇಲ್ಲವೇ ಅಪ್ಸರೆಯರ ಮೂರ್ತಿಗಳನ್ನಾಗಲಿ ಹೊಂದಿರುತ್ತವೆ. ಕನಕಗಿರಿಯ ಕನಕಾಚಲ ಲಕ್ಷ್ಮೀನರಸಿಂಹ ದೇವಾಲಯದಲ್ಲಿ ಪೂರ್ವ, ಉತ್ತರ ಹಾಗೂ ದಕ್ಷಿಣ ಬದಿಗೆ ಒಟ್ಟು ಮೂರು ದ್ವಾರಮಂಟಪಗಳಿವೆ. ಈ ಪ್ರಧಾನ ದ್ವಾರಮಂಟಪದಲ್ಲಿ ಎತ್ತರವಾದ ದ್ವಾರಪಾಲರ ಶಿಲ್ಪಗಳು ಛತ್ತಿನಲ್ಲಿ ಚಿತ್ರಕಲೆ ಇದೆ. ಹಿರೇಜಂತಗಲ್ಲಿನ ಪ್ರಸನ್ನ ವಿರೂಪಾಕ್ಷ ದೇವಾಲಯಕ್ಕೆ ಹಾಗೂ ಆನೆಗೊಂದಿಯ ರಂಗನಾಥ ದೇವಾಲಯಕ್ಕೆ ಎರಡು ದ್ವಾರಮಂಟಪಗಳಿವೆ. ಕುಕನೂರಿನ ಮಹಾಮಾಯಾ ದೇವಾಲಯದಲ್ಲಿ ಬೃಹತ್ ಪ್ರಮಾಣದ ದ್ವಾರಮಂಟಪವಿರುವುದು ಗಮನಾರ್ಹ ಸಂಗತಿಯಾಗಿದೆ.

ಗೋಪುರಗಳು

ವಿಜಯನಗರ ಪೂರ್ವ ನಿರ್ಮಿತ ಗೋಪುರಗಳು ಅಷ್ಟೇನು ಎತ್ತರವಾಗಿಲ್ಲ ಆದರೆ ವಿಜಯನಗರ ಅರಸರ, ಅದರಲ್ಲೂ ತುಳುವ ವಂಶದ ಅರಸರ ಕಾಲದಲ್ಲಿ ಬೃಹದಾಕಾರದ ಗೋಪುರಗಳ ನಿರ್ಮಾಣವಾಯಿತು. ಇಂತಹ ಗೋಪುರಗಳಲ್ಲಿ ಕೆಲವು ಹನ್ನೊಂದು ಅಂತಸ್ತುಗಳ ಗೋಪುರಗಳಾಗಿವೆ. ತಿರುವಣ್ಣಾಮಲೈ, ಕುಂಭಕೋಣಂ, ಶ್ರೀರಂಗಂಗಳಲ್ಲಿಯ ದೇವಾಲಯಗಳಲ್ಲಿಯ ಗೋಪುರಗಳು ಮತ್ತು ವಿರೂಪಾಕ್ಷ ದೇವಾಲಯದ ಗೋಪುರ ಇವರ ಕಾಲದಲ್ಲಿ ನಿರ್ಮಿತ ಶ್ರೇಷ್ಠ ಗೋಪುರಗಳಲ್ಲಿ ಕೆಲವಾಗಿವೆ. ಹಂಪೆಯ ವಿಜಯ ವಿಠಲ, ಬಾಲಕೃಷ್ಣ ಮತ್ತು ಅಚ್ಯುತರಾಯನ ಗುಡಿಯ ಗೋಪುರಗಳು ಭಗ್ನವಾಗಿದ್ದು ಮೂಲತಃ ಅವು ಭವ್ಯವಾಗಿರಬೇಕು. ಬಾಲಕೃಷ್ಣ ದೇವಾಲಯದ ಮುಂಭಾಗದ ಗೋಪುರದಲ್ಲಿ ಕೃಷ್ಣ ದೇವರಾಯನ ಕಳಿಂಗ ದಿಗ್ವಿಜಯಕ್ಕೆ ಸಂಬಂಧಿಸಿದ ದೃಶ್ಯಗಳನ್ನು ಕಾಣಬಹುದು. ಕಾಮಲಾಪುರದ ಪಟ್ಟಾಭಿರಾಮ ದೇವಾಲಯದ ಗೋಪುರಗಳು ಶ್ರೇಷ್ಠಮಟ್ಟದ್ದಾಗಿವೆ. ತಿರುವಣ್ಣಾಮಲೈ ಗೋಪುರವನ್ನು ಕೃಷ್ಣದೇವರಾಯನು ನಿರ್ಮಿಸಿದನು. ಕನಕಗಿರಿ ಲಕ್ಷ್ಮೀನರಸಿಂಹ ದೇವಾಲಯದಲ್ಲಿ ಮೂರು ಬದಿಯ ದ್ವಾರಮಂಟಪಗಳ ಮೇಲೆ ಎತ್ತರವಾದ ಗೋಪುರಗಳಿವೆ. ಅವುಗಳ ಮೇಲೆ ಕೆಲವು ಗಾರೆಶಿಲ್ಪಗಳು ಕಂಡುಬರುತ್ತವೆ. ಕಲ್ಲೂರಿನ ಕಲ್ಲಿನಾಥೇಶ್ವರ ದೇವಾಲಯದ ಗೋಪುರವು ಸಾಕಷ್ಟು ಪ್ರಾದೇಶಿಕ ಶೈಲಿಯಿಂದ ಕೂಡಿದ್ದಾಗಿದೆ.

೩.೧ ಕೊಪ್ಪಳ ಜಿಲ್ಲೆಯ ದೇವಾಲಯಗಳು : ವಾಸ್ತು ವಿವರಣೆ

ಸ್ಮಾರಕ : ಚಂದ್ರಮೌಳೇಶ್ವರ ದೇವಾಲಯ

ಸ್ಥಳ : ಹನುಮನಹಳ್ಳಿ

ತಾಲೂಕು : ಗಂಗಾವತಿ

ಕಾಲಮಾನ : ಕ್ರಿ.ಶ. ೧೪ನೆಯ ಶತಮಾನ

ಹನುಮನಹಳ್ಳಿದಿಂದ ಒಂದು ಕಿ.ಮೀ. ದೂರದಲ್ಲಿರುವ ಋಷ್ಯಮುಕ ಪರ್ವತದಲ್ಲಿ ಈ ದೇವಾಲಯವಿದೆ. ಈ ದೇವಾಲಯದ ನಿರ್ಮಾಣ ಕಾಲವನ್ನು ಮಿಚೆಲ್ ೧೬ನೇ ಶತಮಾನ, ವ್ಯಾಗಿನೇರ್ ೧೫ನೇ ಶತಮಾನದ ಮಧ್ಯ ಭಾಗವೆಂದು, ಅನಿಲಾ ವರ್ಗಿಸ್ ಅವರು ಮಲ್ಲಿಕಾರ್ಜುನನ ಕಾಲ(ಕ್ರಿ.ಶ. ೧೪೪೬–೧೪೬೫)ರಲ್ಲಿ ಆಗಿರಬಹುದೆಂದು ಊಹಿಸಿದ್ದಾರೆ. ಆದರೆ ಚಂದ್ರಮೌಳೇಶ್ವರ ದೇವಾಲಯದ ಉಲ್ಲೇಖವಿರುವ ಎರಡು ತಾಮ್ರ ಶಾಸನಗಳ ಆಧಾರದ ಮೇಲೆ ಈ ದೇವಾಲಯವು ಕ್ರಿ.ಶ. ೧೪೨೪ ಕಿಂತ ಹಿಂದೆಯೇ ಇರುವ ಬಗ್ಗೆ ಮಾಹಿತಿ ಸಿಗುವುದರಿಂದ ಜಗದೀಶ ಅವರು ಇದು ೧೪ನೇ ಶತಮಾನಕ್ಕೆ ಸೇರಿದ ದೇವಾಲಯವೆಂದು ಅಭಿಪ್ರಾಯ ಪಡುತ್ತಾರೆ.

ಈ ದೇವಾಲಯವು ಗರ್ಭಗೃಹ, ಅಂತರಾಳ ಸಭಾಮಂಟಪಗಳಿಂದ ಕೂಡಿದೆ. ಗರ್ಭಗೃಹದಲ್ಲಿ ಚಂದ್ರಮೌಳೇಶ್ವರ ಲಿಂಗವಿದೆ. ಸಭಾಮಂಟಪದ ಮುಂಭಾಗದಲ್ಲಿ ಪ್ರವೇಶವಿರದೆ ಉತ್ತರ ಮತ್ತು ದಕ್ಷಿಣ ದಿಕ್ಕಿಗೆ ಇರುವುದು ಇಲ್ಲಿಯ ಸಭಾಮಂಟಪದ ಕಂಬಗಳು ಬೃಹತ ಗಾತ್ರದಿಂದ ಕೂಡಿದ್ದು. ಈ ಕಂಬಗಳಲ್ಲಿ ಹೂ, ಬಳ್ಳಿ, ನಂದಿ ಶಿಲ್ಪಗಳಿವೆ. ಇವು ಪೀಠ, ೪–೮–೪ ಪಟ್ಟಿಕೆಗಳ ಕಾಂಡ, ಕಳಶ, ಫಲಕ ಹಾಗೂ ಪುಷ್ಪ ಬೋದಿಗೆಗಳನ್ನು ಹೊಂದಿದೆ. ದಕ್ಷಿಣ ಬಾಗಿಲ ಮುಂದೆ ಪ್ರಾಯಶಃ ಮುಖ ಮಂಟಪವಿದ್ದಂತೆ ತೋರುತ್ತದೆ. ಆದರೆ ಈ ಭಾಗ ಸಂಪೂರ್ಣ ನೆಲ ಕಚ್ಚಿದೆ. ಮುಖಮಂಟಪದ ಕಂಬಗಳಲ್ಲಿ ಗಣೇಶ, ಶಿವಲಿಂಗಕ್ಕೆ ಹಾಲು ಕರಿಯುತ್ತಿರುವ ಹಸು, ಋಷಿ, ನೃತ್ಯ ಮಾಡುತ್ತಿರುವ ಸ್ತ್ರೀ, ಹುಲಿಯ ಜೋತೆ ಬೇಟೆ ಮಾಡುತ್ತಿರುವ ಮನುಷ್ಯ, ವಾದ್ಯಗಳನ್ನು ನುಡಿಸುತ್ತಿರುವ ವಾದ್ಯಕಾರರು, ನಿಂತಿರುವ ಆನೆ, ಚಲಿಸುತ್ತಿರುವ ಆನೆ, ಮನುಷ್ಯನನ್ನು ತುಳಿಯುತ್ತಿರುವ ಆನೆ, ಕಬ್ಬು ತಿನ್ನುತಿರುವ ಆನೆ, ಮುಂತಾದ ಉಬ್ಬು ಶಿಲ್ಪಗಳಿವೆ.

ಈ ದೇವಾಲಯದ ಉತ್ತರದ ಪ್ರವೇಶದ್ವಾರಕ್ಕೆ ಶೈವ ದ್ವಾರಪಾಲಕರು ಇದ್ದು, ಈ ದ್ವಾರಬಾಗಿಲು ದ್ವಾರಶಾಖೆಗಳನ್ನು ಹೊಂದಿದೆ. ದೇವಾಲಯದ ಅಧಿಷ್ಠಾನದಲ್ಲಿ ಉಪಾನ, ಕುಮುದ, ಕಪೋತಗಳ ಸ್ಪಷ್ಟವಾಗಿ ಗೋಚರಿಸುತ್ತದೆ. ಭಿತ್ತಿಯು ವಿಜಯನಗರದ ಆರಂಭಿಕ ದೇವಾಲಯಗಳಂತೆ ಇದೆ. ಭಿತ್ತಿಯಲ್ಲಿ ಎರಡು ಕಂಬಗಳ ಮಧ್ಯ ದೇವಕೋಷ್ಠಕಗಳು, ಕುಂಬ ಪಂಜರಗಳನ್ನು ಕೆತ್ತಲಾಗಿದೆ. ಸೂಕ್ಷ್ಮ ಕೆತ್ತನೆಯಿಂದ ಕೂಡಿದ ಕುಂಬ ಪಂಜರಗಳು ಕಪೋತದವರೆಗೂ ಮುಂಚಾಚಿವೆ. ಕಪೋತದಲ್ಲಿ ಗೂಡು ಮತ್ತು ಕೀರ್ತಿಮುಖಗಳ ಅಲಂಕರಣೆಗಳಿವೆ. ದೇವಾಲಯದ ಪೂರ್ವಕ್ಕೆ ಜಾಲಂದ್ರವಿದೆ. ಗರ್ಭಗೃಹದ ಮೇಲೆ ಶಿಥಿಲವಾಗಿರುವ ದ್ರಾವಿಡ ಮಾದರಿಯ ಶಿಖರವಿದೆ. ಅದನ್ನು ಇಟ್ಟಿಗೆ, ಗಾರೆಯಿಂದ ನಿರ್ಮಿಸಲಾಗಿದೆ.

ಸ್ಮಾರಕ : ರಂಗನಾಥ

ಸ್ಥಳ : ಆನೆಗೊಂದಿ

ತಾಲೂಕು : ಗಂಗಾವತಿ

ಕಾಲಮಾನ : ೧೪ನೆಯ ಶತಮಾನ

ರಂಗನಾಥ ದೇವಾಲಯವು ಗ್ರಾಮದ ಮಧ್ಯದಲ್ಲಿದೆ. ಗರ್ಭಗೃಹ, ಅಂತರಾಳ, ಸಭಾಮಂಟಪ, ರಂಗಮಂಟಪ, ಮಹಾದ್ವಾರ, ಗರುಡನ ಗುಡಿ, ಧ್ವಜಕಟ್ಟೆಯನ್ನು ಹೊಂದಿದೆ. ಗರ್ಭಗೃಹವು ವಿಜಯನಗರ ಪೂರ್ವದ್ದಾಗಿದ್ದು, ವಿಜಯನಗರ ಕಾಲದಲ್ಲಿ ಜೀರ್ಣೋದ್ಧಾರಗೊಂಡಿದೆ. ಸುತ್ತಲೂ ಪ್ರಾಕಾರ ಮಂಟಪ, ಅವುಗಳಲ್ಲಿ ಕಲ್ಯಾಣ ಮಂಟಪಗಳನ್ನು ಹೊಂದಿದೆ. ಮಹಾದ್ವಾರ ಮಂಟಪವು ಉಪಾನ, ಕುಮುದ, ಕಪೋತಗಳ ಅಧಿಷ್ಠಾನವನ್ನು ಹೊಂದಿದೆ. ಭಿತ್ತಿಯಲ್ಲಿ ಕುಂಬಪಂಜರಗಳ ಮಾಡಿನಲ್ಲಿ ಕೀರ್ತಿಮುಖಗಳ ಅಲಂಕರಣೆಗಳಿವೆ. ಈ ಮಂಟಪಕ್ಕೆ ಗೋಪುರವಿಲ್ಲ. ಮಹಾಮಂಟಪ ಅಥವಾ ರಂಗಮಂಟಪದ ಪ್ರವೇಶಕ್ಕೆ ಸೋಪಾನಗಳು, ಬದಿಗೆ ಆನೆ ಕೈಪಿಡಿಗಳಿವೆ. ಮಹಾಮಂಟಪವು ತೆರೆದಿದ್ದು, ಹನ್ನೆರಡು ಅಂಕಣಗಳನ್ನು ಹೊಂದಿದೆ. ಇಲ್ಲಿ ಎರಡು ಸಾಲಿನಲ್ಲಿ ಎಂಟು ಕಂಬಗಳಿವೆ. ಕಂಬಗಳು ೪–೮–೪ ಮುಖಗಳ ಕಾಂಡಭಾಗ ಪದ್ಮ, ಕಂಠ, ಫಲಕ, ಬೋದಿಗೆಗಳನ್ನು ಹೊಂದಿವೆ. ಛತ್ತು ಸರಳವಾಗಿದೆ. ಬಾಗಿಲು ಕೂಡಾ ಸರಳವಾಗಿದೆ. ಸಭಾಮಂಟಪವು ಒಂಬತ್ತು ಅಂಕಣಗಳನ್ನು, ಮಧ್ಯದಲ್ಲಿ ನಾಲ್ಕು ಕಂಬಗಳನ್ನು ಹೊಂದಿದೆ. ಈ ಕಂಬಗಳು ಮಹಾಮಂಟಪದ ಕಂಭಗಳ ಶೈಲಿಯಲ್ಲಿವೆ. ಅಂತರಾಳ, ಗರ್ಭಗೃಹಗಳು ಸರಳವಾಗಿವೆ. ಗರ್ಭಗೃಹದಲ್ಲಿ ಅನಂತಶಯನ ಮೂರ್ತಿ ಇದೆ. ಗರ್ಭಗೃಹದ ಮೇಲೆ ಶಿಖರವಿಲ್ಲ. ಅಂತರಾಳದ ಉತ್ತರ ದಿಕ್ಕಿಗೆ ಮತ್ತೊಂದು ಪ್ರವೇಶ ದ್ವಾರವಿದೆ.

ಪ್ರಾಕಾರದಲ್ಲಿ ವಿಜಯನಗರದ ವಿಶಿಷ್ಟ ಶೈಲಿಯ ಕಂಬಗಳಿವೆ. ಪ್ರಾಕಾರದ ಮುಂಭಾಗದ ಎರಡೂ ಮೂಲೆಗಳಲ್ಲಿ ಕಲ್ಯಾಣ ಮಂಟಪ, ಉತ್ಸವ ಮಂಟಪಗಳಿವೆ. ಬಲಬದಿಯ ಮಂಟಪ ಶಿಥಿಲವಾಗಿದೆ. ದ್ವಾರಮಂಟಪದ ಹಿಂದೆ ದ್ವೀಪಸ್ತಂಭ, ಮುಂಭಾಗದಲ್ಲಿ ಗರುಡನ ಗುಡಿ ಹಾಗೂ ಧ್ವಜಸ್ತಂಭ ಕಟ್ಟೆಗಳಿವೆ. ಪ್ರಾಕಾರಕ್ಕೆ ಮುಂದೆ ಪ್ರವೇಶ ಮಂಟಪವಿರುವುದಿಲ್ಲ. ಪ್ರಾಕಾರಕ್ಕೆ ಒಳಭಾಗದಲ್ಲಿ ಕಂಬಗಳ ಸಾಲು ಮಂಟಪಗಳಿವೆ. ಕೆಲ ಕಂಬಗಳು ಕೆಳಭಾಗದಲ್ಲಿ ಸಿಂಹ ಶಿಲ್ಪಗಳನ್ನು ಹೊಂದಿದ್ದು ಮೇಲೆ ಉಪಕಂಬಗಳಿವೆ. ಪ್ರಾಕಾರಕ್ಕೆ ಪೂರ್ವ ಹಾಗೂ ದಕ್ಷಿಣಕ್ಕೆ ದ್ವಾರಮಂಟಪಗಳಿವೆ. ಮುಖ್ಯ ದ್ವಾರದಲ್ಲಿ ವೈಷ್ಣವ ದ್ವಾರಪಾಲಕರ ಶಿಲ್ಪಗಳಿವೆ.

ಸ್ಮಾರಕ : ಗವಿ ರಂಗನಾಥ

ಸ್ಥಳ : ಆನೆಗೊಂದಿ

ತಾಲೂಕು : ಗಂಗಾವತಿ

ಕಾಲಮಾನ : ೧೪ನೆಯ ಶತಮಾನ

ಆನೆಗೊಂದಿ ಸಾಣಾಪುರ ರಸ್ತೆಯ ಪಕ್ಕದ ಬೆಟ್ಟದ ಮೇಲೆ ಗವಿ ರಂಗನಾಥ ದೇವಾಲಯವಿದೆ. ರಂಗನಾಥನ ಗರ್ಭಗೃಹ ಗುಹೆಯಾಗಿರುವುದರಿಂದ ಇದಕ್ಕೆ ಗವಿರಂಗನಾಥ ದೇವಾಲಯವೆಂದು ಹೆಸರು ಬಂದಿರಬೇಕು. ಬೆಟ್ಟದ ಮಧ್ಯಭಾಗದಲ್ಲಿರುವ ಈ ದೇವಾಲಯಕ್ಕೆ ಮೇಲೆ ಹೋಗಲು ಮೆಟ್ಟಲುಗಳಿವೆ. ದೇವಾಲಯದಲ್ಲಿ ಗರ್ಭಗೃಹ ಮತ್ತು ಸಭಾಮಂಟಪಗಳಿವೆ. ಗರ್ಭಗೃಹದ ಪ್ರವೇಶ ದ್ವಾರದ ಶಾಖೆಗಳಲ್ಲಿ ಕುಂಬಗಳು ಅವುಗಳ ಮೇಲೆ ಅರ್ಧಕಂಬಗಳು ಇವೆ. ಲಲಾಟಬಿಂಬದಲ್ಲಿ ಪದ್ಮಗಳಿವೆ. ತೆರೆದ ಸಭಾಮಂಟಪದಲ್ಲಿ ಎರಡು ಮೂಲೆ ಕಂಬಗಳು, ಎರಡು ಅರ್ಧ ಕಂಬಗಳು ಹಾಗೂ ಎರಡು ಕಂಬಗಳಿವೆ. ಚೌಕಾಕಾರವಾಗಿರುವ ಈ ಕಂಬಗಳಲ್ಲಿ ನರಸಿಂಹ, ಶಿವಲಿಂಗಕ್ಕೆ ಹಾಲೆರೆಯುವ ಹಸು, ವಿಷ್ಣು, ಯತಿ, ಭೈರವಿ, ಆಂಜನೇಯ, ವೀರಭದ್ರ, ಗರುಡ, ಶಿವಪಾರ್ವತಿಯರ ಉಬ್ಬುಶಿಲ್ಪಗಳಿವೆ. ಸಭಾಮಂಟಪದ ಮುಂದಿನ ಸ್ವಲ್ಪ ಭಾಗವು ಇತ್ತೀಚಿನ ಸೇರ್ಪಡೆಯಾಗಿದೆ.

ಪ್ರವೇಶಭಾಗವನ್ನು ಹೊರತುಪಡಿಸಿ ಸುತ್ತಲೂ ಕಣಶಿಲೆಯಲ್ಲಿ ನಿರ್ಮಿಸಿದ ಗೋಡೆ ಇದೆ. ದೇವಾಲಯದ ಪ್ರವೇಶದ ದ್ವಾರ ಮಂಟಪ ಹಾಗೂ ಅದರ ಮೇಲೆ ಇಟ್ಟಿಗೆ ಗಾರೆಗಳ ಗೋಪುರವಿದೆ. ದೇವಾಲಯದ ಸುತ್ತಲಿನ ಗೋಡೆಗಳ ಮೇಲೆ ಜೈನ ನಿಷಧಿ ಶಾಸನಗಳಿವೆ. ಈ ದೇವಾಲಯದ ದ್ವೀಪಸ್ತಂಭವು ಅತ್ಯಂತ ದೊಡ್ಡ ಪ್ರಮಾಣದಲ್ಲಿದೆ. ಇದು ಗಂಗಾವತಿ ಆನೆಗೊಂದಿ ರಸ್ತೆಯ ಬದಿಯಲ್ಲಿದೆ.

ಸ್ಮಾರಕ : ಲಕ್ಷ್ಮೀನರಸಿಂಹ ದೇವಾಲಯ

ಸ್ಥಳ : ಆನೆಗೊಂದಿ

ತಾಲೂಕು : ಗಂಗಾವತಿ

ಕಾಲಮಾನ : ೧೪ನೆಯ ಶತಮಾನ

ಚಿಂತಾಮಣಿಯ ಈ ದೇವಾಲಯವು ಗರ್ಭಗೃಹ, ತೆರೆದ ಅಂತರಾಳ, ಸಭಾಮಂಟಪ ಹಾಗೂ ಮುಖ ಮಂಟಪಗಳಿಂದ ಕೂಡಿದೆ. ಗರ್ಭಗೃಹದ ಪ್ರವೇಶ ದ್ವಾರವು ಸರಳವಾಗಿದೆ. ಗರ್ಭಗೃಹದಲ್ಲಿ ಲಕ್ಷ್ಮೀನರಸಿಂಹನ ಮೂರ್ತಿವಿದೆ. ಅಂತರಾಳದ ಬಾಗಿಲ ಬದಿಯಲ್ಲಿ ಚೌಕಾಕಾರದ ಎರಡು ಕಂಬಗಳಿವೆ. ಸಭಾಮಂಟಪದ ಮಧ್ಯದಲ್ಲಿ ನಾಲ್ಕು ಕಂಬಗಳಿವೆ. ಇವು ಕಾಂಡಭಾಗದಲ್ಲಿ ಮೇಲೆ ಕೆಳಗೆ ಅಸಮ ಚೌಕ ಭಾಗಗಳನ್ನು, ಮಧ್ಯದಲ್ಲಿ ೮-೧೬-೮ ಪಟ್ಟಿಕೆಗಳನ್ನು ಹೊಂದಿವೆ. ಸಭಾಮಂಟಪದಲ್ಲಿ ಸುತ್ತಲೂ ಕಕ್ಷಾಸನವಿದೆ. ಭುವನೇಶ್ವರಿಯಲ್ಲಿ ಪದ್ಮವಿದ್ದು ಮಧ್ಯದಲ್ಲಿ ಚಕ್ರ, ಶಂಖಧಾರಿಯಾಗಿ ಅಭಯ, ವರದ ಮುದ್ರಾಧಾರಿಯಾದ ನರಸಿಂಹ ಸಮಭಂಗಿಯಲ್ಲಿ ನಿಂತ ಶಿಲ್ಪವಿದೆ. ಸಭಾಮಂಟಪದ ಪ್ರವೇಶ ದ್ವಾರದಲ್ಲಿ ಹೂಬಳ್ಳಿ, ಪದ್ಮ ಅರ್ಧಗಂಬಗಳಿವೆ. ಲಲಾಟ ಬಿಂಬದಲ್ಲಿ ಗಜಲಕ್ಷ್ಮೀ ಶಿಲ್ಪವಿದೆ. ಬಾಗಿಲ ಬದಿಯಲ್ಲಿ ವೈಷ್ಣವ ದ್ವಾರಪಾಲಕರ ಶಿಲ್ಪಗಳಿವೆ. ಸಭಾಮಂಟಪದ ಒಳಭಿತ್ತಿಯ ಮೇಲೆ ಗಜ, ಗಜಾನನ, ಆಂಜನೇಯ, ಮುಂತಾದ ಶಿಲ್ಪಗಳಿವೆ. ಸಭಾಮಂಟಪದ ಮುಂದೆ ವಿಶಾಲವಾದ ಮುಖ ಮಂಟಪವಿದ್ದು ಇಲ್ಲಿ ನಾಲ್ಕು ಕಂಬಗಳಿವೆ. ಸಭಾಮಂಟಪಕ್ಕೆ ಪ್ರವೇಶ ಸೋಪಾನಗಳಿವೆ.

ಸ್ಮಾರಕ : ಜೈನ ಬಸದಿ

ಸ್ಥಳ : ಆನೆಗೊಂದಿ

ತಾಲೂಕು : ಗಂಗಾವತಿ

ಕಾಲಮಾನ : ೧೪ನೆಯ ಶತಮಾನ

ತ್ರಿಕೂಟ ಶೈಲಿಯ ಈ ಬಸದಿಯು ಮೂರು ಗರ್ಭಗೃಹಗಳು, ಅವುಗಳ ಮುಂದೆ ಮೂರು ಅಂತರಾಳಗಳು, ಒಂದು ವಿಶಾಲವಾದ ಸಭಾಮಂಟಪವನ್ನು ಹೊಂದಿದೆ. ಮುಖಮಂಟಪ ಮತ್ತು ಸಭಾಮಂಟಪಗಳ ದ್ವಾರಬಾಗಿಲುಗಳ ಲಲಾಟದಲ್ಲಿ ಜಿನಬಿಂಬಗಳಿವೆ. ಮೂರು ಗರ್ಭಗೃಹಗಳು ಪೂರ್ವ, ದಕ್ಷಿಣ ಮತ್ತು ಉತ್ತರಕ್ಕೆ ಮುಖಮಾಡಿದ್ದು, ಪೂರ್ವಕ್ಕೆ ಮುಖವಿರುವ ಗರ್ಭಗೃಹದ ಬಾಗಿಲ ಲಲಾಟದಲ್ಲಿ ಚೌತಿ ಚಂದ್ರನ ಚಿಹ್ನೆ ಇದೆ. ಹಾಗಾಗಿ ಇದು ಚಂದ್ರಪ್ರಭ ತೀರ್ಥಂಕರ ಗೃಹವಿರಬೇಕು. ಉತ್ತರದ ಗರ್ಭಗೃಹ ಬಹಳಷ್ಟು ಶಿಥಿಲವಾಗಿದೆ. ಸಭಾಮಂಟಪದ ನಾಲ್ಕು ಮಧ್ಯ ಕಂಬಗಳು ಪೀಠ, ಕಾಂಡ, ಫಲಕ, ಬೋದಿಗೆಗಳನ್ನು ಹೊಂದಿವೆ. ಇದರ ದ್ವಾರಬಂಧದಲ್ಲಿ ಪದ್ಮಶಾಖೆ, ಲತಾಶಾಖೆ, ಅರ್ಧಗಂಬಗಳ ಅಲಂಕಾರವಿದೆ. ಬಾಗಿಲ ಬದಿಯಲ್ಲಿ ಕುಂಬಪಂಜರಗಳು, ಆನೆಗಳ ಶಿಲ್ಪಗಳಿವೆ. ಮುಖಮಂಟಪದಲ್ಲಿ ನಾಲ್ಕು ಕಂಬಗಳಿವೆ. ಹೊರ ಗೋಡೆಯು ಸರಳವಾಗಿದೆ.

ಈ ಬಸದಿಯಲ್ಲಿ ಒಂದು ಶಾಸನವಿದ್ದು, ಅದರನ್ವಯ ವಿಜಯನಗರದ ಅರಸ ಒಂದನೆಯ ಹರಿಹರನ ಆಳ್ವಿಕೆಯಲ್ಲಿ ಅಂದರೆ ಕ್ರಿ.ಶ. ೧೩೪೨ರಲ್ಲಿ ಬೈಚದಂಡ ನಾಯಕನ ಮಗ ಇರುಗಪ ದಂಡನಾಯಕನು ಈ ಬಸದಿಯನ್ನು ನಿರ್ಮಿಸಿದ್ದು ತಿಳಿಯುತ್ತದೆ.

ಸ್ಮಾರಕ : ವೆಂಕಟೇಶ್ವರ ದೇವಾಲಯ

ಸ್ಥಳ : ವೆಂಕಟಗಿರಿ

ತಾಲೂಕು : ಗಂಗಾವತಿ

ಕಾಲಮಾನ : ೧೫ನೆಯ ಶತಮಾನ

ವೆಂಕಟಗಿರಿಯು ಗಂಗಾವತಿ ತಾಲೂಕಿನ ಒಂದು ಹೋಬಳಿ ಕೇಂದ್ರವಾಗಿದೆ. ಗಂಗಾವತಿ–ಕೊಪ್ಪಳ ರಸ್ತೆಯಲ್ಲಿ ದಾಸನಾಳ ಸೇತುವೆಯಿಂದ ಮುಸ್ಲಾಪುರ ರಸ್ತೆಯಲ್ಲಿ ಹದಿನೈದು ಕಿ.ಮೀ. ದೂರದಲ್ಲಿದೆ. ಈ ಗ್ರಾಮದ ಪಶ್ಚಿಮ ದಿಕ್ಕಿನಲ್ಲಿ ಬೆಟ್ಟ ಸಾಲುಗಳಿದ್ದು, ಅಲ್ಲಿಯ ಗವಿಯೊಂದರಲ್ಲಿ ಪ್ರಾಚೀನ ವೆಂಕಟೇಶ್ವರನ ಮೂರ್ತಿ ಇದೆ. ಹಾಗಾಗಿ ಈ ಬೆಟ್ಟಕ್ಕೆ ವೆಂಕಟಗಿರಿ ಎಂದು ಕರೆಯುತ್ತಾರೆ. ಈ ಬೆಟ್ಟದ ಬುಡದಲ್ಲಿ ಹುಟ್ಟಿಕೊಂಡ ಗ್ರಾಮವೇ ವೆಂಕಟಗಿರಿ ಎಂದು ಕರೆಯಲ್ಪಟ್ಟಿದೆ. ಈ ಗ್ರಾಮದ ಮಧ್ಯ ಭಾಗದಲ್ಲಿ ವೆಂಕಟೇಶ್ವರ ದೇವಾಲಯವಿದೆ.

ವೆಂಕಟೇಶ್ವರ ದೇವಾಲಯ ವಾಸ್ತು ಲಕ್ಷಣಗಳನ್ನು ಅನುಲಕ್ಷಿಸಿ ಇದು ವಿಜಯನಗರ ಕಾಲದಲ್ಲಿ ನಿರ್ಮಾಣ ಎಂದು ಖಚಿತವಾಗಿ ಗುರುತಿಸಬಹುದು. ಸ್ಥಳೀಯ ಐತಿಹ್ಯಗಳ ಪ್ರಕಾರ ಈ ದೇವಾಲಯವನ್ನು ಕನಕಗಿರಿಯನ್ನಾಳಿದ ಗುಜ್ಜಲವಂಶದ ಎರಡನೆಯ ದೊರೆ ನವಾಬ

ಉಡಚಪ್ಪನಾಯಕ ಕಟ್ಟಿಸಿದ ಎಂಬುದು ತಿಳಿದುಬರುತ್ತದೆ.[೧೩] ಆದರೆ ದೇವಾಲಯದ ನಿರ್ಮಾಣದ ಬಗೆಗೆ ಖಚಿತ ಮಾಹಿತಿಯನ್ನು ನೀಡುವ ಶಿಲಾಶಾಸನವಾಗಲಿ ಅಥವಾ ಇತರ ಮಾಹಿತಿಗಳಾಗಲಿ ದೊರೆಯುವುದಿಲ್ಲ. ಆದರೆ ನವಾಬ ಉಡಚಪ್ಪನಾಯಕನು ಕೃಷ್ಣದೇವರಾಯನ ಸಮಕಾಲೀನನಾಗಿದ್ದರಿಂದ ಮತ್ತು ಕನಕಗಿರಿ ಸಹಿತ ಇತರ ಸ್ಥಳಗಳಲ್ಲಿ ಹಾಗೂ ಹಂಪಿಯ ವಿರುಪಾಕ್ಷ ದೇವಾಲಯದ ಉತ್ತರದಿಕ್ಕಿನ ದ್ವಾರಗೋಪುರವನ್ನು ನಿರ್ಮಿಸಿದ್ದು, ಆ ಸಾಧ್ಯತೆಯ ಹಿನ್ನಲೆಯಲ್ಲಿ ಪ್ರಸ್ತುತ ದೇವಾಲಯವನ್ನು ನವಾಬ ಉಡಚಪ್ಪನಾಯಕ ನಿರ್ಮಾಣ ಮಾಡಿರಬಹುದೆಂದು ತರ್ಕಿಸಬಹುದು. ಆದರೆ ಕನಕಗಿರಿ ನಾಯಕರ ದೇವಾಲಯಗಳಿಗಿಂತ ಇದು ಸ್ವಲ್ಪ ಭಿನ್ನ ವಾಸ್ತು ಶೈಲಿಯನ್ನು ಹೊಂದಿರುವುರಿಂದ ಮತ್ತು ಹೆಚ್ಚಾಗಿ ವಿಜಯನಗರ ಸಾಮ್ರಾಜ್ಯದ ವಾಸ್ತು ಲಕ್ಷಣವನ್ನು ಹೊಂದಿರುವುದರಿಂದ ಇದು ವಿಜಯನಗರ ಅರಸರ ನಿರ್ಮಾಣವಾಗಿರಬಹುದಾದ ಸಾಧ್ಯತೆಯನ್ನು ತಳಿಹಾಕುವಂತಿಲ್ಲ.

ದೇವಾಲಯವು ಗರ್ಭಗೃಹ, ಅಂತರಾಳ, ಅರ್ಧಮಂಟಪ ಮತ್ತು ಸಭಾಮಂಟಪಗಳ ತಳವಿನ್ಯಾಸವನ್ನು ಹೊಂದಿದ್ದು, ಇಡೀ ದೇವಾಲಯವನ್ನು ಬಿಳಿಕಣಶಿಲೆಯಲ್ಲಿ ನಿರ್ಮಿಸಲಾಗಿದೆ. ಆದರೆ ಗರ್ಭಗೃಹದ ಮೇಲಿನ ಶಿಖರ ಮಾತ್ರ ಇಟ್ಟಿಗೆ ಮತ್ತು ಗಾರೆಯ ರಚನೆಯಾಗಿದೆ. ಗರ್ಭಗೃಹದಲ್ಲಿ ಚಚ್ಚೌಕ ಅಳತೆಯ ಒಂದು ಅಂಕಣ ಇದ್ದು ಗರ್ಭಗೃಹದ ಮಧ್ಯದಲ್ಲಿ ನಾಲ್ಕು ಅಡಿ ಎತ್ತರ ವೆಂಕಟೇಶ್ವರನ ಶಿಲ್ಪವಿದೆ. ಗರ್ಭಗೃಹದ ಭುವನೇಶ್ವರಿಯು ಅರಳುವ ಕಮಲದ ಆಕೃತಿಯಲ್ಲಿದೆ. ಅಂತರಾಳವು ಗರ್ಭಗೃಹದಷ್ಟೇ ಅಳತೆಯಲ್ಲಿದ್ದು ಸರಳವಾಗಿದೆ. ಅಂತರಾಳದ ದ್ವಾರಬಂದವು ದ್ವಿಶಾಖಾಲಂಕೃತವಾಗಿದೆ. ಮೊದಲ ಶಾಖೆಯಲ್ಲಿ ಯಾವುದೇ ಕೆತ್ತನೆಗಳಿಲ್ಲ. ದ್ವಿಶಾಖೆಯು ಲತಾರೂಪದ ಅಲಂಕರಣೆಯನ್ನು ಹೊಂದಿದೆ. ಲಲಾಟದಲ್ಲಿ ಗಜಲಕ್ಷ್ಮಿಯ ಬಿಂಬವಿದೆ. ದ್ವಾರದ ಇಕ್ಕೆಲದಲ್ಲಿ ವೈಷ್ಣವದ್ವಾರಪಾಲಕರ ಶಿಲ್ಪಗಳಿವೆ.

ಸಭಾಮಂಟಪವು ದೇವಾಲಯದ ಅತ್ಯಂತ ವಿಸ್ತೃತ ಭಾಗ ಇದು ಆಯತಾಕಾರದ ತಳ ವಿನ್ಯಾಸದಲ್ಲಿದೆ. ಸಭಾಮಂಟಪದ ಮಧ್ಯದಲ್ಲಿ ನಾಲ್ಕು ಪೂರ್ಣ ಕಂಬಗಳು, ನಾಲ್ಕು ಮೂಲೆಗಂಬಗಳು, ಎಂಟು ಅರ್ಧಗಂಬಗಳಿವೆ. ಮಧ್ಯದ ಕಂಬಗಳು ಪೀಠ, ಕಾಂಡ, ಕಂಬಗಳ ಮೇಲ್ಭಾಗದಲ್ಲಿ ಪುಷ್ಪ ಬೋಧಿಗೆಗಳನ್ನು ಹೊಂದಿದೆ. ಕಂಬದ ಕಾಂಡ ಭಾಗ ಮೇಲೆ, ಕೆಳಗೆ ಮತ್ತು ಮಧ್ಯೆ, ಅಸಮವಾದ ಮೂರು ಚಚ್ಚೌಕವಾದ ಭಾಗಗಳಿವೆ. ಮಧ್ಯ ಮತ್ತು ಮೇಲಿನ ಭಾಗಗಳು ಸಮಾನ ಅಳತೆಯಲ್ಲಿದ್ದರೆ, ಕೆಳಗಿನ ಭಾಗವು ಆಯತಾಕರದಲ್ಲಿದೆ. ಕೆಳಭಾಗದ ಚೌಕದ ನಾಲ್ಕು ತುದಿಗಳು ಎಲೆ ಆಕಾರದಲ್ಲಿವೆ. ಮೂರು ಚೌಕಭಾಗಗಳ ನಡುವಿನ ಅಂತರದಲ್ಲಿ ಅಷ್ಟಾಶ್ರವಾಗಿರುವ ವಿಷ್ಣುಕಾಂತ, ಹದಿನಾರು ಮುಖವುಳ್ಳ ಸೌಮ್ಯಕಾಂತ ಮತ್ತೆ ಅಷ್ಟಾಶ್ರವಾಗಿರು ವಿಷ್ಣುಕಾಂತ, ಪಟ್ಟಿಕಾಭಾಗಗಳಿವೆ. ಈ ಕಂಬದ ಮೂರು ಚಚೌಕಭಾಗಗಳ ನಾಲ್ಕು ಮುಖಭಾಗಗಳಲ್ಲಿ ಉಬ್ಬು ಶಿಲ್ಪಗಳಿವೆ. ಸಭಾಮಂಟಪದ ಒಳ ಭಿತ್ತಿ ಮತ್ತು ಛತ್ತಿನಲ್ಲಿ ಯಾವುದೇ ಅಲಂಕರಣೆ ಇಲ್ಲದೇ ಸರಳವಾಗಿದೆ. ಸಭಾಮಂಟಪದ ಎಡ ಮತ್ತು ಬಲಭಾಗದಲ್ಲಿ ಉಪ ಪ್ರವೇಶದ್ವಾರಗಳಿವೆ.

ದೇವಾಲಯವು ದ್ವಿ ಅಧಿಷ್ಠಾನ, ಭಿತ್ತಿ, ಪ್ರಸ್ತರ ಹಾಗೂ ಗರ್ಭಗೃಹದ ಮೇಲೆ ಶಿಖರ ಹೊಂದಿದೆ. ಶಿಖರದಲ್ಲಿ ಕಂಠ ಮತ್ತು ಸ್ಥೂಪಿಯ ಭಾಗಗಳಿರುವುದರಿಂದ ಇದು ಷಡಾಂಗ ಮಾದರಿಯ ದೇವಾಲಯವಾಗಿದೆ. ಅಧಿಷ್ಠಾನ, ಭಿತ್ತಿ, ಪ್ರಸ್ತರ ಭಾಗವು ಸಂಪೂರ್ಣ ಬಿಳಿ ಕಣಶಿಲೆಯಿಂದ ನಿರ್ಮಿತವಾಗಿದೆ.

ಅಧಿಷ್ಠಾನವು ದ್ವಿಹಂತದಲ್ಲಿದೆ. ಕೆಳಭಾಗದಲ್ಲಿ ಮಂಚಬಂಧ ಮಾದರಿಯ ಅಧಿಷ್ಠಾನ ಭಾಗವಿದೆ. ಅದರ ಮೇಲೆ ಉಪಾನ, ತ್ರಿಪಟ್ಟಕುಮುದ ಮತ್ತು ಕಪೋತ ಭಾಗಗಳನ್ನು ಹೊಂದಿರುವ ಮತ್ತೊಂದು ಅಧಿಷ್ಠಾನವಿದೆ. ಈ ವಾಸ್ತುಲಕ್ಷಣಗಳಿರುವುದರಿಂದ ಇದು ವಾಸ್ತು ಲಕ್ಷಣಗಳಿರುವುದರಿಂದ ಇದು ಪದ್ಮಕೇಸರ ಅಧಿಷ್ಠಾನವಾಗಿದೆ.[೧೪] ಕೆಳ ಅಧಿಷ್ಠಾನದ ಕಪೋತ ಭಾಗದಲ್ಲಿ ಅಲ್ಲಲ್ಲಿ ಕೀರ್ತಿಮುಖಗಳ ಅಲಂಕರಣೆ ಇವೆ.

ದೇವಾಲಯದ ಭಿತ್ತಿಯಲ್ಲಿ ಅರ್ಧಕಂಬಗಳು, ದೇವಕೋಷ್ಠಗಳ ಅಲಂಕರಣೆಗಳಿವೆ. ದೇವಕೋಷ್ಠಗಳ ಮೇಲೆ ಕೆಲವು ಕಡೆ ಶಾಲಮಾದರಿಯ ಶಿಖರಗಳು, ಇನ್ನೂ ಕೆಲವು ಕಡೆ ಅರೆವೃತ್ತಾಕಾರದ ಗೋಪುರ ಮಾದರಿಗಳಿವೆ. ಅರೆವೃತ್ತಾಕಾರದ ಮಾದರಿಯಲ್ಲಿ ಪದ್ಮಾಸನದಲ್ಲಿ ಕುಳಿತ ಲಕ್ಷ್ಮಿಯ ಶಿಲ್ಪಗಳಿವೆ. ಭಿತ್ತಿಯು ಅರ್ಧಕಂಬಗಳು, ವಿಷ್ಣುಕಾಂತ ಮಾದರಿಯ ಆರು ಲಂಬಪಟ್ಟಿಕೆಗಳಿವೆ. ಪ್ರಸ್ತರವು ಯಾವುದೇ ಅಲಂಕರಣೆ ಇಲ್ಲದೇ ಸರಳವಾಗಿದೆ (ನಿರಲಂಕೃತ ಪ್ರಸ್ತರ). ದೇವಾಲಯದ ಶಿಖರವು ಗರ್ಭಗೃಹದ ಸುತ್ತಗಲಕ್ಕೂ ವ್ಯಾಪ್ತಿಸಿದ್ದು, ಏಕತಲ ದ್ರಾವಿಡ ವಿಮಾನ ಮಾದರಿಯಲ್ಲಿದೆ. ಅದರಲ್ಲಿ ಶಾಲಕೂಟಗಳ ಅಲಂಕರಣೆಗಳಿವೆ. ಕಾಲದ ಮಂಟಪಗಳು ಹಾಗೂ ಅದರ ಇಕ್ಕೆಲಗಳಲ್ಲಿ ದೇವಾನುದೇವತೆಗಳ, ರಾಮ, ಆಂಜನೇಯ, ಗರುಡ, ವಿಷ್ಣು, ವಾಮನ ಗಾರೆಶಿಲ್ಪಗಳಿವೆ. ಸ್ಥೂಪಿಯು ವೃತ್ತಾಕಾರದಲ್ಲಿದೆ. ಸ್ಥೂಪಿಯ ಕೆಳಭಾಗದಲ್ಲಿ ನಾಲ್ಕು ಮೂಲೆಗಳಿಗೆ ಸಿಂಹದ ಗಾರೆಶಿಲ್ಪಗಳಿವೆ. ಈ ಶಿಖರ ಭಾಗವನ್ನು ಜೀರ್ಣೋದ್ಧಾರಗೊಳಿಸಲಾಗಿದೆ. ಹಾಗಾಗಿ ಮೂಲ ಸ್ವರೂಪದಲ್ಲಿ ಕೆಲವು ಬದಲಾವಣೆಯನ್ನು ಮಾಡಲಾಗಿದೆ. ಈ ದೇವಾಲಯದ ಎಡಭಾಗದಲ್ಲಿ ಇತ್ತೀಚೆಗೆ ನಿರ್ಮಿಸಿದ ಲಕ್ಷ್ಮೀ ದೇವಾಲಯ, ಸುತ್ತಲೂ ಮಂಟಪಗಳು ಮುಂಭಾಗದಲ್ಲಿ ಮಹಾದ್ವಾರ ಮಂಟಪವಿದೆ. ಈ ದೇವಾಲಯದ ಮಹಾದ್ವಾರ ಮಂಟಪದ ಪಕ್ಕದಲ್ಲಿ ೩೦ ಕಂಬಗಳನ್ನೊಳಗೊಂಡ ಮಂಟಪವಿದೆ.

ಸ್ಮಾರಕ : ಶಿವ ದೇವಾಲಯ

ಸ್ಥಳ : ಹಳೇ ಶಿವಪುರ

ತಾಲೂಕು : ಕೊಪ್ಪಳ

ಕಾಲಮಾನ : ಕ್ರಿ.ಶ. ೧೫ನೆಯ ಶತಮಾನ

ಹಳೇ ಶಿವಪುರದ ಶಿವ ದೇವಾಲಯವು ಸೋಮೇಶ್ವರ ಬೆಟ್ಟದ ಕೆಳಭಾಗದ ಗದ್ದೆಯಲ್ಲಿದೆ. ಈ ದೇವಾಲಯವು ಶಿವಪುರದ ಮುಖ್ಯ ರಸ್ತೆಯ ಬಲಬದಿಗೆ ಸೋಮೇಶ್ವರ ಬೆಟ್ಟದ ಕೆಳಭಾಗದಲ್ಲಿದೆ.

ಪೂರ್ವಾಭಿಮುಖವಾಗಿರುವ ಈ ದೇವಾಲಯವು ಮುಖಮಂಟಪ ಮತ್ತು ಗರ್ಭಗೃಹ ಹೊಂದಿತ್ತು. ಆದರೆ ಪ್ರಸ್ತುತ ಮುಖಮಂಟಪ ನಾಶ ಹೊಂದಿದ್ದು, ಗರ್ಭಗೃಹ ಮಾತ್ರ ಉಳಿದಿದೆ. ಗರ್ಭಗೃಹ ಗೋಡೆಗಳು ಶಿಥಿಲಗೊಂಡಿದ್ದು, ಛತ್ತು ಬಿದ್ದು ಹೋಗಿದೆ. ಗರ್ಭಗೃಹದ ಅಧಿಷ್ಠಾನವು ಸುಂದರವಾಗಿದ್ದು, ಉಪಾನ, ತ್ರಿಪಟ ಕುಮುದಾ ಮತ್ತು ಕಪೋತ ಭಾಗಗಳಿವೆ. ಭಿತ್ತಿ ಸರಳವಾಗಿದ್ದು, ಅದರಲ್ಲಿ ಉಬ್ಬು ಕಂಬಗಳ ಅಲಂಕರಣೆ ಇದೆ. ಪ್ರವೇಶ ದ್ವಾರವು ಸರಳವಾಗಿದೆ. ಇದಕ್ಕೆ ಲಲಾಟ ಬಿಂಬ ಇರುವುದಿಲ್ಲ. ಗರ್ಭಗೃಹದ ಒಳ ಭಾಗದಲ್ಲಿ ಶಿಲ್ಪ ಇರುವುದಿಲ್ಲ. ದೇವಾಲಯದ ಮುಂಬದಿಯಲ್ಲಿ ಭಗ್ನಗೊಂಡ ದೊಡ್ಡ ನಂದಿಯ ಶಿಲ್ಪವಿದೆ. ವಿಜಯನಗರ ಶೈಲಿಯನ್ನು ಹೊಂದಿರುವ ದೇವಾಲಯವು ಸದ್ಯದ ಸ್ಥಿತಿಯಲ್ಲಿ ಶಿಥಿಲಗೊಂಡಿದೆ.

ಸ್ಮಾರಕ : ವೀರಭದ್ರೇಶ್ವರ ದೇವಾಲಯ

ಸ್ಥಳ : ಅಯೋಧ್ಯ

ತಾಲೂಕು : ಕೊಪ್ಪಳ

ಕಾಲಮಾನ : ಕ್ರಿ.ಶ. ೧೫ನೆಯ ಶತಮಾನ

ಅಯೋಧ್ಯವು ಕೊಪ್ಪಳ ತಾಲೂಕಿನ ಹಿಟ್ನಾಳ ಹೋಬಳಿಯಲ್ಲಿದ್ದು, ಬಂಡಿಹರ್ಲಾಪುರದಿಂದ ಸುಮಾರು ಹತ್ತು ಕಿ.ಮೀ. ದೂರದಲ್ಲಿದೆ. ಈ ದೇವಾಲಯವು ಅಯೋಧ್ಯದಿಂದ ನಾರಾಯಣಪೇಟೆಗೆ ಹೋಗುವ ರಸ್ತೆಯ ಬಲಭಾಗದಲ್ಲಿದ್ದು, ದೇವಾಲಯವು ಪ್ರಸ್ತುತವಾಗಿ ಬಹುಮಟ್ಟಿಗೆ ಶಿಥಿಲವಾಗಿದೆ. ಈ ದೇವಾಲಯವು ಪೂರ್ವಾಭಿಮುಖವಾಗಿದೆ. ಗರ್ಭಗೃಹ ಮತು ಮುಖಮಂಟಪಗಳನ್ನು ಹೊಂದಿದೆ. ಇಡೀ ದೇವಾಲಯದ ತಳವಿನ್ಯಾಸವು ಆಯತಾಕಾರದಲ್ಲಿದೆ. ಮುಖಮಂಟಪವು ಮುಂಬದಿಯಲ್ಲಿ ತೆರೆದಿದ್ದು, ಒಂದು ಬದಿಯಲ್ಲಿ ಕಂಬಗಳ ನಡುವೆ ಚಿಕ್ಕ ಚಿಕ್ಕ ಅಳತೆ ಕಲ್ಲುಗಳಿಂದ ಭಿತ್ತಿಯನ್ನು ನಿರ್ಮಿಸಲಾಗಿದೆ. ಗರ್ಭಗೃಹ ಮತ್ತು ಮುಖಮಂಟಪಗಳ ಭಿತ್ತಿಯು ಅರ್ಧಮಾತ್ರ ಉಳಿದಿದ್ದು, ಇನ್ನರ್ಧ ನಾಶವಾಗಿವೆ. ಕಂಬಗಳು ಸರಳವಾಗಿದ್ದು, ಮೇಲೆ, ಮಧ್ಯ ಹಾಗೂ ಕೆಳಗೆ ಅಸಮವಾದ ಚೌಕಭಾಗಗಳನ್ನು ಹೊಂದಿವೆ. ಇವುಗಳ ಮೇಲೆ ಬೋದುಗೆಗಳಿವೆ. ಕಂಬಗಳಾಗಲ್ಲಿ, ಬೋದಿಗೆಗಳಾಗಲಿ ಆಕರ್ಶಕವಾಗಿರದೆ ತೀರ ಸರಳ ಹಾಗೂ ಸಾಧಾರಣವಾಗಿವೆ.

ಗರ್ಭಗೃಹವು ಒಂದು ಅಂಕಣದ್ದಾಗಿದೆ. ಗರ್ಭಗೃಹದ ದ್ವಾರಬಂಧವು ಸರಳವಾಗಿದೆ. ಗರ್ಭಗೃಹದ ಭಿತ್ತಿಯನ್ನು ಚಿಕ್ಕ ಕಲ್ಲುಗಳಿಂದ ಆ ನಂತರ ಕಾಲದಲ್ಲಿ ನಿರ್ಮಿಸಲಾಗಿದೆ. ಛತ್ತಿನಲ್ಲಿ ಶಿಲಾಹಲಗೆಗಳನ್ನು ಚೌಕ, ವಕ್ರವಾಗಿ ಜೋಡಿಸಿದ್ದಾರೆ. ಗರ್ಭಗೃಹದಲ್ಲಿ ಸುಮಾರು ೪ ಅಡಿ ಎತ್ತರದ ವೀರಭದ್ರನ ಶಿಲ್ಪವಿದೆ. ಈ ದೇವಾಲಯದ ಮುಖಮಂಟಪದ ಮುಂಭಾಗದಲ್ಲಿ ನಂದಿಯ ಶಿಲ್ಪಗಳಿವೆ.

ಸ್ಮಾರಕ : ಪ್ರಸನ್ನ ವಿರುಪಾಕ್ಷ ದೇವಾಲಯ

ಸ್ಥಳ : ಹಿರೇಜಂತಗಲ್ಲ

ತಾಲೂಕು : ಕೊಪ್ಪಳ

ಕಾಲಮಾನ : ಕ್ರಿ.ಶ. ೧೫ನೆಯ ಶತಮಾನ

ಹಿರೇಜಂತಗಲ್ಲು ಗಂಗಾವತಿ ತಾಲೂಕಿನಲ್ಲಿದ್ದು, ಗಂಗಾವತಿಯಿಂದ ೧ ಕಿ.ಮೀ. ದೂರದಲ್ಲಿದೆ. ಕ್ರಿ.ಶ. ೧೫೪೪ ಹಿರೇಜಂತಗಲ್ಲ ಶಾಸನದಲ್ಲಿ ಉಲ್ಲೇಖಗೊಂಡ ಎಲ್ಲಾ ದೇವಾಲಯಗಳಿಗಿಂತ ದೊಡ್ಡದಾದ ದೇವಾಲಯವಾಗಿದೆ. ಶಾಸನದಲ್ಲಿ ಪ್ರಸನ್ನ ವಿರುಪಾಕ್ಷ ಎಂಬ ಉಲ್ಲೇಖವಿದೆ.[೧೫] ಇದನ್ನು ಸ್ಥಳೀಯರು ಪಂಪಾ ವಿರೂಪಾಕ್ಷ ಎಂದು ಕರೆಯುತ್ತಾರೆ. ಇದು ಎತ್ತರವಾದ ಜಗತಿಯ ಮೇಲಿದ್ದು, ಗರ್ಭಗೃಹ, ಅಂತರಾಳ, ಸಭಾಮಂಟಪ, ಮಹಾಮಂಟಪ, ವಿಶಾಲವಾದ ಪ್ರಾಕಾರ ಹಾಗೂ ಎರಡು ದ್ವಾರಗೋಪುರಗಳನ್ನು ಹೊಂದಿದೆ. ಗರ್ಭಗೃಹದೊಳಗೆ ಸುಮಾರು ಮೂರು ಅಡಿ ಎತ್ತರದ ಶಿವಲಿಂಗವಿದ್ದು, ಇದರ ಪಾಣಿ ಬಟ್ಟಲು ಬಲಭಾಗದಲ್ಲಿದೆ. ಇದರ ಎಡಭಾಗದಲ್ಲಿ ಮತ್ತೊಂದು ಗರ್ಭಗೃಹವಿದೆ. ಇದರಲ್ಲಿ ಸುಮಾರು ಮೂರು ಅಡಿ ಎತ್ತರ ಪಂಪಾಂಬಿಕೆ ಮೂರ್ತಿ ಇದೆ. ಇದರ ಬಾಗಿಲ ಬದಿಗಳಲ್ಲಿ ಶೈವದ್ವಾರಪಾಲಕರ ಶಿಲ್ಪಗಳಿವೆ. ಸಭಾಮಂಟಪದ ದೇವಕೋಷ್ಠಗಳಲ್ಲಿ ದಕ್ಷಿಣಾಮೂರ್ತಿ, ಭೈರವ, ವೀರಭದ್ರ, ಗಣೇಶ, ಕಾರ್ತಿಕೇಯ ಜೋತೆಗೆ ಸೂರ್ಯದೇವ, ಮಹಿಷಾಸೂರ ಮರ್ದನಿ, ದುರ್ಗೆಯ ಶಿಲ್ಪಗಳಿವೆ.

ಮುಖಮಂಟಪದ ಮುಂಭಾಗ ತೆರೆದಿದೆ. ಉಳಿದ ಮೂರು ಬದಿಯಲ್ಲಿ ಗೋಡೆಗಳಿವೆ. ಇದು ಪ್ರತಿ ಸಾಲಿನಲ್ಲಿ ಐದರಂತೆ ಮೂರು ಸಾಲಿನಲ್ಲಿ ಒಟ್ಟು ಹದಿನೈದು ಅಂಕಣಗಳ ವಿಸ್ತಾರವನ್ನು ಹೊಂದಿದೆ. ಇಲ್ಲಿ ಹದಿನೈದು ಕಂಬಗಳು ಕೆತ್ತನೆಯ ಶೈಲಿಯಲ್ಲಿ ವಿಶಿಷ್ಟವಾಗಿದ್ದು, ಇವುಗಳಲ್ಲಿ ಎರಡು ಕಾಂಡ ಭಾಗಗಳಿವೆ. ಮಧ್ಯದ ಎರಡು ಪ್ರಧಾನ ಮತ್ತು ಉಪ ಪ್ರಧಾನ ಭಾಗದಲ್ಲಿ ಮೂರು ಚೌಕ ಭಾಗಗಳಿವೆ. ಉಪಕಾಂಡವು ಪ್ರಾಣಿಗಳ, ಉಪಕಂಬಗಳನ್ನು ಹೊಂದಿರುತ್ತವೆ. ಇಲ್ಲಿ ಮಧ್ಯದ ಎರಡು ಕಂಬಗಳಲ್ಲಿ ಆನೆಯನ್ನು ಹಿಂಗಾಲಿನಿಂದ ತುಳಿದು ಮೇಲಕ್ಕೆ ಎದ್ದು ನಿಂತ ಸಿಂಹ ಶಿಲ್ಪಗಳಿದ್ದರೆ, ಉಳಿದ ನಾಲ್ಕು ಕಂಬಗಳಲ್ಲಿ ಸಿಂಹಗಳು ಹೊತ್ತ ನಿಂತಂತೆ ಇರುವ ಉಪಕಂಬಗಳಿವೆ. ಈ ಎಲ್ಲಾ ಕಂಬಗಳ ಮೇಲೆ ಪುಷ್ಪ ಬೋಧಿಗೆಗಳಿವೆ. ಮುಖಮಂಟಪದ ಉಳಿದೆಲ್ಲಾ ಕಂಬಗಳ ಮೇಲೆ ನಾಗಲಿಂಗ, ಸಿಂಹ, ಹಂಸ, ಕಾಳಿಂಗಮರ್ದನ, ಕೃಷ್ಣ, ಸೂರ್ಯ, ವೃಷಭರೂಢ ಮುಂತಾದ ಶಿಲ್ಪಗಳಿವೆ. ಇಲ್ಲಿ ಸಭಾಮಂಟಪದ ಬಾಗಿಲ ಬದಿಯಲ್ಲಿ ಸುಮಾರು ಎಂಟು ಅಡಿ ಎತ್ತರದ ದ್ವಾರ ಪಾಲಕರ ಬಿಡಿ ಶಿಲ್ಪಗಳಿವೆ.

ದೇವಾಲಯದ ಹೊರಭಾಗ ಸರಳತೆಯಿಂದ ಕೂಡಿದೆ. ದೇವಾಲಯದ ತೀರ ಕೆಳಗಿನ ಭಾಗವೇ ಅಧಿಷ್ಠಾನ, ಅದು ಉಪಾನ, ಕುಮುದ ಮತ್ತು ಕಪೋತಗಳೆಂಬ ಭಾಗಗಳಿಂದ ಕೂಡಿದೆ. ಈ ರೀತಿಯಲ್ಲಿ ಅಧಿಷ್ಠಾನ ಮುಖಮಂಟಪದ ಮುಂಬಿದಿಯಲ್ಲಿ ಮಾತ್ರ ಹೆಚ್ಚು ಸ್ಪಷ್ಟವಾಗಿದೆ. ಸಭಾಮಂಟಪ ಮತ್ತು ಗರ್ಭಗೃಹಗಳು ತೀರಾ ಸಾಮಾನ್ಯವಾದ ಮಂಚಬಂಧ ಶೈಲಿಯ ಅಧಿಷ್ಠಾನವನ್ನು ಹೊಂದಿದೆ.

ಮುಖಮಂಟಪದ ಮುಂಭಾಗದ ಮಾಡಿನಲ್ಲಿ ಮಾತ್ರ ದೇವಕೋಷ್ಠಗಳು ಇವೆ. ಇಟ್ಟಿಗೆ ಗಾರೆಯಿಂದ ನಿರ್ಮಿಸಿರುವ ಇವುಗಳ ಒಳಗೆ ಬ್ರಹ್ಮ, ವಿಷ್ಣು, ಮಹೇಶ್ವರ, ಉಗ್ರನರಸಿಂಹ, ಗಣೇಶ, ದುರ್ಗೆ, ನಂದಿ ಮುಂತಾದ ದೇವ, ದೇವತೆಗಳ ಗಾರೆ ಶಿಲ್ಪಗಳಿವೆ.

ಗರ್ಭಗೃಹದ ಮೇಲೆ ಇಟ್ಟಿಗೆ, ಗಾರೆಯಿಂದ ನಿರ್ಮಿಸಿರುವ ದ್ರಾವಿಡ ಮಾದರಿಯ ಏಕತಲದ ಶಿಖರವಿದೆ. ಇದು ಕೆಳಭಾಗದಲ್ಲಿ ಗರ್ಭಗೃಹದ ಮಾಳಿಗೆಯ ಉದ್ದಗಲಕ್ಕೂ ವ್ಯಾಪಿಸಿದೆ. ಶಿಖರದ ಕೆಳಹಂತದಲ್ಲಿ ಶಾಲಕೂಟ, ಪಂಜರಗಳ ಅಲಂಕರಣೆಗಳಿವೆ. ಸ್ತೂಪಿಯು ವೃತ್ತಾಕಾರದಲ್ಲಿದ್ದು, ಅದರ ನಾಲ್ಕು ಬದಿಗೆ ಕೀರ್ತಿಮುಖಗಳ ಅಲಂಕರಣೆ ಇದೆ. ಸ್ತೂಪಿಯ ಮೇಲೆ ಕಳಸವಿದೆ.

ಪಂಪಾಂಬಿಕೆಯ ಗರ್ಭಗೃಹ ಚೌಕಾಕಾರದಲ್ಲಿದ್ದು, ಬದಿಯಲ್ಲಿ ಒಂದು ಚಿಕ್ಕಕೋಣೆ ನಿರ್ಮಿಸಿರುವುದರಿಂದ ಎರಡೂ ಸೇರಿ ಆಯತಾಕಾರವಾಗುತ್ತದೆ. ಹಾಗಾಗಿ ಇವುಗಳ ಮೇಲೆ ಶಾಲ ಮಾದರಿ ಶಿಖರ ನಿರ್ಮಿಸಲಾಗಿದೆ. ಶಿಖರದಲ್ಲಿ ಕಂಬಗಳ ಅಲಂಕರಣೆಗಳಿವೆ. ಸ್ತೂಪಿಯ ಕೆಳಗೆ ನಾಲ್ಕು ಮೂಲೆಗೆ ನಂದಿಯ ಶಿಲ್ಪಗಳಿವೆ. ಸ್ತೂಪಿಯು ಶಾಲ ಮಾದರಿಯಲ್ಲಿದ್ದು, ಅದರ ಎರಡೂ ಬದಿಯ ಮುಖಗಳಲ್ಲಿ ಬೃಹತ ಗಾತ್ರದ ಕೀರ್ತಿಮುಖಗಳು ಉಳಿದೆರಡು ಕಡೆ ಚಿಕ್ಕದಾದ ಕೀರ್ತಿಮುಖಗಳ ಅಲಂಕರಣೆಗಳಿವೆ. ಪ್ರಧಾನ ಗರ್ಭಗೃಹದ ಬಲಭಾಗದಲ್ಲಿ ದೇವಾಲಯದ ಹೊರಗೆ ಚಂಡಿಕೇಶ್ವರ ಚಿಕ್ಕಗುಡಿಯಿದೆ. ದೇವಾಲಯದ ಎದುರಿಗೆ ೧೮ ಅಡಿ ಎತ್ತರದ ದೀಪಸ್ಥಂಭವನ್ನು ಕಾಣಬಹುದು.

ಸ್ಮಾರಕ : ಊರಿನ ವೀರಭದ್ರ ದೇವಾಲಯ

ಸ್ಥಳ : ಹಿರೇಜಂತಗಲ್ಲ

ತಾಲೂಕು : ಗಂಗಾವತಿ

ಕಾಲಮಾನ : ಕ್ರಿ.ಶ. ೧೫ನೆಯ ಶತಮಾನ

ಹಿರೇಜಂತಗಲ್ಲ ಗ್ರಾಮದ ಮಧ್ಯಭಾಗದಲ್ಲಿ ಊರಿನ ವೀರಭದ್ರೇಶ್ವರ ದೇವಾಲಯವಿದೆ. ಕ್ರಿ.ಶ. ೧೫೪೪ರ ಶಾಸನದಲ್ಲಿ ಊರಿನ ವೀರಭದ್ರ ದೇವಾಲಯ ಎಂದು ಕರೆಯಲಾಗಿದೆ.[೧೬] ಗ್ರಾಮದ ಪ್ರಾಚೀನ ದೇವಾಲಯ ನಾಶವಾಗಿದ್ದು, ನಂತರದಲ್ಲಿ ಇಂದಿನ ದೇವಾಲಯವನ್ನು ನಿರ್ಮಿಸಿರುವುದು ತಿಳಿಯುತ್ತದೆ. ಈ ದೇವಾಲಯದ ಮೂಲ ವೀರಭದ್ರೇಶ್ವರ ದೇವರ ಮೂರ್ತಿಯು ಭಗ್ನವಾಗಿದ್ದರಿಂದ ಅದನ್ನು ಇಂದು ದೇವಘಾಟದ ಹೊಳೆ ಬದಿಯ ಬಾಲ ವೀರಪ್ಪ ಎಂಬ ಚಿಕ್ಕ ಗುಡಿಯಲ್ಲಿ ಇರಿಸಲಾಗಿದೆ. ಪ್ರಸ್ತುತ ವೀರಭದ್ರ ದೇವಾಲಯದ ಸಭಾಮಂಟಪದಲ್ಲಿರುವ ನಂದಿ ಶಿಲ್ಪ ಮಾತ್ರ ಮೂಲದ್ದಾಗಿದೆ.

ಸ್ಮಾರಕ : ಆಂಜನೇಯ ದೇವಾಲಯ

ಸ್ಥಳ : ಹಿರೇಜಂತಗಲ್ಲ

ತಾಲೂಕು : ಗಂಗಾವತಿ

ಕಾಲಮಾನ : ಕ್ರಿ.ಶ. ೧೫ನೆಯ ಶತಮಾನ

ಈ ದೇವಾಲಯದ ಹಿಂಭಾಗದಲ್ಲಿರುವ ಕ್ರಿ.ಶ. ೧೫೪೪ರ ಶಾಸನದಲ್ಲಿ ಹನುಮಂತ ದೇವರು ಎಂದು ಕರೆಯಲಾಗಿದೆ.[೧೭] ಇದು ಗ್ರಾಮದ ಪ್ರಸನ್ನ ವಿರೂಪಾಕ್ಷ ದೇವಾಲಯದ ಪೂರ್ವ ಬದಿಯಲ್ಲಿ ಇದೆ. ದೇವಾಲಯವು ಗರ್ಭಗೃಹ ಮತ್ತು ಸಭಾಮಂಟಪಗಳನ್ನು ಹೊಂದಿದೆ. ಸಭಾ ಮಂಟಪವು ಒಂಭತ್ತು ಅಂಕಣಗಳದ್ದಾಗಿದೆ. ಮಧ್ಯದಲ್ಲಿ ನಾಲ್ಕು ಕಂಬಗಳಿವೆ. ಇವು ಕೆಳಗೆ ಮತ್ತು ಮೇಲೆ ಅಸಮವಾದ ಚೌಕಭಾಗಗಳನ್ನು ಹೊಂದಿದ್ದು ಅವೆರಡರ ನಡುವೆ ಅಷ್ಟಮುಖಗಳ ಲಂಬ ಪಟ್ಟಿಕೆಗಳಿವೆ. ಸಭಾಮಂಟಪದ ಎರಡೂ ಬದಿಯ ಭಿತ್ತಿಗಳಲ್ಲಿ ಆಂಜನೇಯನ ಜೀವನಕ್ಕೆ ಸಂಬಂಧಿಸಿದ ದೃಶ್ಯ ಶಿಲ್ಪ ಫಲಕಗಳು, ದೊಡ್ಡದಾದ ಸರ್ಪದ ಶಿಲ್ಪಗಳಿವೆ.

ಗರ್ಭಗೃಹದಲ್ಲಿ ವೀರಾಂಜನೇಯನ ಉಬ್ಬು ಶಿಲ್ಪವಿದೆ. ಆಂಜನೇಯ ಮೂರ್ತಿಯು ಸ್ಥಾನಕ ಭಂಗಿಯಲ್ಲಿದ್ದು, ಬಲಗೈ ಚಪೇಟ ಹಸ್ತಮುದ್ರೆಯಲ್ಲಿದೆ. ಎಡಗೈಯಲ್ಲಿ ಸೌಗಂಧಿಕಾ ಪುಷ್ಪವಿದೆ. ಕಾಲುಗಳ ಮಧ್ಯದಲ್ಲಿ ಚಿಕ್ಕದಾದ ಅಕ್ಷಯಕುಮಾರನ ಶಿಲ್ಪವಿದೆ. ಆಂಜನೇಯನ ತಲೆಯಲ್ಲಿ ಜುಟ್ಟು, ಕೊರಳಲ್ಲಿ ಹಾರ, ತೋಳ್ಬಂದಿ, ಕೈ, ಕಾಲುಗಳಲ್ಲಿ ಕಡಗಗಳಿವೆ. ಆಂಜನೇಯ ಶಿಲ್ಪದ ಇಕ್ಕೆಲಗಳಲ್ಲಿ ಶಂಕ, ಚಕ್ರಗಳನ್ನು ಬಿಡಿಸಲಾಗಿದೆ. ಗರ್ಭಗೃಹದ ಬಾಗಿಲು ಲಲಾಟಬಿಂಬದಲ್ಲಿ ವಿಷ್ಣುವಿನ ವಾಹನ ಗರುಡನನ್ನು ತೋರಿಸಲಾಗಿರುವುದು ವಿಶೇಷವಾಗಿದೆ. ಗರ್ಭಗೃಹದ ಬಾಗಿಲು ಇಕ್ಕೆಲಗಳಲ್ಲಿ ಎರಡು ವಿಭಿನ್ನ ಶೈಲಿಯ ಗೋಡೆಗಂಬಗಳಿವೆ. ಎಡಬದಿಯ ಕಂಬದ ಮೇಲೆ ಕಾಳಿಂಗ ಮರ್ಧನ, ಕೃಷ್ಣ, ವೀರಾಂಜನೇಯ ಹಾಗೂ ಯತಿಯ ಉಬ್ಬು ಶಿಲ್ಪಗಳಿವೆ.

ದೇವಾಲಯದ ಅಧಿಷ್ಠಾನವು ಮಂಚಬಂಧ ಶೈಯಲ್ಲಿದ್ದು, ಉಪಾನಗಳ ಮತ್ತು ಕಪೋತ ಭಾಗಗಳನ್ನು ಹೊಂದಿದೆ. ಭಿತ್ತಿಯನ್ನು ದೊಡ್ಡ ಅಳತೆ ಕಲ್ಲುಗಳಿಂದ ಕಟ್ಟಲಾಗಿದೆ. ಗರ್ಭಗೃಹದ ಮೇಲೆ ಗಾರೆ ಮತ್ತು ಇಟ್ಟಿಗೆಗಳಿಂದ ನಿರ್ಮಿಸಿದ ದ್ರಾವಿಡ ಮಾದರಿಯ ಎಕತಲಾ ವಿಮಾನ ಶಿಖರವಿದೆ. ಆದರೆ ಪ್ರಸ್ತುತ ದೇವಾಲಯದ ಭಿತ್ತಿ ಮತ್ತು ಶಿಥಿಲವಾಗಿದ್ದ ಶಿಖರವನ್ನು ಜೀರ್ಣೋದ್ಧಾರಗೊಳ್ಳಿಸಲಾಗಿದೆ.

ಸ್ಮಾರಕ : ವೆಂಕಟೇಶ್ವರ ದೇವಾಲಯ

ಸ್ಥಳ : ಕೆರೆಹಳ್ಳಿ

ತಾಲೂಕು : ಕೊಪ್ಪಳ

ಕಾಲಮಾನ : ಕ್ರಿ.ಶ. ೧೫ನೆಯ ಶತಮಾನ

ಈ ದೇವಾಲಯವು ಕೆರೆಹಳ್ಳಿಯಲ್ಲಿದ್ದು, ವಿಜಯನಗರ ಶೈಲಿಯನ್ನು ಹೊಂದಿದ್ದು. ಈ ದೇವಾಲಯವು ಗರ್ಭಗೃಹ, ಸಭಾಮಂಟಪ ಹೊಂದಿದೆ. ಗರ್ಭಗೃಹವು ಎರಡು ಬಂಡೆಗಳ ಮಧ್ಯದ ಚಿಕ್ಕ ಸ್ಥಳವಾಗಿದ್ದು ಗುಹೆಯಂತಿದೆ. ಇದರಲ್ಲಿ ವೆಂಕಟೇಶ್ವರದ ಶಿಲ್ಪವಿದೆ. ಗರ್ಭಗೃಹದ ದ್ವಾರದಲ್ಲಿ ಶೈವ ದ್ವಾರಪಾಲಕರನ್ನು ಕಡೆಯಲಾಗಿದೆ. ಸಭಾಮಂಟಪದಲ್ಲಿ ಭಗ್ನಗೊಂಡ ಲಕ್ಷ್ಮೀಯ

ವಿಗ್ರಹ ಬಿದ್ದಿವೆ. ಸಭಾಮಂಟಪದಲ್ಲಿ ಚಚ್ಚೌಕವಾಗಿ ಕಡೆದ ಕಂಬಗಳಿವೆ. ಗರ್ಭಗೃಹದ ಮೇಲೆ ವಿಜಯನಗರ ಶೈಲಿಯ ಗಾರೆ ಗಚ್ಚುಗಳನ್ನು ಬಳಸಿ ಕಟ್ಟಲಾದ ದ್ರಾವಿಡ ಶೈಲಿಯ ಶಿಖರವಿದೆ.

ಸ್ಮಾರಕ : ವೀರಭದ್ರ ದೇವಾಲಯ

ಸ್ಥಳ : ಕೆರೆಹಳ್ಳಿ

ತಾಲೂಕು : ಕೊಪ್ಪಳ

ಕಾಲಮಾನ : ಕ್ರಿ.ಶ. ೧೫ನೆಯ ಶತಮಾನ

ಈ ದೇವಾಲಯವು ಕೆರೆಹಳ್ಳಿಯಲ್ಲಿದ್ದು, ಪೂರ್ವಾಭಿಮುಖವಾಗಿದೆ. ಈ ದೇವಾಲಯವು ಗರ್ಭಗೃಹ, ಮುಖಮಂಟಪವನ್ನು ಹೊಂದಿದೆ. ಮುಖಮಂಟಪವನ್ನು ಜೀರ್ಣೋದ್ಧಾರ ಮಾಡಿದ್ದಾರೆ. ದೇವಾಲಯದ ಮುಂದೆ ೫೦ ಅಡಿ ಎತ್ತರದಷ್ಟು ದೀಪ ಸ್ತಂಭವಿದೆ. ಗಜಲಕ್ಷ್ಮೀಯ ಶಿಲ್ಪವಿದೆ. ದೇವಾಲಯದ ಎಡಭಾಗದಲ್ಲಿ ಕಾರ್ತಿಕೆಯ ಶಿಲ್ಪ ಮತ್ತು ಐದು ವೀರಮಾಸ್ತಿಗಲ್ಲು ದೊರೆತಿವೆ.

ಸ್ಮಾರಕ : ಕೃಷ್ಣದೇವಾಲಯ

ಸ್ಥಳ : ಕೆಸರಹಟ್ಟಿ

ತಾಲೂಕು : ಗಂಗಾವತಿ

ಕಾಲಮಾನ : ಕ್ರಿ.ಶ. ೧೫ನೆಯ ಶತಮಾನ

ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಕ್ರಿ.ಶ. ೧೫೨೭, ಆಗಸ್ಟ್ ೧೯ ಶಾಂಡಿಲ್ಯ ಗೋತ್ರದ ರಾಯಶ್ರೀಭಟರ ಕೊಂಡಾಜೆಟಿಯ ಮಗ ಕೃಷ್ಣಯ್ಯನು ಕೆಸರಹಟ್ಟಿ ಗ್ರಾಮದಲ್ಲಿ ಕೃಷ್ಣದೇವರನ್ನು ಪ್ರತಿಷ್ಠಾಪಿಸಿ ದೇವಾಲಯವನ್ನು ನಿರ್ಮಿಸಿದನು. ಈ ದೇವಾಲಯದ ಸ್ಥಾನಿಕರ ಹುದ್ದೆಯನ್ನು ಕೊಮಾರ ಪೆರುಮಾಳೆ, ದೇವಪೆರುಮಾಳೆ, ರಾಮಾಂಜಯ್ಯನವರಿಗೆ ನೀಡಿ, ಇವರು ತನ್ನ ಮಾತಿನೊಳಗೆ ನಡೆಯಬೇಕೆಂದು, ಈ ಸ್ಥಾನಿಕರು ಕೃಷ್ಣಯ್ಯನ ಮಾತಿನಂತೆ ನಡೆಯಬೇಕೆಂದು ವಿಧಿಸುತ್ತಾನೆ. ಈ ಶಾಸನವು ಇಂದು ದೇವಾಲಯದ ಮುಂದೆ ಬಿದ್ದಿದೆ. ಇದೇ ಶಾಸನದಲ್ಲಿ ಹೇಳಿದ ಹಾಗೇ ಭಾರದ್ವಾಜಗೋತ್ರದ ಜೆಟಿಯನ ಮಗ ತಿಮ್ಮಯ್ಯನು ಗೌತಮ ಗೋತ್ರದ ಕೋಕಜೆಟಿಯ ಮಗ ಹಜಪಯ್ಯ ಇವರಿಬ್ಬರು ಕೃಷ್ಣದೇವರ ಅಮೃತಪಡಿಗೆ ಕೊಟ್ಟ ಭೂದಾನ ದೇವಾಲಯದ ಆದಾಯದಲ್ಲಿ ದೇವರಿಗೆ ಒಂದು ಪಾಲು, ಸ್ಥಾನಿಕರಿಗೆ ಎರಡು ಪಾಲು ಇದರಲ್ಲಿ ಪಂಚ ಪರ್ವ ನೈವೇದ್ಯ ಮಾಡಿಕೊಂಡು ಬರಲು ಈ ಶಾಸನದಲ್ಲಿ ವಿವರವಾಗಿ ಹೇಳಿದೆ.[೧೮]

ಕೃಷ್ಣ ದೇವಾಲಯವು ಊರಿನ ಮಧ್ಯದಲ್ಲಿದ್ದು, ಎತ್ತರವಾದ ಅಧಿಷ್ಠಾನದ ಮೇಲೆ ದೇವಾಲಯವನ್ನು ನಿರ್ಮಿಸಿರುವರು. ಈ ದೇವಾಲಯವು ಪೂರ್ವಾಭಿಮುಖವಾಗಿದೆ. ಗರ್ಭಗುಡಿಯ ಮೇಲೆ ಇಂದು ಮೆಟ್ಟಿಲುಗಳ ರೀತಿಯಲ್ಲಿ ಕೆಳಗಿನಿಂದ ಮೇಲಕ್ಕೆ ಹೋದಂತೆ ಚಿಕ್ಕದಾಗಿ ಕೊನೆಯಲ್ಲಿ ಕುಂಬವನ್ನು ಮಾಡಿ ಅದರ ಮೇಲೆ ಕಳಸವನ್ನು ಇಟ್ಟಿರುವುದು ಕಂಡುಬರುತ್ತದೆ. ದೇವಾಲಯದ ಮುಂದಿನ ಭಾಗದಲ್ಲಿ ಎತ್ತರವಾದ ಕಲ್ಲಿನ ಕಟ್ಟೆ ಇದೆ. ಗರ್ಭಗುಡಿಯಲ್ಲಿರುವ ಕೃಷ್ಣನ ವಿಗ್ರಹ, ಮುಂದಿನ ಪಾದಕಟ್ಟೆ, ಶಾಸನದ ಬಂಡೆಯುನ್ನು ಹೊರತು ಪಡಿಸಿ ಉಳಿದೆಲ್ಲವನ್ನು

ಆಧುನಿಕರಣಕೊಳಪಡಿಸಲಾಗಿದೆ. ಗರ್ಭಗುಡಿಯಲ್ಲಿರುವ ಕೃಷ್ಣ ವಿಗ್ರಹವು ಕಪ್ಪು ಕಲ್ಲಿನಲ್ಲಿ ಕೆತ್ತಿದ ಶಿಲ್ಪವಾಗಿದೆ. ನಾಲ್ಕು ಕೈಗಳುಳ್ಳ ಶಿಲ್ಪವು ಮುಂದಿನ ಎರಡು ಕೈಗಳಲ್ಲಿ ಕೊಳಲು ಹಿಡಿದು ಕೊಂಡಿರುವನು. ಹಿಂದಿನ ಎರಡು ಕೈಗಳಲ್ಲಿ ಶಂಖ ಚಕ್ರಗಳಿವೆ. ಶಿಲ್ಪವು ಸುಂದರವಾಗಿದೆ. ಹಿಂದೆ ಪ್ರಭಾವಳಿ ಇದ್ದು ಮೇಲೆ ಐದು ಹೆಡೆಗಳುಳ್ಳ ನಾಗರಶಿಲ್ಪವಿದೆ. ಮೂರ್ತಿಯ ಕಾಲಿನ ಬಳಿ ಎಡಬಲಕ್ಕೆ ಎತ್ತಿನ ಮೇಲೆ ಸ್ತ್ರೀಯರು ಕೈಯಲ್ಲಿ ಗಜವನ್ನು ಹಿಡಿದುಕೊಂಡು ಕುಳಿತಿರುವರು. ಕೃಷ್ಣನ ಮೂರ್ತಿಯು ಮೂರು ಅಡಿ ಎತ್ತರವಿದ್ದು, ಪೀಠ ಸಾಮಾನ್ಯವಾಗಿದೆ.[೧೯]

ಸ್ಮಾರಕ : ವೀರಭದ್ರೇಶ್ವರ ದೇವಾಲಯ

ಸ್ಥಳ : ಚಿಕ್ಕರಾಂಪುರ – ರಾಂಪೂರ

ತಾಲೂಕು : ಗಂಗಾವತಿ

ಕಾಲಮಾನ : ಕ್ರಿ.ಶ. ೧೬ನೆಯ ಶತಮಾನ

ಈ ದೇವಾಲಯವು ಆನೆಗೊಂದಿಯಿಂದ ಉತ್ತರಕ್ಕೆ ಸುಮಾರು ಒಂಬತ್ತು ಕಿ.ಮೀ. ದೂರದಲ್ಲಿದೆ. ಚಿಕ್ಕರಾಂಪೂರ ಹಾಗೂ ರಾಂಪೂರ ಗ್ರಾಮಗಳನ್ನು ಸಂಪರ್ಕಿಸುವ ರಸ್ತೆಯ ಚಿಕ್ಕರಾಂಪೂರ ಕ್ರಾಸ್‌ದಿಂದ ೪ ಕಿ.ಮೀ. ಅಂತರದಲ್ಲಿ ರಸ್ತೆಯ ಬಲಬದಿಯಲ್ಲಿ ಈ ದೇವಾಲಯವಿದೆ. ದೇವಾಲಯದ ಹಿಂಬದಿಯಲ್ಲಿ ಎತ್ತರವಾದ ವ್ಯಾಪಕವಾಗಿರುವ ಬೆಟ್ಟಗಳಿವೆ. ದೇವಾಲಯದಲ್ಲಿ ಅಥವಾ ಸುತ್ತಮುತ್ತ ಯಾವುದೆ ಶಾಸನಗಳಿಲ್ಲ. ಆದರೆ ಗರ್ಭಗೃಹದಲ್ಲಿ ಸುಸ್ಥಿತಿಯಲ್ಲಿರುವ ವೀರಭದ್ರನ ಶಿಲ್ಪವಿದೆ. ಹಾಗಾಗಿ ಇದು ವೀರಭದ್ರೇಶ್ವರ ದೇವಾಲಯವೆಂದು ನಿಸ್ಸಂದೇಹವಾಗಿ ನಿರ್ಧರಿಸಬಹುದು. ದೇವಾಲಯವು ಪ್ರಸ್ತುತವಾಗಿ ಬಹುಮಟ್ಟಿಗೆ ಶಿಥಿಲವಾಗಿದೆ. ಗರ್ಭಗೃಹದ ಮೇಲಿನ ಗೋಪುರ ಪ್ರದಕ್ಷಿಣಾಪಥ ಅಂತರಾಳದ ಸಭಾಮಂಟಪದ ಛತ್ತು ಸಂಪೂರ್ಣ ನಾಶವಾಗಿವೆ.

ದೇವಾಲಯವು ಗರ್ಭಗೃಹ, ಗರ್ಭಗೃಹದ ಸುತ್ತಲೂ ಪ್ರದಕ್ಷಣಾ ಪಥ ಮತ್ತು ಸಭಾ ಮಂಟಪಗಳನ್ನು ಹೊಂದಿದ್ದು ಐದು ಅಂಕಣಗಳ ಉದ್ದ, ಮೂರು ಅಂಕಣಗಳ ಅಗಲವನ್ನು ಹೊಂದಿದ್ದು, ಇಡೀ ದೇವಾಲಯದ ತಲವಿನ್ಯಾಸವು ಆಯತಾಕಾರದಲ್ಲಿದೆ. ಈ ದೇವಾಲಯವು ಪೂರ್ವಾಭಿಮುಖವಾಗಿದೆ. ಮುಖಮಂಟಪವು ಮುಂಬದಿಯಲ್ಲಿ ತೆರೆದಿದ್ದು, ಎರಡೂ ಬದಿಯಲ್ಲಿ ಕಂಬಗಳ ನಡುವೆ ಬೃಹತ್ ಗಾತ್ರದ ಕಲ್ಲುಗಳಿಂದ ಭಿತ್ತಿಯನ್ನು ನಿರ್ಮಿಸಲಾಗಿದೆ. ಮುಖ ಮಂಟಪವು ಮುಂಬದಿಯಲ್ಲಿ ತೆರೆದಿದ್ದು, ಎರಡೂ ಬದಿಯಲ್ಲಿ ಕಂಬಗಳ ನಡುವೆ ಬೃಹತ್ ಗಾತ್ರದ ಕಲ್ಲುಗಳಿಂದ ಭಿತ್ತಿಯನ್ನು ನಿರ್ಮಿಸಲಾಗಿದೆ. ಉತ್ತರ ಬದಿಯ ಹಾಗೂ ದಕ್ಷಿಣ ಬದಿಯ ಮೊದಲ ಅಂಕಣದ ಭಿತ್ತಿಯು ಅರ್ಧಮಾತ್ರ ಉಳಿದಿದ್ದು, ಇನ್ನರ್ಧ ನಾಶವಾಗಿವೆ. ಕಂಬಗಳು, ಅರ್ಧಗಂಬಗಳು, ವಿಜಯನಗರದ ಒಂದು ಪ್ರಕಾರವಾದ ಏಕಕಾಂಡ ಕಂಬಗಳಾಗಿದ್ದು, ಮೇಲೆ, ಮಧ್ಯ ಹಾಗೂ ಕೆಳಗೆ ಅಸಮವಾದ ಚೌಕಭಾಗಗಳನ್ನು ಹೊಂದಿವೆ. ಇವುಗಳ ಮೇಲೆ ಬೋದುಗೆಗಳಿವೆ. ಕಂಬಗಳಾಗಲಿ, ಬೋದುಗೆಗಳಾಗಲಿ ಆಕರ್ಷಕವಾಗಿರದೆ ತೀರಾ ಸರಳ ಹಾಗೂ ಸಾಧಾರಣವಾಗಿವೆ. ಸಭಾಮಂಟಪದ

ಮಧ್ಯದ ಎರಡು ಕಂಬಗಳ ಮಧ್ಯದ ಚೌಕ ಭಾಗದಲ್ಲಿ ನಿಂತ ಎತ್ತು (ನಂದಿ) ಹಾಗೂ ಅದರ ಎದುರಿನ ಕಂಬದ ಮೇಲೆ ಶಿವಲಿಂಗದ ಉಬ್ಬು ಚಿತ್ರಗಳಿವೆ. ನಿಂತ ಎತ್ತಿನ ಚಿತ್ರವು ಬಲಗಾಲನ್ನು ಮೇಲಕ್ಕೆ ಎತ್ತಿದ್ದು ಮೈ ಮೇಲೆ ಸರದ ಅಲಂಕರಣೆಯನ್ನು ಹೊಂದಿದೆ, ಸಾಮಾನ್ಯವಾಗಿ ಶಿವಲಿಂಗದ ಎದುರಿಗೆ ಕುಳಿತ ಭಂಗಿಯ ನಂದಿಯ ಶಿಲ್ಪಗಳಿದ್ದರೆ ಇಲ್ಲಿ ನಿಂತಭಂಗಿಯಲ್ಲಿರುವುದು ಗಮನಾರ್ಹ. ಸಭಾಮಂಟಪದ ಹಿಂಬದಿಯಲ್ಲಿ ಸಭಾಮಂಟಪದಷ್ಟೇ ಅಗಲವಾದ ಪ್ರದಕ್ಷಣಾಪಥವಿದೆ. ಸಾಮಾನ್ಯವಾಗಿ ವಿಜಯನಗರ ಕಾಲದ ವಿಜಯ ವಿಠಲದಂತಹ ಭವ್ಯ ದೇವಾಲಯಗಳಲ್ಲಿ ಮಾತ್ರ ಪ್ರದಕ್ಷಿಣಾಪಥವಿರುತ್ತದೆ. ಇಂಥ ಚಿಕ್ಕ ದೇವಾಲಯಕ್ಕೂ ಪ್ರದಕ್ಷಣಾಪಥವನ್ನು ನಿರ್ಮಿಸಿರುವುದು ವಿಶೇಷವೆನಿಸುತ್ತದೆ. ಆದರೆ ಪ್ರಸ್ತುತ ಈ ದೇವಾಲಯದ ಪ್ರದಕ್ಷಿಣಾಪಥ ಸಂಪೂರ್ಣ ನಾಶವಾಗಿದೆ. ಪ್ರದಕ್ಷಿಣಾಪಥದ ದ್ವಾರಬಂದವು ಸರಳವಾಗಿದ್ದು, ಬಾಗಿಲು ಇಕ್ಕೆಲಗಳಲ್ಲಿ ಶೈವ ದ್ವಾರಪಾಲಕರ ಶಿಲ್ಪಗಳಿವೆ. ಚತುರ್ಭುಜಗಳನ್ನು ಹೊಂದಿರುವ ಇವರ ಹಿಂದಿನ ಕೈಗಳಲ್ಲಿ ತ್ರಿಶೂಲ, ಢಮರುಗಳಿದ್ದರೆ, ಮುಂದಿನ ಒಂದು ಕೈಯಲ್ಲಿ ಗದೆ ಹಾಗೂ ಇನ್ನೊಂದು ಅಭಯ ಮುದ್ರೆಯಲ್ಲಿದೆ. ಲಲಾಟದಲ್ಲಿ ಗಜಲಕ್ಷ್ಮಿಯ ಬಿಂಬವಿದೆ.

ದೇವಾಲಯದ ಗರ್ಭಗೃಹವು ಒಂದು ಅಂಕಣದಲ್ಲಿದೆ. ಗರ್ಭಗೃಹದ ದ್ವಾರಬಂದವು ಸರಳವಾಗಿದ್ದು, ಬಾಗಿಲ ಬದಿಯಲ್ಲಿ ಅಂಜಲಿ ಬದ್ಧ ಮುದ್ರೆಯಲ್ಲಿ ನಿಂತಿರುವ ವ್ಯಕ್ತಿಗಳ ಶಿಲ್ಪಗಳಿವೆ. ಅವರ ಶೈಲಿ, ಪೋಷಾಕನ್ನು ಗಮನಿಸಲಾಗಿದೆ. ಅವು ವಿಜಯನಗರ ಕಾಲದ ದೇವಾಲಯಗಳಲ್ಲಿ ಕಂಡುಬರುವ ಅರಸರ ಶಿಲ್ಪಗಳನ್ನು ಹೋಲುತ್ತವೆ. ಈ ವ್ಯಕ್ತಿ ಶಿಲ್ಪಗಳ ಮೇಲ್ಭಾಗದಲ್ಲಿ ಎರಡೂ ಕಡೆ ನಂದಿಯ ಕಿರು ಶಿಲ್ಪಗಳಿವೆ. ಆದರೆ ಈ ವ್ಯಕ್ತಿಯ ಶಿಲ್ಪಗಳು ಅಷ್ಟು ಆಕರ್ಷಕ ಹಾಗೂ ಸ್ಪಷ್ಟತೆಗಳಿಂದ ಕೂಡಿಲ್ಲ. ಲಲಾಟದಲ್ಲಿ ಶಿವಲಿಂಗ ಹಾಗೂ ಅದರ ಮುಂದೆ ಕುಳಿತ ನಂದಿಯ ಶಿಲ್ಪಗಳಿದ್ದು ಇದು ಕೂಡಾ ವಿಶೇಷವಾಗಿದೆ.

ಗರ್ಭಗೃಹದ ಭಿತ್ತಿಯನ್ನು ಮಟ್ಟಸಗೊಳಿಸಿದ ಬೃಹತ್ ಅಳತೆ ಕಲ್ಲುಗಳಿಂದ ನಿರ್ಮಿಸಲಾಗಿದೆ. ಛತ್ತಿನಲ್ಲಿ ಶಿಲಾ ಹಲಗೆಗಳನ್ನು ಚೌಕ, ವಕ್ರವಾಗಿ ಜೋಡಿಸಿ ಮಧ್ಯದ ಕಲ್ಲಿನಲ್ಲಿ ಅರಳು ಕಲಾಕೃತಿಯನ್ನು ಬಿಡಿಸಲಾಗಿದೆ. ಛತ್ತು ಅಲ್ಲಲ್ಲಿ ಶಿಥಿಲವಾಗಿದೆ. ಗರ್ಭಗೃಹದ ಮೇಲಿನ ಗೋಪುರ ಸಂಪೂರ್ಣ ನಾಶವಾಗಿದೆ. ಗರ್ಭಗೃಹದಲ್ಲಿ ಮೂರುವರೆ ಅಡಿ ಎತ್ತರದ ವೀರಭದ್ರ ಶಿಲ್ಪವಿದೆ. ಈ ದೇವಾಲಯದ ಪಕ್ಕದಲ್ಲಿ ಗಣೇಶನ ಶಿಲ್ಪವಿದೆ.

ದೇವಾಲಯದ ವಾಸ್ತುವಿನ್ಯಾಸ ಹಾಗೂ ಶೈಲಿಯನ್ನು ಅನುಲಕ್ಷಿಸಿ ಮತ್ತು ಹಂಪಿ ಪರಿಸರದ ವಿಜಯನಗರ ಕಾಲದ ದೇವಾಲಯಗಳ ವಾಸ್ತು ಲಕ್ಷಣಗಳನ್ನು ಗಮನಿಸಿ ಇದು ಕೂಡಾ ವಿಜಯನಗರ ಕಾಲದ ದೇವಾಲಯವೆಂದು ನಿರ್ಧರಿಸಲಾಗಿದೆ.[೨೦]

ಸ್ಥಳ : ಹಳೇ ಶಿವಪುರ

ಸ್ಮಾರಕ : ಬಸವಣ್ಣ ದೇವಾಲಯ

ತಾಲೂಕು : ಕೊಪ್ಪಳ

ಕಾಲಮಾನ : ಕ್ರಿ.ಶ. ೧೬ನೆಯ ಶತಮಾನ

ಹಳೇ ಶಿವಪುರದ ರಸ್ತೆಯಿಂದ ಒಂದು ಕಿ.ಮೀ. ದೂರದಲ್ಲಿದ್ದು, ಗಂಗರಾಜ ಅವರ ಗದ್ದೆಯಲ್ಲಿದೆ. ಇದು ದಕ್ಷಿಣಾಭಿಮುಖವಾಗಿದ್ದು, ಬಹುಮಟ್ಟಿಗೆ ಶಿಥಿಲವಾಗಿದೆ. ಕೇವಲ ನವರಂಗ ಮಾತ್ರ ಉಳಿದಿದೆ. ಈ ದೇವಾಲಯಕ್ಕೆ ದಕ್ಷಿಣ ದಿಕ್ಕಿಗೆ ಪ್ರವೇಶದ್ವಾರ ಇದೆ. ಈ ನವರಂಗದಲ್ಲಿ ನಾಲ್ಕು ಮೂಲೆ ಕಂಬಗಳು, ಎಂಟು ಅರ್ಧ ಕಂಬಗಳು, ಮಧ್ಯದಲ್ಲಿ ನಾಲ್ಕು ಕಂಬಗಳಿವೆ. ಮಧ್ಯದ ಒಂದು ಕಂಬದಲ್ಲಿ ಅಂಜಲಿ ಮುದ್ರೆಯಲ್ಲಿರುವ ಅಲಂಕಾರ ಭೂಷಿತ ಸ್ತ್ರೀ ಶಿಲ್ಪವಿದೆ. ನವರಂಗದ ದ್ವಾರಬಂಧವು ಸರಳವಾಗಿದ್ದು, ಲಲಾಟ ಬಿಂಬದಲ್ಲಿ ಪುಷ್ಪಾಕೃತಿ ಇದೆ. ಕಂಬಗಳ ಕೆಳಗೆ, ಮಧ್ಯ, ಮೇಲೆ ಅಸಮವಾದ ಚೌಕಭಾಗಗಳನ್ನು ಹೊಂದಿದೆ. ಅವುಗಳ ಮಧ್ಯದಲ್ಲಿ ಅಷ್ಟಮುಖಗಳ ಪಟ್ಟಿಕೆಗಳಿವೆ. ನವರಂಗದ ಹಿಂಬದಿಯ ಮೂಲೆಯ ಒಂದು ಭಿತ್ತಿಯು ನಾಶವಾಗಿದೆ. ಉಳಿದ ಭಿತ್ತಿಯನ್ನು ಚಿಕ್ಕ ಚಿಕ್ಕ ಕಲ್ಲುಗಳಿಂದ ನಂತರ ಕಾಲದಲ್ಲಿ ಕಟ್ಟಲಾಗಿದೆ. ನವರಂಗದ ಮಧ್ಯದಲ್ಲಿ ತಕ್ಕಮಟ್ಟಿಗೆ ದೊಡ್ಡ ಕಪ್ಪು ಶಿಲೆಯ ನಂದಿಯ ಶಿಲ್ಪವಿದೆ. ಈ ನಂದಿ ಶಿಲ್ಪ ಕುಳಿತ ಭಂಗಿಯಲ್ಲಿದೆ. ಕೊರಳಲ್ಲಿ ಅಗಲವಾದ ಕಂಠಹಾರ, ಘಂಟೆಯ ಗೆಜ್ಜೆ ಸರ, ಬೆನ್ನ ಮೇಲೆ ಅಲಂಕರಣೆಯನ್ನು ಮಾಡಲಾಗಿದೆ. ಅದರ ಮುಖ ಮತ್ತು ಕೊಡುಗಳು ಭಗ್ನಗೊಂಡಿವೆ. ಈ ದೇವಾಲಯದ ಹತ್ತಿರವೇ ಮತ್ತೊಂದು ಚಿಕ್ಕ ನಂದಿಯ ಶಿಲ್ಪವಿದೆ.

ಸ್ಮಾರಕ : ಶಿವಲಿಂಗನ ಗುಡಿ

ಸ್ಥಳ : ತಾವರಗೆರೆ

ತಾಲೂಕು : ಕುಷ್ಟಗಿ

ಕಾಲಮಾನ : ಕ್ರಿ.ಶ. ೧೬ನೆಯ ಶತಮಾನ

ತಾವರಗೇರೆಯ ರಾಯರ ಕೆರೆಯ ಪಶ್ಚಿಮಕ್ಕೆ ಅರ್ಧ ಕಿ.ಮೀ. ದೂರದಲ್ಲಿ ಶ್ರೀನಿವಾಸಗೌಡ ಮೆದಿಕೇರಿಯವರ ಹೊಲದಲ್ಲಿ ಪೂರ್ವಭಿಮುಖವಾಗಿರುವ ಈ ಗುಡಿಯು ವಿಜಯನಗರ ಕಾಲದ ಶೈಲಿಯನ್ನು ಹೊಂದಿದೆ. ಸದ್ಯದ ಸ್ಥಿತಿಯಲ್ಲಿ ಪಾಳು ಬಿದ್ದಿದ್ದು, ಅಲ್ಲಲ್ಲಿ ಶಿಥಿಲವಾಗಿದೆ. ಬಿಳಿ ಕಣಶಿಲೆ ಮತ್ತು ಗಾರೆಗಳಿಂದ ದೇವಾಲಯವನ್ನು ನಿರ್ಮಿಸಲಾಗಿದೆ. ದೇವಾಲಯವು ತಲವಿನ್ಯಾಸದಲ್ಲಿ ಗರ್ಭಗೃಹ ಮತ್ತು ಮುಖಮಂಟಪಗಳನ್ನು ಹೊಂದಿದೆ. ಊರ್ಧ್ವ ವಿನ್ಯಾಸದಲ್ಲಿ ಅಧಿಷ್ಠಾನ, ಭಿತ್ತಿ, ಪ್ರಸ್ತರ ಭಾಗಗಳಿವೆ.

ಮುಖಮಂಟಪವು ಮೂರು ಅಂಕಣಗಳ ಆಯತಾಕಾರ ತಲವಿನ್ಯಾಸದಲ್ಲಿದ್ದು, ಮುಂಬದಿಯಲ್ಲಿ ತೆರೆದಿದೆ. ಮುಖಭಾಗದ ನಾಲ್ಕು ಕಂಬಗಳಲ್ಲಿ ಮಧ್ಯದ ಎರಡು ಸ್ವತಂತ್ರ(ಬಿಡಿ) ಕಂಬಗಳು. ಉಳಿದೆರಡು ಬದಿಯ ಗೋಡೆಗಳಿಗೆ ಹೊಂದಿಕೊಂಡಂತೆ ಇವೆ. ಬಿಡಿ ಕಂಬಗಳು ವಿಜಯನಗರ ಶೈಲಿಯ ವಿಶಿಷ್ಟ ಪ್ರಕಾರದವಾಗಿವೆ. ಪ್ರಧಾನ ಕಾಂಡದಲ್ಲಿ ಕೆಳಗೆ, ಮಧ್ಯ ಮತ್ತು

ಮೇಲೆ ಅಸಮ ಮೂರು ಚೌಕ ಭಾಗಗಳಿವೆ. ಇದಕ್ಕೆ ಹೊಂದಿಕೊಂಡಿರುವ ಉಪಕಾಂಡದಲ್ಲಿ ಉಪಕಂಬಗಳಿವೆ. ಈ ರೀತಿಯ ಕಂಬಗಳು ವಿಜಯನಗರ ವಾಸ್ತು ಕಲೆಯ ವಿಶಿಷ್ಟ ಕೊಡುಗೆಗಳಾಗಿವೆ. ಕೊಪ್ಪಳ ಜಿಲ್ಲೆಯ ಹಿರೇಜಂತಗಲ, ಪ್ರಸನ್ನ ವಿರುಪಾಕ್ಷೇಶ್ವರ, ಕನಕಗಿರಿಯ ಕನಕಗಿರಿನಾಥ ಮತ್ತು ಕಲ್ಲೂರಿನ ಕಲ್ಲಿನಾಥೇಶ್ವರ ದೇವಾಲಯಗಳನ್ನು ಹೊರತುಪಡಿಸಿದರೆ, ಪ್ರಸ್ತುತ ತಾವರಗೇರಾದ ಈ ದೇವಾಲಯದಲ್ಲಿ ಮಾತ್ರ ಕಂಡುಬರುತ್ತವೆ. ಉಳಿದ ದೇವಾಲಯಗಳಿಗಿಂತ ಇದು ತೀರಾ ಚಿಕ್ಕದೇವಾಲಯವಾಗಿದ್ದರೂ ಇಲ್ಲಿ ಆ ರೀತಿ ಕಂಬಗಳ ರಚನೆ ದೇವಾಲಯದ ಸ್ಥಾನಿಕ ಮಹತ್ವವನ್ನು ಬಿಂಬಿಸುವಂತಹದು. ಈ ಕಂಬಗಳ ಮೇಲೆ ಪುಷ್ಪಬೋಧಿಗೆಗಳಿವೆ.

ಸಭಾಮಂಟಪದ ಮಧ್ಯದ ಛತ್ತು ಕಮಲಾಕೃತಿಯ ಭುವನೇಶ್ವರಿಯದ್ದಾಗಿದ್ದು, ಅದರಲ್ಲಿ ಕೋಲಾಟವಾಡುವವರ ಶಿಲ್ಪಗಳಿರುವುದು ಗಮನಾರ್ಹ ಸಂಗತಿ. ಉಳಿದಂತೆ ಎರಡು ಅಂಕಣಗಳಲ್ಲಿ ಮಟ್ಟಸಗೊಳಿಸಿದ ಶಿಲಾ ಹಲಗೆಗಳ ಛತ್ತು ಇದೆ. ಸಭಾಮಂಟಪದಲ್ಲಿ ಗರ್ಭಗೃಹದ ದ್ವಾರಬಂಧದ ಇಕ್ಕೆಲ ಭಿತ್ತಿಗಳಲ್ಲಿ ದೇವಕೋಷ್ಠಗಳಿವೆ. ಇವುಗಳಲ್ಲಿ ಸದ್ಯ ಯಾವುದೇ ದೇವತಾ ಶಿಲ್ಪಗಳಿರುವುದಿಲ್ಲ. ಗರ್ಭಗೃಹದ ಬಾಗಿಲು ಲತಾಶಾಖ, ರತ್ನಶಾಖಗಳನ್ನು ಹೊಂದಿದೆ. ಲಲಾಟದಲ್ಲಿ ಗಣೇಶನ ಬಿಂಬವಿದೆ. ಬಾಗಿಲ ಮೇಲೆ ಎರಡೂ ಮೂಲೆಗಳಲ್ಲಿ ಚಾಮರಧಾರಿಯರ ಶಿಲ್ಪಗಳಿರುವುದು ವಿಶೇಷವೆನಿಸುತ್ತದೆ. ಸಾಮಾನ್ಯವಾಗಿ ದ್ವಾರಬಂಧದ ಮೇಲ್ಭಾಗದಲ್ಲಿ ಇಂಥ ಶಿಲ್ಪಗಳು ಹೆಚ್ಚಾಗಿ ಇರಲಾರವು. ಒಂದು ಅಂಕಣದ ಗರ್ಭಗೃಹದಲ್ಲಿ ಸದ್ಯ ಶಿವಲಿಂಗ ಇಲ್ಲ. ಹಿಂದಿನ ಭಿತ್ತಿಯಲ್ಲಿ ಮುಂಚಾಚಿದ ಮಾಡು (ಕೈಪಿಡಿ) ಮತ್ತು ಬಲಬದಿಯ ಭಿತ್ತಿಯಲ್ಲಿ ಉಬ್ಬುಶಿಲ್ಪಗಳಿದ್ದು ಸ್ಪಷ್ಟವಾಗಿಲ್ಲ.

ಈ ದೇವಾಲಯದ ಅಧಿಷ್ಠಾನವು ಉಪಾನ, ಗಳ ಮತ್ತು ಕಪೋತಗಳನ್ನು ಹೊಂದಿದ್ದು, ಸರಳ ವಿನ್ಯಾಸದ ಮಂಚಬಂಧ ಶೈಲಿಯಲ್ಲಿದೆ. ಭಿತ್ತಿಯನ್ನು ಮಟ್ಟಸಗೊಳಿಸಿದ ಮಧ್ಯಮ ಗಾತ್ರದ ಅಳತೆ ಕಲ್ಲುಗಳಿಂದ ನಿರ್ಮಿಸಲಾಗಿದೆ. ಭಿತ್ತಿಯ ಮೇಲೆ ಅಲ್ಲಲ್ಲಿ ಸಾಮಾನ್ಯವಾಗಿ ವಿಜಯನಗರ ವಾಸ್ತುಶೈಲಿಯ ದೇವಾಲಯಗಳಲ್ಲಿ ಕಂಡುಬರುವ ಶಿವಲಿಂಗಕ್ಕೆ ಹಾಲು ಕರೆಯುತ್ತಿರುವ ಹಸು, ಶಿವಲಿಂಗ, ಮಂಗ, ನವಿಲು, ಆನೆ ಮತ್ತು ಮಿಥುನ ಶಿಲ್ಪಗಳು ಇವೆ. ಉಳಿದಂತೆ ಭಿತ್ತಿಯು ಹೆಚ್ಚಿನ ಅಲಂಕರಣೆಯಿಲ್ಲದೆ ಸರಳವಾಗಿದೆ.

ಪ್ರಸ್ತರವನ್ನು ಚಿಕ್ಕ ಚಿಕ್ಕ ಕಲ್ಲು ಮತ್ತು ಗಾರೆಯಿಂದ ನಿರ್ಮಿಸಲಾಗಿದೆ. ಮುಖಮಂಟಪದ ಮುಂಬದಿಯಲ್ಲಿ ಇಳಿಜಾರಾದ ಮುಂಜೂರು (ಮಾಡಿನಲ್ಲಿ ಮುಂದಕ್ಕೆ ಇಳಿಜಾರಾಗಿ ಕೂಡಿಸಿದ ಶಿಲಾ ಹಲಗೆ) ಇದೆ. ಇದರ ಮೇಲ್ಬದಿಯಲ್ಲಿ (ಪ್ರಸ್ತರದಲ್ಲಿ) ಶಾಲ, ಕೂಟಗಳ ಮಾದರಿಯಂತೆ ಮಧ್ಯದಲ್ಲಿ ಚಿಕ್ಕಗೂಡು ಅದರ ಎರಡೂ ಬದಿಯಲ್ಲಿ ಕೊನೆಗೆ ಕಟ್ಟೆಗಳನ್ನು ನಿರ್ಮಿಸಲಾಗಿದ್ದು ಅವುಗಳ ಮೇಲೆ ಭಗ್ನವಾಗಿರುವ ನಂದಿಯ ಗಾರೆ ಶಿಲ್ಪಗಳಿವೆ. ಈ ಶಾಲಕೂಟ ಮಾದರಿಗಳ ಮಧ್ಯದಲ್ಲಿ ಸಾಲಾಗಿ ಕಂಗೂರಾಕೃತಿಗಳಿವೆ. ಈ ರೀತಿಯ ಪ್ರಸ್ತರದ ವಿನ್ಯಾಸವು ಪ್ರಾದೇಶಿಕ ವೈಶಿಷ್ಟ್ಯತೆಯನ್ನು ಬಿಂಬಿಸುತ್ತದೆನ್ನಬಹುದು. ಪ್ರಸ್ತರವು ಬಲಬದಿ ಹಾಗೂ ಹಿಂಭಾಗದಲ್ಲಿ ಶಿಥಿಲಗೊಂಡಿದೆ. ದೇವಾಲಯಕ್ಕೆ ಶಿಖರ ಮತ್ತು ಸ್ತೂಪಿಗಳಿಲ್ಲ.

ಸ್ಮಾರಕ : ಆಂಜನೇಯ ದೇವಾಲಯ

ಸ್ಥಳ : ತಾವರಗೆರೆ

ತಾಲೂಕು : ಕುಷ್ಟಗಿ

ಕಾಲಮಾನ : ಕ್ರಿ.ಶ. ೧೬ನೆಯ ಶತಮಾನ

ತಾವರಗೆರೆಯು ಗಂಗಾವತಿಯಿಂದ ಮುವತ್ತೈದು ಕಿ.ಮೀ. ಕನಕಗಿರಿಯಿಂದ ಇಪ್ಪತ್ತೈದು ಕಿ.ಮೀ. ದೂರದಲ್ಲಿದೆ. ಈ ದೇವಾಲಯವು ಹಜರತ್ ಸಯ್ಯದ್ ಷಾ ಹಮಿದುದ್ದಿನ ಖಾದ್ರಿ ದರ್ಗಾದ ಬಳಿ ಇದೆ. ಇದು ದಕ್ಷಿಣಾಭಿಮುಖವಾಗಿದ್ದು, ವಿಜಯನಗರ ಶೈಲಿಯನ್ನು ಹೊಂದಿದೆ. ಈ ದೇವಾಲಯವು ಗರ್ಭಗೃಹ ಮತ್ತು ಮುಖಮಂಟಪವನ್ನು ಹೊಂದಿದೆ. ಊರ್ಧ್ವವಿನ್ಯಾಸದಲ್ಲಿ ಅಧಿಷ್ಠಾನ, ಭಿತ್ತಿ, ಪ್ರಸ್ತರ, ಗ್ರೀವ, ಸ್ತೂಪಿ, ಶಿಖರವನ್ನು ಹೊಂದಿದೆ.

ಅಧಿಷ್ಠಾನವು ಮಂಚಬಂಧ ಅಧಿಷ್ಠಾನದಲ್ಲಿದೆ. ಅಸಮವಾದ ಮಧ್ಯಮಗಾತ್ರದ ಶಿಲೆಗಳಿಂದ ಭಿತ್ತಿಯನ್ನು ಕಟ್ಟಲಾಗಿದೆ. ಪ್ರಸ್ತರದ ಮುಂಭಾಗದಲ್ಲಿ ಇಳಿಜಾರಾದ ಮುಂಜೂರು, ಇಟ್ಟಿಗೆ ಗಾರೆಯಿಂದ ನಿರ್ಮಿತವಾಗಿ, ಕಂಗುರಾಕೃತಿಗಳ ಅಲಂಕರಣೆ ಇದೆ. ಮುಖಮಂಟಪದ ಮುಂಬದಿಯಲ್ಲಿ ಹಾರಭಾಗ ನಾಶವಾಗಿದೆ. ಎಡಬದಿಯ ಮಾಡಿನಲ್ಲಿ ಸಾಲಾಗಿ ಕಂಗುರಾಕೃತಿಗಳಿದ್ದು ಇಂದು ಶಿಥಿಲಾವಸ್ಥೆಯಲ್ಲಿವೆ. ಶಿಖರವು ಇಟ್ಟಿಗೆ, ಗಾರೆಯ ನಿರ್ಮಾಣ, ಏಕಸ್ಥಲ ದ್ರಾವಿಡ ಮಾದರಿ ಶಿಖರವು ಗರ್ಭಗೃಹದ ಉದ್ದಗಲಕ್ಕೂ ವ್ಯಾಪಿಸಿದೆ. ಕೆಳಹಂತದಲ್ಲಿ (ಹಾರ) ಶಾಲಕೂಟಗಳಿವೆ. ಮೇಲ್ಭಾಗದಲ್ಲಿ ಗ್ರೀವದ ಕೆಳಭಾಗದಲ್ಲಿ ಗಿಳಿಗಳ ಗಾರೆಬಿಂಬಗಳಿವೆ. ಗ್ರೀವವು ಲಘುದೀರ್ಘವಾಗಿದೆ. ವೃತ್ತಕೃತಿಗಳ ಅಲಂಕರಣೆಗಳಿವೆ. ಸ್ಥೂಪಿಯು ವೃತ್ತಾಕಾರದಲ್ಲಿದೆ. ಸಭಾಮಂಟಪದಲ್ಲಿ ಸರಳ ಕೆತ್ತನೆಯ ಚೌಕಾಕಾರದ ಎರಡು ಕಂಬಗಳಿವೆ.

ಸ್ಮಾರಕ : ಸಂಗಮೇಶ್ವರ ದೇವಾಲಯ

ಸ್ಥಳ : ಮಿಟ್ಟಕೇರಿ

ತಾಲೂಕು : ಕೊಪ್ಪಳ

ಕಾಲಮಾನ : ಕ್ರಿ.ಶ. ೧೬ನೆಯ ಶತಮಾನ

ಕೊಪ್ಪಳದಲ್ಲಿಯ ಗಡಿಯಾರದ ಕಂಬದಿಂದ ಅರ್ಧ ಕಿ.ಮೀ. ದೂರದಲ್ಲಿರುವ ಮಿಟ್ಟಕೇರಿಯಲ್ಲಿರುವ ಸಂಗಮೇಶ್ವರ ದೇವಾಲಯವನ್ನು ಸ್ಥಳೀಯರು ದೇವಾಂಗ ಮಠವೆಂದು ಕರೆಯುತ್ತಾರೆ. ಈ ದೇವಾಲಯವನ್ನು ಇಂದು ವಸತಿನಿಲಯವಾಗಿ ಬಳಸಲಾಗುತ್ತಿದೆ. ಈ ದೇವಾಲಯ ಕುರಿತು ಮಾಹಿತಿ ನೀಡುವ ಯಾವುದೇ ಶಾಸನ ಇರುವುದಿಲ್ಲ. ಈ ದೇವಾಲಯವನ್ನು ಸಂಪೂರ್ಣವಾಗಿ ಕಣಶಿಲೆಯಲ್ಲಿ ನಿರ್ಮಿಸಲಾಗಿದೆ. ಮೂರು ಗರ್ಭಗುಡಿಗಳಿರುವ ತ್ರಿಕೂಟಾಚಲವಾದ ದೇವಾಲಯದ ರಚನೆ ಹಾಗೂ ಒಳಗಿನ ಮೂರ್ತಿ ಶಿಲ್ಪಗಳು ವಿಜಯನಗರ ಶೈಲಿಯದೇ ಆಗಿದೆ.

ಮೂರು ಗರ್ಭಗುಡಿಗಳಿಂದ ಕೂಡಿದ ದೇವಾಲಯಕ್ಕೆ ತೆರೆದ ಸಭಾಮಂಟಪ ಮತ್ತು ಒಂದೇ ಪ್ರವೇಶದ್ವಾರ ಹೊಂದಿದೆ. ದೇವಾಲಯದ ಗರ್ಭಗುಡಿಗಳ ಮೇಲಿನ ಶಿಖರಗಳು

ಶಿಥಿಲಗೊಂಡಿವೆ. ಮೂರು ಗರ್ಭಗುಡಿಗಳಲ್ಲಿ ಒಂದನೆಯ ಗರ್ಭಗುಡಿಯಲ್ಲಿ ಸುಮಾರು ಎರಡು ಅಡಿ ಎತ್ತರದ ಶಿವಲಿಂಗವಿದೆ. ಉಳಿದ ಎರಡು ಗರ್ಭಗುಡಿಗಳಲ್ಲಿ ಯಾವುದೇ ಮೂರ್ತಿಗಳಿರುವುದಿಲ್ಲ. ಮೂರು ಗರ್ಭಗುಡಿಗಳ ಬಾಗಿಲುವಾಡದ ಲಲಾಟದಲ್ಲಿ ಗಜಲಕ್ಷ್ಮಿ ಬಿಂಬವಿದೆ. ಗರ್ಭಗೃಹದ ಬಾಗಿಲವಾಡದ ಇಕ್ಕೆಲಗಳಲ್ಲಿ ತ್ರಿಶೂಲ, ಡಮರುಗ ಮತ್ತು ಗದೆಗಳನ್ನು ಹಿಡಿದು ನಿಂತ ಶೈವದ್ವಾರಪಾಲಕರಿದ್ದಾರೆ, ಸಭಾಮಂಟಪದಲ್ಲಿ ಕಂಬಗಳು ಚಚ್ಚೌಕ ಮತ್ತು ಅಷ್ಟಮುಖಗಳಿದ್ದು, ಮೇಲ್ಭಾಗದಲ್ಲಿ ಫಲಕ ಮತ್ತು ಬೋಧಿಗೆಗಳನ್ನು ಹೊಂದಿವೆ.

ಈ ದೇವಾಲಯವನ್ನು ವಿಶಾಲವಾದ ಆವರಣದಲ್ಲಿ ನಿರ್ಮಿಸಿದ್ದು, ಇಲ್ಲಿ ಪ್ರಾಕಾರ ಗೋಡೆಯಿದೆ. ಪರಿಹಾರ ದೇವತೆಗಳಿಗೆ ಸ್ಥಾನ ಗೋಡೆಯಿರುತ್ತದೆ. ಇದಕ್ಕೆ ಪ್ರಾಕಾರ ಎಂದು ಹೆಸರು. ಪ್ರಾಕಾರವು ಒಂದೆ ಇರಬೇಕೆಂದಿಲ್ಲ ಆದರೆ ಒಂದೆ ಪ್ರಾಕಾರವಿರುವ ದೇವಾಲಯಗಳೇ ಹೆಚ್ಚಾಗಿವೆ. ಇಂತಹವನ್ನು ಏಕಸಾಲ ಎಂದು ಕರೆದಿರುತ್ತಾರೆ.[೨೧] ಇಂತಹ ಏಕಸಾಲ ಪ್ರಾಕಾರ ಗೋಡೆಯು ಈ ದೇವಾಲಯದಲ್ಲಿದ್ದು ಈಗ ಶಿಥಿಲವಾಗಿದೆ. ಗೋಡೆಯ ಕೆಲವು ಭಾಗಗಳಲ್ಲಿ ಶಿವಲಿಂಗ, ನಂದಿ, ನಾಗ, ಗಣೇಶ ಉಬ್ಬುಶಿಲ್ಪಗಳಿವೆ. ಈ ಪ್ರಾಕಾರ ಗೋಡೆಗೆ ಪ್ರವೇಶದ್ವಾರವನ್ನು ನಿರ್ಮಿಸಿದ್ದು ಪ್ರವೇಶದ್ವಾರದ ಮುಂಭಾಗದ ಗೋಡೆಯಲ್ಲಿ ಕುಸ್ತಿಪಟ್ಟುಗಳ, ಮಿಥುನ ಶಿಲ್ಪಗಳಿವೆ. ಈ ದೇವಾಲಯದ ಮುಂಭಾಗದಲ್ಲಿ ಯತಿಯ ಶಿಲ್ಪವಿದೆ. ತನ್ನ ನಾಲ್ಕು ಕೈಗಳಲ್ಲಿ ದಂಡ, ಕಮಂಡಲ ಮತ್ತು ಪದ್ಮದ ಗುಚ್ಚಗಳನ್ನು ಹಿಡಿದು ಸಮಭಂಗಿಯಲ್ಲಿ ನಿಂತಿರುವ ಯತಿಯು ಇನ್ನೊಂದು ಕೈ ವರದ ಮುದ್ರೆಯಲ್ಲಿದೆ.

ಸ್ಮಾರಕ : ಕನಕಾಚಲ ಲಕ್ಷ್ಮೀನರಸಿಂಹ ದೇವಾಲಯ

ಸ್ಥಳ : ಕನಕಗಿರಿ

ತಾಲೂಕು : ಕನಕಗಿರಿ

ಕಾಲಮಾನ : ಕ್ರಿ.ಶ. ೧೫ನೆಯ ಶತಮಾನ

ಈ ದೇವಾಲಯವು ಕನಕಗಿರಿಯ ದೇವಾಲಯಗಳಲ್ಲಿಯೇ ಅತ್ಯಂತ ಪ್ರಮುಖ ದೇವಾಲಯ. ಈ ದೇವಾಲಯದ ಗರ್ಭಗೃಹ, ಸುಖನಾಸಿ, ಮಧ್ಯರಂಗ ಮಂಟಪವನ್ನು ಅರಸರು ಕಟ್ಟಿಸಿದರು. ನಂತರ ಕೆಲವೆಡೆ ಈ ದೇವಾಲಯದಲ್ಲಿರುವ ಗಾರೆಶಿಲ್ಪಗಳನ್ನು ಮತ್ತು ಮೂರು ಮುಖ್ಯ ಬೃಹತ ಗೋಪುರಗಳನ್ನು, ಪ್ರಾಕಾರವನ್ನು ನಿರ್ಮಿಸಿದನು. ಈ ದೇವಾಲಯವು ಯಾವುದೇ ಅಧಿಷ್ಠಾನದ ಮೇಲೆ ನಿಂತಿಲ್ಲ. ಪ್ರದಕ್ಷಿಣ ಪಥ ದೇವಾಲಯದ ಹೊರಭಾಗದಲ್ಲಿದೆ. ಇಲ್ಲಿ ಯಾವುದಾದರೂ ಕಾರ್ಯ ಕ್ರಮಗಳಲ್ಲಿ ಹದಿನೈದು ಸಾವಿರಕ್ಕೂ ಹೆಚ್ಚು ಜನರು ಏಕಕಾಲದಲ್ಲಿ ಕುಳಿತುಕೊಳ್ಳಬಹುದು. ಅಷ್ಟೊಂದು ವಿಶಾಲವಾಗಿದೆ.

ಪೂರ್ವಾಭಿಮುಖವಾಗಿರುವ ಈ ದೇವಾಲಯದ ಗರ್ಭಗೃಹದಲ್ಲಿ ಕಪ್ಪುಶಿಲೆಯ ಲಿಂಗಾಕೃತಿಯ ಶಿಲ್ಪವು ನೆಲದೊಳಗಿನಿಂದ ಉದ್ಭವವಾಗಿರುವಂತೆ ಕಾಣಿಸುತ್ತದೆ. ಈ ಸಾಲಿಗ್ರಾಮದ

ಮೇಲೆ ಪಂಚಲೋಹದ ನರಸಿಂಹನ ಮುಖ ಮತ್ತು ಅದರ ಹಿಂದೆ ಪ್ರಭಾವಳಿಯನ್ನು ಕೆಲವು ವಿಶೇಷ ಪೂಜೆ, ಅಥವಾ ಉತ್ಸವದಂಥ ಸಂದರ್ಭಗಳಲ್ಲಿ ತೊಡಿಸಲಾಗುತ್ತದೆ. ಗರ್ಭಗೃಹದ ಮೇಲೆ ದ್ರಾವಿಡ ಶೈಲಿಯ ಶಿಖರವಿದೆ. ಈ ದೇವಾಲಯಕ್ಕೆ ಮೂರು ಪ್ರವೇಶ ದ್ವಾರಗಳಿವೆ. ಮುಖ್ಯ ಪ್ರವೇಶದ್ವಾರ ಸರ್ವ ಜನರಿಗೂ ಅವಕಾಶವಿರುವ ಮಾರ್ಗ, ಇನ್ನೊಂದು ಅರಸುದ್ವಾರ (ದಕ್ಷಿಣದ್ವಾರ) ಕೇವಲ ಅರಸು ಕುಟುಂಬಕ್ಕೆ ಮಾತ್ರ ತೆರೆಯಲಾಗುತ್ತಿತ್ತು. ಮತ್ತೊಂದು ಪುರೋಹಿತರಿಗಾಗಿ ಇರುವ ಪ್ರವೇಶ (ಉತ್ತರದ ನದಿಯ ಕಡೆ) ಪೂಜೆಗಾಗಿ ನೀರು ತರುವ ಅಗ್ರಹಾರಕ್ಕೆ ಹೊರಹೋಗುವ ಮಾರ್ಗ ಇದಾಗಿತ್ತು. ಈ ಮೂರು ಪ್ರವೇಶದ ಮೇಲೆ ಬೃಹತ್ತಾದ ಒಂದೇ ಎತ್ತರದಲ್ಲಿರುವ ಮೂರು ಮುಖ್ಯ ಶಿಖರಗಳಿವೆ. ಗರ್ಭಗೃಹ ಕಿರಿದಾದ ಬಾಗಿಲುಗಳನ್ನು ಹೊಂದಿದೆ. ಸುಖನಾಸಿ ಚಿಕ್ಕದಾಗಿದೆ. ಉತ್ತರ ಮತ್ತು ದಕ್ಷಿಣಕ್ಕೆ ಎರಡು ಚಿಕ್ಕಬಾಗಿಲುಗಳು ಇವೆ. ಪೂರ್ವಕ್ಕೆ ಮುಖ್ಯ ಬಾಗಿಲು ಇದೆ. ಇಲ್ಲಿ ತೊಟ್ಟಿಲು ಕಟ್ಟಲಾಗಿದೆ. ಇಲ್ಲಿಯ ಕಂಬಗಳು ಸಾಧಾರಣ ಕೆತ್ತನೆಯಿಂದ ಕೂಡಿವೆ.

ಈ ಕನಕಾಚಲ ದೇವಾಲಯದ ಪ್ರಮುಖ ಆಕರ್ಷಣೆ ಎಂದರೆ ನಾಟ್ಯ ಮಂಟಪವಾಗಿದೆ, ವಿಜಯನಗರ ಶಿಲೆ (ಬಿರುಸು ಬಿಳಿಯ ಕಲ್ಲು) ಮತ್ತು ಶೈಲಿಯಲ್ಲಿ ಕೆತ್ತಲಾದ ಹದಿನಾರು ಮುಖ್ಯ ಕಂಬಗಳು ಮತ್ತು ಹದಿನೆಂಟು ಸಾಧಾರಣ ಕೆತ್ತನೆಯ ಶಿಲಾಕಂಬಗಳು ಈ ರಂಗಮಂಟಪದ ವೈಶಿಷ್ಟ್ಯವಾಗಿದೆ. ಇದು ಯಾವುದೇ ಗೋಡೆಯ ಆಸರೆ ಇಲ್ಲದೆ ಇರುವುದು ಇದರ ಇನ್ನೊಂದು ವಿಶೇಷ. ಈ ಶಿಲ್ಪಗಳು ಯುದ್ಧಕ್ಕೆ ಹೋಗುವ ಮತ್ತು ರಾಜ, ರಾಣಿ ಮುಂತಾದವರ ಬಗ್ಗೆ ತಿಳಿಸುತ್ತದೆ. ಕನಕಾಚಲ ಲಕ್ಷ್ಮೀನರಸಿಂಹ ದೇವಾಲಯ ಗರ್ಭಗೃಹದ ಹಿಂಭಾಗದಲ್ಲಿ ನಿಂತು ಪೂರ್ವಾಭಿಮುಖವಾಗಿ ನೋಡಿದಾಗ ಪಂಚ ಕಳಸ (ಕನಕಾಚಲ, ಲಕ್ಷ್ಮೀ ದೇವಾಲಯಗಳ ಗರ್ಭಗೃಹದ ಮೇಲಿನ ಕಳಸ ಪೂರ್ವ, ಉತ್ತರ ಮತ್ತು ದಕ್ಷಿಣ ಬೃಹತ್ ಗೋಪುರಗಳ ಕಳಸ) ದರ್ಶನವಾಗುತ್ತದೆ.

ಗರುಡಗುಡಿಯು ಕನಕಾಚಲ ಲಕ್ಷ್ಮೀನರಸಿಂಹ ದೇವಾಲಯದ ಮುಂಭಾಗದಲ್ಲಿ ಒಂದು ಪುಟ್ಟ ಗರುಡ ಗುಡಿ ಇದೆ. ವಿಷ್ಣುವಿನ ವಾಹನ ಗರುಡ ತನ್ನೆರಡು ಕೈಮುಗಿದು ನರಸಿಂಹದೇವನ ಎದುರಾಗಿ ಕುಳಿತ ಚಿಕ್ಕ ವಿಗ್ರಹ ಈ ಗುಡಿಯಲ್ಲಿದೆ. ಈ ಗುಡಿಗೆ ತಾಗಿಕೊಂಡು ಪೂರ್ವಕ್ಕೆ ಧ್ವಜಸ್ತಂಭವಿದೆ.

ಲಕ್ಷ್ಮೀ ದೇವಾಲಯವು ಕನಕಾಚಲ ದೇವಾಲಯಕ್ಕೆ ತಾಗಿಕೊಂಡು ಎಡಭಾಗದಲ್ಲಿದೆ. ಈ ಲಕ್ಷ್ಮೀ ದೇವಾಲಯವನ್ನು ಪರಸಪ್ಪ ಉಡುಚನಾಯಕನು ಕಟ್ಟಿಸಿದನು. ಗರ್ಭಗೃಹ ಮತ್ತು ಸುಖನಾಸಿ ಹೊಂದಿದ ಈ ದೇವಾಲಯವು ಗರ್ಭಗೃಹದ ಮೇಲೆ ದ್ರಾವಿಡ ಶೈಲಿಯ ಶಿಖರವಿದೆ. ಗರ್ಭಗೃಹದಲ್ಲಿ ಕಪ್ಪು ಗ್ರಾನೈಟ್ ಶಿಲೆಯ ಲಕ್ಷ್ಮೀ ವಿಗ್ರಹವಿದೆ. ಸುಖನಾಸಿಯ ಕಂಬಗಳು ಸಾಧಾರಣ ಕೆತ್ತನೆ ಹೊಂದಿವೆ.

ಆಳ್ವಾರ ದೇವಾಲಯವು ಉತ್ತರ ಗೋಪುರದ ಎಡಭಾಗದ ಪ್ರಾಕಾರವನ್ನೇ ದೇವಾಲಯ ರೂಪಕ್ಕೆ ತಂದು ಶ್ರೀಮದ ಆಳ್ವಾರರ ೧೨ ವಿಗ್ರಹಗಳನ್ನು ಅಲ್ಲಿ ಪ್ರತಿಷ್ಠಾಪಿಸಲಾಗಿದೆ. ಈ ವಿಗ್ರಹಗಳು ಒಂದೇ ಕುಳಿತ ಭಂಗಿಯಲ್ಲಿ ಕಂಡರೂ ಕೆಲವು ಅಲ್ಪಸ್ವಲ್ಪ ಪ್ರಮಾಣದಲ್ಲಿ ಭಿನ್ನವಾಗಿ ಕಾಣುತ್ತವೆ. ಈ ದೇವಾಲಯದ ಎಡಭಾಗದ ಪುಟ್ಟ ಗುಡಿಯಲ್ಲಿ ಭಾರತಿ ಮುಖ್ಯ ಪ್ರಾಣದೇವರ ಗುಡಿ ಹಾಗೂ ಕೈಲಾಸವಾಸಿ ಶ್ರೀಮಹೇಶ್ವರ ದೇವಾಲಯಗಳಿವೆ ಮತ್ತು ಚಿಕ್ಕದಾದ ಕಲ್ಯಾಣ ಮಂಟಪವಿದೆ. ಪ್ರತಿ ವರ್ಷ ಜರುಗುವ ಕನಕರಾಯ ದೇವರ ಅನೇಕ ಉತ್ಸವಗಳು ಈ ಕಲ್ಯಾಣ ಮಂಟಪದಲ್ಲಿಯೇ ನಡೆಯುತ್ತವೆ. ಈ ಕಲ್ಯಾಣ ಮಂಟಪ ಎದುರಿಗೆ ಪಾಕಾಶಾಲೆ ಹಾಗೂ ಸಹಿ ನೀರಿನ ಬಾವಿ ಇದೆ. ಇದರ ಎಡಭಾಗದಲ್ಲಿ ಅಂದರೆ ಕನಕರಾಯನ ದೇವಾಲಯದ ಬಲಕ್ಕೆ ಬ್ರಹ್ಮದೇವರ ಗುಡಿ ಇದೆ.

ಸ್ಮಾರಕ : ಪಂಪಾಪತಿ ದೇವಾಲಯ

ಸ್ಥಳ : ಕನಕಗಿರಿ

ತಾಲೂಕು : ಕನಕಗಿರಿ

ಕಾಲಮಾನ : ಕ್ರಿ.ಶ. ೧೬ನೆಯ ಶತಮಾನ

ಕನಕಗಿರಿಯ ರಥಬೀದಿಯ ಬಲಬದಿಯಲ್ಲಿ ಪಂಪಾಪತಿ ದೇವಾಲಯ ಇದೆ. ಈ ದೇವಾಲಯವು ಸಭಾಮಂಟಪವು ಹತ್ತು ಅಂಕಣಗಳನ್ನು ಹೊಂದಿದೆ. ಪ್ರವೇಶ ಭಾಗವನ್ನು ಹೊರತುಪಡಿಸಿ ಎರಡೂ ಪಕ್ಕದಲ್ಲಿ ಗೋಡೆ ಇದೆ. ಸಭಾಮಂಟಪದಲ್ಲಿ ಮುಂದೆ, ಮಧ್ಯ ಹಾಗೂ ಕೊನೆಯಲ್ಲಿ ಪ್ರತಿ ಆರು ಕಂಬಗಗಳ ಮೂರು ಸಾಲುಗಳಿವೆ. ಇವುಗಳಲ್ಲಿ ಎರಡು ಕಂಬಗಳು, ಎಂಟು ಅರ್ಧ ಕಂಬಗಳು ಹಾಗೂ ಎರಡು ಮೂಲೆಗಂಬಗಳು ಇವೆ. ಮುಂದಿನ ನಾಲ್ಕು, ಕಂಬಗಳು ಪೀಠ, ಕಾಂಡ, ಕುಂಭ, ಕಳಸ, ತಾಡಿ ಹಾಗೂ ಫಲಕಗಳನ್ನು ಹೊಂದಿವೆ. ಕಾಂಡಭಾಗದ ಮಧ್ಯದಲ್ಲಿ ಅಷ್ಟಮುಖಗಳ ಎರಡು ಅಡ್ಡಪಟ್ಟಿಗಳಿವೆ. ಮಧ್ಯದ ನಾಲ್ಕು ಕಂಬಗಳು ಪೀಠ, ಕಾಂಡ, ಕಳಸ, ತಾಡಿ ಭಾಗಗಳನ್ನು ಹೊಂದಿವೆ. ಈ ಕಂಬಗಳ ಮೇಲೆ ಸರಳವಾದ ಬೋದುಗೆಗಳಿವೆ. ಅಂತರಾಳದ ಬಾಗಿಲ ಮುಂದಿನ ಅಂಕಣದ ಛತ್ತಿನಲ್ಲಿ ಮಾತ್ರ ಅರಳಿದ ಕಮಲಾಕೃತಿ ಇದ್ದು, ಉಳಿದ ಕಡೆ ಯಾವುದೇ ಅಲಂಕರಣೆ ಇಲ್ಲದೇ ಸರಳವಾಗಿದೆ.

ಅಂತರಾಳದ ದ್ವಾರಬಂಧವು ಪುಷ್ಪಶಾಖಾ, ಸ್ಥಂಬಶಾಖಾ ಹಾಗೂ ಜಾಲಂದರ ಶಾಖಾಗಳಿಂದ ಕೂಡಿ ಸ್ವಲ್ಪ ಆಕರ್ಷಕವಾಗಿದೆ. ಬಾಗಿಲ ಬದಿಯಲ್ಲಿ ತ್ರಿಶೂಲ, ಗದಾ, ಢಮರುಗ ಹಿಡಿದ ಶೈವ ದ್ವಾರಪಾಲರ ಶಿಲ್ಪಗಳಿವೆ. ಲಲಾಟಬಿಂಬವು ಯಾವುದೇ ಶಿಲ್ಪವನ್ನು ಒಳಗೊಂಡಿಲ್ಲ ಅಂತರಾಳದಲ್ಲಿ ಯಾವುದೇ ಕಂಬಗಳಿಲ್ಲ. ಎರಡೂ ಬದಿಯಲ್ಲಿ ಗೋಡೆ ಇದೆ. ಮಧ್ಯದಲ್ಲಿ ಗರ್ಭಗೃಹಕ್ಕೆ ಎದುರಾಗಿ ನಂದಿಯ ಶಿಲ್ಪವಿದೆ. ಅಂತರಾಳದ ಎಡಭಾಗವನ್ನು ವಿಸ್ತರಿಸಿ, ಮತ್ತೊಂದು ಗರ್ಭಗೃಹವನ್ನು ನಿರ್ಮಿಸಲಾಗಿದ್ದು, ಅಲ್ಲಿ ಪಾರ್ವತಿಯ ಶಿಲ್ಪ ಪ್ರತಿಷ್ಠಾಪಿಸಲಾಗಿದೆ. ಬಹುಶಃ ಈ ಭಾಗ ನಂತರದ ಸೇರ್ಪಡೆಯಾಗಿರಬಹುದು. ಗರ್ಭಗೃಹದ ಬಾಗಿಲು ಸರಳವಾಗಿದೆ. ಒಳಗೆ ನಾಲ್ಕು ಮೂಲೆಗಂಬಗಳಿವೆ.

ಭಿತ್ತಿನಲ್ಲಿ ಅರಳಿದ ಕಮಲಾಕೃತಿ ಇದೆ. ಗರ್ಭಗೃಹದ ಮಧ್ಯದಲ್ಲಿ ಶಿವಲಿಂಗವಿದೆ.

ದೇವಾಲಯವು ಮಂಚಬಂಧ ಅಧಿಷ್ಠಾನವನ್ನು ಹೊಂದಿದೆ. ಹೊರ ಭಿತ್ತಿಯು ಯಾವುದೇ ಅಲಂಕರಣವಿಲ್ಲದೆ ಸರಳವಾಗಿದೆ. ಸಭಾಮಂಟಪ ಮಾಡಿನ ಮುಂಜೂರು ಮುಂದೆ ಚಾಚಿದ್ದು, ಇಳಿಜಾರಾಗಿದೆ. ಅದರ ಮೇಲ್ಭಾಗದಲ್ಲಿ ಶಾಲಕೂಟಗಳಿರುವ ದೇವಕೋಷ್ಠಗಳಿದ್ದು ಅವುಗಳಲ್ಲಿ ಗಾರೆಶಿಲ್ಪಗಳಿವೆ. ಶಿಖರವನ್ನು ಇಟ್ಟಿಗೆ ಗಾರೆಗಳಿಂದ ನಿರ್ಮಿಸಲಾಗಿದೆ. ಅದು ಗರ್ಭಗೃಹದ ಉದ್ದಗಲಕ್ಕೂ ವಿಸ್ತರಿಸಿದ್ದು, ಏಕತಳ ವಿಮಾನ ಮಾದರಿಯಲ್ಲಿದೆ. ಮೇಲ್ಭಾಗದಲ್ಲಿ ಸ್ತೂಪಿಯು ವರ್ತುಳಾಕೃತಿಯಲ್ಲಿದೆ. ಆದ್ದರಿಂದ ಇದು ವೇಸರ ವಿಮಾನ ಮಾದರಿಯ ಶಿಖರವಾಗಿದೆ. ಈ ದೇವಾಲಯದ ಎದುರಿಗೆ ರಥಬೀದಿಯ ಇನ್ನೊಂದು ಪಕ್ಕದಲ್ಲಿ ನಂದಿ ಮಂಟಪವಿದೆ. ಈ ಮಂಟಪದ ಸುತ್ತಲೂ ಗೋಡೆಯನ್ನು ಮೇಲೆ ಶಿಖರವನ್ನು ಹೊಂದಿದೆ. ಒಳಗಡೆ ನಂದಿಯ ಶಿಲ್ಪವಿದೆ.[೨೨]

ಸ್ಮಾರಕ : ಶಂಕರಲಿಂಗ ದೇವಾಲಯ

ಸ್ಥಳ : ಕನಕಗಿರಿ

ತಾಲೂಕು : ಕನಕಗಿರಿ

ಕಾಲಮಾನ : ಕ್ರಿ.ಶ. ೧೬ನೆಯ ಶತಮಾನ

ಕನಕಗಿರಿಯ ಕನಕಾಚಲಪತಿ ದೇವಾಲಯದ ಮೂರು ಅಂಕಣಗಳನ್ನು ಹೊಂದಿದ್ದು ಇಲ್ಲಿ ಆರೂ ಕಂಬಗಳು, ಎರಡು ಅರ್ಧಗಂಬಗಳು ಇವೆ. ಮುಂದಿನ ಮಧ್ಯದೆರಡು ಕಂಬಗಳು ಕಾಂಡ, ಕುಂಬ ಭಾಗಗಳನ್ನು ಹೊಂದಿವೆ. ಕಾಂಡ ಭಾಗದಲ್ಲಿ ಕೆಳಗೆ ಮೇಲೆ ಚಚ್ಚೌಕ ಭಾಗಗಳಿದ್ದು, ಮಧ್ಯದಲ್ಲಿ ಅಷ್ಟಮುಖದ ಭಾಗಗಳಿವೆ. ಭೋದಿಗೆ ಸರಳವಾಗಿದೆ. ಛತ್ತು ಯಾವುದೇ ಅಲಂಕರಣವಿಲ್ಲದೆ ಸಮತಟ್ಟಾಗಿದೆ. ಮುಖಮಂಟಪದ ಮಧ್ಯದಲ್ಲಿ ಗರ್ಭಗೃಹಕ್ಕೆ ಎದುರಾಗಿ ನಂದಿಯ ಶಿಲ್ಪವಿದೆ. ಗರ್ಭಗೃಹದ ದ್ವಾರಬಂಧವು ರತ್ನಶಾಖ, ಲತಾಶಾಖ, ಸ್ಥಂಬಶಾಖಗಳಿಂದ ಕೂಡಿದೆ. ಬಾಗಿಲ ಇಕ್ಕೆಲಗಳಲ್ಲಿ ಪೂರ್ಣ ಕುಂಬದ ಅಲಂಕರಣೆ ಇದೆ. ಲಲಾಟಬಿಂಬದಲ್ಲಿ ಗಜಲಕ್ಷ್ಮೀಯ ಶಿಲ್ಪವಿದೆ. ಗರ್ಭಗೃಹದಲ್ಲಿ ನಾಲ್ಕು ಮೂಲೆಗಂಬಗಳಿದ್ದು, ಛತ್ತು ಅಲಂಕರಣೆಯಿಂದ ಕೂಡಿಲ್ಲ. ಮಧ್ಯದಲ್ಲಿ ಲಿಂಗವಿದೆ. ಅಧಿಷ್ಠಾನವು ಸ್ಪಷ್ಟವಾಗಿ ಹೊರಗೆ ಕಾಣುವುದಿಲ್ಲ. ಭಿತ್ತಿ ಸರಳವಾಗಿದೆ. ಗರ್ಭಗೃಹದ ಮೇಲೆ ಇಟ್ಟಿಗೆ ಗಾರೆಗಳಿಂದ ಕಟ್ಟಿದ ಶಿಖರವಿದ್ದು, ವೃತ್ತಾಕಾರದ ಸ್ಥೂಪಿಯನ್ನು ಒಳಗೊಂಡಿದೆ.

ಸ್ಥಳ : ಕನಕಗಿರಿ

ಸ್ಮಾರಕ : ಮಲ್ಲಿಕಾರ್ಜುನ ದೇವಾಲಯ

ತಾಲೂಕು : ಕನಕಗಿರಿ

ಕಾಲಮಾನ : ಕ್ರಿ.ಶ. ೧೬ನೆಯ ಶತಮಾನ

ಕನಕಗಿರಿಯ ರಥಬೀದಿಯ ಬಲಗಡೆಯಲ್ಲಿ ಮಲ್ಲಿಕಾರ್ಜುನ ದೇವಾಲಯ ಇದೆ. ಈ ದೇವಾಯಲವು ಮುಖಮಂಟಪವು ಮೂರು ಅಂಕಣಗಳನ್ನು ಒಳಗೊಂಡಿದ್ದು, ಅದರಲ್ಲಿ ಎರಡು

ಕಂಬಗಳು, ಆರು ಅರ್ಧಗಂಬಗಳು, ಎರಡು ಮೂಲೆಗಂಬಗಳಿವೆ. ಕಂಬಗಳು ಕೆಳಗೆ ಮಧ್ಯ ಮತ್ತು ಮೇಲಿ ಮೂರು ಚಚ್ಚೌಕ ಭಾಗಗಳನ್ನು ಒಳಗೊಂಡಿವೆ. ಭೋದುಗೆ ಸರಳವಾಗಿದೆ. ಛತ್ತು ಸಮತಟ್ಟಾಗಿದ್ದು, ಯಾವುದೇ ಅಲಂಕರಣೆಯನ್ನು ಒಳಗೊಂಡಿಲ್ಲ. ಗರ್ಭಗೃಹದ ದ್ವಾರಬಂಧವು ಸರಳವಾಗಿದೆ. ಲಲಾಟಬಿಂಬದಲ್ಲಿ ಪುಷ್ಪವಿದೆ. ಹಾಗೇ ಬಾಗಿಲ ಎರಡೂ ಪಟ್ಟಿಕೆಗಳಲ್ಲಿ ಹಾಗೂ ಲಲಾಟಬಿಂಬದಲ್ಲಿರುವಂತೆ ಪುಷ್ಪದ ಆಕೃತಿ ಇವೆ. ಗರ್ಭಗೃಹದ ಹಿಂದಿನ ಗೋಡೆಯಲ್ಲಿ ಎರಡು ಮೂಲೆಗಂಬಗಳಿವೆ. ಛತ್ತು ಸರಳವಾಗಿದೆ. ಗರ್ಭಗೃಹದ ಮಧ್ಯದಲ್ಲಿ ಅಗಲವಾದ ಪೀಠವಿದ್ದು, ಅದರಲ್ಲಿ ವಿಷ್ಣು ಹಾಗೂ ಶಿವಪಾರ್ವತಿಯರ ಶಿಲ್ಪದ ಎರಡು ಪ್ರತ್ಯೇಕ ಫಲಕಗಳಿವೆ. ಕೆಳಗಿನ ಪೀಠಕ್ಕೆ ಇವು ಹೊಂದಲಾರವು ಪ್ರಾಯಶಃ ಇವನ್ನು ನಂತರ ತಂದಿಟ್ಟಿರಬಹುದು.

ಅಧಿಷ್ಠಾನವು ಸ್ಪಷ್ಟವಾಗಿ ಹೊರಗೆ ಕಾಣಿಸುವುದಿಲ್ಲ. ಭಿತ್ತಿ ಯಾವುದೇ ಅಲಂಕರಣೆಯನ್ನು ಒಳಗೊಂಡಿಲ್ಲ. ಸಭಾಮಂಟಪದ ಮುಂಜೂರು ಇಳಿಜಾರಾಗಿದ್ದು ಮೇಲೆ ಶಾಲಕೂಟಗಳನ್ನು ಒಳಗೊಡಿಲ್ಲ. ಸಭಾಮಂಟಪ ಮುಂಜೂರು ಇಳಿಜಾರಾಗಿದ್ದು, ಮೇಲೆ ಶಾಲಕೂಟಗಳನ್ನು ಹೊಂದಿರುವ ದೇವಕೋಷ್ಠಗಳಿವೆ. ಇವುಗಳಲ್ಲಿದ್ದ ಶಿಲ್ಪಗಳು ಈಗ ನಾಶವಾಗಿವೆ. ಶಿಖರವನ್ನು ಇಟ್ಟಿಗೆ ಗಾರೆಯಿಂದ ನಿರ್ಮಿಸಲಾಗಿದೆ. ಮೇಲೆ ವೃತ್ತಾಕಾರದ ಅಲಂಕೃತ ಸ್ಥೂಪಿ ಶಿಖರದಲ್ಲಿದೆ. ಶೀಖರದ ಕೆಳಚೌಕ ಭಾಗದಲ್ಲಿ ನಾಲ್ಕು ದಿಕ್ಕಿಗೂ ನಂದಿಯ ಗಾರೆ ಶಿಲ್ಪಗಳನ್ನು ಇರಿಸಲಾಗಿದೆ. ವಿಶೇಷ ಅಲಂಕರಣೆಗಳಿಂದ ಶಿಖರವು ಆಕರ್ಷಕವಾಗಿದೆ.

ಸ್ಮಾರಕ : ನಗರೇಶ್ವರ ದೇವಾಲಯ

ಸ್ಥಳ : ಕನಕಗಿರಿ

ತಾಲೂಕು : ಕನಕಗಿರಿ

ಕಾಲಮಾನ : ಕ್ರಿ.ಶ. ೧೬ನೆಯ ಶತಮಾನ

ಕನಕಗಿರಿಯ ರಥ ಬೀಡಿಯ ಬಲಗಡೆಯಲ್ಲಿ ನಗರೇಶ್ವರ ದೇವಾಲಯವಿದೆ. ಇದರ ಮುಖ ಮಂಟಪವು ಮೂರು ಅಂಕಣಗಳನ್ನು ಒಳಗೊಂಡಿದೆ. ಇದರಲ್ಲಿ ನಾಲ್ಕು ಕಂಬಗಳು, ಎರಡು ಅರ್ಧಗಂಬಗಳು, ಎರಡು ಮೂಲೆಗಂಬಗಳಿವೆ. ಮುಂದಿನ ಮಧ್ಯದ ಎರಡು ಕಂಬಗಳಲ್ಲಿ ಪೀಠ ಮತ್ತು ಕಾಂಡ ಭಾಗಗಳಿವೆ. ಕಾಂಡ ಭಾಗದಲ್ಲಿ ಕೆಳಗೆ ಮೇಲೆ ಚಚ್ಚೌಕ ಭಾಗಗಳಿದ್ದು, ಮಧ್ಯದಲ್ಲಿ ಎಂಟು ಮುಖಗಳ ಲಂಬ ಭಾಗವಿದೆ. ಕೊನೆಯ ಎರಡು ಕಂಬಗಳು ಪೀಠ, ಕಾಂಡ ಭಾಗಗಳನ್ನು ಒಳಗೊಂಡಿದ್ದು, ಕಾಂಡ ಭಾಗಗಳಲ್ಲಿ ಚೌಕ, ಅರ್ಧವೃತ್ತ ಮತ್ತು ಎಂಟು ಮುಖಗಳ ಭಾಗಗಳಿವೆ. ಬೋದುಗೆ ಸರಳವಾಗಿದೆ. ಛತ್ತು ಯಾವುದೇ ಅಲಂಕರಣೆ ಹೊಂದಿರದೆ ಸಮತಟ್ಟಾಗಿದೆ. ಮುಖಮಂಟಪದ ಮಧ್ಯದಲ್ಲಿ ಗರ್ಭಗೃಹಕ್ಕೆ ಎದುರಾಗಿ ನಂದಿ ಶಿಲ್ಪವಿದೆ. ಗರ್ಭಗೃಹ ದ್ವಾರಬಾಗಿಲು ಸರಳವಾಗಿದ್ದು, ಲಲಾಟಬಿಂಬದಲ್ಲಿ ಗಜಲಕ್ಷ್ಮೀ ಶಿಲ್ಪವಿದೆ. ಒಳಗೆ ಯಾವುದೇ ಕಂಬಗಳಿಲ್ಲ. ಕೇವಲ ಸುತ್ತಲೂ ಗೋಡೆ ಇದೆ. ಮಧ್ಯದಲ್ಲಿ ಎತ್ತರವಾದ ಪೀಠದಲ್ಲಿ ಲಿಂಗವಿದೆ. ಛತ್ತು ಸರಳವಾಗಿದೆ.

ಅಧಿಷ್ಠಾನವು ಎತ್ತರವಾಗಿದ್ದು, ಮಂಚಬಂಧ ಶೈಲಿಯಲ್ಲಿದೆ. ಪ್ರದೇಶ ಭಾಗವನ್ನು ಬಿಟ್ಟು ಸುತ್ತೆಲ್ಲ ಗೋಡೆ ಇದೆ. ಗೋಡೆಯು ಅಲಂಕರಣವಿಲ್ಲದೆ ಸರಳವಾಗಿದೆ. ಮುಖಮಂಟಪದ ಮಾಡಿನ ಮುಂಜೂರು ಇಳಿಜಾರಾಗಿದ್ದು, ಮೇಲೆ ಎರಡು ಕೂಟ, ಮಧ್ಯದಲ್ಲಿ ಶಾಲವಿರುವ ದೇವಕೋಷ್ಠಗಳಿವೆ. ಅವುಗಳಲ್ಲಿದ ಗಾರೆಶಿಲ್ಪಗಳು ಈಗ ಭಗ್ನವಾಗಿವೆ. ಈ ಶಾಲಕೂಟಗಳ ಮಧ್ಯ ಕಂಗುರಗಳ ಅಕೃತಿಗಳಿವೆ. ಶಿಖರವನ್ನು ಇಟ್ಟಿಗೆ ಗಾರೆಯಿಂದ ನಿರ್ಮಿಸಲಾಗಿದ್ದು, ಅದು ಗರ್ಭಗೃಹದ ಉದ್ದಗಲಕ್ಕೂ ವ್ಯಾಪಿಸಿದೆ. ಶಿಖರದ ಕೆಳಹಂತದಲ್ಲಿ ಮೂಲೆಗೆ ನಂದಿಯ ಶಿಲ್ಪಗಳಿವೆ. ಸ್ಥೂಪಿಯು ಚೌಕವಾಗಿದೆ.

ಸ್ಮಾರಕ : ವೀರಭದ್ರೇಶ್ವರ ದೇವಾಲಯ

ಸ್ಥಳ : ಕನಕಗಿರಿ

ತಾಲೂಕು : ಕನಕಗಿರಿ

ಕಾಲಮಾನ : ಕ್ರಿ.ಶ. ೧೬ನೆಯ ಶತಮಾನ

ಕನಕಗಿರಿಯ ರಥ ಬೀದಿಯ ಬಲಗಡೆಯ ವೀರಭದ್ರೇಶ್ವರ ದೇವಾಲಯ ಇದೆ. ಈ ದೇವಾಲಯವು ಮುಖಮಂಟಪದಲ್ಲಿ ಆರು ಅಂಕಣಗಳಿದ್ದು, ಇದರಲ್ಲಿ ನಾಲ್ಕು ಕಂಬಗಳು, ಆರು ಅರ್ಧಗಂಬಗಳು, ಎರಡು ಮೂಲೆಗಂಬಗಳಿವೆ. ಈ ಕಂಬಗಳು ಕೆಳಗೆ, ಮಧ್ಯ ಮೇಲೆ ಮೂರು ಚಚ್ಚೌಕ ಭಾಗಗಳನ್ನು ಹೊಂದಿದ್ದು, ಮೇಲಕ್ಕೇರಿದಂತೆ ಸಪೂರವಾಗುತ್ತವೆ. ಕಂಬಗಳ ಮೇಲೆ ಸರಳವಾದ ಬೋದುಗೆ ಇದೆ. ಛತ್ತು ಅಲಂಕರಣೆಯಿಲ್ಲದೆ ಸಮತಟ್ಟಾಗಿದೆ. ಮುಖ ಮಂಟಪದಲ್ಲಿ ಗರ್ಭಗೃಹಕ್ಕೆ ಎದುರಾಗಿ ನಂದಿ ಶಿಲ್ಪವಿದೆ.

ಗರ್ಭಗೃಹದ ಬಾಗಿಲು ಸರಳವಾಗಿದ್ದು, ಲಲಾಟಬಿಂಬದಲ್ಲಿ ಪುಷ್ಪಾಕೃತಿ ಇದೆ. ಹಿಂದಿನ ಒಳಗೋಡೆಯಲ್ಲಿ ಎರಡು ಮೂಲೆಗಂಬಗಳಿವೆ. ಛತ್ತು ಸರಳವಾಗಿದೆ. ಗರ್ಭಗೃಹದ ಮಧ್ಯದಲ್ಲಿ ವೀರಭದ್ರನ ಶಿಲ್ಪವಿದೆ. ಅಧಿಷ್ಠಾನ ಮಂಚಬಂಧದಲ್ಲಿದೆ. ಪ್ರವೇಶ ಭಾಗಬಿಟ್ಟು ಸುತ್ತಲೂ ಗೋಡೆ ಇದೆ. ಗೋಡೆಯಲ್ಲಿ ಯಾವುದೇ ಅಲಂಕರಣೆಗಳಿಲ್ಲ. ಮುಖಮುಂಟಪದ ಮುಂಜೂರು ಇಳಿಜಾರಾಗಿದೆ. ಮೇಲೆ ಇಟ್ಟಿಗೆ ಗಾರೆಯಿಂದ ನಿರ್ಮಿಸಿದ ದೇವಕೋಷ್ಠಗಳಿವೆ. ಅವುಗಳ ಮೇಲೆ ಶಾಲಕೂಟಗಳಿವೆ. ದೇವಕೋಷ್ಠದೊಳಗಿದ್ದ ಗಾರೆಶಿಲ್ಪಗಳು ನಾಶವಾಗಿವೆ. ಶಿಖರವನ್ನು ಇಟ್ಟಿಗೆ, ಗಾರೆಗಳಿಂದ ನಿರ್ಮಿಸಲಾಗಿದೆ.[೨೩]

ಸ್ಮಾರಕ : ಆಂಜನೇಯ ದೇವಾಲಯ

ಸ್ಥಳ : ಮುಷ್ಟುರು

ತಾಲೂಕು : ಗಂಗಾವತಿ

ಕಾಲಮಾನ : ಕ್ರಿ.ಶ. ೧೬ನೆಯ ಶತಮಾನ

ಮುಷ್ಟುರು ಗಂಗಾವತಿ ತಾಲೂಕಿನ ಸಿದ್ದಾಪೂರ ಹೋಬಳಿಗೆ ಸೇರಿದ್ದು, ಗಂಗಾವತಿಯಿಂದ ಕಂಪ್ಲಿ, ಚಿಕ್ಕಜಂತಗಲ್ಲ ಹೋಗುವ ಮಾರ್ಗದಲ್ಲಿ ಹನ್ನೊಂದು ಕಿ.ಮೀ. ದೂರದಲ್ಲಿದೆ. ಹಿರೇಜಂತಗಲ್ಲ

ಗ್ರಾಮದ ಹನುಮಂತ ದೇವಾಲಯದ ಹಿಂಭಾಗದಲ್ಲಿನ ಕ್ರಿ.ಶ. ೧೫೪೪ರ ಶಾಸನದಲ್ಲಿ[೨೪] ಮುಷ್ಟುರು ಗ್ರಾಮದ ಬಗ್ಗೆ ಉಲ್ಲೇಖವಿದೆ. ಈ ದೇವಾಲಯದ ಹತ್ತಿರ ಕ್ರಿ.ಶ. ೧೬ನೇ ಶತಮಾನದ ಶಾಸನದಲ್ಲಿ[೨೫] ಮುಷ್ಟುರು ಗ್ರಾಮದ ಬಗ್ಗೆ ಉಲ್ಲೇಖವಿದೆ. ಸರಳವಾದ ವಿಜಯನಗರ ವಾಸ್ತುಶೈಲಿಯಲ್ಲಿ ಕಣಶಿಲೆಯನ್ನು ಉಪಯೋಗಿಸಿ ಕಟ್ಟಿರುವ ದೇವಾಲಯವಾಗಿದೆ. ದೇವಾಲಯವು ಎತ್ತರದ ಜಗತಿಯ ಮೇಲಿದ್ದು ಗರ್ಭಗೃಹ, ತೆರೆದ ಸಭಾಮಂಟಪ ಹೊಂದಿದೆ. ತೆರೆದ ಸಭಾಮಂಟಪದಲ್ಲಿ ಎರಡು ಮೂಲೆಕಂಬಗಳು, ಆರು ಅರ್ಧಕಂಬಗಳು, ಆರು ಮರದ ಕಂಬಗಳಿವೆ. ಗರ್ಭಗೃಹದ ಪ್ರವೇಶದ್ವಾರವು ಸರಳವಾದ ರಚನೆಯನ್ನು ಹೊಂದಿದೆ. ಇದರ ಮಧ್ಯದಲ್ಲಿ ಸುಮಾರು ಆರು ಅಡಿ ಎತ್ತರದ ಆಂಜನೇಯನ ಉಬ್ಬುಶಿಲ್ಪವಿದೆ. ಗರ್ಭಗೃಹ, ಸಭಾಮಂಟಪದ ಛತ್ತುಗಳು ಸಾದಾರಚನೆಯಿಂದ ಕೂಡಿವೆ. ಈ ದೇವಾಲಯದ ಮುಂಭಾಗದಲ್ಲಿ ಸುಮಾರು ಮೂವತ್ತು ಅಡಿ ಎತ್ತರದ ಗರುಡಗಂಬವಿದೆ.

ಸ್ಮಾರಕ : ಭೋಗಾಪುರೇಶ್ವರ ದೇವಾಲಯ

ಸ್ಥಳ : ನವಲಿ

ತಾಲೂಕು : ಗಂಗಾವತಿ

ಕಾಲಮಾನ : ಕ್ರಿ.ಶ. ೧೬ನೆಯ ಶತಮಾನ

ಈ ಗ್ರಾಮವು ಕನಕಗಿರಿಯಿಂದ ಹದಿನೈದು ಕಿ.ಮೀ. ದೂರದಲ್ಲಿದೆ. ಈ ದೇವಾಲಯವು ಗರ್ಭಗೃಹ, ಅಂತರಾಳ, ಸಭಾಮಂಟಪ, ಮುಖಮಂಟಪ ಹಾಗೂ ದ್ವಾರಗೋಪುರವನ್ನು ಹೊಂದಿದೆ. ಗರ್ಭಗೃಹದ ಪ್ರವೇಶ ದ್ವಾರವು ಸಾದಾ ಕೆತ್ತನೆಯಿಂದ ಕೂಡಿದೆ. ಇದರ ಮಧ್ಯದಲ್ಲಿ ಭಗ್ನಗೊಂಡ ಆಂಜನೆಯನ ಮೂರ್ತಿಯಿದೆ. ಆದರೂ ಅದು ಇಂದಿಗೂ ಪೂಜಿಸಲ್ಪಡುತ್ತಿರುವುದು ಇಲ್ಲಿಯ ವೈಶಿಷ್ಟ್ಯ. ಅಂತರಾಳ ಪ್ರವೇಶದ್ವಾರದ ಲಲಾಟಬಿಂಬದಲ್ಲಿ ಗಜಲಕ್ಷ್ಮೀ ಶಿಲ್ಪವಿದ್ದು, ಎರಡು ಬದಿಯಲ್ಲಿ ವೈಷ್ಣವ ದ್ವಾರಪಾಲಕರಿದ್ದಾರೆ. ಸಭಾಮಂಟಪವು ಒಂಬತ್ತು ಅಂಕಣಗಳಿಂದ ಕೂಡಿದೆ. ಇಲ್ಲಿ ಎಂಟು ಅರ್ಧಕಂಬಗಳು, ಎರಡು ಮೂಲೆ ಕಂಬಗಳು ಮತ್ತು ಆರು ಕಂಬಗಳಿವೆ. ಮಧ್ಯದ ನಾಲ್ಕು ಕಂಬಗಳ ಪೀಠ, ಕಾಂಡ, ಕಳಸ, ತಾಡಿ, ಫಲಕ ಭಾಗಗಳನ್ನು ಹೊಂದಿದ್ದು, ಕಂಬಗಳಲ್ಲಿ ವಿಷ್ಣು, ರಾಮ, ವರಾಹ, ರಾವಣ, ಮಜ್ಜಿಗೆ ಕಡೆಯುವ ಸ್ತ್ರೀ, ಗೋಪಾಲಕೃಷ್ಣ, ಬೇಡರ ಕಣ್ಣಪ್ಪ, ಕಾಳಿಂಗ ಮರ್ದನ, ಕೃಷ್ಣ, ಗಜಾನನ, ಗಂಡ ಬೇರುಂಡ ಇನ್ನು ಮುಂತಾದ ಉಬ್ಬು ಶಿಲ್ಪಗಳಿವೆ. ತೆರೆದ ಮುಖಮಂಟಪವು ಸಭಾಮಂಟಪದಷ್ಟೇ ಅಗಲವಾಗಿದ್ದು, ಸುತ್ತಲೂ ಗೋಡೆಯನ್ನು ಹೊಂದಿದೆ. ಇಲ್ಲಿ ಮೂರು ಅಂಕಣಗಳಿದ್ದು, ನಾಲ್ಕು ಕಂಬಗಳಿವೆ. ದೇವಾಲಯದ ಹಿಂಬದಿ ಹಾಗೂ ಮುಂಬದಿಗಳಲ್ಲಿ ಪ್ರಾಕಾರವಿದೆ. ಇದರ ಒಳಭಾಗದಲ್ಲಿ ಕಂಬಗಳ ಮಂಟಪಗಳಿವೆ. ಪ್ರಾಕಾರದ ಪೂರ್ವಭಾಗಕ್ಕೆ ಪ್ರವೇಶ ಮಂಟಪವಿದೆ. ಇದರ ಮೇಲೆ ಗೋಪುರವಿದ್ದು, ಐದು ತಲಗಳಿಂದ ಕೂಡಿದೆ. ಈ ದೇವಾಲಯವನ್ನು ಕಣಶಿಲೆಯಿಂದ ನಿರ್ಮಿಸಿದ್ದು, ಶಿಖರಕ್ಕೆ ಮಾತ್ರ ಇಟ್ಟಿಗೆ, ಗಾರೆಗಳನ್ನು

ಬಳಸಲಾಗಿದೆ. ಇದು ಏಕತಲ ವಿಮಾನ ಮಾದರಿಯಲ್ಲಿದ್ದು ಮೇಲೆ ವೃತ್ತಾಕಾರದ ಸ್ತೂಪಿಯಿದೆ. ಇದರ ಮುಂಭಾಗದ ಜಗತಿಯ ಮೇಲೆ ದೀಪಸ್ತಂಭವಿದೆ.

ಸ್ಮಾರಕ : ವೀರಭದ್ರ ದೇವಾಲಯ

ಸ್ಥಳ : ನವಲಿ

ತಾಲೂಕು : ಗಂಗಾವತಿ

ಕಾಲಮಾನ : ಕ್ರಿ.ಶ. ೧೬ನೆಯ ಶತಮಾನ

ನವಲಿ ಗ್ರಾಮದ ಮಧ್ಯದಲ್ಲಿ ಪೂರ್ವಾಭಿಮುಖವಾಗಿ ಈ ದೇವಾಲಯವಿದೆ. ಈ ದೇವಾಲಯವು ಜಗತಿಯ ಮೇಲಿದ್ದು ಮೂರು ಗರ್ಭಗೃಹಗಳು, ಅಂತರಾಳ ಹಾಗೂ ಸಭಾಮಂಟಪಗಳನ್ನು ಹೊಂದಿದೆ. ಪ್ರಧಾನ ಗರ್ಭಗೃಹದ ಪ್ರವೇಶದ್ವಾರದಲ್ಲಿ ದ್ವಾರಪಾಲಕರು ಮತ್ತು ಲಲಾಟಬಿಂಬದಲ್ಲಿ ಗಣೇಶನ ಉಬ್ಬುಶಿಲ್ಪಗಳಿವೆ. ಗರ್ಭಗೃಹದಲ್ಲಿ ವೀರಭದ್ರ ಶಿಲ್ಪವಿದೆ. ಅಂತರಾಳದ ಬಾಗಿಲವಾಡದಲ್ಲಿ ಶೈವದ್ವಾರಪಾಲಕರು, ಲಲಾಟಬಿಂಬದಲ್ಲಿ ಗಜಲಕ್ಷ್ಮೀಯ ಉಬ್ಬುಶಿಲ್ಪಗಳಿವೆ. ಇದರಲ್ಲಿ ಗರ್ಭಗೃಹಕ್ಕೆ ಎದುರಾಗಿ ನಂದಿ ಶಿಲ್ಪವಿದೆ. ಉಳಿದೆರಡು ಗರ್ಭಗೃಹಗಳಲ್ಲಿ ಶಿವಲಿಂಗ ಹಾಗೂ ಕಾಳಿಕಾದೇವಿ ಶಿಲ್ಪಗಳಿವೆ. ತೆರೆದ ಸಭಾಮಂಟಪವು ಒಂಬತ್ತು ಅಂಕಣಗಳಿಂದ ಕೂಡಿದ್ದು, ಇದರಲ್ಲಿ ಆರು ಕಂಬಗಳು, ಹತ್ತು ಅರ್ಧಕಂಬಗಳಿವೆ. ಈ ಕಂಬಗಳಲ್ಲಿ ಗಜಾನನ, ಶಿವಲಿಂಗ, ಷಣ್ಮುಖ, ಬೇಡರ ಕಣ್ಣಪ್ಪ, ಅರ್ಧನಾರೀಶ್ವರ, ಲಿಂಗವನ್ನು ಪೂಜಿಸುತ್ತಿರುವ ಆನೆ, ಗರುಡ, ನಾಗಬಂಧ, ಆಂಜನೇಯ, ನಂದಿ, ಭಕ್ತರಿಗೆ ಸಂಬಂಧಿಸಿದ ಶಿಲ್ಪ, ಮುಂತಾದ ಉಬ್ಬುಶಿಲ್ಪಗಳಿವೆ. ಸಭಾಮಂಟಪದ ಮೇಲಿರುವ ದೇವಕೋಷ್ಠಗಳ ಮೇಲೆ ಶಾಲಕೂಟಗಳಿವೆ. ಗರ್ಭಗೃಹದ ಮೇಲಿನ ಶಿಖರ ಏಕತಲ ವಿಮಾನ ಮಾದರಿಯಲ್ಲಿದೆ. ದೇವಾಲಯದ ಮುಂಭಾಗದಲ್ಲಿ ಸುಮಾರು ಮೂವತ್ತು ಅಡಿ ಎತ್ತರದ ದೀಪಸ್ತಂಭವಿದೆ.

ಸ್ಥಳ : ಎಮ್ಮಿಗುಡ್ಡ

ಸ್ಮಾರಕ : ಶಿವಪಾರ್ವತಿ ದೇವಾಲಯ

ತಾಲೂಕು : ಕೊಪ್ಪಳ

ಕಾಲಮಾನ : ಕ್ರಿ.ಶ. ೧೬ನೆಯ ಶತಮಾನ

ಎಮ್ಮಿಗುಡ್ಡವು ಗಂಗಾವತಿ ಕೊಪ್ಪಳ ರಸ್ತೆಯಲ್ಲಿ ಗಂಗಾವತಿಯಿಂದ ಸುಮಾರು ಹನ್ನೆರಡು ಕಿ.ಮೀ. ದೂರದಲ್ಲಿದೆ. ಶಿವಪಾರ್ವತಿ ದೇವಾಲಯವು ದೊಡ್ಡದಾಗಿದ್ದು, ಇದರಲ್ಲಿ ಗರ್ಭಗೃಹ, ಅಂತರಾಳ, ಸಭಾಮಂಟಪ, ಮುಖಮಂಟಪ, ಮಹಾದ್ವಾರ, ನಂದಿ ಮಂಟಪ ಇವೆ. ಮುಖಮಂಟಪ, ಸಭಾಮಂಟಪವು ಸರಳವಾಗಿವೆ. ಗರ್ಭಗೃಹವು ಚೌಕಾಕಾರವಾಗಿದ್ದು, ಇದರಲ್ಲಿ ಒಡೆದ ಶಿವ ಪಾರ್ವತಿ ವಿಗ್ರಹವಿದೆ. ಸಭಾಮಂಟಪವು ಒಂಬತ್ತು ಅಂಕಣಗಳಿಂದ ಕೂಡಿದ್ದು, ಅದರಲ್ಲಿ ಎರಡು ಮೂಲೆಕಂಬಗಳು, ಆರು ಅರ್ಧಕಂಬಗಳು ಮತ್ತು ಆರು ಕಂಬಗಳಿವೆ. ಇವುಗಳು ಚೌಕಾಕಾರವಾಗಿದ್ದು,

ಮೇಲ್ಭಾಗದಲ್ಲಿ ಸರಳ ಬೋದಿಗೆಗಳನ್ನು ಹೊಂದಿದೆ. ಮುಂಭಾಗದಲ್ಲಿ ಶೈವದ್ವಾರಪಾಲಕರ ಉಬ್ಬು ಶಿಲ್ಪಗಳಿವೆ. ಅಂತರಾಳದ ಬಾಗಿಲ ಇಕ್ಕೆಲಗಳಲ್ಲಿ ದೇವಕೋಷ್ಠಗಳಿವೆ. ಸಭಾಮಂಟಪದ ಮಾಡಿನ ಅಂಚಿನಲ್ಲಿ ಇಟ್ಟಿಗೆ ಗಾರೆಗಳಿಂದ ನಿರ್ಮಿಸಿದ ದೋವಕೋಷ್ಠಗಳಿದ್ದು, ಅವುಗಳ ಮೇಲೆ ಶಾಲ ಕೂಟಗಳಿವೆ. ಗರ್ಭಗೃಹದ ಮೇಲೆ ದ್ರಾವಿಡ ಶೈಲಿಯ ಶಿಖರವಿದೆ. ಶಿಖರವನ್ನು ಇಟ್ಟಿಗೆ ಗಾರೆಯಿಂದ ನಿರ್ಮಿಸಲಾಗಿದೆ. ದೇವಾಲಯದ ಎದುರಿಗೆ ತೆರೆದ ನಂದಿ ಮಂಟಪವಿದೆ.

ಸ್ಮಾರಕ : ಕನಕರಾಯ ದೇವಾಲಯ

ಸ್ಥಳ : ಎಮ್ಮಿಗುಡ್ಡ

ತಾಲೂಕು : ಕೊಪ್ಪಳ

ಕಾಲಮಾನ : ಕ್ರಿ.ಶ. ೧೬ನೆಯ ಶತಮಾನ

ಈ ದೇವಾಲಯವು ಗರ್ಭಗೃಹ, ಅಂತರಾಳ, ಸಭಾಮಂಟಪ ಮತ್ತು ತೆರೆದ ಮುಖಮಂಟಪಗಳಿಂದ ಕೂಡಿದೆ. ಇದಕ್ಕೆ ದ್ವಾರಮಂಟಪ ಹಾಗೂ ಸುತ್ತಲೂ ಪ್ರಾಕಾರವಿದೆ. ಗರ್ಭಗೃಹದ ಒಳಭಾಗದಲ್ಲಿ ಎರಡು ಮೂಲೆ ಕಂಬಗಳಿದ್ದು, ಮಧ್ಯದಲ್ಲಿ ಖಾಲಿ ಪೀಠ, ಭುವನೇಶ್ವರಿಯಲ್ಲಿ ಪದ್ಮಗಳಿವೆ. ಅಂತರಾಳದ ಬಾಗಿಲು ಸಾದಾ ಕೆತ್ತನೆಯಿಂದ ಕೂಡಿದ್ದು, ಇದರ ಎರಡೂ ಬದಿಗೆ ದ್ರಾವಿಡ ಶೈಲಿಯ ಶಿಖರಪಟ್ಟಿಕೆಗಳ್ಳುಳ ದೇವಕೋಷ್ಠಗಳಿವೆ. ಈ ಕಂಬಗಳು ಚೌಕಾಕಾರವಾಗಿದ್ದು, ಮೇಲ್ಭಾಗದಲ್ಲಿ ವೃತ್ತಾಕಾರದ ಬೋದಿಗೆಗಳನ್ನು ಹೊಂದಿವೆ. ಮುಂಭಾಗದ ಎರಡು ಕಂಬಗಳಲ್ಲಿ ಶಂಖ, ಚಕ್ರ, ಗದಾಧಾರಿಗಳಾದ ವೈಷ್ಣವ ದ್ವಾರಪಾಲಕರ ಉಬ್ಬು ಶಿಲ್ಪಗಳಿವೆ. ಮೂರು ಅಂಕಣಗಳಿಂದ ಕೂಡಿದ ಮುಖಮಂಟಪದಲ್ಲಿ ನಾಲ್ಕು ಕಂಬಗಳಿವೆ. ಈ ದೇವಾಲಯದ ಎದುರಿಗೆ ಗರುಡನ ಚಿಕ್ಕ ಗರ್ಭಗೃಹವಿದೆ. ದೇವಾಲಯದ ಮುಂದಿನ ದ್ವಾರಮಂಟಪದಲ್ಲಿ ಮೂರು ಅಂಕಣಗಳಿದ್ದು, ಇದರಲ್ಲಿ ನಾಲ್ಕು ಅರ್ಧಕಂಬಗಳು, ಮೂರು ಕಂಬಗಳಿವೆ. ಕಂಬಗಳ ಕೆಳಭಾಗದಲ್ಲಿ ಪೂರ್ಣ ಕುಂಬಗಳು, ಮೇಲ್ಭಾಗದಲ್ಲಿ ಇಳಿಬಿದ್ದ ಮೊಗ್ಗುಗಳು ಇವೆ. ಇದರ ಮೇಲ್ಛಾವಣಿ ಸರಳವಾಗಿದು. ಮೇಲಿರುವ ಗೋಪುರ ನಾಶವಾಗಿದೆ.

ಸ್ಮಾರಕ : ಆಂಜನೇಯ ದೇವಾಲಯ

ಸ್ಥಳ : ಹುಲಿಹೈದರ

ತಾಲೂಕು : ಗಂಗಾವತಿ

ಕಾಲಮಾನ : ಕ್ರಿ.ಶ. ೧೬ನೆಯ ಶತಮಾನ

ಈ ಗ್ರಾಮವು ಕನಕಗಿರಿಯಿಂದ ಹತ್ತು ಕಿ.ಮೀ. ದೂರದಲ್ಲಿದೆ. ಈ ದೇವಾಲಯವು ಗ್ರಾಮದ ಮಧ್ಯದಲ್ಲಿ ಪೂರ್ವಾಭಿಮುಖವಾಗಿದ್ದು, ವಿಜಯನಗರ ಶೈಲಿಯನ್ನು ಹೊಂದಿದೆ. ಈ ದೇವಾಲಯವು ಗರ್ಭಗೃಹ ಮತ್ತು ಮುಖಮಂಟಪವನ್ನು ಹೊಂದಿದೆ. ಊರ್ಧ್ವ ವಿನ್ಯಾಸದಲ್ಲಿ ಅಧಿಷ್ಠಾನ, ಭಿತ್ತಿ, ಪ್ರಸ್ತರ, ಗ್ರೀವ, ಸ್ತೂಪಿ, ಶಿಖರವನ್ನು ಹೊಂದಿದೆ. ಭಿತ್ತಿಯನ್ನು ಶಿಲೆಗಳಿಂದ

ಕಟ್ಟಲಾಗಿದೆ. ಪ್ರಸ್ತರದ ಮುಂಭಾಗವನ್ನು ಇಳಿಜಾರಾದ ಮುಂಜೂರು, ಇಟ್ಟಿಗೆ ಗಾರೆಯಿಂದ ನಿರ್ಮಿತವಾಗಿ ಕಂಗುರಾಕೃತಿಗಳ ಅಲಂಕರಣೆ ಇದೆ. ಶಿಖರವು ಇಟ್ಟಿಗೆ, ಗಾರೆಯ ನಿರ್ಮಾಣದ, ಏಕಸ್ಥಲ ದ್ರಾವಿಡ ಮಾದರಿ ಶಿಖರವು ಗರ್ಭಗೃಹದ ಉದ್ದಗಲಕ್ಕೂ ವ್ಯಾಪಿಸಿದೆ. ಸ್ತೂಪಿಯು ವೃತ್ತಾಕಾರದಲ್ಲಿದೆ. ಈ ದೇವಾಲಯದ ಮುಂದಿನ ಜಗತಿಯ ಮೇಲೆ ಗರುಡ ಸ್ತಂಭವಿದೆ. ಈ ದೇವಾಲಯದ ಬಲಭಾಗದಲ್ಲಿ ಬಾವಿ ಇದೆ. ಈ ದೇವಾಲಯದ ಪಕ್ಕದಲ್ಲಿ ಶಿವಲಿಂಗ, ನಂದಿ, ನಾಗರ ಕಲ್ಲು, ಗಜಲಕ್ಷ್ಮೀ ಶಿಲ್ಪಗಳಿವೆ.

ದೇವಾಲಯಗಳ ಪಟ್ಟಿ

ಕ್ರಸಂ.	ದೇವಾಲಯ	ಗ್ರಾಮ	ತಾಲೂಕು	ಕಾಲ
೧.	ಚಂದ್ರಮೌಳೇಶ್ವರ	ಹನುಮನಹಳ್ಳಿ	ಗಂಗಾವತಿ	೧೪ನೇ ಶತಮಾನ
೨.	ಆಂಜನೇಯ	ಅಂಜನಾದ್ರಿ ಬೆಟ್ಟ	ಗಂಗಾವತಿ	೧೪-೧೫ನೇ ಶತಮಾನ
೩.	ವೀರಭದ್ರ	ತಾರಾಪರ್ವತ	ಗಂಗಾವತಿ	೧೪ನೇ ಶತಮಾನ
೪.	ವೀರಭದ್ರ	ಚಿಕ್ಕರಾಮಪುರ	ಗಂಗಾವತಿ	೧೫ನೇ ಶತಮಾನ
೫.	ಆಂಜನೇಯ	ರಾಮಪುರ	ಗಂಗಾವತಿ	೧೫ನೇ ಶತಮಾನ
೬.	ವೀರಭದ್ರ	ಅಗಳಕೇರಾ	ಗಂಗಾವತಿ	೧೫ನೇ ಶತಮಾನ
೭.	ಶಿವಲಿಂಗ	ಶಿವಪುರ	ಗಂಗಾವತಿ	೧೫ನೇ ಶತಮಾನ
೮.	ಪ್ರಸನ್ನ ವಿರುಪಾಕ್ಷ	ಹಿರೇಜಂತಗಲ್ಲು	ಗಂಗಾವತಿ	೧೫ನೇ ಶತಮಾನ
೯.	ಆಂಜನೇಯ	ಹಿರೇಜಂತಗಲ್ಲು	ಗಂಗಾವತಿ	೧೫ನೇ ಶತಮಾನ
೧೦.	ವೀರಭದ್ರ	ಹಿರೇಜಂತಗಲ್ಲು	ಗಂಗಾವತಿ	೧೫ನೇ ಶತಮಾನ
೧೧.	ಬೆಟ್ಟದ ವೀರಭದ್ರ	ಹಿರೇಜಂತಗಲ್ಲು	ಗಂಗಾವತಿ	೧೫ನೇ ಶತಮಾನ
೧೨.	ಸಂಗಮೇಶ್ವರ	ಕೊಪ್ಪಳ	ಕೊಪ್ಪಳ	೧೫ನೇ ಶತಮಾನ
೧೩.	ವೆಂಕಟೇಶ್ವರ	ಕೆರೆಹಳ್ಳಿ	ಕೊಪ್ಪಳ	೧೫ನೇ ಶತಮಾನ
೧೪.	ಕನಕಾಚಲ ಲಕ್ಷ್ಮಿನರಸಿಂಹ	ಕನಕಗಿರಿ	ಗಂಗಾವತಿ	೧೫ನೇ ಶತಮಾನ
೧೫.	ರಂಗನಾಥ	ಆನೆಗೊಂದಿ	ಗಂಗಾವತಿ	೧೫ನೇ ಶತಮಾನ
೧೬.	ಆಂಜನೇಯ	ಸಂಗಾಪುರ	ಗಂಗಾವತಿ	೧೫ನೇ ಶತಮಾನ
೧೭.	ವೀರಭದ್ರ	ತಾವರಗೆರೆ	ಕುಷ್ಟಗಿ	೧೫ನೇ ಶತಮಾನ
೧೮.	ಆಂಜನೇಯ	ತಾವರಗೆರೆ	ಕುಷ್ಟಗಿ	೧೫ನೇ ಶತಮಾನ
೧೯.	ಶಿವಲಿಂಗ	ತಾವರಗೆರೆ	ಕುಷ್ಟಗಿ	೧೫ನೇ ಶತಮಾನ

೨೦.	ವೆಂಕಟೇಶ್ವರ	ವೆಂಕಟಗಿರಿ	ಗಂಗಾವತಿ	೧೫ನೇ ಶತಮಾನ
೨೧.	ಈಶ್ವರ	ಪಂಪಾ ಸರೋವರ	ಗಂಗಾವತಿ	೧೫ನೇ ಶತಮಾನ
೨೨.	ಜಯಲಕ್ಷ್ಮೀ	ಪಂಪಾ ಸರೋವರ	ಗಂಗಾವತಿ	೧೫ನೇ ಶತಮಾನ
೨೩.	ಮಲ್ಲಿಕಾರ್ಜುನ	ಕುಮ್ಮಟದುರ್ಗಾ	ಗಂಗಾವತಿ	೧೫ನೇ ಶತಮಾನ
೨೪.	ಈರಣ್ಣ	ಆನೆಗೊಂದಿ	ಗಂಗಾವತಿ	೧೫ನೇ ಶತಮಾನ
೨೫.	ವೀರಭದ್ರೇಶ್ವರ	ಆನೆಗೊಂದಿ	ಗಂಗಾವತಿ	೧೫ನೇ ಶತಮಾನ
೨೬.	ಗವಿರಂಗನಾಥ	ಆನೆಗೊಂದಿ	ಗಂಗಾವತಿ	೧೫ನೇ ಶತಮಾನ
೨೭.	ಗಣೇಶ	ಆನೆಗೊಂದಿ	ಗಂಗಾವತಿ	೧೫ನೇ ಶತಮಾನ
೨೮.	ವೀರಭದ್ರ	ಅಯ್ಯೋಧ/ ನಾರಾಯಣಪೇಟೆ	ಕೊಪ್ಪಳ	೧೬ನೇ ಶತಮಾನ
೨೯.	ಆಂಜನೇಯ	ಮುಸ್ಟೂರು	ಗಂಗಾವತಿ	೧೬ನೇ ಶತಮಾನ
೩೦.	ಆಂಜನೇಯ	ಕನಕಗಿರಿ	ಗಂಗಾವತಿ	೧೬ನೇ ಶತಮಾನ
೩೧.	ವೀರಭದ್ರ	ಕನಕಗಿರಿ	ಗಂಗಾವತಿ	೧೬ನೇ ಶತಮಾನ
೩೨.	ಶಂಕರಲಿಂಗ	ಕನಕಗಿರಿ	ಗಂಗಾವತಿ	೧೬ನೇ ಶತಮಾನ
೩೩.	ವೀರಭದ್ರ	ಅಳವಂಡಿ	ಕೊಪ್ಪಳ	೧೬ನೇ ಶತಮಾನ
೩೪.	ಭೋಗಾಪುರೇಶ್ವರ	ನವಲಿ	ಗಂಗಾವತಿ	೧೬ನೇ ಶತಮಾನ
೩೫.	ಸೂರ್ಯ	ಕನಕಗಿರಿ	ಗಂಗಾವತಿ	೧೬ನೇ ಶತಮಾನ
೩೬.	ವೀರಭದ್ರ	ಇರಕಲ್ಲಗಡ	ಕೊಪ್ಪಳ	೧೬ನೇ ಶತಮಾನ
೩೭.	ವಿಷ್ಣು	ಬಂಕಾಪುರ	ಗಂಗಾವತಿ	೧೬ನೇ ಶತಮಾನ
೩೮.	ಲಕ್ಷ್ಮೀ	ಬಸ್ರಿಹಾಳ	ಗಂಗಾವತಿ	೧೬ನೇ ಶತಮಾನ
೩೯.	ಉಡಸಲಮ್ಮ	ಕನಕಗಿರಿ	ಗಂಗಾವತಿ	೧೬ನೇ ಶತಮಾನ
೪೦.	ಪಂಪಾಪತಿ	ಹಳೇ ಅಯೋಧ್ಯೆ	ಗಂಗಾವತಿ	೧೬ನೇ ಶತಮಾನ
೪೧.	ಈಶ್ವರ/ನಂದಿಬಂಡಿ ಬಸವಣ್ಣ	ಮುಂಡರಗಿ (ಹ್ಯಾಟಿ)	ಕೊಪ್ಪಳ	೧೬ನೇ ಶತಮಾನ
೪೨.	ಈಶ್ವರ	ಮುದ್ದಾಬಳ್ಳಿ	ಕೊಪ್ಪಳ	೧೬ನೇ ಶತಮಾನ
೪೩.	ಅಮರೇಶ್ವರ	ಕೂಕನಪಲ್ಲಿ	ಕೊಪ್ಪಳ	೧೬ನೇ ಶತಮಾನ
೪೪.	ಈಶ್ವರ	ಎಮ್ಮಿಗುಡ್ಡ	ಕೊಪ್ಪಳ	೧೬ನೇ ಶತಮಾನ
೪೫.	ಗಜಲಕ್ಷ್ಮಿ	ಕನಕಗಿರಿ	ಗಂಗಾವತಿ	೧೬ನೇ ಶತಮಾನ

೪೬.	ಆಂಜನೇಯ	ಹನುಮಸಾಗರ	ಕುಷ್ಟಗಿ	೧೬ನೇ ಶತಮಾನ
೪೭.	ಈಶ್ವರ	ಹನುಮಸಾಗರ	ಕುಷ್ಟಗಿ	೧೬ನೇ ಶತಮಾನ
೪೮.	ಆಂಜನೇಯ	ಕರಡಿಗುಡ್ಡ	ಗಂಗಾವತಿ	೧೬ನೇ ಶತಮಾನ
೪೯.	ವೀರಭದ್ರ	ನವಲಿ	ಗಂಗಾವತಿ	೧೬ನೇ ಶತಮಾನ
೫೦.	ಬಸವಣ್ಣ	ಶಿವಪುರ	ಕೊಪ್ಪಳ	೧೬ನೇ ಶತಮಾನ
೫೧.	ಹಗ್ಗಮಾರು ಹನುಮಂತ	ಆನೆಗೊಂದಿ	ಗಂಗಾವತಿ	೧೬ನೇ ಶತಮಾನ
೫೨.	ಮಲ್ಲೇಶ್ವರ	ಆನೆಗೊಂದಿ	ಗಂಗಾವತಿ	೧೬ನೇ ಶತಮಾನ
೫೩.	ಆಂಜನೇಯ	ಗುಡದೂರ	ಗಂಗಾವತಿ	೧೬ನೇ ಶತಮಾನ
೫೪.	ಪಂಪಾಪತಿ	ಕನಕಗಿರಿ	ಗಂಗಾವತಿ	೧೬ನೇ ಶತಮಾನ
೫೫.	ಈಶ್ವರ	ಗಂಗಾವತಿ	ಗಂಗಾವತಿ	೧೬ನೇ ಶತಮಾನ
೫೬.	ಶಿವಪಾರ್ವತಿ	ಎಮ್ಮಿಗುಡ್ಡ	ಗಂಗಾವತಿ	೧೬ನೇ ಶತಮಾನ
೬೦.	ಆಂಜನೇಯ	ಎಮ್ಮಿಗುಡ್ಡ	ಗಂಗಾವತಿ	೧೬ನೇ ಶತಮಾನ
೬೧.	ಲಕ್ಷ್ಮೀನರಸಿಂಹ	ಎಮ್ಮಿಗುಡ್ಡ	ಗಂಗಾವತಿ	೧೬ನೇ ಶತಮಾನ
೬೨.	ಮಹಿಷಾಸುರ ಮರ್ದಿನಿ	ಎಮ್ಮಿಗುಡ್ಡ	ಗಂಗಾವತಿ	೧೬ನೇ ಶತಮಾನ

೩.೨ ರಕ್ಷಣಾವಾಸ್ತು ಶಿಲ್ಪ

ಕರ್ನಾಟಕದಲ್ಲಿ ಜಲದುರ್ಗ, ಗಿರಿದುರ್ಗ, ವನದುರ್ಗ ಹಾಗೂ ಸ್ಥಳದುರ್ಗಗಳೆಂಬ ಚತುರ್ವಿಧ ಕೋಟೆಗಳನ್ನು ಕಾಣಬಹುದು. ಪಶ್ಚಿಮದ ಕರಾವಳಿ ಜಲದುರ್ಗಗಳಿಗೆ ಸ್ಥಾನವಾದರೆ, ಸಹ್ಯಾದ್ರಿ ಬೆಟ್ಟಗಳಲ್ಲಿ ಗಿರಿದುರ್ಗ ಹಾಗೂ ವನದುರ್ಗಗಳನ್ನು ಕಾಣಬಹುದು. ಉತ್ತರ ಕರ್ನಾಟಕ ಭಾಗದಲ್ಲಿ ಸ್ಥಳದುರ್ಗಗಳು ಕಂಡು ಬರುತ್ತವೆ. ಕನ್ನಡದ ಅರಸರು ಕೋಟೆಗಳ ನಿರ್ಮಾಣದ ಸ್ಥಳಗಳ ಆಯ್ಕೆಯಲ್ಲಿ ದುರ್ಗ ನಿರ್ಮಾಣಗಳ ತಾಂತ್ರಿಕ ನಿಯಮಗಳಂತೆ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿಯೂ ನಮೂದಿಸಿದಂತೆ ಅನೂಚಾನವಾಗಿ ನೀತಿಗಳನ್ನು ಅನುಸರಿಸುತ್ತಾ ಬಂದಿದ್ದಾರೆ. ಅಲ್ಲದೇ ಶುಕ್ರನೀತಿಸಾರ ಹೇಳುವಂತೆ ಅನೇಕ ರೀತಿಯ ಗಿಡ ಮರಗಳ ಪೊದರುಗಳಿಂದ ಕೂಡಿದ, ದನಕರುಗಳು ಇತರ ಪ್ರಾಣಿ ಪಕ್ಷಿಗಳಿಂದ ಸಮೃದ್ಧವಾಗಿರುವ, ಒಳ್ಳೆಯ ಜಲಾಶಯಗಳಿರುವ, ಧಾನ್ಯ ಸಮೃದ್ಧಿಯಿರುವ, ಬೆಟ್ಟ ನೀರುಗಳಿಂದ ಆವೃತವಾಗಿರುವ ಪ್ರದೇಶದಲ್ಲಿ ಕೋಟೆಗಳನ್ನು ಕಟ್ಟಬೇಕು ಎಂಬ ನಿಯಮಕ್ಕನುಸಾರವಾಗಿ, ಕರ್ನಾಟಕದ ಕೋಟೆಗಳು ಕಟ್ಟಲ್ಪಟ್ಟಿವೆ.

ಕರ್ನಾಟಕದಲ್ಲಿ ಪ್ರಪ್ರಥಮವಾಗಿ ಕೋಟೆಗಳ ನಿರ್ಮಾಣಕಾರ್ಯ ಶಾತವಾಹನರಿಂದ ಕ್ರಿ.ಶ. ೨ನೆಯ ಶತಮಾನದಲ್ಲಿ ಪ್ರಾರಂಭವಾಗಿತ್ತು. ಅವರ ರಕ್ಷಣಾ ವಾಸ್ತುಶಿಲ್ಪದಲ್ಲಿ ನಿರ್ಧಿಷ್ಟಪಡಿಸಿದ

ಆಕಾರದ ಇಟ್ಟಿಗೆಗಳು ಕೋಟೆ ನಿರ್ಮಾಣ ಸಾಧನಗಳಾಗಿದ್ದವು. ಸನ್ನತಿ, ಮಾನ್ಯಖೇಟ, ಐಹೋಳೆ, ವಡಗಾಂವ್, ಮಾಧವಪುರ, ಬನವಾಸಿ, ಚಂದ್ರವಳ್ಳಿ, ಬ್ರಹ್ಮಗಿರಿ ಮುಂತಾದ ಸ್ಥಳಗಳಲ್ಲಿ ಕೋಟೆಯ ಅವಶೇಷಗಳು ಕಂಡು ಬಂದಿವೆ. ಕದಂಬರ ಕಾಲದಲ್ಲಿ ಬನವಾಸಿ, ಸ್ವಾದಿ, ಶಿರಸಿ, ಹಾನಗಲ್, ತಿಳವಳಿ, ಬಮ್ಮನಹಳ್ಳಿ, ಬೀಳಗಿ, ಭಟ್ಕಳ್, ಗೇರುಸೊಪ್ಪ, ಹಳಿಯಾರ್, ಮಂಗಳೂರು, ತಾಳಗುಂದ, ಸೊರಬ, ಸದಾಶಿವಗಡ, ಇಕ್ಕೇರಿ, ರತ್ನಗಿರಿ ಮುಂತಾದ ಕಡೆ ಕೋಟೆಗಳು ನಿರ್ಮಾಣವಾದವು. ಈ ಕೋಟೆಗಳ ವಾಸ್ತುಶಿಲ್ಪದಲ್ಲಿ ತದನಂತರ ಶತಮಾನಗಳಲ್ಲಿ ವಿಕಾಸಗೊಂಡ ರಕ್ಷಣಾ ಕ್ರಮವಾಗಿ ಹಳೆಯ ತಾಂತ್ರಿಕತೆ ಮರೆಯಾಗಿ ಹೊಸ ಮಾರ್ಪಡು ಬಂದವು. ಇಟ್ಟಿಗೆಗಳ ಬದಲಾಗಿ ಪಶ್ಚಿಮ ಘಟ್ಟಗಳಲ್ಲಿ ದೊರೆಯುವ ಲ್ಯಾಟರೈಟ ಸ್ಟೋನ್ (ಕೆಂಗರಸುಗಲ್ಲು) ಹೆಚ್ಚಾಗಿ ಬಳಕೆಯಾದವು. ತದನಂತರ ಕನ್ನಡನಾಡಿನ ಕೋಟೆಗಳಲ್ಲಿ ಅತಿ ಪ್ರಾಚೀನವಾದದ್ದು, ಶಿಲಾಶಾಸನಗಳ ಮೂಲಕ ಕಾಲ ನಿರ್ಧರಿಸಲ್ಪಟ್ಟ ಬಾದಾಮಿಯ ಕೋಟೆ ಇದನ್ನು ಚಾಲುಕ್ಯ ಮೊದಲನೆಯ ಪುಲಿಕೇಶಿ ಕ್ರಿ.ಶ. ೫೪೩ರಲ್ಲಿ ನಿರ್ಮಿಸಿದ್ದಾನೆ. ಶಾಸನದಲ್ಲಿ ಹೇಳುವಂತೆ ಅದನ್ನು ಗುಡ್ಡದ ಮಧ್ಯಭಾಗದ ಸ್ಥಳದಲ್ಲಿ ಆಯ್ಕೆ ಮಾಡಿ ನಡುಪಟ್ಟಿಯಂತೆ ಕಟ್ಟಲಾಗಿತ್ತು. ಹೀಗೆ ನಡುಪಟ್ಟಿಯಂತೆ ಇರುವ ತೂಗು ಕೋಟೆಗಳು ಬಹಳ ವಿರಳ. ಕಲ್ಲಿನಿಂದ ನಿರ್ಮಾಣವಾದ ಈ ಕೋಟೆಯು ಮಾನಸಾರನ 'ಖರ್ವಟ' ಕೋಟೆಯ ವಿನ್ಯಾಸವುಳ್ಳದಾಗಿದೆ. ಬಯಲುನಾಡಿನಲ್ಲಿ ಇದೊಂದು ಅಮೂಲ್ಯ ಗಿರಿದುರ್ಗ.

ಕರ್ನಾಟಕ ಕೋಟೆಗಳ ನಿರ್ಮಾಣದ ನಾಲ್ಕನೆಯ ಹಂತವನ್ನು ಗಂಗರು, ರಾಷ್ಟ್ರಕೂಟ, ಕಲ್ಯಾಣಚಾಲುಕ್ಯ, ಹೊಯ್ಸಳ ಕಾಲಗಳಲ್ಲಿ ಅಂದರೆ ೮ನೇ ಶತಮಾನದಿಂದ ೧೨ನೇ ಶತಮಾನದ ಕಾಲದವರೆಗೂ ಕಾಣಬಹುದು. ಈ ಸಮಯದಲ್ಲಿ ಹೆಚ್ಚು ಕೋಟೆಗಳು ನಿರ್ಮಾಣವಾದವು ತಲಕಾಡು, ಬಸವಕಲ್ಯಾಣ, ಬಿದರ, ಕಲಬುರ್ಗಿ, ರಾಯಚೂರು, ದೇವದುರ್ಗ, ಕೊಪ್ಪಳ, ಹುಬ್ಬಳ್ಳಿ, ಲಕ್ಕುಂಡಿ, ಬೆಲೂರು, ಶ್ರೀರಂಗಪಟ್ಟಣ, ನಂಜನಗೂಡು, ಮೂಡಬಿದರೆ, ಮದುಕೇರಿ, ಚಿಕ್ಕಮಂಗಳೂರು, ಹೂವಿನಹಡಗಲಿ, ಬಳ್ಳಾರಿ, ಇಟಗಿ ಸ್ಥಳಗಳಲ್ಲಿ ಕೋಟೆಗಳು ನಿರ್ಮಾಣವಾದವು. ಈ ಹಂತದವರೆಗೆ ಕೋಟೆಯ ರಚನಾ ಕ್ರಮ ಮತ್ತು ವಿನ್ಯಾಸ ಹಿಂದೂ ರೀತಿಯದಾಗಿದೆ. ಹಾಗಾಗಿ ಇವನ್ನು ಹಿಂದೂ ವಾಸ್ತುವಿನ ಕೋಟೆಗಳೆಂದು ಕರೆಯಬಹುದು.

ಕೊನೆಯ ಹಂತದ ಕರ್ನಾಟಕದ ಕೋಟೆಗಳು ೧೩ನೇ ಶತಮಾನ ಮಧ್ಯಭಾಗದಿಂದ ಹಿಡಿದು ೧೮ನೇ ಶತಮಾನದ ಆಧುನಿಕ ಯುಗದವರೆಗೂ ನಿರ್ಮಾಣಗೊಂಡವು. ಇವುಗಳ ಮೇಲೆ ಪರ್ಶಿಯನರ, ಫ್ರೆಂಚರ, ಬ್ರಿಟಿಷರ, ಕೋಟೆ ರಚನಾ ಶಾಸ್ತ್ರಗಳ ಪ್ರಭಾವ ಅಧಿಕವಾಗಿವೆ. ಮೊಘಲರ ಆಗಮನದೊಂದಿಗೆ ಸೈನ್ಯದಲ್ಲಿ ಫಿರಂಗಿಗಳ ಬಳಕೆ ಪ್ರಾರಂಭವಾಯಿತ್ತು. ಹೀಗಾಗಿ ಫಿರಂಗಿ ಗುಂಡಿನ ದಾಳಿಯನ್ನು ಸಮರ್ಥವಾಗಿ ಎದುರಿಸಲು ಕೋಟೆ ಗೋಡೆಗಳ ರಚನಾ ಕ್ರಮ ಬದಲಾಗಿತ್ತು. ಕೋಟೆಯ ಹೊರಗಡೆ ವಿಸ್ತಾರವಾದ ಮೂರು ಅಂಗಳಗಳು ದುಂಡನೆಯ ಎತ್ತರದ ಬುರುಜುಗಳು ಗೋಡೆ ಹಾಗೂ ತೆನೆಗಳಲ್ಲಿ ಬಂದೂಕು ಗಿಂಡಿಗಳು ಬಿಸಿ ಎಣ್ಣೆ ಸುರಿಯಲು

ಮೋಸದ ಗಿಂಡಿಗಳು ಅಳವಡಿಸಲ್ಪಟ್ಟವು. ಇಂತಹ ಕೋಟೆಗಳು ಕರ್ನಾಟಕದ ವಿಜಯನಗರ, ಬಹಮನಿ, ಆದಿಲಶಾಯಿ, ಮರಾಠ, ಮೈಸೂರಿನ ಹೈದರ, ಟಿಪ್ಪುರವರ ಕಾಲದಲ್ಲಿ ನಿರ್ಮಾಣಗೊಂಡವು. ಹಂಪಿ, ಕಲಬುರಗಿ, ರಾಯಚೂರು, ಬಿಜಾಪುರ, ಬೀದರ, ಮುದಗಲ್ಲು, ಕೊಪ್ಪಳ, ದೇವದುರ್ಗ, ಬಳ್ಳಾರಿ, ಚಿತ್ತೂರು, ಕೊಪ್ಪಳ, ಶ್ರೀರಂಗಪಟ್ಟಣ, ಬೆಂಗಳೂರು, ಮೈಸೂರು ಮುಂತಾದ ಸ್ಥಳಗಳಲ್ಲಿವೆ. ಹೀಗೆ ಕರ್ನಾಟಕದಲ್ಲಿ ಕೋಟೆಗಳ ಇತಿಹಾಸ ಸುಮಾರು ಎರಡು ಸಾವಿರ ವರ್ಷಗಳ ಸುದೀರ್ಘವಾಗಿದೆ. ಕೊಪ್ಪಳ ಜಿಲ್ಲೆಯಲ್ಲಿ ವಿಜಯನಗರಪೂರ್ವ ಹಾಗೂ ವಿಜಯನಗರ ಕಾಲದಲ್ಲಿ ಹಲವು ಕೋಟೆಗಳು ನಿರ್ಮಾಣವಾದವು. ಅವುಗಳಲ್ಲಿ ವಿಜಯನಗರ ಕಾಲದ ಪ್ರಮುಖ ಕೋಟೆಗಳ ವಾಸ್ತು ವಿವರವನ್ನು ಕೆಳಗೆ ವಿವರಿಸಲಾಗಿದೆ.

ಆನೆಗೊಂದಿ ಕೋಟೆ

ಆನೆಗೊಂದಿ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನಲ್ಲಿದೆ. ಇದು ಗಂಗಾವತಿಯಿಂದ ನೈರುತ್ಯಕ್ಕೆ ೧೧ ಕಿ.ಮೀ. ದೂರದಲ್ಲಿ ತುಂಗಭದ್ರಾ ಎಡದಂಡೆಯ ಮೇಲಿದೆ. ನದಿಯ ಬಲದಂಡೆಯ ಸಮೀಪದಲ್ಲಿಯೇ ಹಂಪಿ ಇದೆ. ಆನೆಗೊಂದಿಯಲ್ಲಿ ವಿಜಯನಗರದ ಅರಸರು ತಮ್ಮ ಸೈನ್ಯದ ಆನೆಗಳನ್ನು ಇರಿಸುತ್ತಿದ್ದರಿಂದ ಈ ಹೆಸರು ಬಂತೆಂದು ಪ್ರತೀತಿ ಇದೆ. ಇದಕ್ಕೆ ಕಿಷ್ಕಿಂದಾ, ಪಂಪಾಕ್ಷೇತ್ರ, ಕುಂಜರಕೋಣ, ಗಜಗವ್ಹರ ಮತ್ತು ಕುಂಜರಾವತಿ ಎಂಬ ಹೆಸರುಗಳಿರುವ ಉಲ್ಲೇಖ ಸಿಗುತ್ತವೆ. ಇಲ್ಲಿಯ ಕ್ರಿ.ಶ. ೧೩೪೯ರ ಶಾಸನವೊಂದರಲ್ಲಿ "ಭಾಸ್ಕರ ಕ್ಷೇತ್ರ ದಕ್ಷಿಣ ವಾರಣಾಸಿ ಹಸ್ತಿನಾಪುರ ಎಂದು ಉಲ್ಲೇಖವಿದೆ. ಹಸ್ತಿನಾವತಿ ವಳಿತ ಎಂಬ ಆಡಳಿತ ಘಟಕದಲ್ಲಿ ಇದ್ದ ವಿಷಯವನ್ನು ಇಲ್ಲಿಯ ಹಲವಾರು ಶಾಸನಗಳು ತಿಳಿಸಿತ್ತವೆ.[೨]

ಪ್ರಸ್ತುತ ಆನೆಗೊಂದಿಯಲ್ಲಿ ಕೋಟೆಯ ಅವಶೇಷಗಳಿವೆ. ಉತ್ತರದಲ್ಲಿ ಹೊನ್ನಗಸೆ ಬಾಗಿಲು, ದಕ್ಷಿಣದಲ್ಲಿ ಅಂಬಿಗರ ಬಾಗಿಲುಗಳಿವೆ. ಬೆಟ್ಟದ ಮೇಲೆ ಉತ್ತರ ಕೋಟೆ ಅಥವಾ ವಾಲಿಖಿಲ್ಲಾ ಎನ್ನುವ ಕೋಟೆಯು ಆನೆಗೊಂದಿಯ ಪಶ್ಚಿಮಬೆಟ್ಟದ ಸಾಲಿನ ಉತ್ತರಭಾಗದಲ್ಲಿದೆ. ಇಲ್ಲಿ ಮೂರು ಕೋಟೆಯು ಆನೆಗೊಂದಿಯ ಪಶ್ಚಿಮ ಬೆಟ್ಟದ ಸಾಲಿನ ಉತ್ತರ ಭಾಗದಲ್ಲಿದೆ. ಇಲ್ಲಿ ಮೂರು ಪ್ರವೇಶದ್ವಾರಗಳು, ದುರ್ಗಾದೇವಾಲಯ, ಕನ್ನೇರಮ್ಮನ ಬಾವಿ ಮತ್ತು ಆನೆಗೊಂದಿಯ ನರಪತಿ ಸಂಸ್ಥಾನದ ಅರಸರ ಸಮಾಧಿಗಳು ಹಾಗೂ ಕೆಲವು ಕಟ್ಟಡಗಳು ಕೊತ್ತಳಗಳಿವೆ. ಆನೆಗೊಂದಿಯ ದಕ್ಷಿಣ ಭಾಗದ ಕೋಟೆಯಲ್ಲಿ ಮಂಟಪವಿದೆ. ಈ ಮಂಟಪದ ಬಲಭಾಗಕ್ಕೆ ೬೦ ಮೀಟರ್ ಹಾಗೂ ಎಡಭಾಗಕ್ಕೆ ೩ ಮೀಟರ್ ಉದ್ದವಾದ ಗೋಡೆಯಿದೆ. ಒಳಭಾಗದಲ್ಲಿ ಕಂಬಗಳಿದ್ದು ಮೂರು ಅಂಕಣಗಳ ಮಂಟಪವಿದೆ.

ಕೋಟೆಯ ಒಳಗೆ ಒಂದು ಆಯಾತಾಕಾರದ ಬೃಹತ್ ಕಟ್ಟಡವಿದೆ. ಈ ಕಟ್ಟಡವು ವಿಜಯನಗದ್ದಾಗಿದೆ. ೬೬ ಮೀಟರ ಉತ್ತರ ದಕ್ಷಿಣವಾಗಿ, ಪೂರ್ವ ಪಶ್ಚಿಮವಾಗಿ ೮.೬೦ ಮೀಟರ್ ಅಗಲವಾಗಿದೆ. ೪೬ ಅಂಕಣಗಳ ಒಟ್ಟು ೭೨ ಕಂಬಗಳಿವೆ. ಈ ಕಟ್ಟಡದ ಪ್ರವೇಶದ್ವಾರ ಪೂರ್ವಭಾಗದಲ್ಲಿ ಒಳಗೆ ಹೋಗುವ ಮೆಟ್ಟಿಲುಗಳಿಂದ ಕೆಳಗೆ ಇಳಿಯಬೇಕು. ಈ ಕಟ್ಟಡವನ್ನು ಪಾಟೀಲ್ ಸಿ. ಎಸ್. ಅವರು ಕಣಜವೆಂದು ಅಭಿಪ್ರಾಯಪಟ್ಟಿದ್ದಾರೆ. ಕೋಟೆಯ ಒಳಭಾಗದಲ್ಲಿ

ಒಟ್ಟು ೫ ಬುರುಜುಗಳಿವೆ. ನಾಲ್ಕು ಮೊದಲ ಪ್ರವೇಶದ್ವಾರದ ಪೂರ್ವ ಭಾಗದಲ್ಲಿದ್ದರೆ, ಐದನೆಯದು ದಕ್ಷಿಣದ ತುದಿಯ ಭಾಗದಲ್ಲಿದೆ. ಕೋಟೆಯ ಒಳಬಾಗದಲ್ಲಿ ಪೂರ್ವದಿಕ್ಕಿನಲ್ಲಿ ದೊಡ್ಡ ಕೆರೆಯಿದೆ. ಪಶ್ಚಿಮ ದಿಕ್ಕಿನಲ್ಲಿ ತುಂಗಭದ್ರಾ ನದಿಯಿದೆ.[೨೭] ಈ ಕೋಟೆಯ ಬುರುಜು ೧೦೦ ಮೀ.ನಷ್ಟು ನದಿಯ ಮುಂಭಾಗದಲ್ಲಿ ಹರಡಿಕೊಂಡಿದೆ. ಆನೆಗೊಂದಿಯ ಕೋಟೆಗೋಡೆ ಒಳಭಾಗದ ಪ್ರಾಂಗಣದಲ್ಲಿ ವೃತ್ತಾಕಾರದ ಬುರುಜ ಇತ್ತೆಂದು ಊಹಿಸಲಾಗಿದೆ. ಕೋಟೆಗೋಡೆಯು ಪೂರ್ವದ ಬಂಡೆ/ಚಕ್ಕಡಿ ರಸ್ತೆಯವರೆಗೆ ಹರಡಿಕೊಂಡಿದೆ. ಕೋಟೆಗೋಡೆಯು ವಿಜಯನಗರ ಪೂರ್ವ ಕಾಲದಲ್ಲಿ ನಿರ್ಮಿಸಲಾಗಿದೆಯೆಂದು ಪರಿಗಣಿಸಲಾಗಿದೆ. ಆದರೆ ಪೂರ್ವ ಕಾಲದ ಗೋಡೆಯ ಅವಶೇಷಗಳು ಇಂದು ದೊರೆತಿಲ್ಲ. ವಿಜಯನಗರ ಮತ್ತು ವಿಜಯನಗರೋತ್ತರ ಕಾಲದ ಕೋಟೆಗೋಡೆಯ ಅವಶೇಷಗಳು ಇಂದು ಕಾಣಸಿಗುತ್ತವೆ. ಕೋಟೆಯ ದಕ್ಷಿಣ ಭಾಗದ ಕೋಟೆಯ ಭಾಗದಲ್ಲಿ ಅಗಲವಾದ ಮೆಟ್ಟಿಲುಗಳಿವೆ. ಈ ಮೆಟ್ಟಿಲುಗಳು ಮುಂದೆ ತುಂಗಭದ್ರಾ ನದಿ ದಂಡೆಯವರೆಗೆ ಸಾಗಿವೆ.

ಮ್ಯಾಗೋಟ ಬೆಟ್ಟದ ಕೋಟೆಯ ಬಳಭಾಗದಲ್ಲಿ ಈ ಕೋಟೆಯ ಬಾಗಿಲಲ್ಲಿ ಪ್ರವೇಶ ಪಡೆಯುವ ಜನರ ತಪಸಣಾ ಕೇಂದ್ರವಿದೆ. ಕೋಟೆಯ ಒಳಭಾಗದ ಗೋಡೆಯನ್ನು ಮಿದು ಮಣ್ಣಿನಿಂದ ಸಮಗೊಳಿಸಿ ಅದರ ಮೇಲೆ ಮೊಟ್ಟೆಯ ಮೇಲಿನ ಬಿಳಿಚಿಪ್ಪನ್ನು ಲೇಪಿಸಲಾಗಿದೆ. ಇದನ್ನು ಸುಣ್ಣದ ರೀತಿಯಲ್ಲಿ ಬಳಸಲಾಗಿದೆ. ಅಲ್ಲಿ ಅನೇಕ ಚಿಕ್ಕ ಚಿಕ್ಕ ಚೌಕವಾದ ಕಟ್ಟಡದ ಅವಶೇಷಗಳಿವೆ. ಹಿಂಭಾಗದಲ್ಲಿ ಧಾನ್ಯಗಳನ್ನು ಬೀಸುವ ಕಲ್ಲು ಇವೆ. ಕೋಟೆ ಬಾಗಿಲಿನ ಪೂರ್ವದಲ್ಲಿ ಸ್ನಾನಗೃಹವಿದೆ. ಅದರ ಅಳತೆ ಸುಮಾರು ೨೦x೩೫ ಮೀಟರ್ ಇದೆ. ಸ್ನಾನಗೃಹದ ಕೆಳಗೆ ನೀರು ಹಾಯುವ ನಾಲೆಯಿದೆ. ಸ್ನಾನಗೃಹದ ಹೊರ ಭಾಗದ ಪ್ರಾಂಗಣ ೭೫ ಸೆಂ.ಮೀ. ಅಗಲವಾಗಿದೆ. ೪ಮೀ. ಎತ್ತರವಾದ ಗೋಡೆಯ ತುದಿಯ ಇಟ್ಟಿಗೆಯ ಅವಶೇಷಗಳನ್ನು ಕಾಣುತ್ತೇವೆ. ಕೋಟೆಯ ಉತ್ತರ ಭಾಗದಲ್ಲಿ ಕೆಲವು ವೃತಾಕಾರದ ಮತ್ತು ಚೌಕವಾದ ಕಟ್ಟಡದ ಅವಶೇಷಗಳು ಮತ್ತು ಗವಿರಂಗನಾಥ ದೇವಾಲಯವಿದೆ. ಕೋಟೆಯ ದಕ್ಷಿಣ ಭಾಗದಲ್ಲಿ ಕಟ್ಟಡದ ಅವಶೇಷಗಳು ಮತ್ತು ಮಡಿಕೆ ಚೂರುಗಳುದೊರೆತಿವೆ.[೨೮]

ಆನೆಗೊಂದಿಯ ಕೋಟೆಯು ಗಿರಿದುರ್ಗ, ಸಲಿಲದುರ್ಗ, ಅತ್ವೀಕ್ ದುರ್ಗಗಳ ಪ್ರಭೇದಗಳನ್ನು ಒಳಗೊಂಡಿದೆ. ಗಿರಿದುರ್ಗವೆಂದರೆ ಬೆಟ್ಟಗಳಿಂದ ಆವೃತವಾದುದು, ಸಲಿಲದುರ್ಗವೆಂದರೆ ನೀರಿನಿಂದ ಸುತ್ತುವರಿಯಲ್ಪಟ್ಟಿದ್ದು, ಅತ್ವೀಕ್ ಎಂದರೆ ಅರಣ್ಯಗಳಿಂದ ಕೂಡಿದ್ದು. ಈ ಎಲ್ಲ ಲಕ್ಷಣಗಳನ್ನು ಆನೆಗೊಂದಿ ಕೋಟೆಯಲ್ಲಿ ಕಾಣುತ್ತೇವೆ.

ಕನಕಗಿರಿ ಕೋಟೆ

ಈ ಕೋಟೆಯನ್ನು ಕನಕಗಿರಿಯ ಗುಜ್ಜಲ ವಂಶದ ಪಾಳೆಗಾರರು ಪೌರಾಣಿಕ ಪುಷ್ಪಾ ಜಯಂತಿ, ಗೋಪಿಕಾ ನದಿಗಳಿಂದ ಕೂಡಿದ ಸಂಗಮ ಸ್ಥಾನದಲ್ಲಿ ಕಟ್ಟಿದ್ದಾರೆ. ಇದರ ಸುತ್ತಳತೆ

ಸುಮಾರು ೧೧/೨ ಕಿ.ಮೀ. ಎತ್ತರ ಉತ್ತರ ದಕ್ಷಿಣವಾಗಿ ೪ ಕಿ.ಮೀ. ಎತ್ತರ ೨೦ ಅಡಿಯಿಂದ ೩೪ ಅಡಿ ಇರಬಹುದು. ಕೋಟೆ ಗೋಡೆ ಸುಮಾರು ೨೦ ಕ್ಕಿಂತ ಹೆಚ್ಚಾಗಿ ಕಾವಲು ಗೋಪುರ (ಹುಡೇವು)ಗಳನ್ನೊಳಗೊಂಡಿದೆ. ಗೋಪುರಗಳ ಮೇಲ್ಭಾಗದಲ್ಲಿ ಅಗಲವಾದ ಕಿಂಡಿಗಳಿದ್ದು ಇವುಗಳ ಮುಖಾಂತರ ವೈರಿಗಳನ್ನು ನೋಡಲು ಸಾಧ್ಯವಾಗುತ್ತಿತ್ತು. ಈಗ ಈ ಕೋಟೆ ೩ ದಿಕ್ಕುಗಳಲ್ಲಿ ನೆಲ ಸಮವಾಗಿ ಪೂರ್ವದಿಕ್ಕಿನಲ್ಲಿ ಮಾತ್ರ ಅದರ ಆಕಾರ ಉಳಿದಿದೆ.

ಕೋಟೆಗೆ ಮೂರುದ್ವಾರ ಬಾಗಿಲು(ಅಗಸೆ)ಗಳು ಒಂದು ಶ್ರೀಕನಕರಾಯನ ಅಗಸೆ, ಕೋಟೆಯ ಅಗ್ನೆಯಕ್ಕೆ ಆನೆಗೊಂದಿ ಅಗಸೆ ಎಂದು, ಕೋಟೆಯ ಪಶ್ಚಿಮಕ್ಕೆ ಇರುವುದನ್ನು ಕೊಪ್ಪಳ ಅಗಸೆ ಎಂದು ಕರೆಯುತ್ತಿದ್ದರು. ಇವುಗಳ ಎತ್ತರ ೧೩ ರಿಂದ ೧೪ ಅಡಿ, ಅಗಲ ಸುಮಾರು ೧೦ ರಿಂದ ೧೧ ಅಡಿ ಇರಬೇಕು. ಇವುಗಳಿಗೆ ಕಲ್ಲಿನ ಚೌಕಟ್ಟುಗಳಿದ್ದು, ಈ ಚೌಕಟ್ಟುಗಳಿಗೆ ಕಟ್ಟಿಗೆಯ ಕದಗಳನ್ನು ಹೊಂದಿಸಿ ವೈರಿಗಳು ಒಳಗೆ ಬಾರದಂತೆ ಮುಚ್ಚುವಂತೆ ಇದ್ದವು. ಇವೆಲ್ಲವನ್ನು ರಾತ್ರಿಯಾದ ಕೂಡಲೇ ಓಲೇಕಾರರು ಬಂದು ಮುಚ್ಚುತ್ತಿದ್ದರು. ಕೊಪ್ಪಳ ಅಗಸೆಯ ದ್ವಾರ ಬಾಗಿಲಿನ ಎಡ ಭಾಗದ ಗೋಡೆಯ ನೆಲದಿಂದ ಸುಮಾರು ೩ ಅಡಿ ಅಗಲವಾದ ಬಂಡೆಗಲ್ಲಿನ ಮೇಲೆ ಆನೆಗಳ, ಕುದುರೆಗಳ ಸೈನಿಕರ ಸಾಲಿನ ಚಿತ್ರಗಳಿದ್ದು ವಿಜಯನಗರದ ಅರಸರ ಲಾಛನ (ರಾಜಮುದ್ರೆ) ದೊಡ್ಡದಾಗಿ ಕೆತ್ತಲ್ಪಟ್ಟಿತು.

ಕನಕರಾಯನ ಅಗಸೆ ಸಹ ಮುಚ್ಚುವಂತೆ ಮತ್ತು ತೆರೆಯುವಂತೆ ಇತ್ತು. ಆಗಿನ ಕಾಲದಲ್ಲಿ ಉತ್ತಮವಾದ ಮಳೆಯಿಂದ ಹಳ್ಳಗಳು (ಆಗಿನ ನದಿಗಳು) ತುಂಬಿ ಹರಿಯುವ ದೃಶ್ಯ ಬಹು ಸಂತೋಷವನ್ನುಂಟು ಮಾಡುತ್ತಿತ್ತು. ಹಳ್ಳದಲ್ಲಿ ಇಳಿಯಲು ಏರಲು ಅಗಸೆಯ ಮುಂದೆ ಮೆಟ್ಟಿಲುಗಳು ಇದ್ದವು.

ತಾವರಗೆರೆ ಕೋಟೆ

ಕುಷ್ಟಗಿಯಿಂದ ಪೂರ್ವಕ್ಕೆ ೨೨ ಕಿ.ಮೀ. ದೂರದಲ್ಲಿ ತಾವರಗೆರೆ ಗ್ರಾಮವಿದೆ. ಈ ಗ್ರಾಮದ ಪ್ರದೇಶವು ಐತಿಹಾಸಿಕ ನೆಲೆಯನ್ನು ಹೊಂದಿದೆ. ಗ್ರಾಮದ ಪಶ್ಚಿಮ ದಿಕ್ಕಿನಲ್ಲಿರುವ ಕೆರೆಗೆ ಹೊಂದಿಕೊಂಡು ಕೋಟೆಯ ಅವಶೇಷಗಳಿರುವುದನ್ನು ಗುರುತಿಸಬಹುದಾಗಿದೆ. ಈ ಕೋಟೆಯು ಕ್ರಿ.ಶ. ಸುಮಾರು ೧೬ನೆಯ ಶತಮಾನದಲ್ಲಿ ಕಟ್ಟಲ್ಪಟ್ಟಿದೆ. ಸರಿಯಾದ ಅಳತೆ ಇಲ್ಲದ ಕಲ್ಲುಗಳಿಂದ ಕಟ್ಟಲಾಗಿದೆ. ಈಗ ಕೋಟೆಯ ಸಂಪೂರ್ಣ ಭಾಗ ನಾಶವಾಗಿದೆ. ಈ ಕೋಟೆಯ ಒಳಗೆ ಕಲ್ಯಾಣ ಚಾಲುಕ್ಯರ ಕಾಲದ ವೈಜನಾಥ ದೇವಾಲಯ, ಬಾವಿ ಹಾಗೂ ವಿಜಯನಗರ ಕಾಲದ ಆಂಜನೇಯ ದೇವಾಲಯ ಇದೆ.

ಇರಕಲಗಡ ಕೋಟೆ

ಇರಕಲಗಡವು ಕೊಪ್ಪಳದ ಉತ್ತರಕ್ಕೆ ೧೫ ಕಿ.ಮೀ. ದೂರದಲ್ಲಿ, ಅಕ್ಷಾಂಶ ೧೫೦, ೨೮ ಉತ್ತರ ಮತ್ತು ರೇಖಾಂಶ ೭೬೦, ೧೫ ಪೂರ್ವದಲ್ಲಿರುವ ಚಿಕ್ಕಗ್ರಾಮ. ಗ್ರಾಮದ ಪೂರ್ವಕ್ಕೆ

ಬೆಟ್ಟದ ಮೇಲೆ ಸುಸ್ಥಿತಿಯಲ್ಲಿರುವ ಚಿಕ್ಕ ಕೋಟೆಯಿದೆ. ಸಂಪೂರ್ಣವಾಗಿ ಬೆಟ್ಟದ ಮೇಲಿರುವ ಕೋಟೆ ಗಿರಿದುರ್ಗಕ್ಕೆ ಒಳ್ಳೆ ಉದಾಹರಣೆ. ಕೋಟೆಯೊಳಗೆ ಕಣಜ, ಬಾವಿ, ಕೊಳ ಮತ್ತು ಇತರ ಕಟ್ಟಡಗಳ ಅವಶೇಷಗಳಿವೆ. ಗ್ರಾಮದಲ್ಲಿ ದೇವಾಲಯಗಳು ಮತ್ತು ವೀರಗಲ್ಲುಗಳಿವೆ. ಹದಿನಾಲ್ಕನೆಯ ಶತಮಾನದಲ್ಲಿ ವಿಜಯನಗರದ ನರಸನಾಯಕನು ಈ ಕೋಟೆಯನ್ನು ಕಟ್ಟಿಸಿದನೆಂದು ಸ್ಥಳೀಯವಾಗಿ ಹೇಳಲಾಗುತ್ತದೆ. ತನಗೆ ಆಪತ್ಕಾಲದಲ್ಲಿ ಸಹಾಯ ಮಾಡಿದ ಸುರಪುರದ ಮಂಡಗೈ ತಿಮ್ಮಪ್ಪನಾಯಕನಿಗೆ ಕೋಟೆಯನ್ನು ಕೊಡುಗೆಯಾಗಿ ಕೊಟ್ಟನು. ಮುಂದೆ ಕೋಟೆಯನ್ನು ಬಿಜಾಪುರದ ಆದಿಲ್ ಶಾಹಿ ಅರಸರ ಸೈನ್ಯಾಧಿಕಾರಿ ಆಲಮ್ ಗೀರ್ ಅಹಮ್ಮದನು ಗೆದ್ದುಕೊಂಡನು. ಆಲಮ್ ಗೀರನು ಕೋಟೆಯ ಪಕ್ಕದಲ್ಲಿ ತನ್ನ ಹೆಸರಿನಲ್ಲಿ ಗ್ರಾಮವನ್ನು ಕಟ್ಟಿಸಿದನು. ಅದು ಇಂದಿಗೂ ಯಲಗೇರಿಯಾಗಿ ಉಳಿದಿದೆ. ಮುಂದೆ ಹದಿನೇಳನೆಯ ಶತಮಾನದಲ್ಲಿ ಛತ್ರಪತಿ ಶಿವಾಜಿಯು ಈ ಕೋಟೆಯನ್ನು ವಶಪಡಿಸಿಕೊಂಡನು.[೨೯]

ಕೋಟೆಯನ್ನು ಬೆಟ್ಟದ ಮೇಲಿನ ಸಮತಟ್ಟಾದ ಸ್ಥಳದಲ್ಲಿ ನಿರ್ಮಿಸಿದೆ. ಇಲ್ಲಿ ಲಭ್ಯವಾದ ಹೆಚ್ಚಿನ ಸ್ಥಳವನ್ನು ಉಪಯೋಗಿಸಿಕೊಳ್ಳುವ ದೃಷ್ಟಿಯಿಂದ ಸಮತಟ್ಟಾದ ಸ್ಥಳದ ಸುತ್ತ ಬೆಟ್ಟದ ಅಂಚಿನಲ್ಲಿ ಕೋಟೆಯನ್ನು ಕಟ್ಟಿರುವುದರಿಂದ ಕೋಟೆಯು ಬೆಟ್ಟದ ಆಕಾರವನ್ನೇ ಹೊಂದಿದೆ. ಆದುದರಿಂದ ಇದಕ್ಕೆ ಯಾವುದೇ ನಿರ್ದಿಷ್ಟವಾದ ಆಕಾರವಿಲ್ಲ. ಬೆಟ್ಟದ ಅಂಚಿನಲ್ಲಿಯ ಕೆಲವು ದೊಡ್ಡ ಗುಂಡು ಕಲ್ಲುಗಳನ್ನು ಸೇರಿಸಿಕೊಂಡು ಕೋಟೆಗೋಡೆಯನ್ನು ಕಟ್ಟಿದೆ. ಕಲ್ಲುಗಳ ಜೋಡಣೆಯಲ್ಲಿ ಗಾರಡಯನ್ನು ಬಳಸದೇ ಸಂದಿಗಳಲ್ಲಿ ಕಟ್ಟಿನ ಚಕ್ಕೆಗಳನ್ನು ಬಳಸಿದೆ. ಕೋಟೆಯ ಮೇಲಿನ ಕೈಪಿಡಿ ಗೋಡೆಯಲ್ಲಿ ತೆನೆಗಳಿಲ್ಲ. ಕೈಪಿಡಿಗೋಡೆಯಲ್ಲಿನ ಬಂದೂಕು ಕಿಂಡಿಗಳು ಆಯತಾಕಾರದಲ್ಲಿ ಬಹಳ ಉದ್ದವಾಗಿವೆ. ಇವುಗಳನ್ನು ಕೋಟೆ ಬದಿಯಲ್ಲಿಯ ವೈರಿಗೆ ಗುರಿಯಿಡಲು ಅನುಕೂಲವಾಗುವಂತಹ ತೀಕ್ಷ್ಣವಾದ ಕೋನದಲ್ಲಿ ರಚಿಸಲಾಗಿದೆ. ಗೋಡೆಯ ಮೇಲೆ ಕೈಪಿಡಿಗೋಡೆಯ ಪಕ್ಕದಲ್ಲಿ ನಡೆದಾಡಲು ಅಗಲವಾದ ದಾರಿಯಿದೆ. ಕೋಟೆಯಲ್ಲಿ ಬಾಗಿಲು, ದಿಡ್ಡಿ, ಒಂದು ಚೌಕಾಕಾರದ ಮತ್ತು ಕೆಲವು ವೃತ್ತಾಕಾರದ ಕೊತ್ತಲಗಳಿವೆ. ಬೆಟ್ಟವು ಉತ್ತರ ಮತ್ತು ದಕ್ಷಿಣ ದಿಕ್ಕುಗಳಲ್ಲಿ ಕಡಿದಾಗಿರುವುದರಿಂದ ಪಶ್ಚಿಮ ಮತ್ತು ಪೂರ್ವ ದಿಕ್ಕುಗಳಿಂದ ಮೇಲೆ ಹತ್ತಲು ಸಾಧ್ಯ. ಪಶ್ಚಿಮಕ್ಕೆ ದಿಡ್ಡಿ ಇವೆ. ಪಶ್ಚಿಮಕ್ಕಿರುವ ಬಾಗಿಲು ಉತ್ತರಾಭಿಮುಖವಾಗಿದೆ. ಬಾಗಿಲು ವೈರಿಗೆ ಕಾಣದಂತೆ ಮುಂದೆ ಭಾಗಶಃ ವೃತ್ತಾಕಾರದ ಗೋಡೆಯನ್ನು ಕಟ್ಟಿ ಮರೆಮಾಡಿದೆ. ಹೊರಭಾಗದಲ್ಲಿಯ ಎರಡು ವೃತ್ತಾಕಾರದ ಕೊತ್ತಳಗಳು ಬಾಗಿಲನ್ನು ರಕ್ಷಿಸುತ್ತವೆ. ಬಾಗಿಲ ಚೌಕಟ್ಟನ್ನು ಸರಳವಾದ ತೊಲೆ, ಉತ್ತರಂಗ ಮತ್ತು ಬೋದಿಗೆಗಳಿಂದ ನಿರ್ಮಿಸಿದೆ. ಬಾಗಿಲ ಪಕ್ಕದಲ್ಲಿ ಗೋಡೆಯ ಕಲ್ಲಿನ ಮೇಲೆ ಕಾಮಭಂಗಿಯಲ್ಲಿ ಕುಳಿತ ಹೆಂಗಸಿನ ಅಪೂರ್ಣವಾದ ಶಿಲ್ಪವಿದೆ. ಪಶ್ಚಿಮಭಾಗದಲ್ಲಿ ಉತ್ತರಾಭಿಮುಖವಾದ ಚಿಕ್ಕ ದಿಡ್ಡಿಬಾಗಿಲಿದೆ. ಇದರ ಚೌಕಟ್ಟು ಸರಳವಾಗಿದೆ. ಕೋಟೆಗೋಡೆಯಲ್ಲಿ ಗೋಡೆಯ ಮಧ್ಯದಲ್ಲಿ ಕಾವಲುಗಾರರು ಕೊಠಡಿಗಳಿವೆ. ಆಳೆತ್ತರದ ಆಯತಕಾರದ ಕೊಠಡಿಗಳಿಗೆ ಬಾಗಿಲ ಚೌಕಟ್ಟುಗಳಿಲ್ಲ. ಇಂತಹ ಕೊಠಡಿಗಳು ಉತ್ತರ

ದಿಕ್ಕಿನ ಗೋಡೆಯಲ್ಲಿ ಮೂರು ಮತ್ತು ದಕ್ಷಿಣ ದಿಕ್ಕಿನ ಗೋಡೆಯಲ್ಲಿ ಎರಡು ಇವೆ. ಕೋಟೆಯೊಳಗೆ ಮಧ್ಯಭಾಗದಲ್ಲಿ ಸ್ವಲ್ಪ ದಕ್ಷಿಣಕ್ಕೆ ಅರಮನೆಯಂತಹ ಕಟ್ಟಡದ ಅವಶೇಷಗಳಿವೆ. ಉತ್ತರಾಭಿಮುಖವಾಗಿರುವ ಕಟ್ಟಿದ ಮುಂದೆ ಎರಡು ಕಟಕಟೆ ಕಲ್ಲುಗಳು ಬಿದ್ದಿವೆ. ಇವು ಸುರುಳಿಯಾಕಾರದಲ್ಲಿದ್ದು, ಒಂದರ ಬದಿಯನ್ನು ಆನೆ ಮತ್ತೊಂದರ ಬದಿಯನ್ನು ಹೂವಿನಿಂದ ಅಲಂಕರಿಸಿದೆ. ಮೆಟ್ಟಿಲುಗಳ ಪಕ್ಕದಲ್ಲಿರಬೇಕಾಗಿದ್ದ ಈ ಕಲ್ಲುಗಳ ಸ್ಥಾನಪಲ್ಲಟವಾಗಿ ಬಿದ್ದಿವೆ. ಕಟ್ಟಡದ ಒಳಭಾಗ ಎರಡು ಮೆಟ್ಟಿಗಳಲ್ಲಿದೆ. ಮುಂದಿನ ಕೆಳಮಟ್ಟದ ಭಾಗದ ಮುಂದೆ ನಯವಾಗಿ ಕೆತ್ತಿದ ಮೂರು ಸಾಧಾರಣ ಪಟ್ಟಿಕೆಗಳ ಅಧಿಷ್ಠಾನವಿದೆ. ಇದರ ಮಧ್ಯದ ಪಟ್ಟಿಕೆ ಕಂಠದಂತೆ ಹಿಂದೆ ಸರಿದಿದೆ. ಹಿಂದಿನ ಭಾಗದಲ್ಲಿರುವ ಎತ್ತರಮಟ್ಟದ ಭಾಗದ ಮುಂದೆ ಮತ್ತೊಂದು ಅಧಿಷ್ಠಾನವಿದೆ. ಇದರ ಮೇಲಿನ ಪಟ್ಟಿಕೆ ಪದ್ಮಾಕಾರದಲ್ಲಿದು. ಕೆಳಗಿನ ಪಟ್ಟಿಕೆಗಳು ಮಣ್ಣಿನಲ್ಲಿ ಮುಚ್ಚಿವೆ. ಈ ಮಟ್ಟದ ಹಿಂಭಾಗದಲ್ಲಿ ಒಂದು ಆಯತಾಕಾರದ ಕೊಠಡಿಯಿದೆ. ಕೆಳಮಟ್ಟದ ಭಾಗದ ಪಶ್ಚಿಮ ಭಾಗದಲ್ಲಿ ಮತ್ತೊಂದು ಆಯತಾಕಾರದ ಕೊಠಡಿಯಿದೆ. ಎರಡುಮಟ್ಟಗಳ ಮುಂಭಾಗ ಹಜಾರದಂತೆ ಇದ್ದು, ಕಂಬಗಳಿಂದ ನಿರ್ಮಿತವಾಗಿತ್ತು. ಇಂತಹ ಕಟ್ಟಡಗಳನ್ನು ಹಂಪೆಯಲ್ಲಿ ನೋಡಬಹುದು. ಈ ಕಟ್ಟಡದ ಹತ್ತಿರ ಗುಂಡುಕಲ್ಲುಗಳು ಬಿದ್ದಿವೆ. ಗೋಲಾಕಾರದ ಈ ಕಲ್ಲುಗಳನ್ನು ಕವಣೆಗಲ್ಲು ಅಥವಾ ತೋಪುಗಳಿಂದ ಸಿಡಿಸುವ ಗುಂಡುಗಳಾಗಿ ಉಪಯೋಗಿಸುತ್ತಿದರು.[೩೦] ಉತ್ತರಗೋಡೆಯ ಪಕ್ಕದಲ್ಲಿ ಬಂಡೆಯ ಮೇಲೆ ಸುಮಾರಾಗಿ ಆಯತಾಕಾರದ ಕಟ್ಟಡವಿದೆ. ಕಲ್ಲುಗಳಿಂದ ಕಟ್ಟಿ, ಗಾರೆ ಮಾಡಿದ ಸುಮಾರು ಮೂರು ಮೀಟರ ಎತ್ತರದ ಗೋಡೆಗಳ ಮೇಲ್ಭಾಗದಲ್ಲಿ ನಯಗೊಳಿಸಿದ ಗೋಡೆಗಿಂತ ಸ್ವಲ್ಪ ಅಗಲವಾದ ಚಪ್ಪಡಿಗಳನ್ನು ಹಾಕಲಾಗಿದೆ. ಚಪ್ಪಡಿಗಳ ಮೇಲೆ ನಿರ್ದಿಷ್ಟ ಅಂತರದಲ್ಲಿ ಕಂಬಗಳನ್ನು ನಿಲ್ಲಿಸಲು ಮಾಡಿದ ಗುರುತುಗಳಿವೆ. ಬಾಗಿಲಿಲ್ಲದ ಈ ಕಟ್ಟಡದ ಗೋಡೆಯ ಮೇಲೆ ಹತ್ತಲು ಪೂರ್ವ ಗೋಡೆಯಿಂದ ಮುಂದೆ ಚಾಚಿದ ಮೆಟ್ಟಿಲುಗಳಿವೆ. ಕಂಬ ಮತ್ತು ಚಿಕ್ಕ ಕಲ್ಲುಗಳ ಗೋಡೆಯ ಮೇಲಕಟ್ಟಡವನ್ನು ಹೊಂದಿದ್ದ ಈ ಕಟ್ಟಡವನ್ನು ದಾನ್ಯವನ್ನು ಸಂಗ್ರಹಿಸಲು ಉಪಯೋಗಿಸುತ್ತಿದ್ದರು. ಮೇಲಿನ ಕಟ್ಟಡ ಈಗ ಉಳಿದಿಲ್ಲ. ಕೋಟೆಯ ಮಧ್ಯದಲ್ಲಿ ಬಂಡೆಯ ಮೇಲೆ ಕಟ್ಟಿದ ವೃತ್ತಾಕಾರದ ಕಾವಲು ಗೋಪುರವಿದೆ. ಕಣಜದ ದಕ್ಷಿಣಕ್ಕೆ ಒಂದು ನೀರಿನ ಕೊಳವಿದೆ. ನೈಸರ್ಗಿಕವಾಗಿ ಆಳವಾದ ಗುಂಡಿಗೆ ಅಲ್ಲಲ್ಲಿ ಕಲ್ಲು ಮತ್ತು ಗಾರೆಯಿಂದ ಕಟ್ಟಿ ಒಳಭಾಗಕ್ಕೆ ಗಾರೆ ಮಾಡಲಾಗಿದೆ. ಕೊಳದ ಅಗ್ನೇಯ ಮೂಲೆಯಲ್ಲಿ ಬಂಡೆಯ ಮೇಲೆ ಒಂದು ಅಸ್ಪಷ್ಟವಾದ ಶಾಸನವಿದೆ. ಕೊಳ ಮತ್ತು ಕಣಜಗಳ ಮಧ್ಯದಲ್ಲಿ ಒಂದು ಚಿಕ್ಕ ನೀರಿನ ತೊಟ್ಟಿಯಿದೆ. ತೊಟ್ಟಿಯ ಉತ್ತರ ಬದಿಯ ಬಂಡೆಯ ಮೇಲೆ ಆಂಜನೇಯನ ಚಿಕ್ಕ ಉಬ್ಬು ಶಿಲ್ಪವಿದೆ. ಪಶ್ಚಿಮ ದಿಕ್ಕಿನಿಂದ ಕೋಟೆಯೊಳಗೆ ಬಂದಾಗ ಎದುರಿಗೆ ದೊಡ್ಡದಾದ ಮತ್ತು ಆಳವಾದ ಬಾವಿಯಿದೆ. ಬಾವಿಯ ಕೆಳಭಾಗವನ್ನು ಚೆನ್ನಾಗಿ ನಯಗೊಳಿಸಿದ ದೊಡ್ಡ ಕಲ್ಲಿನಿಂದ ಕಟ್ಟಿದೆ. ಕಲ್ಲುಗಳ ಬದಿಗಳನ್ನು ಒಂದಕ್ಕೊಂದು ಅಚ್ಚುಕಟ್ಟಾಗಿ ಸೇರುವಂತೆ ಕಟ್ಟಿರುವುದರಿಂದ ಮಧ್ಯದಲ್ಲಿ ಸಂದಿಗಳಿಲ್ಲ. ಆದರೆ ಮೇಲಿನ ಭಾಗವನ್ನು ನಯಗೊಳಿಸಿದ

ಕಲ್ಲುಗಳಿಂದ ಕಟ್ಟಿದೆ. ಬಾವಿಯೊಳಗೆ ಇಳಿಯಲು ಪೂರ್ವಗೋಡೆಯ ಬಳಿ ಉತ್ತರದಿಂದ ದಕ್ಷಿಣಕ್ಕೆ ಅಗಲವಾದ ಮೆಟ್ಟಿಲುಗಳವೆ. ಬಾವಿಯ ವಾಯುವ್ಯ ಮೂಲೆಯ ಬಳಿಯಿರುವ ಬಂಡೆಯ ಮೇಲೆ ಆಂಜನೇಯನ ರೇಖಾಚಿತ್ರವಿದೆ. ಆಂಜನೇಯ ಚಿತ್ರ ಬಾವಿಯ ಕಡೆ ಪೂರ್ವಕ್ಕೆ ಮುಖಮಾಡಿದೆ. ಇವಲ್ಲದೆ ಇನ್ನೂ ಕೆಲವು ಕಟ್ಟಡಗಳ ಅವಶೇಷಗಳಿವೆ. ಕೋಟೆಯ ಹೊರಗೆ ನೈರುತ್ಯಕ್ಕೆ ಬಂಡೆಯ ಮೇಲೆ ಒಂದು ಒಂಟಿ ಕೊತ್ತಳವಿದೆ.[೫೧]

ಶಿವಪುರ ಕೋಟೆ

ಶಿವಪುರವು ಕೊಪ್ಪಳ ತಾಲೂಕಿನ ಪೂರ್ವಕ್ಕೆ ೨೫ ಕಿ.ಮೀ. ದೂರದಲ್ಲಿದೆ. ಈ ಚಿಕ್ಕ ಗ್ರಾಮದ ಈಶಾನ್ಯಕ್ಕೆ ಬೆಟ್ಟದ ಮೇಲೆ ಕೋಟೆ ಇದ್ದು ಈ ಕೋಟೆಯನ್ನು ಸೋಮೇಶ್ವರ ದುರ್ಗವೆಂದು ಕರೆಯಲಾಗುತ್ತದೆ. ಈ ದುರ್ಗವು ೧೫-೧೬ನೆಯ ಶತಮಾನದಲ್ಲಿ ಕಟ್ಟಲ್ಪಟ್ಟಿದೆ ಬೆಟ್ಟದ ಮೇಲಿನ ಕೋಟೆ ಎರಡು ಸುತ್ತಿನದು. ಮೊದಲನೆಯ ಸುತ್ತು ಬೆಟ್ಟವನ್ನು ಮೇಲಿನ ಹಂತದಲ್ಲಿ ಸುತ್ತುವರೆದಿದೆ ಮತ್ತು ಎರಡನೆಯ ಸುತ್ತು ಬೆಟ್ಟದ ತುದಿಯಲ್ಲಿದೆ. ಮೊದಲನೆಯ ಸುತ್ತು ಈಗ ದಕ್ಷಿಣದಲ್ಲಿ ಮಾತ್ರ ಕಾಣಸಿಗುತ್ತದೆ.

ಬೆಟ್ಟದ ಮೇಲೆ ಹತ್ತಲು ದಕ್ಷಿಣ ದಿಕ್ಕಿನಿಂದ ಮೆಟ್ಟಲುಗಳಿವೆ. ಈ ಮೆಟ್ಟಲುಗಳನ್ನೇ ವಿರುಪಾಕ್ಷ ಮಾಡಿಸಿರುವುದು. ಮೆಟ್ಟಲುಗಳನ್ನು ಬಂಡೆಯನ್ನು ಕೊರೆದು ಮಾಡಲಾಗಿದೆ. ಮೆಟ್ಟಲನ್ನು ಏರಿ ಉತ್ತರ ದಿಕ್ಕಿಗೆ ಹೋದಾಗ ಮೊದಲನೆಯ ಕೋಟೆಯ ಬಾಗಿಲು ಎದುರಾಗುತ್ತದೆ. ಈ ಮೊದಲ ಪ್ರವೇಶದ್ವಾರದಿಂದ ಒಳಗಡೆ ಹೋದಂತೆ, ಮೇಲೆ ಏರುತ್ತ ಹೋಗುವ ಬಂಡೆಯ ಹಾಸಿಗೆ ಇದೆ. ನೈರುತ್ಯದಲ್ಲಿ ಕೈಪಿಡಿ ಗೋಡೆಯಿದ್ದು ಅದರ ಒಳ ಆವರಣದಲ್ಲಿ ಸ್ವತಂತ್ರ ದುಂಡನೆಯ ಕಾವಲು ಬುರುಜು ಇದೆ. ಮುನ್ನಡೆದಂತೆ ನೀರಿನ ಕೊಳ, ಬಾಗಿಲ ಅವಶೇಷ. ಚೌಕಾದ ಕಟ್ಟಡ, ಸೋಮೇಶ್ವರ ಗುಡಿ ಮತ್ತೆ ಮೂರು ಕೊಳಗಳು ಅತ್ಯಂತ ಎತ್ತರದ ಮೇಲೆ ಆಯತಾಕಾರದ ಒಳಕೋಟೆ, ಬಾರ್ಬಿಕಾನ್ ಪ್ರವೇಶದ್ವಾರದ ಮೂಲಕ ಸೇರಬಹುದು. ಈ ಒಳಕೋಟೆಯ ಅರಸನ ಅರಮನೆ ಹಾಗೂ ಇನ್ನಿತರ ರಾಯಲ್ ಕಟ್ಟಡಗಳಿಂದ ಕೂಡಿ ಮಧ್ಯದಲ್ಲಿ ನೀರಿನ ತೊಟ್ಟಿ ಇದೆ.

ಕುಕನೂರು ಕೋಟೆ

ಇದು ಯಲಬುರ್ಗಾ ತಾಲೂಕಿನಲ್ಲಿದ್ದು ಅಲ್ಲಿಂದ ದಕ್ಷಿಣಕ್ಕೆ ೧೬ ಕಿ. ಮೀ. ದಕ್ಷಿಣಕ್ಕಿದೆ. ಇದು ಐತಿಹಾಸಿಕ ಪ್ರಸಿದ್ಧ ಕೋಟೆ. ಇದರಲ್ಲಿ ವಿಜಯನಗರ ಸಾಮ್ರಾಜ್ಯದ ಮಾಂಡಲೀಕನಾದ ದೇವರಾಯ ಗೌಡ ದೇಸಾಯಿ ಇಲ್ಲಿಯ ಮಹಾಮಾಯಿ ದೇವಾಲಯವನ್ನು ಕ್ರಿ.ಶ. ೧೫೬೧ರಲ್ಲಿ ಪುನರ್ ನಿರ್ಮಿಸಿದರು. ಮೊಘಲರ ಔರಂಗಜೇಬನ ಕಾಲದಲ್ಲಿ (ಕ್ರಿ.ಶ. ೧೬೯೬) ಜಾಮೀ ಮಸೀದಿಯ ನಿರ್ಮಾಣವಾಯಿತು. ಕೋಟೆಯನ್ನು ದಪ್ಪ, ಚೌಕಾಕಾರದ ಮತ್ತು ಅನಿಯಮಿತಾಕಾರದ ಕಲ್ಲುಗಳಿಂದ ಕಟ್ಟಲಾಗಿದೆ. ಕೋಟೆಯ ಪಶ್ಚಿಮ ಗೋಡೆಯ ಅರ್ಧಭಾಗ ಮಾತ್ರ ಸುಸ್ಥಿತಿಯಲ್ಲಿದ್ದು ಪೂರ್ವ ದಿಕ್ಕಿನಲ್ಲಿ ಅದರ ಅವಶೇಷಗಳು ಅಲ್ಲಲ್ಲಿ ಉಳಿದುಕೊಂಡಿವೆ. ಬುರುಜುಗಳು, ದೇವಾಲಯಗಳು, ಶಿಲ್ಪಗಳು, ಶಾಸನಗಳು ಮಾತ್ರ ಕಾಣಸಿಗುತ್ತದೆ.

ಎಮ್ಮಿಗುಡ್ಡ ಕೋಟೆ

ಇದು ಗಂಗಾವತಿ ಕೊಪ್ಪಳ ರಸ್ತೆಯಲ್ಲಿ ಮಕ್ಕುಂಪಿ ಬಳಿ ಇದೆ. ಇದೊಂದು ಭಾಗಶಃ ನೈಸರ್ಗಿಕ, ಭಾಗಶ: ನಿರ್ಮಾಣದ ಕೋಟೆ. ಇಲ್ಲಿ ಪೂರ್ವ ಹಾಗೂ ದಕ್ಷಿಣಾಭಿಮುಖವಾಗಿ ಎರಡು ಬೆಟ್ಟಗಳು ಕೂಡಿ ಕೊಂಡಿದ್ದು ಅವೆರಡರ ಮಧ್ಯದಲ್ಲಿ ೮೦ ಕೋನದ ಸ್ಥಳಾವಕಾಶ ಉಂಟಾಗಿದೆ. ಆ ಸ್ಥಳದ ಮುಂಭಾಗದಲ್ಲಿ ನೇರವಾಗಿ ಕೋಟೆ ಗೋಡೆಯನ್ನು ನಿರ್ಮಿಸಲಾಗಿದೆ. ಈ ಗೋಡೆಯ ಮಧ್ಯಭಾಗದಲ್ಲಿ ಪ್ರವೇಶದ್ವಾರವಿದೆ. ದ್ವಾರಮಂಟಪವು ವಿಜಯನಗರ ಕಾಲದ ದೇವಾಲಯಗಳ ದ್ವಾರಮಂಟಪದಂತ್ತಿದ್ದು ಅದರ ಮುಂಭಾಗ (ಪ್ರವೇಶ) ಹಾಗೂ ಹಿಂಭಾಗಗಳೆರಡರಲ್ಲೂ ಬಾಗಿಲುಗಳನ್ನು ಕೂಡಿಸಲಾಗಿದೆ. ಮಂಟಪದ ಮಧ್ಯಭಾಗದಲ್ಲಿ ನಾಲ್ಕು ಕಂಬಗಳಿವೆ. ಕೋಟೆಯ ಒಳಭಾಗದಲ್ಲಿ ಒಂದು ದೊಡ್ಡ ಶಿವಪಾರ್ವತಿ ದೇವಾಲಯ, ಲಕ್ಷ್ಮೀನರಸಿಂಹ (ಕನಕಾಚಲ) ದೇವಾಲಯ, ಆಂಜನೇಯ ದೇವಾಲಯ, ದುರ್ಗಾ ದೇವಾಲಯ ಮತ್ತು ಅರಮನೆಯಂತಹ ಕಟ್ಟಡ, ವಾಸದ ಮನೆಗಳ ಅವಶೇಷಗಳಿವೆ. ಇದು ಕ್ರಿ.ಶ. ೧೬-೧೭ ಶತಮಾನದಲ್ಲಿ ಕಟ್ಟಲ್ಪಟ್ಟ ಕೋಟೆಯಾಗಿದೆ.

ಕೋಟೆಗಳ ಪಟ್ಟಿ

ಕ್ರಸಂ.	ಕೋಟೆಗಳು	ಗ್ರಾಮ	ತಾಲೂಕು	ಕಾಲ
೧.	ಆನೆಗೊಂದಿ ಕೋಟೆ	ಆನೆಗೊಂದಿ	ಗಂಗಾವತಿ	೧೪-೧೫ನೇ ಶತಮಾನ
೨.	ಕನಕಗಿರಿ ಕೋಟೆ	ಕನಕಗಿರಿ	ಕನಕಗಿರಿ	೧೫-೧೬ನೇ ಶತಮಾನ
೩.	ತಾವರಗೆರೆ ಕೋಟೆ	ತಾವರಗೆರೆ	ಕುಷ್ಟಗಿ	೧೬ನೇ ಶತಮಾನ
೪.	ಇರಕಲಗಡ ಕೋಟೆ	ಇರಕಲಗಡ	ಕೊಪ್ಪಳ	೧೬ನೇ ಶತಮಾನ
೫.	ಶಿವಪುರ ಕೋಟೆ	ಶಿವಪುರ	ಕೊಪ್ಪಳ	೧೬ನೇ ಶತಮಾನ
೬.	ಕುಕನೂರ ಕೋಟೆ	ಕುಕನೂರು	ಕುಕನೂರು	೧೬ನೇ ಶತಮಾನ
೭.	ಎಮ್ಮಿಗುಡ್ಡ ಕೋಟೆ	ಎಮ್ಮಿಗುಡ್ಡ	ಗಂಗಾವತಿ	೧೬ನೇ ಶತಮಾನ

ಅಡಿಟಿಪ್ಪಣಿಗಳು

೧. ತಿಪ್ಪೇರುದ್ರಸ್ವಾಮಿ, ೨೦೧೬ (ಹದಿನಾಲ್ಕನೆಯ ಮುದ್ರಣ), ***ಕರ್ನಾಟಕ ಸಂಸ್ಕೃತಿ ಸಮೀಕ್ಷೆ***, ಪು. ೫೨೩

೨. ಅದೇ, ಪು.೫೨೩

೩. ಪ್ರಭಾಕರ ಎಂ. ಎನ್., ೨೦೧೧, ***ದೇವಾಲಯ ವಾಸ್ತು***, ಪು.೧೨

೪. ಅದೇ, ಪು.೨

೫. ಗೋಪಾಲ್ ಬಾ.ರಾ., ೨೦೦೯, *ಕರ್ನಾಟಕದ ಕಲೆಗಳು, ವಾಸ್ತು ಸಂಪುಟ–೪*, ಪು.೧

೬. ಕನ್ನಡ ವಿಷಯ ವಿಶ್ವಕೋಶ, *ಇತಿಹಾಸ ಮತ್ತು ಪುರಾತತ್ವ*, ಪು.೯೪೬

೭. ತಿಪ್ಪೇರುದ್ರಸ್ವಾಮಿ, ಪೂರ್ವೋಕ್ತ, ಪು.೫೨೩

೮. ಅಪರ್ಣ ಕೂ. ಸ, ೧೯೯೯, ದೇವಾಲಯ ವಾಸ್ತುಶಿಲ್ಪ ಪರಿಚಯ, ಪು.೧

೯. ತಿಪ್ಪೇರುದ್ರಸ್ವಾಮಿ, ಪೂರ್ವೋಕ್ತ, ಪು.೫೨೪

೧೦. ಶೇಷಾದ್ರಿ ಎಂ. (ಮೂ.ಲೇ), ರಾಮಸ್ವಾಮಿ ಬಿ.(ಅನು), *ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪ' (ಆರಂಭಕಾಲ)*, ಕರ್ನಾಟಕ ಪರಂಪರೆ, ಸಂ ೧, ಪು.೨೩೩

೧೧. ಅದೇ, ಪು.೨೩೩–೨೩೪

೧೨. ಎಚ್ಚೆಸ್ಕೆ (ಸಂ.), ೧೯೮೭, *ಅವಲೋಕನ*, ಕರ್ನಾಟಕದ ಪರಂಪರೆಯ ಸಮೀಕ್ಷೆ, ಪು.೧೧೪

೧೩. ಶರಣಬಸಪ್ಪ ಕೋಲ್ಕಾರ, *ಹಂಪಿ ವಿರೂಪಾಕ್ಷ ದೇವಾಲಯದ ಕನಕಗಿರಿ ಗೋಪುರದ ನಿರ್ಮಾಣ ಕಾಲ ಮತ್ತು ಕರ್ತೃ ಒಂದು ಪರಿಶೀಲನೆ*, ವಿಜಯನಗರ ಅಧ್ಯಯನ ಸಂಪುಟ–೫ , ಪು.೪೫

೧೪. ಮನೋಜ್ ಜಿ., ೨೦೧೫, *ದೇವಾಲಯ ವಾಸ್ತು ವಿಜ್ಞಾನ*, ಪು.೫೪–೫೭

೧೫. *ಕನ್ನಡ ವಿಶ್ವವಿದ್ಯಾಲಯದ ಶಾಸನ ಸಂಪುಟ–೨*, ಕೊಪ್ಪಳ ಜಿಲ್ಲೆ, ಗಂಗಾವತಿ ತಾ. ಹಿರೇಜಂತಗಲ್ಲು, ಶಾ.ಸಂ.೩

೧೬. ಅದೇ, ಹಿರೇಜಂತಗಲ್ಲು ಶಾ.ಸಂ. ೩

೧೭. ಅದೇ, ಹಿರೇಜಂತಗಲ್ಲು ಶಾ.ಸಂ. ೩

೧೮. ಅದೇ, ಕೆಸರಟ್ಟಿ ಶಾ.ಸಂ. ೭೩

೧೯. ಮಹೇಶ ಕೆ., ೨೦೦೨, *ಕೃಷ್ಣದೇವರಾಯನ ಕಾಲದ ವೈಷ್ಣವ ದೇವಾಲಯಗಳು*, ಪು.೧೦೫–೧೦೬

೨೦. ಗೀತಾ ಪೋಲಿಸ ಪಾಟೀಲ್, *ವಿಜಯನಗರ ಕಾಲದ ಚಿಕ್ಕರಾಂಪುರ ವೀರಭದ್ರೇಶ್ವರ ದೇವಾಲಯ*, ಇತಿಹಾಸ ದರ್ಶನ ಸಂಪುಟ–೩೦, ಪು.೨೬೮–೨೬೯

೨೧. ಅಪರ್ಣ ಕೂ.ಸ., ಪೂರ್ವೋಕ್ತ, ಪು. ೧೧೧

೨೨. ಶರಣಬಸಪ್ಪ ಕೋಲ್ಕಾರ, ೧೯೯೪, *ಕನಕಗಿರಿ ಪ್ರದೇಶದ ಸ್ಮಾರಕಗಳು ಮತ್ತು ಮೂರ್ತಿಶಿಲ್ಪಗಳು*,

೨೩. ಅದೇ ಪು.೮೨–೮೩

೨೪. *ಕನ್ನಡ ವಿಶ್ವವಿದ್ಯಾಲಯದ ಶಾಸನ ಸಂಪುಟ–೨*, ಕೊಪ್ಪಳ ಜಿಲ್ಲೆ, ಗಂಗಾವತಿ ತಾ., ಹಿರೇಜಂತಗಲ್ಲು, ಶಾ.ಸಂ.೩

೨೫. ಅದೇ, ಮುಷ್ಟೂರು, ಶಾ.ಸಂ.೯೭

೨೬. ಭಟ್‌ಸೂರಿ, ಕೆ. ಜಿ., ೨೦೦೪, *ಹಂಪಿಯ ಶಾಸನಗಳಲ್ಲಿ ವಿಜಯನಗರ ಕಾಲದ ಆಡಳಿತ*

ವಿಭಾಗಗಳು, ವಿಜಯನಗರ ಅಧ್ಯಯನ ಸಂ.-೯, ಪು.೩೧೪-೩೧೮.

೨೭. ಶರಣಬಸಪ್ಪ ಕೋಲ್ಕಾರ, ೨೦೧೪, ***ಆನೆಗೊಂದಿಯಲ್ಲಿಯ ವಿಜಯನಗರ ಕಾಲದ ಕಾರಾಗೃಹ,*** ವಿಜಯನಗರ ಅಧ್ಯಯನ ಸಂ.೧೮, ಪು.೧೦೯-೧೧೩

೨೮. ಶಶಿಕಲಾ ರಾಘವೇಂದ್ರ, ೨೦೧೭, ***ಹಂಪಿ ಪರಿಸರದ ವಸತಿ ನೆಲೆಗಳು***, ಪು-೧೬೪, ಮತ್ತು ಕ್ಷೇತ್ರಕಾರ್ಯದಿಂದ ಸಂಗ್ರಹಿಸಿದ ಮಾಹಿತಿ

೨೯. ಕಲ್ಲನಗೌಡ ತಿಪ್ಪನಗೌಡ ಪಾಟೀಲ (ಲೇ.), ೧೯೯೪, ***ಇರಕಲ್ ಗಡ ಕೋಟೆ***, ಇತಿಹಾಸ ದರ್ಶನ ಸಂ.೯, ಮತ್ತು ಕ್ಷೇತ್ರಕಾರ್ಯದಿಂದ ಸಂಗ್ರಹಿಸಿದ ಮಾಹಿತಿ

೩೦. ಸುಜಾತ ಮಲ್ಲನಗೌಡ, ೨೦೦೦, ***ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯ ಕೋಟೆಗಳು ಒಂದು ಅಧ್ಯಯನ,*** ಪು.೨೭೬, ಮತ್ತು ಕ್ಷೇತ್ರಕಾರ್ಯದಿಂದ ಸಂಗ್ರಹಿಸಿದ ಮಾಹಿತಿ

೩೧. ಅದೇ, ಪು. ೨೮೧, ಮತ್ತು ಕ್ಷೇತ್ರಕಾರ್ಯದಿಂದ ಸಂಗ್ರಹಿಸಿದ ಮಾಹಿತಿ

ಅಧ್ಯಾಯ : ನಾಲ್ಕು
ಮೂರ್ತಿಶಿಲ್ಪ

========================

೪.೧ ಧಾರ್ಮಿಕ ಶಿಲ್ಪ

೪.೨ ಲೌಕಿಕ ಶಿಲ್ಪ

೪.೩ ಗಾರೆಶಿಲ್ಪ

ಅಧ್ಯಾಯ : ನಾಲ್ಕು

ಮೂರ್ತಿಶಿಲ್ಪ

ಶಿಲ್ಪ ಎಂದರೆ ಮೂರು ಆಯಾಮಗಳ ಆಕೃತಿ, ಕಲ್ಲು, ಮರ, ಕಂಚು ಮುಂತಾದ ಮಾಧ್ಯಮಗಳಿಂದ ಮಾಡಿದ ಆಕೃತಿ. ಈ ವ್ಯಾಖ್ಯಾನ ವಿಸ್ತಾರಗೊಳುತ್ತ ಶಾಸ್ತ್ರಗಳಿಂದಾಚೆಗೂ ಬೆಳೆದ ಶೈಲಿಗಳು. ಜನರ ಕ್ರಿಯಾಶೀಲತೆಯ ವ್ಯಾಖ್ಯಾನವಾಗುತ್ತ ಇಂದಿಗೂ ಬದಲಾಗುತ್ತಿವೆ. ಒಂದು ಕಲೆ ಜೀವಂತವಾಗಿರುವುದಕ್ಕೆ ಇದೇ ಸಂಕೇತ.

ಮೂರ್ತಿಶಿಲ್ಪವು ಅತ್ಯಂತ ಪ್ರಾಚೀನವಾದ ಕಲೆ. ಈ ಕಲೆಗೂ ವಿಗ್ರಹಾರಾಧನೆಗೂ ನಿಕಟವಾದ ಸಂಬಂಧವಿದ್ದುದರಿಂದ ಪ್ರಾಚೀನ ಭಾರತೀಯರೂ ಜಗತ್ತಿನ ಇತರ ಜನಾಂಗದವರೂ ಮೂರ್ತಿಶಿಲ್ಪಗಳ ನಿರ್ಮಾಣದಲ್ಲಿ ತೊಡಗಿದರು.[೧] ಶಿಲ್ಪವು ಅತ್ಯಂತ ಪ್ರಾಚೀನವಾದ ಶಬ್ಧ ಆದರೆ ಅದನ್ನು ಬೇರೆ ಬೇರೆ ಯುಗಗಳಲ್ಲಿ ಬೇರೆ ಬೇರೆಯಾಗಿ ಅರ್ಥೈಸಲಾಗಿದೆ. ಶಿಲ್ಪ ಮತ್ತು ಕಲೆಯ ಪ್ರಾಚೀನತೆಯು ವೈದಿಕ ಯುಗದಷ್ಟು ಹಳೆಯದು. ವೈದಿಕ ಯುಗದ ಈ ಶಿಲ್ಪಕಲಾ ವಿಧಾನವು ಈ ಭೂಮಿಯ ಮೇಲೆ ಅಸ್ತಿತ್ವದಲ್ಲಿತ್ತು. ಆದರೆ ಅನಂತರ ಬೇರೆ ವಿಷಯಗಳಂತೆಯೇ ಅದನ್ನು ಧರ್ಮ, ಆಧ್ಯಾತ್ಮ ಮತ್ತು ಶಾಸ್ತ್ರಗಳ ಬಂಧನದಲ್ಲಿ ಸಿಲುಕಿಸಿ ಅದರ ಪ್ರಗತಿಯಲ್ಲಿ ತಡೆಯುಂಟು ಮಾಡಲಾಯಿತು. ವೈದಿಕ ಯುಗದ ನಂತರ ಬ್ರಾಹ್ಮಣಯುಗದಲ್ಲಿ ಶಿಲ್ಪ ಶಬ್ದವನ್ನು ನೃತ್ಯಂ, ಗೀತೆ ಮತ್ತು ವಾದ್ಯದ ಅರ್ಥದಲ್ಲಿ ಬಳಸಲಾಗುತ್ತಿತ್ತು.[೨] ಯಾವುದೇ ಕಾಲದ ಸಮಾಜ ಮತ್ತು ಸಂಸ್ಕೃತಿಯನ್ನರಿಯಲು ಆ ಕಾಲದ ದೇವಾಲಯಗಳಲ್ಲಿ ದೊರೆಯುವ ಉಬ್ಬುಶಿಲ್ಪಗಳೂ, ಶಿಲ್ಪಪಟ್ಟಿಕೆಗಳೂ ಸಹಾಯ ಮಾಡುತ್ತವೆ. ದೇವತಾ ಶಿಲ್ಪಗಳಂತಲ್ಲದೆ, ನಿಜ ಜೀವನಕ್ಕೆ ಹತ್ತಿರವಾದ ವ್ಯಕ್ತಿ, ಘಟನೆಗಳನ್ನೂ, ಅವರು ಆಚರಿಸುತ್ತಿದ್ದು ಹಬ್ಬ ಹರಿದಿನಗಳನ್ನೂ ಶಿಲ್ಪಿಯು ಇಲ್ಲಿ ಸ್ವತಂತ್ರವಾಗಿ ಬಿಡಿಸಿರುತ್ತಾನೆ. ಇಂತಹ ಶಿಲ್ಪಗಳನ್ನು ಬಿಡಿಸುವ ಪದ್ಧತಿಯು ವಿಜಯನಗರ ಕಾಲದಲ್ಲೂ ಮುಂದುವರಿದಿದೆ. ಇವುಗಳಲ್ಲಿ ನೃತ್ಯಮಾಡುವುದು, ಕುಸ್ತಿ ಆಡುವುದು, ಬೇಟೆಯಾಡುವುದು, ವಾದ್ಯನುಡಿಸುವುದು, ಸವಾರಿಮಾಡುವುದು ಇತ್ಯಾದಿ

ಶಿಲ್ಪಗಳನ್ನು ಹೆಸರಿಸಬಹುದು. ವಿಜಯನಗರದ ಶಿಲ್ಪಗಳು ಬಹಳಷ್ಟು ಸಾಮಾಜಿಕ ಚಟುವಟಿಕೆಗಳನ್ನೇ ಪ್ರತಿನಿಧಿಸುತ್ತವೆ. ಕೋಲಾಟ, ನೃತ್ಯ ಮತ್ತು ಬೇಟೆಯಾಡುವುದು ಮುಂತಾದ ದೃಶ್ಯಗಳನ್ನು ಶಿಲ್ಪಗಳಲ್ಲಿ ಸೆರೆಹಿಡಿಯಲಾಗಿದೆ. ಕೆಲವು ಅಂಕಣಗಳಲ್ಲಿ ಅನೇಕ ಬಗೆಯ ಪಕ್ಷಿ ಮತ್ತು ಪ್ರಾಣಿಗಳನ್ನು ಕೆತ್ತಲಾಗಿದೆ. ಬಳ್ಳಿಗಳು ಮತ್ತು ಹೂಗಳನ್ನು ಶಿಲ್ಪಗಳ ಸುತ್ತಲು ಅಲಂಕಾರಕದ ದೃಷ್ಟಿಯಿಂದ ಚಿತ್ರಿಸಲಾಗಿದೆ. ವಿಜಯನಗರದ ಸಾಂಪ್ರದಾಯಕ ಶಿಲ್ಪ ಕಲೆಯು ಪಲ್ಲವರ ಮತ್ತು ಚೋಳರ ಕೆತ್ತನೆಗಳಲ್ಲಿ ಕಾಣುವ ಸಹಜ ಸೌಂದರ್ಯವನ್ನು ಕಳೆದುಕೊಂಡಿತು. ಆಕೃತಿಗಳಲ್ಲಿ ಒರಟುತನ ಕಂಡುಬರುವುದಲ್ಲದೇ, ಮುಖಲಕ್ಷಣಗಳಲ್ಲಿ ಯಾವ ವಿಧದ ಭಾವವೂ ಕಾಣಿಸುವುದಿಲ್ಲ. ಚೂಪಾದ ಮೂಗುಗಳು ಸಹಜ ಸೌಂದರ್ಯಕ್ಕೆ ಅಡ್ಡಿಯಾದಂತೆ ಭಾಸವಾಗುತ್ತದೆ. ಉಡುಪು, ಆಭರಣಗಳು ಮತ್ತು ಅಲಂಕಾರ ಚೋಳರ ಕಾಲಕ್ಕಿಂತಲೂ ಹೆಚ್ಚು ವಿಸ್ತೃತವಾಯಿತು.[೩] ವಿಜಯನಗರ ಕಾಲದಲ್ಲಿ ಮೂರ್ತಿಶಿಲ್ಪವು ಗಾತ್ರದಲ್ಲಿ ಬೃಹತ್ ಸ್ವರೂಪವನ್ನು ಪಡೆದುಕೊಂಡಿತು. ಹಂಪಿಯ ಲಕ್ಷ್ಮೀನರಸಿಂಹ, ಬಡವಿಲಿಂಗ, ಉದ್ದಾನ(ಮುದ್ದಾದ) ವೀರಭದ್ರ, ಎದುರುನಂದಿ. ಕಡಲೆಕಾಳು ಗಣೇಶ, ಸಾಸಿವೆಕಾಳು ಗಣೇಶ, ಲೇಪಾಕ್ಷಿ ನಾಗಲಿಂಗ ಉದಾಹರಣೆಗಳು ಜೊತೆಗೆ ವಿಫುಲ ಸಂಖ್ಯೆಯಲ್ಲಿ ಸಣ್ಣ ಪ್ರಮಾಣದ ಶಿಲ್ಪಗಳು ರಚನೆಯಾದವು. ಹೀಗೆ ನಿರ್ಮಾಣವಾದ ಕೊಪ್ಪಳ ಜಿಲ್ಲೆಯ ವಿಜಯನಗರ ಕಾಲದ ಶಿಲ್ಪಗಳ ಅವಲೋಕನ ಇಲ್ಲಿದೆ.

೪.೧ ಧಾರ್ಮಿಕ ಶಿಲ್ಪಗಳು

ಶೈವಶಿಲ್ಪಗಳು

ಲಿಂಗ

ಲಿಂಗ ಎಂಬುದು ಒಂದು ಸಂಕೇತ ಎಂಬ ಅರ್ಥದಿಂದ ಕೂಡಿದ್ದು, ಇದು ಪರಶಿವನ ಸಂಕೇತವೂ ಆಗಿದೆ. ಲಿಂಗದ ಮೂಲರಚನೆ ಮತ್ತು ಆಕಾರಗಳನ್ನು ಅನೇಕ ವಿದ್ವಾಂಸರು ಪುರುಷ ಜನನೇಂದ್ರಿಯದೊಡನೆ ಸಮೀಕರಿಸಿ ಶಿಶ್ನಾಕಾರವೆಂದೂ ಅರ್ಥೈಸಿದ್ದಾರೆ.[೪] ವಿಜಯನಗರ ಕಾಲದಲ್ಲಿ ಪೀಠ ಸಹಿತ ಶಿವಲಿಂಗಗಳನ್ನು ಪ್ರತಿಷ್ಠಾಪಿಸುವ ಪದ್ಧತಿ ಜನಪ್ರಿಯವಾಯಿತು. ಇವು ಪೀಠ, ಪಾಣಿಬಟ್ಟಲುಗಳನ್ನು ಹೊಂದಿರುತ್ತವೆ. ಹಂಪಿಯ ವಿರುಪಾಕ್ಷ ಲಿಂಗ, ಬಡವಿಲಿಂಗ ಬೃಹತ್ ಪ್ರಮಾಣದಲ್ಲಿದ್ದು ಗಮನಸೆಳೆಯುತ್ತವೆ. ಇದೇ ಮಾದರಿಯ ಲಿಂಗಗಳು ಕೊಪ್ಪಳ ಜಿಲ್ಲೆಯ ಹಿರೇಜಂತಗಲ್ಲಿನ ಪ್ರಸನ್ನ ವಿರುಪಾಕ್ಷ ದೇವಾಲಯ, ಕನಕಗಿರಿಯ ಪಂಪಾಪತಿ, ನಗರೇಶ್ವರ, ನೀಲಕಂಠೇಶ್ವರ ದೇವಾಲಯಗಳಲ್ಲಿ ಕಂಡುಬರುತ್ತವೆ. ಇವುಗಳಲ್ಲಿ ಹಿರೇಜಂತಗಲ್ಲಿನ ಪ್ರಸನ್ನ ವಿರುಪಾಕ್ಷೇಶ್ವರ ದೇವಾಲಯದ ಶಿವಲಿಂಗವು ವಿಶಿಷ್ಟವಾಗಿದೆ. ಅದರ ಪಾಣಿಬಟ್ಟಲು (ಜಲಹರಿ) ಬಲಭಾಗದಲ್ಲಿರುವುದು ಅಪರೂಪದ ಲಕ್ಷಣವಾಗಿದೆ. ರಾಜ್ಯದಲ್ಲಿ ಅಲ್ಲಲ್ಲಿ ಈ ರೀತಿಯ ಲಿಂಗಗಳು ಕಂಡು ಬರುತ್ತವೆ.

ಕ್ರಸಂ.	ಗ್ರಾಮ	ತಾಲೂಕು	ಸ್ಮಾರಕ	ಮೂರ್ತಿಶಿಲ್ಪ ದೊರೆತ ಸ್ಥಳ
೧.	ಕೊಪ್ಪಳ	ಕೊಪ್ಪಳ	ಲಿಂಗ ಶಿಲ್ಪ	ಸಂಗಮೇಶ್ವರ ದೇವಾಲಯ ಗರ್ಭಗೃಹ
೨.	ಹಿರೇಜಂತಗಲ್ಲು	ಗಂಗಾವತಿ	ಲಿಂಗ ಶಿಲ್ಪ	ವಿರುಪಾಕ್ಷ ದೇವಾಲಯ ಗರ್ಭಗೃಹ
೩.	ಕನಕಗಿರಿ	ಕನಕಗಿರಿ	ಲಿಂಗ ಶಿಲ್ಪ	ನಗರೇಶ್ವರ ದೇವಾಲಯ ಗರ್ಭಗೃಹ
೪.	ಕನಕಗಿರಿ	ಕನಕಗಿರಿ	ಲಿಂಗ ಶಿಲ್ಪ	ನರಸಿಂಹ ತೀರ್ಥ ಶಿವ ಮಂಟಪದಲ್ಲಿ
೫.	ಕನಕಗಿರಿ	ಕನಕಗಿರಿ	ಲಿಂಗ ಶಿಲ್ಪ	ಶಂಕರಲಿಂಗ ದೇವಾಲಯ ಗರ್ಭಗೃಹ
೬.	ಕನಕಗಿರಿ	ಕನಕಗಿರಿ	ಲಿಂಗ ಶಿಲ್ಪ	ಪಂಪಾಪತಿ ದೇವಾಲಯ ಗರ್ಭಗೃಹ
೭.	ಕನಕಗಿರಿ	ಕನಕಗಿರಿ	ಲಿಂಗ ಶಿಲ್ಪ	ಶಿವ ದೇವಾಲಯ ಗರ್ಭಗೃಹ
೮.	ಎಮ್ಮಿಗುಡ್ಡ	ಗಂಗಾವತಿ	ಲಿಂಗ ಶಿಲ್ಪ	ಈಶ್ವರ ದೇವಾಲಯ ಗರ್ಭಗೃಹ

ಪಂಚಮುಖಲಿಂಗ

ಚತುರ್ಮುಖ ಲಿಂಗವು ನಾಲ್ಕು ಲಿಂಗಗಳ ಸಮ್ಮಿಳನವಾಗಿರುತ್ತದೆ. ಆದರೆ ಇದು ಪಂಚಮುಖ ಲಿಂಗವೆಂದು ಅನಿಸಿಕೊಳ್ಳುತ್ತದೆ. ನಾಲ್ಕು ದಿಕ್ಕುಗಳಿಗೂ ಎದುರಾಗಿರುವ ಮುಖಗಳು ಕ್ರಮವಾಗಿ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ ರೂಪಗಳು ಏಕೆಂದರೇ ಈಶಾನ್ಯ ವಕ್ತ್ರವು ಊರ್ಧ್ವ ಭಾಗದಲ್ಲಿರುತ್ತದೆ ಎಂದು ಹೇಳಲಾಗುತ್ತದೆ. ಈ ಮುಖವು ಕೇವಲ ಯೋಗಿಗಳಿಗೆ ಮಾತ್ರವೇ ಕಾಣಿಸುವುದರಿಂದ ಈ ಮುಖವನ್ನು ರೂಪಿಸಕೂಡದು ಎಂದು ರೂಪಮಂಡನ ಹೇಳುತ್ತದೆ. ಆದ್ದರಿಂದ ಐದನೆಯ ಮುಖವನ್ನು ಪ್ರತ್ಯೇಕವಾಗಿ ರೂಪಿಸಬೇಕಾಗಿಲ್ಲ ಎಂದು ಚತುರ್ಮುಖದಲ್ಲಿಯೇ ಪಂಚಮುಖಗಳೂ ಇವೆ ಎಂಬ ಕಲ್ಪನೆಯನ್ನು ಇರಿಸಿಕೊಳ್ಳಲಾಗಿದೆ. ನೋಡುವವರೇ ರೂಪವನ್ನು ಕಲ್ಪಿಸಿಕೊಳ್ಳುವುದು ಸಾಧಾರಣವಾಗಿ ಶಿಲ್ಪ ಶಾಸ್ತ್ರದ ಕ್ರಮವಲ್ಲ ಆದರೆ ಈ ರೀತಿಯ ಕ್ರಮಕ್ಕೆ ಬೇರೊಂದು ಕಾರಣವೇ ಇರುವಂತೆ ತೋರುತ್ತದೆ. ಈಶಾನ್ಯ ಶಿವಗುರು ಪದ್ಧತಿ ಮತ್ತು ದೀಪಾರ್ಣವದಲ್ಲಿ ಇಂತು ಹೇಳಿದೆ. ಗ್ರಾಮಗಳಲ್ಲಿ ಒಂದು ಮುಖ ಮತ್ತು ನಾಲ್ಕು ಮುಖಗಳಿರುವ ಲಿಂಗಗಳನ್ನು ಸ್ಥಾಪಿಸಬಹುದು. ಎರಡು ಮತ್ತು ಐದು ಮುಖಗಳ ಲಿಂಗಗಳನ್ನು ಪರರಾಷ್ಟ್ರಗಳ ಸರಹದ್ದಿನಲ್ಲಿ ಬೆಟ್ಟಗಳ ಮೇಲೆ ಸ್ಥಾಪಿಸಬೇಕು. ಎರಡು ಮುಖಗಳ ಲಿಂಗವು ಅಭಿಚಾರ ಲಿಂಗ ಎಂಬುದು ನಮಗೆ ಈಗಾಗಲೇ ಸ್ಪಷ್ಟವಾಗಿ ತಿಳಿದಿದೆ. ಪಂಚಮುಖಗಳ ಲಿಂಗವೂ ಅದೇ ರೀತಿಯಾಗಿ ಪರರಾಷ್ಟ್ರದ ಎಲ್ಲೆಯಲ್ಲಿ ಸ್ಥಾಪಿಸವಾಗಬೇಕು ಎಂದು ಹೇಳಿರುವುದರಿಂದ ಇದೂ ಅಭಿಚಾರ ಲಿಂಗವೇ ಎಂಬುದು ಗೊತ್ತಾಗುತ್ತದೆ. ಮತ್ತು ಇಲ್ಲಿ ಲಿಂಗದಲ್ಲಿ ಐದು ಮುಖಗಳನ್ನೂ ರೂಪಿಸಲಾಗುತ್ತದೆ.[೫] ಈ ಶಾಸ್ತ್ರದನ್ವಯ ಪ್ರಸ್ತುತ ಲಿಂಗಗಳನ್ನು ಕಂಡರಿಸಲಾಗಿರುವುದನ್ನು ಗುರುತಿಸಬಹುದು.

ಅಗಳಕೆರೆಯ ವೀರಭದ್ರ ದೇವಾಲಯದ ಗರ್ಭಗುಡಿಯಲ್ಲಿ ಚತುರ್ಮುಖ ಲಿಂಗವಿದೆ. ಕಣ ಶಿಲೆಯಿಂದ ರಚಿಸಿರುವ ಈ ಚತುರ್ಮುಖ ಲಿಂಗದಲ್ಲಿ ನಾಲ್ಕುಮುಖಗಳಿವೆ. ಗರ್ಭಗೃಹದಲ್ಲಿ

ಭೈರವನ ಮೂರ್ತಿಯ ಪಕ್ಕ ಬನ್ನಿ ಮರದ ಮುಂದೆ ನೆಲದಲ್ಲಿ ಹುದುಗಿದ್ದಾರೆ. ಈ ಲಿಂಗದ ಮೂರು ಮುಖಗಳನ್ನು ಸ್ಪಷ್ಟವಾಗಿ ನೋಡಬಹುದು. ಈ ಮೂರು ಮುಖಗಳ, ಮುಖದ ಭಾವಗಳನ್ನು ಗುರುತಿಸುವುದು ಕಷ್ಟ. ಏಕೆಂದರೆ ಕಣಶಿಲೆಯಲ್ಲಿ ಅಸ್ಪಷ್ಟವಾಗಿ ಕಂಡರಿಸಲಾಗಿದೆ. ಇನ್ನೊಂದು ಮುಖ ನೋಡಲು ಕಾಣುವುದಿಲ್ಲ. ಈ ಲಿಂಗದ ಶಿರೋಭಾಗವು ವಿಶಿಷ್ಟತೆಯನ್ನು ಹೊಂದಿದೆ. ಚತುರ್ಮುಖ ಲಿಂಗದ ಮೇಲೆ ಅಡ್ಡ ಪಟ್ಟಿ ಬಂದಿದ್ದು, ಪಟ್ಟಿಯ ಮೇಲ್ಭಾಗದಲ್ಲಿ ಜಟಾಮುಕುಟವಿದೆ. ಅದರ ಮೇಲೆ ಲಿಂಗ ರೂಪ ಗೋಚರಿಸುತ್ತದೆ. ಪ್ರತ್ಯೇಕವಾಗಿ ಒಂದೊಂದು ಲಿಂಗವನ್ನು ನೋಡಿದರೆ ಜಟಾಮುಕುಟವು ಸ್ಪಷ್ಟವಾಗಿ ಕಾಣಿಸುತ್ತದೆ.

ಆನೆಗೊಂದಿಯ ಚಿಂತಾಮಣಿಯ ಮುಕ್ತಿನರಸಿಂಹ ದೇವಾಲಯದ ರುದ್ರಾಕ್ಷಿ ಮಂಟಪದ ಹತ್ತಿರ ಹಾಗೂ ವೀರಭದ್ರ ದೇವಾಲಯದ ಹೊರ ಆವರಣದಲ್ಲಿ ಎರಡು ಪಂಚಲಿಂಗಗಳು ದೊರೆಯುತ್ತವೆ. ಆನೆಗೊಂದಿಯ ಮುಕ್ತಿನರಸಿಂಹ ದೇವಾಲಯದ ಹತ್ತಿರದಲ್ಲಿರುವ ರುದ್ರಾಕ್ಷಿ ಮಂಟಪಕ್ಕೆ ಹೋಗುವ ಮೆಟ್ಟಿಲುಗಳನ್ನು ಹತ್ತಿದಾಗ ಅಲ್ಲಿಯೇ ಮೆಟ್ಟಿಲುಗಳನ್ನು ಅಂಟಿಕೊಂಡಂತೆ ಇರುವ ಗೋಡೆಗೆ ಪಂಚಲಿಂಗವನ್ನು ಅಳವಡಿಸಲಾಗಿದೆ. ಇದನ್ನು ಎಲ್ಲಿಂದಲೋ ತಂದು ಸೇರಿಸಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ.[೬] ಈ ಪಂಚಲಿಂಗವು ಪಿರಮಿಡ್ ಆಕಾರದಲ್ಲಿದ್ದು ಪಂಚಲಿಂಗದ ಮೆಟ್ಟಿಲಿನಾಕೃತಿಯ ಅಲಂಕರಣೆಯ ಭಾಗವು ನಾಶವಾಗಿದ್ದು, ಕೇವಲ ಮೇಲಿನ ಪಂಚಲಿಂಗಗಳು ಸಮತಟ್ಟಾದ ಭಾಗದಲ್ಲಿ ಐದು ಲಿಂಗಗಳನ್ನು ಒಂದುಕ್ಕೊಂದು ಅಂಟಿಕೊಂಡಂತೆ ಕೆತ್ತಲಾಗಿದೆ. ಮಧ್ಯದ ಭಾಗದಲ್ಲಿರುವ ಲಿಂಗಾಕೃತಿಯು ಉಳಿದ ನಾಲ್ಕು ಲಿಂಗಗಳ ಮೇಲ್ಭಾದಲ್ಲಿ ಹಾಗೂ ಎತ್ತರದಲ್ಲಿರುವಂತೆ ರೂಪಿಸಲಾಗಿದೆ. ಇದಕ್ಕೆ ಪಾಣಿಪೀಠ ಮತ್ತು ಪ್ರಣಾಳ ಭಾಗಗಳಿಲ್ಲ. ಈ ರೀತಿಯ ಪಂಚಲಿಂಗವನ್ನು ಹಂಪಿ ಪರಿಸರದಲ್ಲಿ ಕಾಣಬಹುದು. ಅವುಗಳೆಂದರೆ ಕಮಲಾಪುರದ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯ ವಸ್ತು ಸಂಗ್ರಹಾಲಯದಲ್ಲಿ ಮತ್ತು ಕಮಲ್ ಮಹಲ್ ಹತ್ತಿರದ ರಾಜ್ಯ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಉಪನಿರ್ದೇಶಕರ ಕಚೇರಿಯ ಆವರಣ[೭] ಹಾಗೂ ಮಹಾನವಮಿ ದಿಬ್ಬದ ಎದುರು ಆವರಣ[೮] ಈ ಎಲ್ಲಾ ಪಂಚಲಿಂಗಗಳು ಆಕಾರ ಒಂದೇ ತೆರನಾಗಿದ್ದು, ಗಾತ್ರದಲ್ಲೂ ಒಂದೇ ಎಂದೆನಿಸುತ್ತದೆ.

ಆನೆಗೊಂದಿಯ ವೀರಭದ್ರ ದೇವಾಲಯದ ಮುಂಭಾಗದಲ್ಲಿ ಇತರ ಕೆಲವು ಬಿಡಿಶಿಲ್ಪಗಳೊಂದಿಗೆ ಪಂಚಲಿಂಗವೊಂದನ್ನು ಇರಿಸಿರುವರು. ಈ ಪಂಚಲಿಂಗವೂ ಸಹ ಮೇಲೆ ವಿವರಿಸಿದಂತೆ ಕೆಳಭಾಗದಲ್ಲಿ ಮೆಟ್ಟಿಲಿನಂತಿರುವ ಅಲಂಕರಣೆಯನ್ನು ಹೊಂದಿದ್ದು ಮೇಲ್ಭಾಗದಲ್ಲಿ ಪಂಚಲಿಂಗಗಳನ್ನು ಕೆತ್ತಿರುವರು. ಆದರೆ ಇವುಗಳು ಒಂದಕ್ಕೊಂದು ಅಂಟಿಕೊಂಡಿರದೆ ನಾಲ್ಕೂ ಮೂಲೆಗಳಲ್ಲೂ ಇಂದೊಂದು ಲಿಂಗವನ್ನು ಕೆತ್ತಿದ್ದು ಮಧ್ಯದಲ್ಲಿ ಒಂದು ಲಿಂಗವನ್ನು ಕೆತ್ತಲಾಗಿದೆ. ಕಮಲಾಪುರದ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ವಸ್ತು ಸಂಗ್ರಹಾಲಯದ ಆವರಣದಲ್ಲಿರುವ ವೃತ್ತಾಕಾರದ ಪಾಣಿಪೀಠವನ್ನು ಹೊಂದಿರುವ ಪಂಚಲಿಂಗದ ಲಕ್ಷಣಗಳನ್ನು

ಈ ಪಂಚಲಿಂಗದಲ್ಲಿಯೂ ಕಾಣಬಹುದು. ಆದರೆ ಇದು ವೃತ್ತಾಕಾರದಲ್ಲಿಲ್ಲ. ಚೌಕಾಕಾರದಲ್ಲಿದ್ದು ಜಲಹರಿಯನ್ನು ಹೊಂದಿರುವುದಿಲ್ಲ ಆದರೆ ಸ್ಥಳೀಯರೇ ಇದರ ಎಡಭಾಗವನ್ನು ಒಡೆದು ನೀರು ಹರಿದು ಹೋಗುವಂತೆ ಮಾಡಿದ್ದಾರೆ. ಇದರಲ್ಲಿರುವ ಲಿಂಗಗಳು ಒಂದೇ ಆಕಾರ ಹಾಗೂ ಗಾತ್ರದಲ್ಲಿವೆ. ಪ್ರಸ್ತುತ ಪಂಚಲಿಂಗವು ದೇವಾಲಯದ ಹೊರಭಾಗದಲ್ಲಿಯೇ ಪೂಜೆಗೊಳುತ್ತಿದೆ.[೯]

ಕ್ರಸಂ.	ಗ್ರಾಮ	ತಾಲೂಕು	ಸ್ಮಾರಕ	ಮೂರ್ತಿಶಿಲ್ಪ ದೊರೆತ ಸ್ಥಳ
೧.	ಆನೆಗೊಂದಿ	ಗಂಗಾವತಿ	ಪಂಚಮುಖಲಿಂಗ ಶಿಲ್ಪ	ವೀರಭದ್ರ ದೇವಾಲಯದ ಆವರಣದ ಹೊರಗೆ
೨.	ಆನೆಗೊಂದಿ	ಗಂಗಾವತಿ	ಪಂಚಮುಖಲಿಂಗ ಶಿಲ್ಪ	ಚಿಂತಾಮಣಿಮಠ ರುದ್ರಾಕ್ಷಿ ಮಂಟಪಕ್ಕೆ ಹೋಗುವ ಮೆಟ್ಟಿಲುಗಳ ಗೋಡೆಗೆ
೩.	ಅಗಳಕೇರಿ	ಕೊಪ್ಪಳ	ಪಂಚಮುಖಲಿಂಗ ಶಿಲ್ಪ	ವೀರಭದ್ರ ದೇವಾಲಯದ ಗರ್ಭಗೃಹ

ನಂದಿ ಶಿಲ್ಪ

ವಿಶೇಷವಾಗಿ ಶಿವಾಲಯಗಳಲ್ಲಿ ಕಾಣಬರುವ ಮೊತ್ತೊಂದು ಶಿಲ್ಪ ನಂದಿಯದು. ನಂದಿಯ ಬೆನ್ನ ಮೇಲಿನ ಡುಬ್ಬು ಲಿಂಗಾಕಾರವಾಗಿರುವುದರಿಂದ ಅದಕ್ಕೆ ವಿಶೇಷವಾಗಿ ಪೂಜೆ ಸಲ್ಲಿಸುತ್ತಿದ್ದ ಕಾಲವೂ ಇದ್ದಿತು. ನಂದಿಯ ಬೆನ್ನ ಮೇಲಿನ ಡುಬ್ಬು ಪರ್ವತಾಕಾರವಾಗಿದ್ದು ಅದು ಮುಂದೆ ಲಿಂಗದೊಂದಿಗೆ ತಾದಾತ್ತ್ಯವನ್ನು ಪಡೆಯಿತು. ಲಿಂಗಾಕಾರದ ಡುಬ್ಬು ಬೆನ್ನ ಮೇಲಿರುವುದರಿಂದ ವೃಷಭವೂ ಲಿಂಗಿಯೇ ಭಾರಶಿವನೇ, ಶಿವನಿಗೆ ಒದಗಿದ ಜಟಾಭಾರ, ಜಟಾಮುಕುಟಗಳೂ ಈ ಡುಬ್ಬಿನ ರೂಪಾಂತರಗಳೇ ಇರಬಹುದು.[೧೦] ವಿಜಯನಗರ ಕಾಲದ ನಂದಿಶಿಲ್ಪಗಳು ಶಿವಾಲಯಗಳ ಅಂತರಾಳ, ನವರಂಗದಲ್ಲಿ ಲಿಂಗಕ್ಕೆ ಅಭಿಮುಖವಾಗಿರುವಂತೆ ಇರುತ್ತದೆ. ಹಲವೆಡೆ ಬೃಹದಾಕಾರದ ನಂದಿಶಿಲ್ಪವನ್ನು ರಚಿಸಿದ್ದು, ನಂದಿಗಾಗಿಯೇ ಮಂಟಪವೊಂದನ್ನು ನಿರ್ಮಿಸಿದ್ದಾರೆ. ವಿಜಯನಗರ ಕಾಲಕ್ಕೆ ಸಂಬಂಧಿಸಿದ ನಂದಿ ಶಿಲ್ಪಗಳು ಆನೆಗೊಂದಿ, ಅಯೋಧ್ಯ ಕನಕಗಿರಿ, ಸಾಮಾನ್ಯವಾಗಿ ಗಂಟೆಸರ, ಉಪಪಟ್ಟಿಕೆ, ಗಗ್ಗರು, ಹಣೆಯಲ್ಲಿ, ಕುಚ್ಚಿನ ಪದಕ, ಮೊದಲಾದ ವಸ್ತ್ರಾಭಾರಣಗಳನ್ನು ಮಾಡಿಕೊಂಡಿರುವ ನಂದಿಯನ್ನು ಕಾಣುತ್ತೇವೆ. ಆದರೆ ಈ ಲಕ್ಷಣಗಳನ್ನು ಹೊಂದಿಯು ಆನೆಗೊಂದಿ, ಎಮ್ಮಿಗುಡ್ಡ, ಹುಲಿಹೈದರ, ಅಯೋಧ್ಯ ಗ್ರಾಮದಲ್ಲಿರುವ ನಂದಿಗಳ ಕಾಲಬಳಿ ಚಿಕ್ಕದಾಗಿ ಶಿವಲಿಂಗವನ್ನು ತೋರಿಸಿರುವು ವಿಶೇಷವಾಗಿದೆ. ಈ ಎಲ್ಲ ನಂದಿಗಳ ಗಾತ್ರ, ಆಕಾರ, ಅಲಂಕರಣೆಯಲ್ಲಿ ಸ್ವಲ್ಪ ವ್ಯತ್ಯಾಸವನ್ನು ಬಿಟ್ಟರೇ ಎಲ್ಲಾ ನಂದಿ ಶಿಲ್ಪಗಳು ಒಂದೇ ಬಗೆಯಾಗಿವೆ. ಬಿಳಿ ಗ್ರಾನೈಟ್ ಶಿಲೆಗಳಲ್ಲಿ ನಂದಿಗಳನ್ನು ಕೆತ್ತಿದ್ದಾರೆ. ಆದರೆ ಶಿವಪುರದ ನಂದಿ ದೇವಾಲಯದಲ್ಲಿ ಮಾತ್ರ ಕರಿಯ ಗ್ರಾನೈಟ್ ಶಿಲೆಯಲ್ಲಿ ನಂದಿಯನ್ನು ಕಂಡರಿಸಿದ್ದಾರೆ.

ಕ್ರಸಂ.	ಗ್ರಾಮ	ತಾಲೂಕು	ಸ್ಮಾರಕ	ಮೂರ್ತಿಶಿಲ್ಪ ದೊರೆತ ಸ್ಥಳ	ಶಿಲ್ಪಗಳ ಸಂಖ್ಯೆ
೧.	ಆನೆಗೊಂದಿ	ಗಂಗಾವತಿ	ನಂದಿ ಶಿಲ್ಪ	ಹುಚ್ಚಪ್ಪಯ್ಯ ಮಠ ಮಧ್ಯದಲ್ಲಿ	೬
೨.	ಆನೆಗೊಂದಿ	ಗಂಗಾವತಿ	ನಂದಿ ಶಿಲ್ಪ	ರಂಗನಾಥ ದೇವಾಲಯದ ಹತ್ತಿರ	೩
೩.	ಎಮ್ಮಿಗುಡ್ಡ	ಗಂಗಾವತಿ	ನಂದಿ ಶಿಲ್ಪ	ಈಶ್ವರ ದೇವಾಲಯ ಮುಂದೆ	೧
೪.	ಹಿರೇಜಂತಗಲ್ಲು	ಗಂಗಾವತಿ	ನಂದಿ ಶಿಲ್ಪ	ಪ್ರಸನ್ನ ವಿರುಪಾಕ್ಷ ದೇವಾಲಯ ಮುಂದೆ	೧
೫.	ಹಿರೇಜಂತಗಲ್ಲು	ಗಂಗಾವತಿ	ನಂದಿ ಶಿಲ್ಪ	ಆಂಜನೇಯ ದೇವಾಲಯ ಪಕ್ಕದಲ್ಲಿ	೧
೬.	ಹುಲಿಹೈದರ	ಗಂಗಾವತಿ	ನಂದಿ ಶಿಲ್ಪ	ಆಂಜನೇಯ ದೇವಾಲಯ ಮುಂದೆ	೧
೭.	ಕನಕಗಿರಿ	ಗಂಗಾವತಿ	ನಂದಿ ಶಿಲ್ಪ	ಪೇಟೆ ಬಸವಣ್ಣ ದೇವಾಲಯ ಮಂಟಪ	೧
೮.	ಕನಕಗಿರಿ	ಗಂಗಾವತಿ	ನಂದಿ ಶಿಲ್ಪ	ಎದುರು ಬಸವಣ್ಣ ಮಂಟಪ	೧
೯.	ಅಯೋಧ್ಯೆ	ಕೊಪ್ಪಳ	ನಂದಿ ಶಿಲ್ಪ	ವೀರಭದ್ರ ದೇವಾಲಯ ಮುಂದೆ	೨
೧೦.	ಶಿವಪುರ	ಕೊಪ್ಪಳ	ನಂದಿ ಶಿಲ್ಪ	ಶಿವದೇವಾಲಯದ ಮುಂದೆ	೧
೧೧.	ಶಿವಪುರ	ಕೊಪ್ಪಳ	ನಂದಿ ಶಿಲ್ಪ	ನಂದಿ ದೇವಾಲಯ ಮಧ್ಯದಲ್ಲಿ	೧
೧೨.	ಬಂಡಿರ್ಲಾಪುರ	ಕೊಪ್ಪಳ	ನಂದಿ ಶಿಲ್ಪ	ಆಂಜನೇಯ ದೇವಾಲಯ ಮುಂದೆ	೧
				ಒಟ್ಟು =	೨೦

ವೃಷಭಾರೂಢಮೂರ್ತಿ

ಶಿವನಿಗೆ ನೆಚ್ಚಿನ ವಾಹನ ನಂದಿ. ನಂದಿ ಮೇಲೆ ಕುಳಿತುಕೊಳ್ಳುವುದು ಶಿವನಿಗೆ ಆನಂದದ ವಿಷಯವಾಗಿದೆ. ನಂದಿಯ ಮೇಲೆ ಕುಳಿತುಕೊಂಡ ಶಿಲ್ಪವನ್ನು ವೃಷಭಾರೂಢ ಶಿವ ಎಂದು ಕರೆಯುತ್ತಾರೆ. ಅದರಿಂದ ಶಿವಾಲಯಗಳಲ್ಲಿ ನಂದಿಯ ಮೂರ್ತಿಗಳು ಇದ್ದೇ ಇರುತ್ತವೆ. ಈ ವೃಷಭಾರೂಢ ಶಿವನ ಮೂರ್ತಿಯು ಭಾರತೀಯ ಪರಂಪರೆಯಲ್ಲಿ ತುಂಬಾ ಮಹತ್ವದ ಸ್ಥಾನವನ್ನು ಹೊಂದಿದೆ.

ಕೆರೆಹಳ್ಳಿಯಲ್ಲಿ ನಂದಿವಾಹನ ಶಿವ-ಪಾರ್ವತಿ ಶಿಲ್ಪವಿದೆ. ವೃಷಭಾರೂಢ ಶಿವ ಪಾರ್ವತಿ ಶಿಲ್ಪವು ಬಳಿಕಣ ಶಿಲೆಯಲ್ಲಿ ಕಂಡರಿಸಲಾಗಿದ್ದು. ಶಿಲ್ಪದ ಮೇಲ್ಭಾಗದಲ್ಲಿ ಸೂರ್ಯ ಚಂದ್ರ ಇದ್ದಾರೆ. ಸುಮಾರು ೨ ಅಡಿ ಎತ್ತರ ೩ ಅಡಿ ಅಗಲ ಇದೆ. ಶಿಲ್ಪದಲ್ಲಿ ಶಿವನು ತನ್ನ ವಾಹನವಾದ ವೃಷಭನನ್ನು ಪತ್ನಿ ಸಮೇತ ಏರಿಕುಳಿತ್ತಿದ್ದಾನೆ. ವೃಷಭವು ಚಲನೆಯ ಭಂಗಿಯಲ್ಲಿದೆ. ಶಿವ ಪಾರ್ವತಿಯರ ಬಲಗೈ ಕಟಕ ಮುದ್ರೆಯಲ್ಲಿ ಇವೆ. ಶಿವನ ತಲೆಯಲ್ಲಿ ಜಟಮುಕುಟವಿದೆ. ಶಿವನ ಎಡಗೈಯಲ್ಲಿ ವೃಷಭದ ಮುಗುದಾರ ಹಿಡಿದಂತೆ ತೋರುತ್ತದೆ

ಹಿರೇಜಂತಗಲ್ಲನ ಪ್ರಸನ್ನ ವಿರುಪಾಕ್ಷ ದೇವಾಲಯದ ಮುಖಮಂಟಪದ ಕಂಬವೊಂದರಲ್ಲಿ ವೃಷಭರೂಢ ಶಿಲ್ಪವಿದೆ. ಈ ಶಿಲ್ಪದಲ್ಲಿ ಶಿವನು ಬಲಗೈಯನ್ನು ಮೇಲೆ ಎತ್ತಿದ್ದು ಯಾವ ವಸ್ತು ಹಿಡಿದ್ದಾನೆಂಬುದು ಸ್ಪಷ್ಟವಾಗುತ್ತಿಲ್ಲ. ದೇವಿಯ ಬಲಗೈ ಆಲಿಂಗನ ಭಂಗಿಯಲ್ಲಿರುವುದರಿಂದ

ಕಾಣುವುದಿಲ್ಲ. ಎಡಗೈಯಲ್ಲಿ ಬಹುಶಃ ಪುಷ್ಪವನ್ನು ಹಿಡಿದಿರಬೇಕು. ಶಿವನು ಕಿರೀಟ ಮುಕುಟ ವಸ್ತು ಧರಿಸಿರುವರು.

ಇದೇ ದೇವಾಲಯದ ಮುಂಭಾಗದಲ್ಲಿರುವ ಮಂಟಪದಲ್ಲಿ ವೃಷಭರೂಢ ಶಿಲ್ಪವಿದೆ. ಇಲ್ಲಿ ಶಿವ ಪಾರ್ವತಿಯರು ವೃಷಭದ ಮೇಲೇರಿ ಕುಳಿತಿರುವರು. ಅಲಂಕೃತ ವೃಷಭವು, ಮುಂದೆ ಸಾಗುತ್ತಿರುವಂತೆ ತೋರಿಸಲಾಗಿದೆ. ಶಿವನು ದ್ವಿಭುಜವನಾಗಿದ್ದು ಬಲಗೈಯನ್ನು ಮುಂದೆ ಚಾಚಿದ್ದು, ಎಡಗೈಯಿಂದ ದೇವಿಯ ಕಟಿ ಭಾಗವನ್ನು ಸ್ಪರ್ಶಿಸಿದ್ದು ದ್ವಿಭುಜಳಾದ ದೇವಿಯ ಬಲಗೈ ಆಲಿಂಗನ ಭಂಗಿಯಲ್ಲಿರುವುದರಿಂದ ಕಾಣುವುದಿಲ್ಲ. ಎಡಗೈಯಲ್ಲಿ ಏನಿದೆಂಬುದು ಸ್ಪಷ್ಟವಾಗುತ್ತಿಲ್ಲ. ಅದು ಭಗ್ನಗೊಂಡಿದೆ. ಶಿವನು ಕಿರೀಟ ಮುಕುಟ, ದೇವಿಯು ಕರಂಡ ಮುಕುಟ ಧರಿಸಿರುವರು.

ಕ್ರಸಂ.	ಗ್ರಾಮ	ತಾಲೂಕು	ಸ್ಮಾರಕ	ಮೂರ್ತಿಶಿಲ್ಪ ದೊರೆತ ಸ್ಥಳ
೧.	ಕೆರೆಹಳ್ಳಿ	ಕೊಪ್ಪಳ	ವೃಷಭಾರೂಢ	ಬಿಡಿ ಶಿಲ್ಪ ಕೆರೆಯ ಹತ್ತಿರ
೨.	ಕೃಷ್ಣಪುರ	ಕೊಪ್ಪಳ	ವೃಷಭಾರೂಢ	ಬಸವೇಶ್ವರ ದೇವಾಲಯ ಗರ್ಭಗೃಹ
೩.	ಹಿರೇಜಂತಗಲ್ಲ	ಗಂಗಾವತಿ	ವೃಷಭಾರೂಢ	ಪ್ರಸನ್ನ ವಿರುಪಾಕ್ಷ ದೇವಾಲಯ ಮುಖಮಂಟಪದ ಕಂಬ
೪.	ಹಿರೇಜಂತಗಲ್ಲ	ಗಂಗಾವತಿ	ವೃಷಭಾರೂಢ	ಪ್ರಸನ್ನ ವಿರುಪಾಕ್ಷ ದೇವಾಲಯದ ಹತ್ತಿರದ ಮಂಟಪದ ಕಂಬ

ವೀರಭದ್ರನ ಶಿಲ್ಪ

ಶೈವಕಾರಣಾಗಮದಲ್ಲಿ ವೀರಭದ್ರ ಮೂರ್ತಿಯು ನಾಲ್ಕು ತೋಳುಗಳು, ಮೂರು ಕಣ್ಣುಗಳು ಜಟಾಮುಕುಟವನ್ನು ಧರಿಸಿದ್ದು ಬಲ ಹಸ್ತದಲ್ಲಿ ಖಡ್ಗ, ಬಾಣ, ಎಡಹಸ್ತದಲ್ಲಿ ಬಿಲ್ಲು, ಗುರಾಣಿಯನ್ನು ಹಿಡಿದಿದ್ದು ಕೋರೆದಾಡಿಗಳಿಂದ ಕೂಡಿದ ಭಯಂಕರ ಮುಖವನ್ನು ಹೊಂದಿರುತ್ತಾನೆ. ರುಂಡಮಾಲೆ, ಪಾದುಕೆಗಳನ್ನು ತೊಟ್ಟಿದ್ದು ಎಡಭಾಗದಲ್ಲಿ ದಕ್ಷಬ್ರಹ್ಮನಿರಬೇಕು. ಅವನದು ಟಗರಿನ ಮುಖ, ಎರಡು ಕಣ್ಣುಗಳು, ತಲೆಯ ಮೇಲೆ ಎರಡು ಕೊಂಬಿದ್ದು ಅಂಜಲಿಬದ್ಧವಾಗಿ ನಮಸ್ಕರಿಸುತ್ತಿರಬೇಕು. ಇದು ವೀರಭದ್ರ ಶಿಲ್ಪಕ್ಕಿರುವ ಸಾಮಾನ್ಯವಾದ ನಿಯಮವಾಗಿದೆ.[೧೧]

ವೀರಭದ್ರ ಶಿಲ್ಪಗಳು ಕೊಪ್ಪಳ ಪರಿಸರದಲ್ಲಿ ಸಾಮಾನ್ಯವಾಗಿ ಎಲ್ಲೆಡೆಯೂ ಕಂಡು ಬರುತ್ತವೆ. ದೇವಾಲಯಗಳ ಗರ್ಭಗೃಹದಲ್ಲಿಯೂ, ದೇವಾಲಯದ ಕಂಬಗಳಲ್ಲಿಯೂ ವೀರಭದ್ರ ಶಿಲ್ಪಗಳು ಕಂಡು ಬರುತ್ತವೆ. ವಿಜಯನಗರ ಕಾಲಕ್ಕೆ ಸಂಬಂಧಿಸಿದ ಶಿಲ್ಪಗಳಲ್ಲಿ ಕಂಡು ಬರುವ ವೀರಭದ್ರನು ಸಾಮಾನ್ಯವಾಗಿ ತ್ರಿಭಂಗಿ ಅಥವಾ ಸಮಭಂಗಿ ಸ್ಥಾನಿಕನಾಗಿದ್ದು, ಚತುರ್ಬಾಹುಗಳನ್ನು ಹೊಂದಿರುವನು. ಅವು ಬಲಭಾಗದ ಕೈಗಳಲ್ಲಿ ಮುಂದಿನದು ಖಡ್ಗ, ಹಿಂದಿನದು ಬಾಣವನ್ನು ಮತ್ತು ಎಡಭಾಗದ ಕೈಗಳಲ್ಲಿ ಮುಂದಿನದು ಖೇಟಕವನ್ನು ಮತ್ತು ಹಿಂದಿನದು ಬಿಲ್ಲು (ಧನಸ್ಸನ್ನು) ಹಿಡಿದಿರುತ್ತದೆ. ಕೀರಿಟ ಮುಕುಟ, ತ್ರಿನೇತ್ರ, ಕರ್ಣಕುಂಡಲಗಳು, ಯಜ್ಞೋಪವೀತ, ಕೊರಳ ಹಾರಗಳು, ಭುಜವಳಯ,

ಬಾಹುವಳಯ, ಕಂಕಣಗಳು ಬೆರಳುಗಳಲ್ಲಿ ಉಂಗುರುಗಳು, ಕಾಲ್ಕಡಗಗಳು, ನೂಪುರ ಮುಂತಾದ ಆಭರಣಗಳು ಇರುತ್ತವೆ. ತೊಡೆಯ ಭಾಗದವರೆಗಿನ ವಸ್ತ್ರವನ್ನು ಧರಿಸಿದ್ದು, ರುಂಡಮಾಲೆಯನ್ನು ಧರಿಸಿರುವನು. ವೀರಭದ್ರ ಮೂರ್ತಿಯ ಸುತ್ತಲೂ ಕೀರ್ತಿಮುಖ ಅಲಂಕೃತ ಪ್ರಭಾವಳಿಯು ಇರುತ್ತದೆ.

ವೀರಭದ್ರ ಮೂರ್ತಿಯ ಬಲಭಾಗದಲ್ಲಿ ದಕ್ಷನ ಶಿಲ್ಪ ಇರುತ್ತದೆ. ಇವನು ಟಗರಿನ ತಲೆಯನ್ನು ಹೊಂದಿದ್ದು, ಸಾಮಾನ್ಯ ವಸ್ತ್ರಭರಣಧರಿತನಾಗಿ ಸಮಭಂಗಿಯಲ್ಲಿ ಅಂಜಲಿ ಮುದ್ರೆಯಲ್ಲಿ ಸ್ಥಾನಿಕನಾಗಿರುತ್ತಾನೆ. ಇಂತಹ ವಿಶೇಷವಾಗಿ ಅಂಜಲಿಮುದ್ರೆಯಲ್ಲಿ ಪದ್ಮಾಸನದಲ್ಲಿ ಕುಳಿತಿರುವಂತೆಯೂ ಕೆತ್ತಲ್ಪಟ್ಟಿರುವನು. ಇಂತಹ ಶಿಲ್ಪವು ಆನೆಗೊಂದಿಯ ಪಂಪಾಸರೋವರದಲ್ಲಿನ ಭುವನೇಶ್ವರಿ ದೇವಾಲಯಲ್ಲಿನ ವೀರಭದ್ರ ಮೂರ್ತಿ ಶಿಲ್ಪದಲ್ಲಿ ದಕ್ಷನು ಪದ್ಮಾಸನದಲ್ಲಿ ಕುಳಿತಭಂಗಿಯಲ್ಲಿ ಕಂಡು ಬರುವನು.[೨]

ಆನೆಗೊಂದಿಯ ದುರ್ಗಾ ದೇವಾಲಯದ ಪೂರ್ವಕ್ಕಿರುವ ಈಶ್ವರ ದೇವಾಲಯದಲ್ಲಿಯೂ ಕಂಡು ಬರುತ್ತದೆ. ವೀರಭದ್ರನು ಸಮಭಂಗಿಯಲ್ಲಿ ಸ್ಥಾನಿಕನಾಗಿದ್ದು ಬಲಭಾಗದ ಕೈಗಳಲ್ಲಿ ಖಡ್ಗ, ಬಾಣ, ಎಡಗೈಯಲ್ಲಿ ಖೇಟಕ ಮತ್ತು ಧನಸ್ಸನ್ನು ಹಿಡಿದಿರುವನು. ಖೇಟವನ್ನು ಎತ್ತಿ ಹಿಡಿದಿರುವನು. ಆದರೆ ಈ ಶಿಲ್ಪದಲ್ಲಿ ಖೇಟದ ಗಾ ತ್ರವನ್ನು ಅತಿ ಚಿಕ್ಕದಾಗಿ ಕೆತ್ತಲಾಗಿದೆ. ಈ ಶಿಲ್ಪದಲ್ಲಿ ವೀರಭದ್ರನು ಎತ್ತರದ ಪಾದುಕೆಯನ್ನು ಧರಿಸಿರುವನು. ವೀರಭದ್ರನು ಕಿರೀಟ ಮುಕುಟವನ್ನು ಧರಿಸಿದ್ದು, ಅದರಲ್ಲಿ ಸಣ್ಣ ಪೀಠಸ್ಥ ಶಿವಲಿಂಗವನ್ನು ತೋರಿಸಿದ್ದಾರೆ.

ಚಿಕ್ಕರಾಂಪೂರ ಹಾಗೂ ರಾಂಪೂರ ಗ್ರಾಮಗಳನ್ನು ಸಂಪರ್ಕಿಸುವ ರಸ್ತೆಯ ಚಿಕ್ಕರಾಂಪೂರ ಕ್ರಾಸ್‌ದಿಂದ ೪ ಕಿ.ಮೀ. ಅಂತರದಲ್ಲಿ ರಸ್ತೆಯ ಬಲಬದಿಯಲ್ಲಿ ಒಂದು ವೀರಭದ್ರ ದೇವಾಲಯವಿದೆ. ಈ ದೇವಾಲಯದ ಗರ್ಭಗೃಹದಲ್ಲಿ ವೀರಭದ್ರನ ಶಿಲ್ಪವಿದ್ದು, ಕಣಶಿಲೆಯಲ್ಲಿ ಕೆತ್ತಲಾಗಿದೆ. ವೀರಭದ್ರನು ತ್ರಿಭಂಗಿಯಲ್ಲಿದ್ದು, ಚತುರ್ಭುಜಗಳನ್ನು ಹೊಂದಿರುವನು. ಅವು ಬಲಭಾಗದ ಮುಂದಿನ ಕೈಗಳಲ್ಲಿ ಖಡ್ಗ, ಹಿಂದಿನ ಕೈಗಳಲ್ಲಿ ಬಾಣವನ್ನು ಮತ್ತು ಎಡದ ಹಿಂದಿನ ಕೈಗಳಲ್ಲಿ ಬಾಣ ಹಾಗೂ ಬಿಲ್ಲು, ಮುಂದಿನ ಕೈಗಳಲ್ಲಿ ಖಡ್ಗ ಹಾಗೂ ಖೇಟಕ್‌ಗಳಿವೆ. ತಲೆಯ ಮೇಲೆ ಕಿರೀಟ ಮುಕುಟ, ಕೊರಳಲ್ಲಿ ಮಣಿಸರ, ಬುಜಹಾರ, ತೋಳ್ಬಂದಿ, ಕೈಕಡಗ, ಕಟಿಬಂಧ, ಕಾಲಲ್ಲಿ ಸರ ಮುಂತಾದ ಆಭರಣಗಳಿವೆ. ಬಲಗಾಲ ಬದಿಯಲ್ಲಿ ಚಿಕ್ಕ ದಕ್ಷ(ಆಡಿನ ತಲೆ ಮನುಷ್ಯ ದೇಹ)ನ ಅಂಜಲಿಬದ್ಧ ಶಿಲ್ಪವಿದೆ.

ಅಯೋಧ್ಯ ಗ್ರಾಮದಲ್ಲಿ ಶಿಥಿಲಗೊಂಡ ವೀರಭದ್ರ ದೇವಾಲಯ ಗರ್ಭಗೃಹದಲ್ಲಿ ವೀರಭದ್ರನ ಮೂರ್ತಿ ಇದೆ. ವೀರಭದ್ರನು ದ್ವಿಭಂಗಿಯಲ್ಲಿ ನಿಂತಿದ್ದು, ಚತುರ್ಭುಜಗಳನ್ನು ಹೊಂದಿರುವನು. ಮೇಲಿನ ಎರಡು ಕೈಗಳಲ್ಲಿ ಕ್ರಮವಾಗಿ ಬಾಣ ಮತ್ತು ಬಿಲ್ಲುಗಳನ್ನು ಹಿಡಿದಿದ್ದು, ಕೆಳಗಿನ ಕೈಗಳಲ್ಲಿ ಕ್ರಮವಾಗಿ ಖಡ್ಗ ಮತ್ತು ಖೇಟಕವನ್ನು ಹಿಡಿದಿರುವನು. ಕಿವಿಯಲ್ಲಿ ವೃತ್ತ ಕುಂಡಲಗಳು, ಕೊರಳಹಾರ, ತೋಳಬಂದಿ, ಮುಂಗೈ ಕಡಗ, ಕಾಲ ಕಡಗ ಮುಂತಾದ ವಸ್ತ್ರಾಭರಣಗಳನ್ನು ಧರಿಸಿರುವನು.

ವೀರಭದ್ರನ ಕಾಲುಗಳಲ್ಲಿ ಪಾದುಕೆಗಳಿರುತ್ತವೆ. ವೀರಭದ್ರನ ಬಲಭಾಗದಲ್ಲಿ ಕುರಿ ತಲೆಯ ದಕ್ಷನು ಅಂಜಲಿ ಬದ್ಧನಾಗಿ ನಿಂತಿದ್ದಾನೆ. ವೀರಭದ್ರ ಮೂರ್ತಿಗೆ ಎದುರು ಮುಖಮಂಟಪದಲ್ಲಿ ನಂದಿಯನ್ನು ನಿಲ್ಲಿಸಿದ್ದಾರೆ.

ಆನೆಗೊಂದಿಯ ವೀರಭದ್ರ ದೇವಾಲಯದ ಗರ್ಭಗೃಹದಲ್ಲಿರುವ ವೀರಭದ್ರನ ಶಿಲ್ಪವಿದೆ. ವೀರಭದ್ರನ ಶಿಲ್ಪವು ತ್ರಿಭಂಗಿಯಲ್ಲಿ ನಿಂತಿದ್ದು, ಚತುರ್ಭುಜಗಳನ್ನು ಹೊಂದಿರುವನು. ಮೇಲಿನ ಎರಡು ಕೈಗಳಲ್ಲಿ ಕ್ರಮವಾಗಿ ಬಾಣ ಮತ್ತು ಬಿಲ್ಲುಗಳನ್ನು (ಧನಸ್ಸವನ್ನು) ಹಿಡಿದಿದ್ದು, ಕೆಳಗಿನ ಕೈಗಳಲ್ಲಿ ಕ್ರಮವಾಗಿ ಖಡ್ಗ ಮತ್ತು ಖೇಟಕವನ್ನು ಹಿಡಿದಿರುವನು. ವೀರಭದ್ರನು ಕಿರೀಟ ಮುಕುಟವನ್ನು ಹೊಂದಿದ್ದು ಅದರಲ್ಲಿ ಶಿವಲಿಂಗವನ್ನು ತೋರಿಸಿದ್ದಾರೆ. ಕೊರಳಲ್ಲಿ ಮಣಿಸರ, ಭುಜವಳಯ, ಬಾಹುವಳಯ, ಕಟಿಬಂಧ, ಉದರಬಂಧ, ಛನ್ನವೀರಹಾರ, ಕಾಲಲ್ಲಿ ಸರ ಮುಂತಾದ ಆಭರಣಗಳಿವೆ. ವೀರಭದ್ರನ ಮೂರ್ತಿಯ ಬಲಭಾಗದಲ್ಲಿ ದಕ್ಷನು ಟಗರಿನ ತಲೆಯನ್ನು ಹೊಂದಿದ್ದು, ದಕ್ಷನು ವಸ್ತ್ರಭರಣಧರಿತನಾಗಿ ಸಮಭಂಗಿಯಲ್ಲಿ ಅಂಜಲಿ ಮುದ್ರೆಯಲ್ಲಿ ಸ್ಥಾನಿಕನಾಗಿರುತ್ತಾನೆ.

ಆನೆಗೊಂದಿಯ ಈಶ್ವರ ದೇವಾಲಯದ ಗರ್ಭಗೃಹದಲ್ಲಿ ವೀರಭದ್ರನ ಶಿಲ್ಪ ಇದೆ. ವೀರಭದ್ರನು ಸಮಭಂಗಿಯಲ್ಲಿ ನಿಂತಿದ್ದು, ಚತುರ್ಭುಜಗಳನ್ನು ಹೊಂದಿರುವನು. ಮೇಲಿನ ಎರಡು ಕೈಗಳಲ್ಲಿ ಕ್ರಮವಾಗಿ ಬಾಣ ಮತ್ತು ಬಿಲ್ಲುಗಳನ್ನು ಹಿಡಿದಿದ್ದು, ಕೆಳಗಿನ ಕೈಗಳಲ್ಲಿ ಕ್ರಮವಾಗಿ ಖಡ್ಗ ಮತ್ತು ಖೇಟಕವನ್ನು ಹಿಡಿದಿರುವನು. ವೀರಭದ್ರನು ಕಿರೀಟ ಮುಕುಟವನ್ನು ಹೊಂದಿದು ಅದರಲ್ಲಿ ಶಿವಲಿಂಗವನ್ನು ತೋರಿಸಿದ್ದಾರೆ.

ಹಿರೇಜಂತಗಲ್ಲಿನ ಪ್ರಸನ್ನ ವಿರುಪಾಕ್ಷ ದೇವಾಲಯದ ಸಭಾಮಂಟಪದಲ್ಲಿರುವ ಪರಿವಾರ ದೇವತಾ ಶಿಲ್ಪಗಳಲ್ಲಿಯ ವೀರಭದ್ರ ಶಿಲ್ಪವು ಚತುರ್ಭುಜಗಳನ್ನು ಹೊಂದಿದೆ. ಮೇಲಿನ ಎರಡು ಕೈಗಳಲ್ಲಿ ಕ್ರಮವಾಗಿ ಬಾಣ ಮತ್ತು ಧನಸ್ಸವನ್ನು ಹಿಡಿದಿದ್ದು, ಹಿಡಿದಿದ್ದು, ಕೆಳಗಿನ ಕೈಗಳಲ್ಲಿ ಕ್ರಮವಾಗಿ ಖಡ್ಗ ಮತ್ತು ಖೇಟಕವನ್ನು ಹಿಡಿದಿರುವನು. ತ್ರಿನೇತ್ರ, ಕಿವಿಯಲ್ಲಿ ಪತ್ರಕುಂಡಲಗಳಿವೆ. ಕೊರಗಳಲ್ಲಿ ಮಣಿಸರಗಳು, ಭುಜಹಾರ, ತೊಳ್ಬಂದಿ ಮತ್ತು ಯಜ್ಞೋಪವೀತ, ಕಟಿಬಂಧ, ಕೈಕಾಲುಗಳಲ್ಲಿ ಕಡಗಗಳಿವೆ. ಕಿರೀಟ ಮುಕುಟವನ್ನು ಹೊಂದಿದು ಅದರಲ್ಲಿ ಶಿವಲಿಂಗವನ್ನು ತೋರಿಸಿದ್ದಾರೆ. ವೀರಭದ್ರನ ಬಲಭಾಗದಲ್ಲಿ ಅಂಜಲಿ ಬದ್ಧನಾಗಿರುವ ದಕ್ಷನ ಶಿಲ್ಪವಿದೆ.

ಹಿರೇಜಂತಗಲ್ಲಿನ ಬೆಟ್ಟದ ವೀರಭದ್ರ ದೇವಾಲಯದ ಗರ್ಭಗೃಹದಲ್ಲಿ ನೈಸರ್ಗಿಕ ಹುಟ್ಟು ಬಂಡೆಯಲ್ಲಿ ವೀರಭದ್ರನ ಶಿಲ್ಪವಿದೆ. ಇದೇ ದೇವಾಲಯ ಗವಿಯಲ್ಲಿ ವೀರಭದ್ರ ಮತ್ತು ಭದ್ರಕಾಳಿಯ ಶಿಲ್ಪಗಳು ಅಪರೂಪದವು. ವೀರಭದ್ರನ ಶಿಲ್ಪವು ಸೊಂಟದಿಂದ ಕೆಳಭಾಗದಲ್ಲಿ ಪರಸ್ಪರ ಅಭಿಮುಖವಾಗಿರುವ ಎರಡು ಹಂಸಗಳ ಮುಂಡಗಳನ್ನು ಹೊಂದಿದೆ. ಈ ಎರಡು ಮುಂಡಗಳಿಗೆ ಎರಡು ಕಾಲುಗಳಿವೆ. ಎರಡು ಪುಕ್ಕಗಳಿವೆ. ಈ ಎರಡು ಹಂಸಗಳ ಕತ್ತುಗಳ ಮಧ್ಯಭಾಗದಿಂದ ಹೊರಬಂದಂತೆ ಮೇಲೆ ಮನುಷ್ಯರೂಪಿ ವೀರಭದ್ರನ ಶಿಲ್ಪವಿದೆ. ವೀರಭದ್ರನು ದಶಭುಜಗಳನ್ನು ಹೊಂದಿದ್ದು, ಬಲ ಕೈಗಳಲ್ಲಿ ಕ್ರಮವಾಗಿ ಖಡ್ಗ, ಬಾಣ, ಪರಶು, ತ್ರಿಶೂಲ, ಚೂರಿಗಳನ್ನು, ಎಡಕೈಗಳಲ್ಲಿ

ಗೋಲಕ, ಡಮರುಗ, ಪಾಶು, ಬಿಲ್ಲು ಮತ್ತು ಖೇಟಕಗಳನ್ನು ಹೊಂದಿದ್ದಾನೆ. ತಲೆಯ ಮೇಲೆ ಕಿರೀಟ ಮುಕುಟವಿದೆ. ಬದಿಯಲ್ಲಿ ಅಂಜಲಿಬದ್ಧನಾಗಿ ನಿಂತಿರುವ ದಕ್ಷನ ಶಿಲ್ಪವಿದೆ. ಇದೊಂದು ಅಪರೂಪದ ಶಿಲ್ಪವಾಗಿದೆ.

ಹಿರೇಜಂತಗಲ್ಲಿನ ಪ್ರಸನ್ನ ವಿರುಪಾಕ್ಷ ದೇವಾಲಯದ ಸಭಾಮಂಟಪದ ಕಂಬವೊಂದರಲ್ಲಿ ವೀರಭದ್ರ ಶಿಲ್ಪವಿದೆ. ಚತುರ್ಭುಜಗಳನ್ನು ಹೊಂದಿದು ಕ್ರಮವಾಗಿ ಬಲಗೈಯಲ್ಲಿ ಮುಂದಿನ ಕೈಯಲ್ಲಿ ಖಡ್ಗ ಮತ್ತು ಹಿಂದಿನ ಕೈಯಲ್ಲಿ ಬಾಣವನ್ನು ಹಾಗೂ ಎಡಗೈಯಲ್ಲಿ ಮುಂದಿನ ಕೈಯಲ್ಲಿ ಖೇಟಕವನ್ನು ಮತ್ತು ಹಿಂದಿನ ಕೈಯಲ್ಲಿ ಧನಸ್ಸುವನ್ನು ಹಿಡಿದುಕೊಂಡಿರುವನು. ಕಿವಿಯಲ್ಲಿ ಪತ್ರಕುಂಡಲಗಳಿವೆ. ಕೊರಳಲ್ಲಿ ಮಣಿಸರಗಳು, ಭುಜಹಾರ, ತೋಳ್ಬಂದಿ ಮತ್ತು ಯಜ್ಞೋಪವೀತ, ಕಟಿಬಂಧ, ಕೈಕಾಲುಗಳಲ್ಲಿ ಕಡಗಗಳಿವೆ. ಕಿರೀಟ ಮುಕುಟವನ್ನು ಹೊಂದಿರುವನು. ವೀರಭದ್ರನ ಬಲಬದಿಯಲ್ಲಿ ಅಂಜಲಿಬದ್ಧನಾಗಿ ನಿಂತಿರುವ ದಕ್ಷನ ಶಿಲ್ಪವಿದೆ. ಮೇಲ್ಭಾಗದಲ್ಲಿ ಪ್ರಭಾವಳಿಯನ್ನು ತೋರಿಸಿದ್ದಾರೆ. ಕೊಪ್ಪಳ ಜಿಲ್ಲೆಯ ವಿಜಯನಗರ ಕಾಲದ ಶಿಲ್ಪಗಳಲ್ಲಿ ವೀರಭದ್ರನನ್ನು ಕಂಬದಲ್ಲಿ ತೋರಿಸಿರುವ ಏಕೈಕ ಶಿಲ್ಪ ಇದಾಗಿದೆ.

ಕ್ರಸಂ.	ಗ್ರಾಮ	ತಾಲೂಕು	ಸ್ಮಾರಕ	ಮೂರ್ತಿಶಿಲ್ಪ ದೊರೆತ ಸ್ಥಳ
೧.	ಆನೆಗೊಂದಿ	ಗಂಗಾವತಿ	ವೀರಭದ್ರ ಶಿಲ್ಪ	ವೀರಭದ್ರ ದೇವಾಲಯ ಗರ್ಭಗೃಹ
೨.	ಆನೆಗೊಂದಿ	ಗಂಗಾವತಿ	ವೀರಭದ್ರ ಶಿಲ್ಪ	ಈಶ್ವರ ದೇವಾಲಯ ಗರ್ಭಗೃಹ
೩.	ಆನೆಗೊಂದಿ	ಗಂಗಾವತಿ	ವೀರಭದ್ರ ಶಿಲ್ಪ	ಈಶ್ವರ ದೇವಾಲಯ ಗರ್ಭಗೃಹ
೪.	ಆನೆಗೊಂದಿ	ಗಂಗಾವತಿ	ವೀರಭದ್ರ ಶಿಲ್ಪ	ವಿಜಯಲಕ್ಷ್ಮಿ ಶೈವ ದೇವಾಲಯದ ಗರ್ಭಗೃಹದ ದ್ವಾರಕ್ಕೆ ನಿಲ್ಲಿಸಲಾಗಿದೆ.
೫.	ಸಾಣಾಪುರ	ಗಂಗಾವತಿ	ವೀರಭದ್ರ ಶಿಲ್ಪ	ಆಂಜನೇಯ ದೇವಾಲಯದ ಆವರಣದಲ್ಲಿ
೬.	ಅಯೋಧ್ಯ	ಕೊಪ್ಪಳ	ವೀರಭದ್ರ ಶಿಲ್ಪ	ವೀರಭದ್ರ ದೇವಾಲಯದ ಗರ್ಭಗೃಹ
೭.	ಚಿಕ್ಕರಾಂಪುರ ರಾಂಪುರ	ಗಂಗಾವತಿ	ವೀರಭದ್ರ ಶಿಲ್ಪ	ವೀರಭದ್ರ ದೇವಾಲಯದ ಗರ್ಭಗೃಹ
೮.	ಆನೆಗೊಂದಿ – ಪಂಪಾಸರೋವರ	ಗಂಗಾವತಿ	ವೀರಭದ್ರ ಶಿಲ್ಪ	ಭುವನೇಶ್ವರಿ ದೇವಾಲಯ ಮುಂಭಾಗ
೯.	ಕನಕಗಿರಿ	ಗಂಗಾವತಿ	ವೀರಭದ್ರ ಶಿಲ್ಪ	ವೀರಭದ್ರದೇವಾಲಯ ಗರ್ಭಗೃಹ
೧೦.	ಹಿರೇಜಂತಗಲ್ಲು	ಗಂಗಾವತಿ	ವೀರಭದ್ರ ಶಿಲ್ಪ	ಪ್ರಸನ್ನ ವಿರುಪಾಕ್ಷ ನವರಂಗದ ದೇವಕೋಷ್ಠಕದಲ್ಲಿ
೧೧.	ಮುಂಡರಗಿ(ಹ್ಯಾಟಿ)	ಕೊಪ್ಪಳ	ವೀರಭದ್ರ ಶಿಲ್ಪ	ಈಶ್ವರ/ಬಂಡಿ ಬಸವಣ್ಣ ಸಭಾಮಂಟಪದ ಪಕ್ಕದಲ್ಲಿ
೧೨.	ಚಳಗೇರಾ	ಕುಷ್ಟಗಿ	ವೀರಭದ್ರ ಶಿಲ್ಪ	ವೀರಭದ್ರೇಶ್ವರ ದೇವಾಲಯದ ಗರ್ಭಗೃಹ

೧೩.	ಹಿರೇಜಂತಗಲ್ಲು	ಗಂಗಾವತಿ	ವೀರಭದ್ರ ಶಿಲ್ಪ	ಬೆಟ್ಟದ ವೀರಭದ್ರ ದೇವಾಲಯದ ಗರ್ಭಗೃಹ
೧೪.	ಹಿರೇಜಂತಗಲ್ಲು	ಗಂಗಾವತಿ	ವೀರಭದ್ರ ಶಿಲ್ಪ	ಬೆಟ್ಟದ ವೀರಭದ್ರ ದೇವಾಲಯದ ಗವಿ
೧೫.	ಹಿರೇಜಂತಗಲ್ಲ	ಗಂಗಾವತಿ	ವೀರಭದ್ರ ಶಿಲ್ಪ	ಪ್ರಸನ್ನ ವಿರುಪಾಕ್ಷ ದೇವಾಲಯದ ನವರಂಗದ ದೇವಕೋಷ್ಠಕ
೧೬.	ಹಿರೇಜಂತಗಲ್ಲ	ಗಂಗಾವತಿ	ವೀರಭದ್ರ ಶಿಲ್ಪ	ಪ್ರಸನ್ನ ವಿರುಪಾಕ್ಷ ದೇವಾಲಯದ ನವರಂಗದಲ್ಲಿ
೧೭.	ಅಮರೇಶ್ವರ	ಕೊಪ್ಪಳ	ವೀರಭದ್ರ ಶಿಲ್ಪ	ಅಮರೇಶ್ವರ ದೇವಾಲಯದ ಹತ್ತಿರ ಹೊಲದಲ್ಲಿ
೧೮.	ನವಲಿ	ಗಂಗಾವತಿ	ವೀರಭದ್ರ ಶಿಲ್ಪ	ವೀರಭದ್ರ ದೇವಾಲಯದ ಗರ್ಭಗೃಹ
೧೯.	ಕೊಪ್ಪಳ	ಕೊಪ್ಪಳ	ವೀರಭದ್ರ ಶಿಲ್ಪ	ಹಳೆ ಒಡಕಪ್ಪ ದೇವಾಲಯದ ಗರ್ಭಗೃಹ
೨೦.	ಆನೆಗೊಂದಿ	ಗಂಗಾವತಿ	ವೀರಭದ್ರ ಶಿಲ್ಪ	ಗವಿರಂಗನಾಥ ದೇವಾಲಯದ ಕಂಬದಲ್ಲಿ

ಭೈರವನ ಶಿಲ್ಪ

ಭೈರವ ಶಿಲ್ಪಗಳು ಶಿವನ ರುದ್ರರೂಪಕ್ಕೆ ಹೆಸರಾದವು. ಶಿವನ ಪೂರ್ಣ ರೂಪವೇ ಭೈರವನೆಂದು ಶಿವಪುರಾಣಗಳು ಹೇಳುತ್ತವೆ. ವಿಶ್ವದ ರಕ್ಷಣೆ ಮಾಡುವುದರಿಂದ ಶಿವನಿಗೆ ಭೈರವನೆನ್ನುವರು.[೧೩] ಪ್ರೇತ, ಪಿಶಾಚಿಗಳ ಉಚ್ಚಾಟನೆಗೆಂದು ಭೈರವನ ಪೂಜೆ ಪ್ರಸಿದ್ಧವಾಗಿದೆ. ಕೈಯಲ್ಲಿ ಕಪಾಲವನ್ನು ಹಿಡಿದು, ದಂಡಪಾಣಿಯಾಗಿ, ಹಾವನ್ನು ಯಜ್ಞೋಪವೀತವಾಗಿ ಧರಿಸಿ ಯಾಗವನ್ನು ನಾಶಪಡಿಸುವ ಭೈರವನನ್ನು ಕ್ಷೇತ್ರಪಾಲನೆಂದು ಕರೆಯುತ್ತಾರೆ. ಶಾರದಾತಿಲತಂತ್ರದಲ್ಲಿ ಭೈರವನ ಸಾತ್ವಿಕ ರಾಜಸಿಕ ಮತ್ತು ತಮಸಿಕ ರೂಪಗಳ ಪರಿಚಯವನ್ನು ಮಾಡಲಾಗಿದೆ. ಈತ ದ್ವಿಭುಜ, ಹಸನ್ಮುಖಿ. ನಗ್ನವಾಗಿದ್ದು ನಾಯಿಯೊಂದಿಗೆ ಇರುತ್ತಾನೆ. ರಾಜಸಿಕ ಭೈರವನು ನಾಲ್ಕು ಕೈಗಳನ್ನು ತಾಮಸಿಕ ಭೈರವನು ಎಂಟು ಕೈಗಳನ್ನು ಹೊಂದಿದ್ದು, ರುಂಡಮಾಲೆಯನ್ನು ಧರಿಸಿರುತ್ತಾನೆ. ಭೈರವಶಿಲ್ಪಗಳಲ್ಲಿ ಅನೇಕ ಪ್ರಕಾರಗಳಿವೆ. ಅವು ಉಗ್ರಭೈರವ, ತ್ರಿಪುರಾಂತ ಭೈರವ, ಬಾಡವಾನಲಭೈರವ, ಅಗ್ನಿಭೈರವ, ಕಾಲಭೈರವ ಮುಂತಾದವುಗಳು.[೧೪] ಪ್ರಸ್ತುತ ಕೊಪ್ಪಳ ಜಿಲ್ಲೆಯ ವಿಜಯನಗರ ಕಾಲದ ಭೈರವ ಶಿಲ್ಪಗಳು ಈ ಕೆಳಗಿನಂತಿವೆ.

ಪಂಪಸರೋವರದಲ್ಲಿರುವ ಭೈರವನ ಶಿಲ್ಪವು ಚತುರ್ಭುಜಗಳನ್ನು ಹೊಂದಿದ್ದು ಬಲಭಾಗದ ಕೈಗಳಲ್ಲಿ ಖಡ್ಗ ಮತ್ತು ಡಮರುಗ ಹಾಗೂ ಎಡಭಾಗದ ಕೈಗಳಲ್ಲಿ ತ್ರಿಶೂಲ, ಕಪಾಲಗಳಿವೆ. ಕಪಾಲ

ಹಿಡಿದ ಹಸ್ತಕ್ಕೆ ಮನುಷ್ಯನ ರುಂಡ ಭಾಗವೊಂದು ನೇತಾಡುತ್ತಿದೆ. ಭೈರವನು ದ್ವಿಭಂಗಿಯಲ್ಲಿ ನಿಂತಿದ್ದು, ನಗ್ನ ದೇಹಿಯಾಗಿರುವನು. ಕರ್ಣಕುಂಡಲಗಳು, ಕೊರಳಹಾರಗಳು ಕೈ ಮತ್ತು ಕಾಲು ಕಡಗಗಳನ್ನು ಧರಿಸಿರುವನು. ಎಡಗೈಯಲ್ಲಿ ಹಿಡಿದ ರುಂಡವನ್ನು ನಾಯಿಯೊಂದು ಕಚ್ಚಿರುತ್ತದೆ. ಬಲಪಾದದ ಬಳಿ ಸರ್ಪವನ್ನು ಕೆತ್ತಲಾಗಿದೆ.

ಪಂಪಾಸರೋವರದ ಕಂಬವೊಂದರಲ್ಲಿ ಭೈರವನ ಶಿಲ್ಪವಿದೆ. ಭೈರವನು ಚತುರ್ಭುಜಗಳನ್ನು ಹೊಂದಿದ್ದು, ಬಲಭಾಗದ ಕೈಗಳಲ್ಲಿ ಖಡ್ಗ, ಡಮರು ಹಾಗೂ ಎಡಭಾಗದ ಕೈಗಳಲ್ಲಿ ಕಪಾಲ, ತ್ರಿಶೂಲವನ್ನು ಹಿಡಿದಿರುವನು. ಭೈರವನು ನಗ್ನ ದೇಹಿಯಾಗಿರುವನು. ಭೈರವನ ಬಲಭಾಗದಲ್ಲಿ ಸರ್ಪವನ್ನು ತೋರಿಸಿದ್ದಾರೆ. ಭೈರವನನ್ನು ಚಲಿಸುವ ಭಂಗಿಯಲ್ಲಿ ತೋರಿಸಿದ್ದಾರೆ.

ಭೈರವನ ಮೂರ್ತಿಯು ಕೆಲವೊಮ್ಮೆ ನೃತ್ಯಭಂಗಿಯಲ್ಲಿಯೂ ಕೆತ್ತಲ್ಪಟ್ಟಿದೆ. ಇಂತಹ ಶಿಲ್ಪವು ರಂಗನಾಥ ದೇವಾಲಯದ ಪ್ರಾಕಾರ ಗೋಡೆಯ ಮಂಟಪದಲ್ಲಿನ ೧೬ನೇ ಕಂಬದಲ್ಲಿ ಕಂಡು ಬರುತ್ತದೆ. ರಂಗನಾಥ ದೇವಾಲಯ ಮಂಟಪದಲ್ಲಿ ಭೈರವನು ನೃತ್ಯಭಂಗಿಯಲ್ಲಿರುವನು ಚತುರ್ಭುಜಗಳನ್ನು ಹೊಂದಿರುವ ಈತನು ಬಲಭಾಗದ ಕೈಗಳಲ್ಲಿ ಖಡ್ಗ, ತ್ರಿಶೂಲಗಳಿದ್ದು, ಎಡಭಾಗದ ಕೈಗಳಲ್ಲಿ ಡಮರುಗ, ರುಂಡವನ್ನು ಹಿಡಿದಿದ್ದು ಅದನ್ನು ಕೆಳಗೆ ನಿಂತ ನಾಯಿಯು ಕತ್ತನ್ನು ಮೇಲೆತ್ತಿ ನೋಡುತ್ತಿರುವಂತೆ ಕೆತ್ತಲಾಗಿದೆ. ಭೈರವನು ತ್ರಿಭಂಗಿಯಲ್ಲಿ ನಿಂತಿದ್ದು, ನಗ್ನ ದೇಹಿಯಾಗಿರುವನು. ಜಟಾಭಾರ ಅಥವಾ ಕೇಶಗಳನ್ನು ಜ್ವಾಲೆಯ ರೂಪದಲ್ಲಿ ಕೆತ್ತಲಾಗಿದೆ. ಕರ್ಣಕುಂಡಲಗಳು, ಕೊರಳಹಾರಗಳು, ವಕ್ಷಬಂಧ, ಯಜ್ಞೋಪವೀತ ಅಲಂಕೃತ ಕಟಿಸೂತ್ರ ಅಥವಾ ಉದರಬಂಧ, ಉದ್ದನೆಯ ರುಂಡಮಾಲೆಯನ್ನು ಧರಿಸಿರುವನು. ಬಲಗಾಲ ಪಕ್ಕದಲ್ಲಿ ಸರ್ಪವನ್ನು ಕೆತ್ತಲಾಗಿದೆ. ಪಾದಗಳಲ್ಲಿ ಪಾದರಕ್ಷೆಯನ್ನು ತೋರಿಸಿರುವುದು ವಿಶೇಷವಾಗಿದೆ.

ಹಿರೇಜಂತಗಲ್ಲಿನ ಬೆಟ್ಟದ ವೀರಭದ್ರ ದೇವಾಲಯದ ನೈಸರ್ಗಿಕ ಹುಟ್ಟು ಬಂಡೆಯಲ್ಲಿ ಭೈರವನ ಶಿಲ್ಪವಿದೆ. ಭೈರವನು ಚತುರ್ಭುಜಗಳನ್ನು ಹೊಂದಿದ್ದು ತ್ರಿಭಂಗಿಯಲ್ಲಿ ನಿಂತಿದ್ದಾನೆ. ಚತುರ್ಭುಜಗಳಿದ್ದು ತ್ರಿಶೂಲ, ಡಮರುಗ, ಖಡ್ಗ ಮತ್ತು ರುಂಡಗಳು ನಾಲ್ಕು ಕೈಗಳಲ್ಲಿವೆ. ಭೈರವನ ತಲೆಯ ಮೇಲಿನ ಕೇಶಗಳನ್ನು ಸಾಲಾಗಿ ಎಲೆಗಳನ್ನು ಸಿಕ್ಕಿಸಿಕೊಂಡಂತೆ ಅಲಂಕರಿಸಿ ತೋರಿಸಿರುವುದು ವಿಶೇಷವಾಗಿದೆ. ಸಾಮಾನ್ಯವಾಗಿ ಭೈರವನ ಪಕ್ಕದಲ್ಲಿ ನಾಯಿಯನ್ನೂ ತೋರಿಸಲಾಗಿರುತ್ತದೆ. ಆದರೆ ಇಲ್ಲಿ ಭೈರವನ ಹಿಂದೆ ನಿಂತ ನಾಯಿಯನ್ನು ದೊಡ್ಡ ಪ್ರಮಾಣದಲ್ಲಿ ತೋರಿಸಿರುವುದು ಕೂಡ ಅಪರೂಪದ್ದಾಗಿದೆ. ಅದು ನಿಂತಿರುವಂತೆಯೇ ಭೈರವನ ಕೈಯಲ್ಲಿರುವ ರುಂಡಕ್ಕೆ ಬಾಯಿಯಿಂದ ಕಚ್ಚಿದೆ.

ಹಿರೇಜಂತಗಲ್ಲನ ಪ್ರಸನ್ನ ವಿರುಪಾಕ್ಷ ದೇವಾಲಯದ ಸಭಾಮಂಟಪದಲ್ಲಿ ಭೈರವನ ಶಿಲ್ಪ ಇದೆ. ಈ ಶಿಲ್ಪ ಚತುರ್ಭುಜಗಳನ್ನು ಹೊಂದಿದ್ದು ಬಲಭಾಗದ ಕೈಗಳಲ್ಲಿ ಖಡ್ಗ ಮತ್ತು ಡಮರುಗ ಹಾಗೂ ಎಡಭಾಗದ ಕೈಗಳಲ್ಲಿ ಕಪಾಲ, ತ್ರಿಶೂಲವನ್ನು ಹಿಡಿದಿರುವನು. ಕಪಾಲ ಹಿಡಿದ ಹಸ್ತಕ್ಕೆ

ಮನುಷ್ಯನ ರುಂಡಭಾಗವೊಂದು ನೇತಾಡುತ್ತಿರುತ್ತದೆ. ಭೈರವನು ದ್ವಿಭಂಗಿಯಲ್ಲಿ ನಿಂತಿದ್ದು, ನಗ್ನ ದೇಹಿಯಾಗಿರುವನು. ಜಟಾಭಾರ ಅಥವಾ ಕೇಶಗಳನ್ನು ಜ್ವಾಲೆಯ ರೂಪದಲ್ಲಿ ಕೆತ್ತಲಾಗಿದೆ. ತ್ರಿನೇತ್ರ, ಕರ್ಣಕುಂಡಲಗಳು, ಕೊರಳಹಾರಗಳು, ಯಜ್ಞೋಪವೀತ, ಅಲಂಕೃತ ಕಟಿಸೂತ್ರ ಅಥವಾ ಉದರಬಂಧ, ಉದ್ದನೆಯ ರುಂಡಮಾಲೆಯನ್ನು ಧರಿಸಿರುವನು. ಎಡಗೈಯಲ್ಲಿ ಹಿಡಿದ ರುಂಡವನ್ನು ನಾಯಿಯೊಂದು ಕಚ್ಚಿರುತ್ತದೆ. ಬಲಪಾದದ ಬಳಿ ಸರ್ಪವನ್ನು ಕೆತ್ತಲಾಗಿದೆ.

ಅಗಳಕೇರಾದ ವೀರಭದ್ರೇಶ್ವರ ದೇವಾಲಯದ ಗರ್ಭಗೃಹದಲ್ಲಿ ಕಾಳಭೈರವನ ಮೂರ್ತಿ ಇದೆ. ಇದನ್ನು ಗ್ರಾನೈಟ್ ಶಿಲೆಯಲ್ಲಿ ಕೆತ್ತಲಾಗಿದೆ. ಈ ಕಾಳಭೈರವನು ಚತುರ್ಭುಜಗಳನ್ನು ಹೊಂದಿದ್ದು, ಹಿಂದಿನ ಕೈಗಳಲ್ಲಿ ಡಮರುಗ, ತ್ರಿಶೂಲ ಮುಂದಿನ ಕೈಗಳಲ್ಲಿ ಕತ್ತಿ ಹಾಗೂ ಕಪಾಲ ಮತ್ತು ರುಂಡವನ್ನು ಹಿಡಿದಿದ್ದಾನೆ ಹಾಗೂ ರುಂಡಕ್ಕೆ ನಾಯಿಯು ಬಾಯಿ ಹಾಕಿರುವಂತೆ ಕೆತ್ತಲಾಗಿದೆ. ಕಾಳಭೈರವನ ಕೊರಳಲ್ಲಿ ಹಾರ, ರುಂಡಮಾಲೆಗಳಿವೆ. ಕಾಳಭೈರವನ ಮುಖದಲ್ಲಿ ಭೀಬತ್ಸ ಭಾವವನ್ನು ತೋರಲು ಬಾಯಲ್ಲಿ ಕೋರೆ ಹಲ್ಲುಗಳನ್ನು ತೋರಿಸಲಾಗಿದೆ. ವಿಶೇಷವಾಗಿ ಕಾಳಭೈರವನ ಪಾದಗಳಲ್ಲಿ ಅಂದುಗೆ, ಗೆಜ್ಜೆಗಳಲ್ಲದೇ ಎತ್ತರದ ಪಾದುಕೆಗಳನ್ನು ತೋರಿಸಿದ್ದಾರೆ. ಬಲಗಾಲ ಬದಿಯಲ್ಲಿ ಭಕ್ತ(ದಕ್ಷ)ನ ಶಿಲ್ಪವಿದೆ. ಇದರ ಕೆಳಗೆ ಚೇಳು ಇದೆ. ಸ್ಥಳೀಯರು ಇದನ್ನು ವೀರಭದ್ರೇಶ್ವರನೆಂದು ಕರೆಯುತ್ತಾರೆ.

ಆನೆಗೊಂದಿಯಿಂದ ಹನುಮನಹಳ್ಳಿ ರಸ್ತೆಯ ಬಲ ಭಾಗದ ಬೆಟ್ಟದ ಬಂಡೆಯಲ್ಲಿ ಕಾಳಭೈರವನ ಶಿಲ್ಪ ಇದೆ. ಈ ಕಾಳಭೈರವನು ಚತುರ್ಭುಜಗಳನ್ನು ಹೊಂದಿದ್ದು, ಹಿಂದಿನ ಕೈಗಳಲ್ಲಿ ಡಮರುಗ, ತ್ರಿಶೂಲ ಮುಂದಿನ ಕೈಗಳಲ್ಲಿ ಕತ್ತಿ ಹಾಗೂ ಕಪಾಲ ಮತ್ತು ರುಂಡವನ್ನು ಹಿಡಿದಿರವಂತೆ, ರುಂಡಕ್ಕೆ ನಾಯಿಯು ಬಾಯಿ ಹಾಕಿರುವಂತೆ ಕೆತ್ತಲಾಗಿದೆ. ಕಾಳಭೈರವನ ಕೊರಳಲ್ಲಿ ಹಾರ, ರುಂಡಮಾಲೆಗಳಿವೆ. ಕಾಳಭೈರವನ ಮುಖದಲ್ಲಿ ಭೀಬತ್ಸ ಭಾವವನ್ನು ತೋರಲು ಬಾಯಲ್ಲಿ ಕೋರೆಹಲ್ಲುಗಳನ್ನು ತೋರಿಸಲಾಗಿದೆ. ವಿಶೇಷವಾಗಿ ಕಾಳಭೈರವನ ಪಾದಗಳಲ್ಲಿ ಅಂದುಗೆ, ಗೆಜ್ಜೆಗಳಲ್ಲದೇ ಎತ್ತರದ ಪಾದುಕೆಗಳನ್ನು ತೋರಿಸಿದ್ದಾರೆ. ಇದರ ಕೆಳಗೆ ಚೇಳು ಇದೆ.

ಕ್ರಸಂ.	ಗ್ರಾಮ	ತಾಲೂಕು	ಸ್ಮಾರಕ	ಮೂರ್ತಿಶಿಲ್ಪ ದೊರೆತ ಸ್ಥಳ
೧.	ಆನೆಗೊಂದಿ	ಗಂಗಾವತಿ	ಭೈರವ ಶಿಲ್ಪ	ಹನುಮಂತ ದೇವಾಲಯದ ಹತ್ತಿರ ಗದ್ದೆಯಲ್ಲಿ
೨.	ಆನೆಗೊಂದಿ	ಗಂಗಾವತಿ	ಭೈರವ ಶಿಲ್ಪ	ಗವಿರಂಗನಾಥ ದೇವಾಲಯದ ಎದುರಿನ ಬೆಟ್ಟದ ನೈಸರ್ಗಿಕ ಬಂಡೆ
೩.	ಅಗಳಕೇರಿ	ಕೊಪ್ಪಳ	ಭೈರವ ಶಿಲ್ಪ	ವೀರಭದ್ರ ದೇವಾಲಯದ ಗರ್ಭಗೃಹ
೪.	ಆನೆಗೊಂದಿ	ಗಂಗಾವತಿ	ಭೈರವ ಶಿಲ್ಪ	ಶೈವ ದೇವಾಲಯ
೫.	ಆನೆಗೊಂದಿ	ಗಂಗಾವತಿ	ಭೈರವ ಶಿಲ್ಪ	ಈಶ್ವರ ದೇವಾಲಯದ ನೈಸರ್ಗಿಕ ಬಂಡೆ (ಆನೆ, ಒಂಟೆ ಸಾಲು)
೬.	ಆನೆಗೊಂದಿ	ಗಂಗಾವತಿ	ಭೈರವ ಶಿಲ್ಪ	ಈಶ್ವರ ದೇವಾಲಯದ ನೈಸರ್ಗಿಕ ಬಂಡೆ
೭.	ಹಿರೇಜಂತಗಲ್ಲು	ಗಂಗಾವತಿ	ಭೈರವ ಶಿಲ್ಪ	ಪ್ರಸನ್ನ ವಿರುಪಾಕ್ಷ ದೇವಾಲಯದ ನವರಂಗ
೮.	ಹಿರೇಜಂತಗಲ್ಲು	ಗಂಗಾವತಿ	ಭೈರವ ಶಿಲ್ಪ	ಬೆಟ್ಟದ ವೀರಭದ್ರ ದೇವಾಲಯದ ಗವಿ

೯.	ಹಿರೇಜಂತಗಲ್ಲು	ಗಂಗಾವತಿ	ಭೈರವ ಶಿಲ್ಪ	ಪ್ರಸನ್ನ ವಿರುಪಾಕ್ಷ ದೇವಾಲಯದ ನವರಂಗ	
೧೦.	ಆನೆಗೊಂದಿ	ಗಂಗಾವತಿ	ಭೈರವ ಶಿಲ್ಪ	ಗವಿರಂಗನಾಥ ದೇವಾಲಯದ ಕಂಬದಲ್ಲಿ	

ದಕ್ಷಿಣಾ ಮೂರ್ತಿ ಶಿಲ್ಪ

ದಕ್ಷಿಣಾಮೂರ್ತಿಯ ಬಲಗೈಯಲ್ಲಿ ವಿಶೇಷವಾಗಿ ಕಾಣುವುದು ಚಿನ್ಮುದ್ರೆ, ಇದನ್ನು ಜ್ಞಾನಮುದ್ರೆ ಅಥವಾ ವ್ಯಾಖ್ಯಾನ ಮುದ್ರೆ ಎಂದೂ ಕರೆಯುತ್ತಾರೆ. ಅದ್ವೈತವನ್ನು ಬೋಧಿಸುವ ಈ ಹಸ್ತವಿನ್ಯಾಸದಲ್ಲಿ ತೋರುಬೆರಳೂ ಹೆಬ್ಬೆರಳೂ ತುದಿಗಳಲ್ಲಿ ಕೂಡಿರುತ್ತವೆ. ಉಳಿದ ಬೆರಳುಗಳು ನೀಳವಾಗಿ ನಿಂತಿರುತ್ತವೆ. ಇಲ್ಲವೆ ಕಟಕಾಕಾರದಲ್ಲಿ ಬಾಗಿಕೊಂಡಿರುತ್ತವೆ. ದಕ್ಷಿಣಾಮೂರ್ತಿಯು ಸನಕಸನಂದನಾದಿ ಶಿಷ್ಯರಿಗೆ ಪಾಠಹೇಳುತ್ತ ಯೋಗಪಟ್ಟದಲ್ಲಿರುವ ಹಿನ್ನೆಲೆಯಲ್ಲಿ ವ್ಯಾಖ್ಯಾನಮುದ್ರೆ, ಹೆಬ್ಬೆರಳು ಪರಬ್ರಹ್ಮನೆಂದೂ ತೋರುಬೆರಳು ಜೀವಾತ್ಮನೆಂದೂ ಇವೆರಡರ ಸಂಯೋಗವನ್ನು ಸೂಚಿಸುವ ಮುದ್ರೆಯಿದೆಂದೂ ವಿವರಣೆಯಿದೆ. ಈ ಮುದ್ರೆಯಲ್ಲಿಯೇ ಅಕ್ಷರಮಾಲೆಯನ್ನೂ ಸೇರಿಸುವ ವಾಡಿಕೆಯುಂಟು.[೧೫] ದಕ್ಷಿಣಾ ಮೂರ್ತಿಯ ಶಿಲ್ಪ ಶಿವದೇವಾಲಯಗಳ ದಕ್ಷಿಣ ದಿಕ್ಕಿನ ಗೂಡಿನಲ್ಲಿದ್ದು ಈ ಮೂರ್ತಿಯಗಳಲ್ಲು ಯೋಗ ಮೂರ್ತಿ, ವೀಣಾಧರ ಮೂರ್ತಿ, ಜ್ಞಾನಮೂರ್ತಿ, ವ್ಯಾಖ್ಯಾನ ಮೂರ್ತಿ ಇತ್ಯಾದಿ ಪ್ರಬೇಧಗಳಿವೆ. ಹಿರೇಜಂತಗಲ್ಲಿನ ಪ್ರಸನ್ನ ವಿರುಪಾಕ್ಷ ದೇವಾಲಯದ ನವರಂಗದಲ್ಲಿರುವ ದೇವಕೋಷ್ಠದಲ್ಲಿ ದಕ್ಷಿಣಾಮೂರ್ತಿ ಶಿಲ್ಪವಿದ್ದು ಕಪ್ಪು ಗ್ರಾನೈಟ ಶಿಲೆಯಲ್ಲಿ ಕಂಡರಿಸಲಾಗಿದೆ. ಈ ಶಿಲ್ಪವು ಪೀಠದ ಮೇಲೆ ಆಸೀನವಾಗಿದ್ದು ಚತುರ್ಭುಜಗಳನ್ನು ಹೊಂದಿದ್ದು, ಹಿಂದಿನ ಕೈಗಳಲ್ಲಿ ಸರ್ಪ ಮತ್ತು ಅಗ್ನಿಗಳನ್ನು ಹಿಡಿದಿರುವುದು ಹಾಗೂ ಮುಂದಿನ ಕೈಗಳಲ್ಲಿ ಅಭಯ ಮತ್ತು ವ್ಯಾಖ್ಯಾನ ಮುದ್ರೆಯಲ್ಲಿದೆ. ಬಲಪಾದವನ್ನು ಕೆಳಚಾಚಿ, ಎಡಪಾದವನ್ನು ಬಲಪಾದದ ತೊಡೆಯ ಮೇಲೆ ಇರಿಸಿರುವುದು. ಬಲಪಾದದ ಕೆಳಗೆ ಅಪಸ್ಮಾರನ ಮೇಲೆ ಸಂಪೂರ್ಣವಾಗಿ ಕಾಲುವನ್ನು ಸ್ಪರ್ಶಿಸಿದಂತೆ ಕೆತ್ತಲಾಗಿದೆ. ಕೊರಳಹಾರ, ಯಜ್ಞೋಪವೀತ, ಭುಜವಳಯ, ಕಂಕಣಗಳು, ಕೊರಳಲ್ಲಿ ರುದ್ರಾಕ್ಷಿ ಮಾಲೆ, ಕಟಿಬಂಧ, ಜಟಾಮುಕುಟ ಆಕರ್ಷಕವಾಗಿದೆ. ಇನ್ನೂ ಮುಂತಾದ ಆಭರಣಗಳನ್ನು ಧರಿಸಿದ್ದಾನೆ.

ಕ್ರಸಂ.	ಗ್ರಾಮ	ತಾಲೂಕು	ಸ್ಮಾರಕ	ಮೂರ್ತಿಶಿಲ್ಪ ದೊರೆತ ಸ್ಥಳ
೧.	ಹಿರೇಜಂತಗಲ್ಲು	ಗಂಗಾವತಿ	ದಕ್ಷಿಣಾಮೂರ್ತಿ ಶಿಲ್ಪ	ಪ್ರಸನ್ನ ವಿರುಪಾಕ್ಷ ದೇವಾಲಯದ ನವರಂಗ

ಗಣೇಶನ ಶಿಲ್ಪ

ಪುರಾಣಗಳಿರುವಂತೆ ಶಿವನ ಮಡದಿಯಾದ ಪಾರ್ವತಿಯು ಅಂಗರಾಗದಿಂದ ಬೊಂಬೆಯೊಂದನ್ನು ಮಾಡಿದ್ದು ಅದು ಆನೆಯಂತೆ ರೂಪ ಹೊಂದಿದರಿಂದ ಗಂಗೆಯಲ್ಲಿ ಬಿಟ್ಟಳೆಂದೂ ಗಂಗೆಯು ತನ್ನ ಮಗನಂತೆ ಬಾವಿಸಿ, ಜೀವಕಳೆ ನೀಡಿ ವಿನಾಯಕನೆಂದು ಹೆಸರಿಟ್ಟು ಗಣಾಧಿಪತ್ಯ ನೀಡಿದಳೆಂದು ಮುಂದೆ ದಕ್ಷ ಯಜ್ಞದ ಕಾಲದಲ್ಲಿ ವೀರಭದ್ರನು ವಿನಾಯಕನ ತಲೆ ಕಡಿದನೆಂದು

ಆದರೆ ಋಷಿಗಳು ತಮ್ಮ ಕಾರ್ಯ ನಿರ್ವಿಘ್ನವಾಗಿ ನೆರವೇರಲು ವಿನಾಯಕನನ್ನು ಬದುಕಿಸಬೇಕೆಂದು ಶಿವನಲ್ಲಿ ಪ್ರಾರ್ಥಿಸಿದರೆಂದೂ ಶಿವನು ಆನೆಯೊಂದರ ತಲೆಯನ್ನು ವಿನಾಯಕನಿಗೆ ಹೊಂದಿಸಿದನೆಂದೂ ಕಥೆಯಿದೆ.[೧೬] ಯಜ್ಞಾವಲ್ಕ ಸ್ಮೃತಿಯ ಗಣಪತಿ ಕಲ್ಪದಲ್ಲಿ ವಿನಾಯಕನನ್ನು ಕರ್ಮಗಳಿಗೆ ವಿಘ್ನವನ್ನುಂಟು ಮಾಡುವನೆಂದು, ಪೂಜನಾದಿ ಯೋಗಗಳಿಂದ ಸಂತುಷ್ಟನಾದರೆ ವಿಘ್ನವನ್ನು ನಾಶಮಾಡುವವನೆಂದು ಹೇಳಿದೆ.[೧೭]

ಹಿರೇಜಂತಗಲ್ಲಿನ ಪ್ರಸನ್ನ ವಿರುಪಾಕ್ಷ ದೇವಾಲಯದ ಪರಿವಾರ ದೇವತಾ ಶಿಲ್ಪಗಳಲ್ಲಿ ಗಣೇಶನ ಶಿಲ್ಪವಿದೆ. ಗಣೇಶನು ಸುಖಾಸೀನನಾಗಿ ಕೈಗಳಲ್ಲಿ ಅಂಕುಶ, ಪಾಶ (ಹಿಂದೆ) ಭಗ್ನದಂತ ಮತ್ತು ಜಂಬೂ ಫಲ (ಮುಂದೆ)ಗಳನ್ನು ಹಿಡಿದಿದ್ದಾನೆ. ಹಾಗಾಗಿ ಈತ ಸುಖಾಸೀನ ವರದ ಗಣಪತಿ ಸೊಂಡಿಲು ಎಡಭಾಗಕ್ಕೆ ಹೊರಳಿದ್ದು, ಜಂಬೂ ಫಲವನ್ನು ಸ್ಪರ್ಶಿಸಿದೆ. ಗಣೇಶನ ತಲೆಯ ಮೇಲೆ ಕರಂಡ ಮುಕುಟವಿದೆ. ಕೊರಳಲ್ಲಿ ಪದಕಹಾರ, ಮೈಮೇಲೆ ಯಜ್ಞೋಪವೀತ, ಕೈಗಳಲ್ಲಿ ಕಡಗ, ಕಾಲಲ್ಲಿ ಸರಗಳಿಂದ ಅಲಂಕೃತನಾಗಿದ್ದಾನೆ. ಹೊಟ್ಟೆಗೆ ನಾಗೋಧರ ಬಂಧ (ಸುತ್ತಿದ ಹಾವು)ವಿದೆ. ಇದೇ ಗ್ರಾಮದ ವಿರಭದ್ರ ದೇವಾಲಯದ ಗವಿಗಣೇಶ ಮತ್ತು ಭದ್ರ ಕಾಳಿಯ ಶಿಲ್ಪವಿದೆ.

ಆನೆಗೊಂದಿಯ ಗಣೇಶನ ದೇವಾಲಯದ ಗರ್ಭಗೃಹದಲ್ಲಿ ಗಣೇಶನ ಶಿಲ್ಪವಿದೆ. ಸುಖಾಸನದಲ್ಲಿರುವ ಗಣೇಶ ಚತುರ್ಭುಜನಾಗಿದ್ದಾನೆ. ಕೈಗಳಲ್ಲಿ ಅಂಕುಶ, ಪಾಶ, ದಂತ ಹಾಗೂ ಮೋದಕಗಳಿವೆ. ಕರಂಡ ಮುಕುಟಧಾರಿಯಾದ ಇತನ ಸೊಂಡಿಲ ತುದಿಯಲ್ಲಿ ಕೂಡ ಮೋದಕವಿದೆ. ಚಿಕ್ಕರಾಂಪೂರ ಹಾಗೂ ರಾಂಪೂರ ಗ್ರಾಮಗಳ ಮಧ್ಯೆ ವೀರಭದ್ರೇಶ್ವರ ದೇವಾಲಯ ಇದೆ. ಈ ದೇವಾಲಯದ ಬದಿಯಲ್ಲಿ ಎರಡು ಅಡಿ ಎತ್ತರದ ಗಣೇಶನ ಶಿಲ್ಪವಿದೆ. ಗಣೇಶನು ಸುಖಾಸೀನವಾಗಿದ್ದು, ಚತುರ್ಭುಜಗಳನ್ನು ಹೊಂದಿದ್ದಾನೆ. ಹಿಂದಿನ ಕೈಗಳಲ್ಲಿ ಪಾಶ, ಅಂಕುಶಗಳು ಮುಂದಿನ ಕೈಗಳಲ್ಲಿ ಮೊದಕ ಹಾಗೂ ಭಗ್ನ ದಂತಗಳಿವೆ. ತಲೆಯ ಮೇಲೆ ಕಿರೀಟ ಮುಕುಟ, ಕಿವಿಯಲ್ಲಿ ಪತ್ರಕುಂಡಲ, ಕೊರಳಲ್ಲಿ ಮಣಿಸರ, ಯಜ್ಞೋಪವೀತ, ಮುಂಗೈಗಳಲ್ಲಿ ಕಡಗಗಳಿವೆ. ನಾಗೋದರಬಂಧ(ಹೊಟ್ಟೆಗೆ ಹಾವನ್ನು ಸುತ್ತಲಾಗಿದೆ)ವೂ ಇದೆ.

ಕುಷ್ಟಗಿಯ ಊರಿನ ಪೂರ್ವಭಾಗದಲ್ಲಿ ಮಲ್ಲಿಕಾರ್ಜುನ ದೇವಾಲಯದ ಗರ್ಭಗೃಹದಲ್ಲಿ ಗಣೇಶನ ಶಿಲ್ಪವಿದೆ. ಶಿಲ್ಪವು ಕಪ್ಪು ಗ್ರಾನೈಟ್ ಶಿಲೆಯಲ್ಲಿ ಕಂಡರಿಸಲಾಗಿದೆ. ಈ ಶಿಲ್ಪವನ್ನು ಮಲ್ಲಿಕಾರ್ಜುನ ಎಂದು ಸ್ಥಳೀಯರು ಕರೆಯುತ್ತಾರೆ. ಗಣೇಶನು ಕ್ರಮವಾಗಿ ಬಲಗೈಗಳಲ್ಲಿ ಕೊಡಲಿ, ಭಗ್ನದಂತ, ಎಡಗೈಗಳಲ್ಲಿ ಕಮಲ, ಮೋದಕ ಪಾತ್ರೆಯನ್ನು ಹಿಡಿದುಕೊಂಡಿರುವನು. ಗಣೇಶನು ಕಿರೀಟಧಾರಿಯಾಗಿದ್ದು, ಧೋತಿಯನ್ನು ತೋಡಿಸಿರುವನು. ಈ ಶಿಲ್ಪವು ಕ್ರಿ.ಶ. ೧೪ನೆಯ ಶತಮಾನಕ್ಕೆ ಸಂಬಂಧಿಸಿದೆ.

ಕೊಪ್ಪಳದ ಶಂಭುಲಿಂಗ ದೇವಾಲಯದ ಹಿಂಬದಿಯ ಬೆಟ್ಟದಲ್ಲಿಯ ನೈಸರ್ಗಿಕ ಬಂಡೆಯ

ಮೇಲೆ ಕೊರೆದ ಗಣಪತಿಯ ಶಿಲ್ಪವಿದೆ. ಕುಳಿತ ಭಂಗಿಯಲ್ಲಿದ್ದು, ಕ್ರಮವಾಗಿ ಬಲಗೈಯಲ್ಲಿ ದಂತ, ಪರಶು ಮೇಲಿನ ಎಡಗೈಯಲ್ಲಿ ಅಂಕುಶ ಮತ್ತು ಮೋದಕಪಾತ್ರೆ ಹಿಡಿದಿದ್ದಾನೆ. ಯಜ್ಞೋಪವೀತಧಾರಿಯಾಗಿದ್ದು, ದೊಡ್ಡ ಹೊಟ್ಟೆಯ ಮೇಲೆ ಸರ್ಪವನ್ನು ಧರಿಸಿದ್ದಾನೆ. ಮೇಲ್ಭಾಗದಲ್ಲಿ ಮುಖದ ಬದಿಗಳಲ್ಲಿ ಸೂರ್ಯ ಚಂದ್ರರನ್ನು ಚಿತ್ರಿಸಿದ್ದಾರೆ. ಈ ಶಿಲ್ಪದ ಕಾಲವು ಕ್ರಿ.ಶ. ೧೬ನೆಯ ಶತಮಾನವಾಗಿದೆ.[೧೯]

ಕ್ರಸಂ.	ಗ್ರಾಮ	ತಾಲೂಕು	ಸ್ಮಾರಕ	ಮೂರ್ತಿಶಿಲ್ಪ ದೊರೆತ ಸ್ಥಳ
೧.	ಹಿರೇಜಂತಗಲ್ಲು	ಗಂಗಾವತಿ	ಗಣೇಶ ಶಿಲ್ಪ	ಪ್ರಸನ್ನ ವಿರುಪಾಕ್ಷ ದೇವಾಲಯದ ನವರಂಗ
೨.	ಆನೆಗೊಂದಿ	ಗಂಗಾವತಿ	ಗಣೇಶ ಶಿಲ್ಪ	ಗಣೇಶನ ದೇವಾಲಯದ ಗರ್ಭಗೃಹ
೩.	ಚಿಕ್ಕರಾಂಪೂರ ರಾಂಪುರ	ಗಂಗಾವತಿ	ಗಣೇಶ ಶಿಲ್ಪ	ವೀರಭದ್ರೇಶ್ವರ ದೇವಾಲಯ ಆವರಣ
೪.	ಕೊಪ್ಪಳ	ಕೊಪ್ಪಳ	ಗಣೇಶ ಶಿಲ್ಪ	ಶಂಭುಲಿಂಗ ದೇವಾಲಯದ ಹಿಂಬದಿಯ ಬೆಟ್ಟ
೫.	ಕುಷ್ಟಗಿ	ಕುಷ್ಟಗಿ	ಗಣೇಶ ಶಿಲ್ಪ	ಮಲ್ಲಿಕಾರ್ಜುನ ದೇವಾಲಯ ಗರ್ಭಗೃಹ
೬.	ಆನೆಗೊಂದಿ	ಗಂಗಾವತಿ	ಗಣೇಶ ಶಿಲ್ಪ	ರಾಯಚೂರಿನ ನವರಂಗ ದರ್ವಾಜದಲ್ಲಿ
೭.	ಆನೆಗೊಂದಿ	ಗಂಗಾವತಿ	ಗಣೇಶ ಶಿಲ್ಪ	ರಾಯಚೂರಿನ ನವರಂಗ ದರ್ವಾಜದಲ್ಲಿ
೮.	ಆನೆಗೊಂದಿ	ಗಂಗಾವತಿ	ಗಣೇಶ ಶಿಲ್ಪ	ಆನೆಗೊಂದಿಯಿಂದ ಕಡೇಬಾಗಿಲು ಕಡೆ ಹೋಗುವ ರಸ್ತೆಯ ಬಲಬದಿಗೆ ನೈಸರ್ಗಿಕ ಬಂಡೆ ಮೇಲೆ
೯.	ಆನೆಗೊಂದಿ	ಗಂಗಾವತಿ	ಗಣೇಶ ಶಿಲ್ಪ	ಹನುಮಂತ ದೇವಾಲಯದ ಹತ್ತಿರದ ನೈಸರ್ಗಿಕ ಬಂಡೆಗೆ
೧೦.	ಆನೆಗೊಂದಿ	ಗಂಗಾವತಿ	ಬಿಡಿ ಶಿಲ್ಪ	ರಂಗನಾಥ ದೇವಾಲಯ ಆವರಣ

ಕಾರ್ತಿಕೇಯ ಶಿಲ್ಪ

ಶಿವನ ಮಗನಾದ ಸುಬ್ರಹ್ಮಣ್ಯನಿಗೆ ಭಾರತೀಯ ಪರಂಪರೆಯಲ್ಲಿ ವಿಶೇಷವಾದ ಸ್ಥಾನವಿದೆ.

ಕುಮಾರ, ಸುಬ್ರಹ್ಮಣ್ಯ, ಬಾಲಸ್ವಾಮಿ, ಶಿವಗುರು ಮೊದಲಾದ ಹೆಸರುಗಳಿಂದ ಕಾರ್ತಿಕೇಯ ಪ್ರಸಿದ್ಧನಾಗಿದ್ದಾನೆ. ನವಿಲನ್ನು ವಾಹನವಾಗಿಯು, ಕುಕ್ಕುಟವನ್ನು ಪತಾಕೆ/ಧ್ವಜವಾಗಿ ಹೊಂದಿದ್ದಾನೆ. ಕಾರ್ತಿಕೇಯನಿಗೆ ಸಂಬಂಧಿಸಿದಂತೆ ವಿಶಿಷ್ಟ ಶಿಲ್ಪಗಳಿವೆ.

ಹಿರೇಜಂತಗಲ್ಲಿನ ಪ್ರಸನ್ನ ವಿರುಪಾಕ್ಷ ದೇವಾಲಯದ ನವರಂಗದಲ್ಲಿರುವ ದೇವಕೋಷ್ಠದಲ್ಲಿ ಕಾರ್ತಿಕೇಯ ಶಿಲ್ಪವಿದೆ. ಈ ಶಿಲ್ಪವು ಸವ್ಯಲಲಿತಾಸನದಲ್ಲಿ ವಾಹನ ನವಿಲಿನ ಮೇಲೆ ಕುಳಿತಿದ್ದಾನೆ. ಕಾರ್ತಿಕೇಯು ಚತುರ್ಭುಜಗಳಿದ್ದು, ಹಿಂದಿನ ಕೈಗಳಲ್ಲಿ ತ್ರಿಶೂಲ, ವೇಲಾಯುಧಗಳಿವೆ. ಮುಂದಿನ ಕೈಗಳು ಅಭಯ ಮತ್ತು ವರದ ಮುದ್ರೆಯಲ್ಲಿವೆ. ಕಾರ್ತಿಕೇಯನ ಆರು ಮುಖಗಳಲ್ಲಿ ಮುಂದಿನ ಮೂರು ಮುಖಗಳು ಗೋಚರಿಸುತ್ತವೆ. ಮೂರುತಲೆಗಳ ಮೇಲೂ ಕಿರೀಟ ಮುಕುಟಗಳಿವೆ. ಕೊರಳಲ್ಲಿ ಪದಕಹಾರ, ಮುಣಿಸರ, ಕಟಿಬಂಧ, ಭುಜಹಾರ, ಯಜ್ಞೋಪವೀತ, ಕಾಲ್ಕಡಗಳಿಂದ ಅಲಂಕೃತನಾಗಿದ್ದಾನೆ. ವಾಹನ ನವಿಲು ತನ್ನ ಕೊಕ್ಕಿನಲ್ಲಿ ಸರ್ಪವನ್ನು ಹಿಡಿದಿದೆ. ಕಾರ್ತಿಕೇಯನ ಸುತ್ತಲೂ ಪ್ರಭಾವಳಿ ಇದ್ದು, ಲಲಾಟದಲ್ಲಿ ಕೀರ್ತಿಮುಖವಿದೆ.

ಕ್ರ.ಸಂ.	ಗ್ರಾಮ	ತಾಲೂಕು	ಸ್ಮಾರಕ	ಮೂರ್ತಿಶಿಲ್ಪ ದೊರೆತ ಸ್ಥಳ
೧.	ಹಿರೇಜಂತಗಲ್ಲು	ಗಂಗಾವತಿ	ಕಾರ್ತಿಕೇಯ ಶಿಲ್ಪ	ಪ್ರಸನ್ನ ವಿರುಪಾಕ್ಷ ದೇವಾಲಯದ ನವರಂಗ
೨.	ಹಿರೇಜಂತಗಲ್ಲು	ಗಂಗಾವತಿ	ಕಾರ್ತಿಕೇಯ ಶಿಲ	ಬೆಟ್ಟದ ವೀರಭದ್ರ ದೇವಾಲಯದ ಗವಿ

ಗಜಸಂಹಾರ ಶಿಲ್ಪ

ಶಿವನ ಭಕ್ತರನ್ನು ಹಿಂಸಿಸುತ್ತಿದ್ದ ಆನೆಯ ರೂಪದ ಅಸುರನನ್ನು ಕೊಂದು ಅದರ ಚರ್ಮವನ್ನು ಉಡುಗೆಯಾಗಿ ಧರಿಸಿದ ಶಿವನ ಈ ಲೀಲೆಯೇ ಗಜಸಂಹಾರ ಲೀಲೆ. ಈ ಅಧ್ಯಯನದ ವ್ಯಾಪ್ತಿ ಪ್ರದೇಶದಲ್ಲಿ ಒಂದು ಗಜಸಂಹಾರ ಶಿಲ್ಪ ಇದೆ. ಕನಕಗಿರಿಯ ವೆಂಕಟಪತಿ ಬಾವಿಯ ಪಶ್ಚಿಮ ಗೋಡೆ ಮೇಲೆ ಹತ್ತು ಭುಜಗಳುಳ್ಳ ಗಜಾಸುರ ಸಂಹಾರ ಶಿವನ ಶಿಲ್ಪವಿದೆ. ಆನೆಯ ರೂಪದ ಗಜಾಸುರನ ಹೊಟ್ಟೆಯನ್ನು ಸೀಳಿ ಪ್ರತ್ಯಕ್ಷಗೊಂಡ ಶಿವನು ವಿವಿಧ ಆಯುಧಗಳನ್ನು ಹಿಡಿದು ನೃತ್ಯ ಮಾಡುತ್ತಿದ್ದಾನೆ. ಕೆಳಗೆ ನಂದಿಯಿದೆ. ಶಿವನ ಬಲಕ್ಕೆ ಆನೆಯ ತಲೆ, ಮುಂಗಾಲುಗಳು, ಎಡಕ್ಕೆ ಬಾಲ, ಹಿಂಗಾಲುಗಳು ಮತ್ತು ಸುತ್ತಲೂ ದೇಹದ ಚರ್ಮವಿದೆ. ಇದರ ಪಕ್ಕದಲ್ಲಿ ಐದು ಹೆಡೆಗಳುಳ್ಳ ಒಂದು ನಾಗದ ಕುತ್ತಿಗೆಯಲ್ಲಿ ಆಭರಣ ಮತ್ತು ತಲೆಯ ಮೇಲೆ ಮಣಿ ಇವೆ.

ಕ್ರ.ಸಂ.	ಗ್ರಾಮ	ತಾಲೂಕು	ಸ್ಮಾರಕ	ಮೂರ್ತಿಶಿಲ್ಪ ದೊರೆತ ಸ್ಥಳ
೧.	ಕನಕಗಿರಿ	ಕನಕಗಿರಿ	ಗಜಸಂಹಾರ ಶಿಲ್ಪ	ಬಾವಿಯ ಪಶ್ಚಿಮ ಗೋಡೆಯ ಮೇಲೆ

ಉಮಾಮಹೇಶ್ವರ ಮೂರ್ತಿ

ಚಂದ್ರಶೇಖರನ ಮೂರ್ತಿಯು ಎಡಗೈಯಿಂದ ಉಮೆಯ ಬಿಂಬವನ್ನು ಆಲಿಂಗಿಸಿದಂತಿದ್ದರೆ,

ಅದು ಉಮಾಮಹೇಶ್ವರ ಮೂರ್ತಿ ಎನ್ನಿಸುವುದು. ವಿಷ್ಣುಧರ್ಮೋತ್ತರ ಪುರಾಣದಂತೆ, ಶಿವಪಾರ್ವತಿಯರು, ಒಂದೇ ಪೀಠದ ಮೇಲೆ ಆಲಿಂಗನಾಭಂಗಿಯಲ್ಲಿ ಮಂಡಿಸಿದ್ದರೆ, ಅದನ್ನು ಉಮಾಮಹೇಶ್ವರ ಮೂರ್ತಿ ಎನ್ನುವರು.[೧೯]

ರಾಯಚೂರಿನ ನವರಂಗ ದರ್ವಾಜದಲ್ಲಿ ಆನೆಗೊಂದಿಯ ಉಮಾಮಹೇಶ್ವರಿ ಶಿಲ್ಪವಿದೆ. ಈ ಶಿಲ್ಪದಲ್ಲಿ ಮಹೇಶ್ವರನು ಸುಕಾಸನದಲ್ಲಿ ಕುಳಿತಿದ್ದಾನೆ. ನಾಲ್ಕು ಕೈಗಳಲ್ಲಿ ಬಲದ ಎರಡು ಕೈ ಮತ್ತು ಎಡದ ಮೇಲಿನ ಕೈಗಳು ಭಗ್ನಗೊಂಡಿವೆ. ಕೆಳಗಿನ ಎಡದ ಕೈಯನ್ನು ಉಮೇಯ ಎಡದ ಸೊಂಟದ ಮೇಲೆ ಇಟ್ಟಂತೆ ಖಂಡರಿಸಲಾಗಿದೆ. ಉಮೇಯು ಮಹೇಶ್ವರನ ಎಡ ತೋಡೆಯ ಮೇಲೆ ಕುಳಿತಿದ್ದಾಳೆ. ಉಮೇಯ ಎರಡು ಕೈಗಳಲ್ಲಿ ಎಡದ ಕೈ ಭಗ್ನಗೊಂಡಿದೆ. ಬಲಗೈಯಿಂದ ಮಹೇಶ್ವರನನ್ನು ತಬ್ಬಿಕೊಂಡಿದ್ದಾಳೆ. ಮಹೇಶ್ವರನು ಕರಂಡಕುಮುಟ, ಕಿವಿ ಓಲೆ, ಕೊರಳಲ್ಲಿ ದೊಡ್ಡ ಸರ, ಉಪವಿತ, ಬುಜಬಂದ ಕಾಲು ಕಡಗ, ಕೈ ಕಡಗಗಳನ್ನು ಧರಿಸಿದ್ದಾನೆ. ಉಮೇಗೆ ಗುಂಗುರು ಕುದಲುಗಳಿದ್ದು, ಕಿವಿಯಲ್ಲಿ ಕಿವಿ ಓಲೆ, ಕೊರಳಲ್ಲಿ ದೊಡ್ಡ ಸರ, ಕೈಯಲ್ಲಿ ಬಳೆ, ಕಾಲುಕಡಗವನ್ನು ಧರಿಸಿದ್ದಾಳೆ. ಮಹೇಶ್ವರನ ಬಲಗಾಲು ಭಗ್ನಗೊಂಡಿದ್ದರೂ ಪಾದವು ನಂದಿಯ ಬೆನ್ನ ಮೇಲೆ ಇಟ್ಟಿದ್ದರ ಕುರುಹು ಉಳಿದುಕೊಂಡಿದೆ. ಪ್ರಭಾವಳಿಯು ಮಕರತೋರಣದಿಂದ ಅಲಂಕರಿಸಲಾಗಿದೆ. ಸರ್ಪವು ಮಹೇಶ್ವರನ ತಲೆಯ ಮೇಲೆ ವಿಶೇಷವಾಗಿ ಚಿತ್ರಿಸಲಾಗಿದೆ.

ಕ್ರಸಂ.	ಗ್ರಾಮ	ತಾಲೂಕು	ಸ್ಮಾರಕ	ಮೂರ್ತಿಶಿಲ್ಪ ದೊರೆತ ಸ್ಥಳ
೧.	ಆನೆಗೊಂದಿ	ಗಂಗಾವತಿ	ಉಮಾಮಹೇಶ್ವರ ಶಿಲ್ಪ	ರಾಯಚೂರಿನ ನವರಂಗ ದರ್ವಾಜದಲ್ಲಿರುವ ಪ್ರಾಚ್ಯ ವಸ್ತು ಸಂಗ್ರಹಾಲಯ

ಪುರುಷಮೃಗ ಶಿಲ್ಪ

ಅರ್ಧದೇಹ ಮನುಷ್ಯನಂತೆಯೂ, ಇನ್ನರ್ಧದೇಹ ಪ್ರಾಣಿಯಂತೆಯೂ ಇರುವುದೆಂದು ನಂಬಲಾದ ಒಂದು ಕಾಲ್ಪನಿಕ ಪ್ರಾಣಿಯೆ ಪುರುಷಮೃಗ. ಶ್ರೀತತ್ವನಿಧಿಯಲ್ಲಿ ಪುರುಷಮೃಗದ ವಿವರಗಳಿವೆ. ಮನುಷ್ಯನ ಮುಖ ಹಾಗು ಸಿಂಹದ ದೇಹವುಳ್ಳ, ಎಡಗೈಯಲ್ಲಿ ಘಂಟೆಯನ್ನು ಮತ್ತು ಬಲಗೈಯಲ್ಲಿ ಚಿನ್ನದ ಕಲಶವನ್ನು ಹಿಡಿದಿರುವ ಸದಾಕಾಲ ಶಿವಪೂಜೆಯಲ್ಲಿಯೇ ತೊಡಗಿ ಆನಂದವನ್ನು ಅನುಭವಿಸುತ್ತಿರುವಂತೆ ಪುರುಷಮೃಗವಿರಬೇಕು ಎಂದು ಹೇಳಲಾಗಿದೆ.[೨೦]

ಹಿರೇಜಂತಗಲ್ಲನ ಪ್ರಸನ್ನ ವಿರುಪಾಕ್ಷ ದೇವಾಲಯದ ಮುಖಮಂಟಪದ ಕಂಬದಲ್ಲಿ ಪುರುಷಮೃಗ ಶಿಲ್ಪವಿದೆ. ಕಿರೀಟ ಮುಕುಟವನ್ನು ಧರಿಸಿದ್ದು ಬಲಹಸ್ತದಲ್ಲಿ ದೂಪದ ಆರತಿಯನ್ನು ಎಡಗೈಯಲ್ಲಿ ಘಂಟೆಯನ್ನು ಹಿಡಿದಿದ್ದು ಶಿವಲಿಂಗಕ್ಕೆ ಆರತಿಯನ್ನು ಮಾಡುತ್ತಿರುವಂತಿದೆ. ಕಿವಿಗಳಲ್ಲಿ ವೃತ್ತಕುಂಡಲ, ಕೊರಳು, ತೋಳುಗಳಲ್ಲಿ ರುದ್ರಾಕ್ಷಿ ಮಾಲೆಯಿದೆ. ದೇಹದ ಹಿಂದಿನ ಅರ್ಧಭಾಗ ಸಿಂಹದ ದೇಹವನ್ನು ಹೊಂದಿದೆ. ಇದೇ ದೇವಾಲಯದ ಸಭಾಮಂಟಪದ ಕಂಬ, ದ್ವಾರಬಾಗಿಲಿನ

ಕಂಬ, ಮಂಟಪ ಕಂಬಗಳಲ್ಲಿ ಒಟ್ಟು ಹದಿನಾರು ಶಿಲ್ಪಗಳು ಮೇಲಿನ ಲಕ್ಷಣಗಳನ್ನೊಂದಿರುವ ಪುರುಷಮೃಗದ ಉಬ್ಬುಶಿಲ್ಪಗಳಿವೆ. ಇದೇ ರೀತಿಯ ಶಿಲ್ಪವು ಕನಕಗಿರಿಯ ಕನಕಾಚಲ ಲಕ್ಷ್ಮೀನರಸಿಂಹ ದೇವಾಲಯ ಮಧ್ಯರಂಗಮಂಟಪದ ಕಂಬಗಳಲ್ಲಿ ನಾಲ್ಕು ಪುರುಷಮೃಗ ಶಿಲ್ಪಗಳಿವೆ.

ಆನೆಗೊಂದಿಯ ರಂಗನಾಥ ದೇವಾಲಯದ ಪ್ರಕಾರ ಮಂಟಪದ ಕಂಬವೊಂದರಲ್ಲಿ ಪುರುಷಮೃಗ ಶಿಲ್ಪವಿದೆ. ಶಿವಲಿಂಗವಿಲ್ಲದ ಪುರುಷಮೃಗ ಶಿಲ್ಪವು ಅರ್ಧದೇಹ ಮನುಷ್ಯ ಹಾಗೂ ಅರ್ಧದೇಹ ಪ್ರಾಣಿ (ವ್ಯಾಘ್ರ) ರೂಪವನ್ನು ಹೊಂದಿದೆ.

ಕ್ರಸಂ.	ಗ್ರಾಮ	ತಾಲೂಕು	ಸ್ಮಾರಕ	ದೊರೆತಿರುವ ಸ್ಥಳ	ಶಿಲ್ಪಗಳ ಸಂಖ್ಯೆ
೧.	ಹಿರೇಜಂತಗಲ್ಲು	ಗಂಗಾವತಿ	ಪುರುಷಮೃಗ ಶಿಲ್ಪ	ಪ್ರಸನ್ನ ವಿರುಪಾಕ್ಷ ದೇವಾಲಯ	
				ಮಧ್ಯರಂಗ ಮಂಟಪದ ಕಂಬಗಳಲ್ಲಿ	೬
				ಸಭಾಮಂಟಪ ಕಂಬಗಳಲ್ಲಿ	೨
				ಮಂಟಪದಲ್ಲಿ	೧
				ಹೊರ ಗೋಡೆಯ ಕಂಬ	೧
				ಎರಡನೇ ದ್ವಾರ ಬಾಗಿಲಿನ ಕಂಬ	೬
೨.	ಕನಕಗಿರಿ	ಕನಕಗಿರಿ	ಪುರುಷಮೃಗ ಶಿಲ್ಪ	ಕನಕಾಚಲ ಲಕ್ಷ್ಮೀನರಸಿಂಹ ಮಧ್ಯರಂಗ ಮಂಟಪದ ಕಂಬಗಳಲ್ಲಿ	೪
೩.	ಆನೆಗೊಂದಿ	ಗಂಗಾವತಿ		ರಂಗನಾಥ ಮಂಟಪದ ಕಂಬಗಳಲ್ಲಿ	೪

ಬೇಡರ ಕಣ್ಣಪ್ಪ

ಕಾಯಕದಲ್ಲಿ ಬೇಡರವನಾಗಿದ್ದು, ಶಿವನಿಗೆ ತನ್ನ ಕಣ್ಣುಗಳನ್ನು ಅರ್ಪಿಸಿದ ಶಿವಭಕ್ತ. ಕರ್ನಾಟಕ ತಮಿಳುನಾಡಿನ ಅನೇಕ ದೇವಾಲಯಗಳಲ್ಲಿ ಕಣ್ಣಪ್ಪನ ಶಿಲ್ಪಗಳಿವೆ. ಹಿರೇಜಂತಗಲ್ಲ ಪ್ರಸನ್ನ ವಿರುಪಾಕ್ಷ ದೇವಾಲಯ ಸಭಾಮಂಟಪದ ಕಂಬವೊಂದರ ಶಿವಲಿಂಗವಿದ್ದು, ಬೇಡರ ಕಣ್ಣಪ್ಪನು ತನ್ನ ಬಲಗಾಲವನ್ನು ಲಿಂಗದ ಮೇಲೆ ಇಟ್ಟಿದಿದ್ದಾನೆ. ಎಡಗಾಲವನ್ನು ಪೀಠದ ಮೇಲೆ ಇಟ್ಟಿದ್ದಾರೆ. ಬಲಗೈಯಲ್ಲಿ ಬಾಣದಿಂದ ತನ್ನ ಕಣ್ಣನ್ನು ತೆಗೆದುಕೊಳ್ಳುತ್ತಿದ್ದಾರೆ. ಎಡಗೈಯಲ್ಲಿ ಬಿಲ್ಲುವನ್ನು ಹೆಗಲಿಗೆ ಹಾಕಿಕೊಂಡಿದ್ದಾನೆ. ಇದೆ ರೀತಿಯ ಶಿಲ್ಪಗಳು ಆನೆಗೊಂದಿ, ಕನಕಗಿರಿಗಳಲ್ಲೂ ಕಂಡುಬರುತ್ತವೆ.

ಕ್ರಸಂ.	ಗ್ರಾಮ	ತಾಲೂಕು	ಸ್ಮಾರಕಗಳು	ಶಿಲ್ಪಗಳು ದೊರೆತಿರುವ ಸ್ಥಳ
೧.	ಹಿರೇಜಂತಗಲ	ಗಂಗಾವತಿ	ಬೇಡರ ಕಣ್ಣಪ್ಪ	ಪ್ರಸನ್ನ ವಿರುಪಾಕ್ಷ ದೇವಾಲಯದ ಸಭಾಮಂಟಪದ ಕಂಬ
೨.	ಕನಕಗಿರಿ	ಕನಕಗಿರಿ	ಬೇಡರ ಕಣ್ಣಪ್ಪ	ಕನಕಾಚಲ ಲಕ್ಷ್ಮೀ ನರಸಿಂಹ

				ದೇವಾಲಯ ಮಹಾರಂಗ ಮಂಟಪ
೩.	ಆನೆಗೊಂದಿ	ಗಂಗಾವತಿ	ಬೇಡರ ಕಣ್ಣಪ್ಪ	ರಂಗನಾಥ ದೇವಾಲಯ ಮಂಟಪದಲ್ಲಿ

ವೈಷ್ಣವ ಶಿಲ್ಪಗಳು

ವಿಷ್ಣುಶಿಲ್ಪ

ವಿಷ್ಣುವು ಹಿಂದೂ ಧರ್ಮದ ದೇವತೆಗಳಾದ ತ್ರಿಮೂರ್ತಿಗಳಲ್ಲಿ ಎರಡನೆಯವನು. ಬ್ರಹ್ಮ ಸೃಷ್ಟಿಕರ್ತ, ವಿಷ್ಣು ರಕ್ಷಕ, ಶಿವ ಲಯಕರ್ತ, ಅದರಲ್ಲಿ ವಿಷ್ಣುವು ಜಗತ್ತಿನರಕ್ಷಣಾ ಕಾರ್ಯವನ್ನು ಮಾಡುವವನು.[೨೧] ವಿಷ್ಣುವಿಗೆ ಲಕ್ಷ್ಮಿ ಮಾತ್ರವಲ್ಲದೆ ಪುಷ್ಟಿ, ಸರಸ್ವತಿಯೂ ಹೆಂಡತಿಯೇ, ದಕ್ಷಿಣದಲ್ಲಿ ಶ್ರೀದೇವಿಯೊಂದಿಗೆ ಭೂದೇವಿಯೂ ಇರುತ್ತಾಳೆ. ವಿಷ್ಣುವಿನ ಪಾರ್ಶ್ವಗಳಲ್ಲಿ ಲಕ್ಷ್ಮಿಯೊಂದಿಗೆ ನೀಳಾದೇವಿಯನ್ನೂ ಅಳವಡಿಸಿರುವುದುಂಟು. ವಿಷ್ಣುವು ಏಕಬೇರವಾಗಿರುವಾಗ ಲಕ್ಷ್ಮಿಯನ್ನು ಅವನ ವಕ್ಷಃಸ್ಥಲದಲ್ಲಿಯೇ ಸೂಚಿಸುತ್ತಾರೆ. ಇದಕ್ಕೆ ಶ್ರೀವತ್ಸಚಿಹ್ನೆ ಎಂದೂ ವ್ಯೂಹಲಕ್ಮಿಯೆಂದೂ ಹೆಸರು. ಶ್ರೀವತ್ಸ ಲಾಂಛನವು ಬೆಳೆದ ಬಗೆ ಅಷ್ಟಾಗಿ ಸ್ಪಷ್ಟವಾಗಿಲ್ಲ. ಸಾಮಾನ್ಯವಾಗಿ ಸಣ್ಣದೊಂದು ತ್ರಿಕೋನವನ್ನು ಬಲ ಎದೆಯ ಮೇಲೆ ಮೂಡಿಸುವುದು ವಾಡಿಕೆ.[೨೨]

ವೆಂಕಟಗಿರಿಯ ಬೆಟ್ಟದಲ್ಲಿರುವ ನೈಸರ್ಗಿಕ ಗುಹೆಯೊಳಗೆ ಸಮಭಂಗಿಯಲ್ಲಿರುವ ವಿಷ್ಣುಶಿಲ್ಪ ಇದೆ. ಈ ಶಿಲ್ಪವು ನಾಲ್ಕು ಕೈಗಳನ್ನು ಹೊಂದಿದ್ದು, ಬಲಭಾಗದ ಕೆಳ ಕೈಯು ಅಭಯ ಹಸ್ತದಲ್ಲಿದ್ದು, ಮೇಲ್ಭಾಗದ ಕೈಯಲ್ಲಿ ಚಕ್ರ ಇದೆ. ಎಡಭಾಗದ ಕೆಳಕೈಯು ಸೊಂಟದ ಮೇಲೆ ಇರಿಸಿದ್ದು, ಎಡ ಮೇಲಗೈ ಶಂಕವನ್ನು ಹಿಡಿದ್ದಾನೆ. ಈ ಶಿಲ್ಪದಲ್ಲಿ ಕೊರಳಲ್ಲಿ ಕಂಠಹಾರ, ತೋಳ್ಬಂದಿ, ಕಂಕಣಗಳನ್ನು ಹೊಂದಿದೆ. ಇಲ್ಲಿನ ಶಿಲ್ಪದಲ್ಲಿರುವ ವಸ್ತ್ರವು ಶಿಲ್ಪದ ಎರಡು ಭಾಗದಲ್ಲಿ ಸುಂದರವಾಗಿ ಹರಡಿದಂತೆ ಗೋಚರಿಸುತ್ತದೆ. ಈ ಶಿಲ್ಪವು ಕಪ್ಪು ಗ್ರಾನೈಟ್ ಶಿಲೆಯಿಂದ ಕಂಡರಿಸಲಾಗಿದೆ.

ಗಂಗಾವತಿ ತಾಲೂಕಿನ ಬಂಕಾಪುರ ಗ್ರಾಮದ ಹೊರಭಾಗದಲ್ಲಿ ವಿಷ್ಣು ದೇವಾಲಯದಲ್ಲಿ ವಿಷ್ಣುಶಿಲ್ಪವಿದೆ. ಪೀಠದ ಮೇಲೆ ಸ್ಥಾನಿಕ ಭಂಗಿಯಲ್ಲಿ ವಿಷ್ಣು ಇದ್ದಾನೆ. ಸಮಭಂಗಿಯಲ್ಲಿರುವ ವಿಷ್ಣು ನಾಲ್ಕು ಕೈಗಳನ್ನು ಹೊಂದಿದ್ದು ಪ್ರಸ್ತುತ ಭಗ್ನಗೊಂಡಿವೆ. ತಲೆಗೆ ಕೀರಿಟ ಮುಕುಟವನ್ನು ಧರಿಸಿದ್ದಾನೆ. ಕಿವಿಗಳಿಗೆ ಕರ್ಣಕುಂಡಲವನ್ನು, ಕೊರಳಹಾರ, ಕಂಠಹಾರ, ತೋಳ್ಬಂದಿ, ಕಂಕಣಗಳು, ಉದ್ದವಾದ ವನಮಾಲವನ್ನು ಧರಿಸಿದ್ದಾನೆ. ಕಾಲುಗಳಿಗೆ ಕಾಲಕಡಗವನ್ನು ಧರಿಸಿರುವನು. ವಿಷ್ಣುವಿನ ಸೊಂಟವನ್ನು ವಿವಿಧ ಆಭರಣಗಳಿಂದ ಅಲಂಕರಣವನ್ನು ಮಾಡಿರುವುದನ್ನು ಕಾಣಬಹುದು. ವಿಷ್ಣು ಶಿಲ್ಪದ ಎರಡು ಬದಿಗೆ ವಸ್ತ್ರವನ್ನು ಇಳಿಬಿಟ್ಟಿದ್ದು ಸುಂದರವಾಗಿ ಹರಡಿದಂತೆ ಕಾಣುತ್ತದೆ. ವಿಷ್ಣುವಿನ ಎಡಭಾಗದ ಎದೆಯ ಮೇಲೆ ಶ್ರೀವತ್ಸ ಚಿಹ್ನೆ ಇದೆ. ಈ ಶಿಲ್ಪವು ಕಪ್ಪು ಗ್ರಾನೈಟ್ ಶಿಲೆಯಿಂದ ಕೆತ್ತಲಾಗಿದೆ. ಇದೇ ರೀತಿಯ ಶಿಲ್ಪವು ಕನಕಗಿರಿಯ ಕನಕಾಚಲ ಲಕ್ಷ್ಮಿನರಸಿಂಹ

ದೇವಾಲಯದ ಪ್ರಾಕಾರ ಗೋಡೆಯಲ್ಲಿ ಬಿಡಿಯಾಗಿ ನಿಲ್ಲಿಸಿದ ಶಿಲ್ಪಗಳಲ್ಲಿ ಇರುವುದನ್ನು ನೋಡಬಹುದು.

ಅಗಲಕೆರೆಯ ವೀರಭದ್ರ ದೇವಾಲಯದ ಹೊರಭಾಗದಲ್ಲಿರುವ ಕಂಬವೊಂದರಲ್ಲಿ ವಿಷ್ಣು ಶಿಲ್ಪವಿದೆ. ಈ ಶಿಲ್ಪವು ದ್ವಿಭಂಗಿಯಲ್ಲಿದೆ. ಇದು ನಾಲ್ಕು ಕೈಗಳನ್ನು ಹೊಂದಿದ್ದು, ಬಲಗೈಯಲ್ಲಿ ಚಕ್ರ, ವರದಹಸ್ತ ಮತ್ತು ಎಡಗೈಯಲ್ಲಿ ಶಂಖ, ಗದೆಯನ್ನು ಹೊಂದಿದ್ದು ಗದೆಯನ್ನು ಕೆಳಗಡೆ ಇಳಿಬಿಟ್ಟಿದ್ದಾನೆ. ಈ ಶಿಲ್ಪದಲ್ಲಿ ಕಿವಿಗಳಿಗೆ ಕರ್ಣಕುಂಡಲವನ್ನು, ಕೊರಳಹಾರ, ಕಂಠಹಾರ, ಕೋಳ್ಬಂದಿ, ಕಂಕಣಗಳು, ಉದ್ದವಾದ ವನಮಾಲವನ್ನು ಧರಿಸಿದ್ದಾನೆ. ಕಾಲುಗಳಿಗೆ ಕಾಲಕಡಗವನ್ನು ಧರಿಸಿರುವನು. ಕಾಲುಗಳ ಪಾದವನ್ನು ಎಡಭಾಗಕ್ಕೆ ಮುಖಮಾಡಿದ್ದಾನೆ. ತಲೆಗೆ ಕಿರೀಟವನ್ನು ಧರಿಸಿದ್ದಾನೆ.

ಹಿರೇಬೆಣಕಲ್ಲು ಗ್ರಾಮದ ಶ್ರೀ ವಿಶ್ವನಾಥೇಶ್ವರ ದೇವಾಲಯದ ಮುಂಭಾಗದಲ್ಲಿ ವಿಷ್ಣು ಶಿಲ್ಪವಿದೆ. ವಿಷ್ಣು ಸ್ಥಾನಿಕ ಭಂಗಿಯಲ್ಲಿದ್ದು, ಚತುರ್ಭುಜವನ್ನು ಹೊಂದಿದ್ದಾನೆ. ಬಲಗೈಯಲ್ಲಿ ಚಕ್ರ, ಅಭಯ ಮುದ್ರೆಯಲ್ಲಿದೆ. ಎಡಗೈಯಲ್ಲಿ ಶಂಕ ಇನ್ನೊಂದು ಕೈಯಲ್ಲಿ ಯಾವ ವಸ್ತು ಹಿಡಿದ್ದಾನೆ ಎಂಬುದು ಸ್ಪಷ್ಟವಾಗುತ್ತಿಲ್ಲ. ಶಿಲ್ಪದಲ್ಲಿ ಕೊರಳಹಾರ, ಕಂಠಹಾರ, ಕೇಯೂರ, ವೃತ್ತಕುಂಡಲಗಳು ಇವೆ. ಭುಜಬಂಧಗಳು, ಕೈಗಡ, ಕಾಲುಗಡಗಳಿವೆ. ಯಜ್ಞೋಪವೀತವೀತವಿದೆ. ತಲೆಯ ಮೇಲೆ ಕೀರಿಟ ಮುಕುಟವಿದೆ. ವಿಷ್ಣುವಿನ ಪಕ್ಕದಲ್ಲಿ ಶ್ರೀದೇವಿ, ಭೂದೇವಿ ಶಿಲ್ಪಗಳು ನಿಂತಭಂಗಿಯಲ್ಲಿವೆ. ದೇವಿಯರ ಕೈಯಲ್ಲಿ ಕಮಲವಿದೆ. ಈ ಶಿಲ್ಪವು ಬಿಳಿಗ್ರಾನೈಟ್ ಶಿಲೆಯಲ್ಲಿ ಕೆತ್ತಲಾಗಿದೆ.

ಕನಕಗಿರಿಯ ಮಲ್ಲಿಕಾರ್ಜುನ ದೇವಾಲಯದಲ್ಲಿ ಪೀಠದ ಮೇಲೆ ವಿಷ್ಣುವು ಸವ್ಯಲಲಿತಾಸನದಲ್ಲಿ ಆಸೀನನಾಗಿದ್ದಾನೆ. ವಿಷ್ಣು ಶಿಲ್ಪವು ಚತುರ್ಭುಜಗಳಿದ್ದು, ಕ್ರಮವಾಗಿ ಹಿಂದಿನ ಕೈಗಳಲ್ಲಿ ಚಕ್ರ, ಶಂಖಗಳಿದ್ದರೆ ಮುಂದಿನ ಕೈಗಳು ಅಭಯ, ವರದ ಮುದ್ರೆಯಲ್ಲಿವೆ. ತಲೆಯ ಮೇಲೆ ಕಿರೀಟ ಮುಕುಟ, ಕಿವಿಯಲ್ಲಿ ಪತ್ರಕುಂಡಲ, ಭುಜಹಾರ, ಛನ್ನವೀರ, ತೊಳ್ಬಂದಿ, ಕೈಕಡಗ, ಕಾಲ್ಕಡಗಗಳಿವೆ. ವೈಜಯಂತಿ ಹಾರದಲ್ಲಿ ಕೆಳಗೆ ದೊಡ್ಡ ದುಂಡಾದ ಭಾಗವಿರುವದು ವಿಶಿಷ್ಟವಾಗಿದೆ.

ರಾಯಚೂರಿನ ನವರಂಗ ದರ್ವಾಜದಲ್ಲಿರುವ ಆನೆಗೊಂದಿಯ ವಿಷ್ಣು ಶಿಲ್ಪವು ಸಮಭಂಗಿಯಲ್ಲಿದೆ. ಈ ಶಿಲ್ಪದಲ್ಲಿ ವಿಷ್ಣುವು ಚತುರ್ಭುಜವನ್ನು ಹೊಂದಿದ್ದಾನೆ. ಬಲಗೈಯಲ್ಲಿ ಶಂಕ, ವರದ ಹಸ್ತ ಮತ್ತು ಎಡಗೈಯಲ್ಲಿ ಚಕ್ರ, ಗದೆಯನ್ನು ಹಿಡಿದುಕೊಂಡಿದ್ದಾನೆ. ಈ ಶಿಲ್ಪದಲ್ಲಿ ವಿಷ್ಣುವು ಕಿವಿಗಳಿಗೆ ಕರ್ಣಕುಂಡಲ ಮತ್ತು ಕೊರಳಲ್ಲಿ ಕಂಠಿಹಾರ, ವನಮಾಲವನ್ನು ಧರಿಸಿರುವನು. ವಿಷ್ಣುವಿನ ತಲೆಗೆ ಕೀರಿಟ ಮುಕುಟವನ್ನು ಧರಿಸಿರುವನು. ಈ ಶಿಲ್ಪವು ಕಪ್ಪು ಗ್ರಾನೈಟ್ ಶಿಲೆಯಿಂದ ನಿರ್ಮಿತವಾಗಿದೆ. ಈ ಶಿಲ್ಪದ ಕಾಲವನ್ನು ಕ್ರಿ.ಶ. ೧೪–೧೬ನೇ ಶತಮಾನದೆಂದು ಗುರುತಿಸಿದ್ದಾರೆ.[೨೩]

ಕ್ರಸಂ.	ಗ್ರಾಮ	ತಾಲೂಕು	ಸ್ಮಾರಕ	ಮೂರ್ತಿಶಿಲ್ಪ ದೊರೆತ ಸ್ಥಳ
೧.	ವೆಂಕಟಗಿರಿ	ಗಂಗಾವತಿ	ವಿಷ್ಣುಶಿಲ್ಪ	ವೆಂಕಟಗಿರಿ ಬೆಟ್ಟದಲ್ಲಿ
೨.	ಬಂಕಾಪುರ	ಗಂಗಾವತಿ	ವಿಷ್ಣುಶಿಲ್ಪ	ವಿಷ್ಣು ದೇವಾಲಯ ಗರ್ಭಗೃಹದಲ್ಲಿ

೩.	ಹಿರೇಬೆಣಕಲ್ಲು	ಗಂಗಾವತಿ	ವಿಷ್ಣುಶಿಲ್ಪ	ಶ್ರೀವಿಶ್ವನಾಥೇಶ್ವರ ದೇವಾಲಯದ ಮುಂಭಾಗದಲ್ಲಿ
೪.	ಅಗಲಕೆರೆ	ಕೊಪ್ಪಳ	ವಿಷ್ಣುಶಿಲ್ಪ	ವೀರಭದ್ರ ದೇವಾಲಯದ ಹೊರಭಾಗದಲ್ಲಿರುವ ಕಂಬದಲ್ಲಿ
೫.	ಕನಕಗಿರಿ	ಕನಕಗಿರಿ	ವಿಷ್ಣುಶಿಲ್ಪ	ಮಲ್ಲಿಕಾರ್ಜುನ ದೇವಾಲಯದಲ್ಲಿ ಪೀಠದ ಮೇಲೆ
೬.	ಆನೆಗೊಂದಿ	ಗಂಗಾವತಿ	ವಿಷ್ಣುಶಿಲ್ಪ	ರಾಯಚೂರಿನ ನವರಂಗ ದರ್ವಾಜದ ಪ್ರಾಚ್ಯ ವಸ್ತು ಸಂಗ್ರಹ
೭.	ಕನಕಗಿರಿ	ಕನಕಗಿರಿ	ವಿಷ್ಣುಶಿಲ್ಪ	ವೆಂಕಟಪತಿ ಬಾವಿಯ ವೈಷ್ಣವ ಗೃಹ ಪ್ರಸ್ತುತ ಕನಕಾಚಲ ದೇವಾಲಯ ಪ್ರಾಕಾರ ಮಂಟಪದಲ್ಲಿ
೮.	ಕನಕಗಿರಿ	ಕನಕಗಿರಿ	ವಿಷ್ಣುಶಿಲ್ಪ	ಕನಕಾಚಲ ದೇವಾಲಯ ಪ್ರಾಕಾರ ಮಂಟಪದಲ್ಲಿ

ಬೆಣ್ಣೆ ಕೃಷ್ಣ ಶಿಲ್ಪ

ಕನಕಗಿರಿಯ ಕನಕಾಚಲ ಲಕ್ಷ್ಮೀನರಸಿಂಹ ದೇವಾಲಯದ ಬಲ ಪ್ರಾಕಾರ ಮಂಟಪದಲ್ಲಿ ಕಪ್ಪು ಗ್ರಾನೈಟನಲ್ಲಿ ಈ ಶಿಲ್ಪವನ್ನು ಕಂಡರಿಸಲಾಗಿದೆ. ಬಲಗೈಯಲ್ಲಿ ಬೆಣ್ಣೆಯ ಮುದ್ದೆಯನ್ನು ಹಿಡಿದು ಎಡಗೈಯನ್ನು ನೆಲಕ್ಕೆ ಊರಿ ಅಂಬೆಗಾಲಿನಲ್ಲಿ ನಡೆಯುತ್ತಿರುವ ಶಿಲ್ಪವು ಆಕರ್ಷಕವಾಗಿದೆ. ಬೆಣ್ಣೆ ಕೃಷ್ಣನು ಕೇಶವನ್ನು ನೆತ್ತಿಯಲ್ಲಿ ಶಿಖೆಯನ್ನು ಕಟ್ಟಲಾಗಿದೆ. ಕಿವಿಯಲ್ಲಿ ಒಲೆ ಕೊರಳಲ್ಲಿ ಮಣಿಸರ, ಭುಜಹಾರ, ಉದರಬಂದ, ಮುಂಗೈಯಲ್ಲಿ ಕಡಗ, ಕಾಲಲ್ಲಿ ಕಡಗ, ಹಾಗೂ ನಡುವಿನಲ್ಲಿ ಗೆಜ್ಜೆಸರಗಳಿವೆ. ಆನೆಗೊಂದಿಯ ರಂಗನಾಥ ದೇವಾಲಯದ ಕಂಬವೊಂದರಲ್ಲಿ ಅಂಬೆಗಾಲು ಕೃಷ್ಣನ ಶಿಲ್ಪವಿದೆ. ಇದೆ ರೀತಿಯ ಶಿಲ್ಪಗಳು ವೆಂಕಟಗಿರಿ, ಹಳೇಹತೋಟಿಯ ದೇವಾಲಯಗಳಲ್ಲಿ ಕಂಡು ಬಂದಿವೆ. ಹತೋಟಿ ಗ್ರಾಮದಲ್ಲಿರು ಅತ್ತಿವಟ್ಟಿಯ ಶಾಸನದ ಕೆಳಭಾಗದಲ್ಲಿ ದೊಡ್ಡದಾಗಿ ಬಲಗೈಯಲ್ಲಿ ಬೆಣ್ಣೆ ಹಿಡಿದು ಅಂಬೆಗಾಲಲ್ಲಿ ಕುಳಿತ ಬಾಲಕೃಷ್ಣನ ಉಬ್ಬುಶಿಲ್ಪವನ್ನು ಕೆತ್ತಲಾಗಿದೆ.

ಕ್ರಸಂ.	ಗ್ರಾಮ	ತಾಲೂಕು	ಸ್ಮಾರಕ	ಮೂರ್ತಿಶಿಲ್ಪ ದೊರೆತ ಸ್ಥಳ
೧.	ಕನಕಗಿರಿ	ಕನಕಗಿರಿ	ಬೆಣ್ಣೆ ಕೃಷ್ಣ ಶಿಲ್ಪ	ಕನಕಾಚಲ ಲಕ್ಷ್ಮೀನರಸಿಂಹ ದೇವಾಲಯ ಬಲ ಪ್ರಾಕಾರ ಮಂಟಪದಲ್ಲಿ
೨.	ಆನೆಗೊಂದಿ	ಗಂಗಾವತಿ	ಬೆಣ್ಣೆ ಕೃಷ್ಣ ಶಿಲ್ಪ	ರಂಗನಾಥ ದೇವಾಲಯ ಮಂಟಪದ ಕಂಬವೊಂದರಲ್ಲಿ

೩.	ಹತೋಟಿ	ಕೊಪ್ಪಳ	ಬೆಣ್ಣೆ ಕೃಷ್ಣ ಶಿಲ್ಪ	ಆಂಜನೇಯ/ಸನ್ಯಾಸಿ ಮಠದ ಹತ್ತಿರ ಅತ್ತಿವಟ್ಟಿಯ ಶಾಸನದ ಕೆಳಭಾಗದಲ್ಲಿ ದೊಡ್ಡದಾಗಿ ಬಂಡೆಗೆ

ಆಯುಧಪುರುಷ ಸುದರ್ಶನಚಕ್ರ ಶಿಲ್ಪ

ಸುದರ್ಶನ ಚಕ್ರವು ವಿಷ್ಣುವಿನ ಒಂದು ಆಯುಧ. ತನ್ನ ಚತುರ್ಭುಜಗಳಲ್ಲಿ ಶಂಖ, ಗದೆ ಮತ್ತು ಪದ್ಮದ ಜೊತೆಗೆ ಬಲ ಮೇಲಿನ ಕೈಯ ತೋರುಬೆರಳಿನಲ್ಲಿ ಚಕ್ರವನ್ನು ಧರಿಸಿರುತ್ತಾನೆ. ಸುದರ್ಶನ ಚಕ್ರದ ಸೃಷ್ಟಿಯ ಬಗೆಗೆ ಬೇರೆ ಬೇರೆ ಮಾಹಿತಿಗಳಿವೆ. ಅದು ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು, ಮಹೇಶ್ವರರ ಸಂಯುಕ್ತ ಶಕ್ತಿಯಿಂದ ಹುಟ್ಟಿದ್ದೆಂದು, ತನ್ನ ಆರಾಧನೆಯಿಂದ ಸಂಪ್ರೀತನಾದ ಶಿವನು ವಿಷ್ಣುವಿಗೆ ಅನುಗ್ರಹಿಸಿದ್ದೆಂದು, ದೇವತೆಗಳ ಗುರುವಾದ ಬೃಹಸ್ಪತಿಯು ವಿಷ್ಣುವಿಗೆ ನೀಡಿದ್ದೆಂದು ಪುರಾಣಗಳಲ್ಲಿ ಹೇಳಲಾಗಿದೆ.

ಅಪರಿಮಿತ ಶಕ್ತಿಯನ್ನು ಹೊಂದಿರುವ ಸುದರ್ಶನ ಚಕ್ರವನ್ನು ಶತ್ರುವಿನ ಅಂತಿಮ ಸಂಹಾರಕ್ಕಾಗಿ ಮಾತ್ರ ಉಪಯೋಗಿಸುವಂತಹದು. ಒಮ್ಮೆ ಇದನ್ನು ಪ್ರಯೋಗಿಸಿದರೆ ಇದು ಶತ್ರುವನ್ನು ಸಂಹರಿಸಿ ಪುನಃ ಹಿಂದಿರುಗಿ ಬರುತ್ತಿತ್ತು. ಇದನ್ನು ದೂರ್ವಾಸಮುನಿ, ಬ್ರಹ್ಮ ಮತ್ತು ಶಿವನಿಗೆ ಮಾತ್ರವಲ್ಲದೆ ಬೇರೆ ಯಾರಿಂದಲೂ ತಡೆಯಲು ಸಾಧ್ಯವಿರಲಿಲ್ಲ.

ಕೃಷ್ಣನ ಅವತಾರವಾದಾಗ ವಿಷ್ಣು ಆತನಿಗೆ ಸುದರ್ಶನ ಚಕ್ರವನ್ನು ನೀಡುತ್ತಾನೆ. ಕೃಷ್ಣನು ಅದನ್ನು ತನ್ನ ಕಿರುಬೆರಳಿನಲ್ಲಿ ಹಿಡಿದುಕೊಂಡನು. ಅವನು ಗೋವರ್ಧನ ಗಿರಿಯನ್ನು ಎತ್ತಿ ಹಿಡಿದಾಗ ಅದರ ಕೆಳಗೆ ಆಧಾರಕ್ಕಾಗಿ ಸುದರ್ಶನ ಚಕ್ರವನ್ನು ಹಿಡಿದಿದ್ದನು. ಮತ್ತು ಶಿಶುಪಾಲನನ್ನು ಈ ಚಕ್ರದಿಂದಲೇ ಸಂಹರಿಸುತ್ತಾನೆ.[೨೪]

ಹೀಗೆ ವಿಶಿಷ್ಟ ಹಿನ್ನಲೆ ಹೊಂದಿರುವ ಸುದರ್ಶನ ಚಕ್ರವನ್ನು ವಿಷ್ಣುವಿನ ವಿವಿಧ ಅವತಾರಗಳೊಂದಿಗೆ ಆತನ ಕೈಯಲ್ಲಿಯ ಆಯುಧವಾಗಿ ಚಿತ್ರಿಸುತ್ತಾ ಬರಲಾಗಿದ್ದರೂ ದಕ್ಷಿಣ ಭಾರತದ ಕೆಲವು ದೇವಾಲಯಗಳಲ್ಲಿ ಸುದರ್ಶನ ಚಕ್ರವನ್ನು ಆಯುಧಪುರುಷ ರೂಪದಲ್ಲಿ ಸ್ವತಂತ್ರ ಗುಡಿಗಳಲ್ಲಿರಿಸಿ ಪೂಜೆ ಸಲ್ಲಿಸುವ ಪರಂಪರೆ ಇದೆ. ಹಂಪಿಯ ಯಂತ್ರೋದ್ಧಾರಕ ಆಂಜನೇಯ ಬಳಿಯ ಚಿಕ್ಕಗುಡಿಯಲ್ಲಿ ಆಯುಧಪುರುಷ ಸುದರ್ಶನಚಕ್ರ ಶಿಲ್ಪವಿದೆ.[೨೫]

ಆನೆಗೊಂದಿಯ ಸ್ಥಳೀಯರು ಸೂರ್ಯನಾರಾಯಣವೆಂದು ಕರೆಯುವ ಮಂದಿರದ ಒಳಗೆ ಅಪರೂಪದ ಆಯುಧಪುರುಷ ಸುದರ್ಶನಚಕ್ರ ಶಿಲ್ಪವಿದೆ. ಕಂದು ಬಣ್ಣದ ಅಗ್ನಿ ಶಿಲೆಯನ್ನು(Black Basalt) ಹೊಂದಿದೆ. ಈ ಶಿಲ್ಪವನ್ನು ಯಾವುದೇ ಪೀಠದ ಮೇಲಿರಿಸದೆ ನೇರವಾಗಿ ನೆಲದಲ್ಲಿ ಕೂಡಿಸಲಾಗಿದೆ. ವೃತ್ತಾಕಾರದ ಸುದರ್ಶನ ಚಕ್ರದ ಮಧ್ಯ ಆಯುಧಪುರುಷನ ಸಮಭಂಗಿಯ ಶಿಲ್ಪವಿದೆ. ಈತನು ಹದಿನಾರು ಕೈಗಳನ್ನು ಹೊಂದಿದ್ದು, ಮೊದಲ ಕೈಗಳು ಬದ್ಧ ಅಂಜಲಿ ಮುದ್ರೆಯಲ್ಲಿವೆ. ಉಳಿದಂತೆ ಪರಸ್ಪರ ಎರಡೂ ಬದಿಗೆ ಕ್ರಮವಾಗಿ ಶಂಖ–ಚಕ್ರ, ಬಿಲ್ಲು–

ಬಾಣ, ಪಾಶ–ಪರಶು, ಗದೆ–ತ್ರಿಶೂಲ, ಕಮಲ–ಚಾಮರ, ಗುರಾಣಿ–ಖಡ್ಗ ಮತ್ತು ಅಂಕುಶ–ಕತ್ತಿಗಳಿವೆ.

ತಲೆಯ ಮೇಲೆ ಕಿರೀಟಮುಕುಟ, ಭುಜಹಾರ, ಕೊರಳಲ್ಲಿ ಸರ, ಮುಂಗೈ ಕಡಗ, ಸೊಂಟದ ಹಾರಗಳು, ಕೌಸ್ತುಭ ಹಾರ, ಕಾಲ್ಗಡಗ, ಪಾದಸರ ಮುಂತಾದ ಆಭರಣಗಳಿವೆ. ಸುತ್ತಲು ಪ್ರಭಾವಳಿಯಲ್ಲಿ ತಲೆಯ ಮೇಲೆ ಕೀರ್ತಿಮುಖವಿದ್ದರೆ, ಸುತ್ತಲೂ ಒಟ್ಟು ಹದಿನೈದು ಜ್ವಾಲೆಯ ರೀತಿಯ ಕೆತ್ತನೆಗಳಿವೆ. ಇದರಿಂದ ಇದು ವೃತ್ತಾಕಾರದ ಆಯುಧಪುರುಷ ಸುದರ್ಶನ ಚಕ್ರವಾಗಿದೆ.[೨೬]

ಈ ಎಲ್ಲಾ ಲಕ್ಷಣಗಳ ಹಿನ್ನೆಲೆಯಲ್ಲಿ ಮತ್ತು ಆಯುಧಪುರುಷ ಸುದರ್ಶನಚಕ್ರ ಶಿಲ್ಪಗಳ ಪ್ರತಿಮಾ ಲಕ್ಷಣಗಳನ್ನು ಅನುಲಕ್ಷಿಸಿ ಇದು ಸ್ಥಳೀಯರು ನಂಬಿದಂತೆ ಸೂರ್ಯನಾರಾಯಣನ ಶಿಲ್ಪವಲ್ಲವೆಂದು ಮತ್ತು ಮೂರ್ತಿ ಶಿಲ್ಪ ಕ್ಷೇತ್ರದಲ್ಲಿ ಅಪರೂಪವಾಗಿ ಕಾಣಿಸಿಕೊಳ್ಳುವ ಆಯುಧಪುರುಷ ಸುದರ್ಶನಚಕ್ರ ಶಿಲ್ಪವೆಂದೇ ಖಚಿತವಾಗಿ ನಿರ್ಧರಿಸಬಹುದು.

ಕ್ರಸಂ.	ಗ್ರಾಮ	ತಾಲೂಕು	ಸ್ಮಾರಕ	ಮೂರ್ತಿಶಿಲ್ಪ ದೊರೆತ ಸ್ಥಳ
೧.	ಆನೆಗೊಂದಿ	ಗಂಗಾವತಿ	ಆಯುಧಪುರುಷ ಸುದರ್ಶನಚಕ್ರ ಶಿಲ್ಪ	ಸೂರ್ಯನಾರಾಯಣನ ಮಂದಿರದ ಒಳಗೆ

ರಂಗನಾಥ/ಅನಂತಶಯನ ಶಿಲ್ಪ

ರಂಗನಾಥನು ಹೆಚ್ಚು ಕಡಿಮೆ ಹಿಂದಿನ ಕಾಲದ ಅನಂತಶಯನ ಶಿಲ್ಪದ ಹಾಗೆ ಇರುತ್ತದೆ. ಆದರೆ ಶೈಲಿಯು ಭಿನ್ನ ಅನಂತ(ಶೇಷ)ನು ತನ್ನ ಏಳು ಹೆಡೆಗಳನ್ನು ಬಿಚ್ಚಿ ಕೊಡೆಯಂತೆ ಹಿಡಿದಿರುವುದನ್ನು ಪಾರ್ಶ್ವಭಂಗಿಯಲ್ಲಿ ಬಿಡಿಸಲಾಗಿರುತ್ತದೆ. ವಿಷ್ಣು ಸುರುಳಿ ಸುತ್ತಿದ ಆದಿಶೇಷನ ಮೇಲೆ ಹಿಂದಿನ ಕೈಗಳಲ್ಲಿ ಶಂಖ ಮತ್ತು ಚಕ್ರವನ್ನು ಹಿಡಿದುಕೊಂಡು ಬಲಗೈ ಮಗ್ಗಲಾಗಿ ಮಲಗಿರುತ್ತಾನೆ. ಬಲ ಅಂಗೈಯು ತಲೆಗೆ ಅನಿಕೆಯಾಗಿರುತ್ತೆ. ಎಡಗೈ ನೀಳವಾಗಿ ಎಡಮಗ್ಗಲಲ್ಲಿ ಮೇಲಿಟ್ಟರುತ್ತಾನೆ. ತಲೆಯ ಹತ್ತಿರನಾರದ ಮುನಿಯು ತಂಬೂರಿ ನುಡಿಸುತ್ತಾ ನಿಂತಿರಬಹುದು. ಪಾದಗಳ ಬದಿಯಲ್ಲಿ ಕಾಲು ಒತ್ತುತಿರುವ ಭೂದೇವಿ, ಶ್ರೀದೇವಿಯರು ಇರುತ್ತಾರೆ. ಗರುಡನು ನಿಂತಿದ್ದು ತನ್ನ ಸ್ವಾಮಿಯನ್ನು ಕಾಯುತ್ತಿರುತ್ತಾನೆ.

ಹಿಂದಿನ ಕಾಲದ ಇಂಥ ಶಿಲ್ಪ ಮಾದರಿಯೇ ಪನ್ನಾಪುರದ ಒಂದು ಕಟ್ಟದ ಕೊಳದಲ್ಲಿದೆ. ಹಿಂದಿನ ಕಾಲದ ಇಂಥ ಶಿಲ್ಪಗಳಲ್ಲಿ ಹೆಡೆಗಳ ಛತ್ರಿಯನ್ನು ಮುಂಬದಿಯ ನೋಟದಲ್ಲಿ ಬಿಡಿಸಲಾಗಿರುತ್ತದೆ. ವಿಷ್ಣುವಿನ ಬಲಗೈಯು ಯೋಗಮುದ್ರೆಯಲ್ಲಿರುತ್ತೆ. ಶಂಖ ಚಕ್ರಗಳನ್ನು ಕೈಯಲ್ಲಿ ಹಿಡಿದಿರದೇ, ಕೆಳಗೆ ಇಟ್ಟಂತೆ ತೋರಿಸಿರುತ್ತೆ. ಆಯುಧಪಾಣಿಗಳಾದ ಮಧು ಕೈ ಭಟರನ್ನು ಕೂಡ ಮೂಡಿಸಿರುತ್ತೆ.[೨೭]

ಆನೆಗೊಂದಿಯ ರಂಗನಾಥ ದೇವಾಲಯದ ಗರ್ಭಗೃಹದಲ್ಲಿ ರಂಗನಾಥನ ಶಿಲ್ಪವಿದೆ. ರಂಗನಾಥನು ಏಳು ಹೆಡೆಯ ಹಾವಿನ ಮೇಲೆ ಮಲಗಿದ್ದಾನೆ. ಇದು ರಂಗನಾಥನ ಪಕ್ಕದಲ್ಲಿ

ಶ್ರೀದೇವಿ ಮತ್ತು ಭೂದೇವಿ ಸಮೇತವಾದ ಶಿಲ್ಪವಾಗಿದೆ. ವಿಷ್ಣುವು ನಾಲ್ಕು ಕೈಗಳನ್ನು ಹೊಂದಿದ್ದು, ಮೇಲಿನ ಎರಡು ಕೈಗಳಲ್ಲಿ ಚಕ್ರ ಮತ್ತು ಶಂಖಗಳಿವೆ. ಕೆಳಗಿನ ಬಲಗೈಯನ್ನು ತಲೆಯ ಹತ್ತಿರ ಇರಿಸಿದೆ. ಎಡಗೈಯು ಉದ್ದವಾಗಿ ಚಾಚಿದೆ. ವಿಷ್ಣುವು ಕೊರಳಹಾರ, ಕಂಠಿಹಾರ, ಯಜ್ಞೋಪವೀತ, ವನಮಾಲ, ಧೋತಿಯನ್ನು ಧರಿಸಿದ್ದು, ಇದರ ನೆರಿಗೆಗಳು ಸ್ಪಷ್ಟವಾಗಿ ಕಾಣಿಸುತ್ತವೆ. ಶ್ರೀದೇವಿ ಭೂದೇವಿಯರು ವಿಷ್ಣುವಿನ ಕಾಲ ಒತ್ತುತ್ತಿರುವಂತೆ ತೋರಲಾಗಿದೆ. ಎಡಗೈಯಲ್ಲಿ ಪದ್ಮವನ್ನು ಹಿಡಿದಿದೆ. ನಾಭಿ ಬ್ರಹ್ಮನು ವಿಷ್ಣುವಿನ ನಾಭಿಯಿಂದ ಕಮಲದಳ ಹೊರಬಂದಿದ್ದು, ಬ್ರಹ್ಮನು ಕಮಲದ ಮೇಲೆ ಪದ್ಮಾಸನದಲ್ಲಿ ಕುಳಿತಿದ್ದಾನೆ. ಇದೇ ಗ್ರಾಮದ ಗವಿರಂಗನಾಥ ದೇವಾಲಯವು ಬೆಟ್ಟದ ಮೇಲೆ ಇದೆ. ಈ ದೇವಾಲಯದ ಗರ್ಭಗೃಹದಲ್ಲಿ ರಂಗನಾಥನು ಏಳು ಹೆಡೆಯ ನಾಗನ ಮೇಲೆ ಮಲಗಿದ್ದಾನೆ. ಈ ಶಿಲ್ಪವು ಶ್ರೀದೇವಿ ಭೂದೇವಿ ಸಹಿತವಾದ ಶಿಲ್ಪವಾಗಿದೆ. ವಿಷ್ಣುವು ನಾಲ್ಕು ಕೈಗಳನ್ನು ಹೊಂದಿದ್ದು, ಮೇಲಿನ ಕೈಗಳು ಚಕ್ರ ಮತ್ತು ಶಂಖಗಳಿವೆ. ಕೆಳಗಿನ ಬಲಗೈಯು ತಲೆಗೆ ಆಸರೆಯಾಗಿಟ್ಟುಕೊಂಡಿದೆ. ಎಡಗೈಯು ದೇಹದ ಮೇಲೆ ಉದ್ದವಾಗಿ ಚಾಚಲಾಗಿದೆ. ವಿಷ್ಣುವಿನ ಆಭರಣಗಳಾದ ಕೊರಳಹಾರ, ಕಂಠಿಹಾರ, ಕೇಯೂರು, ಭುಜಬಂಧ, ಬಾಹುವಲಯ, ಯಜ್ಞೋಪವೀತ, ವನಮಾಲಗಳಿವೆ. ಶ್ರೀದೇವಿ ಭೂದೇವಿಯರು ವಿಷ್ಣುವಿನ ಕಾಲಡಿಯಲ್ಲಿ ಕುಳಿತಿದ್ದಾರೆ. ದೇವಿಯರು ಕಿರೀಟ ಮುಕುಟವನ್ನು ತೊಟ್ಟಿದ್ದಾರೆ. ನಾಭಿಯಿಂದ ಕಮಲವು ಹೊರಬಂದಂತೆ ತೋರಲಾಗಿದೆ. ಬ್ರಹ್ಮನು ಕಮಲದಲ್ಲಿ ಪದ್ಮಾಸನದಲ್ಲಿ ಕುಳಿತಿದ್ದಾನೆ.

ಇದೇ ಗ್ರಾಮದ ನವವೃಂದಾವನ ಗಡ್ಡೆಯಲ್ಲಿರುವ ಶಿಲ್ಪದಲ್ಲಿ ರಂಗನಾಥ ಏಳು ಹೆಡೆಯ ನಾಗನ ಮೇಲೆ ಮಲಗಿದ್ದಾನೆ. ವಿಷ್ಣುವು ನಾಲ್ಕು ಕೈಗಳನ್ನು ಹೊಂದಿದ್ದು, ಮೇಲಿನ ಎರಡು ಕೈಗಳಲ್ಲಿ ಶಂಖ ಮತ್ತು ಚಕ್ರಗಳಿವೆ. ಕೆಳಗಿನ ಬಲಗೈಯನ್ನು ತಲೆಗೆ ಆಸರೆಯಾಗಿ ಇಟ್ಟಿದೆ. ಕೆಳಗಿನ ಎಡಗೈಯನ್ನು ಉದ್ದವಾಗಿ ಸೊಂಟದವರೆಗೂ ಚಾಚಿದೆ. ವಿಷ್ಣುವಿನ ಆಭರಣಗಳಾದ ಕೊರಳಹಾರ, ಕಂಠಿಹಾರ, ತೋಳ್ಬಂದಿ, ಕೈಗಡಗ, ಕಾಲುಕಡಗ ಧೋತಿಯನ್ನು ಧರಿಸಿದ್ದಾನೆ. ಕಿರೀಟಮುಕುಟವಿದೆ. ಶ್ರೀದೇವಿ ಶಿಲ್ಪವು ವಿಷ್ಣುವಿನ ಕಾಲ ಅಡಿಯಲ್ಲಿದ್ದು, ನಿಂತಿರುವ ಭಂಗಿಯಲ್ಲಿದೆ. ದೇವಿಯ ಆಭರಣಗಳಾದ ಹಾರಗಳು, ಕೈಬಳೆ, ಕಾಲುಗಡಗ, ಸೀರೆಯನ್ನು ಧರಿಸಿದ್ದಾಳೆ. ವಿಷ್ಣುವಿನ ನಾಭೀಯಿಂದ ಕಮಲವು ಹೊರಬಂದಂತೆ ತೋರುತ್ತದೆ. ಬ್ರಹ್ಮನು ಪದ್ಮಾಸನದಲ್ಲಿ ಕುಳಿತಿದ್ದಾನೆ.

ಕೋನಾಸಾಗರದ ಹೊಲದಲ್ಲಿನ ಬಾವಿಯಲ್ಲಿ ಅನಂತಶಯನ ಶಿಲ್ಪವಿದೆ. ಬಾವಿಯ ಪ್ರವೇಶದ ಎಡಭಾಗದಲ್ಲಿ ದೇವಕೋಷ್ಠಕವಿದ್ದು, ಒಳಭಾಗದಲ್ಲಿ ಅನಂತಶಯನ ವಿಷ್ಣುವಿನ ಶಿಲ್ಪವಿರುತ್ತದೆ. ಆದಿಶೇಷನ ಮೇಲೆ ವಿರಾಜಮಾನವಾಗಿ ಮಲಗಿರುವಂತೆ ವಿಷ್ಣುವಿನ ಶಿಲ್ಪವನ್ನು ಚಿತ್ರಿಸಲಾಗಿದ್ದು, ಆತನ ಹೊಕ್ಕಳುಬಳ್ಳಿಯಿಂದ ಹೊರಟ ಕಮಲದ ಮೇಲೆ ಬ್ರಹ್ಮನ ಶಿಲ್ಪವನ್ನು ಕೆತ್ತಲಾಗಿದೆ. ಈ ಶಿಲ್ಪದ ಹಿಂಬದಿಯಲ್ಲಿ ಲಕ್ಷ್ಮೀ ಮತ್ತು ಪದ್ಮ ನಿಲಯದ ಶಿಲ್ಪಗಳನ್ನು ಚಿತ್ರಿಸಲಾಗಿದೆ. ಈ ಶಿಲ್ಪದ ಎರಡೂ ಬದಿಗಳಲ್ಲಿ ಛಾಮರಧಾರಣಿಯರ ಶಿಲ್ಪಗಳನ್ನು ಕೆತ್ತಲಾಗಿದೆ.

ಕನಕಗಿರಿಯ ಅಚ್ಚಮ್ಮ ಬಾವಿಯ ಮೆಟ್ಟಿಲುಗಳ ಮೂಲಕ ಬಾವಿಯನ್ನು ಪ್ರವೇಶಿಸುತ್ತಿದ್ದಂತೆ ಚಿಕ್ಕ ಗುಡಿ ಇದೆ. ಈ ಗುಡಿಯೊಳಗೆ ಆದಿಶೇಷನ ಮೇಲೆ ಮಲಗಿಕೊಂಡ ಮಹಾವಿಷ್ಣು ಶಿಲ್ಪವಿದೆ. ಆದಿಶೇಷ ತನ್ನ ಏಳು ಹೆಡೆಯನ್ನು ವಿಷ್ಣುವಿನ ತಲೆಯ ಮೇಲೆ ಬಿಚ್ಚಿ ಹಿಡಿದಿದ್ದಾನೆ. ಶ್ರೀದೇವಿ, ಭೂದೇವಿಯರು ಕಾಲನ್ನು ಒತ್ತುತ್ತಿದ್ದಾರೆ. ವಿಷ್ಣುವಿನ ತಲೆಯ ಹಿಂದೆ ನಾರದ ಮತ್ತು ಕಾಲಿನ ಮುಂದೆ ಹಯವದನ ತಂಬುರಿ ವೀಣೆ ಹಿಡಿದು ನಿಂತಿದ್ದಾರೆ. ಚತುರ್ಭುಜನಾದ ವಿಷ್ಣು ತನ್ನ ಕೈಗಳಲ್ಲಿ ಶಂಖ, ಚಕ್ರಗಳನ್ನು ಹಿಡಿದಿದ್ದು, ಬಲ ಹಿಂದಿನ ಕೈಯನ್ನು ತಲೆಗೆ ಆಸರೆಯಾಗಿ ಹಿಡಿದಿದ್ದಾನೆ. ಇನ್ನೊಂದು ಕೈಯನ್ನು ತೊಡೆಯವರೆಗೆ ಚಾಚಿದ್ದಾನೆ. ಉಡುಪು ಧೋತಿ ಇದೆ. ಕಿರೀಟಮುಕುಟ, ಪತ್ರಕುಂಡಲಗಳು, ಕೌಸ್ತುಬಹಾರ, ಮೌಲ್ಯ, ಭುಜಹಾರ, ತೊಳ್ಬಂದಿ, ಮುಂಗೈ ಮಣಿಬಂಧ, ಕಟಿಸೂತ್ರ, ನಡುಪಟ್ಟಿ ಹಾಗೂ ವೈಜಯಂತಿ ಹಾರಗಳಿಂದ ಸುಶೋಭಿತನಾಗಿದ್ದಾನೆ. ವಿಷ್ಣುವಿನ ನಾಭಿಯಿಂದ ಉದ್ಭವಾದ ಕಮಲ ದಂಟು ಮೇಲಕ್ಕೆ ಹೋಗಿದ್ದು ಅದರ ಕೊನೆಯಲ್ಲಿ ಪದ್ಮವಿದೆ. ಪದ್ಮದಲ್ಲಿ ಚತುರ್ಮುಖ ಬ್ರಹ್ಮನಿದ್ದಾನೆ.

ಕ್ರ.ಸಂ.	ಗ್ರಾಮ	ತಾಲೂಕು	ಸ್ಮಾರಕ	ಮೂರ್ತಿಶಿಲ್ಪ ದೊರೆತ ಸ್ಥಳ
೧.	ಆನೆಗೊಂದಿ	ಗಂಗಾವತಿ	ರಂಗನಾಥ ಶಿಲ್ಪ	ರಂಗನಾಥ ದೇವಾಲಯದ ಗರ್ಭಗೃಹ
೨.	ಆನೆಗೊಂದಿ	ಗಂಗಾವತಿ	ರಂಗನಾಥ ಶಿಲ್ಪ	ಗವಿರಂಗನಾಥ ದೇವಾಲಯದ ಗರ್ಭಗೃಹ
೩.	ಆನೆಗೊಂದಿ	ಗಂಗಾವತಿ	ರಂಗನಾಥ ಶಿಲ್ಪ	ನವವೃಂದಾವನ ಗಡ್ಡೆಯ ಚಿಕ್ಕ ದೇವಾಲಯದ ಗರ್ಭಗೃಹ
೪.	ಕನಕಗಿರಿ	ಗಂಗಾವತಿ	ಅನಂತಶಯನ	ಪ್ರಸ್ತುತ ರಾಯಚೂರಿನ ಪೋಲಿಸ ಸೂಪರೆಂಟಿಂಗ ಕಛೇರಿಯ ಆವರಣ
೫.	ಕನಕಗಿರಿ	ಗಂಗಾವತಿ	ಅನಂತಶಯನ	ಅಚ್ಚಮ್ಮನಬಾವಿಯ ಗೋಡೆಗೆ
೬.	ಕೋನಸಾಗರ	ಕೊಪ್ಪಳ	ಅನಂತಶಯನ	ಹೊಲದಬಾವಿ ಬಾವಿಯ ಪ್ರವೇಶದ ಎಡಭಾಗದ ದೇವಕೋಷ್ಠಕದಲ್ಲಿ
೭.	ಪನ್ನಾಪುರ	ಗಂಗಾವತಿ	ಅನಂತಶಯನ	ಕಲ್ಯಾಣಿಯ ಭಿತ್ತಿಯ ಮೇಲಿರುವ ಗೋಡೆ

ಮುಖ್ಯ ಪ್ರಾಣದೇವರು ಶಿಲ್ಪ

ಬೆಣ್ಣೂರಿನ ಬಸವನ ಅಣೆಕಟ್ಟೆಯ ಹತ್ತಿರವಿರುವ ಒಂದು ಸಣ್ಣ ಗುಡಿಯ ಮುಂದೆ ಒಂದು ಸುಂದರ ಮೂರ್ತಿಯಿದೆ. ಅರ್ಧಪರ್ಯಂಕಾಸನದಲ್ಲಿ ಕುಳಿತ ಈ ದೇವರಿಗೆ ಕಿರೀಟಧಾರಿಯಾದ ಐದು ಕಪಿಮುಖಗಳಿವೆ. ನಾಲ್ಕು ಭುಜಗಳಿದ್ದು, ಈಗ ಮುರಿದು ಹೋಗಿವೆ. ಅವನ ಉದ್ದನೆ ಬಾಲವು ಹಿಂದಿನಿಂದ ಮೇಲಕ್ಕೇರಿಸಿ ಇರಿಕೆ ಹಾಕಿದೆ. ಮುಖಗಳ ಹಿಂಭಾಗದಲ್ಲಿ ತನ್ನ ಏಳು ಹೆಡೆಗಳನ್ನು ಬಿಚ್ಚಿ ಹಿಡಿದ ಸರ್ಪವಿದೆ. ಅದರ ಮೇಲ್ಭಾಗಲ್ಲಿ ಕೀರ್ತಿ ಮುಖವಿದೆ. ಐದು ಮುಖಗಳ ಹಣೆಯ ಮೇಲೆ ತ್ರಿನಾಮವಿದೆ. ಎಡತೊಡೆಯ ಮೇಲೆ ಅವನ ಅರ್ಧಾಂಗಿಯ

ಶಿಲ್ಪವಿದ್ದು ಮುಖ ಒಡೆದಿದೆ. ಕಪಿ ಮುಖವನ್ನು ನೋಡಿದಾಕ್ಷಣ ಇದು ಪಂಚಮುಖ ಅಂಜನೇಯ ಮೂರ್ತಿ ಎಂದು ಊಹಿಸಬಹುದು. ಆದರೆ ತಲೆಯ ಮೇಲಿರುವ ಏಳು ಹೆಡೆಯ ಸರ್ಪ ಮತ್ತು ತೊಡೆಯ ಮೇಲಿರುವ ಸ್ತ್ರೀ ವಿಗ್ರಹವು ಈ ಮೂರ್ತಿಯು ವಿಷ್ಣುವಿನ ಒಂದು ಅವತಾರವನ್ನು ಸೂಚಿಸುತ್ತದೆ ಎಂದು ಪುರಾತತ್ವಜ್ಞರಾದ ಅ. ಸುಂದರ ಅವರು ಅಭಿಪ್ರಾಯ ಪಡುತ್ತಾರೆ. ಪುರಾಣಕಥೆಗಳ ಪ್ರಕಾರ ಒಬ್ಬ ಬ್ರಹ್ಮರಾಕ್ಷಸನನ್ನು ಕೊಲ್ಲಲು ವಾಯುದೇವನು(ಅಷ್ಟ ದಿಕ್ಪಾಲಕರಲ್ಲಿ ಒಬ್ಬನಾದ ವಾಯು ಅಲ್ಲ) ಪಂಚಮುಖಿ ಅವತಾರವನ್ನು ತಾಳಿದನಂತೆ. ಅವನ ಪತ್ನಿ ಭಾರತೀದೇವಿ. ಅವನಿಗೆ ಐದು ಮುಖಗಳಿರಬಹುದು. ಅದುದರಿಂದ ಈ ಮೂರ್ತಿಯು ಮದ್ವ ಸಂಪ್ರದಾಯದವರಿಗೆ ಪ್ರಿಯವಾದ ಭಾರತೀರಮಣ ಮುಖ್ಯಪ್ರಾಣ ಮೂರ್ತಿಯಾಗಿರಬೇಕೆಂದು ಅ. ಸುಂದರ ಅವರು ಗುರುತಿಸುತ್ತಾರೆ. ಒಟ್ಟಾರೆ ಹಿಂದೂ ಮೂರ್ತಿ ಶಿಲ್ಪಕ್ಕೆ ಇದು ವಿಜಯನಗರ ಸಂಸ್ಕೃತಿಯ ಕೊಡುಗೆಯೆಂದೇ ಹೇಳಬಹುದು.

ಕ್ರಸಂ.	ಗ್ರಾಮ	ತಾಲೂಕು	ಸ್ಮಾರಕ	ಮೂರ್ತಿಶಿಲ್ಪ ದೊರೆತ ಸ್ಥಳ
೧.	ಬೆನ್ನೂರು	ಕಾರಟಗಿ	ಮುಖ್ಯ ಪ್ರಾಣದೇವರು ಶಿಲ್ಪ	ಬಸವನ ಅಣೆಕಟ್ಟೆಯ ಹತ್ತಿರ ದೇವಾಲಯ ಗರ್ಭಗೃಹ

ಆಂಜನೇಯ ಶಿಲ್ಪ

ಆಂಜನೇಯನು ಭಾರತಾದ್ಯಂತ ಪೂಜಿಸಲ್ಪಡುವ ಸರ್ವವ್ಯಾಪಕತ್ವವನ್ನು ಪಡೆದಿರುವ ದೇವರು. ಈತನನ್ನು ರುದ್ರಾವತಾರಿ, ಸದಾಚಾರದ ಮೂರ್ತಿರೂಪವೆಂದು ಗೌರವಿಸುತ್ತಾರೆ. ಆರೋಗ್ಯ, ಸಂತಾನ ಪ್ರಾಪ್ತಿ, ಭೂತಚೇಷ್ಟೆ ಪರಿಹಾರ, ದುಃಖ, ಹಿಂಸೆಗಳ ನಾಶಕನೆಂದು ಉಪಾಸಿಸಲಾಗುತ್ತದೆ. ಶ್ರೀತತ್ವನಿಧಿಯಲ್ಲಿ ಸ್ಪಟಿಕ ಶಿಲೆಯಂತೆ ಶುಭ್ರವಾಗಿರುವ, ಚಿನ್ನದಂತೆ ಹೊಳೆಯುವ ಎರಡೂ ಕೈಗಳಲ್ಲಿಯೂ ಅಂಜಲೀಬದ್ದನಾಗಿರುವ ಕಿವಿಗಳಲ್ಲಿ ಕುಂಡಲಗಳನ್ನು ಧರಿಸಿರುವಂತೆ ಆಂಜನೇಯ ರೂಪವನ್ನು ಹೇಳಿದೆ.[೨೮]

ಎಮ್ಮಿಗುಡ್ಡದ ಕೋಟೆಯ ಒಳಗೆ ಬಿಳಿಕಣಶಿಲೆಯಲ್ಲಿ ಕೆತ್ತಲಾಗಿರುವ, ಒಂದು ಆಂಜನೇಯ ಶಿಲ್ಪದಲ್ಲಿ ಆಂಜನೇಯನು ಕಾಲುಗಳನ್ನು ಸ್ವಲ್ಪ ಅಗಲಿಸಿ, ಬಲಗೈಯನ್ನು ಮೇಲಕ್ಕೆ ಎತ್ತಿ (ಚಪೇಟ ಹಸ್ತ ಮುದ್ರೆ) ನಿಂತಿದ್ದಾನೆ. ಎಡಗೈಯಲ್ಲಿ ಸೌಗಾಂಧಿಕಾ ಪುಷ್ಪವಿದೆ. ಬಾಲವು ತಲೆಯನ್ನು ದಾಟಿ ಎಡಭಾಗಕ್ಕೆ ಬಾಗಿ ಸುರುಳಿಯಾಕಾರದಲ್ಲಿದೆ. ಈ ಮೂರ್ತಿಯು ಸುಮಾರು ೪ ಅಡಿ ಎತ್ತರದ ಒಂದೇ ಬಂಡೆಯಲ್ಲಿ ಕೆತ್ತಿದ, ಉಬ್ಬು ಶಿಲ್ಪ ಮೂರ್ತಿಯಾಗಿದೆ. ಕಿವಿಯಲ್ಲಿ ಓಲೆ, ಕಾಲಲ್ಲಿ ಕಡಗಗಳಿದ್ದು, ಮೈ ಮೇಲೆ ಮಾಲೆ, ಸೊಂಟಕ್ಕೆ ವಸ್ತ್ರಾಭರಣಗಳಿವೆ. ಕೈಗಳ ತೋಳಲ್ಲಿ ಕಡಗ ಹಾಗೂ ಕೈಗಳಲ್ಲಿ ಕಡಗಗಳಿವೆ. ಆಂಜನೇಯನ ಎಡ ಮತ್ತು ಬಲ ಕಾಲುಗಳ ಕೆಳಗೆ ಪುರುಷ (ಅಕ್ಷಯ ಕುಮಾರ) ಶಿಲ್ಪವಿದೆ. ಸಾಮಾನ್ಯವಾಗಿ ಆಂಜನೇಯವನ್ನು ವಕ್ರವಾಗಿ ತೋರಿಸಲಾಗುತ್ತದೆ. ಆದರೆ ಪ್ರಸ್ತುತ ಶಿಲ್ಪವು ಒಂದು ಬಿಡಿ ಶಿಲ್ಪದಂತೆ ಗೋಚರಿಸುವ ಉಬ್ಬು ಶಿಲ್ಪವಾಗಿದ್ದು. ಈ ಆಂಜನೇಯನನ್ನು

ಸಮಭಂಗಿಯಲ್ಲಿ ನೇರವಾಗಿ ತೋರಿಸಲಾಗಿದೆ. ಹೀಗಾಗಿ ಇದೊಂದು ವಿಶಿಷ್ಟ ರೀತಿಯ ಆಂಜನೇಯನ ಉಬ್ಬು ಶಿಲ್ಪವೆಂದು ಹೇಳಬಹುದು.

ಕೆಂಚನದೋಣಿ ಗ್ರಾಮದ ಹೊರಭಾಗದಲ್ಲಿ ಆಂಜನೇಯ ದೇವಾಲಯವಿದೆ. ಈ ದೇವಾಲಯದ ಗರ್ಭಗೃಹದಲ್ಲಿ ಆಂಜನೇಯನ ಶಿಲ್ಪವಿದೆ. ಈ ಶಿಲ್ಪದಲ್ಲಿ ಆಂಜನೇಯನು ಕಾಲುಗಳನ್ನು ಅಗಲಿಸಿ, ಬಲಗೈಯನ್ನು ಮೇಲಕ್ಕೆ ಎತ್ತಿ ನಿಂತಿದ್ದಾನೆ. ಎಡಗೈಯಲ್ಲಿ ಸೌಗಂಧಿಕ ಪುಷ್ಪವಿದೆ. ಬಾಲವು ತಲೆಯನ್ನು ದಾಟಿ, ಎಡಭಾಗಕ್ಕೆ ಬಾಗಿ ಸುರುಳಿಯಾಕಾರದಲ್ಲಿದೆ. ಈ ಮೂರ್ತಿಯು ಸುಮಾರು ೬ ಅಡಿ ಎತ್ತರದ ಒಂದೇ ಬಂಡೆಯಲ್ಲಿ ಕೆತ್ತಲಾದ ಉಬ್ಬು ಶಿಲ್ಪ ಮೂರ್ತಿಯಾಗಿದೆ. ಕಿವಿಯಲ್ಲಿ ಓಲೆ, ಕಾಲಲ್ಲಿ ಕಡಗಗಳಿದ್ದು, ಮೈ ಮೇಲೆ ಮಾಲೆ, ಸೊಂಟಕ್ಕೆ ವಸ್ತ್ರಾಭರಣಗಳಿವೆ. ಕೈ ತೋಳು ಮತ್ತು ಮುಂಗೈಗಳಲ್ಲಿ ಕಡಗಗಳಿವೆ. ಆಂಜನೇಯನ ಎಡ ಮತ್ತು ಬಲ ಕಾಲುಗಳ ಕೆಳಗೆ ಅಕ್ಷಯ ಕುಮಾರ ಶಿಲ್ಪವಿದೆ. ಸಾಮಾನ್ಯವಾಗಿ ಆಂಜನೇಯನನ್ನು ಬಲಕ್ಕೆ ತಿರುಗಿದ ಮುಖವಾಗಿ ತೋರಿಸಲಾಗುತ್ತದೆ. ಆದರೆ ಪ್ರಸ್ತುತ ಈ ಶಿಲ್ಪವು ಉಬ್ಬು ಶಿಲ್ಪವಾಗಿದ್ದು, ಇಲ್ಲಿ ಆಂಜನೇಯನ ಮುಖವನ್ನು ನೇರವಾಗಿ ತೋರಿಸಲಾಗಿದೆ. ಹೀಗಾಗಿ ಇದೊಂದು ವಿಶಿಷ್ಟ ರೀತಿಯ ಆಂಜನೇಯನ ಉಬ್ಬು ಶಿಲ್ಪವೆಂದು ಹೇಳಬಹುದು.

ಅಗಳಕೆರೆಯ ಹನುಮಂತ ದೇವಾಲಯದ ಗರ್ಭಗೃಹದಲ್ಲಿ ಆಂಜನೇಯ ಶಿಲ್ಪವಿದೆ. ಈ ಶಿಲ್ಪವು ಮುಖವನ್ನು ಎಡಭಾಗಕ್ಕೆ ತಿರುವಿದಂತೆ ಕೆತ್ತಲಾಗಿದೆ. ಬಾಲವು ತಲೆಯ ಮೇಲಿನ ಭಾಗದ ಹತ್ತಿರ ಬಂದಿದೆ. ಬಲಗೈಯನ್ನು ಮೇಲೆ ಎತ್ತಿದ್ದಾನೆ. ಎಡಗೈಯನ್ನು ಸೊಂಟದ ಮೇಲೆ ಇಟ್ಟುಕೊಂಡಿದ್ದಾನೆ. ಹೂವಿನ ಗೊಂಚಲನ್ನು ಇಳಿಬಿಟ್ಟಿದ್ದಾರೆ. ತಲೆಗೆ ಜುಟ್ಟು ಕಟ್ಟಿದೆ. ಕೊರಳಲ್ಲಿ ಪದಕವಿರುವ ಹಾರ, ಬಲ ಕಿವಿಯಲ್ಲಿ ರತ್ನ ಕುಂಡಲವಿದೆ. ಉದರ ಬಂಧವಿದೆ. ತೋಳುಗಳಿಗೆ ತೊಳ್ಬಂದಿಗಳಿವೆ. ಕೊರಳಲ್ಲಿ ಯಜ್ಞೋಪವೀತವಿದೆ. ಕಾಲುಗಳಿಗೆ ಕಾಲುಕಡಗವನ್ನು ಧರಿಸಿದ್ದಾನೆ. ವನಮಾಲದಲ್ಲಿ ಪದಕವನ್ನು ಹೊಂದಿದೆ. ಆಂಜನೇಯನನ್ನು ಚಲಿಸುವ ಭಂಗಿಯಲ್ಲಿ ತೋರಿಸಿದ್ದಾರೆ. ಅಸುರನಾದ ಅಕ್ಷಯ ಕುಮಾರನನ್ನು ಕಾಲ ಅಡಿಯಲ್ಲಿ ತೋರಿಸಲಾಗಿದೆ.

ಕಿಡದಾಳ ಹನುಮಂತ ದೇವಾಲಯದ ಪಕ್ಕದ ಮಂಟಪದಲ್ಲಿ ಆಂಜನೇಯ ಶಿಲ್ಪವಿದೆ. ಆಂಜನೇಯ ಮುಖವನ್ನು ಎಡಭಾಗಕ್ಕೆ ತಿರುಗಿಸಿದೆ. ಆಂಜನೇಯನು ಬಲಗೈಯನ್ನು ಮೇಲೆ ಎತ್ತಿದ್ದಾನೆ. ಬಲಕಿವಿಯ ಪಕ್ಕದಲ್ಲಿ ಚಕ್ರವನ್ನು ತೋರಿಸಿದ್ದಾರೆ. ಎಡಗೈಯನ್ನು ಸೊಂಟದ ಮೇಲೆ ಇಟ್ಟಿದ್ದಾರೆ. ಸೊಂಟದ ಸೊಂಟಪಟ್ಟಿಯಲ್ಲಿ ಚೂರಿಯನ್ನು ಸಿಕ್ಕಿಸಿಕೊಂಡಿದ್ದಾನೆ. ಬಾಲವು ತಲೆಯ ಮೇಲಿನ ಭಾಗದಿಂದ ಎಡಗಡೆಯ ತೋಳಿನ ಹತ್ತಿರ ಬಂದಿದೆ. ಆಭರಣಗಳಾದ ಪದಕವಿರುವ ಹಾರ, ಛನ್ನವೀರವಿದೆ. ಹಿಂಭಾಗದಲ್ಲಿ ಜುಟ್ಟು ಕಟ್ಟಿದೆ. ಕೊರಳ ಹಾರವನ್ನು ಧರಿಸಿದ್ದಾನೆ. ಬಲ ಕಿವಿಯಲ್ಲಿ ರತ್ನ ಕುಂಡಲವಿದೆ. ಉದರ ಬಂಧವಿದೆ. ವನಮಾಲದಲ್ಲಿ ಪದಕವನ್ನು ಹೊಂದಿದೆ. ಕಾಲುಗಳಿಗೆ ಅಂದುಗೆಯನ್ನು ಧರಿಸಿದ್ದಾನೆ. ಕೆಳಭಾಗದಲ್ಲಿ ಅಕ್ಷಯ ಕುಮಾರನನ್ನು ಆಂಜನೇಯನ ಎರಡು ಕಾಲುಗಳ ಮಧ್ಯದಲ್ಲಿ ತೋರಿಸಲಾಗಿದೆ.

ಅಯೋಧ್ಯ ಗ್ರಾಮದಲ್ಲಿರುವ ಗದ್ದೆಯ ಒಂದು ಮಂಟಪದಲ್ಲಿ ಆಂಜನೇಯ ಶಿಲ್ಪವಿದೆ. ಆಂಜನೇಯ ಶಿಲ್ಪಯು ದಕ್ಷಿಣ ದಿಕ್ಕಿಗೆ ಮುಖಮಾಡಿ ಓರೆಯಾಗಿ ನಿಂತಿದ್ದು, ಎಡ ಮತ್ತು ಬಲಕಾಲು ಹಿಂದು ಮುಂದು ಇರುವುದು ಕಂಡುಬರುತ್ತದೆ. ಮುಖವು ಎಡಕ್ಕೆ ತಿರುಗಿದ್ದು, ಕಣ್ಣು ಮುಚ್ಚಿರುವುದು, ಬಾಲವು ತಲೆ ದಾಟಿ ಎಡಭಾಗಕ್ಕೆ ಬಾಗಿ ಸುರುಳಿಯಾಕಾರದಲ್ಲಿದೆ. ಈ ಮೂರ್ತಿಯು ಸುಮಾರು ಐದು ಅಡಿ ಎತ್ತರದ ಒಂದೇ ಬಂಡೆಯಲ್ಲಿ ಕೆತ್ತಲಾಗಿರುವ, ಉಬ್ಬು ಶಿಲ್ಪ ಮೂರ್ತಿಯಾಗಿದೆ. ಕಾಲಲ್ಲಿ ಕಡಗಗಳಿದ್ದು, ಮೈ ಮೇಲೆ ಮಾಲೆ, ಸೊಂಟಕ್ಕೆ ವಸ್ತ್ರಾಭರಣಗಳಿವೆ. ಕೈತೋಳಲ್ಲಿ ಕಡಗ ಹಾಗೂ ಕೈಗಳಲ್ಲಿ ಕಡಗಗಳಿದ್ದು, ಬಲಗೈಯು ಅಭಯ ಹಸ್ತದಲ್ಲಿದೆ. ಎಡಗೈಯು ಮೈಮೇಲಿನ ಮಾಲೆಯನ್ನು ಸೊಂಟದ ಪಕ್ಕದಲ್ಲಿ ಹಿಡಿದು ಕೊಂಡಿದೆ. ಎಡಗೈಯಲ್ಲಿ ಬಾಣವನ್ನು ಹಿಡಿದ್ದಾನೆ. ಕಿವಿಯಲ್ಲಿ ಓಲೆ ಮತ್ತು ತಲೆಯ ಮೇಲೆ ಪೇಟಾದ ಅಲಂಕರಣೆ ಇದೆ. ಆಂಜನೇಯನ ಎಡ ಮತ್ತು ಬಲ ಕಾಲುಗಳ ಮಧ್ಯೆ ಅಕ್ಷಯ ಕುಮಾರ ತನ್ನ ಎರಡು ಕಾಲು ಮತ್ತು ಕೈಗಳನ್ನು ನೆಲಕ್ಕೆ ಊರಿದ ರೀತಿಯಲ್ಲಿ ಚಿತ್ರಣಗೊಂಡಿದೆ. ಈ ಮೂರ್ತಿಯನ್ನು ಕಣಶಿಲೆಯಲ್ಲಿ ಬಹು ಸುಂದರವಾಗಿ ವಸ್ತ್ರಾಭರಣಗಳಿಂದ ಕಂಡರಿಸಲಾಗಿದೆ. ಇದರಿಂದ ಇದು ಅಕ್ಷಯ ಕುಮಾರನನ್ನು ಸಂಹರಿಸುತ್ತಿರುವ ಆಂಜನೇಯ ವೀರಾಂಜನೆಯನ ಶಿಲ್ಪವೆಂದು ಹೇಳಬಹುದು.

ಕೊಪ್ಪಳದಿಂದ ಕಿನ್ನಾಳಿಗೆ ಹೋಗುವ ರಸ್ತೆಯ ಬಲಬದಿಯ ಶಿವ ದೇವಾಲಯದ ಸಭಾಮಂಟಪದಲ್ಲಿ ಆಂಜನೇಯನ ಶಿಲ್ಪವನ್ನು ನಿಲ್ಲಿಸಿದ್ದಾರೆ. ಕ್ರಿ.ಶ. ೧೩–೧೬ನೇ ಶತಮಾನಕ್ಕೆ ಸಂಬಂಧಿಸಿದ ಶಿಲ್ಪವೆಂದು ಅ. ಸುಂದರ ಅವರು ಅಭಿಪ್ರಾಯ ಪಟ್ಟಿದ್ದಾರೆ.[೨೯] ಈ ಶಿಲ್ಪದಲ್ಲಿ ಆಂಜನೇಯನು ಕೈ ಮುಗಿದು ನಿಂತುಕೊಂಡಿದ್ದಾನೆ. ಆಂಜನೇಯ ಮುಖವು ನೇರವಾಗಿದೆ. ಕೊರಳಿಗೆ ಸರ ಮತ್ತು ವನಮಾಲವನ್ನು ಧರಿಸಿದ್ದು ಕೈಗಳಿಗೆ ತೋಳ್ಬಂದಿ ಮತ್ತು ಕಾಲುಗಳಿಗೆ ಖಡ್ಗಗಳನ್ನು ಧರಿಸಿದ್ದಾನೆ. ಆಂಜನೇಯ ಬಾಲವನ್ನು ಬಲಗಡೆಯ ಕಿವಿಯ ಪಕ್ಕದಲ್ಲಿ ತೋರಿಸಿದ್ದಾರೆ. ಈ ಆಂಜನೇಯನ ಮೈತುಂಬೆಲ್ಲಾ ಅಲಂಕರಣವನ್ನು ಮಾಡಿರುವುದನ್ನು ಕಾಣಬಹುದು.

ಬಸವಣ್ಣ ಕ್ಯಾಂಪ ಪರಿಸರದ ಗಿಡದ ಕೆಳಗೆ ಕಟ್ಟೆಯ ಗೋಡೆಗೆ ನಿಲ್ಲಿಸಿದ ಆಂಜನೇಯ ಶಿಲ್ಪವಿದೆ. ಈ ಶಿಲ್ಪದಲ್ಲಿ ಬಲಕೈಯನ್ನು ಮೇಲೆ ಎತ್ತಿದ್ದು, ಎಡಗೈಯನ್ನು ಸೊಂಟದ ಮೇಲೆ ಇಟ್ಟುಕೊಂಡಿದ್ದಾನೆ. ಕೈಗಳಿಗೆ ಕಡಗ ಮತ್ತು ತೋಳ್ಬಂದಿ ಧರಿಸಿದ್ದಾನೆ. ಕೊರಳಲ್ಲಿ ಸರ, ಹಾರ, ವನಮಾಲವನ್ನು ಸೊಂಟಕ್ಕೆ ಸೊಂಟಪಟ್ಟಿಗಳನ್ನು ಮತ್ತು ಕಿವಿಗೆ ಕುಂಡಲವನ್ನು ಧರಿಸಿದ್ದಾನೆ. ಬಾಲವನ್ನು ಬಲಗಡೆಯಿಂದ ಎಡಭುಜದವರೆಗೆ ಕಂಡರಿಸಿದ್ದಾರೆ. ಎರಡು ಕಾಲುಗಳನ್ನು ಅಗಲಿಸಿದ್ದು ಮಧ್ಯೆದಲ್ಲಿ ಅಕ್ಷಯ ಕುಮಾರನ್ನು ತೋರಿಸಿದ್ದಾರೆ.

ಆನೆಗೊಂದಿಯ ಆನಂದ ಸಿದ್ಧದೇವನ ಗುಹೆಯ ಬಳಿಯ ಬಂಡೆಯ ಮೇಲೆ ಆಂಜನೇಯನ ಶಿಲ್ಪವಿದೆ. ಈ ಶಿಲ್ಪವನ್ನು ಗ್ರಾನೈಟ್ ಶಿಲೆಯಲ್ಲಿ ಕಂಡರಿಸಲಾಗಿದೆ. ಎಡಗಾಲನ್ನು ಮುಂದಿಟ್ಟು ನಿಂತಿರುವ ಆಂಜನೇಯ ಶಿಲ್ಪ ದ್ವಿಭಂಗಿಯಲ್ಲಿದೆ. ಬಲಗೈಯನ್ನು ಮೇಲೆತ್ತಿದ್ದು ಅಭಯ ಮುದ್ರೆಯಲ್ಲಿದೆ.

ಬಾಲವು ಆಂಜನೇಯನ ಹಿಂಬದಿ ಮೇಲಿನಿಂದ ಮುಂದೆಬಾಗಿದ್ದು ಸುರಳಿಯಾಕಾರದಲ್ಲಿದೆ. ಆಂಜನೇಯನ ಕೊರಳಲ್ಲಿ ವಿವಿಧ ಹಾರಗಳಿವೆ. ಕರ್ಣಾಭರಣಗಳಿವೆ. ಕಟೀಬಂಧ, ಭುಜಗಳಲ್ಲಿ ಆಭರಣಗಳಿವೆ. ಕೈತೋಳು, ಮುಂಗೈ ಹಾಗೂ ಕಾಲುಗಳಲ್ಲಿ ಕಡಗಾಭರಣಗಳನ್ನು ಧರಿಸಿದೆ. ತಲೆಯ ಹಿಂಬದಿಯಲ್ಲಿ ಕುದಲನ್ನು ಮಡಚಿ ಕಟ್ಟಿದೆ. ಎರಡು ಕಾಲುಗಳ ಮಧ್ಯದಲ್ಲಿ ಅಕ್ಷಯ ಕುಮಾರನು ಮಲಗಿದ್ದು, ಕೈಗಳಲ್ಲಿ ಆಂಜನೇಯನ ಕಣ್ಣಿನ ನೇರದಲ್ಲಿ ಶಿವಲಿಂಗದ ಶಿಲ್ಪವಿರುವುದು ಈ ಶಿಲ್ಪದ ಇನ್ನೊಂದು ವಿಶೇಷ ಬಲಗೈಯಲ್ಲಿ ಕಮಲದ ಮೊಗ್ಗನ್ನು ಹಿಡಿದಿದ್ದಾನೆ.

ಕ್ರಸಂ.	ಗ್ರಾಮ	ತಾಲೂಕು	ಸ್ಮಾರಕ	ಮೂರ್ತಿಶಿಲ್ಪ ದೊರೆತ ಸ್ಥಳ
೧.	ಅಗಳಕೆರೆ	ಕೊಪ್ಪಳ	ಆಂಜನೇಯ ಶಿಲ್ಪ	ಆಂಜನೇಯ ದೇವಾಲಯ ಗರ್ಭಗೃಹ
೨.	ಅಯೋಧ್ಯ	ಕೊಪ್ಪಳ	ಆಂಜನೇಯ ಶಿಲ್ಪ	ಹೊಲದ ಮಂಟಪ
೩.	ಕಿಡದಾಳ	ಕೊಪ್ಪಳ	ಆಂಜನೇಯ ಶಿಲ್ಪ	ಹನುಮಂತ ದೇವಾಲಯ ಪಕ್ಕದಲ್ಲಿ ಮಂಟಪ
೪.	ಕೊಪ್ಪಳ	ಕೊಪ್ಪಳ	ಆಂಜನೇಯ ಶಿಲ್ಪ	ಶಿವದೇವಾಲಯದ ಸಭಾಮಂಟಪ
೫.	ಕೆಂಚನದೋಣಿ	ಕೊಪ್ಪಳ	ಆಂಜನೇಯ ಶಿಲ್ಪ	ಆಂಜನೇಯ ದೇವಾಲಯ ಗರ್ಭಗೃಹ
೬.	ಹೇಮಗುಡ್ಡ	ಕೊಪ್ಪಳ	ಆಂಜನೇಯ ಶಿಲ್ಪ	ಹೇಮಗುಡ್ಡ ಕೋಟೆಯ ಒಳಗೆ ಆವರಣ
೭.	ಬಂಡಿಹರ್ಲಾಪುರ	ಕೊಪ್ಪಳ	ಆಂಜನೇಯ ಶಿಲ್ಪ	ಹನುಮಂತ ದೇವಾಲಯದ ಗರ್ಭಗೃಹ
೮.	ಹನುಮನಹಳ್ಳಿ	ಕೊಪ್ಪಳ	ಆಂಜನೇಯ ಶಿಲ್ಪ	ಅಂಜನಾದ್ರಿ ಬೆಟ್ಟ ಗರ್ಭಗೃಹ
೯.	ಶಿವಪುರ	ಕೊಪ್ಪಳ	ಆಂಜನೇಯ ಶಿಲ್ಪ	ಸೋಮೇಶ್ವರ ಬೆಟ್ಟ ಹತ್ತಿರ ಬಿಡಿಶಿಲ್ಪ
೧೦.	ಸಣ್ಣಾಪುರ	ಕೊಪ್ಪಳ	ಆಂಜನೇಯ ಶಿಲ್ಪ	ದೇವಾಲಯದ ಗರ್ಭಗೃಹ
೧೧.	ಬಂಡಿಬಸಪ್ಪ ಕ್ಯಾಂಪು	ಕೊಪ್ಪಳ	ಆಂಜನೇಯ ಶಿಲ್ಪ	ಬಿಡಿಶಿಲ್ಪ ಮರದ ಕೆಳಗೆ
೧೨.	ಆನೆಗೊಂದಿ	ಗಂಗಾವತಿ	ಆಂಜನೇಯ ಶಿಲ್ಪ	ಆನೆಗೊಂದಿ ಚಿಂತಾಮಣಿ ಮಠದ ಹಿಂದಿನ ಬಂಡಿಯ ಬೆಟ್ಟದಲ್ಲಿ
೧೩.	ಕನಕಗಿರಿ	ಗಂಗಾವತಿ	ಆಂಜನೇಯ ಶಿಲ್ಪ	ಸಂಜೀವಮೂರ್ತಿ ದೇವಾಲಯ ಗರ್ಭಗೃಹ
೧೪.	ಕನಕಗಿರಿ	ಗಂಗಾವತಿ	ಆಂಜನೇಯ ಶಿಲ್ಪ	ಪರತಪಯ್ಯ ದೇವಾಲಯ ಗರ್ಭಗೃಹ
೧೫.	ಕನಕಗಿರಿ	ಗಂಗಾವತಿ	ಆಂಜನೇಯ ಶಿಲ್ಪ	ಎದುರು ಹನುಮಪ್ಪ ದೇವಾಲಯ ಗರ್ಭಗೃಹ
೧೬.	ಕನಕಗಿರಿ	ಗಂಗಾವತಿ	ಆಂಜನೇಯ ಶಿಲ್ಪ	ಎದುರು ಅಗಸಿ ಹನುಮಪ್ಪ ದೇವಾಲಯ ಗರ್ಭಗೃಹ
೧೭.	ಕನಕಗಿರಿ	ಗಂಗಾವತಿ	ಆಂಜನೇಯ ಶಿಲ್ಪ	ಅಗಸಿ ಹನುಮಪ್ಪ ಗರ್ಭಗೃಹ
೧೮.	ಕನಕಗಿರಿ	ಗಂಗಾವತಿ	ಆಂಜನೇಯ ಶಿಲ್ಪ	ತೊಂಡೆತೆವರಪ್ಪ ದೇವಾಲಯ ಗರ್ಭಗೃಹ

೧೯.	ಆನೆಗೊಂದಿ	ಗಂಗಾವತಿ	ಆಂಜನೇಯ ಶಿಲ್ಪ	ಹಗ್ಗಮಾರು ಹನುಮಂತ ದೇವಾಲಯ ಗರ್ಭಗೃಹ
೨೦.	ತಾವರಗೇರಿ	ಕುಷ್ಟಗಿ	ಆಂಜನೇಯ ಶಿಲ್ಪ	ಆಂಜನೇಯ ದೇವಾಲಯ ಗರ್ಭಗೃಹ
೨೧.	ಆನೆಗೊಂದಿ	ಗಂಗಾವತಿ	ಆಂಜನೇಯ ಶಿಲ್ಪ	ನವರಂಗ ದರವಾಜ ರಾಯಚೂರಿನ ಪ್ರಾಚ್ಯ ವಸ್ತುಸಂಗ್ರಹಾಲಯ
೨೨.	ಆನೆಗೊಂದಿ	ಗಂಗಾವತಿ	ಆಂಜನೇಯ ಶಿಲ್ಪ	ನವರಂಗ ದರವಾಜ ರಾಯಚೂರಿನ ಪ್ರಾಚ್ಯ ವಸ್ತುಸಂಗ್ರಹಾಲಯ
೨೩.	ಕಡೇಬಾಗಿಲು	ಗಂಗಾವತಿ	ಆಂಜನೇಯ ಶಿಲ್ಪ	ಗ್ರಾಮದ ಪೂರ್ವಕ್ಕೆ ಬೆಟ್ಟದ ಕೆಳಭಾಗದಲ್ಲಿ ನದಿದಂಡೆ ದ್ವಾರದ ಬಳಿ

ಗರುಡ ಶಿಲ್ಪ

ಗರುಡ ಅಥವಾ ಗರುತಮಾನ್‌ವು ಮೂಲವಾಗಿ ಸೂರ್ಯ ರೂಪಿಸಿದಂತಹ ಪಕ್ಷಿ. ಮಹಾಕಾವ್ಯಗಳು ಮತ್ತು ಪೌರಾಣಿಕ ಸಾಹಿತ್ಯಗಳು "ತರಾಕ್ಸಿಯಾ" ಎಂಬ ಹೆಸರಿನಿಂದ ಕರೆದಿವೆ. ಅನಂತರದ ಅವಧಿಯಲ್ಲಿ ವೇಗವಾಗಿ ಹಾರುವ ಪಕ್ಷಿ ಎಂದು ಗುರುತಿಸಲಾಯಿತು ಮತ್ತು ಇದು ವಿಷ್ಣುವಿನ ವಾಹನ. ದಕ್ಷಿಣದಲ್ಲಿ ಗರುಡ ಎಂಬುದು ವಿಷ್ಣುವಿನ ವಾಹನವಾಗಿತ್ತೆಂದು ಸಂಗಮ ಯುಗದಲ್ಲಿ ಹೇಳಲಾಗಿದೆ. ಒಂದು ಕಥೆಯ ಪ್ರಕಾರ ಇದು ಜನಿಸಿದ್ದು ವಿನತಾ ಎಂಬುವವವಳಿಗೆ. ಇವಳಿಗೆ ಇಬ್ಬರು ಮಕ್ಕಳು. ಕಶ್ಯಪ ಎಂಬುವವನ ಹೆಂಡತಿಗೆ ಅಮೃತಕ್ಕಾಗಿ ದೇವರೊಂದಿಗೆ ಯುದ್ಧ ಮಾಡಿದರ ಬಗ್ಗೆ ಉಲ್ಲೇಖವಿದೆ.[೩೦]

ಆನೆಗೊಂದಿಯ ಗವಿರಂಗನಾಥ ದೇವಾಲಯದ ಆವರಣದ ಚಿಕ್ಕಗುಡಿಯಲ್ಲಿ ಗರುಡ ಶಿಲ್ಪವಿದೆ. ಗರುಡನು ಎಡಗಾಲ ಮಂಡಿಯನ್ನು ನೆಲದ ಮೇಲೆ ಇಟ್ಟು ಬಲಗಾಲವನ್ನು ಹಿಂದೆ ಇಟ್ಟಿರುವನು. ಗರುಡನ ಕೈಗಳು ಅಂಜಲಿ ಮುದ್ರೆಯಲ್ಲಿವೆ. ಭುಜಗಳ ಹಿಂಭಾಗದಲ್ಲಿ ರೆಕ್ಕೆಗಳಿವೆ. ಕೊರಳಲ್ಲಿ ಆಭರಣಗಳಿವೆ. ಭುಜ, ತೊಳು ಮತ್ತು ಮುಂಗಾಲುಗಳಲ್ಲಿಯೂ ಆಭರಣಗಳಿವೆ. ಕರ್ಣಗಳಲ್ಲಿ ಕುಂಡಲಾಭರಣಗಳಿವೆ. ತಲೆಯ ಮೇಲೆ ಕೀರಿಟವಿದೆ. ಮುಖಭಾವ ಸೌಮ್ಯತೆ ಹಾಗೂ ಭಕ್ತಿಪೂರ್ವ ವಿನಯತೆ ಈ ಮೂರ್ತಿ ಶಿಲ್ಪದಲ್ಲಿದೆ.

ಆನೆಗೊಂದಿಯ ರಂಗನಾಥ ದೇವಾಲಯ ಪ್ರಾಕಾರ ಮಂಟಪದ ಏಳನೇ ಕಂಬದಲ್ಲಿ ಗರುಡ ಶಿಲ್ಪವಿದೆ. ಸಮಭಂಗಿಯಲ್ಲಿರುವ ಈ ಶಿಲ್ಪವು ಎರಡು ಕೈಗಳನ್ನು ಹೊಂದಿದ್ದು ಅಂಜಲಿಹಸ್ತದಲ್ಲಿ ಕಿರೀಟಮುಕುಟವನ್ನು ಹೊಂದಿದೆ. ಪಕ್ಕದಲ್ಲಿ ರೆಕ್ಕೆಗಳು ಹರಡಿವೆ.

ಕ್ರಸಂ.	ಗ್ರಾಮ	ತಾಲೂಕು	ಸ್ಮಾರಕ	ಮೂರ್ತಿಶಿಲ್ಪ ದೊರೆತ ಸ್ಥಳ
೧.	ಆನೆಗೊಂದಿ	ಗಂಗಾವತಿ	ಗರುಡ ಶಿಲ್ಪ	ವಿರಂಗನಾಥ ದೇವಾಲಯದ

				ಆವರಣದ ಚಿಕ್ಕಗುಡಿಯಲ್ಲಿ
೨.	ಆನೆಗೊಂದಿ	ಗಂಗಾವತಿ	ಗರುಡ ಶಿಲ್ಪ	ರಂಗನಾಥ ಪ್ರಾಕಾರ ಮಂಟಪದಲ್ಲಿ
೩.	ಕನಕಗಿರಿ	ಕನಕಗಿರಿ	ಗರುಡ ಶಿಲ್ಪ	ಕನಕಾಚಲ ಲಕ್ಷ್ಮೀನರಸಿಂಹ ದೇವಾಲಯದ ಎದುರಿನ ಚಿಕ್ಕ ಗುಡಿಯಲ್ಲಿ

ಸೂರ್ಯ ಶಿಲ್ಪ

ಹಿರೇಜಂತಗಲ್ಲಿನ ಪ್ರಸನ್ನ ವಿರುಪಾಕ್ಷ ದೇವಾಲಯದ ನವರಂಗದಲ್ಲಿರುವ ದೇವಕೋಷ್ಠಕದಲ್ಲಿ ಸೂರ್ಯನ ಶಿಲ್ಪವು ಸಮಭಂಗಿಯಲ್ಲಿ ನಿಂತಿದ್ದು, ಎರಡು ಕೈಗಳಲ್ಲಿ ಪದ್ಮಗಳನ್ನು ಹಿಡಿದ್ದಾನೆ. ಸೂರ್ಯನ ತಲೆಯ ಮೇಲೆ ಕಿರಿಟ ಮುಕುಟ, ಭುಜಕೀರ್ತಿ, ಭುಜಹಾರ, ಮುಣಿಸರ, ಉದರಬಂಧ, ಯಜ್ಞೋಪವೀತ, ತೋಳ್ಬಂದಿ, ಸೊಂಟಪಟ್ಟಿ, ಕಾಲ್ಕಡಗ ಕಚ್ಚೆ ರೀತಿಯಲ್ಲಿ ಧೋತಿಯನ್ನು ಸಹ ಧರಿಸಿದ್ದಾನೆ. ಸೂರ್ಯನ ಎರಡು ಕಾಲುಗಳ ಬದಿಯಲ್ಲಿ ಚಾಮರದಾರಿಗಳಾದ ಉಷಾ, ಪ್ರತ್ಯುಷಾ ಶಿಲ್ಪಗಳಿವೆ. ಇದೆ ದೇವಾಲಯದ ಮಂಟಪದಲ್ಲಿ ಸಮಭಂಗಿಯ ಸ್ಥಾನಿಕ ಸೂರ್ಯನ ಶಿಲ್ಪವಿದೆ. ಈ ಶಿಲ್ಪವು ಎರಡು ಕೈಗಳನ್ನು ಹೊಂದಿದ್ದು, ಎರಡು ಕೈಗಳಲ್ಲಿ ಕಮಲಗಳಿವೆ. ಇದೆ ದೇವಾಲಯದ ಮುಖಮಂಟಪದಲ್ಲಿ ಸೂರ್ಯನ ಶಿಲ್ಪವಿದ್ದು ಪೀಠದ ಮೇಲೆ ಸಮಭಂಗಿಯಲ್ಲಿ ನಿಂತಿದಿದ್ದಾನೆ. ಎರಡು ಕೈಗಳಲ್ಲಿ ಕಮಲವನ್ನು ಹಿಡಿದುಕೊಂಡಿದ್ದಾನೆ. ತಲೆಯ ಮೇಲೆ ಕೀರಿಟವನ್ನು ಧರಿಸಿದ್ದಾನೆ. ಇದೆ ದೇವಾಲಯದ ಅಂತರಾಳದಲ್ಲಿ ಸಮಭಂಗಿಯಲ್ಲಿ ನಿಂತ ಸೂರ್ಯನ ಶಿಲ್ಪವಿದೆ. ಈ ಶಿಲ್ಪದಲ್ಲಿ ಎರಡು ಕೈಗಳನ್ನು ಕಮಲಗಳನ್ನು ಹಿಡಿದುಕೊಂಡಿದ್ದಾನೆ.

ಕ್ರಸಂ.	ಗ್ರಾಮ	ತಾಲೂಕು	ಸ್ಮಾರಕ	ಮೂರ್ತಿಶಿಲ್ಪ ದೊರೆತ ಸ್ಥಳ
೧.	ಹಿರೇಜಂತಗಲ್	ಗಂಗಾವತಿ	ಸೂರ್ಯಶಿಲ್ಪ	ಪ್ರಸನ್ನ ವಿರುಪಾಕ್ಷ ದೇವಾಲಯ ನವರಂಗದಲ್ಲಿರುವ ದೇವಕೋಷ್ಠಕದಲ್ಲಿ
೨.	ಹಿರೇಜಂತಗಲ್	ಗಂಗಾವತಿ	ಸೂರ್ಯಶಿಲ್ಪ	ಪ್ರಸನ್ನ ವಿರುಪಾಕ್ಷ ದೇವಾಲಯ ಮಂಟಪದ ಕಂಬದಲ್ಲಿ

ನರಸಿಂಹ ಶಿಲ್ಪ

ಆನೆಗೊಂದಿಯ ರಂಗನಾಥ ದೇವಾಲಯದಲ್ಲಿರುವ ಮಂಟಪದಲ್ಲಿರುವ ನರಸಿಂಹ ಶಿಲ್ಪವು ಆಸಿನ ಭಂಗಿಯಲ್ಲಿದೆ. ಈ ಶಿಲ್ಪವು ಪೀಠದ ಮೇಲಿದ್ದು, ಮೇಲಿನ ಕೈಗಳಲ್ಲಿ ಶಂಖ, ಚಕ್ರಗಳಿವೆ. ಎಡ, ಬಲ ಕೆಳಗಿನ ಬಲಗೈಯು ವರದ ಮತ್ತು ಅಭಯ ಹಸ್ತಗಳಾಗಿವೆ. ನರಸಿಂಹನು ಕಿರೀಟವನ್ನು ಧರಿಸಿದ್ದು, ಕೊರಳಹಾರ ಮತ್ತು ಕಂಠಹಾರಗಳು ಇವೆ.

ಇದೆ ಗ್ರಾಮದ ರಂಗನಾಥ ದೇವಾಲಯದ ಪ್ರಾಕಾರ ಮಂಟಪದ ಕಂಬದಲ್ಲಿದೆ. ಆಸೀನ ಭಂಗಿಯಲ್ಲಿ ನರಸಿಂಹ ಶಿಲ್ಪವಿದ್ದು ಬಲಗೈಯಲ್ಲಿ ಕ್ರಮವಾಗಿ ಶಂಕ ಮತ್ತು ವರದಹಸ್ತ ಎಡಗೈಯಲ್ಲಿ ಕ್ರಮವಾಗಿ ಚಕ್ರ ಮತ್ತು ಅಭಯ ಹಸ್ತದಲ್ಲಿದೆ. ಮುಖವನ್ನು ಪ್ರಾಣಿಯ ರೂಪದಲ್ಲಿ ತೋರಿಸಿದ್ದಾರೆ.

ಶಿಲ್ಪವು ಪೀಠದ ಮೇಲೆ ಇದೆ. ಇದೇ ರೀತಿಯ ನರಸಿಂಹ ಶಿಲ್ಪವು ಕನಕಗಿರಿಯ ಕನಕಾಚಲ ಲಕ್ಷ್ಮೀನರಸಿಂಹ ದೇವಾಲಯದಲ್ಲಿವೆ.

ಕ್ರಸಂ.	ಗ್ರಾಮ	ತಾಲೂಕು	ಸ್ಮಾರಕ	ಮೂರ್ತಿಶಿಲ್ಪ ದೊರೆತ ಸ್ಥಳ
೧.	ಆನೆಗೊಂದಿ	ಗಂಗಾವತಿ	ನರಸಿಂಹ ಶಿಲ್ಪ	ರಂಗನಾಥ ದೇವಾಲಯ ಮಂಟಪದ ಕಂಬದಲ್ಲಿ
೨.	ಆನೆಗೊಂದಿ	ಗಂಗಾವತಿ	ನರಸಿಂಹ ಶಿಲ್ಪ	ರಂಗನಾಥ ದೇವಾಲಯದ ಪ್ರಾಕಾರ ಮಂಟಪದ ಕಂಬದಲ್ಲಿ
೩.	ಕನಕಗಿರಿ	ಕನಕಗಿರಿ	ನರಸಿಂಹ ಶಿಲ್ಪ	ಕನಕಾಚಲ ಲಕ್ಷ್ಮೀನರಸಿಂಹ ಕಂಬದಲ್ಲಿ

ರಾಮನ ಶಿಲ್ಪ

ಆನೆಗೊಂದಿಯ ರಂಗನಾಥ ದೇವಾಲಯದಲ್ಲಿರುವ ಮಂಟಪದಲ್ಲಿ ಒಂದು ರಾಮನ ಶಿಲ್ಪವಿದೆ. ರಾಮನು ದ್ವಿಭಂಗಿಯಲ್ಲಿದ್ದು, ಬಿಲ್ಲನ್ನು ಮತ್ತು ಬಾಣವನ್ನು ಹಿಡಿದು ಅಂಜಲಿ ಮುದ್ರೆಯಲ್ಲಿದ್ದಾನೆ. ರಾಮನು ಧೋತಿಯನ್ನು ಧರಿಸಿದ್ದು, ನೆರಿಗೆಗಳು ಕಾಲುಗಳವರೆಗೆ ಇಳಿಬಿಟ್ಟದ್ದಾನೆ. ಯಜ್ಞೋಪವೀತ ಕೊರಳಹಾರಗಳಿವೆ.

ರಂಗನಾಥ ದೇವಾಲಯದ ಪ್ರಾಕಾರ ಮಂಟಪದ ಕಂಬವೊಂದರಲ್ಲಿ ರಾಮನ ಶಿಲ್ಪವಿದೆ. ಶಿಲ್ಪದಲ್ಲಿ ರಾಮನ ಮುಖವನ್ನು ನರರೂಪದಲ್ಲಿ ತೋರಿಸಿದ್ದಾರೆ. ಎಡಗೈಯಲ್ಲಿ ಬಿಲ್ಲು ಮತ್ತು ಬಾಣವನ್ನು ಹಿಡಿದಿದ್ದಾರೆ. ಇದೇ ರೀತಿಯ ಶಿಲ್ಪವು ಕನಕಗಿರಿಯ ಕನಕಾಚಲ ಲಕ್ಷ್ಮೀನರಸಿಂಹ ದೇವಾಲಯದಲ್ಲಿವೆ.

ಕ್ರಸಂ.	ಗ್ರಾಮ	ತಾಲೂಕು	ಸ್ಮಾರಕ	ಮೂರ್ತಿಶಿಲ್ಪ ದೊರೆತ ಸ್ಥಳ
೧.	ಆನೆಗೊಂದಿ	ಗಂಗಾವತಿ	ರಾಮನಶಿಲ್ಪ	ರಂಗನಾಥ ಮಂಟಪ ಕಂಬದಲ್ಲಿ
೨.	ಆನೆಗೊಂದಿ	ಗಂಗಾವತಿ	ರಾಮನಶಿಲ್ಪ	ರಂಗನಾಥ ಪ್ರಾಕಾರ ಮಂಟಪ ಕಂಬದಲ್ಲಿ
೩.	ಕನಕಗಿರಿ	ಕನಕಗಿರಿ	ರಾಮನಶಿಲ್ಪ	ಕನಕಾಚಲ ಲಕ್ಷ್ಮೀನರಸಿಂಹ ಮಹಾ ರಂಗಮಮಟಪ ಕಂಬದಲ್ಲಿ

ಶಾಕ್ತ ಶಿಲ್ಪಗಳು

ಮಹಿಷಾಸುರ ಮರ್ಧಿನಿ ಶಿಲ್ಪ

ದುರ್ಗಾದೇವಿಯು ಮಹಿಷವನ್ನು ಹೆದರಿಸಿ ಕೊಲ್ಲುತ್ತಿರುವಂತೆ, ಸಿಂಹವಾಹಿನಿಯಾಗಿರುವಂತೆ ದುರ್ಗೆಯನ್ನು ಚಿತ್ರಿಸಿರುತ್ತಾರೆ. ಪ್ರಸನ್ನ ವನದುರ್ಗೆಯಾದರೆ ಮಹಿಷದ ತಲೆಯ ಮೇಲೆ ನಿಂತಿರುತ್ತಾಳೆ. ಜ್ವರ, ಸರ್ಪ, ಪಿಶಾಚಿಗಳಿಂದ ಬಾಧೆಯಿದ್ದರೆ ಅಥವಾ ಶತ್ರುಶಾಂತಿಗಾಗಿ ವನದುರ್ಗಾ ಪೂಜೆ ಮಾಡಬೇಕೆಂದು ಪ್ರಪಂಚಸಾರ ಸಂಗ್ರಹ ನಿರ್ದೇಶಿಸಿದೆ.[೩೧]

ಹಿರೇಜಂತಗಲ್ಲಿನ ಪ್ರಸನ್ನ ವಿರುಪಾಕ್ಷ ದೇವಾಲಯದ ನವರಂಗದ ದೇವಕೋಷ್ಠದ ಗೂಡಿನಲ್ಲಿ

ಮಹಿಷಾಸುರ ಮರ್ಧಿನಿಯ ಶಿಲ್ಪವಿದೆ. ದೇವಿಯು ಚತುರ್ಭುಜಗಳಾಗಿದ್ದು ಹಿಂದಿನ ಕೈಗಳಲ್ಲಿ ಶಂಖ, ಚಕ್ರ ಮುಂದಿನ ಕೈಗಳಲ್ಲಿ ತ್ರಿಶೂಲ, ಧನಸ್ಸುಗಳನ್ನು ಹಿಡಿದು, ಬಲಗಾಲನ್ನು ಮಹಿಷಾಸುರನ ಮೇಲಿರಿಸಿ ಅವನಿಗೆ ತ್ರಿಶೂಲದಿಂದ ಚುಚ್ಚಿ ಸಂಹರಿಸುತ್ತಿದ್ದಾಳೆ. ದೇವಿಯ ಕಿವಿಯಲ್ಲಿ ಪತ್ರಕುಂಡಲಗಳು, ಕೊರಳಲ್ಲಿ ಕಂಠಿಹಾರ, ತೋಳ್ಬಂದಿ, ಕಂಕಣ, ಕಾಲ್ಕಡಗ, ಪಾದಸರಗಳಿವೆ. ತಲೆಯ ಮೇಲೆ ಕಿರೀಟ ಮುಕುಟವಿದೆ. ಮಹಿಷನ ದೇಹದಿಂದ ರಾಕ್ಷಸನು ಹೊರಬರುತ್ತಿರುವಂತ್ತಿದೆ. ಕನಕಗಿರಿಯ ಮಹಿಷಾಸುರಮರ್ಧಿನಿ ದೇವಾಲಯದ ಗರ್ಭಗೃಹದಲ್ಲಿ ಮಹಿಷಾಸುರ ಮರ್ಧಿನಿಯ ಶಿಲ್ಪವಿದೆ. ದೇವಿಯು ಮಹಿಷ ರೂಪದಲ್ಲಿರುವ ಅಸುರನನ್ನು ಸಂಹರಿಸುತ್ತಿರುವ ಚತುರ್ಭುಜ ದೇವಿಯು ಹಿಂದಿನ ಕೈಗಳಲ್ಲಿ ಬಲಗೈಯಲ್ಲಿ ಚಕ್ರ, ಎಡಗೈಯಲ್ಲಿ ಶಂಖಗಳಿವೆ. ಬಲಗಾಲು ಮಹಿಷನ ಮೇಲೆ ಮೆಟ್ಟಿದೆ. ಮಹಿಷ ದೇಹದಿಂದ ಹೊರಬರುತ್ತಿರುವ ಅಸೂರನ ತಲೆಯನ್ನು ಒತ್ತಿಹಿಡಿದು (ಎಡ ಮುಂದಿನ ಕಾಲು) ತ್ರಿಶೂಲದಿಂದ ಚುಚ್ಚಿದ್ದಾಳೆ. (ಬಲ ಮುಂದಿನ ಕೈ), ದೇವಿಯು ಕುಚಬಂಧ, ಸೀರೆಯ ಉಡುಗೆಯಿಂದಲೂ, ಕಿರೀಡಮುಕುಟ, ಪತ್ರಕುಂಡಲ, ಕಂಠಿ ಹಾರ, ಭುಜಹಾರ, ತೊಳ್ಬಂದಿ. ಕಂಕಣ ಕಾಲ್ಕಡಗ, ಪಾದಸರಗಳಿಂದ ಅಲಂಕೃತಳಾಗಿದ್ದಾಳೆ.

ಕ್ರಸಂ.	ಗ್ರಾಮ	ತಾಲೂಕು	ಸ್ಮಾರಕ	ಮೂರ್ತಿಶಿಲ್ಪ ದೊರೆತ ಸ್ಥಳ
೧.	ಹಿರೇಜಂತಗಲ್ಲು	ಗಂಗಾವತಿ	ಮಹಿಷಾಸುರ ಮರ್ಧಿನಿ ಶಿಲ್ಪ	ಪ್ರಸನ್ನ ವಿರುಪಾಕ್ಷ ನವರಂಗದ ದೇವಕೋಷ್ಠದಲ್ಲಿ
೨.	ಕನಕಗಿರಿ	ಕನಕಗಿರಿ	ಮಹಿಷಾಸುರ ಮರ್ಧಿನಿ ಶಿಲ್ಪ	ಮಹಿಷಾಸುರ ಮರ್ಧಿನಿ ದೇವಾಲಯದ ಗರ್ಭಗೃಹ
೩.	ಎಮ್ಮಿಗುಡ್ಡ	ಗಂಗಾವತಿ	ಮಹಿಷಾಸುರ ಮರ್ಧಿನಿ ಶಿಲ್ಪ	ಮಹಿಷಾಸುರ ಮರ್ಧಿನಿ ದೇವಾಲಯದ ಗರ್ಭಗೃಹ

ಭೈರವಿ ಶಿಲ್ಪ

ಕನಕಗಿರಿಯ ರಾಮದೇವರ ಗುಡಿಯ ಗರ್ಭಗೃಹದಲ್ಲಿರುವ ಭೈರವಿಯು ಚತುರ್ಭುಜೆಯಾಗಿದ್ದು, ಸವ್ಯ ಲಲಿತಾಸನದಲ್ಲಿ ಅಸೀನಳಾಗಿದ್ದಾಳೆ. ಕ್ರಮವಾಗಿ ಹಿಂದಿನ ಕೈಗಳಲ್ಲಿ ತ್ರಿಶೂಲ, ಡಮರುಗ, ಮುಂದಿನ ಕೈಗಳಲ್ಲಿ ಖಡ್ಗ, ಪಾನಪಾತ್ರೆಗಳಿವೆ. ದೇವಿಯು ಕಿರೀಟಮುಕುಟ, ಪತುಕುಂಡಲ, ಕೊರಳಹಾರ ಮುಂತಾದ ಆಭರಣಗಳಿವೆ. ಉಡುಪು ಸೀರೆ ಇದೆ. ಇದೇ ರೀತಿಯ ಶಿಲ್ಪವು ಕೆರೆಹಳ್ಳಿಯ ವೀರಭದ್ರ ದೇವಾಲಯದ ಹೊರಭಾಗದಲ್ಲಿದೆ.

ಕನಕಗಿರಿಯ ಕನಕಾಚಲಪತಿ ದೇವಾಲಯದ ಮುಂದಿನ ಪ್ರಾಕಾರ ಮಂಟಪದಲ್ಲಿ ಲಕ್ಷ್ಮೀಯ ಶಿಲ್ಪವಿದೆ. ಶಿಲ್ಪವು ಪದ್ಮಾಸನದಲ್ಲಿದ್ದು ಚತುರ್ಭುಜಗಳಿವೆ. ಹಿಂದಿನ ಕೈಗಳಲ್ಲಿ ಪದ್ಮಗಳಿವೆ. ಮುಂದಿನ ಕೈಗಳು ಅಭಯ ಮತ್ತು ವರದ ಮುದ್ರೆಯಲ್ಲಿವೆ. ಕರಿಡಮುಕುಟ, ಪತ್ರಕುಂಡಲ ಹಾರ, ಬುಜಕೀರ್ತಿ, ಭುಜಹಾರ, ಕೈಕಡಗ, ಕಾಲ್ಕಡಗ, ವೈಜಯಂತಿಹಾರ ಮುಂತಾದ ಆಭರಣಗಳು ಧರಿಸಿದ್ದಾಳೆ.

ಉಡುಪು ಕುಟಬಂಧ ಮತ್ತು ಸೀರೆಗಳಿವೆ. ಸೀರೆಯ ನೆರಿಗೆಗಳು ಸ್ಪಷ್ಟವಾಗಿ ಇಳಿಬಿದ್ದಂತೆ ಬಿಡಿಸಲಾಗಿದೆ.

ಕ್ರಸಂ.	ಗ್ರಾಮ	ತಾಲೂಕು	ಸ್ಮಾರಕ	ಮೂರ್ತಿಶಿಲ್ಪ ದೊರೆತ ಸ್ಥಳ
೧.	ಕನಕಗಿರಿ	ಕನಕಗಿರಿ	ಭೈರವಿ ಶಿಲ್ಪ	ರಾಮದೇವರ ಗುಡಿ ಗರ್ಭಗೃಹ
೨.	ಕನಕಗಿರಿ	ಕನಕಗಿರಿ	ಭೈರವಿ ಶಿಲ್ಪ	ಕನಕಾಚಲ ಲಕ್ಷ್ಮೀನರಸಿಂಹ ಪ್ರಾಕಾರ ಮಂಟಪ

ಗಜಲಕ್ಷ್ಮಿ ಶಿಲ್ಪ

ಕನಕಗಿರಿಯ ಗಜಲಕ್ಷ್ಮೀ ದೇವಾಲಯದ ಗರ್ಭಗೃಹದಲ್ಲಿ ಲಕ್ಷ್ಮೀ ಶಿಲ್ಪವು ಪದ್ಮಾಸನದಲ್ಲಿದ್ದು, ಅವಳ ಎರಡು ಬದಿಯಲ್ಲಿ ನಿಂತಿರುವ ಆನೆಗಳಿವೆ. ಲಕ್ಷ್ಮೀಯ ತಲೆಯ ಮೇಲೆ ಕುಂಬಗಳಿಂದ ಅಭಿಷೇಕ ಗೈಯುತ್ತಲಿವೆ. ಲಕ್ಷ್ಮೀ ಶಿಲ್ಪಕ್ಕೆ ಚತುರ್ಭುಜಗಳಿದ್ದು, ಹಿಂದಿನ ಕೈಗಳಲ್ಲಿ ಕಮಲಗಳು ಮುಂದಿನೆರಡು ಕೈಗಳು ಅಭಯ ಮತ್ತು ವರದ ಮುದ್ರೆಗಳಲ್ಲಿವೆ. ಕಿರೀಟಮುಕುಟ, ಪುಷ್ಪಕುಂಡಲ, ಭುಜಕೀರ್ತಿ, ಭುರ್ಜಹಾರ, ಪದಕಹಾರ, ಮಣಿಸರ (ಕುಚದ್ವಯಗಳ ಮಧ್ಯ ಇಳಿಬಿದ್ದ ಹಾರ) ಕೈಕಡಗ, ಕಾಲ್ಕಡಗ, ವೈಜಯಂತಿಹಾರಗಳಿಂದ ಅಲಂಕೃತಳಾಗಿದ್ದಾಳೆ. ಉಡುವು ಕುಚಬಂಧ, ಸೀರೆಗಳಿವೆ. ವೈಜಯಂತಿಹಾರ ಪುಷ್ಪಗಳ ಹಾರದಂತೆ ಆಕರ್ಷಕವಾಗಿದೆ. ಗಜಲಕ್ಷ್ಮೀಯ ಶಿಲ್ಪವು ಸಾಮಾನ್ಯವಾಗಿ ದೇವಾಲಯದ ಮುಂದೆ, ಊರಮಧ್ಯದಲ್ಲಿ ದೊರೆಯುತ್ತವೆ.

ಕ್ರಸಂ.	ಗ್ರಾಮ	ತಾಲೂಕು	ಸ್ಮಾರಕ	ಮೂರ್ತಿಶಿಲ್ಪ ದೊರೆತ ಸ್ಥಳ
೧.	ಕನಕಗಿರಿ	ಕನಕಗಿರಿ	ಗಜಲಕ್ಷ್ಮೀ ಶಿಲ್ಪ	ಗಜಲಕ್ಷ್ಮೀ ದೇವಾಲಯ ಗರ್ಭಗೃಹ
೨.	ಹಳೇಮುಸ್ತೂರು	ಗಂಗಾವತಿ	ಗಜಲಕ್ಷ್ಮೀ ಶಿಲ್ಪ	ಬಿಡಿ ಶಿಲ್ಪ ಆಂಜನೇಯ ದೇವಾಲಯದ ಹತ್ತಿರ
೩.	ಕೆರೆಹಳ್ಳಿ	ಕೊಪ್ಪಳ	ಗಜಲಕ್ಷ್ಮೀ ಶಿಲ್ಪ	ವೀರಭದ್ರ ದೇವಾಲಯದ ಆವರಣ
೪.	ಅಗಳಕೇರೆ	ಕೊಪ್ಪಳ	ಗಜಲಕ್ಷ್ಮೀ ಶಿಲ್ಪ	ವೀರಭದ್ರ ದೇವಾಲಯದ ಮುಂದೆ

೪.೨ ಲೌಕಿಕ ಶಿಲ್ಪಗಳು

ನೃತ್ಯ ಶಿಲ್ಪಗಳು

ಆನೆಗೊಂದಿಯ ಹುಚ್ಚಪ್ಪಯ್ಯನ ಮಠದಲ್ಲಿರುವ ಮಂಟಪದ ಮೇಲ್ಛಾವಣಿಯಲ್ಲಿರುವ ನೃತ್ಯ ಮಾಡುವ ಶಿಲ್ಪ ಫಲಕವನ್ನು ನಾಗರಾಜಪ್ಪ ಎಸ್. ಅವರು ರೇಚಿತನಿಕುಟ್ಟಿತ ಕರಣದಲ್ಲಿರುವ ನರ್ತಕಿಯ ನರ್ತನದ ಫಲಕ[೨] ಎಂದು ಗುರುತಿಸಿದ್ದಾರೆ. ನರ್ತಕಿಯು ನೆಲವನ್ನು ಬಡಿಯಲು ಬಲಗಾಲನ್ನು ಮೇಲೆತ್ತಿರುವ ಮತ್ತು ಎಡಗಾಲನ್ನು ನೆಲದ ಮೇಲೆ ಊರಿದ್ದಾಳೆ. ನರ್ತಕಿಯು ಬಲಗೈ ರೇಚಿತದಲ್ಲಿ ಎಡಗೈ ಡೋಲಹಸ್ತದಲ್ಲಿದೆ. ನರ್ತಕಿಯು ಚಲ್ಲಣವನ್ನು ತೊಟ್ಟಿದ್ದಾಳೆ. ರಾಜಪ್ರಮುಖನು ಬಲಗೈ ಸೂಚಿಮುದ್ರೆಯಲ್ಲಿರುವಂತೆ ತೋರಿಸಿದ್ದು, ಎಡಕೈಯಲ್ಲಿ ಬಹುಶಃ ಹೂವಿನ ಗುಚ್ಛ ಹಿಡಿದಿದ್ದಾನೆ. ತಲೆಗೆ ಕುಲಾಯಿ ತೊಟ್ಟಿರುವ ರಾಜನು ವಿವಿಧ ಆಭರಣಗಳನ್ನು ಧರಿಸಿದ್ದಾನೆ.

ಪೀಠದ ಮೇಲೆ ಆಸೀನವಾಗಿರುವ ರಾಜಪ್ರಮುಖನು ತನ್ನ ಬಲಗಾಲನ್ನು ಪೀಠದಿಂದ ಇಳಿಬಿಟ್ಟು ಕುಳಿತ್ತಿದ್ದಾನೆ. ರಾಜ ಪ್ರಮುಖನ ಚಿತ್ತ ನರ್ತಕಿಯ ನರ್ತನದ ಮೇಲಿದೆ. ರಾಜನ ಹಿಂಬದಿಯಲ್ಲಿ ಮೂರು ಜನ ಸ್ತ್ರೀಯರು ನಿಂತುಕೊಂಡಿದ್ದಾರೆ. ಎಡಗೈಗಳು ಕಟ್ಯಾವಲಂಬಿತವಾಗಿವೆ. ಒಬ್ಬ ಸ್ತ್ರೀಯು ಬಲಕೈಯನ್ನು ಇಳಿಬಿಟ್ಟಿದ್ದು, ಇನ್ನೂ ಇಬ್ಬರು ಸ್ತ್ರೀಯರು ಕೈಗಳನ್ನು ತೋರಪಡಿಸಿಲ್ಲ. ಈ ಮೂರು ಜನ ಸ್ತ್ರೀಯರು ವಸ್ತ್ರ ಮತ್ತು ವಿವಿಧ ಆಭರಣಗಳನ್ನು ಧರಿಸಿದ್ದಾರೆ. ಮೂರು ಜನ ಸ್ತ್ರೀಯರು ನೃತ್ಯ ವೀಕ್ಷಣೆಯಲ್ಲಿ ಮಗ್ನರಾಗಿದ್ದಾರೆ. ಇನ್ನೊಬ್ಬ ನರ್ತಕಿಯು ತನ್ನ ಎರಡು ಕೈಗಳನ್ನು ಮುಂದೆ ಚಾಚಿದ್ದು, ಕಾಲುಗಳನ್ನು ಎಡಗಾಲನ್ನು ಮುಂದೆ ಚಾಚಿದ್ದು, ಬಲಗಾಲನ್ನು ಹಿಂದ್ದೆ ಚಲಿಸುವ ಭಂಗಿಯಲ್ಲಿಟ್ಟಿದ್ದಾಳೆ. ಮೊಣಕಾಲುವರೆಗೂ ಬಟ್ಟೆ ಧರಿಸಿದ್ದಾಳೆ. ವಿವಿಧ ಆಭರಣಗಳನ್ನು ಧರಿಸಿದ್ದಾಳೆ. ಇದರ ಪಕ್ಕದಲ್ಲಿ ಮೃದಂಗವನ್ನು ನುಡಿಸುತ್ತಿರುವ ವ್ಯಕ್ತಿಯನ್ನು ಚಿತ್ರಿಸಿದ್ದಾರೆ. ತಲೆಗೆ ಕುಲಾಯಿಯನ್ನು ಧರಿಸಿದಿದ್ದು, ಮೈತುಂಬೆಲ್ಲ ಅಲಂಕಾರವನ್ನು ಮಾಡಿಕೊಂಡಿದ್ದಾನೆ. ಇವರ ಪಕ್ಕದಲ್ಲಿ ತ್ರಿವಳ ಮತ್ತು ತಾಳವನ್ನು ನುಡಿಸುವ ವ್ಯಕ್ತಿಯನ್ನು ಅವುಗಳನ್ನು ನುಡಿಸುವುದರಲ್ಲಿ ತಲ್ಲಿನನಾಗಿರುವುದನು ಕಾಣಬಹುದು. ಇಬ್ಬರು ಹಾಡುಗಾರ್ತಿಯರನ್ನು ತೋರಿಸಿದ್ದ ಅದರಲ್ಲಿ ಒಬ್ಬ ಹಾಡುಗಾರ್ತಿಯು ಕಿನ್ನರಿ ನುಡಿಸುತ್ತಾ ಹಾಡುತ್ತಿದ್ದಾಳೆ. ಇಬ್ಬರು ಹಾಡುಗಾರ್ತಿಯರನ್ನು ವಿವಿಧ ಆಭರಣ ಮತ್ತು ಅಲಂಕರಣವನ್ನು ಮಾಡಿಕೊಂಡಿರುವುದನ್ನು ಕಾಣಬಹುದು. ಇದೆ ತರ ಶಿಲ್ಪವನ್ನು ಹಂಪಿಯ ವಿರುಪಾಕ್ಷ ದೇವಾಲಯದ ಮಹಾಮಂಟಪದ ಕಂಬವೊಂದರಲ್ಲಿ ಕಾಣಬಹುದು.

ಆನೆಗೊಂದಿಯ ಉತ್ತರ ದಿಕ್ಕಿಗಿರುವ ಕೋಟೆಯ ಬಳಿಯ ಆಂಜನೇಯ ದೇವಾಲಯದ ಕಂಬದಲ್ಲಿ ನೃತ್ಯಗಾರ್ತಿಯ ಶಿಲ್ಪವಿದೆ. ನೃತ್ಯದಲ್ಲಿ ತಲ್ಲಿನವಾಗಿರುವ ನರ್ತಕಿಗೆ ಮದ್ದಳೆಯ ವಾದ್ಯಗಾರ ನೆರವಾಗಿದ್ದು, ವಾದನದಲ್ಲಿ ನಿರತನಾಗಿದ್ದಾನೆ. ಎಡಗೈ ಸಿಂಹಮುಖಹಸ್ತ ಮಾಡಿ, ಬಲಗೈಯಲ್ಲಿ ಕುಡುಪು ಹಿಡಿದ ನರ್ತಕಿ ಎಡಗಾಲನ್ನು ವಾದಕನ ಮೇಲಿಟ್ಟು ಕುಡುಪನ್ನು ವಾದ್ಯದ ಮೇಲಿಟ್ಟಿದ್ದಾಳೆ. ಕಾಸೆಚಲ್ಲಣ ತೊಟ್ಟಿರುವ ನರ್ತಕಿಯ ಶಿಲ್ಪದ ಮೇಲೆ ಸುಣ್ಣದ ಲೇಪನವಿರುವುದರಿಂದ ಆಭರಣಗಳಲ್ಲಿ ಸ್ಪಷ್ಟತೆ ಕಾಣುತ್ತಿಲ್ಲ. ಕುಡುಪನ್ನು ಹಿಡಿದು ನರ್ತನ ಮಾಡುತ್ತಿರುವ ನರ್ತಕಿಯ ಶಿಲ್ಪವು ಹಂಪಿ ಪರಿಸರದಲ್ಲಿ ದೊರೆತಿರುವ ಏಕೈಕ ಶಿಲ್ಪ ಎಂಬುದು ಗಮನೀಯ.[೩೩]

ರಾಯಚೂರಿನ ನವರಂಗ ದರ್ವಾಜನಲ್ಲಿರುವ ಆನೆಗೊಂದಿಯ ನೃತ್ಯ ಮಾಡುವತ್ತಿರುವ ಶಿಲ್ಪದಲ್ಲಿ ಇಬ್ಬರು ಸ್ತ್ರೀಯರು ನೃತ್ಯವನ್ನು ಮಾಡುತ್ತಿದ್ದಾರೆ. ಇಬ್ಬರು ನರ್ತಕಿಯರ ಬಲಗೈಯನ್ನು ಮೇಲೆ ಎತ್ತಿದ್ದು ಯಾವ ವಸ್ತುವೊಂದನ್ನು ಹಿಡಿದುಕೊಂಡಿದ್ದಾರೆ ಎಂಬುದು ಸ್ಪಷ್ಟವಾಗುತ್ತಿಲ್ಲ. ಎಡಗೈಯನ್ನು ಎಡಗಾಲಿನ ಮೊಣಕಾಲಿನ ಮೇಲೆ ಇಟ್ಟುಕೊಂಡಿದ್ದಾರೆ. ಚಲ್ಲಣ ತೊಟ್ಟಿರುವ ನರ್ತಕಿಯ ಕೇಶರಾಶಿಯನ್ನು ಮುಡಿ ಕಟ್ಟಿದ್ದಾಳೆ. ನರ್ತಕಿಯರು ಆಭರಣಗಳನ್ನು ಧರಿಸಿರುವವರು ಇಬ್ಬರು ಸ್ತ್ರೀಯರಲ್ಲಿ ಒಬ್ಬ ಸ್ತ್ರೀಯ ಮುಖವು ಭಗ್ನಗೊಂಡಿದೆ.

ರಾಯಚೂರಿನ ನವರಂಗ ದರ್ವಾಜನಲ್ಲಿ ಆನೆಗೊಂದಿಯ ರಾಜ ಪ್ರಮುಖ ನೃತ್ಯವನ್ನು

ವೀಕ್ಷಿಸುತ್ತಿರುವ ಶಿಲ್ಪ ಫಲಕವಿದೆ. ಈ ಶಿಲ್ಪದಲ್ಲಿ ರಾಜ ಪ್ರಮುಖನು ಪೀಠದ ಮೇಲೆ ಕುಳಿತಿದ್ದಾನೆ. ನರ್ತಕಿಯು ಊರ್ಧ್ವಜಾನು ಕರಣದಲ್ಲಿದ್ದಾಳೆ. ಇವಳು ಬಲಗಾಲುವನ್ನು ಮೇಲೆ ಎತ್ತಿದ್ದು ಬಲಗೈಯನ್ನು ಮುಂದೆ ಚಾಚಿದ್ದಾಳೆ. ಎಡಗಾಲನ್ನು ನೆಲಕ್ಕೆ ಊರಿದ್ದು, ಎಡಗೈಯನ್ನು ಮೇಲೆ ಎತ್ತಿದ್ದಾಳೆ. ಎಡಗಾಲನ್ನು ಮುಖದವರೆಗೂ ಎತ್ತಿದ್ದಾಳೆ. ನೃತ್ಯಗಾರ್ತಿಯು ನೇರಿಗೆಯ ಸೀರೆಯನ್ನು ತೊಟ್ಟಿದ್ದಾಳೆ. ರಾಜಪ್ರಮುಖನು ಎಡಗೈ ಸೂಚಿಮುದ್ರೆಯಲ್ಲಿರುವಂತೆ ತೋರಿಸುತ್ತಿದ್ದಾನೆ. ಅರಸನು ಬಲಗೈಯನ್ನು ಮೊಣಕಾಲಗಳ ಮೇಲಿಂದ ಇಳಿಬಿಟ್ಟಿದ್ದಾನೆ. ರಾಜಪ್ರಮುಖನು ವಿವಿಧ ಆಭರಣಗಳನ್ನು ಧರಿಸಿದ್ದಾನೆ. ಅರಸನ ಹಿಂದೆ ರಾಜ ಪ್ರಮುಖ ಸ್ತ್ರೀಯು ನಿಂತಿದ್ದು ಅವಳು ಬಲಗೈಯನ್ನು ಮುಂದೆ ಚಾಚಿದ್ದು, ಎಡಗೈಯನ್ನು ಸೊಂಟದ ಮೇಲೆ ಇಟ್ಟುಕೊಂಡಿದ್ದಾಳೆ. ಇವಳು ಧರಿಸಿರುವ ವಸ್ತ್ರ ಮತ್ತು ಆಭರಣಗಳು ಮತ್ತು ನಿಂತ ಭಂಗಿಯನ್ನು ನೋಡಿದ್ದಾಗ ರಾಜ ಪ್ರಮುಖ ಸ್ತ್ರೀಯೆಂದು ಗುರುತಿಸಬಹುದು. ಇಬ್ಬರು ನೃತ್ಯ ನೋಡುವುದರಲ್ಲಿ ಮಗ್ನನಾಗಿವುದನ್ನು ಕಾಣುತ್ತೇವೆ. ಆದರೆ ರಾಜ ಪ್ರಮುಖಳ ಮುಖವು ಭಗ್ನವಾಗಿರುವುದನ್ನು ಕಾಣಬಹುದು.

ಕನಕಗಿರಿಯ ವೆಂಕಟಪತಿ ಬಾವಿಯ ಬಾಲ್ಕನಿಯಲ್ಲಿ ಶಿಲ್ಪ ಫಲಕ ಇದೆ. ಇಲ್ಲಿ ಇಬ್ಬರು ನರ್ತಕಿಯರು ನರ್ತನ ಮಾಡುತ್ತಿದ್ದಾರೆ. ಚಲ್ಲಣ ತೊಟ್ಟ ನರ್ತಕಿಯು ಬಲಗಾಲು ಮತ್ತು ಬಲಗೈಯನ್ನು ಮೇಲೆ ಎತ್ತಿ ನರ್ತನ ಮಾಡುತ್ತಾಳೆ. ಮತ್ತೊಬ್ಬ ನರ್ತಕಿಯು ತನ್ನ ಎರಡು ಕೈಗಳನ್ನು ಎದೆಯ ಮುಂಭಾಗದಲ್ಲಿದ್ದು ನೃತ್ಯದ ಭಂಗಿಯಲ್ಲಿದೆ. ಈ ನರ್ತಕಿಯ ಪಕ್ಕದಲ್ಲಿ ವೀಣೆ ನುಡಿಸುತ್ತಾ ನರ್ತಕಿಯರನ್ನು ನೋಡುತ್ತಿರುವ ದೃಶ್ಯವಿದೆ. ಇಲ್ಲಿ ಮೃದಂಗ ನುಡಿಸುತ್ತಿರುವ ವಾದ್ಯಗಾರನ ಶಿಲ್ಪವಿದೆ. ಇಲ್ಲಿ ಇಬ್ಬರು ವಾದ್ಯಗಾರರು ನರ್ತಕಿಯರ ಕಡೆ ನೋಡುತ್ತಾ ಪುಂಗಿಯನ್ನು ಊದುತ್ತಿದ್ದಾರೆ. ಇಲ್ಲಿ ಇಬ್ಬರು ನರ್ತನವನ್ನು ಮಾಡುತ್ತಾ ವಾದ್ಯಗಳನ್ನು ಊದುತ್ತಿದ್ದಾರೆ. ಇಲ್ಲಿಯ ಶಿಲ್ಪದ ಗಾತ್ರದಲ್ಲಿ ಸ್ವಲ್ಪ ವ್ಯತ್ಯಾಸಗಳನ್ನು ಕಾಣಬಹುದು. ಇಬ್ಬರ ಚಿತ್ತ ನರ್ತಕಿಯ ಕಡೆ ಇದೆ. ಇವರ ಪಕ್ಕದಲ್ಲಿ ಇಬ್ಬರು ಸ್ತ್ರೀಯರಿದ್ದು ಇವರು ಯಾವ ವಸ್ತುಗಳನ್ನು ಹಿಡಿದ್ದಾರೆ ಎಂಬುದು ಸ್ಪಷ್ಟವಾಗಿ ಕಾಣುತ್ತಿಲ್ಲ. ವಾದ್ಯ, ತ್ರಿವಳಿ, ತಾಳವನ್ನು ನುಡಿಸುವ ವಾದ್ಯಗಾರರು ಕೇಶವನ್ನು ಮುಡಿಕಟ್ಟಿದ್ದಾರೆ. ತೋಳುಗಳಿಗೆ ತೋಳ್ಬಂದಿ, ಕೈಗಳಿಗೆ ಬಳೆಗಳನ್ನು ಧರಿಸಿದ್ದಾರೆ. ಇವರೆಲ್ಲ ದೃಷ್ಠಿ ನರ್ತನ ಮಾಡುತ್ತಿರುವ ನರ್ತಕಿಯರ ಕಡೆ ಇದೆ.

ಕೋಲಾಟದ ಶಿಲ್ಪಗಳು

ಕೋಲಾಟ ಒಂದು ಸಮೂಹ ನೃತ್ಯ. ಹಾಡುಕುಣಿತಗಳಿಂದ ಕೋಲಾಟ ಹೆಚ್ಚಿನ ಶೋಭೆ ತರುವ ಕಲೆ. ಯುವಕರಿಗೆ ಮತ್ತು ಯುವತಿಯರಲ್ಲಿ ನಿರ್ದಿಷ್ಟವಾದ ಗತ್ತಿನಲ್ಲಿ ಒಳ್ಳೆಯ ವ್ಯಾಯಾಮವನ್ನೊದಗಿಸುವ ಕಲೆಯಾದುದರಿಂದ ಕರ್ನಾಟಕವಷ್ಟೇ ಅಲ್ಲ, ಭಾರತದ ಗ್ರಾಮಾಂತರ ಪ್ರದೇಶಗಳಲ್ಲಿಯೂ ಅದು ಪ್ರಚಲಿತವಾಗಿದೆ. ಗೋಪಿಕಾ ಸ್ತ್ರೀಯರು ಶ್ರೀಕೃಷ್ಣನೊಂದಿಗೆ ಬಣ್ಣದ ಕೋಲು ಹಿಡಿದು ಆಟವಾಡಿದ ಕಥೆ ಕೇಳಿದ್ದೇವೆ. ಇದು ಪ್ರಾಚೀನ ಕಾಲದ ಪಶುಪಾಲನೆ, ಕೃಷಿ

ಬದುಕಿನ ಜನಸಮುದಾಯಗಳಲ್ಲಿ ಕಂಡುಬರುವುದು. ಕೋಲಾಟವು ಹಿಡಿಯಲ್ಲಿ ದಪ್ಪವಾಗಿ ತುದಿಯಲ್ಲಿ ಸಣ್ಣದಾಗಿರುವ ಬಣ್ಣ ಹಚ್ಚಿದ ಕೋಲಾಗಿದ್ದು ಅದು ಸುಮಾರು ಒಂದಡಿ ಉದ್ದವಿರುತ್ತದೆ. ಬಡಿಯುವ ಕೋಲಿಗೂ, ಕುಣಿಯುವ ಕಾಲಿಗೂ ಗೆಜ್ಜೆ ಕಲಾವಿದನ ಚಡ್ಡಿಯನ್ನು ಏರುಗಟ್ಟಿದ ಗಂಟೆಯನ್ನು ಧರಿಸಿ ಸೊಂಟಕ್ಕೆ ಕೆಂಪು ವಸ್ತ್ರ ಕಟ್ಟಿರುತ್ತಾನೆ. ಹೆಂಗಸಾಗಿದ್ದರೆ ಮೊಣಕಾಲಿನ ಎತ್ತರಕ್ಕೆ ಸೀರೆಯುಟ್ಟು ಸೆರಗನ್ನು ಸೊಂಟಕ್ಕೆ ಬಿಗಿದಿರುತ್ತಾರೆ. ಕೋಲಾಟವನ್ನು ವಿಶೇಷವಾಗಿ ಹೆಣ್ಣು ಮಕ್ಕಳು ಕೋಲು ಹಾಕುತ್ತಾ ಕುಣಿಯುತ್ತಾ ಮನೆ ಮನೆಗೆ ಸಂಚರಿಸುವ ಸಂಪ್ರದಾಯ ವರ್ಷದ ಗೌರಿ ಹುಣ್ಣಿಮೆ ಸಂದರ್ಭದಲ್ಲಿ ಕಂಡು ಬರುತ್ತದೆ. ಪ್ರಸ್ತುತ ಕೋಲಾಟವು ಕೊಪ್ಪಳ ಜಿಲ್ಲೆಯ ಹುಲಗಿ, ಕರಮುಡಿ, ಕುಕನೂರು, ಮಂಗಳೂರು, ನವಲಿ, ಓಜನಹಳ್ಳಿ, ಕುದುರಿಮೋತಿ, ಕವಲೂರು ಗ್ರಾಮಗಳು ಹೆಜ್ಜೆ ಕುಣಿತಕ್ಕೆ ಕೋಲಾಟದ ಕಲೆಗೆ ಹೆಸರು ಪಡೆದಿವೆ.[೩೪]

ರಾಯಚೂರಿನ ನವರಂಗ ದರ್ವಾಜನಲ್ಲಿರುವ ಆನೆಗೊಂದಿಯ ಕೋಲಾಟನಿರತ ಸ್ತ್ರೀಯರ ಶಿಲ್ಪದ ಪಟ್ಟಿಯನ್ನು ಕಾಣುತ್ತೇವೆ. ಈ ಶಿಲ್ಪವನ್ನು ಕ್ರಿ.ಶ. ೧೪–೧೬ನೇ ಶತಮಾನದೆಂದು ಕೆ.ಜಿ ಭಟಸೂರಿಯವರು ಅಭಿಪ್ರಾಯ ಪಟ್ಟಿದ್ದಾರೆ.[೩೫] ಕೋಲಾಟ ನಿರತ ಎಲ್ಲಾ ನರ್ತಕಿಯರು ಊರ್ಧ್ವವಾನು ಚಾರಿಯಲ್ಲಿದ್ದು, ಪ್ರತಿಯೊಬ್ಬರು ಪರಸ್ಪರ ವಿರುದ್ಧವಾಗಿ ತಮ್ಮ ಎಡ ಮತ್ತು ಬಲಗಾಲುಗಳನ್ನು ಮುಂದಿಟ್ಟು ಹಿಂಬದಿಗೆ ಮುಖ ಮಾಡಿ ತಮ್ಮ ಹಿಂಬದಿ ಮತ್ತು ಮುಂಬದಿಯ ನರ್ತಕಿಯರು ಹಿಡಿದ ಕೋಲುಗಳಿಗೆ ತಮ್ಮ ಕೋಲುಗಳಿಂದ ಹೊಡೆಯುತ್ತಿದ್ದಾರೆ. ನರ್ತಕಿಯರು ಕಿವಿಗಳಿಗೆ ಧರಿಸಿರುವ ದೊಡ್ಡ ಕರ್ಣಕುಂಡಲ, ಕೇಶರಾಶಿಯನ್ನು ಮುಡಿಕಟ್ಟಿದು ಮತ್ತು ಸ್ತ್ರೀಯರು ಸೊಂಟದ ಪಟ್ಟಿ ಮತ್ತು ಉಟ್ಟಿರುವ ಸೀರೆ ಸಹ ನೋಡಬಹುದು. ಈ ನರ್ತಕಿಯರ ಪಕ್ಕದಲ್ಲಿ ಮರವನ್ನು ತೋರಿಸಿದ್ದು ಇದರಿಂದ ಮರದ ಕೆಳಗೆ ಐದು ಸ್ತ್ರೀಯರು ಕೋಲಾಟ ನಿರತರಾಗಿರುವುದನ್ನು ಕಾಣಬಹುದು.

ಆನೆಗುಂದಿಯ ೬೪ ಕಂಬದ ಕಟ್ಟದ ಹತ್ತಿರದಲ್ಲಿರುವ ಕಂಬವೊಂದರಲ್ಲಿ ಕೋಲಾಟದ ಶಿಲ್ಪವನ್ನು ಕಂಡರಿಸಲಾಗಿದೆ. ಇಬ್ಬರು ಸ್ತ್ರೀಯರು ಕೋಲಾಟವನ್ನು ಆಡುತ್ತಿದ್ದಾರೆ. ತಮ್ಮ ಎಡಗಾಲನ್ನು ಮುಂದಿಟ್ಟು ಬಲಗಾಲನ್ನು ಹಿಂದೆ ಇಟ್ಟಿರುವ ನರ್ತಕಿಯರು ಹಿಡಿದ ಕೋಲುಗಳಿಗೆ ತಮ್ಮ ಕೋಲುಗಳಿಂದ ಹೊಡೆಯುತ್ತಿದ್ದಾರೆ ಇವರು ದೇಹವನ್ನು ಸ್ವಲ್ಪ ಬಾಗಿಸಿ ನೃತ್ಯವನ್ನು ಮಾಡುತ್ತಾರೆ. ಬಿಳಿಕಣಶಿಲೆಯಲ್ಲಿ ಕಂಡರಿಸಲಾಗಿದೆ. ತಾವರಗೇರೆಯ ಶಿವದೇವಾಲಯದ ಭುವನೇಶ್ವರಿಯಲ್ಲಿ ಕೋಲಾಟದ ಶಿಲ್ಪವನ್ನು ಕಂಡರಿಸಲಾಗಿದೆ. ನಾಲ್ಕು ಜನ ನರ್ತಕಿಯರು ವೃತ್ತಾಕಾರವಾಗಿ ಮಲಗಿಕೊಂಡು ಕೋಲಾಟ ಆಡುತ್ತಿರುವ ದೃಶ್ಯ ಮನಮೋಹಕವಾಗಿದೆ.

ಕುಸ್ತಿ ಶಿಲ್ಪಗಳು

ಕುಸ್ತಿಗೆ ಮಲ್ಲಯುದ್ಧ, ಗರಡಿಕಲೆ, ಜಟ್ಟಿಕಾಳಗ ಮೊದಲಾದ ಹೆಸರುಗಳಿಂದ ಕರೆಯುತ್ತಾರೆ. ಕುಸ್ತಿಯಲ್ಲಿ ಪರಿಣಿತನಾದವನಿಗೆ ಜಟ್ಟಿ, ಮಲ್ಲ, ಪೈಲ್ವಾನ ಹೆಸರುಗಳಿಂದ ಕರೆಯಲಾಗಿದೆ. ಇಬ್ಬರು

ಜಟ್ಟಿಗಳು ಅಥವಾ ಮಲ್ಲರ ನಡುವೆ ಯಾವುದೇ ಆಯುಧ ಬಳಸದೆ ತಮ್ಮ ದೈಹಿಕ ಶಕ್ತಿ ಸಾಮರ್ಥ್ಯದ ಮೂಲಕ ಹೋರಾಡುವ ಕ್ರೀಡೆಗೆ ಕುಸ್ತಿ ಎಂದು ಕರೆಯುತ್ತಾರೆ. ಜಿಲ್ಲೆಯ ಹಿರೇಜಂತಗಲ್ಲಿನ ಪ್ರಸನ್ನ ವಿರೂಪಾಕ್ಷ ದೇವಾಲಯದ ಮಂಟಪದ ಕಂಬಗಳಲ್ಲಿ ಎರಡು ಶಿಲ್ಪಗಳಲ್ಲಿ ಇಬ್ಬರು ಜಟ್ಟಿಗಳು ಕುಸ್ತಿಯಾಡುತ್ತಿದ್ದಾರೆ. ಇಬ್ಬರು ಜಟ್ಟಿಗಳು ಒಂದೇ ತರ ಇದ್ದಾರೆ. ಆದರೆ ತಲೆಯ ಮೇಲೆ ಒಬ್ಬ ಜಟ್ಟಿಯು ಪೇಟ ಹಾಕಿಕೊಂಡಿದ್ದಾನೆ. ಎದುರಾಳಿ ಜಟ್ಟಿಯು ಕಿರೀಟವನ್ನು ಧರಿಸಿದ್ದಾನೆ. ಇದೇ ಮಂಟಪದ ಮತ್ತೊಂದು ಕಂಬವೊಂದರಲ್ಲಿ ಕುಸ್ತಿಯ ಶಿಲ್ಪವಿದೆ. ಇಬ್ಬರ ಜಟ್ಟಿಗಳ ಒಂದೇ ರೀತಿಯಲ್ಲಿದ್ದಾರೆ. ಕನಕಗಿರಿಯ ವೆಂಕಟಪತಿ ಬಾವಿಯಲ್ಲಿ ಇಬ್ಬರು ಜಟ್ಟಿಗಳು ಕುಸ್ತಿಯಾಡುತ್ತಿರುವ ಶಿಲ್ಪವಿದೆ.

ವಾದ್ಯಗಾರರು

ಆನೆಗೊಂದಿಯ ರಂಗನಾಥ ದೇವಾಲಯ ಪ್ರಾಕಾರ ಮಂಟಪದ ಗೋಡೆಯ ಕಂಬವೊಂದರಲ್ಲಿ ವ್ಯಕ್ತಿಯು ತನ್ನ ಎರಡು ಕೈಗಳಿಂದ ಮೃದಂಗವನ್ನು ನುಡಿಸುತ್ತಿದ್ದಾನೆ. ಮೃದಂಗವನ್ನು ಸೊಂಟದ ಮೇಲೆ ಇಟ್ಟುಕೊಂಡಿದ್ದಾನೆ. ತನ್ನ ಎರಡು ಕಾಲುಗಳನ್ನು ಅಗಲಿಸಿದ್ದಾನೆ. ತಲೆಗೆ ಪೇಟವನ್ನು ಸುತ್ತಿದ್ದಾನೆ. ಇದೇ ಗ್ರಾಮದ ರಂಗನಾಥ ದೇವಾಲಯದ ಕಂಬವೊಂದರಲ್ಲಿ ವ್ಯಕ್ತಿಯು ತಬಲವನ್ನು ಬಡೆಯುತ್ತಿದ್ದಾನೆ. ತಬಲ ಬಡಿಯುವ ವ್ಯಕ್ತಿಯು ದೊಡ್ಡದಾದ ತಬಲ ಹಿಡಿದ್ದು, ತನ್ನ ಎರಡು ಕೈಗಳಿಂದ ತಬಲ ಬಡಿಯುತ್ತಿದ್ದರು.

ಕನಕಗಿರಿಯ ವೆಂಕಟಪತಿ ಬಾವಿಯ ಕಂಬವೊಂದರಲ್ಲಿ ತಬಲವನ್ನು ನುಡಿಸುತ್ತಿರುವ ನರ್ತಕನ ಶಿಲ್ಪವಿದೆ. ನರ್ತಕನು ಮಂಡಿ ಊರಿ ಕುಳಿತುಕೊಂಡು ತಬಲವನ್ನು ಎದೆಯ ಮುಂಭಾಗದಲ್ಲಿ ದೊಡ್ಡದಾಗಿ ತೋರಿಸಿದ್ದಾರೆ. ತನ್ನ ಎರಡು ಕೈಗಳಿಂದ ತಬಲವನ್ನು ನುಡಿಸುತ್ತಿರುವಂತೆ ಕಂಡರಿಸಿದ್ದಾರೆ. ವಾದ್ಯಗಾರನು ತ್ರಿಕೋನಾಕಾರದಲ್ಲಿ ಗಡ್ಡವನ್ನು ಬಿಟ್ಟಿದ್ದಾರೆ. ತಲೆಗೆ ಪೇಟವನ್ನು ಧರಿಸಿದ್ದಾರೆ. ಈ ವಾದ್ಯಗಾರನ ಶಿಲ್ಪವು ವಿಶೇಷತೆಯಿಂದ ಕೂಡಿದೆ.

ಸ್ತ್ರೀ ಶಿಲ್ಪಗಳು

ಹತೋಟಿಯ ಆಂಜನೇಯ ದೇವಾಲಯದ ಹಿಂಭಾಗಕ್ಕೆ ದೊಡ್ಡ ಬಂಡೆಯಲ್ಲಿದೆ. ಇದನ್ನು ಬಿಳಿ ಕಣ ಶಿಲೆಯಿಂದ ನಿರ್ಮಿಸಲಾಗಿದೆ ಹಾಗೂ ವಿಜಯನಗರ ಶೈಲಿಯನ್ನು ಹೊಂದಿದೆ. ಪ್ರಸ್ತುತ ಈ ಉಬ್ಬುಶಿಲ್ಪ ಸಮುಚ್ಚಯವು ಸುಮಾರು ೫ ಅಡಿ ವಿಸ್ತಾರವಾದ ಬಂಡೆಯಲ್ಲಿ ಕೆತ್ತಲ್ಪಟ್ಟಿದೆ. ಇದು ಅಂಜಲಿಬದ್ಧ ಸ್ತ್ರೀ ಬದಿಯಲ್ಲಿ ಮತ್ತೋಬ್ಬ ಸ್ತ್ರೀ, ಏಳು ಹೆಡೆಯ ನಾಗಶಿಲ್ಪ ಮತ್ತು ಗಣೇಶನ ಶಿಲ್ಪಗಳನ್ನು ಒಳಗೊಂಡಿದೆ. ಅಂಜಲಿಬದ್ಧ ಸ್ತ್ರೀ ಪ್ರತಿಮೆಯು ೩ ಅಡಿ ಎತ್ತರವಾಗಿದ್ದು, ಸ್ತ್ರೀ ಬಲಗಾಲನ್ನು ಮುಂದಕ್ಕೆ ಇರಿಸಿದಂತಿದ್ದು, ಕೈಗಳು ಅಂಜಲಿಬದ್ಧ ಮುದ್ರೆಗಳಲ್ಲಿವೆ. ತಲೆಯ ಕೇಶಗಳನ್ನು ಸುಂದರವಾಗಿ ಬಾಚಲಾಗಿದೆ. ಕೈಗಳಲ್ಲಿ ಬಳೆಗಳು ಇವೆ. ಸ್ತ್ರೀಯು ಸೀರೆಯನ್ನು ಧರಿಸಿದ್ದು, ಅದರ ನೆರಿಗೆ ಸ್ಪಷ್ಟವಾಗಿ ಗೋಚರಿಸುತ್ತವೆ. ಸ್ತ್ರೀ ಶಿಲ್ಪದ ಪಾದಗಳು ಕಂಡರಿಸಲಾಗಿಲ್ಲ. ಹಾಗಾಗಿ ಜಲದಲ್ಲಿ

ನಿಂತಂತೆ ತೋರುತ್ತದೆ. ಇದರ ಬದಿಯಲ್ಲಿ ನಾಗಸರ್ಪದ ದೊಡ ಶಿಲ್ಪವಿದ್ದ, ಅದು ಏಳು ಹೆಡೆಗಳನ್ನು ಬಿಚ್ಚಿದೆ. ಸರ್ಪವು ಎರಡು ಸುತ್ತುಗಳನ್ನು ಹೊಂದಿದಂತೆ ಇಡೀ ಬಾಲದ ಹೊರಗೆ ಪೂರ್ಣವಾಗಿ ಕೆತ್ತಲಾಗಿದೆ. ಸ್ತ್ರೀಯ ತಲೆಯ ಎಡಬದಿಯಲ್ಲಿ ಚಿಕ್ಕ ಗಣೇಶನ ಶಿಲ್ಪವಿದೆ ಮತ್ತು ಕೆಳಭಾಗದಲ್ಲಿ ಅಪೂರ್ಣವಾಗಿ ಕೆತ್ತಿದ್ದ ಕುಳಿತ ಸ್ತ್ರೀಯ ಶಿಲ್ಪವೊಂದು ಗೋಚರಿಸುತ್ತದೆ. ಒಟ್ಟಾರೆ ಶಿಲ್ಪ ಫಲಕವನ್ನು ಅನುಲಕ್ಷಿಸಿ ರಾಣಿ ಅಥವಾ ಗಣ್ಯ ಸ್ತ್ರೀ ಒಬ್ಬಳು ಧಾರ್ಮಿಕ ವಿಧಿಯಲ್ಲಿ ನಿರತಳಾದ ಸಂದರ್ಭವೆಂದು ತರ್ಕಿಸಬಹುದಾಗಿದೆ.

ಹಿರೇಜಂತಗಲ್ಲನ ಪ್ರಸನ್ನ ವಿರುಪಾಕ್ಷ ದೇವಾಲಯದ ಮುಖಮಂಟಪದ ಕಂಬವೊಂದರಲ್ಲಿ ಸ್ತ್ರೀಯು ಎಡಭಾಗದ ಸೊಂಟದ ಮೇಲೆಯಿಂದ ಕೈಜಾರಿ ಬಿಳುತ್ತಿರುವ ಬಿಂದಿಗೆಯನ್ನು ಈಕೆಯು ಗಾಬರಿಯಿಂದ ನೋಡುತ್ತಿದ್ದಾಳೆ. ಎರಡು ಕಾಲುಗಳನ್ನು ಅಗಲಿಸಿದ್ದಾಳೆ. ಸ್ತ್ರೀಯು ಸೀರೆ ಉಟ್ಟಿದ್ದು, ಕಿವಿಗೆ ಒಲೆ ಹಾಕಿಕೊಂಡಿದ್ದಾಳೆ. ದೊಡ್ಡದಾದ ತುರುಬನ್ನು ಬಲಕ್ಕೆ ಕಟ್ಟಿದ್ದಾಳೆ. ಈ ಶಿಲ್ಪದಿಂದ ಅಂದಿನ ಸ್ತ್ರೀ ಅವರು ತಮ್ಮ ದಿನದಿತ್ಯದಲ್ಲಿ ಬಳಸುವ ವಸ್ತುಗಳ ಬಗ್ಗೆ ತಿಳಿದುಕೊಳ್ಳಬಹುದು.

ಭಕ್ತರ ಶಿಲ್ಪಗಳು

ವಿಜಯನಗರ ಕಾಲದಲ್ಲಿ ದೇವಾಲಯ ಕಟ್ಟಿಸಿದ ಭಕ್ತ/ನಿರ್ಮಾತೃವಿನ ಶಿಲ್ಪವನ್ನು ದೇವಾಲಯದಲ್ಲಿ ಉಬ್ಬು, ಬಿಡಿಶಿಲ್ಪಗಳಲ್ಲಿ ಕೆತ್ತಲಾಗಿದೆ. ಈ ಕಾಲದ ದೇವಾಲಯ, ಮಂಟಪ, ಹಾಸುಬಂಡೆಗಳಲ್ಲಿ ಹಾಗೂ ಬಿಡಿ ಶಿಲ್ಪಗಳಲ್ಲಿ ಭಕ್ತರ ಶಿಲ್ಪಗಳಿವೆ. ಹಿರೇಜಂತಗಲ್ಲನ ಪ್ರಸನ್ನ ವಿರುಪಾಕ್ಷ ದೇವಾಲಯ, ಆಂಜನೇಯ ದೇವಾಲಯ, ಆನೆಗೊಂದಿಯ ರಂಗನಾಥ ದೇವಾಲಯ, ಗವಿರಂಗನಾಥ ದೇವಾಲಯ, ಕನಕಗಿರಿಯ ಕನಕಾಚಲ ಲಕ್ಷ್ಮೀನರಸಿಂಹ ದೇವಾಲಯ, ಹನುಮಂತ ದೇವಾಲಯ, ಸಂಜೀವಮೂರ್ತಿ, ನವಲಿಯ ವೀರಭದ್ರ, ಭೊಗಪುರೇಶ್ವರ ದೇವಾಲಯ, ವೆಂಕಟಗಿರಿಯ ವೆಂಕಟೇಶ್ವರ ದೇವಾಲಯ, ಮಂಟಪ ಮತ್ತು ಬಿಡಿಶಿಲ್ಪಗಳಲ್ಲಿ ಭಕ್ತರ ಶಿಲ್ಪಗಳು ದೊರೆಯುತ್ತವೆ.

ಮಿಥುನ ಶಿಲ್ಪಗಳು

ದೇವಾಲಯಗಳಲ್ಲಿ ಮಿಥನ ಶಿಲ್ಪಗಳ ಕೆತ್ತನೆಯು ಕ್ರಿ.ಶ. ೨ನೆಯ ಶತಮಾನದಷ್ಟು ಪ್ರಾಚೀನವಾದುದು. ಈ ಶಿಲ್ಪ ಪ್ರಕಾರವನ್ನು ಮೊದಲ ಬಾರಿಗೆ ಬಳಸಿದ ಶ್ರೇಯಸ್ಸು ಚಾಲುಕ್ಯ ರೂವಾರಿಗಳಿಗೆ ಸಲ್ಲುತ್ತದೆ.[೩೬] ಮಿಥುನ ಶಿಲ್ಪದ ಚಿತ್ರಣಗಳು ದೇವಾಲಯಗಳಲ್ಲಿ ಕಂಡುಬರಲು ಕಾರಣ ತಿಳಿಸುತ್ತ ಭಕ್ತನಾದವನು ಮೂಲದೇವರ ಬಳಿಗೆ ಹೋಗುವ ಮೊದಲೇ ತನ್ನ ಕಳಂಕಿತ ಮನಸ್ಸನ್ನು ಶುದ್ಧಿ ಮಾಡಿಕೊಳ್ಳುವ ಸಲುವಾಗಿ ದೇವಾಲಯಗಳಿಗೆ ಭಕ್ತರು ಬರಲಿ ಎಂಬುದಾಗಿ ಲೈಂಗಿಕ ಶಿಕ್ಷಣ ನೀಡುತ್ತವೆ ಎಂಬ ವಿಚಾರದಿಂದಾಗಿ ದೇವ ಹಾಗೂ ಭಕ್ತರ ದೈವಿಕ ಮಿಲನದ ಸಂಕೇತವಾಗಿ ಹಾಗೂ ಪುರುಷಾರ್ಥಗಳಲ್ಲಿ ಕಾಮ ಸಹ ಒಂದಾಗಿದ್ದು ಅದರ ಚಿತ್ರಣವೆಂಬಂತೆ ಇರುವ ಹಲವಾರು ವ್ಯಾಖ್ಯಾನಗಳನ್ನು ವೀಣಾಶೇಖರ ಅವರು ನೀಡುತ್ತಾರೆ.[೩೭] ಆರಂಭಿಕ ಕಾಲದ ಮಿಥುನ ಶಿಲ್ಪಗಳಲ್ಲಿ ಹೆಚ್ಚಿನ ಕಾಮಾತಿರೇಕದ ಅಭಿವ್ಯಕ್ತಿಯಿಲ್ಲ. ವಿಜಯನಗರ ಕಾಲದ ಮಿಥುನ

ಶಿಲ್ಪಗಳು ಒಬ್ಬ ಮಹಿಳೆಯ ಜೊತೆಗೆ ಇಬ್ಬರು ಅಥವಾ ಮೂವರು ಪುರುಷರು ಮಿಥುನ ಕ್ರಿಯೆಯಲ್ಲಿ ನಿರತವಾಗಿರುವಂತೆ ತೋರಿಸಿರುವುದರಿಂದ ಇವು ಅತಿರೇಕವೆನಿಸುತ್ತವೆ.[೩೮] ರಚನೆಯಲ್ಲಿ ಭಿನ್ನವಾಗಿರುವ ವಿಜಯನಗರ ಕಾಲದ ಮಿಥುನ ಶಿಲ್ಪಗಳು ಹೆಚ್ಚಾಗಿ ಅಂಗಾಂಗ ಪ್ರದರ್ಶನದ ಉದ್ದೇಶವನ್ನು ಹೊಂದಿದೆ. ಮಿಥುನ ಶಿಲ್ಪಗಳು ಕೇವಲ ದೇಹ ಸೌಂದರ್ಯವನ್ನಲ್ಲದೆ ಮನಸ್ಸಿನ ಉಲ್ಲಾಸವನ್ನು ಸಹ ಪ್ರಕಟಮಾಡುತ್ತವೆ.[೩೯]

ಕೊಪ್ಪಳ ಜಿಲ್ಲೆಯ ವಿಜಯನಗರ ಕಾಲದ ಸ್ಮಾರಕಗಳಲ್ಲಿ ದೇವಾಲಯ ಮತ್ತು ಬಾವಿಗಳಲ್ಲಿ ಮಿಥುನ ಶಿಲ್ಪಗಳಿವೆ. ಸ್ತ್ರೀ ಪುರುಷರು ನಿಂತು, ಕುಳಿತು, ಮಲಗಿಕೊಂಡು ಲೈಂಗಿಕ ಕ್ರಿಯೆಯಲ್ಲಿ ನಿರತರಾಗಿದ್ದಾರೆ. ಹಿರೇಜಂತಗಲ್ಲಿನ ಪ್ರಸನ್ನ ವಿರುಪಾಕ್ಷ, ಕೊಪ್ಪಳದ ಸಂಗಮೇಶ್ವರ, ನವಲಿಯ ವೀರಭದ್ರ ದೇವಾಲಯಗಳಲ್ಲಿ ಹಾಗೂ ಹನುಮಸಾಗರದ ತಂಗವ್ವನ ಬಾವಿ, ಕನಕಗಿರಿಯ ಐ.ಬಿ. ಬಾವಿ, ಅಚ್ಚಮ್ಮನ ಬಾವಿ, ವೆಂಕಟಪತಿ ಬಾವಿಗಳಲ್ಲಿ ಮಿಥುನ ಶಿಲ್ಪಗಳಿವೆ. ಸ್ತ್ರೀ ಪುರುಷರು ನಿಂತು, ಕುಳಿತು ಅಥವಾ ಶಯನಾವಸ್ಥೆಯಲ್ಲಿ ಲೈಂಗಿಕ ಚಟುವಟಿಕೆಯಲ್ಲಿ ನಿರತರಾಗಿದ್ದಾರೆ. ಹಿರೇಜಂತಗಲ್ಲನ ಪ್ರಸನ್ನ ವಿರುಪಾಕ್ಷ, ದೇವಾಲಯದ ದ್ವಾರಬಾಗಿಲಿನ ಒಳಭಾಗದಲ್ಲಿ ಸ್ತ್ರೀಯೊರ್ವಳು ವಿವಸ್ತ್ರಳಾಗಿದ್ದು ತನ್ನ ಬಲಗೈಯಿಂದ ಸ್ತನ ಮತ್ತು ಎಡಗೈಯಿಂದ ಯೋನಿಯನ್ನು ಮುಚ್ಚಿಕೊಳ್ಳಲು ಪ್ರಯತ್ನಿಸುತ್ತಿರುವ ಶಿಲ್ಪವಿದೆ.

ಕನಕಗಿರಿಯ ಐ.ಬಿ. ಬಾವಿಯಲ್ಲಿ ಲೈಂಗಿಕ ಕ್ರಿಯೆಯಲ್ಲಿ ನಿರತರಾದ ಪುರುಷ, ಸ್ತ್ರೀಯರ ಶಿಲ್ಪವಿದೆ. ಸ್ತ್ರೀಯೊಬ್ಬಳು ತನ್ನ ಕೈಗಳನ್ನು ಯೋನಿಯಲ್ಲಿ ಇಟ್ಟುಕೊಂಡಿದ್ದಾಳೆ. ಇದೇ ಗ್ರಾಮದ ವೆಂಕಟಪತಿ ಬಾವಿಯಲ್ಲಿ ಇಬ್ಬರು ಸ್ತ್ರೀಯರ ನಡುವೆ ಒಬ್ಬ ಪುರುಷ ಕುಳಿತುಕೊಂಡಿದ್ದು, ಪುರುಷನ ಎಡಭಾಗದಲ್ಲಿ ಕುಳಿತ ಸ್ತ್ರೀಯು ಪುರುಷನನ್ನು ಚುಂಬಿಸುತ್ತಿದ್ದಾಳೆ. ಪುರುಷನು ತನ್ನ ಎರಡು ಕೈಗಳಿಂದ ಇಬ್ಬರು ಸ್ತ್ರೀಯರ ಸ್ತನಗಳನ್ನು ಹಿಡಿದುಕೊಂಡಿದ್ದಾನೆ. ಮತ್ತೊಂದೆಡೆ ಸ್ತ್ರೀ-ಪುರುಷ ಇಬ್ಬರು ಲೈಂಗಿಕ ಕ್ರಿಯೆಯಲ್ಲಿ ನಿರಂತರವಾಗಿರುವ ಶಿಲ್ಪವಿದೆ. ಸ್ತ್ರೀ ಮತ್ತು ಪುರುಷನು ನಿಂತುಕೊಂಡು ಲೈಂಗಿಕ ಕ್ರಿಯೆಯಲ್ಲಿ ತೊಡಗಿದ್ದಾರೆ. ಕನಕಗಿರಿಯ ವೆಂಕಟಪತಿ ಬಾವಿಯ ಬಾಲ್ಕನಿಯಲ್ಲಿರುವ ಪಟ್ಟಿಯಲ್ಲಿ ಪುರುಷ ಮತ್ತು ಸ್ತ್ರೀಯರಿಬ್ಬರು ಲೈಂಗಿಕ ಕ್ರಿಯೆಯಲ್ಲಿ ನಿರತರಾಗಿದ್ದಾರೆ. ಇವರ ಪಕ್ಕದಲ್ಲಿ ಒಬ್ಬಳು ಸ್ತ್ರೀಯು ನೃತ್ಯ ಮಾಡುತ್ತಿದ್ದಾಳೆ. ಇವರ ಪಕ್ಕದಲ್ಲಿ ಇನ್ನೊಂದು ಜೋಡಿ ಮಲಗಿಕೊಂಡು ಲೈಂಗಿಕ ಕ್ರಿಯೆಯಲ್ಲಿ ತೊಡಗಿದ್ದಾರೆ. ಇನ್ನೊಂದೆಡೆ ಸ್ತ್ರೀ ಪುರುಷ ಇಬ್ಬರು ಹಿಂಭಾಗದಲ್ಲಿ ಬಾಗಿಕೊಂಡು ವಿಪರೀತ ಭಂಗಿಯಲ್ಲಿ ಲೈಂಗಿಕ ಕ್ರಿಯೆಯಲ್ಲಿ ತೊಡಗಿದ್ದಾರೆ. ಇದೇ ಬಾವಿಯಲ್ಲಿ ಪುರುಷನ ಮೇಲೆ ಸ್ತ್ರೀಯು ಕುಳಿತುಕೊಂಡು ಚುಂಬಿಸುತ್ತಿರುವ ಶಿಲ್ಪವಿದೆ. ಸ್ತ್ರೀ ತನ್ನ ಎರಡು ಕೈಗಳಿಂದ ಪುರುಷನ ನಡುವ(ಸೊಂಟ)ನ್ನು ಹಿಡಿದುಕೊಂಡಿದ್ದಾಳೆ. ಇವನ ಮುಂದೆ ಪುರುಷನೊಬ್ಬನು ಚಿಕ್ಕ ಮಗುವನ್ನು ಹಿಡಿದುಕೊಂಡು ನಿಂತಿದ್ದಾನೆ. ಸ್ತ್ರೀ ಪುರುಷ ಇಬ್ಬರು ನಿಂತುಕೊಂಡು ಚುಂಬಿಸುತ್ತಿದ್ದಾನೆ. ಇವರ ಮುಂಬದಿಯ ಶಿಲ್ಪದಲ್ಲಿ ಪುರುಷಯೊಬ್ಬನು ವಸ್ತುವೊಂದನ್ನು ಹಿಡಿದುಕೊಂಡು ನಿಂತಿರುವಂತೆ,

ಸ್ತ್ರೀಯೊಬ್ಬಳು ನಿಂತುಕೊಂಡಿದ್ದು ತನ್ನ ಬಲಗೈಯನ್ನು ಮೇಲೆ ಎತ್ತಿರುವಂತೆ ಶಿಲ್ಪಗಳಿವೆ. ಮತ್ತೊಬ್ಬ ಪುರುಷನು ಮಲಗಿದ್ದು, ಸ್ತ್ರೀಯು ತನ್ನ ಕೈಗಳಿಂದ ಕಣ್ಣುಗಳನ್ನು ಒರಸಿಕೊಳ್ಳುತ್ತಿದ್ದಾಳೆ. ಈ ಇಬ್ಬರು ದುಃಖದಲ್ಲಿರುವಂತೆ ಕಂಡುಬರುತ್ತದೆ.

ಹಾವಾಡಿಗರ ಶಿಲ್ಪಗಳು

ಕೊಪ್ಪಳ ಜಿಲ್ಲೆಯ ವಿಜಯನಗರ ಕಾಲದ ಸ್ಮಾರಕಗಳಲ್ಲಿ ಒಟ್ಟು ೧೫ ಹಾವಾಡಿಗರ ಶಿಲ್ಪಗಳನ್ನು ಕಾಣಬಹುದು. ಹಿರೇಜಂತಗಲ್ಲಿನ ಪ್ರಸನ್ನ ವಿರುಪಾಕ್ಷ ದೇವಾಲಯ, ಮಂಟಪಗಳು, ಆಂಜನೇಯ ದೇವಾಲಯ, ಆನೆಗೊಂದಿಯ ರಂಗನಾಥ ದೇವಾಲಯ ಮತ್ತು ಮಂಟಪ, ಗವಿ ರಂಗನಾಥ, ಹನುಮಂತ ದೇವಾಲಯ, ಸ್ಥಳೀಯರು ಸೂರ್ಯನಾರಾಯಣ ಎಂದು ಕರೆಯುವ ಮಂಟಪ, ನವಲಿಯ ವೀರಭದ್ರ ಮತ್ತು ಭೋಗಪುರೇಶ್ವರ ದೇವಾಲಯದಲ್ಲಿ ಹಾವಾಡಿಗರ ಶಿಲ್ಪಗಳನ್ನು ಕಡೆಯಲಾಗಿದೆ. ಈ ಸ್ಮಾರಕಗಳಲ್ಲಿ ಹಾವಾಡಿಗ ಮತ್ತು ಹಾವಾಡಗಿತ್ತಿಯ ಶಿಲ್ಪಗಳನ್ನು ಕಾಣಬಹುದು.

ಹಾವಾಡಿಗರ ಶಿಲ್ಪಗಳನ್ನು ಪುಂಗಿಯನ್ನು ಊದುತ್ತಿರುವ ಹಾವಾಡಿಗ, ಹಾವುವನ್ನು ಹಿಡಿದುಕೊಂಡಿರುವ ಹಾವಾಡಿಗ, ಪುಂಗಿ ಮತ್ತು ಹಾವುವನ್ನು ಹಿಡಿದುಕೊಂಡಿರುವ ಹಾವಾಡಿಗ ಇವುಗಳನ್ನು ಮೂರು ರೀತಿಯಲ್ಲಿ ವಿಭಾಗವನ್ನು ಮಾಡಿಕೊಂಡು ಚರ್ಚೆಗೆ ಒಳಪಡಿಸಲಾಗಿದೆ.

ಪುಂಗಿಯನ್ನು ಉದುತ್ತಿರುವ ಹಾವಾಡಿಗ

ಹಿರೇಜಂತಗಲ್ಲಿನ ಪ್ರಸನ್ನ ವಿರುಪಾಕ್ಷ ದೇವಾಲಯದ ಮಂಟಪದ ಕಂಬದಲ್ಲಿ ಹಾವಾಡಿಗ ಶಿಲ್ಪವೊಂದನ್ನು ಕಾಣಬಹುದು. ಕುಳಿತ ಬಂಗಿಯಲ್ಲಿರುವ ಹಾವಾಡಿಗ ತನ್ನ ಎರಡು ಕೈಗಳಿಂದ ಪುಂಗಿ ಹಿಡಿದುಕೊಂಡು ಊದುತ್ತಿದ್ದಾನೆ. ತಲೆಗೆ ಧರಿಸಿರುವ ವಿಶಿಷ್ಟವಾಗಿರುವ ತಲೆಯುಡಿಗೆ ಆಕರ್ಷಕವಾಗಿದೆ. ಕಿವಿಗಳಿವೆ ಕರ್ಣಕುಂಡಲಗಳನ್ನು ಹಾಕಿಕೊಂಡಿದ್ದಾನೆ. ಈತನು ದೊಡ್ಡದಾದ ಮೂಗು ಮತ್ತು ಕಣ್ಣುಗಳು, ದಪ್ಪನೆಯ ಹುಬ್ಬುಗಳು, ದೊಡ್ಡದಾದ ಹೊಟ್ಟೆಯನ್ನು ತೋರಿಸಿದ್ದಾರೆ. ಹಾವಾಡಿಗನನ್ನು ನೋಡಿದಲ್ಲಿ ಸ್ವಲ್ಪ ಭಯಂಕರತೆಯನ್ನು ಹುಟ್ಟಿಸುತ್ತದೆ. ಹಾವಾಡಿಗನು ಹಾವಿಗಾಗಿ ಹುಡುಕಾಟ ನಡೆಸುತ್ತಿರುವ ಸಂದರ್ಭದ ಶಿಲ್ಪವಿರಬಹುದು ಎಂದು ಊಹಿಸಬಹುದು.

ಆನೆಗೊಂದಿಯ ಹುಚ್ಚಪ್ಪಯ್ಯನ ಮಂಟಪದ ಕಂಬದಲ್ಲಿ ನಿಂತಿರುವ ಹಾವಾಡಿಗನ ಶಿಲ್ಪವಿದೆ. ಈತ ತನ್ನ ಎರಡೂ ಕೈಗಳಿಂದ ಹಿಡಿದುಕೊಂಡಿರುವ ಪುಂಗಿಯನ್ನು ಊದುತ್ತಿದ್ದಾನೆ. ಹಾವಾಡಿಗನು ಕೊರಳಿಗೆ ಹಾರ, ಪದಕ, ಕಿವಿಗಳಿಗೆ ಕರ್ಣಕುಂಡಲಗಳನ್ನು ಹಾಕಿಕೊಂಡಿದ್ದಾನೆ. ತಲೆಗೆ ಧರಿಸಿರುವ ವಿಶಿಷ್ಟವಾಗಿರುವ ತಲೆಯುಡುಗೆ ಆಕರ್ಷಕವಾಗಿದೆ. ಇದೇ ರೀತಿಯ ಹಾವಾಡಿಗನ ಶಿಲ್ಪವು ಹಿರೇಜಂತಗಲ್ಲನ ಪ್ರಸನ್ನ ವಿರುಪಾಕ್ಷ ದೇವಾಲಯದ ಮುಖಮಂಟಪದಲ್ಲಿದೆ. ಹಾವಾಡಿಗನು ತನಗೆ ಅಗತ್ಯವಾಗಿರುವ ಹಾವವನ್ನು ಹಿಡಿಯಲು ತನ್ನ ಬಳಿಯ ಪುಂಗಿಯನ್ನು ಊದುತ್ತಾ ನಿಂತಿರುವನು. ಹಾವಾಡಿಗನು ಹಾವಿಗಾಗಿ ಹುಡುಕಾಟವನ್ನು ನಡೆಸುತ್ತಿರುವನು. ಈ ಎರಡು ಶಿಲ್ಪದ ಲಕ್ಷಣಗಳು ಒಂದೇಯಾಗಿದೆ.

ಇದೆ ದೇವಾಲಯದ ಮುಖಮಂಟಪದ ಕಂಬದಲ್ಲಿ ಹಾವಾಡಿಗನು ಪುಂಗಿಯನ್ನು ಊದುತ್ತಿದಾನೆ. ಹಾವಾಡಿಗನು ಕುಬ್ಜನಾಗಿದ್ದು ದೊಡ್ಡ ಹೊಟ್ಟೆಯನ್ನು ತೋರಿಸಿದ್ದಾರೆ. ತಲೆಗೆ ವಿಶೇಷವಾದ ಅಲಂಕೃತವಾಗಿ ಚಿತ್ರಿಸಿರುವುದನು ಕಾಣುತ್ತೇವೆ.

ಆನೆಗೊಂದಿಯ ಜೈನಬಸದಿಯ ಮುಂದಿನ ಚಿಕ್ಕಗುಡಿಯ ಕಂಬದಲ್ಲಿರುವ ಶಿಲ್ಪದಲ್ಲಿ ಹಾವಾಡಿಗನು ಕುಳಿತಭಂಗಿಯಲ್ಲಿ ತನ್ನ ಎರಡು ಕೈಗಳಲ್ಲಿ ಪುಂಗಿಯನ್ನು ಹಿಡಿದು ಊದುತ್ತಿದ್ದಾನೆ. ಉಳಿದ ಭಾಗವು ಸ್ಪಷ್ಟವಾಗುವುದಿಲ್ಲ. ಆನೆಗೊಂದಿಯ ಸೂರ್ಯನಾರಾಯಣ ಎಂದು ಸ್ಥಳೀಯರು ಕರೆಯುವ ಮಂಟಪದ ಪಕ್ಕದಲ್ಲಿ ಬಿದ್ದಿರುವ ಕಂಬದಲ್ಲಿ ಕುಳಿತಿರುವ ಹಾವಾಡಿಗನು ತನ್ನ ಎರಡು ಕೈಗಳಿಂದ ಪುಂಗಿಯನ್ನು ಹಿಡಿದು ಊದುತ್ತಿದ್ದಾನೆ. ಹಾವಾಡಿಗನು ದೊಡ್ಡ ಕಣ್ಣು ಮತ್ತು ಮೂಗು ಮತ್ತು ಹಣ್ಣೆಗೆ ಕುಂಕುಮವನ್ನು ಹಚ್ಚಿಕೊಂಡಿದ್ದಾನೆ. ತಲೆಗೆ ಗೆರೆ ಗೆರೆಯಿಂದ ಕೂಡಿದ ವಿಶೇಷವಾದ ತಲೆಯುಡಿಯನ್ನು ಧರಿಸಿದ್ದಾನೆ. ಹಾವಾಡಿಗನು ಕೈಗಳಿಗೆ ತೋಳ್ಬಂದಿ ಕಾಲುಗಳಿಗೆ ಕಡಗವನ್ನು ಧರಿಸಿದ್ದಾನೆ. ಕೊಪ್ಪಳ ಜಿಲ್ಲೆಯ ವಿಜಯನಗರ ಕಾಲದ ಸ್ಮಾರಕಗಳಲ್ಲಿ ಈ ಪುಂಗಿ ಊದುವ ಶಿಲ್ಪವು ವಿಶೇಷತೆಯಿಂದ ಕೂಡಿದೆ ಎಂದು ಹೇಳಬಹುದು.

ಪುಂಗಿ ಮತ್ತು ಹಾವುವನ್ನು ಹಿಡಿದುಕೊಂಡಿರುವ ಹಾವಾಡಿಗ

ಆನೆಗೊಂದಿಯ ರಂಗನಾಥ ದೇವಾಲಯದ ಮಂಟಪದ ಕಂಬದಲ್ಲಿ ಹಾವಾಡಿಗ ಶಿಲ್ಪವೊಂದನ್ನು ಕಾಣಬಹುದು. ಹಾವಾಡಿಗ ಎಡಗೈಯಲ್ಲಿ ಹಿಡಿದ ಪುಂಗಿಯ ಊದುತ್ತಿದ್ದಾರೆ. ಬಲಗೈಯಲ್ಲಿ ಹಾವುವನ್ನು ಹಿಡಿದುಕೊಂಡಿದ್ದಾನೆ. ಹಾವು ಪುಂಗಿಯ ನಾದಕ್ಕೆ ತಲೆ ಎತ್ತಿಕೊಂಡು ಹಾವಾಡಿಗನ ಕಿವಿವರೆಗೆ ಎಡೆ ಎತ್ತಿ ನಿಂತಿದೆ. ಹಾವಾಡಿಗನು ಚಲಿಸುವ ಭಂಗಿಯಲ್ಲಿ ನಿಂತಿದ್ದಾನೆ. ಹಾವಾಡಿಗ ಕೈಗಳಿಗೆ ಕೈಕಡಗ ಮತ್ತು ತಲೆಯುಡಿಗೆಯನ್ನು ಕಟ್ಟಿ ಕೆಳಗಡೆ ಕೂದಲುವನ್ನು ಬಿಟ್ಟಿದ್ದಾನೆ.

ಹಾವುವನ್ನು ಹಿಡಿದುಕೊಂಡಿರುವ ಹಾವಾಡಿಗ

ಹಿರೇಜಂತಗಲ್ಲನ ಪ್ರಸನ್ನ ವಿರುಪಾಕ್ಷ ದೇವಾಲಯದ ಮುಖಮಂಟಪದ ಕಂಬದಲ್ಲಿ ಹಾವಾಡಿಗನು ಬಲಗೈಯಲ್ಲಿ ಹಾವು ಇದ್ದು ತನ್ನ ಹೆಡೆ ಎತ್ತಿ ನಿಂತಿರುವುದು ಹಾವಾಡಿಗನು ತನ್ನ ಕೈಗಳಿಗೆ ಮಣಿಗಳಿಂದ ತಯಾರಿಸಿದ ತೋಳ್ಬಂದಿಗಳನ್ನು ಧರಿಸಿಕೊಂಡಿದ್ದಾನೆ. ಈತನ ಕೊರಳಗೆ ಹಾರ, ಕಿವಿಗಳಿಗೆ ಕರ್ಣಕುಂಡಲಗಳನ್ನು ಹಾಕಿಕೊಂಡಿದ್ದಾನೆ. ಈತನ ಊದು ಕೆನ್ನೆಗಳು, ಮೀಸೆ, ದೊಡ್ಡ ಕಣ್ಣುಗಳು, ದಪ್ಪನೆಯ ಹುಬ್ಬುಗಳು ಹಾವಾಡಿಗನ ಮುಖದಲ್ಲಿ ಸ್ವಲ್ಪ ಭಯಂಕರತೆಯನ್ನು ಸೂಚಿಸುತ್ತವೆ. ತನ್ನ ತಲೆಗೆ ವಿಶಿಷ್ಟವಾದ ಗೆರೆ ಗೆರೆಯಿಂದ ಕೂಡಿದ ತಲೆಯುಡಿಯನ್ನು ತೊಟ್ಟಿರುವಂತೆ ಶಿಲ್ಪದಲ್ಲಿ ಕಂಡರಿಸಲಾಗಿದೆ.

ಇದೆ ದೇವಾಲಯದ ಮುಖಮಂಟಪದ ಕಂಬದಲ್ಲಿ ಹಾವಾಡಿಗನ ಶಿಲ್ಪವಿದೆ. ಹಾವಾಡಿಗನು ತನ್ನ ಎಡಗೈಯಲ್ಲಿ ಹಾವು ಇದ್ದು ಹಾವಿನ ಹೆಡೆಯು ಹಾವಾಡಿಗನ ಕಿವಿಯವರೆಗೆ ಎತ್ತಿದ್ದು ಹಾವಾಡಿಗನು ಹಾವಿನ ಕಡೆಗೆ ನೋಡುತ್ತಿದ್ದಾನೆ. ಬಲಗೈಯಲ್ಲಿ ವಿಶೇಷವಾದ ವಸ್ತುವನ್ನು

ಹಿಡಿದುಕೊಂಡಿದ್ದಾನೆ. ಹಾವಾಡಿಗನು ತನ್ನ ಎಡಗಾಲನ್ನು ಮಡಚಿದ್ದು, ಬಲಗಾಲನ್ನು ಮುಂದಕ್ಕೆ ಚಾಚಿಕೊಂಡಿದ್ದಾನೆ. ಹಾವಾಡಿಗನು ತೋಳುಗಳಿಗೆ ತೋಳ್ಬಂದಿ, ಕಾಲಿಗೆ ಅಂದುಗೆಗಳನ್ನು ಧರಿಸಿದ್ದಾನೆ. ಈತನು ತನ್ನ ಕಿವಿಗಳಿಗೆ ಕರ್ಣಕುಂಡಲಗಳನ್ನು ಧರಿಸಿದ್ದಾನೆ. ಹಾವಾಡಿಗನು ಕೊರಳಿನಲ್ಲಿ ಮೂರು ಪದಕ ಇರುವ ಸರವನ್ನು ಧರಿಸಿರುವನು. ಈತನ ಸೊಂಟದಲ್ಲಿನ ಸೊಂಟಪಟ್ಟಿಯು ಸ್ಪಷ್ಟವಾಗಿ ಕಾಣುತ್ತದೆ. ಹಾವಾಡಿಗನು ಮೈತುಂಬೆಲ್ಲ ಅಲಂಕಾರವನ್ನು ಮಾಡಿಕೊಂಡಿರುವುದನ್ನು ಕಾಣಬಹುದು. ಇದೆ ದೇವಾಲಯದ ಹೊರಭಾಗದ ಮಂಟಪದ ಕಂಬವೊಂದರಲ್ಲಿ ಹಾವಾಡಿಗನ ಶಿಲ್ಪವೊಂದನ್ನು ಕಾಣಬಹುದು. ನಿಂತಿರುವ ಹಾವಾಡಿಗನು ಬಲಗಾಲವನ್ನು ಮುಂದೆ ಇಟ್ಟಿದ್ದಾನೆ. ಎಡಗಾಲನ್ನು ಹಿಂದೆ ಇಟ್ಟುಕೊಂಡಿದ್ದು ಚಲಿಸುವ ಭಂಗಿಯಲ್ಲಿದ್ದಾನೆ. ತಲೆಗೆ ಧರಿಸಿರುವ ವಿಶಿಷ್ಟವಾಗಿರುವ ತಲೆಯುಡಿಗೆ ಆಕರ್ಷಕವಾಗಿದೆ. ಹಾವಾಡಿಗನು ಕೊರಳಲ್ಲಿ ಪದಕ ಇರುವ ಸರವನ್ನು ಧರಿಸಿದ್ದಾನೆ. ಈತನ ಕರ್ಣಕುಂಡಲ, ಕೈಕಡಗಗಳನ್ನು ಹಾಕಿಕೊಂಡಿದ್ದಾನೆ. ಈತನು ದೊಡ್ಡ ಕಣ್ಣುಗಳು, ದಪ್ಪನೆಯ ಹುಬ್ಬುಗಳು ಹಾಗೂ ವೇಷಭೂಷಣವು ಸ್ವಲ್ಪ ಭಯಂಕರತೆಯನ್ನು ಸೂಚಿಸುತ್ತವೆ. ತನ್ನ ತಲೆಗೆ ವಿಶಿಷ್ಟವಾದ ತಲೆಯುಡಿಗೆಯನ್ನು ತೊಟ್ಟಿರುವಂತೆ ಶಿಲ್ಪದಲ್ಲಿ ಕಂಡರಿಸಲಾಗಿದೆ. ಹಾವಾಡಿಗನು ತನ್ನ ಎಡಗೈಯನ್ನು ಮೇಲೆ ಕೈ ಇಟ್ಟುಕೊಂಡು ನಿಂತಿದ್ದಾನೆ. ಹಾವಾಡಿಗನು ನೃತ್ಯ ಮಾಡುವುದನ್ನು ಶಿಲ್ಪದಲ್ಲಿ ತೋರಿಸಿದ್ದಾರೆ.

ವೆಂಕಟಗಿರಿಯ ವೆಂಕಟೇಶ್ವರ ದೇವಾಲಯದ ಸಭಾಮಂಟಪದ ಕಂಬದಲ್ಲಿ ಹಾವಾಡಿಗನ ಶಿಲ್ಪವಿದೆ. ಹಾವಾಡಿಗನು ಬಲಗೈಯಲ್ಲಿ ಹಾವುವನ್ನು ಹಿಡಿದ್ದಾನೆ. ಹಾವು ತನ್ನ ಹೆಡೆಯನ್ನು ಎತ್ತಿಕೊಂಡು ಹಾವಾಡಿಗನನ್ನು ನೋಡುತ್ತಿದೆ. ಎಡಗೈಯನ್ನು ಮೇಲೆ ಎತ್ತಿದ್ದಾನೆ. ಹಾವಾಡಿಗನು ತಲೆಗೆ ಪೇಟವನ್ನು ಧರಿಸಿದ್ದು ಹಾವಾಡಿಗ ಕೈಗಳಿಗೆ ಕೈಕಡಗ ತೋಳುಗಳಿಗೆ ತೋಳ್ಬಂದಿ ಕಾಲಿಗೆ ಅಂದುಗೆಗಳನ್ನು ಧರಿಸಿದ್ದಾನೆ. ಕಿವಿಗಳಿಗೆ ಕರ್ಣಕಂಡಲವನ್ನು ಧರಿಸಿರುವನು. ಹಾವಾಡಿಗನು ಮೈತುಂಬೆಲ್ಲ ಆಭರಣಗಳಿಂದ ಅಲಂಕರಣವನ್ನು ಮಾಡಿಕೊಂಡಿದ್ದು ಎದೆ ಮತ್ತು ಸೊಂಟದ ಭಾಗಗಳ ಮೂಲಕ ಭಯ ಹುಟ್ಟಿಸುವಂತೆ ಅಥವಾ ಉಗ್ರವಾಗಿ ತೋರಿಸಿರುವುದನ್ನು ಕಾಣಬಹುದು. ಹಾವಾಡಿಗನು ಎಡಗೈಯ ಭುಜದಿಂದ ಬಟ್ಟೆಯನ್ನು ಕೆಳಗೆ ಬಿಡಲಾಗಿದೆ.

ಇದೆ ದೇವಾಲಯದ ಸಭಾಮಂಟಪದ ಕಂಬದಲ್ಲಿ ಹಾವಾಡಿಗನು ಕೆಳಗೆ ಬಿಟ್ಟಿರುವ ಬಲಗೈಯಲ್ಲಿ ಯಾವ ವಸ್ತು ಹಿಡಿದುಕೊಂಡಿದ್ದಾನೆಂಬುದು ಸ್ಪಷ್ಟವಾಗಿ ಕಾಣುತ್ತಿಲ್ಲ. ಹಾವಾಡಿಗನು ಬಲಗೈಯಲ್ಲಿ ಹಾವಿನ ಬಾಲವನ್ನು ಹಿಡಿದುಕೊಂಡಿದು ಹಾವು ಕೆಳಮುಖ ಮಾಡಿ ಹೆಡೆ ಬಿಚ್ಚಿ ನಿಂತಿದೆ. ಹಾವಾಡಿಗನು ವಿವಿಧ ಆಭರಣಗಳನ್ನು ಹಾಕಿಕೊಂಡಿರುವ ಈತನ ತಲೆಯುಡಿಗೆ ಸುರಳಿ ಸುರುಳಿಯಾಗಿದ್ದು ಆಕರ್ಷಕವಾಗಿದೆ. ಇವನ ಸೊಂಟದಲ್ಲಿನ ಸೊಂಟ ಪಟ್ಟಿಯು ಸ್ಪಷ್ಟವಾಗಿ ಕಾಣುತ್ತದೆ. ಈ ಶಿಲ್ಪದಲ್ಲಿ ಪುಂಗಿಯನ್ನು ತೋರಿಸಿಲ್ಲ.

ನವಲಿಯ ವೀರಭದ್ರ ದೇವಾಲಯ ಸಭಾಮಂಟಪದ ಕಂಬವೊಂದರಲ್ಲಿ ಹಾವಾಡಿಗನು ತನ್ನ ಬಲಗೈಯಿಂದ ಹಾವಿನ ಬಾಲವನ್ನು ಹಿಡಿದುಕೊಂಡಿದ್ದಾನೆ. ಎಡಗೈಯಲ್ಲಿ ಯಾವ ವಸ್ತು ಹಿಡಿದುಕೊಂಡಿದ್ದಾನೆ ಎಂಬುದು ಸ್ಪಷ್ಟತೆಯಿಲ್ಲ. ಹಾವಾಡಿಗನನ್ನು ಸರಳವಾದ ರೀತಿಯಲ್ಲಿ ತೋರಿಸಿದ್ದಾರೆ.

ಕನಕಾಚಲ ದೇವಾಲಯದ ಮಧ್ಯಮಂಟಪದ ಕಂಬದಲ್ಲಿ ಹಾವಾಡಿಗರ ಶಿಲ್ಪವಿದೆ. ಹಾವಾಡಿಗ ಬಲಗೈಯನ್ನು ಕೆಳಗೆ ಇಳಿಬಿಟ್ಟಿದ್ದಾನೆ. ಎಡಗೈಯಲ್ಲಿ ಮೇಲೆ ಹೆಡೆ ಎತ್ತಿದ ಹಾವಿನ ಬಾಲವನ್ನು ಹಿಡಿದುಕೊಂಡಿದ್ದಾನೆ. ಹಾವಾಡಿಗನು ಎಡಗಾಲು ಎತ್ತಿದ್ದು ಅಲ್ಲಿಯಿಂದ ಹಾವು ಕೆಳಮುಖ ಮಾಡಿ ಹೆಡೆ ಎತ್ತಿದೆ. ಹಾವಾಡಿಗರ ಕೊರಳಲ್ಲಿ ಸರ ಮತ್ತು ಕೈಗಳಲ್ಲಿ ತೋಳಬಂದಿ, ಕಿವಿಗಳಲ್ಲಿ ಕರ್ಣಕುಂಡಲವನ್ನು, ಸೊಂಟದಲ್ಲಿ ಸೊಂಟಪಟ್ಟಿ ಇದೆ. ತಲೆಗೆ ವಿಶಿಷ್ಟವಾದ ಎರಡು ಪಟ್ಟಿಯ ಕೋಡೆಯನ್ನು ಧರಿಸಿದ್ದಾನೆ.

ಇದೆ ಮಧ್ಯಮಂಟಪದ ಮತ್ತೊಂದು ಕಂಬದಲ್ಲಿ ಹಾವಾಡಿಗನ ಶಿಲ್ಪ ಇದೆ. ಹಾವಾಡಿಗನು ಧಡೂತಿ ದೇಹದವನಾಗಿದ್ದು ತನ್ನ ಬಲಗೈಯನ್ನು ಮೇಲೆ ಎತ್ತಿದ್ದಾನೆ. ಈ ಕೈಯಲ್ಲಿ ಯಾವ ವಸ್ತು ಹಿಡಿದುಕೊಂಡಿದ್ದಾನೆಂಬುವುದು ಸ್ಪಷ್ಟವಾಗುತ್ತಿಲ್ಲ. ಎಡಗೈಯಲ್ಲಿ ಹಾವುವನ್ನು ಹಿಡಿದುಕೊಂಡಿದ್ದಾನೆ. ಎಡಗೈಯ ಮೇಲ್ಭಾಗದಲ್ಲಿ ಹಾವು ತಲೆ ಎತ್ತಿ ನಿಂತಿದೆ. ಹಾವಾಡಿಗನು ತಲೆಗೆ ಪೇಟವನ್ನು ಧರಿಸಿದ್ದಾನೆ. ಹಾವಾಡಗನು ನೃತ್ಯ ಭಂಗಿಯಲ್ಲಿದ್ದಾನೆ.

ಇದೆ ದೇವಾಲಯದ ಪ್ರವೇಶ ದ್ವಾರದ ಮುಂದಿರುವ ಕಂಬದಲ್ಲಿ ಹಾವಾಡಿಗನ ಶಿಲ್ಪವಿದೆ. ಹಾವಾಡಿಗನು ನೃತ್ಯ ಮಾಡುವ ಭಂಗಿಯಲ್ಲಿದ್ದು ಎಡಗೈಯನ್ನು ಕೆಳಗೆ ಇಳಿಬಿಟ್ಟಿದ್ದಾನೆ. ಈತನು ಬಲಗೈಯಲ್ಲಿ ಹಾವುವನ್ನು ಹಿಡಿದುಕೊಂಡಿದ್ದು ಬಲಮೊಳಕಾಲ ಮೇಲೆ ಕೈಯನ್ನು ಇಟ್ಟುಕೊಂಡಿದ್ದಾನೆ. ಹಾವಾಡಿಗನು ಕಿವಿಗಳಿಗೆ ಕರ್ಣಕುಂಡಲವನ್ನು, ಸೊಂಟಕ್ಕೆ ಸೊಂಟ ಪಟ್ಟಿಯನ್ನು ಧರಿಸಿದ್ದಾನೆ. ಹಾವಾಡಿಗನು ತಲೆಯ ಹಿಂಭಾಗದಲ್ಲಿ ವೃತ್ತಾಕಾರದ ಚಕ್ರವನ್ನು ಇಟ್ಟುಕೊಂಡಿದ್ದಾನೆ. ಈ ರೀತಿಯ ಶಿಲ್ಪವು ವಿಶೇಷತೆಯಿಂದ ಕೂಡಿದೆ.

ಕನಕಾಚಲ ದೇವಾಲಯದ ಮಂಟಪದ ಕಂಬವೊಂದರಲ್ಲಿ ಹಾವಾಡಗಿತ್ತಿ ಶಿಲ್ಪವಿದೆ. ನೃತ್ಯ ಮಾಡುತ್ತಿರುವ ಮಹಿಳೆಯು ಬಲಗೈಯನ್ನು ಇಳಿ ಬಿಟ್ಟಿದ್ದು ಆ ಕೈಯಲ್ಲಿ ಏನು ಹಿಡಿದುಕೊಂಡಿದ್ದಾಳೆಂಬುದು ಸ್ಪಷ್ಟವಾಗಿಲ್ಲ. ಎಡಗೈಯಲ್ಲಿ ಹಾವಿನ ಬಾಲವನ್ನು ಹಿಡಿದುಕೊಂಡಿದ್ದಾಳೆ. ಎಡಗೈಯಲ್ಲಿ ಹಾವು ಹಿಡಿದು ಎಡಗಾಲಿನಿಂದ ಹಾವನ್ನು ತುಳಿಯುತ್ತಿರುವಂತೆ ಶಿಲ್ಪಿಯು ಚಿತ್ರಿಸಿದ್ದಾನೆ. ಹಾವು ಹಾವಾಡಗಿತ್ತಿಯ ಕಡೆ ಸಿಟ್ಟಿನಿಂದ ನೋಡುತ್ತಿರುವಂತೆ ಕಂಡರಿಸಿದೆ. ಹಾವಾಡಗಿತ್ತಿಯು ನೃತ್ಯ ಭಂಗಿಯಲ್ಲಿದ್ದಾಳೆ. ಕಿವಿಯಲ್ಲಿ ಕರ್ಣಕುಂಡಲವನ್ನು ಧರಿಸಿದ್ದಾಳೆ. ಹಾವಾಡಗಿತ್ತಿಯು ದೊಡ್ಡ ಕಣ್ಣು ಮತ್ತು ಹುಬ್ಬುಗಳನ್ನು ಹೊಂದಿದ್ದಾಳೆ. ಹಾವಾಡಗಿತ್ತಿಯು ಕೈಗಳಿಗೆ ತೋಳ್ಬಂದಿ ಮತ್ತು ಬಳೆಯನ್ನು ಧರಿಸಿದ್ದಾಳೆ. ಸೊಂಟಕ್ಕೆ ಸೊಂಟಪಟ್ಟಿಯನ್ನು ಧರಿಸಿದ್ದಾಳೆ. ಈ ಪ್ರದೇಶದಲ್ಲಿ ದೊರೆತ್ತಿರುವ ಏಕೈಕ ಹಾವಾಡಗಿತ್ತಿಯ ಶಿಲ್ಪ ಇದಾಗಿದೆ ಎಂದು ಹೇಳಬಹುದು.

ದ್ವಾರಪಾಲಕರ ಶಿಲ್ಪಗಳು

ಈ ಶಿಲ್ಪಗಳು ಸಾಮಾನ್ಯವಾಗಿ ಎಲ್ಲ ದೇವಾಲಯಗಳಲ್ಲೂ ಕಂಡು ಬರುತ್ತವೆ. ಕನಕಾಚಲ ಲಕ್ಷ್ಮೀ ನರಸಿಂಹ ದೇವಾಲಯದ ದ್ವಾರಮಂಟಪದಲ್ಲಿ ಹಾಗೂ ನವರಂಗದ ಬಾಗಿಲ ಬದಿಯಲ್ಲಿರುವ ದ್ವಾರಪಾಲಕರ ಶಿಲ್ಪಗಳು ಬಿಡಿಯಾಗಿ ಮತ್ತು ಬೃಹತ ಪ್ರಮಾಣದಲ್ಲಿ ಇವೆ. ಇವು ಚತುರ್ಭುಜಗಳನ್ನು

ಹೊಂದಿದ್ದು, ಹಿಂದಿನ ಕೈಗಳಲ್ಲಿ ಚಕ್ರ, ಶಂಖಗಳನ್ನು ಮುಂದಿನ ಕೈಗಳಲ್ಲಿ ಗದೆಯಿದೆ. ದ್ವಾರಮಂಟಪದಲ್ಲಿರುವ ದ್ವಾರಪಾಲರು ಬಲಗಾಲನ್ನು ಅಡ್ಡಲಾಗಿ ಇಟ್ಟರೇ, ನವರಂಗದಲ್ಲಿರುವ ದ್ವಾರಪಾಲಕರು ಸಮಭಂಗಿಯಲ್ಲಿ ನಿಂತ್ತಿದ್ದಾರೆ. ಕಿರೀಟಮುಕುಟ, ಭುಜಕೀರ್ತಿ, ಭುಜಹಾರ, ಪದಕಹಾರ, ಛನ್ನವೀರ, ತೊಳ್ಬಂದಿ, ಮುಂಗೈ ಕಡಗ, ಮುಣಿಬಂಧ ಸೊಂಟಪಟ್ಟಿ ವೈಜಯಂತಿಹಾರ, ಕಾಲ್ಕಡಗ, ಪಾದಸರ ಈ ಆಭರಣಗಳಿವೆ. ದೋತಿಯನ್ನು ಧರಿಸಿದ್ದು, ಬಾಯಿಯಲ್ಲಿ ಕೋರೆದಾಡೆಗಳು ಹಣೆಯ ಮೇಲೆ ದ್ವಿನಾಮ (ದ್ವಾರಮಂಟಪ) ಇಲ್ಲವೆ ತ್ರಿನಾಮ(ನವರಂಗ)ಗಳಿವೆ. ಆನೆಗೊಂದಿಯ ರಂಗನಾಥ ದೇವಾಲಯದ ಗರ್ಭಗೃಹ ಮತ್ತು ಅಂತರಾಳದ ಬಾಗಿಲುವಾಡದಲ್ಲಿರುವ ದ್ವಾರಪಾಲಕ ಶಿಲ್ಪಗಳು ಮೇಲಿನ ಕೈಗಳಲ್ಲಿ ಚಕ್ರ ಮತ್ತು ಶಂಕವನ್ನು ಹಿಡಿದಿದೆ. ಕೆಳಗಿನ ಕೈಗಳು ಬಲಕ್ಕೆ ಅಭಯ ಎಡಗೈ ಗದೆಯ ಮೇಲೆ ಇರಿಸಿದೆ. ಕೊರಳಲ್ಲಿ ಆಭರಣಗಳಿವೆ.

ಪ್ರಾಣಿ ಶಿಲ್ಪಗಳು

ಆನೆ

ಆನೆ ಪ್ರಪಂಚದ ದೈತ್ಯಾಕಾರದ ಪ್ರಾಣಿ. ಗಂಭೀರತೆ, ಪ್ರತಿಷ್ಠೆ ಮತ್ತು ಗೌರವಗಳ ಸಂಕೇತ. ಆನೆಗೊಂದಿ, ಹಿರೇಜಂತಗಲ್ಲು, ಕನಕಗಿರಿ, ಹನುಮನಹಳ್ಳಿ, ಹನುಮಸಾಗರದ ಅನೇಕ ದೇವಾಲಯಗಳಲ್ಲಿ ಆನೆಗಳ ಶಿಲ್ಪಗಳು ಕಂಡುಬಂದಿವೆ. ಕೆಲವು ಆನೆಗಳು ಮುನ್ನಡೆಯುತ್ತಿರುವಂತೆ, ಕೆಲವು ಮರದ ರೆಂಬೆಯನ್ನು ಮುರಿಯುತ್ತಿರುವಂತೆ, ಕಬ್ಬು ತಿನ್ನುವಂತೆ ಕಂಡರಿಸಲಾಗಿದೆ.

ಹಸು

ಹಸು(ಆಕಳು) ಭಾರತೀಯ ಪರಂಪರೆಯಲ್ಲಿ ತುಂಬಾ ದೈವಿಕ ರೂಪದ ಮತ್ತು ಪವಿತ್ರವಾದ ಪ್ರಾಣಿ ಎಂಬ ನಂಬಿಕೆ ಇದೆ. ಹಸುವಿನಲ್ಲಿ ಮೂವತ್ತಾರು ಸಾವಿರ ಕೋಟಿ ದೇವಾನುದೇವತೆಗಳು ನೆಲೆಸಿದ್ದಾರೆ ಎನ್ನುವ ನಂಬಿಕೆ ಜನರಲ್ಲಿ ಬೇರೂರಿದೆ. ವೇದ ಪುರಾಣಾದಿಗಳಲೆಲ್ಲ ಹಸುವನ್ನು ಪೂಜ್ಯನೀಯವಾಗಿ ಚಿತ್ರಿಸಲಾಗಿದೆ. ಹಿಂದೂ ಧರ್ಮವು ಹಸುವನ್ನು ಮಾತೆ(ತಾಯಿ) ಎಂದು ನಂಬುತ್ತದೆ. ಹೀಗಾಗಿ ದೇವಾಲಯಗಳಲ್ಲಿ ಹಸುಗಳನ್ನು ಚಿತ್ರಿಸುವುದು ಪಾವಿತ್ರ್ಯತೆಯ ದೃಷ್ಠಿ ಮತ್ತು ಹಸುವನ್ನು ಪೂಜಿಸಿದರೆ ಮೂವತ್ತಾರು ಸಾವಿರ ಕೋಟಿ ದೇವಾನುದೇವತೆಗಳನ್ನು ಪೂಜಿಸಿದ ಫಲವೆಂದು ನಂಬಿಕೆಯಿದೆ. ಕೊಪ್ಪಳ ಜಿಲ್ಲೆಯ ವಿಜಯನಗರ ಕಾಲದ ಸ್ಮಾರಕಗಳಲ್ಲಿ ಹಸುವನ್ನು ತೋರಲಾಗಿದೆ. ಆನೆಗೊಂದಿಯ ರಂಗನಾಥ, ಹಿರೇಜಂತಗಲ್ಲನ ಪ್ರಸನ್ನ ವಿರುಪಾಕ್ಷ, ಕನಕಗಿರಿಯ ಕನಕಚಾಲ ಲಕ್ಷ್ಮೀನರಸಿಂಹ, ಸಂಜೀವಮೂರ್ತಿ ದೇವಾಲಯಗಳಲ್ಲಿ ಹಸುಗಳ ಶಿಲ್ಪಗಳಿವೆ.

ಜಿಂಕೆ

ಜಿಂಕೆ ಅತ್ಯಂತ ಸೂಕ್ಷ್ಮ ಸ್ವಭಾವದ ಪ್ರಾಣಿ. ತನ್ನ ನಾಜೂಕಿನ ನಡಿಗೆ ಮತ್ತು ಮಿಂಚಿನ ಓಟ ಹಾಗೂ ಸೊಗಸಾದ ಮೈಬಣ್ಣಕ್ಕೆ ಹೆಚ್ಚು ಪ್ರಸಿದ್ಧಿ. ಆನೆಗೊಂದಿಯ ಹನುಮಂತ ದೇವಾಲಯದಲ್ಲಿ ಜಿಂಕೆಯ ಶಿಲ್ಪಗಳು ಕಂಡುಬಂದಿವೆ. ಇವುಗಳಲ್ಲಿ ಜಿಂಕೆ ಓಡುತ್ತಿರುವಂತೆ, ಜಿಗಿಯುತ್ತಾ ಹಿಂದಿರುಗಿ ನೋಡುತ್ತಿರುವಂತೆ ತೋರಲಾಗಿದೆ.

ಹಲ್ಲಿ

ಹಲ್ಲಿಗಳು ಭಾರತೀಯ ಪರಂಪರೆಯಲ್ಲಿ ಶಕುನದ ಸಂಕೇತವಾಗಿ ಪ್ರತಿನಿಧಿತವಾದ ಪ್ರಾಣಿಯಾಗಿದೆ. ಶುಭ ಮತ್ತು ಅಶುಭ ಎರಡು ಕಾರಣಕ್ಕಾಗಿ ಹಲ್ಲಿಯು ಬಿಂಬಿಸಲಾಗಿದೆ. ಹಲ್ಲಿಯನ್ನು ಕಾಮದ ಸಂಕೇತವಾಗಿಯೂ ಗುರುತಿಸಲಾಗುತ್ತದೆ. ದೇವಾಲಯಗಳಲ್ಲಿ ಮಿಥುನ ಶಿಲ್ಪಗಳಂತೆ ಹಲ್ಲಿ ಶಿಲ್ಪಗಳನ್ನು ಬಳಸಿರುವ ಸಾಧ್ಯತೆಯಿದೆ.

ಕೊಪ್ಪಳ ಜಿಲ್ಲೆಯ ವಿಜಯನಗರ ಕಾಲದ ಸ್ಮಾರಕಗಳಲ್ಲಿ ಹಲ್ಲಿಯನ್ನು ತೋರಲಾಗಿದೆ. ಆನೆಗೊಂದಿಯ ರಂಗನಾಥ, ಹಿರೇಜಂತಗಲ್ಲ ಪ್ರಸನ್ನ ವಿರುಪಾಕ್ಷ, ಕನಕಗಿರಿಯ ಕನಕಾಚಲ ಲಕ್ಷ್ಮೀನರಸಿಂಹ, ಸಂಜೀವಮೂರ್ತಿ ದೇವಾಲಯಗಳಲ್ಲಿ ಹಲ್ಲಿಯ ಶಿಲ್ಪಗಳಿವೆ. ದೇವಾಲಯದ ಪ್ರವೇಶದ್ವಾರದ ಅಥವಾ ಇತರೆ ಭಾಗಗಳ ಮೇಲ್ಛಾವಣಿ ಮತ್ತು ಕಂಬಗಳಲ್ಲಿ ಹಲ್ಲಿಗಳನ್ನು ಕಾಣಬಹುದು. ಆದರೆ ಹೆಚ್ಚಿನ ಶಿಲ್ಪಗಳು ಮೇಲ್ಛಾವಣಿಯಲ್ಲಿ ದೊರೆತಿವೆ.

ಕೋತಿ

ಕೋತಿ(ವಾನರ)ಗಳನ್ನು ಆಂಜನೇಯನ ರೂಪವೆಂದು ಭಾರತೀಯ ಪರಂಪರೆಯಲ್ಲಿ ಪೂಜಿಸಲಾಗುತ್ತದೆ. ರಾಮಾಯಣದ ಕಥೆಗಳಲ್ಲಿ ಕಪಿಸೇನೆ ಇದ್ದ ಬಗ್ಗೆ ಮತ್ತು ಕಪಿಸೇನೆ ಮಾಡಿರುವ ಸಾಹಸಗಳ ಬಗ್ಗೆ ಉಲ್ಲೇಖಿಸಿಗುತ್ತದೆ. ರಾಮನು ಸೀತೆಯನ್ನು ರಾವಣನಿಂದ ಬಿಡಿಸಿಕೊಂಡು ತರುವಲ್ಲಿ ಈ ಕಪಿಸೇನೆ ತುಂಬಾ ಸಹಾಯಮಾಡಿರುವುದು ಕಾಣಬಹುದಾಗಿದೆ. ಹಂಪಿ ಮತ್ತು ಕೊಪ್ಪಳ ಜಿಲ್ಲೆಯ ಅನೇಕ ಸ್ಥಳಗಳು ರಾಮಾಯಣದೊಂದಿಗೆ ಸಂಬಂಧ ಹೊಂದಿವೆ ಮತ್ತು ಈ ಪ್ರದೇಶದಲ್ಲಿ ಕೋತಿಗಳ ಸಂಖ್ಯೆ ಕೂಡ ಹೆಚ್ಚಿನ ಸಂಖ್ಯೆಯಲ್ಲಿದೆ. ಈ ಎಲ್ಲ ಹಿನ್ನೆಲೆಯಲ್ಲಿ ಕೊಪ್ಪಳ ಜಿಲ್ಲೆಯ ವಿಜಯನಗರ ಕಾಲದ ಸ್ಮಾರಕಗಳಲ್ಲಿ ಹಲವು ಕೋತಿಗಳ ಶಿಲ್ಪಗಳನ್ನು ಕಂಡರಿಸಲಾಗಿದೆ ಎನ್ನಬಹುದು.

ಹಿರೇಜಂತಗಲ್ಲನ ಮಂಟಪದ ಕಂಬವೊಂದರಲ್ಲಿ ಕೋತಿಯ ಶಿಲ್ಪವಿದೆ. ಕೋತಿಯು ಕುಳಿತಿದ್ದು, ಕೈಯಿಂದ ತಿನ್ನಲು ಹಣ್ಣನ್ನು ಬಾಯಿಗೆ ಇಟ್ಟುಕೊಂಡಿದೆ. ಆನೆಗೊಂದಿಯ ರಂಗನಾಥ ದೇವಾಲಯದ ಕಂಬವೊಂದರಲ್ಲಿ ಕೋತಿಯೊಂದು ತನ್ನ ಬಲಗೈಯಿಂದ ತಿನ್ನುತ್ತಿದೆ. ಎಡಗೈಯನ್ನು ಮೊಣಕಾಲ ಮೇಲೆ ಇಟ್ಟುಕೊಂಡು ಕುಳಿತಿದೆ. ಇದೇ ದೇವಾಲಯದ ಮರದ ಮೇಲೆ ಕೋತಿವೊಂದು ಓಡಾಡುತ್ತಿರುವ ಶಿಲ್ಪವಿದೆ. ಇದೇ ದೇವಾಲಯದ ಪ್ರಾಕಾರಗೋಡೆಯ ಮಂಟಪದ ಕಂಬವೊಂದರಲ್ಲಿ ಎರಡು ಕೋತಿಗಳು ಇವೆ. ಎರಡು ಕೋತಿಗಳು ಎದುರು ಬದುರಾಗಿ ಕುಳಿತು, ಒಂದರ ಗಲ್ಲ ಇನ್ನೊಂದು ಹಿಡಿದುಕೊಂಡು ಕುಳಿತುಕೊಂಡಿರುವುದನ್ನು ಕೆತ್ತಲಾಗಿದೆ. ಈ ತರಹದ ಅನೇಕ ಶಿಲ್ಪಗಳು ಕೊಪ್ಪಳ ಜಿಲ್ಲೆಯಾದ್ಯಂತ ಕಂಡು ಬಂದಿವೆ.

ಮೀನು

ಮೀನು ಜಲಚರ ಪ್ರಾಣಿ. ಜೋಡಿ ಮೀನುಗಳು ಶುಭದ ಸಂಕೇತ. ಜೈನ ಸಂಪ್ರದಾಯದಲ್ಲಿ

ಅಷ್ಟಮಂಗಳದಲ್ಲಿ ಜೋಡಿ ಮೀನುಗಳನ್ನು ತೋರುವ ಪರಿಪಾಠವಿದೆ. ಕೊಪ್ಪಳ ಜಿಲ್ಲೆಯ ಸ್ಮಾರಕಗಳಲ್ಲಿ ಮೀನಿನ ಶಿಲ್ಪಗಳನ್ನು ಚಿತ್ರಿಸಲಾಗಿದೆ. ಇವುಗಳು ದೇವಾಲಯದ ಕಂಬಗಳು ಪುಷ್ಕರಣಿಗಳಲ್ಲಿ ತೋರಲಾಗಿದೆ. ಒಂದರ ಮುಂದೆ ಒಂದರಂತೆ ಜೋಡಿ ಮೀನುಗಳನ್ನು ಹಿರೇಜಂತಗಲ್ಲನ ಪ್ರಸನ್ನ ವಿರುಪಾಕ್ಷ ದೇವಾಲಯದ ಬಿಡಿ ಕಂಬಗಳಲ್ಲಿ ಕಂಡರಿಸಲಾಗಿದೆ. ಇದೇ ಕಂಬವೊಂದರಲ್ಲಿ ಮೀನಿನ ಇನ್ನೊಂದು ಉಬ್ಬು ಶಿಲ್ಪವಿದ್ದು ಎರಡು ಮೀನುಗಳು ಈಜಾಡುವ ರೀತಿಯಲ್ಲಿದೆ. ಒಂದು ಮೀನು ದಷ್ಟಪುಷ್ಟವಾಗಿದ್ದು ಬಾಯಿಯನ್ನು ತೆರೆದುಕೊಂಡಿದೆ. ತಲೆ ಮೇಲೆ ಮಾಡಿದ್ದು ಬಾಯಿ ತೆರೆದಿದೆ. ಆನೆಗೊಂದಿಯ ರಂಗನಾಥ ದೇವಾಲಯದ ಮಂಟಪದ ಕಂಬಗಳಲ್ಲಿ ಮೀನಿನ ಉಬ್ಬು ಶಿಲ್ಪ ಕೆತ್ತಲಾಗಿದೆ ಹಾಗೂ ಕನಕಗಿರಿಯ ಕನಕಾಚಲ ಲಕ್ಷ್ಮೀನರಸಿಂಹ ದೇವಾಲಯದಲ್ಲೂ ಮೀನಿನ ಶಿಲ್ಪಗಳು ಕಂಡುಬರುತ್ತವೆ.

ಆಮೆ

ಆಮೆ ವಿಷ್ಣುವಿನ ಕೂರ್ಮಾವತಾರದ ಸಂಕೇತ ಮತ್ತು ಆಮೆಯನ್ನು ಸಮೃದ್ಧಿಯ ಸಮಕೇತವಾಗಿಯೂ ಕಾಣಲಾಗಿದೆ. ಭಾರತೀಯ ಪರಂಪರೆಯಲ್ಲಿ ದೈವಿರೂಪ ಪಡೆದಿರುವ ಪ್ರಾಣಿಗಳಲ್ಲಿ ಆಮೆ ಕೂಡ ಒಂದು. ಪ್ರತಿ ದೇವಾಲಯದ ದ್ವಾರ ಬಾಗಿಲಲ್ಲಿ ಆಮೆಯ ಶಿಲ್ಪಗಳನ್ನು ಕಾಣಬಹುದಾಗಿದೆ. ಕೊಪ್ಪಳ ಜಿಲ್ಲೆಯ ಹಿರೇಜಂತಗಲ್ಲಿನ ಪ್ರಸನ್ನ ವಿರೂಪಾಕ್ಷ ದೇವಾಲಯ, ಕನಕಗಿರಿಯ ಕನಕಾಚಲ ದೇವಾಲಯ, ಮಂಟಪಗಳಲ್ಲಿ ಆಮೆಯನ್ನು ವಿಶೇಷವಾಗಿ ಕಂಬಗಳಲ್ಲಿ ಪ್ರಾಕಾರ ಗೋಡೆಗಳಲ್ಲಿ ಚಿತ್ರಿಸಲಾಗಿದೆ.

ಚಿರತೆ

ಮೊನಪ್ಪಯ್ಯ ಮಠದಲ್ಲಿರುವ ಗಿಂಡಿಬಾವಿಯಲ್ಲಿ ಚಿರತೆಯ ಶಿಲ್ಪವಿದೆ. ಚಿರತೆಯು ವ್ಯಕ್ತಿಯ ಮೇಲೆ ದಾಳಿ ಮಾಡಿದೆ. ವ್ಯಕ್ತಿಯು ಸತ್ತ ರೀತಿಯಲ್ಲಿ ಬಿದ್ದಿದ್ದಾನೆ. ಚಿರತೆಯು ಹಿಂದಿರುಗಿ ನೋಡುತ್ತಿದ್ದೆ. ಇದೇ ಬಾವಿಯಲ್ಲಿ ಮತ್ತೊಂದು ಚಿರತೆ ಶಿಲ್ಪವಿದೆ. ಚಿರತೆಯನ್ನು ದೊಡ್ಡದಾಗಿ ಕೆತ್ತಿದ್ದಾರೆ. ಚಿರತೆಯು ವ್ಯಕ್ತಿಯ ಮೇಲೆ ದಾಳಿ ಮಾಡಲು ಹೊರಟಿದೆ. ವ್ಯಕ್ತಿಯು ದೊಡ್ಡದಾದ ಈಟಿಯಿಂದ ಚಿರತೆಯ ಮುಖಕ್ಕೆ ತಿವಿಯುತ್ತಿದ್ದಾನೆ.

ಹುಲಿ

ಆನೆಗೊಂದಿಯ ಹುಚ್ಚಪ್ಪಯ್ಯನ ಮಠದ ಆವರಣದಲ್ಲಿರುವ ಮಂಟಪದಲ್ಲಿ ಹುಲಿಬೇಟೆಯ ಶಿಲ್ಪವೊಂದನ್ನು ಕಂಡರಿಸಲಾಗಿದೆ. ಇದು ಆನೆಗೊಂದಿಯ ವ್ಯಾಪ್ತಿಯಲ್ಲಿ ಕಂಡುಬಂದಿರುವ ಹುಲಿಬೇಟೆಯ ಏಕೈಕ ನಿರೂಪಣಾತ್ಮಕ ಶಿಲ್ಪ. ಮಂಟಪದ ಮೇಲ್ಛಾವಣಿಯಲ್ಲಿ ಸೇರಿಸಿರುವ ಈ ಶಿಲ್ಪವನ್ನು ಕ್ಲೋರೈಟಿಕ್ ಶಿಷ್ಟ ಶಿಲೆಯಲ್ಲಿ ಕಂಡರಿಸಲಾಗಿದೆ. ಅಶ್ವಾರೂಢನಾದ ವ್ಯಕ್ತಿಯು ಬೇಟೆಗೆ ಹೋಗುತ್ತಿರುವ ಸನ್ನಿವೇಷವನ್ನು ಅತ್ಯಂತ ಸೊಗಸಾಗಿ ಕೆತ್ತಲಾಗಿದೆ. ತನ್ನ ಕೈಯಲ್ಲಿ ಅಶ್ವದ ಲಗಾಮು ಮತ್ತು ಖಡ್ಗವನ್ನು ಈತ ಹಿಡಿದಿದ್ದಾನೆ. ಇಬ್ಬರು ಸೇವಕರು ಛತ್ರಿಯನ್ನು ಹಿಡಿದಿರುವುದರಿಂದ

ಇವನನ್ನು ರಾಜಪ್ರಮುಖನೆಂದು ಗುರುತಿಸಬಹುದು. ರಾಜಪ್ರಮುಖ ಸೈನ್ಯ ಸಮೇತನಾಗಿ ಬೇಟೆಗೆ ಆಗಮಿಸಿದ್ದಾನೆ. ಅಶ್ವಾರೂಢನಾದ ಪ್ರಮುಖನನ್ನು ಐದು ಜನ ಸೈನಿಕರು ಹಿಂಬಾಲಿಸುತ್ತಿದ್ದಾರೆ. ರಾಜಪ್ರಮುಖನತ್ತ ಜಿಗಿಯುತ್ತಿರುವ ಹುಲಿಯನ್ನು ಸೈನಿಕರು ಕೊಲ್ಲುತ್ತಿದ್ದಾರೆ. ಖಡ್ಗ ಮತ್ತು ಗುರಾಣಿ ಹಿಡಿದ ಸೈನಿಕರು ಹಿಂಬದಿಯಿಂದಲೂ ಹುಲಿಯನ್ನು ಕೊಲ್ಲಲು ಬರುತ್ತಿದ್ದಾರೆ. ಇವರಲ್ಲಿ ಒಬ್ಬ ಬಾಣ ಪ್ರಯೋಗದಲ್ಲಿ ನಿರತವಾಗಿದ್ದಾನೆ. ಮುಂಬದಿಯಲ್ಲಿರುವ ಇಬ್ಬರು ಸೈನಿಕರು ಗುದ್ದುಬಾಕುವಿನಿಂದ ಹುಲಿಯನ್ನು ಚುಚ್ಚಿದ್ದಾರೆ. ಈ ದೃಶ್ಯದ ಪಕ್ಕದಲ್ಲಿ ಹುಲಿಯನ್ನು ಸಾಗಿಸುತ್ತಿರುವ ಚಿತ್ರಣವನ್ನು ಕಡೆಯಲಾಗಿದೆ. ಆರು ಜನ ಸೈನಿಕರು ಖಡ್ಗ ಮತ್ತು ಗುರಾಣಿಯನ್ನು ಹಿಡಿದು ಅತ್ಯಂತ ಉತ್ಸುಕರಾಗಿ ಮುನ್ನಡೆಯುತ್ತಿದ್ದಾರೆ. ಅಶ್ವಾರೋಹಿ ರಾಜಪ್ರಮುಖ ಅಶ್ವವನ್ನು ನಡೆಸುತ್ತ ಕೈಯಲ್ಲಿ ಹಿಡಿದ ಖಡ್ಗವನ್ನು ಮೇಲೆತ್ತಿದ್ದಾನೆ. ಇಬ್ಬರು ಸೇವಕರು ಇವನಿಗೆ ಛತ್ರಿ ಹಿಡಿದಿದ್ದಾರೆ. ಇವನ ಹಿಂಬದಿಯಲ್ಲಿ ಬೇಟೆಯಾಡಿದ ಹುಲಿಯನ್ನು ಕೋಲಿಗೆ ಕಟ್ಟಿಕೊಂಡು ಸಾಗಿಸುತ್ತಿರುವ ಬೇಟೆಗಾರರಿದ್ದಾರೆ. ಹುಲಿಯನ್ನು ಬೇಟೆಯಾಡಿದ ಅರಸ ಮತ್ತು ಅವನ ಸೈನಿಕರು ಅದನ್ನು ಕೊಂದ ನಂತರ ಅತ್ಯಂತ ಉತ್ಸುಕತೆಯಿಂದ ಕುಣಿಯುತ್ತ, ಜೈಕಾರ ಹಾಕುತ್ತ ಅದನ್ನು ತಮ್ಮ ವಾಸಸ್ಥಾನಕ್ಕೆ ಸಾಗಿಸುತ್ತಿರುವುದನ್ನು ಅತ್ಯಂತ ಸೊಗಸಾಗಿ ಶಿಲ್ಪದಲ್ಲಿ ಮೂಡಿಸಲಾಗಿದೆ.[೪೦]

ಹನುಮನಹಳ್ಳಿಯ ಚಂದ್ರಮೌಳೇಶ್ವರ ದೇವಾಲಯ ಕಂಬವೊಂದರಲ್ಲಿ ಹುಲಿಬೇಟೆಯ ಶಿಲ್ಪವಿದೆ. ವ್ಯಕ್ತಿಯೊಬ್ಬನು ಎಡಗೈಯಿಂದ ಹುಲಿಯ ಮುಖವನ್ನು ಹಿಡಿದಿದ್ದು, ಬಲಗೈಯಿಂದ ಚೂರಿಯನ್ನು ಹುಲಿಯ ಕುತ್ತಿಗೆ ಹಾಕಿದ್ದಾನೆ. ಹುಲಿಯು ವ್ಯಕ್ತಿಯ ಮೇಲೆ ಹಾರುತ್ತಿದೆ. ಹುಲಿಯು ಎರಡು ಕಾಲು ಮತ್ತು ಬಾಲವನ್ನು ಮೇಲೆ ಎತ್ತಿದೆ.

ಪಕ್ಷಿಗಳು

ಕೊಪ್ಪಳ ಜಿಲ್ಲೆಯ ವಿಜಯನಗರ ಕಾಲದ ಸ್ಮಾರಕಗಳಲ್ಲಿ ಹಲವು ಪಕ್ಷಿಗಳ ಶಿಲ್ಪಗಳು ಕಂಡುಬಂದಿವೆ. ಅದರಲ್ಲಿ ಪ್ರಮುಖವಾಗಿ ಗಿಳಿ, ನವಿಲು, ಹದ್ದು, ಪಾರಿವಾಳ, ಗಂಡಬೇರುಂಡ ಶಿಲ್ಪಗಳು ಕಂಡು ಬಂದಿವೆ. ಪಕ್ಷಿಗಳ ಶಿಲ್ಪಗಳನ್ನು ಹೆಚ್ಚಾಗಿ ಕಂಬಗಳ ಅಥವಾ ಬಾಗಿಲುವಾಡಗಳ ಅಲಂಕಾರಗಳಿಗಾಗಿ ಚಿತ್ರಿಸಲಾಗಿದೆ. ಕೆಲವೊಮ್ಮೆ ಕಂಬಗಳಲ್ಲಿ ಮುಖ್ಯ ಶಿಲ್ಪಗಳ ಮಧ್ಯದ ಸ್ಥಾನವನ್ನು ಸರಿದೂಗಿಸಲು ಪಕ್ಷಿಗಳ ಶಿಲ್ಪಗಳನ್ನು ಚಿತ್ರಿಸಲಾಗಿದೆ.

೪.೩ ಗಾರೆಶಿಲ್ಪಗಳು

ಗಾರೆಶಿಲ್ಪಗಳನ್ನು ದೇವಾಲಯದ ಗೋಪುರ, ಶಿಖರ ಮತ್ತು ಮಂಟಪಗಳ ಮೇಲಿನ ಕೈಪಿಡಿ ಗೋಡೆಯಲ್ಲಿರುವ ಗೂಡುಗಳಲ್ಲಿ ಕಾಣುತ್ತೇವೆ. ವೈವಿಧ್ಯಮಯವಾದ ಸೌಂದರ್ಯ ಸೃಷ್ಟಿಗಾಗಿ, ವಾಸ್ತು ರಚನೆಗಳ ನಡುವೆ ಗಾರೆಶಿಲ್ಪಗಳನ್ನು ನಿರ್ಮಿಸುವುದರ ಮೂಲಕ ಒಟ್ಟು ಕಟ್ಟಡದ ಅಲಂಕರಣವನ್ನು ಹೆಚ್ಚಿಸುವುದಾಗಿತ್ತು.[೪೧] ಕನಕಗಿರಿಯ ದೇವಾಲಯಗಳ ವಾಸ್ತುಶಿಲ್ಪದಲ್ಲಿ ಗಾರೆಶಿಲ್ಪ

ಕಲೆಯು ಒಂದು ಪ್ರಮುಖ ಕಲಾ ಮಾಧ್ಯಮವಾಗಿ ಬೆಳೆದಿತ್ತೆಂಬುದಕ್ಕೆ ಅಲ್ಲಿಯ ವಿವಿಧ ದೇವಾಲಯಗಳಲ್ಲಿ ಕಂಡುಬರುವ ಗಾರೆಶಿಲ್ಪಗಳನ್ನು ಅನುಲಕ್ಷಿಸಿ ಹೇಳಬಹುದು. ಪ್ರಧಾನವಾಗಿ ಕನಕಾಚಲ ದೇವಾಲಯದಲ್ಲಿ ಗಾರೆಶಿಲ್ಪಗಳು ಅತ್ಯಧಿಕವಾಗಿ ಕಂಡುಬರುತ್ತವೆ. ಜೊತೆಗೆ ನಗರೇಶ್ವರ, ಪಂಪಾಪತಿ, ಮಲ್ಲಿಕಾರ್ಜುನ, ವೀರಭದ್ರೇಶ್ವರ, ಸಂಜೀವಮೂರ್ತಿ, ತೊಂಡೆತೆವರಪ್ಪ ದೇವಾಲಯಗಳಲ್ಲಿ ಕಂಡುಬರುತ್ತವೆ. ಈ ದೇವಾಲಯಗಳಲ್ಲಿ ಗಾರೆಶಿಲ್ಪಗಳನ್ನು ಗೋಪುರ, ಶಿಖರ, ಮಂಟಪಗಳ ಮೇಲಿನ ಪ್ರಸ್ತರಗಳ ಮೇಲೆ ಸಾಲಾಗಿ ಅಥವಾ ದೇವಕೋಷ್ಠಕಗಳಲ್ಲಿ, ಮಹಾರಂಗ ಮಂಟಪದ ಒಳಭಾಗದಲ್ಲಿ, ದ್ವಾರಬಂಧದ ಉತ್ತಿರಾಂಗದಲ್ಲಿ ವೈವಿಧ್ಯಮಯವಾದ ಗುರುತಿಸಲಾಗಿದೆ. ಕೊಪ್ಪಳ ಜಿಲ್ಲೆಯ ವಿಜಯನಗರ ಕಾಲದ ಸ್ಮಾರಕಗಳಲ್ಲಿ ಕನಕಗಿರಿ, ಕಲ್ಲೂರು, ಹಿರೆಜಂತಗಲ್ಲನ ದೇವಾಲಯಗಳಲ್ಲಿ ಗಾರೆಶಿಲ್ಪಗಳನ್ನು ಕಾಣಬಹುದಾಗಿದೆ.

ಕನಕಗಿರಿಯ ಕನಕಾಚಲ ದೇವಾಲಯದ ರಂಗಮಂಟಪದಲ್ಲಿನ ಮೇಲ್ಭಾಗದಲ್ಲಿ ಹಲಗೆಯ ಮೇಲೆ ಗಾರೆಶಿಲ್ಪಗಳನ್ನು ಕಾಣುತ್ತೇವೆ. ಈ ದೇವಾಲಯ ಸುತ್ತಲೂ ಪ್ರಾಕಾರ ಗೋಡೆಯ ಮೇಲ್ಭಾಗದ ಗೂಡುಗಳಲ್ಲಿ ಗೋಪುರಗಳಲ್ಲಿ, ಕಲ್ಯಾಣ ಮಂಟಪದಲ್ಲಿ ಶಿಲ್ಪಗಳಿವೆ. ಈ ದೇವಾಲಯವು ಮೇಲ್ಭಾಗವು ಸಂಪೂರ್ಣವಾಗಿ ಗಾರೆಶಿಲ್ಪಗಳ ಅಲಂಕರಣ ಹೊಂದಿದೆ. ಕನಕಗಿರಿಯ ಈ ಗಾರೆಶಿಲ್ಪಗಳು ವಿಫುಲ ಸಂಖ್ಯೆಯಲ್ಲಿದ್ದರೂ ಅವುಗಳಲ್ಲಿ ಬಹಳಷ್ಟು ಭಗ್ನಗೊಂಡಿವೆ. ಆದಾಗೂ ಉಳಿದ ಶಿಲ್ಪಗಳು ನಯನ ಮನೋಹರವಾಗಿದ್ದು ಅವುಗಳ ಕುರಿತಾದ ಪರಿಚಯವನ್ನು ಇಲ್ಲಿ ಮಾಡಲಾಗಿದೆ. ಕನಕಗಿರಿಯ ಗಾರೆಶಿಲ್ಪಗಳಲ್ಲಿ ಪ್ರಮುಖವಾಗಿ ದೇವತಾ ಶಿಲ್ಪಗಳು, ಪೌರಾಣಿಕ ಶಿಲ್ಪಗಳು, ಲೌಕಿಕ ಶಿಲ್ಪಗಳು, ಅಲಂಕರಣ ಶಿಲ್ಪಗಳು ಎಂಬ ನಾಲ್ಕು ವಿಷಯಗಳಲ್ಲಿ ವರ್ಗೀಕರಣಗೊಳಿಸಬಹುದು.

ಕನಕಾಚಲ ಲಕ್ಷ್ಮೀನರಸಿಂಹ ದೇವಾಲಯದಲ್ಲಿ ವೈಕುಂಠ ವಿಷ್ಣು, ಶಿವ ಪಾರ್ವತಿಯರ ಕಲ್ಯಾಣ, ಶ್ರೀಕೃಷ್ಣ ಮತ್ತು ರಾಮರ ಕಲ್ಯಾಣದ ಭಿನ್ನ ಚಿತ್ರಣಗಳು, ಗೋಪಿಕೆಯರ ಮಧ್ಯೆ ಕೃಷ್ಣ, ರಾಮ, ಲಕ್ಷ್ಮಣ, ಉಗ್ರನರಸಿಂಹ, ಅನಂತಶಯನ, ಶ್ರೀದೇವಿ, ಭೂದೇವಿ, ಹನುಮಂತ, ಬ್ರಹ್ಮ, ವಿಷ್ಣು, ಮಹೇಶ್ವರ, ಲಕ್ಷ್ಮೀ, ಸರಸ್ವತಿ, ಪಾರ್ವತಿ ಮುಂತಾದ ದೇವಾನುದೇವತೆಗಳ ಶಿಲ್ಪಗಳಿವೆ. ಲಕ್ಷ್ಮೀನರಸಿಂಹ ಆ ಕೃತಿಯಲ್ಲಿ ಪೀಠದ ಮೇಲೆ ಕುಳಿತಿರುವ ನರಸಿಂಹನ ತೊಡೆಯ ಮೇಲೆ ಲಕ್ಷ್ಮಿಯನ್ನು ಕೂಡಿಸಲಾಗಿದೆ. ನೀಲಕಂಠೇಶ್ವರ ದೇವಾಲಯದ ಮೇಲಿರುವ ಆಸನ ಭಂಗಿಯಲ್ಲಿ ಶಿವಪಾರ್ವತಿ ಹಾಗೂ ಗಣೇಶನ ಆಕೃತಿಗಳಿವೆ. ಈಶ್ವರನ ತೊಡೆಯ ಮೇಲೆ ಕುಳಿತ ಪಾರ್ವತಿ ತನ್ನ ಕಾಲುಗಳನ್ನು ಕಮಲದ ಮೇಲೆ ಇರಿಸಿದ್ದಾಳೆ. ಹಾಗೆಯೇ ಪೀಠದ ಮೇಲೆ ಕುಳಿತ ಶಿವನ ಕೆಳಗೆ ಕಮಲದ ಆಸನವಿದೆ. ಎಡಗೈಯಲ್ಲಿ ತಂಬೂರದರವಾದ ತಂಬೂರ ಹಾಗೂ ಬಲಬದಿಯಲ್ಲಿ ಗಣನ ಆಕೃತಿ ಇದೆ. ವೃಷಭದ ಶಿಲ್ಪವಿದ್ದು[೪೨] ಬಹುಮಟ್ಟಿಗೆ ಭಗ್ನವಾಗಿದೆ.

ಅದೇ ರೀತಿಯಾಗಿ ವೀರಭದ್ರೇಶ್ವರ ದೇವಾಲಯದ ಮುಖಮಂಟಪದ ಮೇಲಿನ ದೇವಕೋಷ್ಠಕದಲ್ಲಿ ವೀರಭದ್ರನು ರುಂಡಮಾಲೆಯನ್ನು ಕೊರಳಲ್ಲಿ ಧರಿಸಿ ಕೈಯಲ್ಲಿ ಬಿಲ್ಲುಬಾಣಗಳನ್ನು ಹಿಡಿದ ಆಕೃತಿ ಸೊಗಸಾಗಿದೆ.

ಸಂಜೀವಮೂರ್ತಿ ದೇವಾಲಯದ ಮುಖಮಂಟಪದ ಮೇಲಿನ ಶಿಖರ ಮೊದಲ ಸ್ಥಳದ ದೇವಕೋಷ್ಠಕದಲ್ಲಿ ಗರುಡವಾಹನರ್ನಾ ರೂಢರಾದ ಲಕ್ಷ್ಮೀನಾರಾಯಣನ ಸುಂದರವಾದ ಗಾರೆಶಿಲ್ಪವಿದೆ. ಗರುಡನು ಹಾರುವ ಭಂಗಿಯಲ್ಲಿ ಕುಳಿತಿದ್ದು ಅವನ ಮೇಲೆ ವಿಷ್ಣು ಲಕ್ಷ್ಮೀ ಸಮೇತ ಆಸೀನರಾಗಿದ್ದಾರೆ. ವಿಷ್ಣುವಿನ ತೊಡೆಯ ಮೇಲೆ ಲಕ್ಷ್ಮೀ ಕುಳಿತಿದ್ದಾಳೆ.

ಪಂಪಾಪತಿ ದೇವಾಲಯದ ಶಿವಪಾರ್ವತಿ, ಗಣೇಶ, ಕಾರ್ತಿಕೆಯ, ವೀರಭದ್ರ ಶಿಲ್ಪಗಳು ಹೀಗೆ ಇತರ ದೇವಾಲಯಗಳಲ್ಲಿ ಕೂಡ ದೇವಾನುದೇವತೆಗಳ ಶಿಲ್ಪಗಳನ್ನು ಗುರುತಿಸಬಹುದು. ಕನಕಗಿರಿಯ ಗಾರೆಶಿಲ್ಪಗಳಲ್ಲಿ ಪೌರಾಣಿಕ ಶಿಲ್ಪಗಳು ವೈವಿಧ್ಯಮಯವಾಗಿವೆ. ಪ್ರಧಾನವಾಗಿ ರಾಮಾಯಣಕ್ಕೆ ಸಂಬಂಧಿಸಿದ ವಿವಿಧ ಘಟನಾವಳಿಗಳ ದೃಶ್ಯ ಶಿಲ್ಪಗಳು ಕನಕಾಚಲ ದೇವಾಲಯದ ಮಂಟಪಗಳ ಮೇಲ್ಭಾಗ ಸಾಲುಸಾಲಾಗಿವೆ. ಇವುಗಳ ರಾವಣನ ವಧೆಯ ಶಿಲ್ಪಗಳನ್ನು ಮಾತ್ರ ಗುರುತಿಸಬಹುದು. ಆದರೆ ದುರದೃಷ್ಟವಶಾತ ಈ ಶಿಲ್ಪಗಳು ಬಹಳಷ್ಟು ನಾಶವಾಗಿವೆ.

ಕನಕಗಿರಿಯ ಗಾರೆಶಿಲ್ಪಗಳಲ್ಲಿ ಮತ್ತೊಂದು ಪ್ರಮುಖ ಪ್ರಕಾರವೆಂದರೆ ಲೌಕಿಕ ಗಾರೆಶಿಲ್ಪಗಳು. ಅರಸರಿಗೆ ಸಂಬಂಧಿಸಿದ ಈ ಶಿಲ್ಪಗಳು ಕನಕಗಿರಿ ನಾಯಕರ ಪ್ರತಿಮೆಗಳಾಗಿವೆ. ಇವುಗಳು ದೇವಾನುದೇವತೆ ಶಿಲ್ಪಗಳ ಜೊತೆ ಅಲ್ಲಲ್ಲಿ ಕಂಡುಬರುತ್ತವೆ. ಅರಸನೊಬ್ಬ ಯತಿಯನ್ನು ಸತ್ಕರಿಸುತ್ತಿರುವುದು, ಅಲ್ಲಲ್ಲಿ ಕೈಮುಗಿದು ನಿಂತುಕೊಂಡಿರುವ ಅರಸರ ಪ್ರತಿಮೆಗಳಿವೆ. ಇವುಗಳು ಸಮಕಾಲೀನ ಅರಸರ ವೇಷಭೂಷಣಗಳನ್ನು ಸಮರ್ಥವಾಗಿ ಪ್ರತಿಬಿಂಬಿಸುತ್ತವೆ. ಜೊತೆಗೆ ಅಲ್ಲಲ್ಲಿ ವಾದ್ಯ ನುಡಿಸುವವರು, ಸ್ತ್ರೀಯರು, ಭಕ್ತರು, ಮಿಥುನ ಮುಂತಾದ ಶಿಲ್ಪಗಳು ಕೂಡ ಕಂಡುಬರುತ್ತವೆ.

ಗಾರೆಶಿಲ್ಪಗಳಲ್ಲಿ ಪೂರಕವಾಗಿ ಅಲಂಕರಣ ಶಿಲ್ಪಗಳು ಬಳಕೆಯಾಗಿದೆ. ದೇವಕೋಷ್ಠಕಗಳಲ್ಲಿ ದೇವತಾ ಪ್ರತಿಮೆಗಳ ಪ್ರಭಾವಳಿಗಳಲ್ಲಿ ವಿವಿಧ ಬಳ್ಳಿಗಳ ಆಕೃತಿಗಳಿವೆ. ಕೆಲವು ಕಡೆ ಸುಂದರವಾಗಿ ಪಾರಿವಾಳಗಳನ್ನು ಅಲಂಕಾರ ರೀತಿಯಲ್ಲಿ ತೋರಿಸಲಾಗಿದೆ. ಮತ್ತೆ ಕೆಲವು ಕಡೆ ಹಂಸ, ಆನೆ, ಪ್ರಾಣಿ–ಪಕ್ಷಿಗಳ ಹಾಗೂ ವೃತ್ತಾಕಾರದ ವಿಭಿನ್ನ ಸುಳಿಯ ಚಿತ್ರಣಗಳನ್ನು ಅಲಂಕಾರ ದೃಷ್ಟಿಯಿಂದ ಬಳಸಲಾಗಿದೆ. ಇವು ಮೂರ್ತಿಶಿಲ್ಪಗಳಿಗಿಂತ ಹೆಚ್ಚಿನ ಕುಸುರಿಯ ರಚನೆಗಳಾಗಿವೆ. ಹಾಗಾಗಿ ರಚನೆ ಮತ್ತು ವಿನ್ಯಾಸದಲ್ಲಿ ಪರಿಪೂರ್ಣ ಕಲಾಕೃತಿಗಳಾಗಿದ್ದು, ಗಾರೆ ಕಲಾವಿದರ ನೈಪುಣ್ಯತೆಗೆ ಸಾಕ್ಷಿಯಾಗಿವೆ. ಈ ಶಿಲ್ಪಗಳನ್ನು ಪ್ರಧಾನವಾಗಿ ಗಾರೆಯಿಂದ ರಚಿಸಲಾಗಿದೆ. ಗಾರೆಯನ್ನು ಸುಣ್ಣ, ಮರಳು, ನೀರು, ಲೋಳೆಸರ, ಬಿಲ್ವಪತ್ರೆಕಾಯಿ, ಬೆಲ್ಲ ಅಥವಾ ಕೆಲವು ಸಲ ಮೊಟ್ಟೆಯ ಅಂಟು ದ್ರಾವಣವನ್ನು ಸೇರಿಸಿ ತಯಾರಿಸುತ್ತಿದ್ದರು.[೬೩] ಎಲ್ಲವನ್ನು ಒಂದು ರೀತಿಯ ಹದ ಬರುವ ವರೆಗೆ ರುಬ್ಬುತ್ತಿದ್ದರು. ಬೆಣ್ಣೆಯ ಹಾಗೆ ಹದಕ್ಕೆ ಬಂದಾಗ ಅದನ್ನು ಶಿಲ್ಪಗಳ ರಚನೆಯಲ್ಲಿ ಬಳಸುತ್ತಿದ್ದರು. ಮೂರ್ತಿಗಳನ್ನು ನಿಲ್ಲಿಸಲು ಅವುಗಳ ಒಳಭಾಗದಲ್ಲಿ ತಂತಿಗಳನ್ನು ಬಳಸುತ್ತಿದ್ದರು. ಸಾಮಾನ್ಯವಾಗಿ ಹೊರಕ್ಕೆ ಚಾಚಿದ ಕೈಗಳನ್ನು ಗಟ್ಟಿಯಾಗಿ ಕೂಡಿಸಲು ಆಯುಧಗಳನ್ನು ಕೈಯಲ್ಲಿ ಹಿಡಿಸಲು ಒಳಗೆ ತಂತಿಯನ್ನು ಬಳಸಲಾಗಿದೆ.

ಕರ್ನಾಟಕದಲ್ಲಿ ಅತ್ಯಂತ ಹೆಚ್ಚಿನ ಶಿಲ್ಪಗಳನ್ನು ಕನಕಗಿರಿಯ ಕನಕಾಚಲ ದೇವಾಲಯದಲ್ಲಿ

ಕಾಣಬಹುದು. ಇಡೀ ದೇವಾಲಯದ ಹೊರ ಪ್ರಾಕಾರದ ಎತ್ತರದ ಪೌಳೀಗೋಡೆ ಕೋಟೆಯಂತಿದ್ದು, ಅವುಗಳ ಮೇಲೆ ತೆನೆಗಳಂತೆ ದೇವಕೋಷ್ಠಕಗಳನ್ನು ರೂಪಿಸಿ ಗೋಡೆಯ ಒಳ ಹಾಗೂ ಹೊರ ಭಾಗಗಳೆರಡರಲ್ಲೂ ಸಾವಿರಕ್ಕೂ ಹೆಚ್ಚು ಶಿಲ್ಪಗಳ ರಚನೆಗಳಾಗಿವೆ. ಅತ್ಯಂತ ಸಪೂರಾದ ಆಕೃತಿಗಳು ಹಿತಮಿತ ವಸ್ತ್ರಾಭರಣ, ಸುಂದರವಾದ ಮುಖ ರಚಿಸಿದ್ದಾರೆ. ಆದರೆ ಅವುಗಳು ಪೂರ್ಣ ಪ್ರಮಾಣದಲ್ಲಿ ಉಳಿದಿಲ್ಲ. ಇದಕ್ಕೆ ವಿದೇಶಿಯರ ದಾಳಿಯೂ ಒಂದು ಕಾರಣವಾಗಿರಬಹುದಾದರೂ ಮೆದುವಾದ ಗಾರೆ ಪ್ರಕೃತಿಯ ವಿಕೋಪದಿಂದ ನಾಶವಾಗಿರುವುದೇ ಅಧಿಕ. ಈ ಶಿಲ್ಪಗಳಲ್ಲಿ ಬಹಳಷ್ಟು ಶೃಂಗಾರ ಶಿಲ್ಪಗಳಾಗಿದ್ದು, ಸಾರ್ವಜನಿಕರ ಆಕ್ರೋಶಕ್ಕೂ ಗುರಿಯಾಗಿರಬಹುದು.[೪೪]

ಈ ಅಧ್ಯಾಯದಲ್ಲಿ ಮೂರ್ತಿಶಿಲ್ಪಗಳ ಬಗ್ಗೆ ಸಮಗ್ರವಾಗಿ ಅಧ್ಯಯನ ಮಾಡಲಾಗಿದೆ. ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಮಾಹಿತಿ ಮತ್ತು ಪೂರಕವಾಗಿ ಈ ಹಿಂದೆ ನಡೆದ ಅಧ್ಯಯನಗಳ ಫಲಿತಗಳನ್ನು ಈ ಅಧ್ಯಾಯವನ್ನು ವಿಶ್ಲೇಷಿಸಲಾಗಿದೆ. ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಮಾಹಿತಿಯನ್ನು ಅವುಗಳ ಪ್ರಕಾರಗಳಿಗನುಗುಣವಾಗಿ ವಿವಿಧ ವಿಭಾಗಗಳಲ್ಲಿ ವಿಭಾಗಿಸಿಕೊಂಡು ಚರ್ಚಿಸಲಾಗಿದೆ. ಈ ಅಧ್ಯಾಯವು ಕೊಪ್ಪಳ ಜಿಲ್ಲೆಯ ವಿಜಯನಗರ ಕಾಲದ ಮೂರ್ತಿಶಿಲ್ಪಗಳಿಗೆ ಮೀಸಲಾಗಿದೆ.

ಅಡಿಟಿಪ್ಪಣಿಗಳು

೧. ರಾಮಚಂದ್ರರಾವ್ ಎಸ್. (ಲೇ.), ೧೯೯೪, ***ಭಾರತೀಯ ಮೂರ್ತಿಶಿಲ್ಪ,*** ತಿಪ್ಪೇಸ್ವಾಮಿ ಪಿ. ಆರ್. (ಪ್ರ.ಸಂ), ಶಿಲ್ಪಕಲಾ ಪ್ರಪಂಚ, ಪು.೭೮

೨. ಮರಿಶಾಮಾಚಾರ್ ಎನ್,. ೨೦೦೯ (ಎರಡನೇ ಮುದ್ರಣ), ***ಭಾರತೀಯ ಕಲೆ,*** ಪು.೧೦೬

೩. ಮರಿಶಾಮಾಚಾರ್ ಎನ್., ೨೦೦೦, ***ಭಾರತೀಯ ಶಿಲ್ಪಕಲೆ,*** ಪು.೮೭-೮೮

೪. ಗೋಪಿನಾಥರಾವ ಟಿ. ಎ., ೧೯೯೩, ***Elements of Hindu Iconography, vol.11, Part – I,*** ದೆಹಲಿ ಪು.೭

೫. ಜ್ಞಾನಾನಂದ ಜಿ. (ಸಂ), ೧೯೯೮, ***ಶ್ರೀ ಕಾಶ್ಯಪ ಶಿಲ್ಪ ಶಾಸ್ತ್ರಂ*** (ಉತ್ತಾರಾರ್ಧ) ಪು.೧೭೫

೬. ಹೇಮಾವತಿ ಶಿ. ಮೆಣಸಗಿ, ೨೦೧೬, ***ಹಂಪಿ ಪರಿಸರದ ಶೈವ ಶಿಲ್ಪಗಳು,*** ಪು.೧೩ ಮತ್ತು ಕ್ಷೇತ್ರಕಾರ್ಯದಿಂದ ಮಾಹಿತಿ ಸಂಗ್ರಹಿಸಲಾಗಿದೆ.

೭. ವಾಸುದೇವನ್ ಸಿ.ಎಸ್., ೨೦೦೭, ***ಹಂಪಿ ಪರಿಸರದ ಪಂಚಲಿಂಗಗಳು,*** ವಿಜಯನಗರ ಅಧ್ಯಯನ ಸಂ-೧೨, ಪು.೨೩೯-೨೪೦

೮. ಹೇಮಾವತಿ ಶಿ. ಮೆಣಸಗಿ, ***ಪೂರ್ವೋಕ್ತ,*** ಪು. ೧೩೫ ಮತ್ತು ಕ್ಷೇತ್ರಕಾರ್ಯದಿಂದ ಮಾಹಿತಿ ಸಂಗ್ರಹಿಸಲಾಗಿದೆ.

೯. ಅದೇ, ಪು.೧೩೩ ಮತ್ತು ಕ್ಷೇತ್ರಕಾರ್ಯದಿಂದ ಮಾಹಿತಿ ಸಂಗ್ರಹಿಸಲಾಗಿದೆ.

೧೦. ರಾಮಚಂದ್ರರಾವ್ ಎಸ್. ಕೆ., ೨೦೧೨ (ದ್ವಿತೀಯ ಮುದ್ರಣ), ***ಮೂರ್ತಿಶಿಲ್ಪ ನೆಲೆ-ಹಿನ್ನೆಲೆ,***

ಪು.೧೧೪-೧೧೫

೧೧. ರಮೇಶ ಕೆ.ವಿ., (ಪ್ರಸಂ.), ೨೦೦೪, ***ಶ್ರೀತತ್ವನಿಧಿ,*** ಸಂ-೩, ಪು.೧೩೩

೧೨. ಹೇಮಾವತಿ ಶಿ. ಮೆಣಸಗಿ, ೨೦೧೬, ***ಪೂರ್ವೋಕ್ತ,*** ಪು.೧೯೩

೧೩. ಜ್ಞಾನಾನಂದ ಜಿ., ***ಪೊರ್ವೋಕ್ತ,*** ಪು. ೫೯೦

೧೪. ರಾಮಚಂದ್ರರಾವ್ ಎಸ್.ಕೆ., ೧೯೭೬, ***ಭಾರತದ ದೇವಾಲಯ ನೆಲೆ ಹಿನ್ನೆಲೆ,*** ಪು.೧೨೪

೧೫. ರಾಮಚಂದ್ರ ರಾವ್ ಎಸ್.ಕೆ., ***ಪೂರ್ವೋಕ್ತ,*** ಪು.೬೩

೧೬. ನಾಗೇಶ ರಂಗೋ ಕುಲಕರ್ಣಿ (ಅನು.), ೧೯೯೬, ***ಯಾಜ್ಞವಲ್ಕ ಸ್ಮೃತಿ,*** ಪು.೬೯

೧೭. ವಸಂತಲಕ್ಷ್ಮಿ ಕೆ., ೨೦೦೭, ***ಕರ್ನಾಟಕದ ಶೈವ ಶಿಲ್ಪಗಳು,*** ಪು.೫೬

೧೮. ರಾಮರಾವ್, ಬೆನಗಲ್ ಮತ್ತು ಸುಂದರ ಶಾಸ್ತ್ರೀ ಪಾನ್ಯಂ, ೨೦೦೧ (ನಾಲ್ಕನೆಯ ಮುದ್ರಣ), ***ಪುರಾಣ ನಾಮ ಚೂಡಾಮಣಿ,*** ಪು.೧೬೭-೧೬೮

೧೯. ಸುಂದರ ಅ., ೧೯೭೬, ***ಕೊಪ್ಪಳ : ಪ್ರಾಚೀನ ಶಿಲ್ಪ,*** ಗವಿದೀಪ್ತಿ ಪು.೧೭೦

೨೦. ರಮೇಶ ಕೆ.ವಿ., ***ಪೂರ್ವೋಕ್ತ,*** ಪು.೧೬೪

೨೧. ಮ್ಯಾಕ್‌ಡೊನೆಲ್ ಎ.ಎ., ***Vedic mythology,*** ಪು.೩೬

೨೨. ರಾಮಚಂದ್ರ ರಾವ್ ಎಸ್.ಕೆ., ***ಪೂರ್ವೋಕ್ತ,*** ಪು.೧೮೪

೨೩. ಭಟಸೂರಿ ಕೆ.ಜಿ., ೧೯೯೭, ***sculptures in the Government museum Raichur*** ಪು.೫೬

೨೪. ಹಿಂದೂ ಜನಜಾಗೃತಿ ಸಮೀತಿ, ***How did Lord Krishna acquire Sudarshana Chakra,*** ಪು.೧-೯, ಈ ಮಾಹಿತಿ (www.hindujagruti.org)

೨೫. ಅನೀಲ್ ವರ್ಗಿಸ್, ೧೯೯೫, ***Rare image of Sudarshana Chakra at Hampi, M.S. Nagarajrao felicitation volume,*** ಪು.೪೯೪

೨೬. ಶರಣಬಸಪ್ಪ ಕೋಲ್ಕಾರ, ಗೀತಾ ಪೋಲಿಸ ಪಾಟೀಲ್, ೨೦೧೭, ***ವಿಜಯನಗರ ಕಾಲದ ಆನೆಗೊಂದಿಯ ಅಪರೂಪದ ಆಯುಧಪುರುಷ ಸುದರ್ಶನಚಕ್ರದ ಶಿಲ್ಪ ಮತ್ತು ಮಂದಿರ,*** ವಿಜಯನಗರ ಸಂಪುಟ-೩೦, ಪು.೧೦೫-೧೦೬, ಮತ್ತು ಕ್ಷೇತ್ರಕಾರ್ಯದಿಂದ ಸಂಗ್ರಹಿಸಿದ ಮಾಹಿತಿ

೨೭. ಸುಂದರ ಅ., ೧೯೯೧, ***ವಿಜಯನಗರ ಕಾಲದ ಧಾರ್ಮಿಕ ಬೆಳವಣಿಗೆಗಳ ಮೇಲೆ ಹೊಸ ಬೆಳಕು,*** ಪು.೧೦೯

೨೮. ರಮೇಶ ಕೆ.ವಿ., ***ಪೂರ್ವೋಕ್ತ,*** ಪು.೯೫

೨೯. ಸುಂದರ ಅ., ***ಪೂರ್ವೋಕ್ತ,*** ಪು.೧೭೦, (ಈ ಶಿಲ್ಪವು ಡಣಕಣಬಾವಿಯ ಎಡಕಟ್ಟೆಯ ಮೇಲೆ ಒಂದು ಹಾಳುಬಿದ್ದ ದೇವಾಲಯವಿದೆ. ಇದರಲ್ಲಿ ಕೈಜೋಡಿಸಿ ನಿಂತ ಆಂಜನೇಯ ಉಬ್ಬು ಶಿಲ್ಪವಿದೆ ಎಂದು ತಿಳಿಸಿದ್ದಾರೆ. ಆದರೆ ಪ್ರಸ್ತುತ ಶಿಲ್ಪವು ಕೊಪ್ಪಳದ ಕಿನ್ನಾಳಿನ ಹೋಗುವ

ರಸ್ತೆಯ ಬಲಬದಿಯ ಶಿವ ದೇವಾಲಯದ ಸಭಾಮಂಟಪದಲ್ಲಿ ನಿಲ್ಲಿಸಿದ್ದಾರೆ.)

೩೦. ಸುರೇಶ ಕೆ.ಎಮ್., ೧೯೯೮, ***Sculptural Art Of Hampi,*** ಪು.೧೫೨

೩೧. ರಾಮಚಂದ್ರ ರಾವ್ ಎಸ್.ಕೆ., ***ಪೂರ್ವೋಕ್ತ,*** ಪು.೧೮೨

೩೨. ನಾಗರಾಜಪ್ಪ ಎಸ್., ೨೦೧೬, ***ಹಂಪಿ ಪರಿಸರದ ಲೌಕಿಕ ಶಿಲ್ಪಗಳು,*** ಪು.೧೧೬

೩೩. ಅದೇ, ಪು.೧೨೦, ಮತ್ತು ಕ್ಷೇತ್ರಕಾರ್ಯದಿಂದ ಸಂಗ್ರಹಿಸಿದ ಮಾಹಿತಿ

೩೪. ಶಂಕರ್ ಹೂಗಾರ, ಅಕ್ಬರ್ ಸಿ. ಕಾಲಿಮಿರ್ಚಿ (ಸಂ.), ***ಕೊಪ್ಪಳ ಜಿಲ್ಲಾ ಮಾಹಿತಿ ಕೋಶ,*** ಪು.೧೦೭

೩೫. ಭಟಸೂರಿ ಕೆ.ಜಿ., ***ಪೂರ್ವೋಕ್ತ,*** ಪು.೫೩

೩೬. ಶೀಲಾಕಾಂತ ಪತ್ತಾರ, ೨೦೦೮, ***ಬಾದಾಮಿ ಚಾಲುಕ್ಯ ಶಿಲ್ಪಕಲೆ,*** ಪು.೪೫

೩೭. ವೀಣಾಶೇಖರ, ೧೯೯೯, ***ಮ್ಯೂರಲ್ ಪೆಂಟಿಂಗ್ಸ ಆಫ್ ಸಿಬಿ,*** ಪು. ೫೭ (ಉದ್ಧೃತ) ಶೋಭ, ೨೦೧೧, ಮಂಡ್ಯ ಜಿಲ್ಲೆಯ ಹೊಯ್ಸಳ ದೇವಾಲಯಗಳು ಪು. ೨೯೦-೨೯೧

೩೮. ನಾಗರಾಜಪ್ಪ ಎಸ್., ***ಪೂರ್ವೋಕ್ತ,*** ಪು.೨೦೧

೩೯. ಮಹದೇವ ಸಿ., ೨೦೦೦, ***ವಿಜಯನಗರದ ಗಾರೆಶಿಲ್ಪ,*** ಪು.೨೨

೪೦. ನಾಗರಾಜಪ್ಪ. ಎಸ್., ***ಪೂರ್ವೋಕ್ತ,*** ಪು. ೧೫೯-೧೬೦ ಮತ್ತು ಕ್ಷೇತ್ರಕಾರ್ಯದಿಂದ ಸಂಗ್ರಹಿಸಿದ ಮಾಹಿತಿ

೪೧. ಮಹದೇವ ಸಿ., ***ಪೂರ್ವೋಕ್ತ,*** ಪು.೧೨

೪೨. ಕುಲಕರ್ಣಿ ಆರ್.ಎಚ್., ೨೦೦೬, ***ವಿಜಯನಗರ ಕಾಲದ ಗಾರೆಕಲೆ,*** ಹಂಪಿ ಸಂಪುಟ, ಕಲೆ, ಕ್ರೀಡೆ ಮತ್ತು ಕೌಶಲ, ಪು.೧೧೬ ಮತ್ತು ಕ್ಷೇತ್ರಕಾರ್ಯದಿಂದ ಸಂಗ್ರಹಿಸಿದ ಮಾಹಿತಿ

೪೩. ಅದೇ, ಪು.೧೨೪, ಮತ್ತು ಕ್ಷೇತ್ರಕಾರ್ಯದಿಂದ ಸಂಗ್ರಹಿಸಿದ ಮಾಹಿತಿ

೪೪. ಗೋಪಾಲರಾವ್ ಎಚ್. ಎಸ್., ಮತ್ತು ನರಸಿಂಹನ್ ಅ,ಲ., ೨೦೦೮, ***ವಿಜಯನಗರ ಶಿಲ್ಪಕಲೆ,*** ಪು.೫೭

ಅಧ್ಯಾಯ : ಐದು
ಸ್ಮಾರಕ ಶಿಲ್ಪಗಳು

==========================

೫.೧ ವೀರಗಲ್ಲು
೫.೨ ಬಂದೂಕು ವೀರಗಲ್ಲು
೫.೩ ಮಾಸ್ತಿಗಲ್ಲು
೫.೪ ವೀರ ಮಾಸ್ತಿಗಲ್ಲು
೫.೫ ನಿಷಧಿಗಲ್ಲು

ಅಧ್ಯಾಯ : ಐದು
ಸ್ಮಾರಕ ಶಿಲ್ಪಗಳು

ಗತಿಸಿ ಹೋದ ಮಾನವನನ್ನು ಸಮಾಧಿ ಮಾಡಿದ ನಿರ್ದಿಷ್ಟ ಸ್ಥಳದ ಗುರುತಿಗಾಗಿಯೋ, ಮಡಿದವನ ಸ್ಮರಣೆ ಬರುವಂತೆಯೋ, ಕೆಲವಾರು ಸಂಕೇತಗಳನ್ನೋ, ಗುರುತುಗಳನ್ನೋ ಒಂದು ನಿಗದಿಯಾದ ಸ್ಥಳದಲ್ಲಿ ಅಥವಾ ಸಮಾಧಿ ಮಾಡಿದ ಸ್ಥಳದಲ್ಲಿ ನೆಡುತ್ತಿದ್ದರು. ಇವು ಸಾಮಾನ್ಯವಾಗಿ ಆಯಾ ದೇಶಗಳಲ್ಲಿನ ಧರ್ಮ, ನಂಬಿಕೆ, ಸಾಮಾಜಿಕ ಪ್ರತಿಷ್ಠೆಗಳನ್ನು ಅನುಸರಿಸಿ ಬೆಳೆದಿದೆ.[೧] ಧಾರ್ಮಿಕ ಅಥವಾ ಲೌಕಿಕ ಉದ್ದೇಶಗಳಿಗಾಗಿ ಮಡಿದವರ ಸ್ಮಾರಕವಾಗಿ ನಿಲ್ಲಿಸಿದ ಶಿಲೆಗಳಿಗೆ ಸ್ಮಾರಕ, ಶಾಸನಗಳೆಂದು ಕರೆಯುತ್ತಾರೆ. ಇವುಗಳನ್ನು ಬರವಣಿಗೆ ಹೊಂದಿದ ಮತ್ತು ಬರವಣಿಗೆ ಹೊಂದದವುಗಳೆಂದು ವಿಭಾಗಿಸಬಹುದು. ಧಾರ್ಮಿಕ ಅಥವಾ ಲೌಕಿಕ ಉದ್ದೇಶಕ್ಕಾಗಿ ಮರಣಹೊಂದಿದ ವ್ಯಕ್ತಿಯ ಘಟನೆಯನ್ನು ಕೆಲವು ಸಲ ಕೇವಲ ಚಿತ್ರಗಳ ಮೂಲಕ, ಇನ್ನು ಕೆಲವು ಸಲ ಬರವಣಿಗೆಯ ಮೂಲಕ ಮತ್ತೆ ಕೆಲವು ಸಲ ಬರವಣಿಗೆ ಹಾಗೂ ಚಿತ್ರಗಳ ಮೂಲಕ ವ್ಯಕ್ತಪಡಿಸಿರುತ್ತಾರೆ. ಇದಕ್ಕೆ ಅಪವಾದವಾಗಿ ಚಿತ್ರ ಹಾಗೂ ಬರವಣಿಗೆ ರಹಿತ ಆದರೆ ಪೂಜೆಗೊಳ್ಳುತ್ತಿರುವ ಸ್ಮಾರಕಶಿಲೆಗಳು ದೊರೆಯುತ್ತಿವೆ. ವ್ಯಕ್ತಿಗಳನ್ನು ಕುರಿತ ಸ್ಮಾರಕಶಿಲೆಗಳಲ್ಲದೆ ಸ್ಮಾರಕ ಗುಡಿಗಳೂ ಕಂಡುಬರುತ್ತವೆ.[೨]

ವೀರಗಲ್ಲುಗಳ ಶಾಸನವು ವೀರನ ಪರಾಕ್ರಮವನ್ನು ಎಷ್ಟರ ಮಟ್ಟಿಗೆ ಸಮರ್ಥವಾಗಿ ನಿರೂಪಿಸುತ್ತವೆಯೋ ಅಷ್ಟೇ ಸಮರ್ಥವಾಗಿ ಅವುಗಳು ವೀರನ ಪರಾಕ್ರಮವನ್ನು ಶಿಲ್ಪದ ಮೂಲಕ ತಿಳಿಸುತ್ತವೆ. ವೀರಗಲ್ಲುಗಳ ಶಿಲ್ಪವನ್ನು ಮೂರು ಹಂತಗಳಲ್ಲಿ ಸಾಮಾನ್ಯವಾಗಿ ಬಿಡಿಸಲಾಗಿರುತ್ತದೆ. ಅವು ಕ್ರಮವಾಗಿ ಕೆಳಗಿನಿಂದ ಮೇಲಕ್ಕೆ ನಿರೂಪಿತವಾಗಿರುತ್ತವೆ. ಎರಡನೆಯ ಹಂತದಲ್ಲಿ ಹೋರಾಟದಲ್ಲಿ ಮಡಿದ ವೀರನನ್ನು ಅಪ್ಸರೆಯರು ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವಂತೆ ನಿರೂಪಿಸಲಾಗಿರುತ್ತದೆ. ಮೂರನೆಯ ಹಂತದಲ್ಲಿ ವೀರನು ಸ್ವರ್ಗದಲ್ಲಿಯೋ ದೇವರ ಸಾನ್ನಿಧ್ಯದಲ್ಲಿಯೇ ಇರುವಂತೆ ಬಿಡಿಸಲಾಗಿರುತ್ತದೆ. ಆದರೆ ಎಲ್ಲಾ ವೀರಗಲ್ಲುಗಳ ಶಿಲ್ಪ ಮೂರೆ ಹಂತದಲ್ಲಿ ಬಿಡಿಸಲಾಗಿರುತ್ತವೆ

ಎಂಬುದಾಗಿ ಬಾವಿಸುವುದು ಸರಿಯಲ್ಲ. ಮೇಲೆ ತಿಳಿಸಿದ ಮೂರು ಹಂತಗಳನ್ನು ಸುಮಾರು ಹದಿನಾರ ಹಂತಗಳಲ್ಲಿ ವಿಸ್ತಾರವಾಗಿ ಬಿಡಿಸಿರುವ ನಿದರ್ಶನಗಳು ದೊರೆಯುತ್ತವೆ. ಮತ್ತೆ ಕೆಲವು ಕಡೆ ಎರಡೆ ಹಂತಗಳಲ್ಲಿ ಬಿಡಿಸಿರುವುದೂ ಉಂಟು. ಗಂಗರ, ನೊಳಂಬರ, ವಿಜಯನಗರದ ಅರಸರ ಕಾಲದ ಬಹುಪಾಲು ವೀರಗಲ್ಲುಗಳು ಮೇಲೆ ಹೇಳಿದ ಕ್ರಮದಲ್ಲಿ ಬಿಡಿಸಲಾಗಿರುವುದಿಲ್ಲ. ಇವುಗಳಲ್ಲಿ ವೀರನೊಬ್ಬನ ಚಿತ್ರ ಮಾತ್ರ ಇರುವುದುಂಟು. ಕೆಲವೊಮ್ಮೆ ಅಸ್ತವ್ಯಸ್ತವಾದ ರೀತಿಯಲ್ಲಿ ಯುದ್ಧ ಹೋರಾಟಗಳ ವಿವರವನ್ನು ನೀಡಿರುವುದುಂಟು.[೩] ಸ್ಮಾರಕ ಶಿಲ್ಪಗಳನ್ನು ಅಧ್ಯಯನ ಉದ್ದೇಶಕ್ಕಾಗಿ ವೀರಗಲ್ಲುಗಳು, ಬಂದೂಕು ವೀರಗಲ್ಲುಗಳು, ವೀರಮಾಸ್ತಿಗಲ್ಲುಗಳು, ಮಾಸ್ತಿಗಲ್ಲುಗಳು, ನಿಷಿಧಿಗಲ್ಲುಗಳಾಗಿ ವಿಂಗಡಣೆಯಾಗಿ ಮಾಡಿಕೊಳ್ಳಲಾಗಿದೆ.

೫.೧ ವೀರಗಲ್ಲುಗಳು

ವಿಜಯನಗರದ ಕಾಲದ ವೀರಗಲ್ಲುಗಳಲ್ಲಿ ಒರಟಾದ ಬಿಳಿಯ ಕಲ್ಲಿನ ಉಪಯೋಗಕ್ಕೆ ಕಾರಣ ಕರಿಯಕಲ್ಲು ದೊರೆಯದಿದ್ದುದೋ ಅಥವಾ ಶಿಲ್ಪಿಗಳು ಉದ್ದೇಶ ಪೂರ್ವಕವಾಗಿ ಹೀಗೆ ಮಾಡಿದರೋ ಹೇಳುವುದು ಕಷ್ಟ. ಶಿಲೆಯ ಅಭಾವ ಇಂಥ ಬದಲಾವಣೆಗೆ ಕಾರಣ ಎಂಬ ತೀರ್ಮಾನಕ್ಕೆ ಬರುವುದು ಸಮಂಜಸವಲ್ಲವೆಂದು ತೋರುತ್ತದೆ ಎಂದು ಶೇಷಶಾಸ್ತ್ರಿಯವರು ಅಭಿಪ್ರಾಯ ಪಟ್ಟಿದ್ದಾರೆ. ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರ, ಗಂಗರ, ನೊಳಂಬರ, ಕಲ್ಯಾಣ ಚಾಲುಕ್ಯರ ವೀರಗಲ್ಲುಗಳ ಶಿಲ್ಪದ ಎಲ್ಲ ರೀತಿಯ ಬೆಳವಣಿಗೆಯೂ ತನ್ನ ಕಾಲದ ವಾಸ್ತು ಮತ್ತು ಮೂರ್ತಿ ಶಿಲ್ಪದ ಬೆಳವಣಿಗೆಯನ್ನೇ ಅವಲಂಬಿಸಿತ್ತು. ಈ ವೀರಗಲ್ಲುಗಳ ಪ್ರಕಾರದ ಒಂದು ಅಂಗವಾಗಿ ಹೇಗೆ ಬೆಳೆಯಿತು ಎಂಬುದು ಈಗಾಗಲೇ ಸ್ಪಷ್ಟವಾಗಿದೆ. ಆದ್ದರಿಂದ ಇದಕ್ಕೆ ಕಾರಣ, ಶಿಲೆಯ ಅಭಾವವೆಂದಾಗಲಿ, ಪ್ರಾದೇಶಿಕ ಲಕ್ಷಣವೆಂದಾಗಲಿ ಹೇಳುವುದು ಸೂಕ್ತವಲ್ಲ. ವೀರಗಲ್ಲುಗಳು ತಮ್ಮ ಸಮಕಾಲೀನ ವಾಸ್ತು ಮತ್ತು ಮೂರ್ತಿ ಶಿಲ್ಪದ ರೀತಿಯನ್ನೆ ಅನುಸರಿಸಿದವೆಂದು ಹೇಳಬೇಕು. ಏಕೆಂದರೆ, ಇಂಥ ಬದಲಾವಣೆಯನ್ನು ಶಿಲೆಯ ಆಯ್ಕೆಯಲ್ಲಿ ಮಾತ್ರವಲ್ಲದೆ, ಶಿಲ್ಪದ ವಿವರಗಳಲ್ಲಿಯೂ ಗಮನಿಸಬಹುದು. ಹಿಂದಿನ ಸಂಪ್ರದಾಯದಂತೆ ಘಟನೆಗಳನ್ನು ಹಂತ ಹಂತಗಳಲ್ಲಿ ನಿರೂಪಿಸುವ ತಂತ್ರವನ್ನು ಅಷ್ಟು ಕಟ್ಟುನಿಟ್ಟಾಗಿ ಪಾಲಿಸಿಲ್ಲ. ಗಂಗರ ಕಾಲದ ಕೆಲವು ವೀರಗಲ್ಲುಗಳ ಹಾಗೆ ಯುದ್ಧ ಸನ್ನದ್ಧನಾಗಿರುವಂತೆ ವೀರನೊಬ್ಬನ ಚಿತ್ರವನ್ನು ಮಾತ್ರ ಬಿಡಿಸಲಾಗಿರುತ್ತದೆ ಮತ್ತು ಅಲ್ಲಿನ ಹಾಗೆಯೇ ವೀರನ ಚಿತ್ರಕ್ಕೆ ಪ್ರಾಮುಖ್ಯವನ್ನು ನೀಡಲಾಗಿರುತ್ತದೆ. ವಿಜಯನಗರ ಕಾಲದ ವೀರಗಲ್ಲುಗಳನ್ನು ಶಿಲೆ ಮತ್ತು ಶಿಲ್ಪದ ಆಧಾರದ ಮೇಲೆ ಗುರುತಿಸಬೇಕಾಗುತ್ತದೆ. ವಿಜಯನಗರ ಕಾಲದ ಮತ್ತು ಗಂಗರ ಕಾಲದ ವೀರಗಲ್ಲುಗಳು ಮೇಲುನೋಟಕ್ಕೆ ಒಂದೆ ರೀತಿ ಕಂಡು ಬರುತ್ತವೆ. ಇವುಗಳಿಗಿರುವ ಮುಖ್ಯ ವ್ಯತ್ಯಾಸವೆಂದರೆ, ವಿಜಯನಗರ ಕಾಲದ ಶಿಲೆಗಳಲ್ಲಿ ವೀರನನ್ನು ಆಲೀಢಾಸನದಲ್ಲಿ ಬಿಡಿಸಲಾಗಿರುವುದಿಲ್ಲ, ವೀರಗಲ್ಲುಗಳು ಗಿಡ್ಡಾಗಿರುತ್ತವೆ ಮತ್ತು ಮೇಲ್ಭಾಗದಲ್ಲಿ ಸಾಮಾನ್ಯವಾಗಿ

ಧಾರ್ಮಿಕ ಸಂಕೇತಗಳಾದ ಸೂರ್ಯ, ಚಂದ್ರ, ಶಿವಲಿಂಗ, ಬಸವ, ಶಂಖ, ಚಕ್ರ, ಪದ್ಮಗಳನ್ನು ಹೊಂದಿರುತ್ತವೆ ಮತ್ತು ವೀರನ ಉಡುಪುಗಳಲ್ಲಿ ಗಂಗರ ಕಾಲದ ವೀರಗಲ್ಲುಗಳಲ್ಲಿ ಸರ್ವಸಾಮಾನ್ಯವಾಗಿ ಕಂಡು ಬರುವ ಬಾಕು ಈ ವೀರಗಲ್ಲುಗಳಲ್ಲಿ ಕಂಡು ಬರುವುದಿಲ್ಲ, ಬದಲಾಗಿ ವೀರನ ಸೊಂಟದಲ್ಲಿ ಕಿರುಗತ್ತಿ ಇರುತ್ತದೆ.[೪] ವಿಜಯನಗರ ಕಾಲದ ಒಂದೇ ಹಂತದ ವೀರಗಲ್ಲುಗಳಲ್ಲಿ ಇಬ್ಬರು ಅಥವಾ ಮೂವರ ಸ್ಮಾರಕವಾಗಿರುದುಂಟು. ವೀರನ ಶಿಲ್ಪದ ಮೇಲ್ಭಾಗದಲ್ಲಿ ಸೂರ್ಯ, ಚಂದ್ರ, ಶಿವಲಿಂಗ, ಬಸವನನ್ನು ಸಾಮಾನ್ಯವಾಗಿ ಬಿಡಿಸಿರುತ್ತಾರೆ. ವೀರನೊಂದಿಗೆ ಆತನ ಹೆಂಡತಿಯು ಸಹಗಮನ ಮಾಡಿದ್ದರೆ, ಆ ವಿವರಗಳು ಅದೇ ವೀರಗಲ್ಲುಗಳಲ್ಲಿ ವೀರನೂ ಆತನ ಹೆಂಡತಿಯೂ ಕೈ ಜೋಡಿಸಿ ನಿಂತಿರುವಂತೆ ಚಿತ್ರಿಸಿರುತ್ತಾರೆ. ಅದರ ಪಕ್ಕದಲ್ಲೇ ಒಕ್ಕೈ ಮಾಸ್ತಿಕಲ್ಲನ್ನು ಬಿಡಿಸಿರುತ್ತಾರೆ. ಕೆಲವು ವೀರಗಲ್ಲುಗಳು ಬಿಳಿಯ ಕಲ್ಲಿನವೇ ಆಗಿದ್ದರೂ ಹಿಂದಿನ ಹಂತ ಹಂತಗಳಲ್ಲಿ ಶಿಲ್ಪ ಬಿಡಿಸುವ ಸಂಪ್ರದಾಯವನ್ನು ಅನುಸರಿಸಿರುವುದುಂಟು. ಇಂಥ ಕಡೆಗಳಲ್ಲಿ ಹಂತಗಳ ಸೂತ್ರವನ್ನು ಅನುಸರಿಸಿಯೂ ಕೆಲವಾರು ವಿವರಗಳನ್ನು ಹೊಸದಾಗಿ ತರಲು ಮಾಡಿರುವ ಪ್ರಯತ್ನವನ್ನು ಗಮನಿಸಬಹುದು. ಕೆಳಗಿನ ಹಂತದಲ್ಲಿ ಯುದ್ಧದಲ್ಲಿ ಭಾಗವಹಿಸಿದಂತೆಯೋ, ಯುದ್ಧಸನ್ನದ್ಧನಾಗಿರುವಂತೆಯೋ ವೀರನ ಶಿಲ್ಪವನ್ನು ಬಿಡಿಸಲಾಗಿರುತ್ತದೆ. ಎರಡನೆಯ ಹಂತದಲ್ಲಿ, ವೀರನನ್ನು ಅಪ್ಸರೆಯರು ಸ್ವರ್ಗಕ್ಕೆ ಕೊಂಡೊಯ್ಯುವ ವಿವರಗಳು ಹೊಂದಿರುತ್ತವೆ. ಮೂರನೇಯ ಹಂತದಲ್ಲಿ ವೀರ ಮತ್ತು ಆತನ ಹೆಂಡತಿ ಕೈಮುಗಿದು ಪದ್ಮಾಸನದಲ್ಲಿ ಕುಳಿತಿರುತ್ತಾರೆ ಅಥವಾ ಕೆಲವೊಮ್ಮೆ ಕೈ ಮುಗಿದು ನಿಂತಿರುತ್ತಾರೆ. ವಿಜಯನಗರ ಕಾಲದ ಬಹುಪಾಲು ವೀರಗಲ್ಲುಗಳ ಮೇಲೆ ಅಂದರೆ ಶಿಲ್ಪದ ನಡುವೆ ಎರಡು ಕಡೆ ಎರಡು ರಂಧ್ರಗಳನ್ನು ಸುಮಾರು ಒಂದು ಇಂಚು ಅಗಲ ಮತ್ತು ಆಳದಷ್ಟು ಮಾಡಿರುತ್ತಾರೆ. ಇವುಗಳನ್ನು ಶಿಲ್ಪಿಗಳು ಉದ್ದೇಶಪೂರ್ವಕವಾಗಿಯೇ ಮಾಡಿರುವರೆಂಬ ಬಗ್ಗೆ ಸಂಶಯವಿಲ್ಲ.

ವಿಜಯನಗರ ಕಾಲದ ವೀರಗಲ್ಲುಗಳ ಶಿಲ್ಪ ಸರಳವಾದ ರೀತಿಯಲ್ಲಿರುತ್ತವೆ. ಶತ್ರುವಿನೊಂದಿಗೆ ಹೋರಾಡುತ್ತಿರುವಂತೆ ವೀರನೊಬ್ಬನನ್ನೆ ಕೆಲವೊಮ್ಮೆ ಬಿಡಿಸಿರುತ್ತಾರೆ. ಮೇಲ್ಭಾಗದಲ್ಲಿ ಶಿವಲಿಂಗ, ಸೂರ್ಯ, ಚಂದ್ರರನ್ನು ಬಿಡಿಸಿರುತ್ತಾರೆ. ವೀರನೊಂದಿಗೆ ಅವನ ಹೆಂಡತಿ ಅಥವಾ ಹೆಂಡತಿಯರು ಸಹಗಮನ ಮಾಡಿದ್ದರೆ ಅವರು ಅವನ ಅಕ್ಕ ಪಕ್ಕದಲ್ಲಿ ಕೈ ಮುಗಿದು ನಿಂತಿರುವಂತೆಯೋ ಅಥವಾ ತಮ್ಮ ಬಲಗೈಯನ್ನು ಎತ್ತಿ ಸಹಗಮನದ ಸಂಕೇತವನ್ನು ಸೂಚಿಸಿ, ತಮ್ಮ ಎಡಗೈಯಲ್ಲಿ ಗಿಂಡಿಯನ್ನು ಹಿಡಿದಿರುವಂತೆಯೋ ಶಿಲ್ಪದ ವಿವರಗಳನ್ನು ಬಿಡಿಸಲಾಗಿರುತ್ತದೆ. ಕೊಪ್ಪಳ ಜಿಲ್ಲೆಯ ಈ ಕೆಳಗಿನ ಗ್ರಾಮಗಳಲ್ಲಿ ವೀರಗಲ್ಲುಗಳನ್ನು ಕಾಣಬಹುದು.

ತಳವಾರುಘಟ್ಟದಿಂದ ತುಂಗಭದ್ರಾ ನದಿಯನ್ನು ಹುಟ್ಟಿನಲ್ಲಿ ದಾಟಿ ಆನೆಗೊಂದಿಗೆ ಹೋಗಲು ಇಳಿಯುವ ದಡದಲ್ಲಿ ಅಂದರೆ ಆನೆಗೊಂದಿ ಕೋಟೆಯ ಬಾಗಿಲ ಬಳಿ ವೀರಗಲ್ಲು ಮತ್ತು ಹುಚ್ಚಪ್ಪಯ್ಯ ಮಠದ ಮುಂಭಾಗದಲ್ಲಿ ವೀರಗಲ್ಲುಗಳಿವೆ. ಜನರನ್ನು ಒಂದು ದಡದಿಂದ ಮತ್ತೊಂದು

ದಡಕ್ಕೆ ಸಾಗಿಸುವಲ್ಲಿ ತಮ್ಮ ಸಾಹಸವನ್ನು ತೋರಿಸಿ, ನೀರಿನಲ್ಲಿ ಮಡಿದಿರಬಹುದಾದ ಇಬ್ಬರು ವೀರರ ಶಿಲ್ಪವಿದೆ. ಆದರೆ ಅವುಗಳ ಮೇಲೆ ಶಾಸನ ಇಲ್ಲವಾದ್ದರಿಂದ ಆ ಬಗ್ಗೆ ಖಚಿತವಾಗಿ ಏನನ್ನೂ ಹೇಳಲಾಗುವುದಿಲ್ಲ. ಇಂದಿಗೂ ಅಂಬಿಗರು ಅವುಗಳನ್ನು ವಿಶೇಷ ಸಂದರ್ಭಗಳಲ್ಲಿ ಆರಾಧಿಸುತ್ತಾರೆ ಮತ್ತು ಅವುಗಳನ್ನು ವೀರಗಾರರು ಎಂಬುದಾಗಿ ಕರೆಯುತ್ತಾರೆ. ನಿಂತ ಇಬ್ಬರು ವೀರರು ತಮ್ಮ ಹುಟ್ಟುಗಳನ್ನು ಕೈಯಲ್ಲಿ ಹಿಡಿದಿರುವಂತೆ ಶಿಲ್ಪದ ವಿವರಗಳನ್ನು ಬಿಡಿಸಲಾಗಿದೆ. ಈ ರೀತಿಯ ವೀರಗಲ್ಲುಗಳು ಅಪರೂಪವೆಂದೇ ಹೇಳಬಹುದು.[೫] ತಳವಾರಘಟ್ಟದಿಂದ ಆನೆಗೊಂದಿಗೆ ಹೋಗುವ ದಡದ ಬಳಿಯಲ್ಲಿಯ ವೀರಗಲ್ಲಿನಲ್ಲಿ ಮೊದಲನೆಯ ವೀರನು ಬಲಗೈಯಲ್ಲಿ ಹುಟ್ಟನ್ನು ಹಿಡಿದುಕೊಂಡು ಮೇಲೆ ಎತ್ತಿದ್ದು, ಎಡಗೈಯನ್ನು ಸೊಂಟದ ಮೇಲೆ ಇಟ್ಟುಕೊಂಡಿದ್ದಾನೆ. ಎರಡನೆಯ ವೀರನು ಬಲಗೈಯನ್ನು ಮೇಲೆ ಎತ್ತಿದ್ದು, ಎಡಗೈಯಲ್ಲಿ ಹುಟ್ಟನ್ನು ಹಿಡಿದುಕೊಂಡು ಎದೆಯವರೆಗೆ ಕೈಯನ್ನು ಇಟ್ಟುಕೊಂಡು ಕೆಳಗಡೆ ಹುಟ್ಟನು ಇಳಿಬಿಟ್ಟಿದ್ದಾನೆ. ಇಬ್ಬರು ವೀರರು ಎಡಗಡೆ ತುರುಬುವನ್ನು ಕಟ್ಟಿದ್ದಾರೆ. ಸೊಂಟಕ್ಕೆ ವಸ್ತ್ರವನ್ನು ಸುತ್ತಿಕೊಂಡಿದ್ದಾರೆ. ಆನೆಗೊಂದಿಯ ಹುಚ್ಚಪ್ಪಯ್ಯ ಮಠದ ಮುಂಭಾಗದಲ್ಲಿ ಈ ವೀರಗಲ್ಲು ಇದ್ದು ಅದರಲ್ಲಿ ಇಬ್ಬರು ವೀರರು ಹುಟ್ಟವನ್ನು ಹಿಡಿದುಕೊಂಡು ನಿಂತಿದ್ದಾರೆ. ಮೊದಲನೆಯ ವೀರನು ಬಲಗೈಯನ್ನು ಸೊಂಟದ ಮೇಲೆ ಇಟ್ಟುಕೊಂಡು ಕೆಳಭಾಗದಲ್ಲಿ ಹುಟ್ಟನ್ನು ಇಳಿಬಿಟ್ಟಿದ್ದಾನೆ. ಎಡಗೈಯನ್ನು ಮೇಲೆ ಎತ್ತಿದ್ದಾನೆ. ಇಬ್ಬರು ವೀರರು ತಲೆಗೆ ರುಮಾಲು ಕಟ್ಟಿದ್ದು, ಸೊಂಟಕ್ಕೆ ವಸ್ತ್ರಗಳನ್ನು ಕಟ್ಟಿಕೊಂಡಿದ್ದಾರೆ. ಎರಡನೆಯ ವೀರನು ಬಲಗೈಯನ್ನು ಇಳಿಬಿಟ್ಟಿದ್ದು ಎಡಗೈಯಲ್ಲಿ ಹುಟ್ಟನ್ನು ಹಿಡಿದುಕೊಂಡು ಎದೆಯ ಭಾಗದ ಮೇಲೆ ಇಟ್ಟುಕೊಂಡಿದ್ದಾರೆ. ವೀರನು ಬಲಗಡೆಯಲ್ಲಿ ತುರುಬು ಕಟ್ಟಿದ್ದಾರೆ.

ಗಂಗಾವತಿ ತಾಲೂಕಿನ ಹೇರೂರು ಗ್ರಾಮದ ಬಸ್ ನಿಲ್ದಾಣದ ದಕ್ಷಿಣಕ್ಕೆ ಪೂರ್ವಾಭಿಮುಖವಾಗಿ ಒಂದು ಶಿಲ್ಪವಿದೆ. ಈ ಶಿಲ್ಪದಲ್ಲಿ ವೀರನು ತನ್ನ ಬಲಗೈಯಲ್ಲಿ ಕತ್ತಿಯನ್ನು ಎಡಗೈಯಲ್ಲಿ ಹುಟ್ಟನ್ನು ಹಿಡಿದಿದ್ದಾನೆ. ವೀರನು ಸಾಧಾರಣವಾದ ಮೈಯಂಗಿ ಮತ್ತು ಪಂಚೆಯನ್ನು ಧರಿಸಿದ್ದಾನೆ. ಈ ಶಿಲ್ಪದ ಐತಿಹ್ಯ ಈ ರೀತಿ ಇದೆ. ಅಂಬಿಗನಾದ ಈ ವೀರನು ದೋಣಿ ನಡೆಸುವ ಕಾಯಕ ಮಾಡುತ್ತಿದ್ದ ಈ ಕೆರೆಯಲ್ಲಿ ಮೊಸಳೆಗಳಿದ್ದವು. ಒಂದು ದಿನ ಮೊಸಳೆಯೊಂದು ಕೆರೆಯಲ್ಲಿ ಈಜುತ್ತಿದ್ದ ಒಬ್ಬ ಬಾಲಕನ ಕಾಲನ್ನು ಹಿಡಿದಿತ್ತು. ಆ ಬಾಲಕನನ್ನು ರಕ್ಷಿಸಿ ತನ್ನ ಪ್ರಾಣವನ್ನು ಕಳೆದುಕೊಂಡನು ಆ ವೀರನ ಸ್ಮರಣಾರ್ಥವಾಗಿ ಈ ವೀರಗಲ್ಲು ಹಾಕಲಾಗಿದೆ. ಕಲ್ಲಿನ ವಿಧ ಹಾಗೂ ಲಕ್ಷಣಗಳನ್ನಾಧರಿಸಿ ಇದನ್ನು ವಿಜಯನಗರ ಕಾಲಕ್ಕೆ ಸೇರಿಸಬಹುದು.

ಗಂಗಾವತಿ ತಾಲೂಕಿನ ಚಿಕ್ಕರಾಂಪೂರ ಗ್ರಾಮದ ಸಿ. ಅಮರೇಶಪ್ಪರವರ ಗದ್ದೆಯಲ್ಲಿ ಪೂರ್ವಾಭಿಮುಖವಾಗಿ ಒಂದು ವೀರಗಲ್ಲು ಇದೆ. ಈ ವೀರಗಲ್ಲು ಮೂರು ಹಂತಗಳನ್ನು ಹೊಂದಿದ್ದು, ೩.೮ ಅಡಿ ಉದ್ದ, ೨.೧ ಅಡಿ ಅಗಲವಿದೆ. ಮೂರು ಹಂತಗಳಲ್ಲಿ ಶಿಲ್ಪಗಳನ್ನು ಬಿಡಿಸಲಾಗಿದೆ. ಮೊದಲನೆಯ ಹಂತದಲ್ಲಿ ನಾಲ್ಕು ಜನ ವೀರರು ತಮ್ಮ ಕೈಗಳಲ್ಲಿ ಕತ್ತಿಗಳನ್ನು ಹಿಡಿದು ವೀರಾವೇಶದಿಂದ

ಹೋರಾಡುತ್ತಿರುವ ದೃಶ್ಯವಿದ್ದು, ಎರಡನೆಯ ಹಂತದಲ್ಲಿ ವೀರಮರಣವನ್ನು ಹೊಂದಿದ ವೀರನನ್ನು ಅಪ್ಸರೆಯರು ಒಬ್ಬರ ಸೊಂಟವನ್ನು ಇನ್ನೊಬ್ಬರು ಬಳಸಿ ಹಿಡಿದುಕೊಂಡು ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವುದರ ಚಿತ್ರಣವಿದೆ. ಮೂರನೆಯ ಹಂತದಲ್ಲಿ ಶಿವಲಿಂಗವನ್ನು ಆರಾಧಿಸುತ್ತಿರುವ ವೀರನ ಚಿತ್ರಣವಿದೆ. ವೀರ ಸ್ವರ್ಗದಲ್ಲಿ ಸ್ಥಾನವನ್ನು ಪಡೆದ ಸನ್ನಿವೇಶವನ್ನು ತಿಳಿಸಿಕೊಡುವ ಚಿತ್ರಣವಿದ್ದು. ಶಿಲ್ಪದ ಮೇಲೆ ಬಲಭಾಗಕ್ಕೆ ಸೂರ್ಯನನ್ನು ಎಡಭಾಗಕ್ಕೆ ಅರ್ಧಾಕೃತಿಯ ಚಂದ್ರನನ್ನು ಕಂಡರಿಸಲಾಗಿದೆ. ಈ ಶಿಲ್ಪವನ್ನು ವಿಜಯನಗರ ಅರಸರ ಆರಂಭ ಕಾಲದ ವೀರಗಲ್ಲು ಎಂದು ಗುರುತಿಸಬಹುದು.

ಯಲಬುರ್ಗಾ ತಾಲೂಕಿನ ಕರಮುಡಿಯ ಗ್ರಾಮದ ವೀರಭದ್ರ ದೇವಾಲಯ ಹೊರಗಡೆ ವೀರಗಲ್ಲು ಶಿಲ್ಪವಿದೆ. ಈ ಶಿಲ್ಪವು ಎರಡು ಹಂತವನ್ನು ಹೊಂದಿದ್ದು ಮೊದಲನೆಯ ಹಂತದಲ್ಲಿ ವೀರನು ಕೈಯಲ್ಲಿ ಬಾಣ ಹಿಡಿದು ಚಲಿಸುವ ಭಂಗಿಯಲ್ಲಿದಾನೆ. ಎರಡನೆಯ ಹಂತದಲ್ಲಿ ವೀರನು ಸ್ವರ್ಗದಲ್ಲಿ ಲಿಂಗದ ಮುಂದೆ ಧ್ಯಾನಾಸ್ತನಾಗಿದ್ದು, ನಂದಿಯ ಶಿಲ್ಪವನ್ನು ಚಿತ್ರಿಸಿದ್ದಾರೆ. ಮೇಲ್ಭಾಗದಲ್ಲಿ ಸೂರ್ಯ ಚಂದ್ರರನ್ನು ಕಂಡರಿಸಲಾಗಿದೆ.

ಗಂಗಾವತಿ ತಾಲೂಕಿನ ಸಂಗಾಪುರ ಗ್ರಾಮದ ಈಶ್ವರ ದೇವಸ್ಥಾನಕ್ಕೆ ಅಭಿಮುಖವಾಗಿ ನಿರ್ಮಿಸಲಾಗಿರುವ ಒಂದು ಗುಡಿಯಿದ್ದು, ಈ ಗುಡಿಯಲ್ಲಿ ಈರಣ್ಣ ಎಂದು ಆರಾಧಿಸುತ್ತಿರುವ ವೀರಗಲ್ಲು ಶಿಲ್ಪವಿದೆ. ಈ ಶಿಲ್ಪದಲ್ಲಿ ವೀರ ತನ್ನ ಬಲಗೈಯಲ್ಲಿ ಖಡ್ಗವನ್ನು ಹಿಡಿದು ತಿವಿಯುತಿದ್ದಾನೆ ಮತ್ತು ಆತನ ಸೊಂಟದಲ್ಲಿಯೂ ಒಂದು ಕಿರುಗತ್ತಿ ಇದೆ. ಆತನ ವೇಷ-ಭೂಷಣಗಳು ಓರ್ವ ಸೈನಿಕನಂತಿವೆ. ಇದು ಯುದ್ಧ ಸನ್ನಿವೇಶವನ್ನು ನೆನಪಿಸುತ್ತದೆ. ಕಿವಿಯಲ್ಲಿ ಓಲೆಗಳನ್ನು ಧರಿಸಿದ್ದಾನೆ. ತಲೆಗೂದಲುಗಳನ್ನು ತಿರುವಿ ಬಲಕ್ಕೆ ಜುಟ್ಟು ಕಟ್ಟಿದ್ದಾನೆ. ಸಾಮಾನ್ಯವಾಗಿ ಸ್ತ್ರೀಯರಲ್ಲಿ ತುರುಬು ಕಟ್ಟುವ ಸಂಪ್ರದಾಯ ಇಂದಿಗೂ ಪ್ರಚಲಿತವಿದೆ. ಅದರಂತೆ ಪುರುಷರು ಕಿವಿಯಲ್ಲಿ ಓಲೆಗಳನ್ನು ಧರಿಸುವುದು, ಪುರುಷರು ಆಭರಣ ಪ್ರಿಯರಾಗಿದ್ದರು ಎಂಬ ಅಂಶವನ್ನು ಸೂಚಿಸುತ್ತದೆ. ಕಲ್ಲಿನ ವಿಧ ಮತ್ತು ಲಕ್ಷಣಗಳನ್ನಾಧರಿಸಿ ವಿಜಯನಗರಕಾಲ ಎಂದು ತರ್ಕಿಸಬಹುದು.

ಗಂಗಾವತಿ ತಾಲೂಕಿನ ಗಡ್ಡಿ ಗ್ರಾಮದ ಪಶ್ಚಿಮಕ್ಕೆ ಅಗೋಲಿಗೆ ಹೋಗುವ ಮಾರ್ಗದ ಎಡ ಭಾಗದ ಬನ್ನಿಕಟೆಯಲ್ಲಿ ಪೂರ್ವಾಭಿಮುಖವಾಗಿ ನಿಲ್ಲಿಸಲಾಗಿರುವ ವೀರಗಲ್ಲು ಇದೆ. ಈ ಶಿಲ್ಪವು ವಿಶಿಷ್ಟ ವೇಷಭೂಷಣಗಳಿಂದ ಕೂಡಿದೆ. ವೀರನು ಬಲಗೈಯಲ್ಲಿ ಖಡ್ಗದ ಹಿಡಿಕೆಯನ್ನು ಹಿಡಿದು ಎಡಗೈಯಲ್ಲಿ ಖಡ್ಗದ ಮಧ್ಯಭಾಗವನ್ನು ಹಿಡಿದು ಗಂಭೀರವಾಗಿ ನಿಂತಿರುವ ಚಿತ್ರಣವಿದೆ. ವೀರನು ತಲೆಗೆ ಬಟ್ಟೆಯನ್ನು ಸುತ್ತಿದ್ದಾನೆ ಹಾಗೂ ಅಲ್ಲಿ ಹಕ್ಕಿಗಳ ಪುಕ್ಕಗಳಿಂದ ಅಲಂಕರಿಸಿಕೊಂಡಿದ್ದಾನೆ. ಕಿವಿಗಳಲ್ಲಿ ಆಭರಣಗಳನ್ನು ಕಿವಿಯೋಲೆಗಳನ್ನು ಹಾಕಿದ್ದಾನೆ. ವೀರನ ಹಣೆಯ ಮೇಲೆ ಧಾರ್ಮಿಕ ಸಂಕೇತ ರೀತಿಯಲ್ಲಿ ತಿಲಕವನ್ನು ಅರ್ಧ ಚಂದ್ರಾಕೃತಿಯಲ್ಲಿ ಕೆತ್ತಲಾಗಿದೆ. ವೀರನ ತೋಳುಗಳಿಗೆ ತೋಳುಬಂಧಿ, ಕೈಗಳಲ್ಲಿ ಖಡ್ಗವನ್ನು ಕೊರಳಲ್ಲಿ ಪದಕವಿರುವ ಸರವಿದೆ. ಮೈಮೇಲೆ ಬಟ್ಟೆಯನ್ನು

ಚಿತ್ರಿಸಿ ಸೊಂಟವನ್ನು ವಸ್ತ್ರದಿಂದ ಬಿಗಿಯಲಾಗಿದೆ. ಕಾಲುಗಳಲ್ಲಿ ಕಡಗಗಳನ್ನು ಧರಿಸಿದ್ದಾನೆ. ಈ ಅಂಶಗಳು ಅಂದಿನ ಸಮಾಜದಲ್ಲಿ ಪ್ರಚಲಿತವಿದ್ದ ಸಂಸ್ಕೃತಿಯನ್ನು ತಿಳಿಸಿ ಕೊಡುತ್ತದೆ ಮತ್ತು ಪುರುಷರ ಅಲಂಕಾರ ಪ್ರಿಯತೆಯನ್ನು ತಿಳಿಸಿಕೊಡುತ್ತವೆ. ಸ್ಥಳೀಯರು ಇದನ್ನು ಪಿಡ್ಡಪ್ಪನ ಮೂರ್ತಿ ಎಂದು ಆರಾಧಿಸುವ ಸಂಪ್ರದಾಯ ಬೆಳೆದು ಬಂದಿದೆ.

ಕೊಪ್ಪಳ ತಾಲೂಕಿನ ಬಿಳೆಬಾವಿಯ ಆಂಜನೇಯ ದೇವಾಲಯ ಹತ್ತಿರವಿರುವ ವೀರಗಲ್ಲು ಕಪ್ಪು ಕಣಶಿಲೆಯಲ್ಲಿ ಕಂಡರಿಸಲ್ಪಟ್ಟಿದೆ. ಈ ಶಿಲ್ಪವು ೨.೮ ಅಡಿ ಉದ್ದ, ೨.೬ ಅಡಿ ಅಗಲ ಇದೆ. ಈ ವೀರನ ಬಲಗೈಯಲ್ಲಿ ಚಾಕು ಮತ್ತು ಎಡಗೈಯಲ್ಲಿ ಬಿಲ್ಲನ್ನು ಹಿಡಿದ್ದಾನೆ. ತಲೆಗೂದಲುಗಳನ್ನು ತಿರುವಿ ಬಲಕ್ಕೆ ತುರುಬು ಕಟ್ಟಿದ್ದಾನೆ. ವೀರ ಕಾಲು ಮತ್ತು ಕೈಗಳಲ್ಲಿ ಕಡಗಗಳಿವೆ. ಮೈಮೇಲೆ ಬಟ್ಟೆಯನ್ನು ಚಿತ್ರಿಸಿ ಸೊಂಟವನ್ನು ವಸ್ತ್ರದಿಂದ ಬಿಗಿಯಲಾಗಿದೆ. ಈ ಶಿಲ್ಪದಲ್ಲಿ ಸೂರ್ಯ ಚಂದ್ರರನ್ನು ಚಿತ್ರಿಸಲಾಗಿದೆ. ಬಿಳೆಬಾವಿಯ ಮತ್ತೊಂದು ವೀರಗಲ್ಲು ಶಿಲ್ಪವು ೪.೪ ಅಡಿ ಉದ್ದ, ೨.೨ ಅಡಿ ಅಗಲ ಇದೆ. ವೀರನು ಬಲಗೈಯಲ್ಲಿ ಖಡ್ಗ, ಎಡಗೈಯಲ್ಲಿ ಅಲಂಕೃತ ಗುರಾಣಿಯನ್ನು ಹಿಡಿದಿದ್ದಾನೆ. ಎರಡನ್ನು ಎಡಭಾಗದಲ್ಲಿ ಮೇಲೆ ಖಡ್ಗ ಮತ್ತು ಕೆಳಭಾಗದಲ್ಲಿ ಗುರಾಣಿಯನ್ನು ಚಿತ್ರಿಸಲಾಗಿದೆ. ಕಾಲು ಮತ್ತು ಕೈಗಳಲ್ಲಿ ಕಡಗಗಳಿವೆ. ತಲೆಗೆ ರುಮಾಲು ಸುತ್ತಿದ್ದಾನೆ. ಕಿವಿಯೊಲೆ ಇವೆ. ವೀರನು ಚಲಿಸುವ ಭಂಗಿಯಲ್ಲಿ ಇದ್ದಾನೆ. ಇದೆ ರೀತಿಯ ಶಿಲ್ಪವು ಯಲಬುರ್ಗಾ ತಾಲೂಕಿನ ಬನ್ನಿಕೊಪ್ಪದಲ್ಲಿದೆ.[೬] ಇಲ್ಲಿಯ ಶಿಲ್ಪದಲ್ಲಿ ವೀರನನ್ನು ಪ್ರಧಾನವಾಗಿ ತೋರಿಸಿದ್ದಾರೆ. ಬಲಗೈಯಲ್ಲಿ ಕತ್ತಿ ಮತ್ತು ಎಡಗೈಯಲ್ಲಿ ಗುರಾಣಿಯನ್ನು ಹಿಡಿದಿರುವಂತೆ ಚಿತ್ರಿಸಲಾಗಿದೆ.

ಗಂಗಾವತಿ ತಾಲೂಕಿನ ಹಿರೇಬೆಣಕಲ್ಲು ಗ್ರಾಮದಲ್ಲಿ ವೀರಗಲ್ಲು ಇದೆ. ವೀರನು ತನ್ನ ಬಲಗೈಯಲ್ಲಿ ಖಡ್ಗವನ್ನು ಎಡಗೈಯಲ್ಲಿ ಕಿರುಗತ್ತಿ(ಚಾಕು)ವನ್ನು ಹಿಡಿದಿದ್ದಾನೆ. ವೀರ ತಲೆಗೂದಲುಗಳನ್ನು ತಿರುವಿ ಬಲಕ್ಕೆ ತುರುಬು ಕಟ್ಟಿದ್ದಾನೆ. ಕಿವಿಯಲ್ಲಿ ಕಿವಿಯೊಲೆ, ಕೊರಳಲ್ಲಿ ಸರಗಳಿವೆ. ಮೇಲೆ ಸೂರ್ಯ ಮತ್ತು ಚಂದ್ರರನ್ನು ಕಂಡರಿಸಲಾಗಿದೆ. ಕೊಪ್ಪಳ ತಾಲೂಕಿನ ಕೆರೆಹಳ್ಳಿಯ ಶಿಲ್ಪದಲ್ಲಿ ವೀರನು ಎಡಮಂಡಿ ಮತ್ತು ಬಲಪಾದವನ್ನು ಊರಿ ಕುಳಿತ್ತಿದ್ದಾನೆ. ಎಡಗೈಯಲ್ಲಿ ಬಿಲ್ಲು ಇದೆ. ಬಲಗೈಯಲ್ಲಿ ಕಿರು ಖಡ್ಗವಿದೆ. ವೀರನ ತಲೆಯ ಮೇಲೆ ರುಮಾಲು ಸುತ್ತಲಾಗಿದೆ. ಕೊರಳಲ್ಲಿ ಹಾರವಿದೆ.

ಗಂಗಾವತಿ ತಾಲೂಕಿನ ಮೈಲಾಪುರ ಗ್ರಾಮದ ಪಾಂಡವರ ಗುಡ್ಡದ ಪಕ್ಕದಲ್ಲಿ ವೀರಗಲ್ಲುಗಳಿವೆ. ಈ ವೀರನು ಬಲಗೈಯಲ್ಲಿ ಖಡ್ಗ ಮತ್ತು ಎಡಗೈಯಲ್ಲಿ ಗುರಾಣಿಯನ್ನು ಹಿಡಿದ್ದಾನೆ. ತಲೆಗೆ ಪೇಟವನ್ನು ಹಾಕಿದ್ದಾನೆ. ಕಿವಿಗಳಲ್ಲಿ ಕಿವಿಯೋಲೆಗಳಿವೆ. ಕಾಲು ಮತ್ತು ಕೈಗಳಲ್ಲಿ ಕಡಗಗಳನ್ನು ಧರಿಸಿದ್ದಾನೆ. ಕೊರಳಲ್ಲಿ ಪದಕವಿರುವ ಸರವಿದೆ. ಸೊಂಟವನ್ನು ವಸ್ತ್ರದಿಂದ ಬಿಗಿಯಲಾಗಿದೆ. ಮೇಲ್ಭಾಗದಲ್ಲಿ ಸೂರ್ಯ ಚಂದ್ರರನ್ನು ಕಂಡರಿಸಲಾಗಿದೆ. ಈ ವೀರನು ಬಲಗೈಯಲ್ಲಿ ಬಾಣ ಮತ್ತು ಎಡಗೈಯಲ್ಲಿ ಬಿಲ್ಲನ್ನು ಹಿಡಿದ್ದಾನೆ. ಸೊಂಟದಲ್ಲಿ ಚೂರಿಯನ್ನು ಸಿಕ್ಕಿಸಿಕೊಂಡಿದ್ದಾನೆ. ವೀರನ

ಬೆನ್ನಿಗೆ ಬಾಣಗಳ ಬತ್ತಳಿಕೆಯು ಇದೆ. ಮೇಲೆ ಸೂರ್ಯ ಚಂದ್ರರನ್ನು ಕಂಡರಿಸಲಾಗಿದೆ. ಈ ವೀರಗಲ್ಲುಗಳಲ್ಲಿರುವ ವೇಶಭೂಷಣದಿಂದ ಅಂದಿನ ಸಮಾಜದಲ್ಲಿ ಪ್ರಚಲಿತದಲ್ಲಿದ್ದ ಸಂಸ್ಕೃತಿಯನ್ನು ಮತ್ತು ಪುರುಷರ ಅಲಂಕಾರ ಪ್ರಿಯತೆಯು ತಿಳಿದು ಬರುತ್ತದೆ.

ಗಂಗಾವತಿ ತಾಲೂಕಿನ ನವಲಿ ಗ್ರಾಮದ ಮಸೂದಿಯ ಪಕ್ಕದಲ್ಲಿರುವ ವೀರಗಲ್ಲು ಕಪ್ಪುಕಣಶಿಲೆಯಲ್ಲಿದೆ. ಈ ಶಿಲ್ಪವು ೨ ಅಡಿ ಎತ್ತರ ೧ ಅಡಿ ಅಗಲ ಇದೆ. ವೀರನು ಎಡಗೈಯಲ್ಲಿ ಬಿಲ್ಲನ್ನು, ಬಲಗೈಯಲ್ಲಿ ಚೂರಿಯನ್ನು ಹಿಡಿದು ಕುದುರೆಯ ಕಾಲಿಗೆ ತಿವಿಯುತ್ತಿರುವಂತೆ ತೋರಿಸಿದ್ದಾರೆ. ಕುದುರೆಯು ತನ್ನ ಎರಡು ಕಾಲುಗಳನ್ನು ಎತ್ತಿಕೊಂಡು ನಿಂತಿದೆ. ಈ ಶಿಲ್ಪದಲ್ಲಿ ವೀರನನ್ನು ಪ್ರಧಾನವಾಗಿ, ಕುದುರೆಯನ್ನು ಚಿಕ್ಕದಾಗಿ ತೋರಿಸಿದ್ದಾರೆ. ಚಿಕ್ಕದಾಗಿ ನಂದಿ ಮತ್ತು ವೀರನ ಶಿಲ್ಪ ಇವೆ. ಅದೇ ನವಲಿ ಗ್ರಾಮದ ಕಪ್ಪು ಕಣಶಿಲೆಯಲ್ಲಿ ಕಂಡರಿಸಿದ ಇನ್ನೊಂದು ಶಿಲ್ಪವಿದೆ. ಈ ಶಿಲ್ಪದಲ್ಲಿ ಕುದುರೆಯನ್ನು ದೊಡ್ಡದಾಗಿ, ವೀರನನ್ನು ಚಿಕ್ಕದಾಗಿ ತೋರಿಸಿದ್ದಾರೆ. ಬಲಗೈಯಲ್ಲಿ ಕತ್ತಿ ಮತ್ತು ಎಡಗೈಯಲ್ಲಿ ಕುದುರೆಯ ಲಗಾಮನ್ನು ಹಿಡಿದ್ದಾನೆ. ಕುದುರೆಯು ಓಡುವ ಭಂಗಿಯಲ್ಲಿದ್ದುದರಿಂದ ಇದು ಯುದ್ಧಕ್ಕೆ ಹೊರಟ ಸಂಗತಿಯನ್ನು ಸೂಚಿಸುವ ಶಿಲ್ಪವೆಂದು ಹೇಳಬಹುದು.

ಕನಕಗಿರಿಯಿಂದ ಗಂಗಾವತಿಗೆ ಹೋಗುವ ರಸ್ತೆಯ ಎಡಬದಿಯ ಗ್ರಾನೈಟ್ ಗುಂಡೊಂದರಲ್ಲಿ ಒಂದು ಶಿಲ್ಪವನ್ನು ಕಂಡರಿಸಿದ್ದಾರೆ. ಈ ಶಿಲ್ಪವು ೬೦ ಸೆಂ.ಮೀ. ಎತ್ತರ ಮತ್ತು ೩.೯ ಮೀಟರ್ ಅಗಲವಾಗಿದೆ. ಆ ಶಿಲ್ಪ ಫಲಕದಲ್ಲಿರುವ ಶಿಲ್ಪಗಳ ಕ್ರಮ ವಿವರ ಹೀಗಿದೆ; ಮೊದಲಿಗೆ ದೀವಟಿಗೆ ಹಿಡಿದ ವ್ಯಕ್ತಿ, ಖಡ್ಗ ಹಿಡಿದ ಅಶ್ವಸವಾರ, ಇಬ್ಬರು ಛತ್ರದಾರರು, ಕೈಗಳಲ್ಲಿ ಅಂಜಲಿಮುದ್ರೆಯಲ್ಲಿ ಹಿಡಿದು ನಿಂತ ಇಬ್ಬರು ಸ್ತ್ರೀಯರು ನಂತರ ಈಟಿಯನ್ನು ಹಿಡಿದ ಭಟ, ಪುನಃ ಖಡ್ಗ ಧಾರಿ ಅಶ್ವಸವಾರ, ಛತ್ರ ಹಿಡಿದ ವ್ಯಕ್ತಿ ನಂತರ ಹುಲಿಯೊಡನೆ ಹೋರಾಡುತ್ತಿರುವ ವ್ಯಕ್ತಿ ಹಾಗೂ ಈಟಿ ಹಿಡಿದ ವ್ಯಕ್ತಿ ಈ ರೀತಿ ಒಟ್ಟು ದೃಶ್ಯವಿದೆ. ಒಟ್ಟಾರೆ ಇದನ್ನು ರಾಜಪರಿವಾರದ ಪ್ರಯಾಣದ ದೃಶ್ಯವೆಂದು ಹೇಳಬಹುದು. ಮಧ್ಯದಲ್ಲಿ ಇರುವ ಇಬ್ಬರು ಸ್ತ್ರೀಯರು ರಾಣಿಯರಿದ್ದು, ಈ ಇಬ್ಬರಿಗೂ ಛತ್ರ ಹಿಡಿಯುವ ಸೇವಕರಿದ್ದಾರೆ. ಇವರಲ್ಲಿ ಒಬ್ಬನು ಮಾತ್ರ ಛತ್ರವನ್ನು ಹಿಡಿದಿದ್ದರೆ ಇನ್ನೊಬ್ಬ ಅದನ್ನು ಮಡಚಿ ಕಂಕುಳಲ್ಲಿ ಇಟ್ಟುಕೊಂಡಂತಿದೆ. ರಾಣಿಯರ ಮುಂದೆ ಇರುವ ಅಶ್ವಸವಾರ ರಕ್ಷಣಾ ಪಡೆಯುವನಿರಬೇಕು. ರಾಣಿಯರ ನಂತರದ ಅಶ್ವಸವಾರನಿಗೆ ಕುದುರೆಯ ಮುಂದೆ ಅದನ್ನು ಹಿಡಿದು ಹೊರಟ ಸೇವಕ ಹಿಂದೆ ಛತ್ರ ಹಿಡಿದ ಇನ್ನೊಬ್ಬ ಸೇವಕ ಇರುವುದರಿಂದ ಅಶ್ವಸವಾರ ಅರಸನೇ ಎನ್ನಬಹುದು. ಎಲ್ಲ ಶಿಲ್ಪಕ್ಕೂ ಮುಂದೆ ದೀವಟಿಗೆ(ಪಂಜು)ಯನ್ನು ಹಿಡಿದ ವ್ಯಕ್ತಿ ಇರುವುದರಿಂದ ಇದೊಂದು ರಾತ್ರಿಯ ದೃಶ್ಯವೆಂದು ಹೇಳಬಹುದು. ಆದರೆ ಅರಸನ ನಂತರದ ದೃಶ್ಯ ಈ ಸಂದರ್ಭಕ್ಕೆ ಹೊಂದಲಾರದು ಇಲ್ಲಿ ಹುಲಿಯೊಂದಿಗೆ ಹೊರಾಡುತ್ತಿರುವ ವ್ಯಕ್ತಿ ಮತ್ತು ಈಟಿ ಹಿಡಿದ ಭಟರಿರುವುದರಿಂದ ಹುಲಿಯನ್ನು ಹಿಂದಿರುವ ಕಾವಲು ಪಡೆಯವರು ಸಂಹರಿಸುತ್ತಿರಬೇಕು.[೭]

ಕನಕಗಿರಿಯ ಹಿರೇನಾಯಕನ ದೇವಾಲಯದಲ್ಲಿ ಒಂದು ಶಿಲ್ಪವಿದೆ. ಇದು ೭೧ ಸೇ.ಮೀ ಎತ್ತರ ೧.೨ ಮೀಟರ ಅಗಲ ಇದೆ. ಈ ಫಲಕದಲ್ಲಿರುವ ದೃಶ್ಯ ಇಂತಿದೆ. ನಾಲ್ಕು ಜನ ಮೇನೆಯನ್ನು ಹೊತ್ತು ಹೊರಟಿದ್ದಾರೆ. ಮೇನೆಯಲ್ಲಿ ಒಬ್ಬ ವ್ಯಕ್ತಿ ಕುಳಿತಿದ್ದಾನೆ. ಮೇನೆಯ ಮುಂದೆ ಅಲಂಕೃತ ಅಶ್ವವನ್ನು ವ್ಯಕ್ತಿಯೊಬ್ಬ ಹಿಡಿದು ಹೊರಟಿದ್ದಾನೆ. ಮೇನೆಯ ಕೆಳಗೆ ಮೂರು ಜನರ ಚಿಕ್ಕ ಆಕೃತಿಗಳಿವೆ ಇವರ ಕೈಗಳಲ್ಲಿ ಕ್ರಮವಾಗಿ ಫತಾಕೆ, ಛತ್ರ, ತ್ರಿನಾಮ, ಶಂಖ, ಚಕ್ರಗಳಿರುವ ಫಲಕ ಇದೆ.[೮]

ಕನಕಗಿರಿಯ ಕನಕಾಚಲ ಲಕ್ಷ್ಮೀನರಸಿಂಹ ದೇವಾಲಯದ ಮುಂದೆ ಒಂದು ಶಿಲ್ಪವಿದ್ದು. ಇದರ ಎತ್ತರ ೮೭ ಸೆಂ.ಮೀ. ಅಗಲ ೧.೬೧ಮೀ ಅಳತೆಯುಳ್ಳದ್ದಾಗಿದೆ. ಫಲಕದಲ್ಲಿ ವೃದ್ಧ ಸ್ತ್ರೀಯೊಬ್ಬಳು ಪೀಠದ ಮೇಲೆ ಆಸೀನಳಾಗಿದ್ದಾಳೆ. ಅವಳ ಇಕ್ಕೆಲಗಳಲ್ಲಿ ಇರುವ ಇಬ್ಬರು ದಾಸಿಯರಲ್ಲಿ ಒಬ್ಬಳು ಚಾಮರಧಾರಿಣಿ, ಪೀಠದ ಮುಂದೆ ಅಶ್ವಾರೋಹಿಯೊಬ್ಬ ಇದ್ದು ಬಲಗೈಯಲ್ಲಿ ಖಡ್ಗ ಹಿಡಿದಿದ್ದಾನೆ. ಕುದುರೆಯ ಹಿಂದೆ ಛತ್ರ ಹಿಡಿದ ಸೇವಕ, ಮುಂದೆ ಖಡ್ಗ ಹಿಡಿದು ನಿಂತ ಸೇವಕರ ಶಿಲ್ಪಗಳಿವೆ. ಕುದುರೆಯ ಇನ್ನೊಂದು ಮಗ್ಗುಲಿನಲ್ಲಿ ಇರುವ ವ್ಯಕ್ತಿ ಪತಾಕೆಯನ್ನು ಹಿಡಿದಿದ್ದಾನೆ. ಹೀಗೆ ಈ ಶಿಲ್ಪಫಲಕದಲ್ಲಿಯ ವ್ಯಕ್ತಿಗಳ ಕ್ರಿಯೆಯಿಂದ ಇಲ್ಲಿಯ ಘಟನೆಯನ್ನು ಹೀಗೆ ನಿರ್ಧರಿಸಬಹುದು. ಅಶ್ವರೂಢನಾಗಿ ಯುದ್ಧಕ್ಕೆ ಹೊರಟ ಅರಸನು ರಾಜಮಾತೆಯ ದರ್ಶನಕ್ಕೆ ಬಂದಂತೆ ತೋರುತ್ತದೆ. ಪೀಠದ ಮೇಲೆ ಕುಳಿತ ಸ್ತ್ರೀಯನ್ನು ರಾಜಮಾತೆ ಎಂದು ಗುರುತಿಸಲು ಮುಖ್ಯ ಕಾರಣ ವೃದ್ಧೆಯ ಲಕ್ಷಣಗಳಿರುವುದು ಮತ್ತು ತಲೆಗೆ ವೃತ್ತಾಕಾರದ ಮುಂಡಾಸನ್ನು ಸುತ್ತಿರುವುದು.[೯]

ಗಂಗಾವತಿ ತಾಲೂಕಿನ ಚಿಕ್ಕ ಬೆಣಕಲ್ಲು ಗ್ರಾಮದ ಟೊಕ್ಕಪ್ಪನ ಗುಡಿಯ ಗರ್ಭಗೃಹದಲ್ಲಿ ಒಂದು ವೀರಗಲ್ಲಿದೆ. ಇದರ ಎತ್ತರ ೩.೧೦ ಮೀ. ಅಗಲ ೩ ಮೀ. ಇದೆ. ಅರಸನು ಅಶ್ವರೂಢನಾಗಿ ಯುದ್ಧಕ್ಕೆ ಹೊರಟ ದೃಶ್ಯವನ್ನು ಇದು ಬಿಂಬಿಸುತ್ತದೆ. ಕುದುರೆಯ ಹಿಂಭಾಗದಲ್ಲಿ ಪ್ರಾಯಶಃ ಅವನ ಮೂರು ಜನ ರಾಣಿಯರು ಮತ್ತು ಇಬ್ಬರ ಮಕ್ಕಳ ಶಿಲ್ಪವಿದೆ. ಮಕ್ಕಳಲ್ಲಿ ಒಬ್ಬ ಬಾಲಕ ನಿಂತಿದ್ದು. ನಿನ್ನೊಂದು ಶಿಶುವನ್ನು ಮಧ್ಯದ ಸ್ತ್ರೀ ಎತ್ತಿಕೊಂಡಿದ್ದಾಳೆ. ಕುದುರೆಯ ಮುಂಭಾಗದಲ್ಲಿ ಫತಾಕೆಯನ್ನು ಹಿಡಿದ ಸೇವಕ ಹೊರಟಿದ್ದಾನೆ. ಅಶ್ವರೂಢನಾದ ಅರಸನು ಎಡಗೈಯಿಂದ ಕುದುರೆಯ ರಿಕಾಪು ಹಿಡಿದ್ದಾನೆ. ಬಲಗೈಯಲ್ಲಿ ಉದ್ದವಾದ ಭರ್ಚಿ ಇದೆ. ಅರಸ ಮತ್ತು ರಾಣಿಯರ ವೇಶಭೂಷಣಗಳು ಸಮಕಾಲೀನ ಉಡುಗೆ ತೊಡುಗೆಗಳನ್ನು ಸ್ಪಷ್ಟವಾಗಿ ಬಿಂಬಿಸುತ್ತವೆ. ಅರಸ ಮತ್ತು ಬಾಲಕನ ತಲೆಯ ಮೇಲೆ ಪೇಟ (ಮುಂಡಾಸು) ಗಳನ್ನು ಸುತ್ತಲಾಗಿದೆ. ಅರಸನು ಉದ್ದವಾದ ನಿಲುವಂಗಿ ಧರಿಸಿದ್ದು, ಅದರಲ್ಲಿ ನೇರಿಗೆಗಳು ಸ್ಪಷ್ಟವಾಗಿದೆ. ಅರಸನ ಸೊಂಟದಲ್ಲಿ ಗುರಾಣಿ ಮತ್ತು ಖಡ್ಗಗಳಿವೆ. ಕುದುರೆಗೆ ಮುಖವಾಡ ಮತ್ತು ಕಾಲು ಇಡಲು ರಿಕಾಪು ಇದೆ. ರಾಣಿಯರು ಕೇಶವನ್ನು ಹಿಂದಕ್ಕೆ ಬಾಚಿ ತುರುಬು ಕಟ್ಟಲಾಗಿದೆ. ಕುಪ್ಪಸ ಮತ್ತು ಸೀರೆಯನ್ನು ಧರಿಸಿದ್ದು. ಕಿವಿಯಲ್ಲಿ ಕಿವಿಯೊಲೆಗಳು, ಕೊರಳಲ್ಲಿ ಮಣಿಸರಗಳಿವೆ. ಮುಂಗೈಯಲ್ಲಿ ಕಂಕಣಗಳಿವೆ. ಈ ಎಲ್ಲಾ ಶಿಲ್ಪಗಳು ಕನಕಗಿರಿಯ ಪಾಳೆಗಾರರಿಗೆ ಸಂಬಂಧಿಸಿದ ಶಿಲ್ಪವೆಂದು ಹೇಳಬಹುದು. ಅಲ್ಲೇ ಕಪ್ಪು ಶಿಲೆಯ

ಅಶ್ವರೂಢ ಅರಸನ ಶಿಲ್ಪ ಇದೆ. ಇಲ್ಲಿ ಅರಸನು ಅಶ್ವರೂಢನಾಗಿದ್ದು, ಬಲಗೈಯಲ್ಲಿ ಉದ್ದವಾದ ಭರ್ಚಿಯನ್ನು ಎಡಗೈಯಲ್ಲಿ ಕುದುರೆಯ ಮುಗುಧಾರವನ್ನು ಹಿಡಿದ್ದಾನೆ. ಕುದುರೆಯ ಮುಗುಧಾರ, ತಡಿ. ರಿಕಾಪುಗಳನ್ನು ಹಾಕಲಾಗಿದೆ. ಕುದುರೆಯ ಮೇಲೆ ಪೀಠದ ಮೇಲೆ ಅರಸ ಕುಳಿತಿದ್ದು, ಅರಸನು ಉದ್ದವಾದ ನೆರಿಗೆವುಳ್ಳ ನಿಲುವಂಗಿ ಧರಿಸಿದ್ದಾನೆ. ಅವನ ಸೊಂಟದಲ್ಲಿ ಗುರಾಣಿ ಇದೆ. ಕುದುರೆಯ ಮುಂಭಾಗದಲ್ಲಿ ಫತಾಕೆಯನ್ನು ಹಿಡಿದು ಸೇವಕ ನಿಂತಿದ್ದಾನೆ. ಕುದುರೆಯ ಸನ್ನದ್ಧತೆ ಹಾಗೂ ಅರಸನ ಭಂಗಿಯಿಂದ ಇದು ಅರಸನು ಯುದ್ಧಕ್ಕೆ ಹೊರಟ ಸಂಗತಿಯನ್ನು ಸೂಚಿಸುವ ಶಿಲ್ಪವೆಂದು ಹೇಳಬಹುದು.

ಗಂಗಾವತಿ ತಾಲೂಕಿನ ಮಲಕನ ಮರಡಿಯ ನಾರಾಣಪ್ಪ ಗುಡ್ಡದ ಮೇಲೆ ವೀರನ ಶಿಲ್ಪ ಇರುವ ಗುಡಿ ಇದೆ. ಇದನ್ನು ಸ್ಥಳಿಯರು ನಾರಾಣ್ಣೆಪ್ಪ ಎಂದು ಆರಾಧನೆ ಮಾಡುತ್ತಾರೆ. ಈ ಶಿಲ್ಪವು ಹುಟ್ಟು ಬಂಡೆಗಲ್ಲಿಗೆ ಇದ್ದು, ವೀರ ಕುದುರೆಯ ಮೇಲೆ ಕುಳಿತಿದ್ದಾನೆ. ವೀರ ತನ್ನ ಬಲಗೈಯಲ್ಲಿ ಭರ್ಚಿಯನ್ನು ಹಿಡಿದು ಹೋರಾಟ ಮಾಡುತ್ತಿರುವ ಚಿತ್ರವಿದೆ. ಎಡಗೈಯಲ್ಲಿ ಕುದುರೆಯ ಲಾಳ/ಲಗಾಮು ಹಿಡಿದಿದ್ದಾನೆ. ಈ ನಾರಾಣ್ಣೆಪ್ಪನನ್ನು ದಿನಾಲು ಪೂಜಿಸುತ್ತಾರೆ ಮತ್ತು ಅಮವಾಸೆ, ಹುಣ್ಣಿಮೆಗಳಂದು ಹರಕೆ ಹೊತ್ತವರು ಸುತ್ತಲಿನ ಊರುಗಳಿಂದ ಬಂದು ಹರಕೆ ಸಲ್ಲಿಸುತ್ತಾರೆ. ತಮ್ಮ ಕಷ್ಟಗಳನ್ನು ಪರಿಹರಿಸುತ್ತಾನೆ ಎಂಬ ನಂಬಿಕೆ ಇಲ್ಲಿಯ ಜನರಿಗೆ ಇದೆ.

ಗಂಗಾವತಿ ತಾಲೂಕಿನ ಗುಡದೂರು ಗ್ರಾಮದ ಆಂಜನೇಯ ದೇವಾಲಯದ ಪಕ್ಕದಲ್ಲಿ ಅಶ್ವದ ಮೇಲೆ ರಾಜನು ಕುಳಿತಿದ್ದಾನೆ. ಬಲಗೈಯಲ್ಲಿ ಕಠಾರಿ ಮತ್ತು ಎಡಗೈಯಲ್ಲಿ ಕುದುರೆಯ ಲಗಾಮನ್ನು ಹಿಡಿದ್ದಾನೆ. ಹಿಂದೆ ಸೇವಕನು ಛತ್ರಿ ಚಾಮರವನ್ನು ಹಿಡಿದುಕೊಂಡಿದ್ದಾನೆ.

ಕ್ರಸಂ.	ಗ್ರಾಮ	ತಾಲೂಕು	ಸ್ಥಳ	ಕಾಲ (ಕ್ರಿಶ)
೧.	ಬಿಳೆಬಾವಿ	ಕೊಪ್ಪಳ	ಆಂಜನೇಯ ದೇವಾಲಯದ ಹತ್ತಿರ	೧೪ನೇ ಶತಮಾನ
೨.	ಬಿಳೆಬಾವಿ	ಕೊಪ್ಪಳ	ಆಂಜನೇಯ ದೇವಾಲಯದ ಹತ್ತಿರ	೧೪ನೇ ಶತಮಾನ
೩.	ಚಿಕ್ಕರಾಂಪುರ	ಗಂಗಾವತಿ	ಸಿ. ಅಮರೇಶರ ಗದ್ದೆ	೧೪ನೇ ಶತಮಾನ
೪.	ಆನೆಗೊಂದಿ	ಗಂಗಾವತಿ	ಹುಚ್ಚಪ್ಪಯ್ಯನ ಮಠದ ಮುಂಭಾಗ	೧೪ನೇ ಶತಮಾನ
೫.	ಆನೆಗೊಂದಿ	ಗಂಗಾವತಿ	ಆಂಜನೇಯ ದೇವಾಲಯ ಮುಂಭಾಗ	೧೪ನೇ ಶತಮಾನ
೬.	ಬಿಮನೂರ	ಕೊಪ್ಪಳ	ಆಂಜನೇಯ ದೇವಾಲಯದ ಹತ್ತಿರ	೧೫ನೇ ಶತಮಾನ
೭.	ಅಗಳಕೇರಿ	ಕೊಪ್ಪಳ	ವೀರಭದ್ರ ದೇವಾಲಯದ ಮುಂದೆ	೧೫ನೇ ಶತಮಾನ
೮.	ಲೇಬಗೇರಿ	ಕೊಪ್ಪಳ	ಆಂಜನೇಯ ದೇವಾಲಯದ ಹತ್ತಿರ	೧೫ನೇ ಶತಮಾನ
೯.	ಕವಳಿ	ಕೊಪ್ಪಳ	ಶಂಕರಪ್ಪರವರ ಗದ್ದೆ	೧೫ನೇ ಶತಮಾನ
೧೦.	ಕವಳಿ	ಕೊಪ್ಪಳ	ಶಂಕರಪ್ಪರವರ ಗದ್ದೆ	೧೫ನೇ ಶತಮಾನ
೧೧.	ಹಿರೇಖ್ಯಾಡ	ಗಂಗಾವತಿ	ಊರ ಹೊರಗಡೆ	೧೫ನೇ ಶತಮಾನ

೧೨.	ಕೆರೆಹಳ್ಳಿ	ಕೊಪ್ಪಳ	ವೀರಭದ್ರ ದೇವಾಲಯದ ಪಕ್ಕದಲ್ಲಿ	೧೫ನೇ ಶತಮಾನ
೧೩.	ಚಿಕ್ಕರಾಂಪುರ	ಗಂಗಾವತಿ	ಗುಡ್ಡದಲ್ಲಿ	೧೫ನೇ ಶತಮಾನ
೧೪.	ಮೈಲಾಪುರ	ಗಂಗಾವತಿ	ಪಾಂಡವರ ಗುಡ್ಡದ ಪಕ್ಕದಲ್ಲಿ	೧೫ನೇ ಶತಮಾನ
೧೫.	ಬುಕ್ಕನಹಟ್ಟಿ	ಯಲಬುರ್ಗಾ	ಆಂಜನೇಯ ದೇವಾಲಯದ ಹತ್ತಿರ	೧೫ನೇ ಶತಮಾನ
೧೬.	ರಾಂಪುರ	ಕೊಪ್ಪಳ	ಆಂಜನೇಯ ದೇವಾಲಯದ ಹತ್ತಿರ	೧೫ನೇ ಶತಮಾನ
೧೭.	ಮೈಲಾಪುರ	ಗಂಗಾವತಿ	ಪಾಂಡವರ ಗುಡ್ಡದ ಪಕ್ಕದಲ್ಲಿ	೧೫ನೇ ಶತಮಾನ
೧೮.	ವಿಠಲಾಪುರ	ಗಂಗಾವತಿ	ಶಾಲೆ ಆವರಣ	೧೫ನೇ ಶತಮಾನ
೧೯.	ತಾವರಗೆರೆ	ಕುಷ್ಟಗಿ	ಶಶಿಧರ ಸ್ವಾಮಿ ಪಿ.ಯು ಕಾಲೇಜ್ ಆವರಣದಲ್ಲಿ	೧೫ನೇ ಶತಮಾನ
೨೦.	ಆನೆಗೊಂದಿ	ಗಂಗಾವತಿ	ರಾಯಚೂರಿನ ನವರಂಗ ದರವಾಜ ಪ್ರಾಚ್ಯ ವಸ್ತು ಸಂಗ್ರಹ	೧೫ನೇ ಶತಮಾನ
೨೧.	ವಿಠಲಾಪುರ	ಗಂಗಾವತಿ	ಶಾಲೆ ಆವರಣ	೧೫ನೇ ಶತಮಾನ
೨೨.	ಆನೆಗೊಂದಿ	ಗಂಗಾವತಿ	ರಾಯಚೂರಿನ ನವರಂಗ ದರವಾಜ ಪ್ರಾಚ್ಯ ವಸ್ತು ಸಂಗ್ರಹ	೧೫ನೇ ಶತಮಾನ
೨೩.	ಹೆರೂರು	ಗಂಗಾವತಿ	ಈಶ್ವರ ದೇವಾಲಯದ ಹತ್ತಿರ	೧೬ನೇ ಶತಮಾನ
೨೪.	ಆರ್ಹಾಳ	ಗಂಗಾವತಿ	ಗ್ರಾಮದ ಹೊರಭಾಗದಲ್ಲಿ	೧೬ನೇ ಶತಮಾನ
೨೫.	ಇಂದ್ರಗಿ	ಕೊಪ್ಪಳ	ಆಂಜನೇಯ ದೇವಾಲಯದ ಮುಂಭಾಗ	೧೬ನೇ ಶತಮಾನ
೨೬.	ಹಿರೇಮಾದಿನಾಳ	ಕೊಪ್ಪಳ	ಬೀರಪ್ಪನ ದೇವಾಲಯದ ಗರ್ಭಗೃಹದಲ್ಲಿ	೧೬ನೇ ಶತಮಾನ
೨೭.	ಹಳೇಮುಸ್ಟೂರು	ಗಂಗಾವತಿ	ಆಂಜನೇಯ ದೇವಾಲಯದ ಹತ್ತಿರ	೧೬ನೇ ಶತಮಾನ
೨೮.	ಮೆತ್ತಿನಾಳ	ಕುಷ್ಟಗಿ	ಗ್ರಾಮದ ಮಧ್ಯೆಯಲ್ಲಿ	೧೬ನೇ ಶತಮಾನ
೨೮.	ಮೆತ್ತನಾಳ	ಕುಷ್ಟಗಿ	ಗ್ರಾಮದ ಮಧ್ಯೆಯಲ್ಲಿ	೧೬ನೇ ಶತಮಾನ
೨೯.	ಕುಣಿಕೇರಿ	ಕೊಪ್ಪಳ	ಚಿಕ್ಕಕೆರೆಯ ಏರಿಯ ಮೇಲೆ	೧೬ನೇ ಶತಮಾನ
೩೦.	ಬಲ್ಲುಟಗಿ	ಕುಷ್ಟಗಿ	ದುರ್ಗಮ್ಮ ದೇವಾಲಯದ	೧೬ನೇ ಶತಮಾನ
೩೧.	ಲೇಬಗೇರಿ	ಕೊಪ್ಪಳ	ಆಂಜನೇಯ ದೇವಾಲಯದ ಹತ್ತಿರ	೧೬ನೇ ಶತಮಾನ
೩೨.	ಬಿಮನೂರು	ಕೊಪ್ಪಳ	ಊರ ಮಧ್ಯದಲ್ಲಿ	೧೬ನೇ ಶತಮಾನ
೩೩.	ಚಂದಾಲಿಂಗ	ಕುಷ್ಟಗಿ	ಚಂದಾಲಿಂಗೇಶ್ವರ ದೇವಾಲಯದ ಆವರಣದಲ್ಲಿ	೧೬ನೇ ಶತಮಾನ
೩೪.	ಗೋತಗಿ	ಕುಷ್ಟಗಿ	ಹನುಮಂತ ದೇವಾಲಯದ ಆವರಣ	೧೬ನೇ ಶತಮಾನ
೩೫.	ಇಂದ್ರಗಿ	ಕೊಪ್ಪಳ	ಆಂಜನೇಯ ದೇವಾಲಯದ ಮುಂಭಾಗ	೧೬ನೇ ಶತಮಾನ

೩೬.	ಬನ್ನಿಕೊಪ್ಪ	ಯಲಬುರ್ಗಾ	ಗ್ರಾಮದಲ್ಲಿ	೧೬ನೇ ಶತಮಾನ
೩೭.	ವೆಂಕಟಗಿರಿ	ಗಂಗಾವತಿ	ವೆಂಕಟೇಶ್ವರ ದೇವಾಲಯದ ಮುಂಭಾಗ	೧೬ನೇ ಶತಮಾನ
೩೮	ಕೆಸರಟ್ಟಿ	ಗಂಗಾವತಿ	ಕೆಂಚಮ್ಮ ದೇವಲಯದ ಮುಂಭಾಗ	೧೬ನೇ ಶತಮಾನ
೩೯.	ಕರಮುಡಿ	ಯಲಬುರ್ಗಾ	ವೀರಭದ್ರ ದೇವಾಲಯದ ಆವರಣ	೧೬ನೇ ಶತಮಾನ

೫.೨ ಬಂದೂಕು ವೀರಗಲ್ಲು

ಭಾರತೀಯರು ಪ್ರಾಚೀನ ಕಾಲದಲ್ಲೇ ಸಿಡಿಮದ್ದನ್ನು ಬಳಸಿದ್ದರು, ಅದನ್ನು ಮಹಾಭಾರತ, ಮುದ್ರಾರಾಕ್ಷಸ ಹಾಗೂ ಅಗ್ನಿಪುರಾಣ ಮೊದಲಾದ ಸಂಸ್ಕೃತ ಕಾವ್ಯಗಳಲ್ಲಿ ಕಾಣಬಹುದೆಂಬುದು ಒಪರ್ಟ್, ವಿಲ್ಸನ್, ರಾಮದಾಸ್ ಸೇನ್ ಮತ್ತು ವಿ.ಆರ್. ದೀಕ್ಷಿತರ್ ಈ ವಿದ್ವಾಂಸರ ವಾದವಾಗಿದೆ. ಸಂಸ್ಕೃತ ಕಾವ್ಯಗಳಲ್ಲಿ ಉಲ್ಲೇಖಗೊಂಡಿರುವ ಶತಘ್ನಿ, ಕನಪ, ಆಯುರ್ವಘ್ನಿ, ನರಚ, ಲೋಹಯಂತ್ರ, ಕಾಲಚಕ್ರ, ಸರ್ವಘಾಟಿ, ದೀಧಿತಿ, ಸ್ಫುಲಿಂಗ, ಕದಿನಿ ಹಾಗೂ ಕೌಟಿಲ್ಯನು ಹೇಳುವ 'ಅಗ್ನಿಬಾಣ', ಕಾಮಂದಕ ಮತ್ತು ಶುಕ್ರನೀತಿಯಲ್ಲಿ ಬರುವ 'ನಲಿಕ' ಗಳನ್ನು ಸಿಡಿಮದ್ದಿನ ಆಯುಧಗಳೆಂದೂ ಹೇಳಲಾಗಿದೆ.[೧೦]

ಕನ್ನಡ ಕಾವ್ಯಗಳಲ್ಲೂ ಇಂತಹ ಆಯುಧಗಳ ಉಲ್ಲೇಖಗಳಿವೆ. ಅವುಗಳೆಲ್ಲವೂ ೧೫ನೇ ಶತಮಾನದ ನಂತರದವು. ಈ ಕಾವ್ಯಗಳು ವ್ಯಕ್ತಪಡಿಸುವ ಫಿರಂಗಿ, ಗುಂಡುಗೋವಿ, ಮದ್ದಿನ ಪಟ್ಟಣ, ಶತಘ್ನಿ, ಉಪ್ಪಿನತಿತ್ತಿ, ಪೆಟಲು, ಕೈಗೋವಿ, ಭೂರಿಶತಗ್ನಿ, ತೋಪು ಇನ್ನು ಮುಂತಾದವುಗಳು ಸಿಡಿಮದ್ದಿನ ಸಮರ್ಥ ಬಳಕೆಯನ್ನು ಎತ್ತಿ ಹಿಡಿದಿವೆ.[೧೧]

ಕರ್ನಾಟಕದಲ್ಲಿ ಸಿಡಿಮದ್ದಿನ ಬಳಕೆ ಕುರಿತು ಹೇಳುವ ಮುನ್ನ ಚರಿತ್ರೆಯ ಆಕರಗಳಾದ ಸಾಹಿತ್ಯ, ಶಾಸನ, ಸ್ಮಾರಕ, ವೀರಗಲ್ಲು, ಪ್ರವಾಸಿಗರ ವರದಿ ಮೊದಲಾದವುಗಳನ್ನು ಗಮನಿಸಿದಾಗ ಕ್ರಿ.ಶ. ೧೪ನೆಯ ಶತಮಾನದ ಪೂರ್ವದಲ್ಲಿ ಸಿಡಿಮದ್ದು ಬಳಕೆಯಾದ ಉಲ್ಲೇಖಗಳಿಲ್ಲ. ಚಿದಾನಂದಮೂರ್ತಿ ಅವರು ಕೂಡ ಸಿಡಿಮದ್ದಿನ ಬಳಕೆ ಪ್ರಾಚೀನ ಕರ್ನಾಟಕದಲ್ಲಿ ಇರಲಿಲ್ಲವೆಂಬುದನ್ನು ಒಪ್ಪುತ್ತಾರೆ. ಸಾಹಿತ್ಯದಲ್ಲಿ ಶಸ್ತ್ರಗಳ ಉಲ್ಲೇಖವಿದ್ದರೂ ಅವು ವಿಷಪೂರಿತ ಆಯುಧಗಳೆ ಹೊರತು ಸಿಡಿಮದ್ದು ಆಗಿರಲಿಲ್ಲ. ಶಾಸನ ಮತ್ತು ಪ್ರವಾಸಿ ವರದಿಗಳು ೧೪ನೆಯ ಶತಮಾನದಲ್ಲಿ ಸಿಡಿಮದ್ದು ಬಳಕೆಯಾಗಿರುವುದನ್ನು ಎತ್ತಿ ಹಿಡಿದಿವೆ. ಕ್ರಿ.ಶ. ೧೫ನೆಯ ಶತಮಾನದ ಪೂರ್ವದ ವೀರಗಲ್ಲುಗಳಲ್ಲಿ ಸಾಮಾನ್ಯವಾಗಿ ಕಾಣಬರುವ ಶಸ್ತ್ರಾಸ್ತ್ರಗಳೆಂದರೆ ಬಿಲ್ಲು-ಬಾಣ, ಕತ್ತಿ-ಗುರಾಣಿ, ಈಟಿ-ಭರ್ಚಿಗಳೆ ಆಗಿವೆ. ಇವುಗಳಲ್ಲಿ ಬಂದೂಕಗಳು ಇರುವುದಿಲ್ಲ. ಆದರೆ ವಿಜಯನಗರ ಮತ್ತು ನಂತರ ಕಾಲದ ವೀರಗಲ್ಲುಗಳಲ್ಲಿ ವೀರರು ತಮ್ಮ ಕೈಗಳಲ್ಲಿ ಕತ್ತಿಯ ಜೊತೆಗೆ ಬಂದೂಕುಗಳನ್ನು ಹಿಡಿದಿರುವರುವುದು ಕಂಡುಬಂದಿದೆ. ವಿಜಯನಗರ ಕಾಲಾವಧಿಯ ವೀರಗಲ್ಲುಗಳಲ್ಲಿ ಕಾಣಬರುವ

ವಿಶೇಷ ಹಾಗೂ ವಿನೂತನ ಆಯುಧವಾದ ಬಂದೂಕು ಕಂಡುಬರುವುದರಿಂದ ಕರ್ನಾಟಕದಲ್ಲಿ ಸಿಡಿಮದ್ದಿನ ಬಳಕೆ ಕ್ರಿ.ಶ. ೧೪ನೆಯ ಶತಮಾನ ಅಂದರೆ ವಿಜಯನಗರ ಕಾಲದಲ್ಲಿ ಬಳಕೆಗೊಂಡಿತ್ತೆಂಬುದು ಸ್ಪಷ್ಟವಾಗಿದೆ.

ಬಂದೂಕನ್ನು ಫಿರಂಗಿ, ಗುಂಡುಗೋವಿ, ಶತಘ್ನಿ ಮುಂತಾದ ಸಿಡಿಮದ್ದಿನ ಆಯುಧಗಳು ಹದಿನಾರನೆಯ ಶತಮಾನದಿಂದ ಈಚಿನ ಕಾವ್ಯಗಳಲ್ಲಿ ಯಥೇಚ್ಛವಾಗಿ ಕಾಣಿಸಿಕೊಳುತ್ತವೆ.[೧೨] ನ್ಯೂನಿಜ್ ಕೂಡ ಬಿಲ್ಲು–ಬಾಣ, ಕತ್ತಿ, ಗುರಾಣಿ, ಭಲ್ಲೆ, ಭರ್ಜಿಗಳು, ಕೋವಿಗಳು ಮತ್ತು ಫಿರಂಗಿಗಳನ್ನು ಹಾಗೂ ಪೋರ್ಚ್‌ಗೀಸರು ಬಳಸಿದ ವಿನೂತನ ಬಂದೂಕುಗಳ ವಿವರ ನೀಡುತ್ತಾನೆ.[೧೩] ಕ್ರಿ.ಶ. ೧೪–೧೫ನೆಯ ಶತಮಾನದ ಪೂರ್ವದಲ್ಲಿ ನಿರ್ಮಾಣವಾದ ಶಿಲ್ಪಗಳು ಮತ್ತು ವೀರಗಲ್ಲುಗಳಲ್ಲಿ ಕಾಣಬರುವ ಸಾಮಾನ್ಯ ಚಿತ್ರಣವೆಂದರೆ ಕತ್ತಿ–ಗುರಾಣಿ, ಬಿಲ್ಲು–ಬಾಣ, ಈಟಿಗಳನ್ನು ಹಿಡಿದು ಹೋರಾಡುತ್ತಿರುವ ಯೋಧರವು. ಇಂತಹ ವೀರಗಲ್ಲುಗಳನ್ನು ಕರ್ನಾಟಕದಾದ್ಯಂತ ಕಾಣಬಹುದು. ಆದರೆ ೧೫ನೇ ಶತಮಾನ ನಂತರದ ವೀರಗಲ್ಲುಗಳು ವಿಶಿಷ್ಟ ಬಗೆಯ ಆಯುಧವೊಂದನ್ನು ಪರಿಚಯಿಸುತ್ತದೆ. ಅಂತಹ ಆಯುಧವೆಂದರೆ ಬಂದೂಕು.[೧೪]

ಇಂತಹ ಬಂದೂಕುಗಳ ಕುರಿತು ಕರ್ನಾಟಕದ ಮಂಡ್ಯದ ಸಾಸಲು, ಹಾವೇರಿಯ ಗುತ್ತಲ, ರಾಯಚೂರಿನ ಸಿಂಧನೂರು[೧೫] ಮತ್ತು ರಾಯಚೂರಿನ ಪ್ರಾಚ್ಯವಸ್ತು ಸಂಗ್ರಹಾಲಯ, ಜಿಲ್ಲಾ ಅಗ್ನಿಶಾಮಕದಳದ ಕಛೇರಿ ಮತ್ತು ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟ್ ಅವರ ಕಛೇರಿ ಆವರಣಗಳಲ್ಲಿ ಸುಮಾರು ಐವತ್ತಕ್ಕೂ ಮಿಗಿಲಾಗಿ ಬಂದೂಕನ್ನು ಹಿಡಿದು ನಿಂತಿರುವ ಹೋರಾಡುತ್ತಿರುವ ವೀರರ ವೀರಗಲ್ಲುಗಳಿವೆ.[೧೬]

ಅಧ್ಯಯನದ ವ್ಯಾಪ್ತಿಯಲ್ಲಿ ಕೊಪ್ಪಳ, ನಿಟ್ಟಾಲಿ, ಆನೆಗೊಂದಿ, ಗಂಗಾವತಿ, ಹಿರೇಜಂತಗಲ್ಲ, ಕಾರಟಗಿ, ಇಂದರಗಿ, ಹಟ್ಟಿ, ವಿಠಲಪುರ, ಮಲ್ಲಾಪುರ, ಹಳೇಮುಸ್ಟೂರು, ಅಗಳಕೆರೆ, ತಿರುಮಲ್ಲಾಪುರ, ಗುಡದೂರ, ಜಮ್ಮಾಪುರ, ಕನಕಗಿರಿ ಮೊದಲಾದೆಡೆಗಳಲ್ಲಿ ಬಂದುಕು ವೀರಗಲ್ಲುಗಳು ಕಂಡುಬಂದಿವೆ. ಕೊಪ್ಪಳ ಜಿಲ್ಲೆಯಲ್ಲಿ ದೊರೆಯುವಂತ ಬಂದೂಕು ವೀರಗಲ್ಲುಗಳನ್ನು ಬಂದೂಕು ಹಿಡಿದುಕೊಂಡ ವೀರ, ಬಂದೂಕವನ್ನು ಪ್ರಯೋಗಿಸುತ್ತಿರುವ ವೀರ, ವೀರನ ಪಕ್ಕದಲ್ಲಿ ಬಂದೂಕು. ಈ ರೀತಿಯಾಗಿ ಮೂರು ಭಾಗಗಳಾಗಿ ವಿಂಗಡಿಸಲಾಗಿದೆ. ಅವುಗಳ ವಿವರ ಈ ರೀತಿ ಇವೆ.

ಬಂದೂಕು ಹಿಡಿದು ಕೊಂಡ ವೀರ

ಕೊಪ್ಪಳ ತಾಲೂಕಿನ ಹುಲಿಗಿ ಗ್ರಾಮದಲ್ಲಿನ ವೀರಗಲ್ಲೊಂದರಲ್ಲಿ ಇಬ್ಬರು ವೀರರು ತಮ್ಮ ಬಲಗೈಯನ್ನು ಸೊಂಟದ ಮೇಲೆ ಇಟ್ಟುಕೊಂಡಿದ್ದು, ಎಡಗೈಯಲ್ಲಿ ಬಂದೂಕನ್ನು ಹಿಡಿದು ನಿಂತಿದ್ದಾರೆ. ಇಲ್ಲಿಯ ಶಿಲ್ಪದಲ್ಲಿ ಬಂದೂಕವನ್ನು ದೊಡ್ಡದಾಗಿ ಚಿತ್ರಿಸಿದ್ದಾರೆ.

ಇದೆ ತಾಲೂಕಿನ ಹಟ್ಟಿ ಗ್ರಾಮದಲ್ಲಿ ಬಂದೂಕನ್ನು ಹಿಡಿದುಕೊಂಡು ನಿಂತ ವೀರಗಲ್ಲಿದ್ದು, ಬಲಗೈಯಲ್ಲಿ ಚೂರಿಯನ್ನು, ಎಡಗೈಯಲ್ಲಿ ಬಂದೂಕನ್ನು ಹಿಡಿದುಕೊಂಡು ಚಲಿಸುವ ಭಂಗಿಯಲ್ಲಿ

ವೀರನ ಶಿಲ್ಪವಿದೆ. ಈ ಶಿಲ್ಪದ ಹತ್ತಿರವೇ ಮತ್ತೊಂದು ವೀರಗಲ್ಲೊಂದರಲ್ಲಿ ಇಬ್ಬರು ವೀರರು ಇದ್ದು, ಒಬ್ಬ ವೀರನು ಬಲಗೈಯಲ್ಲಿ ಚೂರಿಯನ್ನು, ಎಡಗೈಯಲ್ಲಿ ಬಂದೂಕನ್ನು ಹಿಡಿದುಕೊಂಡು ಚಲಿಸುವ ಭಂಗಿಯಲ್ಲಿದ್ದಾನೆ. ಇವನ ಪಕ್ಕದಲ್ಲಿರುವ ಮತ್ತೊಬ್ಬ ವೀರನು ಬಲಗೈಯಲ್ಲಿ ಬಾಣವನ್ನು, ಎಡಗೈಯಲ್ಲಿ ಬಿಲ್ಲನ್ನು ಹಿಡಿದುಕೊಂಡು ಚಲಿಸುವ ಭಂಗಿಯಲ್ಲಿದ್ದಾನೆ. ಇದೇ ತಾಲೂಕಿನ ಇಂದ್ರಗಿ ಗ್ರಾಮದ ನೈಸರ್ಗಿಕ ಬಂಡೆಗೆ ಬಂದೂಕನ್ನು ಹಿಡಿದುಕೊಂಡ ವೀರನ ಶಿಲ್ಪವಿದೆ. ವೀರನ ಸೊಂಟದಲ್ಲಿ ಚಾಕುವಿದೆ. ಸ್ಥಳೀಯರು ಈ ಶಿಲ್ಪವನ್ನು ಮಿಂಚು ಬಂಡೆಪ್ಪ ಎಂದು ಕರೆಯುತ್ತಾರೆ. ಇದೇ ಗ್ರಾಮದ ಆಂಜನೇಯ ದೇವಾಲಯದ ಪಕ್ಕದಲ್ಲಿ ವೀರಗಲ್ಲಿದ್ದು, ಬಲಗೈಯಲ್ಲಿ ದೊಡ್ಡದಾದ ಬಂದೂಕ್ಕಿದ್ದು, ಎಡಗೈಯಲ್ಲಿ ಖಡ್ಗವನ್ನು ಹಿಡಿದುಕೊಂಡ ವೀರನನ್ನು ಉಗ್ರವಾಗಿ ತೋರಿಸಿದ್ದಾರೆ.

ಕೊಪ್ಪಳದ ಮಿಟ್ಟಿಕೇರಿ ಓಣಿಯ ಆಂಜನೇಯ ದೇವಾಲಯದ ಪಕ್ಕದ ಗರಡಿ ಮನೆಯ ಹೊರ ಗೋಡೆಯ ಮೇಲೆ ಎರಡು ವೀರಮಾಸ್ತಿಗಲ್ಲುಗಳಿವೆ. ಮೊದಲನೆಯ ಶಿಲ್ಪದಲ್ಲಿ ವೀರನು ಬಲಗೈಯಲ್ಲಿ ಕತ್ತಿ ಮತ್ತು ಎಡಗೈಯಲ್ಲಿ ಬಂದೂಕುಗಳನ್ನು ಹಿಡಿದ್ದಾನೆ. ಸೊಂಟದಲ್ಲಿ ಚೂರಿ ಇದೆ. ಕಿವಿಗಳಲ್ಲಿ ಕಿವಿಯೋಲೆ, ತೋಳುಗಳಿಗೆ ತೋಳುಬಂಧಿ, ಕಾಲು ಮತ್ತು ಕೈಗಳಲ್ಲಿ ಕಡಗಗಳಿದ್ದು, ಕೊರಳಲ್ಲಿ ಪದಕವಿರುವ ಸರವಿದೆ. ಮೇಲ್ಭಾಗದಲ್ಲಿ ಸೂರ್ಯಚಂದ್ರರನ್ನು ಖಂಡರಿಸಲಾಗಿದೆ. ಈ ಶಿಲ್ಪದ ಪಕ್ಕದಲ್ಲಿ ಮತ್ತೊಂದು ವೀರಮಾಸ್ತಿಗಲ್ಲು ಇದೆ. ವೀರನು ಚಲನೆಯ ಭಂಗಿಯಲ್ಲಿದ್ದು, ಎಡಗಾಲನ್ನು ಎಡಬದಿಗೆ ಮತ್ತೆ ಸ್ವಲ್ಪ ಮುಂದಕ್ಕೆ ಚಾಚಿ ನಿಂತತಿದೆ. ಬಲಗಾಲು ಬಲಗಡೆಗೆ ಚಾಚಿರುವುದರಿಂದ ದೇಹವು ತ್ರಿಭಂಗಿಯಲ್ಲಿದೆ. ವೀರನು ಬಲಗೈಯಲ್ಲಿ ಖಡ್ಗ ಮತ್ತು ಎಡಗೈಯಲ್ಲಿ ಬಂದೂಕುಗಳನ್ನು ಹಿಡಿದಿದ್ದು, ವೀರನು ಸೊಂಟಕ್ಕೆ ಒಂದು ವಸ್ತ್ರವನ್ನು ಧರಿಸಿದ್ದಾನೆ. ತಲೆಯ ಮೇಲೆ ರುಮಾಲು ಇದೆ. ಸತಿಯು ತ್ರಿಭಂಗಿಯಲ್ಲಿದ್ದು ಬಲಗೈಯನ್ನು ಮೇಲೆತ್ತಿದ್ದಾಳೆ. ಎಡಗೈ ಕೆಳಗೆ ಇಳಿ ಬಿಟ್ಟಿದ್ದಾಳೆ. ತಲೆಯ ಮೇಲೆ ಮುಂಡಾಸು ರೀತಿಯ ದೊಡ್ಡ ರುಮಾಲು ಇದೆ. ಕೊರಳಲ್ಲಿ ಹಾರ, ಕೈಗಳಲ್ಲಿ ಬಳೆಗಳಿವೆ. ಕುಪ್ಪಸ ಮತ್ತು ಸೀರೆಯ ಉಡುಪುಗಳಿವೆ. ಒಟ್ಟಾರೆ ಈ ವೀರಮಾಸ್ತಿಗಲ್ಲುಗಳ ನಿರೂಪಣಾ ರೀತಿ ವಿಶೇಷವೆನ್ನಿಸುತ್ತದೆ. ವೀರ ಮತ್ತು ಸತಿಯ ಭಂಗಿಯಲ್ಲಿ ತೋರಿಸಿರುವುದು ಮತ್ತೆ ಇಬ್ಬರ ತಲೆಗೆ ದೊಡ್ಡದಾದ ಮುಂಡಾಸುಗಳನ್ನು ಸುತ್ತಿರುವುದು ಈ ಶಿಲ್ಪಗಳ ವಿಶೇಷ ಲಕ್ಷಣಗಳೆನಿಸುತ್ತದೆ.

ಕನಕಗಿರಿಯ ಹಿರೇನಾಯಕನ ದೇವಾಲಯದಲ್ಲಿ ವೀರಗಲ್ಲು ಶಿಲ್ಪವಿದೆ. ಈ ಶಿಲ್ಪವು ೭೧ ಸೆಂ.ಮೀ. ಎತ್ತರ ೧.೯೨ ಮೀ. ಅಗಲವಾಗಿದೆ. ಖಡ್ಗ ಮತ್ತು ಗುರಾಣಿಯನ್ನು ಹಿಡಿದ ವ್ಯಕ್ತಿ, ನಂತರ ಖಡ್ಗ ಮತ್ತು ಬಂದೂಕುವನ್ನು ಹಿಡಿದ ವ್ಯಕ್ತಿ, ಮೂರನೆಯದಾಗಿ ಎರಡನೆಯ ವ್ಯಕ್ತಿಯ ಬಲಗಾಲಿನ ಹತ್ತಿರ ವ್ಯಕ್ತಿಯ ಸಣ್ಣ ಆಕೃತಿ ಇದ್ದು, ಕೈಯಲ್ಲಿ ಛತ್ರ ಇದೆ. ಇವನ ನಂತರ ಈಟಿ ಹಿಡಿದ ಹಾಗೂ ಬಿಲ್ಲು ಹಿಡಿದ ಇಬ್ಬರ ಶಿಲ್ಪಗಳಿವೆ. ಇಲ್ಲಿ ಖಡ್ಗ ಮತ್ತು ಬಂದೂಕು/ಕೋವಿಯನ್ನು ಹಿಡಿದ ಇವನ ನಂತರ ವ್ಯಕ್ತಿಗೆ ಛತ್ರಿ ಹಿಡಿದ ಸೇವಕನಿರುವುದರಿಂದ ಅವನು ರಾಜನಿರಬೇಕು. ಉಳಿದವರೆಲ್ಲ ಭಟರಿರಬೇಕು. ಒಟ್ಟಿನಲ್ಲಿ ಇದೊಂದು ರಾಜನು ಬೇಟೆಗೆ ಹೊರಟ ದೃಶ್ಯ ಎಂದು ಹೇಳಬಹುದು.[೧೭]

ಗಂಗಾವತಿ ತಾಲೂಕಿನ ಹಳೇ ಮುಸ್ಟೂರು ಗ್ರಾಮದ ಆಂಜನೇಯ ದೇವಾಲಯದ ಹತ್ತಿರದಲ್ಲೇ ಬಂದೂಕು ವೀರಗಲ್ಲು ಇದೆ. ಈ ಶಿಲ್ಪವು ಕಪ್ಪು ಕಣಶಿಲೆಯಲ್ಲಿದೆ. ವೀರನು ಚಲಿಸುತ್ತಿರುವ ಭಂಗಿಯಲ್ಲಿದ್ದು, ತನ್ನ ಬಲಗೈಯಲ್ಲಿ ಕತ್ತಿ ಮತ್ತು ಎಡಗೈಯಲ್ಲಿ ಬಂದೂಕನ್ನು ಹಿಡಿದುಕೊಂಡಿದ್ದಾನೆ. ವೀರನ ಕೊರಳಲ್ಲಿ ಸರಗಳಿವೆ. ಸೊಂಟಕ್ಕೆ ಸೊಂಟದ ಪಟ್ಟಿ ಕಟ್ಟಿಕೊಂಡಿದ್ದಾನೆ. ಈ ಶಿಲ್ಪದ ಹತ್ತಿರವೇ ಮತ್ತೊಂದು ವೀರಗಲ್ಲಿನಲ್ಲಿ ವೀರನು ಬಲಗೈಯಲ್ಲಿ ಖಡ್ಗವನ್ನು ಮತ್ತು ಎಡಗೈಯಲ್ಲಿ ಬಂದೂಕನ್ನು ಹಿಡಿದು ನಿಂತಿದ್ದಾನೆ. ಇದೇ ತಾಲೂಕಿನ ವಿಠಲಾಪುರ ಗ್ರಾಮದಲ್ಲಿ ವೀರಗಲ್ಲುವಿದ್ದು, ಬಲಗೈಯಲ್ಲಿ ಚೂರಿಯನ್ನು, ಎಡಗೈಯಲ್ಲಿ ಬಂದೂಕನ್ನು ಹಿಡಿದು ನಿಂತಿದ್ದಾನೆ. ಇಲ್ಲಿ ಬಂದೂಕಿನ ವಿವರವನ್ನು ಶಿಲ್ಪಿ ಸೊಗಸಾಗಿ ನಿರೂಪಿಸಿದ್ದಾನೆ.

ಇದೆ ತಾಲೂಕಿನ ಗುಡದೂರದಲ್ಲಿನ ವೀರಗಲ್ಲೊಂದರಲ್ಲಿ ಒಬ್ಬ ವೀರನು ಬಲಗೈಯಲ್ಲಿ ಖಡ್ಗವನ್ನು, ಎಡಗೈಯಲ್ಲಿ ದೊಡ್ಡದಾದ ಬಂದೂಕನ್ನು ಹಿಡಿದುಕೊಂಡಿದ್ದಾನೆ. ಮತ್ತೊಬ್ಬ ವೀರನು ಬಲಗೈಯಲ್ಲಿ ಖಡ್ಗವನ್ನು ಎಡಗೈಯಲ್ಲಿ ಗುರಾಣಿಯನ್ನು ಹಿಡಿದುಕೊಂಡಿದ್ದಾನೆ. ಇದೇ ಗ್ರಾಮದ ಹೊಲವೊಂದರ ದೊಡ್ಡ ನೈಸರ್ಗಿಕ ಬಂಡೆಯಲ್ಲಿ ಹನ್ನೆರಡು ಜನ ವೀರರನ್ನು ಚಿತ್ರಿಸಿದ್ದಾರೆ. ಅದರಲ್ಲಿ ಎರಡನೇ ವೀರನು ಬಲಗೈಯಲ್ಲಿ ಖಡ್ಗವನ್ನು, ಎಡಗೈಯಲ್ಲಿ ಬಂದೂಕನ್ನು ಹಿಡಿದುಕೊಂಡಿರುವಂತೆ ಚಿತ್ರಿಸಿದ್ದಾರೆ.

ಇದೆ ತಾಲೂಕಿನ ಹಿರೇಜಂತಗಲ್ಲು ಗ್ರಾಮದಲ್ಲಿ ಒಂದು ಬಂದೂಕು ವೀರಗಲ್ಲು ಇದೆ. ಈ ಶಿಲ್ಪದಲ್ಲಿ ವೀರನು ಚಲಿಸುತ್ತಿರುವ ಭಂಗಿಯಲ್ಲಿದ್ದು, ತನ್ನ ಬಲಗೈಯಲ್ಲಿ ಕತ್ತಿ ಮತ್ತು ಎಡಗೈಯಲ್ಲಿ ಬಂದೂಕನ್ನು ಹಿಡಿದುಕೊಂಡಿದ್ದಾನೆ. ವೀರನ ಕೊರಳಲ್ಲಿ ಸರಗಳಿವೆ. ಸೊಂಟಕ್ಕೆ ಸೊಂಟದ ಪಟ್ಟಿ ಕಟ್ಟಿಕೊಂಡಿದ್ದಾನೆ. ವೀರನ ಮೇಲ್ಭಾಗದಲ್ಲಿ ಸೂರ್ಯಚಂದ್ರರನ್ನು ಕಂಡರಿಸಲಾಗಿದೆ. ಇದೇ ತಾಲೂಕಿನ ಕನ್ನೆರುಮಡು ಗ್ರಾಮದಲ್ಲಿ ವೀರಮಾಸ್ತಿಗಲ್ಲು ಇದೆ. ಈ ಶಿಲ್ಪದಲ್ಲಿ ಸತಿ ಮತ್ತು ಇಬ್ಬರು ವೀರರ ಶಿಲ್ಪವಿದ್ದು, ಇದರಲ್ಲಿ ಒಬ್ಬ ವೀರನು ಬಲಗೈಯಲ್ಲಿ ಏನು ಹಿಡಿದಿದ್ದಾನೆ ಎಂಬುದು ಸ್ಪಷ್ಟವಾಗಿ ಕಾಣುತ್ತಿಲ್ಲ. ಎಡಗೈಯಲ್ಲಿ ಬಂದೂಕುವನ್ನು ಹಿಡಿದುಕೊಂಡಿದ್ದಾನೆ.

ಇದೆ ತಾಲೂಕಿನ ಆನೆಗೊಂದಿಯಲ್ಲಿ ವೀರಮಾಸ್ತಿಗಲ್ಲು[೧೮] ಇದ್ದು ಇದರಲ್ಲಿ ವೀರನು ಎಡಗೈಯಲ್ಲಿ ಬಂದೂಕು ಹಿಡಿದಿದ್ದು, ಬಲಗೈಯಲ್ಲಿ ಚೂರಿ ಇದೆ. ವೀರನು ಚಲಿಸುವ ಭಂಗಿಯಲ್ಲಿ ಇದ್ದಾನೆ. ವೀರನ ಪಕ್ಕದಲ್ಲಿ ಸತಿಯು ತನ್ನ ಎರಡು ಕೈಯನ್ನು ಮೇಲೆ ಎತ್ತಿದ್ದಾಳೆ.

ಕನಕಗಿರಿ ತಾಲೂಕಿನ ಮೈಲಾಪುರ ಗ್ರಾಮದ ವೀರಗಲ್ಲಿನ ಮೊದಲನೆಯ ವೀರನು ಬಲಗೈಯಲ್ಲಿ ಚೂರಿಯನ್ನು ಎಡಗೈಯಲ್ಲಿ ಬಂದೂಕು ಹಿಡಿದುಕೊಂಡಿದ್ದಾನೆ. ಎರಡನೆಯ ವೀರನು ಬಲಗೈಯಲ್ಲಿ ಖಡ್ಗ ಮತ್ತು ಎಡಗೈಯಲ್ಲಿ ಗುರಾಣಿಯನ್ನು ಹಿಡಿದಿದ್ದಾನೆ. ಈ ಇಬ್ಬರು ವೀರರು ಒಂದೇ ರೀತಿಯಲ್ಲಿ ಅಲಂಕಾರ ಮಾಡಿಕೊಂಡಿದ್ದಾರೆ. ತಲೆಗೆ ಪೇಟ ಸುತ್ತಿದ್ದು, ಕಿವಿಗಳಲ್ಲಿ ಕಿವಿಯೋಲೆಗಳನ್ನು ಹಾಕಿದ್ದಾರೆ. ವೀರರ ತೋಳುಗಳಿಗೆ ತೋಳುಬಂಧಿ, ಕೊರಳಲ್ಲಿ ಪದಕವಿರುವ

ಸರವಿದೆ. ಮೈಮೇಲೆ ಬಟ್ಟೆಯನ್ನು ಚಿತ್ರಿಸಿದೆ, ಸೊಂಟವನ್ನು ವಸ್ತ್ರದಿಂದ ಬಿಗಿಯಲಾಗಿದೆ. ಕಾಲುಗಳಲ್ಲಿ ಕಡಗಗಳನ್ನು ಧರಿಸಿದ್ದಾರೆ. ಇದೇ ತಾಲೂಕಿನ ಜುಮ್ಮಾಪುರ ಗ್ರಾಮದ ಹೊರಭಾಗದಲ್ಲಿನ ಯುದ್ಧಕ್ಕೆ ಹೊರಟ ಶಿಲ್ಪವಿದ್ದು, ಅದರಲ್ಲಿ, ವೀರನು ಅಶ್ವರೂಢನಾಗಿದ್ದು, ಬಲಗೈಯಲ್ಲಿ ಚೂರಿ ಮತ್ತು ಎಡಗೈಯಲ್ಲಿ ಕುದುರೆಯ ಲಗಾಮನ್ನು ಹಿಡಿದಿರುವನು. ಕುದುರೆಗೆ ಬಾಯಿಬಂದ, ಥಡಿ, ರಿಕಾಪುಗಳನ್ನು ಹಾಕಲಾಗಿದೆ. ವೀರನಿಗೆ ಹಿಂದಿನಿಂದ ಒಬ್ಬನು ಚಾಮರವನ್ನು ಹಿಡಿದಿದ್ದಾನೆ. ಇನ್ನೊಬ್ಬ ವೀರನು ಬಂದೂಕು ಹಿಡಿದಿದ್ದಾನೆ. ಕುದುರೆ ಕೆಳಭಾಗದಲ್ಲಿ ನಾಯಿ ಇದೆ. ಇಲ್ಲಿ ಮೂರು ಜನ ವೀರರು ಬಂದೂಕು ಹಿಡಿದುಕೊಂಡಿದ್ದಾರೆ. ಈ ಶಿಲ್ಪಗಳ ದೃಶ್ಯವು ಯುದ್ಧದ ಸಂದರ್ಭವನ್ನು ಸೂಚಿಸುತ್ತದೆ. ಕನಕಗಿರಿ ಗ್ರಾಮದಲ್ಲಿ ಯುದ್ಧಕ್ಕೆ ಹೊರಟ ದೃಶ್ಯದ ಶಿಲ್ಪದಲ್ಲಿ ಒಬ್ಬ ವೀರನು ಬಂದೂಕುವನ್ನು ಹಿಡಿದುಕೊಂಡಿದ್ದಾನೆ.

ಕನಕಗಿರಿ ತಾಲೂಕಿನ ಗುಡದೂರ ಗ್ರಾಮದ ಆಂಜನೇಯ ದೇವಾಲಯದ ಪಕ್ಕದಲ್ಲಿ ವೀರಗಲ್ಲು ಶಿಲ್ಪವಿದೆ. ಮೊದನೆಯ ವೀರ ಎಡಗೈಯಲ್ಲಿ ಅಲಂಕೃತ ಗುರಾಣಿ ಮತ್ತು ಬಲಗೈಯಲ್ಲಿ ಖಡ್ಗವನ್ನು ಹಿಡಿದಿದ್ದಾನೆ. ಎರಡನೆಯ ವೀರನು ಬಲಗೈಯಲ್ಲಿ ಖಡ್ಗ ಮತ್ತು ಎಡಗೈಯಲ್ಲಿ ಬಂದೂಕನ್ನು ಹಿಡಿದಿದ್ದಾನೆ. ಮೇಲ್ಭಾಗದಲ್ಲಿ ಸೂರ್ಯ ಚಂದ್ರರನ್ನು ಕಂಡರಿಸಲಾಗಿದೆ.

ಕನಕಗಿರಿ ತಾಲೂಕಿನ ಗುಡದೂರ-ಹಿರೇಖ್ಯಾಡ ರಸ್ತೆಯ ಬಲಭಾಗದ ಹೊಲವೊಂದರ ದೊಡ್ಡ ಬಂಡೆಯಲ್ಲಿ ವೀರಗಲ್ಲು ಶಿಲ್ಪಗಳಿವೆ. ಮೊದಲನೆಯ ವೀರನ್ನು ತನ್ನ ರುಮಾಲನ್ನು ಬಲಕ್ಕೆ ಕಟ್ಟಿದ್ದಾನೆ. ಕೊರಳಲ್ಲಿ ಪದಕಗಳಿವೆ. ವೀರನ ಎಡಗೈಯಲ್ಲಿ ಭರ್ಜಿ ಮತ್ತು ಬಲಗೈಯ ಇಳ್ಳಿಬಿಟ್ಟಿದ್ದಾನೆ. ವೀರನ ಪಕ್ಕದಲ್ಲಿ ಚಿಕ್ಕ ವೀರನ ಶಿಲ್ಪವಿದೆ. ಎರಡನೆಯ ವೀರನು ಎಡಗೈಯಲ್ಲಿ ಬಂದೂಕು ಮತ್ತು ಬಲಗೈಯಲ್ಲಿ ಚೂರಿಯನ್ನು ಹಿಡಿದಿದ್ದಾನೆ. ಮೂರನೆಯ ವೀರನು ಬಿಲ್ಲುಬಾಣವನ್ನು ಹಿಡಿದುಕೊಂಡಿದ್ದು, ಅದನ್ನು ಪ್ರಯೋಗ ಮಾಡುತ್ತಿರುವ ದೃಶವಿದೆ. ನಾಲ್ಕನೆಯ ವೀರನ ಬಲಗೈಯಲ್ಲಿ ಕತ್ತಿಯನ್ನು ಎಡಗೈಯಲ್ಲಿ ಬಿಲ್ಲನ್ನು ಹಿಡಿದಿದ್ದಾನೆ. ಐದನೆಯ ವೀರನು ಎಡಗೈಯಲ್ಲಿ ಪುಂಗಿ ಮತ್ತು ಬಲಗೈಯಲ್ಲಿ ಚೂರಿಯನ್ನು ಹಿಡಿದುಕೊಂಡಿದ್ದಾನೆ. ಆರನೆಯ ವೀರನು ಎರಡು ಕೈಗಳಿಂದ ಬಿಲ್ಲು ಬಾಣಗಳಿಂದ ಪ್ರಯೋಗ ಮಾಡುತ್ತಿದ್ದಾನೆ. ಬೆನ್ನಿಗೆ ಬಾಣಗಳನ್ನು ಇಟ್ಟುಕೊಂಡಿದ್ದಾನೆ. ಏಳನೆಯ ಮತ್ತು ಎಂಟನೆಯ ವೀರರು ಎರಡು ಕೈಗಳನ್ನು ಮೇಲಕ್ಕೆ ಎತ್ತಿದ್ದಾರೆ. ಯಾವ ಆಯುಧಗಳನ್ನು ಹಿಡಿದ್ದಾರೆ ಎಂಬುದು ಸ್ಪಷ್ಟವಾಗಿ ಕಾಣುತ್ತಿಲ್ಲ.

ಕನಕಗಿರಿ ತಾಲೂಕಿನ ಕನ್ನೇರುಮಡು ಗ್ರಾಮ ಪಶ್ಚಿಮಕ್ಕೆ ಬಂಡೆಯ ಮೇಲೆ ವೀರಮಾಸ್ತಿಗಲ್ಲು ಶಿಲ್ಪವಿದೆ. ಈ ಶಿಲ್ಪದಲ್ಲಿ ಸತಿಯು ಬಲಗೈಯನ್ನು ಮೇಲೆ ಎತ್ತಿದ್ದು, ಎಡಗೈಯಲ್ಲಿ ಕರಂಡಮುಕುಟವನ್ನು ಹಿಡಿದುಕೊಂಡಿದ್ದಾಳೆ. ಸತಿಯ ಪಕ್ಕದಲ್ಲಿ ವೀರನು ಬಲಗೈಯಲ್ಲಿ ಖಡ್ಗ ಮತ್ತು ಎಡಗೈಯಲ್ಲಿ ಗುರಾಣಿಯನ್ನು ಹಿಡಿದುಕೊಂಡು ಚಲಿಸುವ ಭಂಗಿಯಲ್ಲಿದ್ದಾನೆ. ಈ ವೀರನ ಪಕ್ಕದಲ್ಲಿ ಮತ್ತೊಬ್ಬ ವೀರನು ಬಲಗೈಯಲ್ಲಿ ರುಂಡ ಹಿಡಿದುಕೊಂಡಿದ್ದಾನೆ, ಎಡಗೈಯಲ್ಲಿ ದೊಡ್ಡದಾದ ಬಂದೂಕನ್ನು ಹಿಡಿದುಕೊಂಡಿದ್ದು ಚಲಿಸುವ ಭಂಗಿಯಲ್ಲಿದ್ದಾನೆ.

ಬಂದೂಕನ್ನು ಪ್ರಯೋಗಿಸುತ್ತಿರುವ ವೀರ

ಕೊಪ್ಪಳ ತಾಲೂಕಿನ ಅಗಳಕೆರಾ ಗ್ರಾಮದಲ್ಲಿ ವೀರನು ಬಂದೂಕನ್ನು ಪ್ರಯೋಗ ಮಾಡುತ್ತಿರುವ ಚಿತ್ರಣವಿದೆ. ಇದೇ ತಾಲೂಕಿನ ತಿರುಮಲ್ಲಾಪುರದಲ್ಲಿ ವೀರಗಲ್ಲಿದ್ದು, ಈ ಶಿಲ್ಪದಲ್ಲಿ ನಿಂತ ಇಬ್ಬರು ವೀರರ ಶಿಲ್ಪಗಳಿವೆ. ಮೊದಲ ವೀರನು ಬಲಗೈಯಲ್ಲಿ ಖಡ್ಗ ಹಿಡಿದು ಮೇಲೆ ಎತ್ತಿದ್ದು, ಎಡಗೈಯಲ್ಲಿ ಚೂರಿ ಇದೆ. ಮತ್ತೊಬ ವೀರನು ಚಲಿಸುವ ಭಂಗಿಯಲ್ಲಿದ್ದು, ಬಂದೂಕು ಪ್ರಯೋಗಿಸುತ್ತಿದ್ದಾನೆ. ಈ ಎರಡು ಶಿಲ್ಪಗಳು ವಿಶೇಷತೆಯಿಂದ ಕೂಡಿವೆ. ಕುಷ್ಟಗಿ ತಾಲೂಕಿನ ಮಡಿಕೇರ ಗ್ರಾಮದ ಬಸವಣ್ಣ ದೇವಾಲಯದ ಎದುರಿನ ಕಟ್ಟೆಗೆ ವೀರಗಲ್ಲು ಇದೆ. ವೀರನು ಬಲಗೈಯಲ್ಲಿ ಖಡ್ಗವನ್ನು ಮೇಲೆ ಎತ್ತಿದ್ದಾನೆ. ಎಡಗೈಯಲ್ಲಿ ಕಿರುಗತ್ತಿಯನ್ನು ಕೆಳಗೆ ಇಳಿಬಿಟ್ಟಿದ್ದಾನೆ. ವೀರನು ಬಂದೂಕನ್ನು ಪ್ರಯೋಗಿಸುತ್ತಿದ್ದಾನೆ. ಈ ವೀರರ ಪಕ್ಕದಲ್ಲಿ ನಾಯಿಯನ್ನು ಚಿತ್ರಿಸಿದ್ದಾರೆ.

ವೀರನ ಪಕ್ಕದಲ್ಲಿ ಬಂದೂಕು

ಗಂಗಾವತಿ ತಾಲೂಕಿನ ಕಾರಟಗಿ ಗ್ರಾಮದ ಸಾಲೋಣಿಯಲ್ಲಿ ಒಂದು ವೀರಗಲ್ಲಿದೆ. ಇದು ಅಶ್ವಾರೋಹಿ ವೀರನ ಶಿಲ್ಪ. ಥಡಿ, ಜೀನು, ರಿಕಾಪುಗಳಿಂದ ಅಲಂಕೃತವಾದ ಕುದುರೆಯ ಮೇಲೆ ವೀರನೊಬ್ಬ ಕುಳಿತಿದ್ದಾನೆ. ಅವನ ಬಲಗೈಯಲ್ಲಿ ಉದ್ದವಾದ ಖಡ್ಗವಿದೆ. ಎಡಗೈಯಲ್ಲಿ ಗುರಾಣಿ ಇದೆ. ತಲೆಯ ಮೇಲೆ ವಿಶೇಷವಾದ ರುಮಾಲು ಇದೆ. ಕೊರಳಲ್ಲಿ ಮಣಿಸರ, ಸೊಂಟದಲ್ಲಿ ವಸ್ತ್ರ, ಕೈಕಡಗ, ಕಾಲ್ಕಡಗಗಳಿವೆ. ಕುದುರೆಯ ಮುಖದ ಮೇಲ್ಭಾಗದಲ್ಲಿ ಬಂದೂಕು ಇದೆ. ಅದೇ ಗ್ರಾಮದ ಸಾಲೋಣಿಯಲ್ಲಿ ಯುದ್ಧಕ್ಕೆ ಹೊರಟ ರಾಜನ ದೃಶ್ಯ ಶಿಲ್ಪವಿದೆ. ಈ ಶಿಲ್ಪದಲ್ಲಿ ಅರಸನು ಅಶ್ವರೂಢನಾಗಿದ್ದು, ಬಲಗೈಯಲ್ಲಿ ಚಾಕು(ಕೈಗತ್ತಿ)ವನ್ನು ಎಡಗೈಯಲ್ಲಿ ಕುದುರೆಯ ಲಗಾಮನ್ನು ಹಿಡಿದಿರುವನು. ಕುದುರೆಯ ಜನನೇಂದ್ರಿಯವನ್ನು ಸಹ ಶಿಲ್ಪಿ ಚಿತ್ರಿಸಿದ್ದಾನೆ. ಕುದುರೆಯ ಮೇಲೆ ಕುಳಿತಿರುವ ಅರಸನು ಉದ್ದವಾದ ನೆರಿಗೆವುಳ್ಳ ನಿಲುವಂಗಿ ಧರಿಸಿದ್ದಾನೆ. ಕುದುರೆಯ ಹಿಂದೆ ಸೇವಕರು ಛತ್ರಿಯನ್ನು ಹಿಡಿದು ಹೊರಟಿದ್ದಾರೆ. ಕುದುರೆಯ ಮುಂದೆ ವೀರನು ಕತ್ತಿ, ಗುರಾಣಿ, ಮುಗುಧಾರವನ್ನು ಹಿಡಿದಿರುವನು. ಈ ರೀತಿಯಲ್ಲಿರುವ ಮತ್ತೊಂದು ಶಿಲ್ಪವು ಕುಷ್ಟಗಿ ತಾಲೂಕಿನ ತಾವರಗೇರಿ ಗ್ರಾಮದಲ್ಲಿದೆ. ಬಂದೂಕಿನ ಚಿತ್ರವಿರುವ ವೀರಗಲ್ಲಿನಲ್ಲಿ, ವೀರನು ಕುದುರೆ ಮೇಲೆ ಕುಳಿತಿದ್ದು, ಬಲಗೈಯಲ್ಲಿ ಕಿರುಗತ್ತಿಯಿದ್ದು, ಎಡಗೈಯಲ್ಲಿ ಕುದುರೆಯ ರಿಕಾಪು(ಮೂಗುದಾರ) ಹಿಡಿದ್ದಾನೆ. ಹಿಂಭಾಗದಲ್ಲಿ ಸೇವಕನು ಛಾಮರವನ್ನು ಹಿಡಿದುಕೊಂಡು ನಡೆಯುವ ಭಂಗಿಯಲ್ಲಿ ನಿಂತಿದ್ದಾನೆ. ಕುದುರೆಯ ಮುಂಭಾಗದಲ್ಲಿ ಸ್ಪಷ್ಟವಾಗಿ ಬಂದೂಕಿನ ಚಿತ್ರವನ್ನು ಚಿತ್ರಿಸಿದ್ದು, ಮೇಲ್ಭಾಗದಲ್ಲಿ ಪ್ರಭಾವಳಿ ಇದೆ.

ಗಂಗಾವತಿ ತಾಲೂಕಿನ ಜಮ್ಮಾಪುರ ಗ್ರಾಮದ ಹೊರಭಾಗದಲ್ಲಿ ಬಂದೂಕು ಹಿಡಿದ ಯೋಧರ ಶಿಲ್ಪವಿದೆ. ಈ ಶಿಲ್ಪದಲ್ಲಿ ವೀರನು ಅಶ್ವರೂಢನಾಗಿದ್ದು, ಬಲಗೈಯಲ್ಲಿ ಚೂರಿ ಮತ್ತು ಎಡಗೈಯಲ್ಲಿ ಕುದುರೆಯ ಲಗಾಮನ್ನು ಹಿಡಿದಿರುವನು. ಕುದುರೆಗೆ ಬಾಯಿಬಂದ, ಥಡಿ, ರಿಕಾಪುಗಳನ್ನು

ಹಾಕಲಾಗಿದೆ. ವೀರನಿಗೆ ಹಿಂದಿನಿಂದ ಒಬ್ಬನು ಚಾಮರವನ್ನು ಹಿಡಿದಿದ್ದಾನೆ. ಇನ್ನೊಬ್ಬ ವೀರನು ಬಂದೂಕು ಹಿಡಿದಿದ್ದಾನೆ. ಕುದುರೆ ಕೆಳಭಾಗದಲ್ಲಿ ನಾಯಿ ಇದೆ. ಇಲ್ಲಿ ಮೂರು ಜನ ವೀರರು ಬಂದೂಕು ಹಿಡಿದುಕೊಂಡಿದ್ದಾರೆ. ಈ ಶಿಲ್ಪಗಳ ದೃಶ್ಯವು ಯುದ್ಧದ ಸಂದರ್ಭವನ್ನು ಸೂಚಿಸುತ್ತದೆ.

ಗಂಗಾವತಿ ತಾಲೂಕಿನ ಹಳೆ ಕುಂಟೋಜಿಯಲ್ಲಿ ವೀರನು ಬಲಗೈಯಲ್ಲಿ ಖಡ್ಗವನ್ನು, ಎಡಗೈಯಲ್ಲಿ ಗುರಾಣಿಯನ್ನು ಹಿಡಿದ್ದಾನೆ. ಗುರಾಣಿಯ ಮೇಲ್ಭಾಗದಲ್ಲಿ ಬಂದೂಕನ್ನು ಚಿತ್ರಿಸಿದೆ. ಇದೇ ತಾಲೂಕಿನ ಕಾರಟಗಿ ಗ್ರಾಮದಲ್ಲಿ ಬಂದೂಕು ವೀರಗಲ್ಲುವಿದ್ದು, ವೀರನು ಬಲಗೈಯಲ್ಲಿ ಕತ್ತಿಯನ್ನು, ಎಡಗೈಯಲ್ಲಿ ಗುರಾಣಿಯನ್ನು ಹಿಡಿದಿದ್ದು, ವೀರನ ಬಲಭಾಗದಲ್ಲಿ ಬಂದೂಕವನ್ನು ಚಿತ್ರಿಸಿದ್ದಾರೆ.

ಕೊಪ್ಪಳ-ರಾಯಚೂರು ಭಾಗಗಳಲ್ಲಿ ಬಂದೂಕುಧಾರಿ ವೀರಗಲ್ಲುಗಳು ಯಥೇಚ್ಛವಾಗಿರುವುದನ್ನು ಗಮನಿಸಿದರೆ ವಿಜಯನಗರ ಕಾಲದ ಬಹುತೇಕ ಯುದ್ಧಗಳು ಜರುಗಿದುದು ಈ ಪರಿಸರದಲ್ಲಿಯೇ ಎಂಬುದು ದೃಢವಾಗುತ್ತದೆ. ಒಟ್ಟಾರೆಯಾಗಿ ವಿಜಯನಗರ ಸಾಮ್ರಾಜ್ಯದ ಒಂದು ಭಾಗವಾಗಿದ್ದ ಕೊಪ್ಪಳ ಪರಿಸರವು ಕೂಡಾ ಆ ಕಾಲದ ಹತ್ತು ಹಲವು ಸ್ಮಾರಕ ಶಿಲ್ಪಗಳನ್ನು ಒಳಗೊಂಡಿದೆ.

ಕ್ರಸಂ.	ಗ್ರಾಮ	ತಾಲೂಕು	ಮೂರ್ತಿಶಿಲ್ಪ ದೊರೆತ ಸ್ಥಳ	ಒಟ್ಟು
೧.	ಹುಲಿಗಿ	ಕೊಪ್ಪಳ	ಹುಲಿಗೆಮ್ಮ ದೇವಾಲಯದ ಸಭಾ ಮಂಟಪದಲ್ಲಿ	೨
೨.	ಹಟ್ಟಿ	ಕೊಪ್ಪಳ	ಆಂಜನೇಯ ದೇವಾಲಯದ ಹತ್ತಿರ ಕಟ್ಟೆಯ ಮೇಲೆ	೨
೩.	ಅಗಳಕೆರೆ	ಕೊಪ್ಪಳ	ವೀರಭದ್ರ ದೇವಾಲಯದ ಆವರಣ	೧
೪.	ಇಂದ್ರಗಿ	ಕೊಪ್ಪಳ	ಆಂಜನೇಯ ದೇವಾಲಯದ ದ್ವಾರದ ಬಳಿ	೧
೫.	ಇಂದ್ರಗಿ	ಕೊಪ್ಪಳ	ಊರಿನ ಹೊರಭಾಗದ ನೈಸರ್ಗಿಕ ಬಂಡೆ	೧
೬.	ನಿಟ್ಟಾಲಿ	ಕೊಪ್ಪಳ	ಊರಿನ ಮಧ್ಯೆ	೧
೭.	ಕುಟುಗನ ಹಳ್ಳಿ	ಕೊಪ್ಪಳ	ಕುಟುಗನ ಹಳ್ಳಿಯ ಕೆರೆಯ ಹತ್ತಿರ	೧
೮.	ಬೂದಗುಂಪ	ಗಂಗಾವತಿ	ಊರಿನ ಮಧ್ಯೆ ಕಟ್ಟೆಯ ಮೇಲೆ	೨
೯.	ಜುಮ್ಮಾಪುರ	ಗಂಗಾವತಿ	ಗ್ರಾಮದ ಹೊರ ಭಾಗ	೧
೧೦.	ಹಳೇಮುಸ್ಟೂರು	ಗಂಗಾವತಿ	ಆಂಜನೇಯ ದೇವಾಲಯದ ಹತ್ತಿರ	೨
೧೨.	ಗುಡದೂರ	ಗಂಗಾವತಿ	ಆಂಜನೇಯ ದೇವಾಲಯದ ಪಕ್ಕದಲ್ಲಿ	೧
೧೩.	ಹಳೇಕುಂಟೋಜಿ	ಗಂಗಾವತಿ	ದೇವಾಲಯದ ಹಿಂಭಾಗ	೧
೧೪.	ಗುಡದೂರ	ಗಂಗಾವತಿ	ನೈಸರ್ಗಿಕ ಬಂಡೆ	೧
೧೫.	ಹಿರೇಜಂತಗಲ್ಲು	ಗಂಗಾವತಿ	ಆಂಜನೇಯ ದೇವಾಲಯದ ಪಕ್ಕದಲ್ಲಿ	೧
೧೬.	ಆನೆಗೊಂದಿ	ಗಂಗಾವತಿ	ನೈಸರ್ಗಿಕ ಬಂಡೆ	೧

೧೭.	ರಾಮದುರ್ಗ	ಗಂಗಾವತಿ	ಶಿವದೇವಾಲಯದ ಮುಂದೆ	೧
೧೮.	ಕಾರಟಗಿ	ಗಂಗಾವತಿ	ಸಾಲೋಣಿಯ ಕಟ್ಟೆಯ ಮೇಲೆ	೧
೧೯.	ಕಾರಟಗಿ	ಗಂಗಾವತಿ	ಸಾಲೋಣಿಯ ಕಟ್ಟೆಯ ಮೇಲೆ	೧
೨೦.	ತಾವಗೇರಾ	ಕುಷ್ಟಗಿ	ಶಶಿಧರ ಕಾಲೇಜು ಮುಂಭಾಗದಲ್ಲಿ	೧
೨೧.	ಕನಕಗಿರಿ	ಕನಕಗಿರಿ	ಹಿರೇ ನಾಯಕನ ಗುಡಿ	೧
೨೨.	ಕೊಪ್ಪಳ	ಕೊಪ್ಪಳ	ಗವಿಮಠದ ಗವಿಶಿವ ದೇವಾಲಯದ ಹತ್ತಿರ	೧
೨೩.	ಕೊಪ್ಪಳ	ಕೊಪ್ಪಳ	ಆಂಜನೇಯ ದೇವಾಲಯದ ಹೊರ ಭಿತ್ತಿಯಲ್ಲಿ	೧
				ಒಟ್ಟು - ೨೭

೫.೩ ಮಾಸ್ತಿಗಲ್ಲು

'ಮಾಸ್ತಿ' ಎಂಬುದು ಸಂಸ್ಕೃತ ಭಾಷೆಯ ಮಹಾಸತಿ ಎಂಬ ಪದದ ಸಂಕ್ಷಿಪ್ತರೂಪ. ಗಂಡ ಮಡಿದ ಮೇಲೆ ಆತನ ಜೊತೆ ಪ್ರಾಣತ್ಯಾಗ ಮಾಡುವ ಸ್ತ್ರಿಯನ್ನು ಮಹಾಸತಿ ಅಥವಾ ಮಾಸ್ತಿ ಎಂಬುದಾಗಿ ಕರೆಯುತ್ತಿದ್ದರು. ಸಹಗಮನವನ್ನು ಮಾಡಿ ಮಹಾಸತಿಯರಾದವರ ಸ್ಮಾರಕವಾಗಿ ನಿಲ್ಲಿಸಿದ ಕಲ್ಲುಗಳೇ ಮಾಸ್ತಿಗಲ್ಲುಗಳು. ಈ ಮಾಸ್ತಿಕಲ್ಲುಗಳನ್ನು ವೀರಗಲ್ಲುಗಳಂತೆ ಸುಲಭವಾಗಿ ಗುರುತಿಸಬಹುದು. ಮಾಸ್ತಿಯನ್ನು ಸಹಗಮನ, ಅನುಗಮನ ಎರಡು ಬಗೆ ಇದೆ. ಗಂಡನ ಶವದೊಂದಿಗೆ ಚಿತೆ ಏರುವುದು ಸಹಗಮನ. ಗಂಡ ದೂರದ ಸ್ಥಳದಲ್ಲಿ ಮಡಿದರೆ ಅವನ ಪ್ರಿಯವಸ್ತುವನ್ನು ಹಿಡಿದು ಚಿತೆಯೇರುವುದು ಅನುಗಮನ. ಗಂಡ ಯಾವುದೇ ರೀತಿಯಿಂದ ಸತ್ತಿರಲಿ ಹೆಂಡತಿ ಚಿತೆಯೇರಬೇಕೆಂಬುದು ಇಲ್ಲಿಯ ನೀತಿ.[೧೯] ಶಾಸನಗಳಲ್ಲಿ ಬಲಿದಾನಕ್ಕೆ ಸತಿ, ಮಹಾಸತಿ, ಮಾಸ್ತಿ, ಸಹಗಮನ, ಅನುಗಮನ, ಸಹಮರಣ, ಅನುಮರಣ, ತೋಳುಗೆಯ ಕೊಡು, ಪುರುಷವ್ರತ ಸಹಾನುಭೂತಿ ಹೊಂದು, ಸಹಸಂಗತಿ ವಿಡು, ಅಗ್ನಿಪ್ರವೇಶ ಮಾಡು ಪದಗಳನ್ನು ಬಳಸಲಾಗಿದೆ.[೨೦]

ಗಂಗಾವತಿ ತಾಲೂಕಿನ ಕಡೇಬಾಗಿಲು, ಆನೆಗೊಂದಿ, ಮಾಲಗಿತ್ತಿ, ಕುಷ್ಟಗಿ, ಮತ್ತು ತಾವರಗೆರೆಯಲ್ಲಿ ವಿಜಯನಗರಕ್ಕೆ ಸಂಬಂಧಿಸಿದ ಐದು ಮಾಸ್ತಿಗಲ್ಲು ದೊರೆತಿವೆ. ಅವುಗಳಲ್ಲಿ ಪ್ರಮುಖವಾದ ಮಾಸ್ತಿಗಳ ವಿವರ ಈ ರೀತಿ ಇದೆ.

ಆನೆಗೊಂದಿ ಗ್ರಾಮದ ಹೊರಭಾಗದ ಹನುಮಂತ ದೇವಾಲಯದ ಎದುರಿನ ಬೆಟ್ಟದ ಮೇಲೆ ಉತ್ತರಾಭಿಮುಖವಾಗಿ ಒರಟಾದ ಬಿಳಿಯ ಕಣಶಿಲೆಯಲ್ಲಿ ಈ ಮಾಸ್ತಿಕಲ್ಲು ಇದೆ. ಇದು ಸುಮಾರು ೫ ಅಡಿ ಎತ್ತರ, ೨ ಅಡಿ ಅಗಲ ಇದೆ. ಇದೊಂದು ಒಕ್ಕೈ ಮಾಸ್ತಿಗಲ್ಲು. ಇಲ್ಲಿ ಮಾಸತಿಯು ನಿಂತಭಂಗಿಯಲ್ಲಿದ್ದಾಳೆ. ಕಿವಿ ಮತ್ತು ಕೊರಳಲ್ಲಿ ಆಭರಣವಿದೆ. ಕೊರಳಲ್ಲಿ ಆಭರಣವಿದ್ದು, ಸವೆದು ಹೋದ ಸ್ಥಿತಿಯಲ್ಲಿದೆ. ಈ ಸವೆದು ಹೋದ ಸ್ಥಿತಿಗೆ ಐತಿಹ್ಯವಿದೆ. ಅದೇನೆಂದರೆ "ಈ ಮಾಸ್ತಿಗಲ್ಲನ್ನು ಈ ಭಾಗದ ಜನರು ಹೊಟ್ಟೆಮುರುಕವ್ವ ಎಂದು ಕರೆಯುತ್ತಾರೆ. ಈ ಭಾಗದಲ್ಲಿ

ಸಂಚರಿಸುವ ಯಾರೇ ಆಗಲಿ ಈ ಮಾಸ್ತಿಗಲ್ಲಿಗೆ ಕಲ್ಲಿನಿಂದ ಹೊಡೆಯಬೇಕು. ಇಲ್ಲದಿದ್ದರೆ ಈ ಕಲ್ಲಿನಲ್ಲಿರುವ ಆತ್ಮ ಅಲ್ಲಿ ಸಂಚರಿಸುವ ಜನರ ಹೊಟ್ಟೆಯಲ್ಲಿ ಹೊಕ್ಕು ಅವರ ಹೊಟ್ಟೆ ಮುರಿಯಲಿಕ್ಕೆ ಆರಂಭವಾಗುತ್ತದೆ. ಇದು ವಿಪರೀತವಾಗಿ ಹೊಟ್ಟೆ ಮುರಿತದಿಂದ ಸತ್ತೇ ಹೋಗುತ್ತಾರೆ ಎಂಬ ನಂಬಿಕೆ ಇದೆ. ಆದ್ದರಿಂದಾಗಿ ಈ ಭಾಗದಲ್ಲಿ ಸಂಚರಿಸುವ ಪ್ರತಿಯೊರ್ವರು ಅದಕ್ಕೆ ಕಲ್ಲಿನಿಂದ ಹೊಡೆದು ಅದರಲ್ಲಿರುವ ಆತ್ಮವನ್ನು ಹೊರ ಬರದಂತೆ ತಡೆಯಲಾಗುತ್ತದೆಂದು ಸ್ಥಳೀಯರು ಹೇಳುತ್ತಾರೆ. ಈ ಶಿಲ್ಪದ ಮುಂಭಾಗದಲ್ಲಿ ಚಿಕ್ಕ ಕಲ್ಲುಗಳ ರಾಶಿ ಇವೆ.

ಆನೆಗೊಂದಿಯ ಚಿಂತಾಮಣಿ ಮಠದ ಗವಿಯ ಹತ್ತಿರ ಮಾಸ್ತಿಯ ಶಿಲ್ಪವಿದೆ. ಮಾಸ್ತಿಯು ತನ್ನ ಬಲಗೈಯನ್ನು ಎತ್ತಿದ್ದು, ಎಡಗೈ ಕೆಳಕ್ಕೆ ಇಳಿಬಿಟ್ಟದ್ದಾಳೆ ಸ್ವಲ್ಪಭಾಗವು ಭಗ್ನವಾಗಿದೆ. ಎಡಕ್ಕೆ ತುರುಬು ಕಟ್ಟಿದ್ದು, ದೊಡ್ಡದಾದ ಮೂಗು, ಕಣ್ಣು, ಬಾಯಿಯನ್ನು ಚಿತ್ರಿಸಿದ್ದಾರೆ. ಕೈ ಮತ್ತು ಕಾಲುಗಳಿಗೆ ಕಾಲಕಡಗ ಮತ್ತು ಕಿವಿಗಳಿಗೆ ದೊಡ್ಡದಾದ ಕಿವಿಯೋಲೆಗಳನ್ನು ಧರಿಸಿದ್ದಾಳೆ. ಕೊರಳಿಗೆ ಕೊರಳ ಹಾರವನ್ನು ಹಾಕಿದ್ದಾಳೆ. ಎದೆಭಾಗವನ್ನು ದೊಡ್ಡದಾಗಿ ತೋರಿಸಿ, ಸೊಂಟವನ್ನು ಸಪೂರವಾಗಿ ಕಂಡರಿಸಿದ್ದಾರೆ. ಮೊಣಕಾಲಿನ ಕೆಳಭಾಗವು ಮಣ್ಣಿನಲ್ಲಿ ಊದುಗಿ ಹೋಗಿದೆ.

ಕ್ರಸಂ.	ಗ್ರಾಮ	ತಾಲೂಕು	ಸ್ಥಳ	ಕಾಲ (ಕ್ರಿಶ)
೧.	ಆನೆಗೊಂದಿ	ಗಂಗಾವತಿ	ಚಂತಾಮಣಿ ಮಠದ ಆವರಣ	೧೪ನೇ ಶತಮಾನ
೨.	ಆನೆಗೊಂದಿ ಕಡೇಬಾಗಿಲು	ಗಂಗಾವತಿ	ಹನುಮಂತ ದೇವಾಲಯದ ಎದುರಿನ ಗುಡ್ಡದಲ್ಲಿ	೧೫ನೇ ಶತಮಾನ
೩.	ತಾವರಗೆರೆ	ಕುಷ್ಟಗಿ	ತಿಪ್ಪಣ್ಣ ಹೂಗಾರ ಅವರ ಹೊಲದಲ್ಲಿ	೧೬ನೇ ಶತಮಾನ
೪.	ಮಾಲಗಿತ್ತಿ	ಕುಷ್ಟಗಿ	ಸೊಸ್ಯೆಟಿ ಕಛೇತಿಯಲ್ಲಿ	೧೬ನೇ ಶತಮಾನ
೫.	ಕುಷ್ಟಗಿ	ಕುಷ್ಟಗಿ	ನಗರೇಶ್ವರ ಸರ್ಕಲನಲ್ಲಿ	೧೬ನೇ ಶತಮಾನ

೫.೪ ವೀರಮಾಸ್ತಿಗಲ್ಲು

ಕೊಪ್ಪಳ ತಾಲೂಕಿನ ಕೆರೆಹಳ್ಳಿಯಲ್ಲಿ ಒಂದು ಶಿಲ್ಪವಿದೆ. ಈ ಶಿಲ್ಪದಲ್ಲಿ ವೀರ ಮತ್ತು ಇವನ ಜೊತೆ ಸತಿಯ ಶಿಲ್ಪವಿದೆ. ಶಿಲ್ಪದ ಮೇಲ್ಭಾಗದಲ್ಲಿ ಶಿವಲಿಂಗ ಮತ್ತು ನಂದಿ, ಸೂರ್ಯ, ಚಂದ್ರ ಶಿಲ್ಪಗಳಿವೆ. ಶಿಲ್ಪದ ಬಲಭಾಗದಲ್ಲಿ ಸತಿಯ ಎಡಭಾಗದ ವೀರನು ನಿಂತಭಂಗಿಯಲ್ಲಿದೆ. ಸ್ತ್ರೀ ತನ್ನ ಬಲಗೈಯನ್ನು ಮೇಲಕೆತ್ತಿದ್ದಾಳೆ. ಎಡಗೈಯಲ್ಲಿ ನಿಂಬೆಹಣ್ಣು ಹಿಡಿದಂತೆ ಇದೆ. ಕೊರಳಲ್ಲಿ ಪದಕ ಹಾರ, ಕಾಲುಕಡಗ, ಕೈಕಡಗಳಿದ್ದು ಕೇಶದಿಂದ ತುರುಬು ಕಟ್ಟಲಾಗಿದೆ. ಸತಿಯು ಸೀರೆಯ ಉಡುಪು ಇದೆ. ಬದಿಯ ವೀರನು ವಕ್ರವಾಗಿ ನಿಂತಿದ್ದು, ಬಲಗೈಯಲ್ಲಿ ಖಡ್ಗವನ್ನು ಹಿಡಿದ್ದಾನೆ. ವೀರನು ಹಾರ ತೋಲ್ಬಂದಿ, ಮುಂಗೈಕಡಗ, ಕಾಲುಕಡಗ, ಕಿವಿಯೊಲೆ ಮುಂತಾದ ಆಭರಣಗಳಿವೆ. ತಲೆಯ ಮೇಲೆ ವಿಶಿಷ್ಟ ಶೈಲಿಯ ರುಮಾಲು ಇದೆ.

ಕೊಪ್ಪಳ ತಾಲೂಕಿನ ಗಂಗಾವತಿ–ಕೊಪ್ಪಳ ರಸ್ತೆಯಲ್ಲಿ ಗಂಗಾವತಿಯಿಂದ ೨೦ ಕಿ.ಮೀ.

ದೂರದಲ್ಲಿ ಬೂದಗುಂಪ ಗ್ರಾಮವಿದೆ. ಇಲ್ಲಿಯ ಕರಿಸಿದ್ದೇಶ್ವರ ದೇವಾಲಯದ ಪಕ್ಕದಲ್ಲಿ ದೊಡ್ಡ ಬಂಡೆಯಲ್ಲಿ ಪೂರ್ವಾಭಿಮುಖವಾಗಿ ವೀರಮಾಸ್ತಿಗಲ್ಲುವನ್ನು ಕಂಡರಿಸಲಾಗಿದೆ. ವೀರನು ಬಲಗೈಯಲ್ಲಿ ಖಡ್ಗ ಮತ್ತು ಎಡಗೈಯಲ್ಲಿ ಚೂರಿಯನ್ನು ಹಿಡಿದ್ದಾನೆ. ತಲೆಯ ಮೇಲೆ ಪೇಟವನ್ನು ಧರಿಸಿಕೊಂಡಿದ್ದಾನೆ. ಮುಖದಲ್ಲಿ ಮೀಸೆಯನ್ನು ತೋರಿಸಿದ್ದಾರೆ. ವೀರನ ಕೊರಳಲ್ಲಿ ಆಭರಣಗಳು ಮತ್ತು ಕಿವಿಯಲ್ಲಿ ಕಿವಿಯೋಲೆಗಳು, ಕಾಲಿನಲ್ಲಿ ಕಡಗಗಳಿವೆ. ಸೊಂಟದಲ್ಲಿ ಕಿರುಗತ್ತಿ ಇದೆ. ಸೊಂಟದ ಪಟ್ಟಿಯನ್ನು ತೋರಿಸಿದ್ದಾರೆ. ವೀರನ ಪಕ್ಕ ಮಹಾಸತಿಯ ಶಿಲ್ಪವಿದೆ. ತಲೆಯ ಎಡಕ್ಕೆ ತುರುಬು ಕಟ್ಟಿದ್ದಾಳೆ. ಸತಿಯು ಕೊರಳಲ್ಲಿ ಆಭರಣಗಳನ್ನು ಧರಿಸಿದ್ದಾಳೆ. ಮಾಸ್ತಿಯು ತನ್ನ ಎರಡು ಕೈಗಳನ್ನು ಮೇಲೆ ಎತ್ತಿದ್ದು, ಬಲಗೈಯಲ್ಲಿ ನಿಂಬೆಹಣ್ಣನ್ನು ಮತ್ತು ಎಡಗೈಯಲ್ಲಿ ಹೂವನ್ನು ಹಿಡಿದ್ದಾಳೆ. ಸೊಂಟದ ಕೆಳಭಾಗದಲ್ಲಿ ಸೀರೆಯನ್ನು ಕಂಡರಿಸಲಾಗಿದೆ.

ಗಂಗಾವತಿ ತಾಲೂಕಿನ ಹಿರೇಬೆಣಕಲ್ಲ ಗ್ರಾಮದಲ್ಲಿ ವೀರಮಾಸ್ತಿಗಲ್ಲು ಮತ್ತು ವೀರಗಲ್ಲು ಶಿಲ್ಪಗಳನ್ನು ಪೂರ್ವಾಭಿಮುಖವಾಗಿ ಕಟ್ಟೆಯ ಮೇಲೆ ಇಟ್ಟಿದ್ದಾರೆ. ಈ ವೀರನು ಬಲಗೈಯಲ್ಲಿ ಖಡ್ಗ ಮತ್ತು ಎಡಗೈಯಲ್ಲಿ ಚಾಕು(ಕಿರುಗತ್ತಿ)ಗಳನ್ನು ಹಿಡಿದ್ದಾನೆ. ತಲೆಗೂದಲುಗಳನ್ನು ತಿರುವಿ ಬಲಕ್ಕೆ ತುರುಬು ಕಟ್ಟಿದ್ದಾನೆ. ಕಿವಿಗಳಲ್ಲಿ ಕಿವಿಯೊಲೆಗಳಿವೆ. ಕಾಲು ಮತ್ತು ಕೈಗಳಲ್ಲಿ ಕಡಗಗಳನ್ನು ಧರಿಸಿದ್ದಾನೆ. ಕೊರಳಲ್ಲಿ ಪದಕವಿರುವ ಸರವಿದೆ. ಸೊಂಟವನ್ನು ವಸ್ತ್ರದಿಂದ ಬಿಗಿಯಲಾಗಿದೆ. ಈ ಶಿಲ್ಪದ ಪಕ್ಕದಲ್ಲಿ ಮಾಸ್ತಿಯು ತನ್ನ ಬಲಗೈಯಲ್ಲಿ ಕಿರುಗತ್ತಿ ಮತ್ತು ಎಡಗೈಯಲ್ಲಿ ನಿಂಬೆ ಹಣ್ಣು ಹಿಡಿದು ತನ್ನ ಹೊಟ್ಟೆಯ ಮೇಲೆ ಇಟ್ಟುಕೊಂಡಿದ್ದಾಳೆ. ಕಿವಿಗಳಲ್ಲಿ ಕಿವಿಯೋಲೆ, ತೋಳುಗಳಿಗೆ ತೋಳುಬಂಧಿ, ಕಾಲು ಮತ್ತು ಕೈಗಳಲ್ಲಿ ಕಡಗಗಳಿದ್ದು, ಕೊರಳಲ್ಲಿ ಪದಕವಿರುವ ಸರವಿದೆ. ಮೇಲೆ ಸೂರ್ಯ ಚಂದ್ರರನ್ನು ಕಂಡರಿಸಲಾಗಿದೆ.

ಕೊಪ್ಪಳ ತಾಲೂಕಿನ ಕವಳ ಗ್ರಾಮದಲ್ಲಿ ವೀರಮಾಸ್ತಿಗಲ್ಲು ಶಿಲ್ಪವನ್ನು ಪೂರ್ವಾಭಿಮುಖವಾಗಿ ಕಟ್ಟೆಯ ಮೇಲೆ ಸ್ಥಾಪಿಸಲಾಗಿದೆ. ಒಬ್ಬ ಪುರುಷ ಮತ್ತು ಒಬ್ಬಳು ಸ್ತ್ರೀಯು ಪರಸ್ಪರ ಬದಿಯಲ್ಲಿ ನಿಂತಿದ್ದಾರೆ. ವೀರನು ಚಲನೆಯ ಭಂಗಿಯಲ್ಲಿದ್ದು, ಬಲಗಾಲನ್ನು ಬಲಬದಿಗೆ ಮತ್ತೆ ಸ್ವಲ್ಪ ಮುಂದಕ್ಕೆ ಚಾಚಿ ನಿಂತಿದೆ. ಎಡಗಾಲ ಎಡಗಡೆಗೆ ಚಾಚಿರುವುದರಿಂದ ದೇಹವು ತ್ರಿಭಂಗಿಯಲ್ಲಿದೆ. ವೀರನು ಬಲಗೈಯಲ್ಲಿ ಖಡ್ಗವನ್ನು ನೆಲಕ್ಕೆ ಊರಿದ್ದಾನೆ. ಎಡಗೈಯನ್ನು ಎಡಸೊಂಟದ ಸ್ವಲ್ಪ ಕೆಳಭಾಗದಲ್ಲಿ ಇರಿಸಲಾಗಿದೆ. ವೀರನ ಕಾಲುಗಳ ಕೆಳಗೆ ವ್ಯಕ್ತಿ ಒಬ್ಬ ಬಿದ್ದಿರುವುದು ವೀರನು ಕಾಳಗದಲ್ಲಿ ಶತ್ರು ಸಂಹರಿಸಿದ ಸಂದರ್ಭವನ್ನು ಸೂಚಿಸುತ್ತದೆ. ಸೊಂಟಕ್ಕೆ ಒಂದು ವಸ್ತ್ರವನ್ನು ಧರಿಸಿದ್ದಾನೆ. ತಲೆಯ ಮೇಲೆ ರುಮಾಲು ಇದೆ. ಸ್ತ್ರೀ ಸಮಭಂಗಿಯಲ್ಲಿದ್ದು ಬಲಗೈಯನ್ನು ಮೊಣಕೈಯಿಂದ ಸ್ವಲ್ಪ ಬಲಕ್ಕೆ ಬಾಗಿಸಿ ನೇರವಾಗಿ ಮೇಲೆ ಮುಂಡಾಸು ರೀತಿಯ ದೊಡ್ಡ ರುಮಾಲು ಇದೆ. ಕೊರಳಲ್ಲಿ ಹಾರ, ಕೈಗಳಲ್ಲಿ ಬಳೆಗಳಿವೆ. ಕುಪ್ಪಸ ಮತ್ತು ಸೀರೆಯ ಉಡುಪುಗಳಿವೆ. ಒಟ್ಟಾರೆ ಈ ಎರಡು ವೀರ ಮತ್ತು ಮಾಸ್ತಿಶಿಲ್ಪಗಳ ನಿರೂಪಣ ರೀತಿ ವಿಶೇಷವೆನಿಸುತ್ತದೆ. ವೀರನು ಚಲನೆಯ ಭಂಗಿಯಲ್ಲಿ

ತೋರಿಸಿರುವುದು ಅವನ ಕಾಲಿನ ಕೆಳಗೆ ಸಂಹಾರಗೊಂಡ ಶತ್ರು ಬಿದ್ದಿರುವುದು. ಇಬ್ಬರು ತಲೆ ದೊಡ್ಡದಾದ ಮುಂಡಾಸುಗಳನ್ನು ಸುತ್ತಿರುವುದು ಈ ಶಿಲ್ಪಗಳ ವಿಶೇಷ ಲಕ್ಷಣಗಳೆನಿಸುತ್ತದೆ.

ಕೊಪ್ಪಳ ತಾಲೂಕಿನ ಹಳೇಶಿವಪುರ ಗ್ರಾಮದ ಗಂಗರಾಜ ಅವರ ಗದ್ದೆಯಲ್ಲಿರುವ ಮರದ ಕೆಳಗೆ ಪೂರ್ವಾಭಿಮುಖವಾಗಿ ವೀರಮಾಸ್ತಿಯ ಶಿಲ್ಪವನ್ನು ಇಟ್ಟಿದ್ದಾರೆ. ಈ ವೀರನು ಎಡಗೈಯಲ್ಲಿ ಬಾಣವನ್ನು ಹಿಡಿದ್ದಾನೆ. ತಲೆಗೂದಲುಗಳನ್ನು ತಿರುವಿ ಬಲಕ್ಕೆ ತುರುಬು ಕಟ್ಟಿದ್ದಾನೆ. ಕುತ್ತಿಗೆಗೆ ಎರಡು ರಂಧ್ರಗಳಿವೆ. ವೀರನು ಬಲಭಾಗದಲ್ಲಿ ಮಗುವಿನ ಶಿಲ್ಪವಿದ್ದು, ಆ ಶಿಲ್ಪದ ಕುತ್ತಿಗೆಗೆ ಎರಡು ರಂಧ್ರಗಳಿವೆ. ವೀರನು ಬಲಗೈಯಲ್ಲಿ ಮಗುವನ್ನು ಹಿಡಿದು ಚಲನೆಯ ಭಂಗಿಯಲ್ಲಿದ್ದಾನೆ. ವೀರನ ಪಕ್ಕ ಮಹಾಸತಿಯ ಶಿಲ್ಪವಿದೆ. ತಲೆಯ ಬಲಕ್ಕೆ ತುರುಬು ಕಟ್ಟಿದ್ದಾಳೆ. ಕುತ್ತಿಗೆಗೆ ಎರಡು ರಂಧ್ರಗಳಿವೆ. ಮಾಸ್ತಿಯು ತನ್ನ ಬಲಗೈಯನ್ನು ಮೇಲೆ ಎತ್ತಿದ್ದು, ಎಡಗೈಯನ್ನು ಮೊಣಕೈಯಿಂದ ಮೇಲೆತ್ತಿ ಹಿಡಿದಿದ್ದಾಳೆ. ಸೊಂಟದ ಕೆಳಭಾಗದಲ್ಲಿ ಸೀರೆಯನ್ನು ಕಂಡರಿಸಲಾಗಿದ್ದು, ಈ ಶಿಲ್ಪದಲ್ಲಿ ಸೂರ್ಯ, ಚಂದ್ರನ ಸಂಕೇತಗಳನ್ನು ಬಿಡಿಸಲಾಗಿದೆ. ಈ ಶಿಲ್ಪದ ಲಕ್ಷಣಗಳು ಮತ್ತು ವಿಧವನ್ನಾಧರಿಸಿ ಇದರ ಕಾಲವನ್ನು ವಿಜಯನಗರ ಕಾಲಕ್ಕೆ ಸೇರಿಸಲಾಗಿದೆ.

ಗಂಗಾವತಿ ತಾಲೂಕಿನ ಆನೆಗೊಂದಿ ಗ್ರಾಮದ ಚಿಂತಾಮಣಿ ಮಠದ ಆವರಣದಲ್ಲಿ ಶಿಲ್ಪ ಇದೆ. ಆ ವೀರ ಮತ್ತು ಇವನ ಜೊತೆ ಸತಿಯ ಶಿಲ್ಪವಿದೆ. ಶಿಲ್ಪದ ಮೇಲ್ಭಾಗದಲ್ಲಿ ಸೂರ್ಯ ಚಂದ್ರ ಕಂಡರಿಸಲಾಗಿದೆ. ಶಿಲ್ಪದ ಬಲಭಾಗದಲ್ಲಿ ವೀರ ಎಡಭಾಗದ ಸತಿಯ ನಿಂತಭಂಗಿಯಲ್ಲಿ ಚಿತ್ರಿಸಿದ್ದಾರೆ. ಸತಿಯು ತನ್ನ ಬಲಗೈಯನ್ನು ಮೇಲಕೆತ್ತಿದ್ದಾಳೆ. ಎಡಗೈಯಲ್ಲಿ ನಿಂಬೆಹಣ್ಣು ಹಿಡಿದಂತೆ ಇದೆ. ಕೊರಳಲ್ಲಿ ಪದಕ ಹಾರ, ಕಾಲುಕಡಗ, ಕೈಕಡಗಳಿದ್ದು ಕೇಶದಿಂದ ತುರುಬು ಕಟ್ಟಲಾಗಿದೆ. ಸತಿಯು ಸೀರೆಯ ಉಡುಪು ಇದೆ. ಬದಿಯ ವೀರನು ವಕ್ರವಾಗಿ ನಿಂತಿದ್ದು, ಎರಡು ಕೈ ಮುಗಿದು ನಿಂತುಕೊಂಡಿದ್ದಾನೆ. ವೀರನು ಹಾರ, ತೋಳ್ಬಂದಿ, ಮುಂಗೈಯಕಡಗ, ಕಾಲುಕಡಗ, ಕಿವಿಯೊಲೆ ಮುಂತಾದ ಆಭರಣಗಳಿವೆ. ವೀರನು ಕೇಶದಿಂದ ಬಲಗಡೆ ತುರುಬು ಕಟ್ಟಲಾಗಿದೆ. ಈ ಶಿಲ್ಪದ ಶಾಸನದಲ್ಲಿ ಭಯರಿಸೆಟ್ಟಿ ಮಗ ನಾಗಿಸೆಟ್ಟಿಯ ಹೆಂಡತಿ ತಿಂಮಾಯಿ ತನ್ನ ಗಂಡ ಸತ್ತಾಗ ಕಿಚ್ಚು ಹಾಯ್ದು ಸತ್ತಂತೆ ತಿಳಿಸುತ್ತದೆ.

ಗಂಗಾವತಿ ತಾಲೂಕಿನ ಆನೆಗೊಂದಿ ಗ್ರಾಮದ ನವವೃಂದಾವನಕ್ಕೆ ಹೋಗುವ ನದಿಯ ಬಳಿಯಲ್ಲಿ ಕಟ್ಟೆಯ ಮೇಲೆ ವೀರಮಾಸ್ತಿಗಲ್ಲು ನಿಲ್ಲಿಸಿದ್ದಾರೆ. ವೀರನು ಬಲಗೈಯಲ್ಲಿ ಚೂರಿಯನ್ನು ಹಿಡಿದುಕೊಂಡು ಎಡಗೈಯ ಇಳಿಬಿಟ್ಟಿದ್ದಾನೆ. ವೀರನು ಬಲಗಡೆ ತುರುಬು ಕಟ್ಟಿದ್ದು ಕೈ ಮತ್ತು ಕಾಲುಗಳಲ್ಲಿ ಕಡಗಗಳನ್ನು ಹಾಕಿದ್ದಾರೆ. ವೀರ ಸೊಂಟಕ್ಕೆ ಬಟ್ಟೆಯನ್ನು ಕಟ್ಟಿಕೊಂಡಿದ್ದಾರೆ. ಬಟ್ಟೆಯ ಚುಂಗು ಮುಂಭಾಗದಲ್ಲಿ ಇಳಿಬಿದ್ದಿದೆ. ವೀರನ ಪಕ್ಕದಲ್ಲಿ ಸತಿಯು ಬಲಗೈಯನ್ನು ಎತ್ತಿದ್ದಾಳೆ. ಎಡಗೈಯನ್ನು ಇಳಿಟ್ಟಿದ್ದಾಳೆ. ಸತಿಯು ಎಡಕ್ಕೆ ತುರುಬು ಕಟ್ಟಿದ್ದಾಳೆ. ಸತಿಯ ಕಣ್ಣು ದೊಡ್ಡದಾಗಿ ತೋರಿಸಿದ್ದು, ನಿರಿಗೆವುಳ್ಳ ಸೀರೆಯನ್ನು ಧರಿಸಿದ್ದಾಳೆ. ಇದೇ ಗ್ರಾಮದ ನವವೃಂದಾವನಕ್ಕೆ ಹೋಗುವ

ನದಿಯ ಬಳಿಯ ಕೋಟೆಯ ಹತ್ತಿರ ವೀರಮಾಸ್ತಿಗಲ್ಲು ಬಿದ್ದಿದೆ. ಆ ಶಿಲ್ಪವನ್ನು ಬಿಳಿಕಣಶಿಲೆಯಲ್ಲಿ ಕಂಡರಿಸಲಾಗಿದೆ. ವೀರನು ಬಲಗೈಯಲ್ಲಿ ಖಡ್ಗವನ್ನು ಹಿಡಿದು ಮೇಲೆ ಎತ್ತಿದ್ದು ಎಡಗೈಯನ್ನು ಇಳಿಬಿಟ್ಟಿದ್ದಾನೆ. ಸತಿಯು ಬಲಗೈಯನ್ನು ಮೇಲೆ ಎತ್ತಿದ್ದು, ಎಡಗೈಯಲ್ಲಿ ಇಳಿಬಿಟ್ಟಿದ್ದಾಳೆ. ಸತಿಯು ನೆರಿಗೆಯ ಸೀರೆಯನ್ನು ಉಟ್ಟಿದ್ದಾಳೆ. ಇದೇ ಗ್ರಾಮದ ರಂಗನಾಥ ದೇವಾಲಯದ ಪ್ರಾಕಾರಗೋಡೆಗೆ ಒಂದು ಶಿಲ್ಪವನ್ನು ನಿಲ್ಲಿಸಿದ್ದಾರೆ. ಈ ಶಿಲ್ಪವನ್ನು ಕಪ್ಪು ಶಿಲೆಯಲ್ಲಿ ಕಂಡರಿಸಲಾಗಿದೆ. ಒಬ್ಬ ವೀರ ಮತ್ತು ಮೂರು ಜನ ಸತಿಯರ ಶಿಲ್ಪವಿದ್ದು, ಮೊದಲನೆಯ ಸತಿಯು ತನ್ನ ಎರಡು ಕೈಗಳನ್ನು ಮೇಲೆ ಎತ್ತಿದ್ದಾಳೆ. ತುರುಬುವನ್ನು ಬಲಕ್ಕೆ ಕಟ್ಟಿದ್ದಾಳೆ. ಸತಿಯು ನೆರಿಗೆವುಳ್ಳ ಸೀರೆಯನ್ನು ಧರಿಸಿದ್ದಾಳೆ. ಸತಿಯ ಪಕ್ಕದಲ್ಲಿ ವೀರನು ಬಲಗೈಯಲ್ಲಿ ಚೂರಿಯನ್ನು ಹಿಡಿದುಕೊಂಡಿದ್ದಾನೆ. ತಲೆಗೆ ರುಮಾಲನ್ನು ಸುತ್ತಿದ್ದು, ಕೈ ಮತ್ತು ಕಾಲುಕಡಗವನ್ನು ಧರಿಸಿದ್ದಾನೆ. ವೀರನ ಪಕ್ಕದಲ್ಲಿ ಇಬ್ಬರು ಸತಿಯರ ಶಿಲ್ಪವಿದೆ. ಇಬ್ಬರು ಸತಿಯರು ಕೈಯನ್ನು ಇಳಿಬಿಟ್ಟಿದ್ದಾರೆ. ತಲೆಗೆ ತುರುಬುವನ್ನು ಎಡಕ್ಕೆ ಕಟ್ಟಿದ್ದು, ಕೈ ಮತ್ತು ಕಾಲ ಕಡಗವನ್ನು ಧರಿಸಿದ್ದಾರೆ. ನೆರಿಗೆವುಳ್ಳ ಸೀರೆಯನ್ನು ಧರಿಸಿದ್ದಾರೆ. ಇಬ್ಬರು ಸತಿಯರನ್ನು ಒಂದೇ ತರದಲ್ಲಿ ಚಿತ್ರಿಸಿದ್ದಾರೆ.

ಕೊಪ್ಪಳದ ಮಿಟ್ಟಕೇರಿಯ ಆಂಜನೇಯ ದೇವಾಲಯದ ಹತ್ತಿರ ವೀರಮಾಸ್ತಿಗಲ್ಲು ಇದ್ದು ಶೈಲಿಯಿಂದ ಅದನ್ನು ವಿಜಯನಗರವೆಂದು ಗುರುತಿಸಲಾಗಿದೆ.[೨೧] ಇದರಲ್ಲಿ ಒಬ್ಬ ಯೋಧ ಮತ್ತು ಆತನ ಬದಿಯಲ್ಲಿ ಸತಿಯ ಶಿಲ್ಪವಿದೆ. ಯೋಧ ಬಲಗೈಯಲ್ಲಿ ಖಡ್ಗವನ್ನು ಎಡಗೈಯಲ್ಲಿ ಗುರಾಣಿಯನ್ನು ಹಿಡಿದು ಹೋರಾಟದ ಭಂಗಿಯಲ್ಲಿ ನಿಂತಿದ್ದಾನೆ. ತಲೆಯ ಮೇಲೆ ಮುಂಡಾಸು ಧರಿಸಿದ್ದು, ಕೊರಳಲ್ಲಿ ಹಾರ, ತೋಳಬಂದಿ, ಮುಂಗೈಯಲ್ಲಿ ಕಡಗ, ಕಾಲಕಡಗ ಧರಿಸಿದ್ದಾನೆ. ಸೊಂಟದಲ್ಲಿ ಚೂರಿ ಇದೆ. ವೀರನ ಬದಿಯಲ್ಲಿರುವ ಸತಿಯ ಶಿಲ್ಪ ಗಮನ ಸೆಳೆಯುತ್ತದೆ. ಮುಡಿಯನ್ನು ಕಟ್ಟಿ ನೆರಿಗೆಯುಳ್ಳ ಸೀರೆಯನ್ನು ಧರಿಸಿರುವ ಇಕೆ ಎಡಗೈಯಲ್ಲಿ ಚೂರಿಯನ್ನು ಕೆಳಮುಖವಾಗಿ ಹಿಡಿದಿದ್ದಾಳೆ. ಇಕೆಯು ಬಲಗೈಯಲ್ಲಿ ನಿಂಬೆಹಣ್ಣುವನ್ನು ಹಿಡಿದಿದ್ದಾಳೆ. ಬಲ ಭುಜದ ಮೇಲೆ ಗಿಳಿ ಇದೆ. ಈ ಎರಡು ಶಿಲ್ಪಗಳ ಭಂಗಿಯನ್ನು ಗಮನಿಸಿ ಇವರಿಬ್ಬರು ಪರಸ್ಪರ ಹೋರಾಟ ಮಾಡುತ್ತಿರುವ ಸಂದರ್ಭದ ದೃಶ್ಯವೆಂದು ಎಸ್.ವೈ ಸೋಮಶೇಖರ[೨೨] ಅವರು ಅಭಿಪ್ರಾಯ ಪಟ್ಟಿದ್ದಾರೆ. ಅದರೆ ಸ್ತ್ರೀಯ ಕೈಯಲ್ಲಿ ನಿಂಬೆಹಣ್ಣು ಹಿಡಿದಿದ್ದು ಮತ್ತು ಆಕೆಯ ಅಲಂಕೃತವಾಗಿರುವುದನ್ನು ಗಮನಿಸಿದರೆ ಆಕೆಯು ಸತಿಯೆಂದು ತೋರುತ್ತದೆ. ಇವರ ಇಬ್ಬರ ಮಧ್ಯದಲ್ಲಿ ಚಿಕ್ಕಮಗುವಿನ ಶಿಲ್ಪವಿದೆ. ಇದರಿಂದ ಯಾವುದೊ ಹೋರಾಟದಲ್ಲಿ ಗಂಡ ಹೆಂಡತಿ ಜೊತೆಗೂಡಿ ಹೋರಾಡಿ ತಮ್ಮ ಮಗುವಿನೊಂದಿಗೆ ಪ್ರಾಣಾರ್ಪಣೆ ಮಾಡಿದ ಸಂದರ್ಭದ ಸ್ಮಾರಕವಾಗಿ ಈ ವೀರಮಾಸ್ತಿಗಲ್ಲನ್ನು ಹಾಕಿಸಿರಬಹುದೆಂದು ಹೀಗೆ ಕುಟುಂಬದ ನೆನಪಿನಲ್ಲಿ ಹಾಕಿಸಿದ್ದ ಸ್ಮಾರಕ ಶಿಲೆ ಇದು ಎಂದು ಹೇಳಬಹುದು.

ಗಂಗಾವತಿ ತಾಲೂಕಿನ ಹಿರೇಜಂತಗಲ್ಲ ಗ್ರಾಮದ ಕನ್ನಿಕಾ ಪರಮೇಶ್ವರಿ ದೇವಾಲಯದ ಮುಂದೆ ವೀರಮಾಸ್ತಿಗಲ್ಲು ಇದೆ.[೨೩] ವೀರನು ಸ್ಥಾನಿಕ ಭಂಗಿಯಲ್ಲಿದ್ದು ಕೈಗಳು ಅಂಜಲಿ ಮುದ್ರೆಯಲ್ಲಿವೆ.

ತಲೆಗೂದಲನ್ನು ತುರುಬು ಕಟ್ಟಲಾಗಿದೆ. ಧೋತಿಯನ್ನು ಧರಿಸಿದ್ದು, ಕಿವಿಯಲ್ಲಿ ಓಲೆ, ಕೈಗಳಲ್ಲಿ ಕಡಗಗಳು, ಕಾಲ್ಕಡಗಳು, ತೋಳ್ಬಂದಿಗಳಿವೆ. ವೀರನ ಪಕ್ಕದಲ್ಲಿ ಸತಿಯ ಶಿಲ್ಪವಿದೆ. ಸತಿಯ ಬಲಗೈಯನ್ನು ಮೇಲೆ ಎತ್ತಿದ್ದಾಳೆ. ಸತಿಯು ಸೀರೆ ಧರಿಸಿದ್ದಾಳೆ. ಮೇಲೆ ಕುಪ್ಪಸವಿಲ್ಲ ಆಕೆಯ ತಲೆಗೂದಲು ತುರುಬು ಕಟ್ಟಲಾಗಿದ್ದು, ಕೊರಳಲ್ಲಿ ಚಿಕ್ಕಸರ, ಕುಚದ್ವಯಗಳ ಮಧ್ಯ ಇಳಿಬಿದ್ದ ದೊಡ್ಡ ಸರ, ಕಂಠಿ ಸರ, ಕೈಬಳೆ, ತೋಳ್ಬಂದಿಗಳು ಮುಂತಾದ ಆಭರಣಗಳನ್ನು ಧರಿಸಿದ್ದಾಳೆ.

ಕುಷ್ಟಗಿ ತಾಲೂಕಿನ ವಾರಿಕಲ್ಲು ಗ್ರಾಮದ ಬನ್ನಿಮರದ ಕೆಳಗೆ ವೀರಮಾಸ್ತಿ ಶಿಲ್ಪವಿದೆ. ಇಲ್ಲಿ ವೀರನು ಕುದುರೆಯ ಮೇಲೆ ಕುಳಿತಿದ್ದು, ಇದರ ಪಕ್ಕದಲ್ಲಿ ಇಬ್ಬರು ಸತಿಯರು ಬಲಗೈಯನ್ನು ಮೇಲೆ ಎತ್ತಿದ್ದಾರೆ. ವೀರನಿಗೆ ಪಕ್ಕದಲ್ಲಿ ಸೇವಕರು ಚಾಮರವನ್ನು ಹಿಡಿದಿದ್ದಾರೆ.

ಕುಷ್ಟಗಿ ತಾಲೂಕಿನ ಬಂಡಿ ಗ್ರಾಮದ ಕಲ್ಲೇಶ್ವರ ದೇವಾಲಯದ ಮುಂಭಾಗದ ಗೋಡೆಗೆ ಹೊಂದಿಸಿ ನಿಲ್ಲಿಸಲಾಗಿದ್ದ ಶಿಲ್ಪದಲ್ಲಿ ವೀರನೊಂದಿಗೆ ಸತಿಯು ನಿಂತಿದ್ದು, ಸತಿಯು ಬಲಗೈಯಲ್ಲಿ ನಿಂಬೆಹಣ್ಣು ಹಿಡಿದಿದ್ದು, ಎಡಗೈಯಲ್ಲಿ ಕನ್ನಡಿ ಹಿಡಿದಿದ್ದಾಳೆ, ಪಕ್ಕದಲ್ಲಿ ವೀರನು ಸೊಂಟಕ್ಕೆ ಚೂರಿಯನ್ನು ಸಿಗಿಸಿಕೊಂಡಿದ್ದಾನೆ. ತನ್ನ ಎರಡು ಕೈಗಳನ್ನು ಮುಗಿದ ಬಂಗಿಯಲ್ಲಿದ್ದಾನೆ. ಎಡಭಾಗದಲ್ಲಿ ದೊಡ್ಡದಾದ ರುಮಾಲು ಸುತ್ತಿಕೊಂಡಿದ್ದಾನೆ. ಮೊತ್ತೊಬ್ಬ ವೀರನು ಚಲಿಸುವ ಭಂಗಿಯಲ್ಲಿದ್ದಾರೆ. ವೀರ ಮತ್ತು ಸತಿಯ ಶಿಲ್ಪಕಿಂತ ಮತ್ತೊಬ್ಬ ವೀರನನ್ನು ಚಿಕ್ಕದಾಗಿ ಖಂಡರಿಸಿದ್ದಾರೆ. ಮೇಲ್ಭಾಗದಲ್ಲಿ ಸೂರ್ಯ, ಚಂದ್ರ ಮತ್ತು ಶಿವಲಿಂಗವನ್ನು ಚಿತ್ರಿಸಿದ್ದಾರೆ.

ಕೊಪ್ಪಳ ತಾಲೂಕಿನ ಕೊಡದಾಳ ಗ್ರಾಮದ ವೀರಮಾಸ್ತಿಗಲ್ಲು ಎರಡು ಹಂತಗಳನ್ನು ಹೊಂದಿದ್ದು, ಬಿಳಿಕಣಶಿಲೆಯಲ್ಲಿ ಕಂಡರಿಸಲಾಗಿದೆ. ಮೊದಲಿನ ಹಂತದಲ್ಲಿ ಒಬ್ಬ ವೀರ ಮತ್ತು ಇಬ್ಬರು ಸತಿಯರ ಶಿಲ್ಪವಿದೆ. ವೀರನು ಕೈಮುಗಿದು ನಿಂತುಕೊಂಡಿದ್ದಾನೆ ವೀರನು ಎಡಕ್ಕೆ ಮುಡಿಯನ್ನು ಕಟ್ಟಿದ್ದಾನೆ. ವೀರನ ಅಕ್ಕ ಪಕ್ಕದಲ್ಲಿ ಇಬ್ಬರು ಸತಿಯರ ಶಿಲ್ಪವಿದೆ. ಇಬ್ಬರು ಸತಿಯರು ತಮ್ಮ ಬಲಗೈಯನ್ನು ಎತ್ತಿದ್ದು, ಎಡಗೈಯನ್ನು ಇಳಿಬಿಟ್ಟಿದ್ದಾರೆ. ಸತಿಯರು ಎಡಭಾಗಕ್ಕೆ ತುರುಬು ಕಟ್ಟಿದ್ದಾರೆ. ಇವರು ತೊಟ್ಟ ಉಡುಪು ನೆರಿಗೆಯಿಂದ ಕೂಡಿದೆ. ನೆರಿಗೆ ಮೇಲೆ ಬಟ್ಟೆಯನ್ನು ಸುತ್ತಿಕೊಂಡಿರುವುದು ಕಂಡು ಬರುತ್ತದೆ. ಎರಡನೆಯ ಹಂತದಲ್ಲಿ ಇಬ್ಬರು ವೀರರು ಇದ್ದು ಅದರಲ್ಲಿ ಒಬ್ಬ ವೀರನು ಚಲಿಸುವ ಭಂಗಿಯಲ್ಲಿದ್ದು ಎಡಗೈಯನ್ನು ಮೇಲೆ ಎತ್ತಿದ್ದಾರೆ. ಬಲಗೈಯಲ್ಲಿ ಏನು ಹಿಡಿದಿದ್ದಾನೆಂಬುದು ಸ್ಪಷ್ಟವಾಗಿ ಕಾಣಿಸುತ್ತಿಲ್ಲ. ಪದ್ಮಾಸನದಲ್ಲಿ ಕುಳಿತು ಅಂಜಲಿಬದ್ಧನಾಗಿ ಧ್ಯಾನಸಕ್ತರಾಗಿದ್ದಾರೆ. ಮಧ್ಯದಲ್ಲಿ ಶಿವಲಿಂಗವಿದೆ.

ಕೊಪ್ಪಳ ತಾಲೂಕಿನ ತಳಬಾಳ ಗ್ರಾಮದಲ್ಲಿ ಕಣಶಿಲೆಯಲ್ಲಿ ಕಂಡರಿಸಲಾದ ವೀರಮಾಸ್ತಿಗಲ್ಲಿನಲ್ಲಿ ಸತಿಯು ತನ್ನ ಬಲಗೈಯನ್ನು ಮೇಲೆ ಎತ್ತಿದ್ದು, ಎಡಗೈಯಲ್ಲಿ ಕರಂಡಮುಕುಟವನ್ನು ಹಿಡಿದುಕೊಂಡಿದು ಚಲಿಸುವ ಭಂಗಿಯಲ್ಲಿದ್ದಾಳೆ. ಸತಿಯು ಬಲಭಾಗಕ್ಕೆ ತುರುಬುಕಟ್ಟಿದ್ದಾಳೆ. ಕಿವಿಗೆ ದೊಡ್ಡದಾದ ಕಿವಿ ಓಲೆಯನ್ನು ಹಾಕಿದ್ದಾಳೆ. ಸತಿಯು ನಿರಿಗೆವುಳ್ಳ ಸೀರೆಯನ್ನು ಧರಿಸಿದ್ದಾಳೆ. ಸತಿಯ ಪಕ್ಕದಲ್ಲಿ

ವೀರನಿದ್ದು ಅವನು ಧೋತಿಯನ್ನು ಧರಿಸಿದ್ದಾನೆ, ಚಲಿಸುವ ಭಂಗಿಯಲ್ಲಿದ್ದು, ಎಡಗೈಯಲ್ಲಿ ಬಿಲ್ಲವನ್ನು ಹಿಡಿದುಕೊಂಡಿದ್ದಾನೆ, ಬಲಗೈಯು ಸೊಂಟದ ಕೆಳಭಾಗವನ್ನು ಹಿಡಿದುಕೊಂಡಿದ್ದಾನೆ. ಈ ಶಿಲ್ಪದಲ್ಲಿ ಏಳು ರಂಧ್ರಗಳನ್ನು ಕೆತ್ತಿದ್ದಾರೆ. ಮೇಲ್ಭಾಗದಲ್ಲಿ ಶಿವಲಿಂಗ ಮತ್ತು ನಂದಿಯನ್ನು ಚಿತ್ರಿಸಿದ್ದಾರೆ.

ಕ್ರಸಂ.	ಗ್ರಾಮ	ತಾಲೂಕು	ಸ್ಥಳ	ಕಾಲ (ಕ್ರಿಶ)
೧.	ಅಗಳಕೆರೆ	ಕೊಪ್ಪಳ	ವೀರಭದ್ರ ದೇವಾಲಯದ ಆವರಣದಲ್ಲಿ	೧೪ನೇ ಶತಮಾನ
೨.	ಆನೆಗೊಂದಿ	ಗಂಗಾವತಿ	ಚಿಂತಾಮಣಿ ಮಠದಲ್ಲಿ	೧೪ನೇ ಶತಮಾನ
೩.	ಆನೆಗೊಂದಿ	ಗಂಗಾವತಿ	ಕೋಟೆಯ ಪಕ್ಕದಲ್ಲಿ	೧೪ನೇ ಶತಮಾನ
೪.	ಹುಲಿಗಿ	ಕೊಪ್ಪಳ	ಸೋಮೇಶ್ವರ ದೇವಾಲಯದ ಆವರಣದಲ್ಲಿ	೧೫ನೇ ಶತಮಾನ
೫.	ಹುಲಿಗಿ	ಕೊಪ್ಪಳ	ಸೋಮೇಶ್ವರ ದೇವಾಲಯದ ಮುಂಭಾಗದಲ್ಲಿ	೧೫ನೇ ಶತಮಾನ
೪.	ಕೆರೆಹಳ್ಳಿ	ಕೊಪ್ಪಳ	ವೀರಭದ್ರ ದೇವಾಲಯದ ಪಕ್ಕದಲ್ಲಿ	೧೫ನೇ ಶತಮಾನ
೫.	ಕೆರೆಹಳ್ಳಿ	ಕೊಪ್ಪಳ	ವೀರಭದ್ರ ದೇವಾಲಯದ ಎಡಭಾಗ	೧೫ನೇ ಶತಮಾನ
೬.	ಹಿರೇಬೆಣಕಲ್ಲು	ಗಂಗಾವತಿ	ಊರ ಹೊರಭಾಗದಲ್ಲಿ	೧೫ನೇಶತಮಾನ
೭	ಆನೆಗೊಂದಿ	ಗಂಗಾವತಿ	ಚಿಂತಾಮಣಿ ಮಠದ ಗವಿಯ ಮುಂದೆ	೧೫ನೇ ಶತಮಾನ
೮.	ಹನುಮಸಾಗರ (ಚಂದಾಲಿಂಗ)	ಕುಷ್ಟಗಿ	ಚಂದ್ರಲಿಂಗೇಶ್ವರ ದೇವಾಲಯದ ಆವರಣ	೧೫ನೇ ಶತಮಾನ
೯.	ಗಡ್ಡಿ	ಗಂಗಾವತಿ	ಊರ ಮಧ್ಯೆದ ರಸ್ತೆಯ ಪಕ್ಕ	೧೫ನೇ ಶತಮಾನ
೧೦.	ಬೂದಗುಂಪಾ	ಕೊಪ್ಪಳ	ಕರಿಸಿದ್ದೇಶ್ವರ ದೇವಾಲಯದ ಪಕ್ಕದ ನೈಸರ್ಗಿಕ ಬಂಡೆಗೆ	೧೫ನೇ ಶತಮಾನ
೧೧.	ಹನುಮಸಾಗರ	ಕುಷ್ಟಗಿ	ಚಂದ್ರಲಿಂಗೇಶ್ವರ ದೇವಾಲಯದ ಆವರಣ	೧೫ನೇ ಶತಮಾನ
೧೨.	ಗುಡದೂರು	ಗಂಗಾವತಿ	ಗುಡದೂರರಿಂದ ನೀರಲೂಟಿ ಹೋಗುವ ರಸ್ತೆಯ ಪಕ್ಕದಲಿ	೧೬ನೇ ಶತಮಾನ
೧೩.	ಬೊಮ್ಮನಾಳ	ಯಲಬುರ್ಗಾ	ಆಂಜನೇಯ ದೇವಾಲಯದ ಮುಂದೆ	೧೬ನೇ ಶತಮಾನ
೧೪.	ಆನೆಗೊಂದಿ	ಗಂಗಾವತಿ	ನವಬೃಂದವನಕ್ಕೆ ಹೊಗುವ ದಾರಿಯಲ್ಲಿ ಕಟ್ಟೆಯ ಮೇಲೆ	೧೬ನೇ ಶತಮಾನ
೧೫.	ಆನೆಗೊಂದಿ	ಗಂಗಾವತಿ	ರಂಗನಾಥ ದೇವಾಲಯ ಪ್ರಾಕಾರ ಗೋಡೆಗೆ ನಿಲ್ಲಿದ್ದಾರೆ	೧೬ನೇ ಶತಮಾನ

೧೬.	ಬಂಡಿ	ಯಲಬುರ್ಗಾ	ಕಲ್ಲೇಶ್ವರ ದೇವಾಲಯದ ಮುಂಭಾಗ	೧೬ನೇ ಶತಮಾನ
೧೭.	ಕೊಡದಾಳ	ಕೊಪ್ಪಳ	ಗ್ರಾಮದಲ್ಲಿ ಮಧ್ಯದಲ್ಲಿ	೧೬ನೇ ಶತಮಾನ
೧೮.	ತಳಬಾಳ	ಕೊಪ್ಪಳ	ಗ್ರಾಮದಲ್ಲಿ ಮಧ್ಯದಲ್ಲಿ	೧೬ನೇ ಶತಮಾನ
೧೯.	ವಾರಿಕಲ್ಲ	ಕುಷ್ಟಗಿ	ಗ್ರಾಮದ ಬನ್ನಿಮರದ ಕೆಳಗೆ	೧೬ನೇ ಶತಮಾನ

ಬೇಟೆಯಲ್ಲಿ ಮಡಿದ ವೀರರ ಸ್ಮಾರಕಗಳು

ಮಾನವನು ಪ್ರಾಣಿಗಳನ್ನು ಬೇಟೆಯಾಡುವುದು ಬಹಳ ಪ್ರಾಚೀನ ಕಾಲದಿಂದಲೂ ಬಂದ ಪದ್ಧತಿ. ಬೇಟೆ ಎಂದರೆ ಪ್ರಾಣಿಗಳ ಚಲನವಲನ, ಆಹಾರ ಕ್ರಮ, ವಾಸಿಸುವ ಜಾಗಗಳಾದ ಗವಿ, ಪೊಟರೆ, ಪೊದೆ, ಬಿಲ ಮುಂತಾದವುಗಳನ್ನು ಕಂಡುಕೊಂಡು, ಅವುಗಳ ದೌರ್ಬಲ್ಯವನ್ನು ಬಳಸಿಕೊಂಡು, ಸುಲಭವಾಗಿ ತಮ್ಮ ತಂತ್ರಕ್ಕೆ ಅಥವಾ ವಿಧಾನಕ್ಕೆ ಸಿಲುಕಿಕೊಳ್ಳುವಂತೆ ಅಥವಾ ಈಡಾಗುವಂತೆ ಮಾಡುವ ಕಲೆಯೇ ಬೇಟೆ. ಕೆಲವರು ಆಹಾರಕ್ಕಾಗಿ ಬೇಟೆಯಾಡಿದರೆ, ಮತ್ತೆ ಕೆಲವರು ಮೋಜಿಗಾಗಿ, ಕಾಲಹರಣಕ್ಕಾಗಿ ಅಥವಾ ತಮ್ಮ ಶೌರ್ಯಪ್ರದರ್ಶನಕ್ಕಾಗಿ ಬೇಟೆಯಾಡುತ್ತಿದ್ದರು. ಹಲವು ಕನ್ನಡ ಕಾವ್ಯಗಳಲ್ಲಿ ರಾಜಮಹಾರಾಜರು ಮತ್ತು ಇತರರು ಬೇಟೆಯಾಡುತ್ತಿದ್ದ ವಿಧಾನಗಳು ಅವರ ವೈಭೋಗಗಳ ವರ್ಣನೆ ಕಂಡು ಬರುತ್ತದೆ. ದುಷ್ಟ ಮೃಗಗಳಾದ ಹುಲಿ, ಚಿರತೆ, ಆನೆ, ಕಾಡು ಹಂದಿಗಳನ್ನು ಬೇಟೆಯಾಡಿದವರು ಇಲ್ಲವೇ ಬೇಟೆಯಾಡುವ ಸಮಯದಲ್ಲಿ ಮಡಿದವರಿಗಾಗಿ ಸ್ಮಾರಕಗಳನ್ನು ನಿಲ್ಲಿಸಿರುತ್ತಾರೆ. ಸ್ಮಾರಕ ಶಿಲ್ಪಗಳಲ್ಲಿ ಕೂಡ ನಾವು ಹಲವಾರು ಪ್ರಾಣಿ ಬೇಟೆಯ ಚಿತ್ರಗಳನ್ನು ನೋಡಬಹುದು. ಬೇಟೆಯಾಡಲು ಮತ್ತೊಂದು ಕಾರಣವೂ ಇರುತ್ತದೆ. ಕೆಲವೊಮ್ಮೆ ಪ್ರಾಣಿಗಳು ಊರಿಗೆ ನುಗ್ಗಿ, ಜನರಿಗೆ, ದನಗಳಿಗೆ ತೊಂದರೆ ಕೊಡುವುದಲ್ಲದೆ, ಕಷ್ಟದಿಂದ ಬೆಳೆದ ಬೆಳೆಗಳನ್ನು ನಾಶಪಡಿಸುತ್ತವೆ. ಇಂತಹ ಪ್ರಾಣಿಗಳ ಕಾಟವನ್ನು ತಡೆಯಲಾರದೆ ಅವನ್ನು ಬೇಟೆ ಆಡಿ ಕೊಂದು ಹಾಕಲಾಗುತ್ತದೆ. ಹೀಗೆ ಕೊಲ್ಲಲ್ಲು ಹೋಗಿ ತಾವೇ ಮರಣವನ್ನಪ್ಪಿದ ಘಟನೆಗಳನ್ನು ತಿಳಿಸುವ ಉದ್ದೇಶಕ್ಕೆ ಶಿಲ್ಪಗಳನ್ನು ಹಾಕಲಾಗುತ್ತದೆ. ಇಂತ ವೀರಗಲ್ಲುಗಳಲ್ಲಿ ಮನುಷ್ಯರಿಗಾಗಿ ನಿಲ್ಲಿಸಿದ ವೀರಗಲ್ಲುಗಳಂತೆಯೆ ಮಾನವನ ಸಹಾಯಕ್ಕಾಗಿ ನಿಂತ ಪ್ರಾಣಿಗಳ ಸ್ಮಾರಕಗಳು ನಮ್ಮಲ್ಲಿ ದೊರೆಯುತ್ತವೆ. ಈ ರೀತಿ ಇವರಿಗೂ ವೀರಗಲ್ಲುಗಳನ್ನು ನೆಡುವ ರೂಢಿ ಬೆಳೆದು ಬಂದಿತ್ತು. ಈ ಭಾಗದಲ್ಲಿ ವೀರನು ನೇರವಾಗಿ ಪ್ರಾಣಿಗಳೊಂದಿಗೆ ಹೋರಾಡುವ ಶಿಲ್ಪಗಳನ್ನು ಮಾತ್ರ ಕಂಡುಬರುತ್ತವೆ.

ಹುಲಿಬೇಟೆ ಶಿಲ್ಪ

ಹುಲಿಯು ಬಲಿಷ್ಠವಾದ ಪ್ರಾಣಿ. ಹುಲಿಯನ್ನು ಬೇಟೆಯಾಡುವವರು ನಿಜವಾಗಿಯೂ ಬಹಳ ಧೈರ್ಯಶಾಲಿಯಾಗಿರಬೇಕು. ಇಂತಹ ಬಲಿಷ್ಠವಾದ ಪ್ರಾಣಿಯೊಂದಿಗೆ ಹೋರಾಡಿದ ವಿಷಯವನ್ನು ತಿಳಿಸುವ ಅನೇಕ ವೀರಗಲ್ಲುಗಳು ಕರ್ನಾಟಕದಲ್ಲಿ ದೊರೆಯುತ್ತವೆ. ಅವುಗಳಲ್ಲಿ ಬಾಗಳಿ, ಮಂಡಿಕಲ್ಲು, ಬೂದಿಗುಪ್ಪೆ, ಕೆಂಪೊಹಳ್ಳಿ, ಹಳದೀಪುರ, ದುಬಾರ, ಅಣಜಿ, ಆಲದಗೇರಿ,

ಕಂದಲಿ, ಕುಪ್ಪಟೂರು, ಮೈಸೂರು, ಐಡೆಯೂರು, ಬೆಂಗಳೂರು, ಮೈಸೂರು, ಕಂಪ್ಲಿ[೨೪] ಕಾನಕಾನಹಳ್ಳಿ[೨೫] ಈ ಎಲ್ಲಾ ಗ್ರಾಮಗಳಲ್ಲಿ ಹುಲಿಬೇಟೆಯ ಶಾಸನ ಮತ್ತು ವೀರಗಲ್ಲುಗಳು ದೊರೆಯುತ್ತವೆ. ಈ ರೀತಿಯ ವೀರಗಲ್ಲುಗಳು ಕೊಪ್ಪಳ ಜಿಲ್ಲೆಯ ಹಲ್ಗೇರಿ, ಕನಕಗಿರಿ, ಅಬ್ಬಿಗೇರಿಯಲ್ಲಿ ದೊರೆಯುತ್ತವೆ. ಅಬ್ಬಿಗೇರಿಯ ಆಂಜನೇಯ ದೇವಾಲಯದ ಪಕ್ಕದಲ್ಲಿರುವ ವೀರಗಲ್ಲು ಒಂದು ಹಂತವನ್ನು ಹೊಂದಿದ್ದು, ವೀರನೊಬ್ಬನು ಹುಲಿಯೊಂದಿಗೆ ಹೋರಾಡುತ್ತಿರುವ ದೃಶ್ಯವಿದೆ. ಹುಲಿ ತನ್ನ ಬಲಿಷ್ಠವಾದ ಹಿಂದಿನ ಕಾಲುಗಳ ಮೇಲೆ ನಿಂತು ವೀರನನ್ನು ಆಕ್ರಮಣಗೈದಿದೆ. ವೀರನು ತನ್ನ ಬಲಗೈಯಲ್ಲಿ ಖಡ್ಗವನ್ನು ಎತ್ತಿ ಹುಲಿಯ ಮೇಲೆ ಪ್ರಹಾರ ಮಾಡುತ್ತಿದ್ದಾನೆ. ಎಡಗೈಯಲ್ಲಿ ಹುಲಿಯ ಆಕ್ರಮಣವನ್ನು ತಪ್ಪಿಸುವಂತೆ ಅದರ ಮುಖಕ್ಕೆ ಗುರಾಣಿಯನ್ನು ಅಡ್ಡ ಹಿಡಿದಿದ್ದಾನೆ. ವೀರನ ತಲೆಯ ಮೇಲೆ ಮುಂಡಾಸು, ಕೊರಳಲ್ಲಿ ಸರ, ತೋಳ್ಬಂದಿ, ಕೈಕಡಗ, ಕಾಲ್ಗಡಗಳಿವೆ. ಕನಕಗಿರಿಯಿಂದ ಗಂಗಾವತಿಗೆ ಹೊಗುವ ರಸ್ತೆಯ ಎಡಭಾಗದಲ್ಲಿ ದೊಡ್ಡಬಂಡೆಗೆ ಶಿಲ್ಪವಿದೆ.

ಹುಲಿಬೇಟೆ ಶಿಲ್ಪಗಳು

ಕ್ರಸ	ಗ್ರಾಮ	ತಾಲೂಕು	ಸ್ಥಳ	ಕಾಲ (ಕ್ರಿಶ)
೧.	ಅಬ್ಬಿಗೇರಿ/ ಹಾಲಹಳ್ಳಿ	ಕೊಪ್ಪಳ	ಆಂಜನೇಯ ದೇವಾಲಯದ ಪಕ್ಕದಲ್ಲಿ	೧೫ನೇ ಶತಮಾನ
೨.	ಕನಕಗಿರಿ	ಕನಕಗಿರಿ	ಕನಕಗಿರಿಯಿಂದ ಗಂಗಾವತಿಗೆ ಹೊಗುವ ರಸ್ತೆಯ ಎಡಭಾಗದಲ್ಲಿ ದೊಡ್ಡಬಂಡೆಗೆ	೧೬ನೇ ಶತಮಾನ

ಹಂದಿ ಬೇಟೆ ಶಿಲ್ಪ

ಹಂದಿಯು ಬಹು ಆತುರ ಪ್ರಾಣಿ. ಅಪಾಯದ ವಾಸನೆ ಬಡಿದ ಕೂಡಲೆ ಹಿಂದು ಮುಂದು ನೋಡದೆ ಎತ್ತ ಕಡೆಗೆಂದರೆ ಅತ್ತ ಕಡೆಗೆ ಅಥವಾ ಅಪಾಯ ಎದುರಾದ ದಿಕ್ಕಿಗೆ ಓಡುತ್ತದೆ. ಹಂದಿಗಳು ರೈತರ ಪರಮ ಶತ್ರು, ಇವು ರಾತ್ರಿ ಹೊತ್ತು ಹೊಲ ಗದ್ದೆಗಳಿಗೆ ನುಗ್ಗಿ ಬೆಳೆಯನ್ನು ತಿಂದು ಮುಗಿಸುತ್ತವೆ. ಅವು ತಿನ್ನುವುದಕ್ಕಿಂತಲೂ ಹಾಳು ಮಾಡುವುದೇ ಹೆಚ್ಚು. ಕೆಲವರು ಹಂದಿಯ ಮಾಂಸವನ್ನು ಆಹಾರಕ್ಕಾಗಿಯೂ ಬಳಸುತ್ತಾರೆ. ಹೀಗಾಗಿ ಹಂದಿ ಬೇಟೆಯಾಡುವ ಹಾಗೂ ಬೇಟೆಯಾಡಲು ಹೋಗಿ ಪ್ರಾಣ ಕಳೆದುಕೊಂಡು ವಿಷಯವನ್ನು ತಿಳಿಸುವ ಶಾಸನ ಮತ್ತು ವೀರಗಲ್ಲುಗಳು ಕರ್ನಾಟಕದಲ್ಲಿ ದೊರೆಯುತ್ತವೆ. ಅವುಗಳಲ್ಲಿ ಶಿಕಾರಿಪುರ, ತಿಪ್ಪೂರು, ಬೆಂಗಳೂರು, ಕುಣಿತೆಪ್ಪ, ಹೊಳೆನರಸಿಂಹಪುರ, ನೆಲವಾಗಿಲುಗಳಲ್ಲಿ ದೊರೆಯುತ್ತವೆ.[೨೬] ಅದೇ ತೆರನಾಗಿ ಕೊಪ್ಪಳ ಜಿಲ್ಲೆಯ ಕನಕಗಿರಿ ಕನಕಾಚಲ ಲಕ್ಷ್ಮೀನರಸಿಂಹ ದೇವಾಲಯದ ಪ್ರಾಕಾರ ಗೋಡೆಯ ಹತ್ತಿರ ಬಿಡಿಯಾಗಿ ಹಂದಿಬೇಟೆಯ ಶಿಲ್ಪ ಇಟ್ಟಿದ್ದಾರೆ. ಆ ಶಿಲ್ಪದಲ್ಲಿ ಒಂದು ಹಂದಿ, ನಾಲ್ಕು ನಾಯಿಗಳನ್ನು ಚಿತ್ರಿಸಿದ್ದಾರೆ. ಆ ಬೇಟೆಯ ಶಿಲ್ಪದಲ್ಲಿ ದೊಡ್ಡ ಹಂದಿಯ ಬೆನ್ನ ಮೇಲೆ ಕುಳಿತ ನಾಯಿಯೊಂದು ಕೋಪದಿಂದ ಹಂದಿಯ ತಲೆಯನ್ನು ಕಚ್ಚುತ್ತಿದೆ. ಮತ್ತೊಂದು ನಾಯಿ

ಹಂದಿಯ ಹಿಂಗಾಲಿನ ತೊಡೆಯ ಮಾಂಸವನ್ನು ಕಚ್ಚಿ ಎಳೆಯುತ್ತಿರುವುದನ್ನು ಚಿತ್ರಿಸಿದ್ದಾರೆ. ಹಂದಿಯ ಮುಂಭಾಗದಲ್ಲಿ ನಾಯಿಯಿದ್ದು ಹಂದಿಯನ್ನು ಬೊಗಳುವುದರ ಮೂಲಕ ಹೆದರಿಸುತ್ತಿದೆ. ಇದರ ಪಕ್ಕದಲ್ಲಿ ವೀರನೊಬ್ಬನು ಉದ್ದವಾದ ಬೆತ್ತದಿಂದ ಹಂದಿಯನ್ನು ಹೊಡೆಯಲು ಹೊಗುತ್ತಿದ್ದಾನೆ. ಶಿಲ್ಪದಲ್ಲಿ ಹಂದಿಯ ದೇಹವನ್ನು ಬಹಳ ವಾಸ್ತವ ರೀತಿಯಲ್ಲಿ ಚಿತ್ರಿಸಲಾಗಿದೆ.

ಕುಷ್ಟಗಿ ತಾಲೂಕಿನ ಹನುಮಸಾಗರ ಗ್ರಾಮದ ಚಂದಾಲಿಂಗೇಶ್ವರ ದೇವಾಲಯದ ಆವರಣದಲ್ಲಿ ಹಂದಿ ಬೇಟೆಯ ಶಿಲ್ಪ ಇದೆ. ಇಲ್ಲಿ ವೀರನು ಹಾಗೂ ನಾಯಿಯು ಹಂದಿಯ ಮೇಲೆ ದಾಳಿ ಮಾಡಿದಂತೆ ಚಿತ್ರಿಸಿದ್ದಾರೆ. ವೀರನು ಈಟಿಯಿಂದ ಹಂದಿಯನ್ನು ಹೊಡೆಯಲು ಆಯುಧವನ್ನು ಮೇಲೆತ್ತಿದಂತೆ ಹಾಗೂ ನಾಯಿಯು ಹಂದಿಯೊಂದಿಗೆ ಮುಖಾಮುಖಿಯಾಗಿ ಹೋರಾಟ ಮಾಡುತ್ತಿರುವುದನ್ನು ಚಿತ್ರಿಸಿದ್ದಾರೆ. ಹಂದಿ ಬೇಟೆಯ ಶಿಲ್ಪಗಳಿಂದ ಬೇಟೆಯಾಡುವವರು ನಾಯಿಗಳನ್ನು ಜೊತೆಯಲ್ಲಿ ಕಡ್ಡಾಯವಾಗಿ ಒಯ್ಯುತ್ತಿದ್ದರೆಂದು ತಿಳಿಯುತ್ತದೆ. ಹಂದಿಬೇಟೆಯ ಶಿಲ್ಪದಲ್ಲಿ ನಾಯಿಯು ಸಕ್ರಿಯ ಪಾತ್ರವಹಿಸಿದ ಚಿತ್ರಣ ದೊರೆಯುತ್ತದೆ. ಈ ಶಿಲ್ಪಗಳಲ್ಲಿ ನಾಯಿಗಳ ಚುರುಕುತನವನ್ನು, ಸ್ವಾಮಿನಿಷ್ಠೆಯನ್ನು ಮತ್ತು ಹೋರಾಟದ ಗುಣವನ್ನು ಎತ್ತಿತೋರಿಸುತ್ತದೆ.

ಕ್ರಸಂ	ಗ್ರಾಮ	ತಾಲೂಕು	ಸ್ಥಳ	ಕಾಲ (ಕ್ರಿಶ)
೧.	ಹನುಮಸಾಗರ	ಕುಷ್ಟಗಿ	ಚಂದ್ರಲಿಂಗೇಶ್ವರ ದೇವಾಲಯದ	೧೬ನೇ ಶತಮಾನ
೨.	ಕನಕಗಿರಿ	ಕನಕಗಿರಿ	ಕನಕಚಲ ಲಕ್ಷ್ಮೀನರಸಿಂಹ ದೇವಾಲಯದ ಪ್ರಾಕಾರ ಗೋಡೆಗೆ ನಿಲ್ಲಿದ್ದಾರೆ.	೧೬ನೇ ಶತಮಾನ

ಚಿರತೆ ಬೇಟೆ ಶಿಲ್ಪ

ಹುಲಿಯಂತೆ ಚಿರತೆಯು ಬಲಿಷ್ಠವಾದ ಪ್ರಾಣಿ. ಚಿರತೆಯನ್ನು ಬೇಟೆಯಾಡುವವರು ನಿಜವಾಗಿಯೂ ಬಹಳ ಧೈರ್ಯಶಾಲಿಯಾಗಿರಬೇಕು. ಇಂತಹ ಬಲಿಷ್ಠವಾದ ಪ್ರಾಣಿಯೊಂದಿಗೆ ಹೋರಾಡಿದ ವಿಷಯವನ್ನು ತಿಳಿಸುವ ವೀರಗಲ್ಲುಗಳು ಕರ್ನಾಟಕದಲ್ಲಿ ಅಪರೂಪವಾಗಿದೆ. ಅವುಗಳಲ್ಲಿ ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರು ತಾಲೂಕಿನ ಕೋನಸಾಗರ ಮತ್ತು ಕೊಪ್ಪಳ ಜಿಲ್ಲೆಯ ಗಂಗಾವತಿಯ ತಾಲೂಕಿನ ಕಡೇ ಬಾಗಿಲಿನಿಂದ ಆನೆಗೊಂದಿಗೆ ಹೋಗುವ ಮುಖ್ಯ ರಸ್ತೆಯ ಬಲಭಾಗಕ್ಕೆ ಪೂರ್ವಾಭಿಮುಖವಾಗಿ ಚಿರತೆ ಬೇಟೆ ಶಿಲ್ಪವಿದೆ. ಈ ಶಿಲ್ಪವನ್ನು ಡಿ.ವಿ. ಪರಮಶಿವಮೂರ್ತಿಯವರು ಬಹಳ ಸುಂದರವಾದ ಹುಲಿ ಹೋರಾಟದ ವೀರಗಲ್ಲು. ಬರಹವಿಲ್ಲದ ಈ ವೀರಗಲ್ಲಿನಲ್ಲಿ ಹುಲಿಯನ್ನು ಪ್ರಧಾನವಾಗಿ ಚಿತ್ರಿಸಲಾಗಿದೆ ಎಂದು ಗುರುತಿಸಿದ್ದಾರೆ.[೨೨] ಆದರೆ ಈ ಶಿಲ್ಪವನ್ನು ಗಮನಿಸಿದ್ದಾಗ ಚಿರತೆಯಾಗಿದ್ದು, ಸ್ಥಳೀಯರು ಚಿರತೆ ಶಿಲ್ಪ ಎಂದು ಕರೆಯುತ್ತಾರೆ. ಸ್ಥಳೀಯ ಭಾಗದಲ್ಲಿ ಚಿರತೆಗಳ ಹಾವಳಿಗಳು ಇಂದಿಗೂ ಆಗುತ್ತಿವೆ. ಇದು ವೀರ ಮತ್ತು ಮಾಸ್ತಿ ಕಲ್ಲಾಗಿದೆ. ಇದು ಸುಮಾರು ೪.೨ ಅಡಿ ಉದ್ದ, ೫ ಅಡಿ ಅಗಲ ಇದೆ. ಇಲ್ಲಿ ವೀರ ಹಾಗೂ ಮಾಸ್ತಿಯ ಉಬ್ಬು ಶಿಲ್ಪಗಳು

ಸುಂದರವಾಗಿ ಮೂಡಿ ಬಂದಿವೆ. ವೀರನು ತನ್ನ ಬಲಗೈಯಿಂದ ಚಿರತೆಯೊಂದರ ತಲೆಗೆ ತಿವಿಯುತ್ತಿರುವ ದೃಶ್ಯವಿದೆ. ಈ ಭಾಗದಲ್ಲಿ ಚಿರತೆಗಳು ಸರ್ವೇಸಾಮಾನ್ಯವಾಗಿದ್ದು, ಚಿರತೆಯ ಹಾವಳಿಯಿಂದ ಗ್ರಾಮವನ್ನು ರಕ್ಷಿಸಲು ಅಥವಾ ಯಾರನ್ನೋ ರಕ್ಷಿಸಲು ಅದರೊಂದಿಗೆ ಹೋರಾಡಿ ವೀರ ಮರಣವನ್ನು ಹೊಂದಿರಬಹುದಾದ ಸ್ಪಷ್ಟತೆಗಳಿವೆ. ವೀರನ ಸೊಂಟದಲ್ಲಿ ಒಂದು ಕಿರುಗತ್ತಿ ಇದ್ದು, ವೀರನ ಕೊರಳಲ್ಲಿ ವೈವಿಧ್ಯಮಯ ಆಭರಣಗಳಿವೆ. ಕಿವಿಯಲ್ಲಿ ಕಿವಿಯೋಲೆಗಳು, ಕಾಲಲ್ಲಿನ ಕಡಗ ಮುಂತಾದವುಗಳು ಅಂದಿನ ಸಾಂಸ್ಕೃತಿಕ ಚಹರೆಯನ್ನು ಪರಿಚಯಿಸುತ್ತವೆ.[೨೮]

ಕ್ರಸಂ.	ಗ್ರಾಮ	ತಾಲೂಕು	ಸ್ಥಳ	ಕಾಲ (ಕ್ರಿ.ಶ)
೧.	ಕಡೇಬಾಗಿಲು	ಗಂಗಾವತಿ	ಕಡೇಬಾಗಿಲಿನಿಂದ ಆನೆಗೊಂದಿಗೆ ಹೋಗುವ ರಸ್ತೆಯ ಬಲಗಡೆ	೧೪ನೇ ಶತಮಾನ

ಆನೆಯ ಬೇಟೆ ಶಿಲ್ಪ

ಆನೆಯು ಹೋರಾಟದ ಒಂದು ಮಾಧ್ಯಮವಾಗಿರುತ್ತದೆ. ಆನೆ ಬೇಟೆಯಲ್ಲಿ ವೀರನು ನೇರವಾಗಿ ಆನೆಯನ್ನು ಕೊಲ್ಲುವ ಉದ್ದೇಶವನ್ನು ಹೊಂದಿ ಅದರೊಂದಿಗೆ ಹೋರಾಡಿ ಮರಣ ಹೊಂದಿದ ವೀರನ ಸ್ಮಾರಕ ಶಿಲೆಗಳೇ ಆನೆಬೇಟೆ ಶಿಲ್ಪಗಳು. ಕನ್ನಡ ನಾಡಿನಾದ್ಯಂತ ಇಂಥ ಶಿಲ್ಪದ ವೀರಗಲ್ಲುಗಳ ಸಂಖ್ಯೆ ಬೆರಳೆಣಿಕೆಯಷ್ಟು ಕಂಡುಬರುತ್ತವೆ. ಅವುಗಳಲ್ಲಿ ಹಂಪಿ, ಧಾರವಾಡ, ಬೇಗೂರು,[೨೯] ಪುರಗಳಲ್ಲಿ ದೊರೆಯುತ್ತವೆ. ಗಂಗಾವತಿ ತಾಲೂಕಿನ ಬೂದಗುಂಪ ಗ್ರಾಮದ ಕಟ್ಟೆಯ ಮೇಲೆ ಆನೆಬೇಟೆಯ ವೀರಗಲ್ಲು ಶಿಲ್ಪವನ್ನು ನಿಲ್ಲಿಸಿದ್ದಾರೆ. ಕೈಯಲ್ಲಿ ಈಟಿ ಹಿಡಿದುಕೊಂಡ ವೀರನು ಒಂದು ಆನೆಯ ಸೊಂಡಿಲಿಗೆ ತಿವಿಯುತ್ತಿದ್ದಾನೆ. ಎದುರಿನಿಂದ ಆನೆಯು ವೀರನ ಕಡೆ ದಾಳಿ ಮಾಡಲು ಬರುತ್ತಿದೆ. ಆನೆಯ ಬೆನ್ನ ಮೇಲೆ ವೀರನು ಅಥವಾ ಮಾವುತನು ಕುಳಿತ್ತಿದ್ದಾನೆ.

ಕುಷ್ಟಗಿ ತಾಲೂಕಿನ ತಾವರಗೆರೆಯ ಹೂಗಾರ ಅವರ ಹೊಲದಲ್ಲಿ ಆನೆಬೇಟೆಯ ವೀರಗಲ್ಲು ಶಿಲ್ಪ ಇದೆ. ಆನೆಯು ಕೋಪೋದ್ರಿಕ್ತವಾಗಿ ವೀರನ ಮೇಲೆ ದಾಳಿ ಮಾಡುತ್ತಿದೆ. ಅದರ ಮುಂದೆ ವೀರನು ತನ್ನ ಬಲಗೈಯನ್ನು ಮೇಲೆ ಎತ್ತಿದು ಎಡಗೈಯಿಂದ ಆನೆಯ ಸೊಂಡಿಯನ್ನು ಹಿಡಿದುಕೊಂಡು ನೆಲಕ್ಕೆ ಬಿಳುತ್ತಿರುವ ದೃಶ್ಯವನ್ನು ತೋರಿಸಿದ್ದಾರೆ. ವೀರನು ತನ್ನ ಎಡಗಾಲನಿಂದ ಆನೆಯ ಕಾಲಿಗೆ ಒದೆಯುತ್ತಿರುವುದನ್ನು ಚಿತ್ರಿಸಿದ್ದಾರೆ. ವೀರನ ಪಕ್ಕದಲ್ಲಿ ಸತಿಯು ತನ್ನ ಬಲಗೈಯನ್ನು ತಲೆಯ ಮೇಲೆ ಇಟ್ಟುಕೊಂಡಿರುವುದನ್ನು ಗಮನಿಸಿದರೆ ತಲೆಯ ಮೇಲೆ ವಸ್ತುವೊಂದನ್ನು ಒತ್ತುಕೊಂಡಿರುವಂತೆ, ಎಡಗೈಯನ್ನು ವಸ್ತುವೊಂದು ಹಿಡಿದುಕೊಂಡು ಇಳಿಬಿಟ್ಟಿದ್ದಾಳೆ. ಆನೆಯ ಮೇಲ್ಭಾಗದಲ್ಲಿ ಕೈಮುಗಿದು ನಿಂತ ವೀರ ಮತ್ತು ಅವನ ಪಕ್ಕದಲ್ಲಿ ಅಶ್ವದ ಮೇಲೆ ವೀರನು ಕುಳಿತಿರುವಂತೆ ಚಿತ್ರಿಸಿದ್ದಾರೆ. ಸೂರ್ಯ ಚಂದ್ರರನ್ನು ಕಂಡರಿಸಲಾಗಿದೆ.

ಕ್ರಸಂ.	ಗ್ರಾಮ	ತಾಲೂಕು	ಸ್ಥಳ	ಕಾಲ (ಕ್ರಿ.ಶ)
೧.	ಬೂದಗುಂಪಾ	ಗಂಗಾವತಿ	ಗ್ರಾಮದ ಮಧ್ಯೆ	೧೫ ನೇ ಶತಮಾನ

೨.	ತಾವರಗೇರೆ	ಕುಷ್ಟಗಿ	ಹೂಗಾರ ಅವರ ಹೊಲದಲ್ಲಿ	೧೬ ನೇ ಶತಮಾನ
೩.	ಗಂಗಾವತಿ	ಗಂಗಾವತಿ	ರಾಯಚೂರಿನ ನವರಂಗ ದರವಾಜ ಪ್ರಾಚ್ಯ ವಸುಸಂಗ್ರಹ	೧೬ ನೇ ಶತಮಾನ

ತುರುಗೋಳ್ ಶಿಲ್ಪ

ನಮ್ಮ ಪ್ರಾಚೀನರು ದನಗಳನ್ನು ಮುಖ್ಯ ಸಂಪತ್ತೆಂದು ಮತ್ತು ಗೌರವದ ಸಂಕೇತವೆಂದು ತಿಳಿದಿದ್ದರು. ಪ್ರಾಚೀನ ಕಾಲದಲ್ಲಿ ತುರುಗೋಳ್ ಬಹಳ ಪ್ರಸಿದ್ಧವಾದ ಯುದ್ಧವಾಗಿತ್ತು. ತುರುಗೊಳ್ ಅಂದರೆ ದನಗಳನ್ನು ತೆಗೆದುಕೊ, ಹಿಡಿದುಕೊ ಎಂದು ಅರ್ಥ. ಇಂತಹ ಸಂದರ್ಭದಲ್ಲಿ ತುರುಗಳ ರಕ್ಷಣೆಗೆ ಹೋರಾಡಿ ಮಡಿದವರ ಸ್ಮಾರಕಗಳನ್ನು ತುರುಗೋಳ್ ಎಂದು ಕರೆಯುತ್ತೇವೆ. ತುರುಗೊಳ್ ಶಿಲ್ಪದ ಬಗ್ಗೆ ರನ್ನ ಕವಿಯು ಗದಾಯುದ್ಧ ಕಾವ್ಯದಲ್ಲಿ ಹೀಗೆ ಬರೆಯುತ್ತಾರೆ.

ತುರುಗೋಳೊಳ್ ಪೆಣ್ಬುಯ್ಯಲೊಳೆರೆವೆಸದೊಳ್
ನಂಟನೆಡರೊಳೂರರೆವಿನೊಳಂ॥
ತರೆಸಂದು ಗಂಡುತನಮನೆ
ನೆರೆಪದವಂ ಗಂಡನಲ್ಲನೆಂತುಂ ಷಂಡಂ.[೩೦]

ಈ ಪದ್ಯದಲ್ಲಿ ತುರುಗಳನ್ನು ರಕ್ಷಣೆ ಮಾಡುವುದು, ಸ್ತ್ರೀಯರ ಮಾನವನ್ನು ಕಾಪಾಡುವುದು, ಊರುಗಳನ್ನು ರಕ್ಷಣೆ ಮಾಡುವುದು ಪುರುಷರ ಅಥವಾ ಗಂಡಸರ ಪರಮ ಕರ್ತವ್ಯವಾಗಿತ್ತೆಂಬ ಅಂಶ ತಿಳಿದುಬರುತ್ತದೆ. ದನಗಳನ್ನು ರಕ್ಷಿಸಿಕೊಳ್ಳಲು ತಮ್ಮ ಪ್ರಾಣವನ್ನು ಲೆಕ್ಕಿಸದೆ ಹೋರಾಡುತ್ತಿದ್ದರು. ಈ ಹೋರಾಟದಲ್ಲಿ ಹಲವು ವೀರರು ವಿಜಯಿಯಾಗಿ ಹಿಂತಿರುಗಿ ಬಂದರೆ ಮತ್ತೆ ಕೆಲವರು ಸಾವನಪ್ಪಿದ್ದಾರೆ. ಇಂತಹ ವೀರರ ನೆನಪಿಗಾಗಿ ನೆಟ್ಟಂತಹ ವೀರಗಲ್ಲುಗಳನ್ನು ನಾವುಗಳು ನೋಡಬಹುದು. ವೀರಗಲ್ಲುಗಳ ಹೋರಾಟದ ಹಂತದ ಶಿಲ್ಪದಲ್ಲಿ ಯಾವುದಾದರೂ ಒಂದು ಕಡೆಯಲ್ಲಿ ದನಗಳು ನಿಂತಿರುವುದನ್ನು ಚಿತ್ರಿಸಿದ್ದಾರೆ. ತುರುಗೋಳನ್ನು ಗೋಗ್ರಹಣ ಎಂಬ ಹೆಸರಿನಿಂದ ಕರೆಯುವುದು ಹಿಂದಿನಿಂದಲೂ ವಾಡಿಕೆಯಾಗಿರುವುದಾದರೂ ಪ್ರತಿ ಸಾರಿ ಗೋವುಗಳನ್ನು ಮಾತ್ರ ಅಪಹರಿಸುತ್ತಿರಲಿಲ್ಲ ಗೋವುಗಳೊಂದಿಗಿರುತ್ತಿದ್ದ ಎಮ್ಮೆಗಳನ್ನೂ ಅಪಹರಿಸಿರುವುದರ ಬಗ್ಗೆ ಶಾಸನಗಳಲ್ಲಿ ಮತ್ತು ಶಿಲ್ಪಗಳಲ್ಲಿ[೩೧] ವ್ಯಕ್ತವಾಗಿದೆ. ತುರುಗೋಳ್ ಶಿಲ್ಪಗಳು ಕರ್ನಾಟಕದಾದ್ಯಂತ ದೊರೆಯುತ್ತವೆ. ಅವುಗಳಲ್ಲಿ ರೋಣ ತಾಲೂಕಿನ ಬೆಳವಣಿಕೆ, ಚಿಕ್ಕಮಣ್ಣೂಗಿ, ನರೆಗಲ್ಲು, ಬೆಂಗಳೂರು ಜಿಲ್ಲೆಯ ಬೇಗೂರು, ಕುರುಗೋಡು, ತಾವರೆಕೆರೆ, ಶಿಕಾರಿಪುರ, ಶಿವಮೊಗ್ಗದ ಕುಬಟೂರು, ಲಕ್ಕುಂಡಿ ಹಿರೇಕೊಣತಿ ಗೌಡಗೆರೆ, ಕೋಟೆಪುರ, ನಿಜಗಲ್ ಕೆಂಪೋಹಳ್ಳಿ, ಹಳೇಹೂಲಿಹಳ್ಳಿ, ರಟ್ಟಿಹಳ್ಳಿ[೩೨] ಹೀಗೆ ಮುಂತಾದ ಗ್ರಾಮಗಳಲ್ಲಿ ತುರುಗೋಳ್ ಶಾಸನ ಮತ್ತು ವೀರಗಲ್ಲುಗಳು ದೊರೆಯುತ್ತವೆ. ಈ ರೀತಿಯ ತುರುಗೋಳ್ ವೀರಗಲ್ಲುಗಳು ಕೊಪ್ಪಳ ಜಿಲ್ಲೆಯ ಬಿಳೆಬಾವಿ, ಬೂದಗುಂಪ, ಕುಂಟೋಜಿ, ವಿಠಲಾಪುರ ಗ್ರಾಮಗಳಲ್ಲಿ ದೊರೆಯುತ್ತವೆ.

ಕೊಪ್ಪಳ ತಾಲೂಕಿನ ಬಿಳೆಬಾವಿಯು ಕೊಪ್ಪಳ-ಗಂಗಾವತಿ ರಸ್ತೆಯಲ್ಲಿ ಬೂದಗುಂಪದಿಂದ ಈಶಾನ್ಯಕ್ಕೆ ಸುಮಾರು ೨ ಕಿ.ಮೀ. ದೂರದಲ್ಲಿದೆ. ಗ್ರಾಮದ ಆಂಜನೇಯ ದೇವಾಲಯದ ಹತ್ತಿರ ಒಂದು ಶಿಲ್ಪವಿದೆ. ಪಶುಪಾಲನ ಶಿಲ್ಪವು ೩.೧೦ ಅಡಿ ಎತ್ತರ, ೨.೮ ಅಡಿ ಅಗಲ ಇದೆ. ವೀರ, ಮಾಸ್ತಿ ಮತ್ತು ತುರುಗಳ ಶಿಲ್ಪಗಳಿವೆ. ಈ ವೀರನು ತನ್ನ ಎರಡು ಕೈಗಳನ್ನು ಮೇಲೆ ಎತ್ತಿಕೊಂಡು ಭುಜದ ಮೇಲೆ ಅಡ್ಡವಾಗಿ ಕೋಲನ್ನು ಹಿಡಿದುಕೊಂಡಿದ್ದಾನೆ. ಈ ಕೋಲಿನ ಎರಡು ತುದಿಯಲ್ಲಿ ಬಿಂದಿಗೆಗಳನ್ನು ಹೋಲುವ ವಸ್ತುಗಳಿವೆ (ದಂಡೆ). ತಲೆಗೂದಲುಗಳನ್ನು ತಿರುವಿ ಬಲಕ್ಕೆ ತುರುಬು ಕಟ್ಟಿದ್ದಾನೆ. ವೀರನ ಕೊರಳಲ್ಲಿ ವೈವಿಧ್ಯಮಯ ಆಭರಣಗಳಿವೆ. ಕಿವಿಯಲ್ಲಿ ಕಿವಿಯೋಲೆಗಳು, ಕೈ ಮತ್ತು ಕಾಲುಗಳಲ್ಲಿ ಕಡಗಗಳಿವೆ. ವಿಶಿಷ್ಟವಾದ ಉಡುಪುಗಳಿವೆ. ವೀರನ ಬಲಭಾಗದಲ್ಲಿ ವೀರನ ಪತ್ನಿಯ ಶಿಲ್ಪವಿದೆ. ಇಲ್ಲಿ ಮಹಾಸತಿಯು ಕೈಮುಗಿದು ನಿಂತಿದ್ದಾಳೆ. ಮಾಸ್ತಿಯ ಕಿವಿಯಲ್ಲಿ ದೊಡ್ಡದಾದ ಕಿವಿಯೊಲೆ ಮತ್ತು ಕೈ, ಕಾಲುಗಳಲ್ಲಿ ಕಡಗಗಳಿವೆ. ಈ ಶಿಲ್ಪದ ಮೇಲ್ಭಾಗದಲ್ಲಿ ಎರಡು ತುರುಗಳು ಮತ್ತು ಸೂರ್ಯ ಚಂದ್ರರನ್ನು ಚಿತ್ರಿಸಲಾಗಿದೆ.

ಇದೆ ತಾಲೂಕಿನ ಬೂದಗುಂಪ ಗ್ರಾಮದ ಹೊರಭಾಗದಲ್ಲಿ ಒಂದು ಶಿಲ್ಪವಿದ್ದು ಇದು ಪಶುಪಾಲನ ಶಿಲ್ಪವನ್ನು ರಾಷ್ಟ್ರಕೂಟರ ಕಾಲದೆಂದು ಗುರುತಿಸಿದ್ದಾರೆ.[೩೩] ಆದರೆ ಇದೇ ಶಿಲ್ಪವನ್ನು ವಾಸುದೇವ ಬಡಿಗೇರ ಅವರು ವಿಜಯನಗರ ಕಾಲಕ್ಕೆ ಸೇರಿದ ಅಪರೂಪದ ವೀರಗಲ್ಲು[೩೪] ಎಂದು ಗುರುತಿಸುತ್ತಾರೆ. ಆರು ಜನ ವೀರರು ಮತ್ತು ಮೂರು ಎಮ್ಮೆ(ಕೋಣ), ಒಂದು ಎತ್ತು, ಒಂದು ನೇಗಿಲಿನ ಚಿತ್ರಣವಿದೆ. ಆರು ಜನ ವೀರರಲ್ಲಿ ಪ್ರಧಾನವಾಗಿ ಒಬ್ಬ ವೀರನನ್ನು ತೋರಿಸಿದ್ದಾರೆ. ವೀರನ ಬಲಗೈಯಲ್ಲಿ ಚೂರಿ, ಎಡಗೈಯಲ್ಲಿ ಬಿಲ್ಲು, ಸೊಂಟಕ್ಕೆ ಚಾಕುವನ್ನು ಸಿಕ್ಕಿಸಿಕೊಂಡಿದ್ದಾನೆ. ವೀರನು ಚಲಿಸುವ ಭಂಗಿಯಲ್ಲಿದ್ದು, ಎದುರಾಗಿರುವ ನಾಲ್ಕು ಜನ ವೀರರಲ್ಲಿ ಇಬ್ಬರು ವೀರರು ಬಿಲ್ಲು ಬಾಣವನ್ನು ಪ್ರಯೋಗಿಸುತ್ತಿದ್ದಾರೆ. ಈ ವೀರರ ಕೆಳಭಾಗದಲ್ಲಿ ಒಬ್ಬ ವೀರನು ಬಿದ್ದಿದ್ದಾನೆ. ಮೇಲಿನ ಇಬ್ಬರು ಬಿಲ್ಲುವನ್ನು ಹಿಡಿದುಕೊಂಡಿದ್ದಾನೆ. ಎಮ್ಮೆಯ ಮೇಲ್ಭಾಗದಲ್ಲಿ ನೇಗಿಲು ಇದೆ. ಗಂಗಾವತಿ ತಾಲೂಕಿನ ವಿಠಲಾಪುರದಿಂದ ಕರಡಿಗುಡ್ಡಕ್ಕೆ ಹೋಗುವ ಮಾರ್ಗದ ಮಧ್ಯ ಗ್ರಾಮವಾದ ಗೊಲ್ಲಪನ ಮಟ್ಟಿಯಲ್ಲಿ ಒಂದು ತುರುಗೋಳ್ ಶಿಲ್ಪ ದೊರೆಯುತ್ತದೆ. ಈ ಶಿಲ್ಪದಲ್ಲಿ ವೀರನ ಕೈಯಲ್ಲಿ ಕೋಲು ಇದೆ. ಈ ಶಿಲ್ಪದಲ್ಲಿ ಎತ್ತು, ಹಸು, ಒಂದು ಕರುವಿನ ಚಿತ್ರಣವಿದೆ. ವೀರನ ಸೊಂಟದಲ್ಲಿ ಬಾಕುವಿದೆ. ದನಗಳನ್ನು ವಿಶೇಷವಾಗಿ ಅಲಂಕರಿಸಿ ಚಿತ್ರಿಸಲಾಗಿದೆ. ಈ ಪದ್ಧತಿ ಇಂದಿಗೂ ಇಲ್ಲಿ ಮುಂದುವರೆದಿದೆ. ವಿಶೇಷ ಸಂದರ್ಭಗಳಲ್ಲಿ ಹಸುಗಳಿಗೆ ಕೊರಳಲ್ಲಿ ಗಂಟೆ, ಗೊಂಡೇವು, ಕೋಡಂಚು, ಗೆಜ್ಜೆಸರ ಮುಂತಾದವುಗಳಿಂದ ಸಿಂಗರಿಸುವುದನ್ನು ಕಾಣುತ್ತೇವೆ. ಕರುವು ಹಸುವಿನ ಹಾಲನ್ನು ಕುಡಿಯುತ್ತಿರುವುದರ ಚಿತ್ರಣವಿದೆ. ಶಿಲ್ಪದ ಮೇಲ್ಭಾಗದಲ್ಲಿ ಸೂರ್ಯ ಮತ್ತು ಚಂದ್ರನ್ನು ಚಿತ್ರಿಸಿದ್ದಾರೆ. ಈ ಭಾಗದಲ್ಲಿ ಸಂಚರಿಸಿ ದನಗಳನ್ನು ಕುರಿಗಳನ್ನು ಮೇಯಿಸುವವರು ಇದನ್ನು ಆರಾಧಿಸುತ್ತಾರೆ. ವಿಶೇಷವಾಗಿ ಇದನ್ನು ಆರಾಧಿಸುವುದರಿಂದ ಕುರಿಗಳಿಗೆ ದನಗಳಿಗೆ

ಯಾವುದೇ ಪೀಡೆಗಳು ರೋಗ ಋಜಿನಗಳು ಉಂಟಾಗುವುದಿಲ್ಲವೆಂಬ ನಂಬಿಕೆ ಇದೆ.

ಗಂಗಾವತಿ ತಾಲೂಕಿನ ಹಿರೇಮಾದಿನಾಳ ಗ್ರಾಮದ ಹತ್ತಿರ ಈ ಶಿಲ್ಪವು ದೊರೆಯುತ್ತದೆ. ಈ ಶಿಲ್ಪದಲ್ಲಿ ವೀರನು ಬಲಗೈಯನ್ನು ಸೊಂಟದ ಮೇಲೆ ಇಟ್ಟುಕೊಂಡಿದ್ದು, ಎಡಗೈಯನ್ನು ಸತಿಯ ಮೊಣಕೈಯನ್ನು ಹಿಡಿದುಕೊಂಡಿದ್ದಾನೆ. ಸತಿಯು ತಲೆಗೆ ತುರುಬು ಕಟ್ಟಿದ್ದಾಳೆ. ವೀರನ ಪಕ್ಕದಲ್ಲಿ ಸತಿಯು ಬಲಗೈಯನ್ನು ಸೊಂಟಕೆ ಇಟ್ಟುಕೊಂಡಿದ್ದು, ಎಡಗೈಯನ್ನು ಇಳಿಬಿಟ್ಟದಾಳೆ. ಸತಿಯು ತಲೆಯ ತುರುಬುವನ್ನು ಎಡಕ್ಕೆ ಕಟ್ಟಿದ್ದಾಳೆ. ವೀರ ಮತ್ತು ಸತಿಯ ಬಲಗಡೆ ತುರುವನ್ನು ತೋರಿಸಿದ್ದು, ವೀರನು ತುರುವನ್ನು ಸಿಟ್ಟಿನಿಂದ ನೋಡುತ್ತಿರುವಂತೆ ಶಿಲ್ಪಯು ಚಿತ್ರಿಸಿದ್ದಾನೆ. ಇದ್ದರಿಂದ ಈ ತುರು ವೀರನ್ನು ತಿವಿದು ಸಾಯಿಸಿರಬಹುದು ಎಂದು ಊಹಿಸಲು ಸಾಧ್ಯತೆಯಿದೆ.

ಕುಷ್ಟಗಿ ತಾಲೂಕಿನ ಪುರ ಗ್ರಾಮದ ಕೋಟಿ ಶಿವಲಿಂಗ ದೇವಾಲಯದಲ್ಲಿರುವ ತುರುಗೋಳ್ ಶಿಲ್ಪವು. ಮೊದಲನೆಯ ಹಂತದಲ್ಲಿ ಎರಡು ಕುಳಿತ ಎತ್ತುಗಳ ನಡುವೆ ಒಂದು ಚಕ್ಕಡಿಯನ್ನು ಚಕ್ಕಡಿಯ ಬದಿಗಳಲ್ಲಿ ಇಬ್ಬರು ವ್ಯಕ್ತಿಗಳು ಪೀಠದ ಮೇಲೆ ಕುಳಿತಿದ್ದಾರೆ. ಈ ಚಕ್ಕಡಿಯ ಉದ್ದಿಗೆ ಅಡ್ಡದಾಗಿ ದಪ್ಪನೆಯ ನೊಗವನ್ನು ಬಿಗಿಯಲಾಗಿದೆ. ಇದಕ್ಕೆ ಮೂರು ಉದ್ದ ಪಟ್ಟಿಕೆಯ ಈಸುಗಳಿವೆ. ಈ ನೊಗ ಪಟ್ಟಿಕೆಗಳನ್ನು ಭದ್ರವಾಗಿ ಜೋಡಿಸಿರುವುದೂ ಒಂದು ಹಗ್ಗದಿಂದ ಬಿಗಿಯಲಾಗಿದೆ. ಎತ್ತುಗಳು ಎದುರು ಬದುರಾಗಿ ಕುಳಿತುಕೊಂಡಿವೆ. ಇವು ಬಹುಶಃ ಚಕ್ಕಡಿಯನ್ನು ಎಳೆದ ಎತ್ತುಗಳಿರಬೇಕು. ಎರಡನೆಯ ಹಂತದಲ್ಲಿ ಎರಡೂ ಕುಳಿತ ಎತ್ತುಗಳ ಮಧ್ಯ ಒಬ್ಬ ವ್ಯಕ್ತಿ ಕುಳಿತಿದ್ದಾನೆ. ಎತ್ತುಗಳು ಮತ್ತು ವ್ಯಕ್ತಿ ಪೀಠದ ಮೇಲೆ ಕುಳಿತಿರುವರು. ಎರಡು ಎತ್ತಿನ ದೇಹದ ಮೇಲೆ ಲಿಂಗಗಳಿವೆ. ಮಧ್ಯದಲ್ಲಿ ಕುಳಿತ ವ್ಯಕ್ತಿಯು ಲಿಂಗವನ್ನು ಆರಾಧಿಸುತ್ತಿರುವನು. ಮೂರನೆಯ ಹಂತದಲ್ಲಿ ಪೀಠದ ಮೇಲೆ ಒಂದರಲ್ಲಿ ಒಬ್ಬ ವ್ಯಕ್ತಿಯು ಕುದುರೆ ಸವಾರಿ ಮಾಡುವುದನ್ನೂ ಹಾಗೂ ಏಳು ಪೀಠದ ಮೇಲೆ ಏಳು ಲಿಂಗಗಳನ್ನು ಕಂಡರಿಸಲಾಗಿದೆ. ಮಧ್ಯದ ಲಿಂಗವನ್ನು ದೊಡ್ಡದಾಗಿ ತೋರಿಸಿದ್ದಾರೆ. ನಾಲ್ಕನೆಯ ಹಂತದಲ್ಲಿ ಏಕಸಾಲಿನಲ್ಲಿ ಮೂರು ಶಿಖರ ಮಾದರಿಗಳಿವೆ. ಇವುಗಳ ಮಧ್ಯೆ ಇಬ್ಬರು ಕುಬ್ಜ ವ್ಯಕ್ತಿಗಳನ್ನು ಚಿತ್ರಿಸಿದ್ದಾರೆ. ಈ ಶಿಲ್ಪವು ಕ್ರಿ.ಶ. ೧೪ನೆಯ ಶತಮಾನಕ್ಕೆ ಸಂಬಂಧಿಸಿದೆ ಎಂದು ಪರಮಶಿವಮೂರ್ತಿಯವರು[೩೫] ಮತ್ತು ಮನ್ವಚಾರಿಯವರು(ಮೌಖಿಕವಾಗಿ ಚರ್ಚೆಯ ಸಂದರ್ಭದಲ್ಲಿ) ಅಭಿಪ್ರಾಯ ಪಟ್ಟಿದ್ದಾರೆ. ಇದೇ ತಾಲ್ಲೂಕಿನ ಬಲ್ಲುಟಗಿಯ ದುರಗಮ್ಮ ದೇವಾಲಯದ ಎದುರು ವೀರಗಲ್ಲು ಇದ್ದು, ಒಂದು ಹಂತದ್ದಾಗಿದೆ. ಮೂರು ಗೋವುಗಳು ಮತ್ತು ಹೋರಾಡುತ್ತಿರುವ ವೀರನನ್ನು ಚಿತ್ರಿಸಲಾಗಿದೆ.

ಕ್ರಸಂ.	ಗ್ರಾಮ	ತಾಲೂಕು	ಸ್ಥಳ	ಕಾಲ (ಕ್ರಿ.ಶ)
೧.	ಬೂದಗುಂಪ	ಕೊಪ್ಪಳ	ಊರ ಹೊರಗಿನ ಹೊಲ	೧೪ನೇ ಶತಮಾನ
೨.	ಪುರ	ಕುಷ್ಟಗಿ	ಕೋಟಿಲಿಂಗ ದೇವಾಲಯದಲ್ಲಿ	೧೪ನೇ ಶತಮಾನ
೩.	ವಿಠಲಾಪುರ	ಗಂಗಾವತಿ	ಗೊಲ್ಲಪ್ಪನ ಮಟ್ಟಿ	೧೫ನೇ ಶತಮಾನ

೪.	ತಾವರಗೆರೆ	ಕುಷ್ಟಗಿ	ಶಶಿಧರ ಸ್ವಾಮಿ ಪಿ.ಯು ಕಾಲೇಜ್ ಆವರಣದಲ್ಲಿ	೧೫ನೇ ಶತಮಾನ
೫.	ಕೆರೆಹಳ್ಳಿ	ಕೊಪ್ಪಳ	ವೀರಭದ್ರ ದೇವಾಲಯದ ಪಕ್ಕದಲ್ಲಿ	೧೫ನೇ ಶತಮಾನ
೬.	ಬಿಳೆಬಾವಿ	ಕೊಪ್ಪಳ	ಆಂಜನೇಯ ದೇವಾಲಯದ ಹತ್ತಿರ	೧೫ನೇ ಶತಮಾನ
೭.	ಹಿರೇಮಾದಿನಾಳ	ಕೊಪ್ಪಳ	ಊರ ಹೊರಗಿನ ಹೊಲದಲ್ಲಿ	೧೬ನೇ ಶತಮಾನ
೮.	ಬೀಮನೂರು	ಕೊಪ್ಪಳ	ಆಂಜನೇಯ ದೇವಾಲಯದ ಹತ್ತಿರ	೧೬ನೇ ಶತಮಾನ
೯.	ಕಾಟಪುರ	ಗಂಗಾವತಿ	ಕಾಟಪುರ ಕೆರೆಯ ಏರಿಯ ಪಕ್ಕದ ಹೊಲದಲ್ಲಿ	೧೬ನೇ ಶತಮಾನ
೧೦.	ಬಲ್ಲುಟಗಿ	ಕುಷ್ಟಗಿ	ದುರ್ಗಮ್ಮ ದೇವಾಲಯದ ಎದುರು	೧೬ನೇ ಶತಮಾನ

೫.೫ ನಿಸಧಿಗಲ್ಲು

ಸನ್ಯಾಸನ ವಿಧಿಯಿಂದ ಮಡಿದವರ ಸ್ಮಾರಕವಾಗಿ; ವೀರರಿಗೆ ವೀರಗಲ್ಲುಗಳನ್ನು ಸ್ಥಾಪಿಸುತ್ತಿದ್ದಂತೆ ಕೆಲವು ಸ್ಮಾರಕಗಳನ್ನು ನಿಲ್ಲಿಸುತ್ತಿದ್ದರು. ಇವುಗಳನ್ನು ನಿಸಿಧಿಕಲ್ಲುಗಳೆಂದು ಕರೆಯುತ್ತಾರೆ ಇದು **ಸದ್** ಧಾತುವಿನಿಂದ ನಿಷ್ಪತ್ತಿಯಾಗುವ **'ನಿಷತ್ತಿ', 'ನಿಷಾದಿನ್'**, ಪದಗಳಿಗೆ ಕುಳಿತುಕೊಳ್ಳುವಿಕೆ, ವಿಶ್ರಮಿಸುವಿಕೆ ಎಂದು ಅರ್ಥ.[೩೬] ಬೋಧಿಸುವ ಗುರು, ಆಲಿಸುವ ಶಿಷ್ಯ, ಇಬ್ಬರು ಮಧ್ಯ ಪುಸ್ತಕ ಹೊತ್ತ ವ್ಯಾಸಪೀಠ. ಈ ಚಿತ್ರವೇ ಸಾಮಾನ್ಯವಾಗಿ ನಿಸಿಧಿ ಶಿಲೆಗಳ ಶಿಲ್ಪವಾಗಿದೆ.[೩೭] ಇವುಗಳು ಬಸದಿಗಳ ಮುಂದಿನ ಪ್ರತ್ಯೇಕ ಶಿಲಾಫಲಕಗಳಲ್ಲಿ, ಬಸದಿಯ ಕಂಬಗಳ ಮೇಲೆ ಅಥವಾ ಹೊರಗಿನ ಹೊಲಗಳಲ್ಲಿ ನೆಟ್ಟ ಕಲ್ಲುಗಳಲ್ಲಿ ಬಂಡೆಗಳ ಮೇಲೆ ಕಾಣಿಸಿಕೊಳ್ಳುತ್ತವೆ.[೩೮] ನಿಸಿಧಿಶಿಲ್ಪಗಳು ಬಂಡೆಯ ಮೇಲೂ ಕಂಡುಬರುತ್ತವೆ. ಪ್ರಾಚೀನ ಜೈನ ಕೇಂದ್ರಗಳಲ್ಲಿ ಇವು ಸಾಮಾನ್ಯ. ಫಲಕದ ನಿಸಿಧಿಶಿಲ್ಪಗಳಲ್ಲಿ ಇರುವಂತೆಯೇ ಇಲ್ಲಿಯೂ ಶಿಲ್ಪವಿರುತ್ತದೆ. ನಿಂತ ಜಿನ, ಶೃತಪೀಠ, ಮುನಿ, ವ್ರತಧಾರಿಗಳ ಶಿಲ್ಪ ಸಾಮಾನ್ಯವಾಗಿ ಕಂಡು ಬರುತ್ತದೆ.

ಗಂಗಾವತಿ ತಾಲೂಕಿನ ಆನೆಗೊಂದಿಯ ಗವಿರಂಗನಾಥ ದೇವಾಲಯದ ಬಳಿ, ಗಂಗಾವತಿಯ ಬಳಿಯ ಹಿರೇಜಂತಕಲ್ಲು ಬೆಟ್ಟದಲ್ಲಿ ಈ ರೀತಿಯ ಸುಂದರ ಶಿಲ್ಪಗಳಿವೆ. ಆನೆಗೊಂದಿ ಗ್ರಾಮದ ಚಿಂತಾಮಣಿ ಮಠದ ಮುಂದೆ ನದಿಯ ಮಧ್ಯದ ಗುಂಡಿನ ಮೇಲಿನ ಶಾಸನವು[೩೯] ಕ್ರಿ.ಶ. ೧೩೫೭ರ ಕಾಲದ್ದಾಗಿದೆ. ಇದು ಬುಳ್ಳರಾಜನ ಪತ್ನಿ ಕಾಳುಬಾಯಿಯು ಸಮ್ಯಕ್ತ ವೃತ ಪೂರ್ವಕವಾಗಿ ಬಾಲಚಂದ್ರಯೋಗೀಂದ್ರನ ಪಾದ ಕಮಲಗಳಲ್ಲಿ ದೀಕ್ಷೆ ಸ್ವೀಕರಿಸಿ ಮುಡುಪಿದುದನ್ನು ತಿಳಿಸುತ್ತದೆ. ಗವಿರಂಗನಾಥ ದೇವಾಲಯದ ಬಳಿ ರಸ್ತೆಯ ಎಡಕ್ಕೆ ದೊಡ್ಡಗುಂಡಿನ ಮೇಲಿನ ಕ್ರಿ.ಶ.ಸು. ೧೩೭೧ರ ಶಾಸನವು[೪೦] ಮೂಲಸಂಘ ಬಲತ್ಕಾರಗಣದ ಧರ್ಮಭೂಷಣ ಭಟ್ಟಾರಕರ ಪ್ರಿಯ ಶಿಷ್ಯ ಬೂಚಣನು ನಿಸಿಧಿಯಾದುದನ್ನು ತಿಳಿಸುತ್ತದೆ. ಗವಿರಂಗನಾಥ ದೇವಾಲಯಕ್ಕೆ ಹತ್ತುವ ಮೆಟ್ಟಿಲು

ಬಲಬಂಡೆಯಲ್ಲಿರುವ ಶಾಸನವು ಕ್ರಿ.ಶ. ೧೩೬೦ರ ಕಾಲಮಾನದ್ದಾಗಿದ್ದು, ಉಳಿದ ವಿವರಗಳು ನಷ್ಟವಾಗಿದೆ. ಅಲ್ಲೆ ಎರಡನೆಯ ಶಾಸನವು[೪೧] ವ್ಯಕ್ತಿಯೊಬ್ಬ ನಿಸಿಧಿಯಾಗಿದ್ದನ್ನು ದಾಖಲಿಸುತ್ತದೆ. ಅದೇ ಸ್ಥಳದಲ್ಲಿರುವ ಮೂರನೆಯ ಶಾಸನವು[೪೨] ಕ್ರಿ.ಶ. ೧೩೭೫ರ ಕಾಲದ್ದಾಗಿದೆ. ಇದು ಮೂಲಸಂಘ ಬಲಾತಕಾರಗಣದ ಮದನ ಕೀರ್ತಿರವುಳನ ಪ್ರಿಯಶಿಷ್ಯ ಬ್ಯಂನುರ ಚಿಕ್ಕಣನ ಮಗ ನಾಗಪ್ಪ ನಿಸಿಧಿಯಾದದ್ದನ್ನು ತಿಳಿಸುತ್ತದೆ. ಅಲ್ಲಿಯೇ ಇರುವ ನಾಲ್ಕನೆಯ ಶಾಸನವು[೪೩] ಕ್ರಿ.ಶ. ೧೩೬೬ ಕಾಲದ್ದಾಗಿದ್ದು, ಇದು ಮೂಲಸಂಘ ದೇಸಿಗಣದ ನರೇಂದ್ರ ಸೇನನ ಪ್ರಿಯಶಿಷ್ಯ ಹಾನೀಯ ಲಖ್ಖಿಸೆಟ್ಟಿಯ ಮಗ ಗೀಪಿಸೆಟ್ಟಿ ನಿಸಿಧಿಯಾದದ್ದನ್ನು ತಿಳಿಸುತ್ತದೆ. ಹಾಗೆಯೇ ಇಲ್ಲಿಯ ಮತ್ತೊಂದು ಶಾಸನವು[೪೪] ಕ್ರಿ.ಶ. ೧೪೪೯ರ ಕಾಲವನ್ನು ಮಾತ್ರ ಸೂಚಿಸುತ್ತದೆ. ಉಳಿದ ವಿವರಗಳು ಹಾಳಾಗಿವೆ. ಇಲ್ಲಿಯೇ ಇರುವ ಮತ್ತೊಂದು ಶಾಸನವು[೪೫] ಕ್ರಿ.ಶ. ೧೩೭೧ರ ಕಾಲದಾಗಿದ್ದು, ಇದು ಹೊನ್ನಹಟ್ಟಿಯ ಸಯಿತಿಯ ಮಗಳು ಸೊಯಿಸೆಟ್ಟಿಯ ನಿಸಿಧಿಯನ್ನು ತಿಳಿಸುತ್ತದೆ. ಈ ಶಾಸನಗಳ ಪಕ್ಕದಲ್ಲಿ ನಾಲ್ಕು ನಿಸಧಿ ಶಿಲ್ಪಗಳಿವೆ. ಇವುಗಳಲ್ಲಿ ಜಿನನು ಪೀಠದ ಮೇಲೆ ನಿಂತುಕೊಂಡಿದ್ದು, ಜಿನನ ಬಲಭಾಗದಲ್ಲಿ ಭಕ್ತನು ಎಡಭಾಗದಲ್ಲಿ ಸ್ತ್ರೀಯೊಬ್ಬಳು ಕೈಮುಗಿದು ಕುಳಿತಿದ್ದು, ಇಬ್ಬರು ಜಿನನನ್ನು ಪೂಜಿಸುತ್ತಿರುವುದನ್ನು ಕಾಣುತ್ತೇವೆ. ಆನೆಗೊಂದಿ ಉತ್ತರಕ್ಕೆ ೬೪ ಕಂಬಗಳ ಮಂಟಪದ ಈಶಾನ್ಯಕ್ಕಿರುವ ಬಂಡೆಯಲ್ಲಿರುವ ಕ್ರಿ.ಶ. ೧೩೨೫ರ ಶಾಸನವು[೪೬] ಹುಂಗದ ಗೋವಿನ ಸೆಟ್ಟಿಯ ಸೊಸೆ ಸೋವಿಯಕ್ಕನ ನಿಸಿಧಿಯನ್ನು ತಿಳಿಸುತ್ತದೆ. ಇದೇ ತಾಲೂಕಿನ ಹಿರೇಜಂತಗಲ್ಲ ಬೆಟ್ಟದ ವೀರಭದ್ರ ದೇವಾಲಯಕ್ಕೆ ಹೋಗುವ ಮೆಟ್ಟಲುಗಳ ಹಾದಿಯಲ್ಲಿ ಎದುರಿನ ಬಂಡೆಯ ಮೇಲೆ ಶಾಸನ ಇದೆ. ಶಿಲ್ಪಭಾಗದಲ್ಲಿ ಜಿನನ, ಯತಿ, ಮಧ್ಯದಲ್ಲಿ ಗ್ರಂಥ ಹಾಗೂ ಮೂವರು ಭಕ್ತರ ಶಿಲ್ಪಗಳಿವೆ. ಕೆಳಗೆ ನಾಲ್ಕು ಸಾಲಿನ ಬರಹವಿದ್ದು, ಬಹಳಷ್ಟು ನಾಶವಾಗಿದೆ. ಕೊಪ್ಪಳದ ಅಮೃತೇಶ್ವರ ದೇವಾಲಯದ ಹತ್ತಿರ ಬೆಟ್ಟಕ್ಕೆ ನಿಸಧಿಗಲ್ಲುಗಳಿವೆ.

ಅಡಿಟಿಪ್ಪಣಿಗಳು

೧. ಶೇಷಶಾಸ್ತ್ರಿ ಆರ್., ೨೦೦೪, *ಕರ್ನಾಟಕದ ವೀರಗಲ್ಲುಗಳು*, ಪು.೧೩.

೨. ಹಿರೇಮಠ ಬಿ.ಆರ್., ೧೯೭೬, *ವೀರಗಲ್ಲುಗಳು*, ಪು.೪

೩. ಶೇಷಶಾಸ್ತ್ರಿ ಆರ್., ೧೯೮೨, *ಶಾಸನ ಪರಿಚಯ*, ಪು.೬೦-೬೧

೪. ಶೇಷಶಾಸ್ತ್ರಿ ಆರ್., *ಪೂರ್ವೋಕ್ತ*, ಪು.೩೯೨

೫. ಅದೇ, ಪು. ೧೬೮

೬. ಸುಬಾಸ, ೨೦೧೩, *ಕೊಪ್ಪಳ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ* ಪು.೨೯೫

೭ ಶರಣಬಸಪ್ಪ ಕೋಲ್ಕಾರ, ೨೦೧೨, *ವಿಜಯನಗರ ಪರಿಸರ*, ಪು. ೨೭೪, ಮತ್ತು ಕ್ಷೇತ್ರಕಾರ್ಯದಿಂದ ಸಂಗ್ರಹಿಸಿದ ಮಾಹಿತಿ

೮. ಅದೇ, ಪು.೨೭೪ ಮತ್ತು ಕ್ಷೇತ್ರಕಾರ್ಯದಿಂದ ಸಂಗ್ರಹಿಸಿದ ಮಾಹಿತಿ

೯. ಅದೇ, ಪು.೨೭೩, ಮತ್ತು ಕ್ಷೇತ್ರಕಾರ್ಯದಿಂದ ಸಂಗ್ರಹಿಸಿದ ಮಾಹಿತಿ

೧೦. ಸೋಮಶೇಖರ್ ಎಸ್. ವೈ., ೨೦೦೯, *ವಿಜಯನಗರ ಕಾಲದ ಸೈನ್ಯವ್ಯವಸ್ಥೆ ಮತ್ತು ಯುದ್ಧನೀತಿ,* ಪು.೫೯

೧೧. ಕೃಷ್ಣಶರ್ಮ ಬೆಟಗೇರಿ, ೧೯೮೩, *ಕರ್ನಾಟಕ ಜನಜೀವನ,* ಪು.೨೮ ಮತ್ತು *ಕನ್ನಡ ಕಾವ್ಯಗಳಲ್ಲಿ ಸಮರ ಚಿತ್ರಗಳು,* ಪು.೧೦೭

೧೨. ಚಿದಾನಂದಮೂರ್ತಿ ಎಂ., ೨೦೧೧, *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ,* ಪು. ೩೧೦

೧೩. ನಾಗೇಗೌಡ ಎಚ್.ಎಲ್., ೧೯೬೬, *ಪ್ರವಾಸಿ ಕಂಡ ಇಂಡಿಯಾ, ಸಂಪುಟ–೨*

೧೪. ಸೋಮಶೇಖರ್ ಎಸ್.ವೈ., *ಪೂರ್ವೋಕ್ತ,* ಪು.೧೫೫

೧೫. ಪರಮಶಿವಮೂರ್ತಿ ಡಿ.ವಿ., *ಪೂರ್ವೋಕ್ತ,* ಪು.೨೧೯

೧೬. ಶೇಷಶಾಸ್ತ್ರಿ ಆರ್., *ಪೂರ್ವೋಕ್ತ* , ಪು.೨೨೬

೧೭. ಶರಣಬಸಪ್ಪ ಕೋಲ್ಕಾರ, *ಪೂರ್ವೋಕ್ತ,* ಪು.೨೭೫, ಮತ್ತು ಕ್ಷೇತ್ರಕಾರ್ಯದಿಂದ ಸಂಗ್ರಹಿಸಿದ ಮಾಹಿತಿ

೧೮. ಸುಗಂಧಾ., ೧೯೮೬, ***History and Archeology of Anegundi,*** ಪು.೨೮೨

೧೯. ಕಲಬುರ್ಗಿ ಎಂ.ಎಂ., ೧೯೮೦, *ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು,* ಪು.೨೮

೨೦. ಅದೇ, ಪು.೩೮

೨೧ ಪಾಟೀಲ ಬಿ. ಸಿ., ೧೯೯೮, *ಕೊಪ್ಪಳ : ಸಾಂಸ್ಕೃತಿಕ ಪರಂಪರೆ,* ಪು.೩೩–೩೫

೨೨. ಸೋಮಶೇಖರ್ ಎಸ್.ವೈ., *ಪೂರ್ವೋಕ್ತ,* ಪು.೩೮

೨೩. ಶರಣಬಸಪ್ಪ ಕೋಲ್ಕಾರ, *ಹಿರೇಜಂತಗಲ್ ಇತಿಹಾಸ – ವಾಸ್ತುಶಿಲ್ಪ ಕಲೆ,* ಪು.೨೬

೨೪. ಪರಮಶಿವಮೂರ್ತಿ ಡಿ. ವಿ., *ಪೂರ್ವೋಕ್ತ,* ಪು.೧೦೨

೨೫. ಶೇಷಶಾಸ್ತ್ರಿ ಆರ್., *ಪೂರ್ವೋಕ್ತ,* ಪು.೨೫

೨೬. ಪರಮಶಿವಮೂರ್ತಿ ಡಿ.ವಿ., *ಪೂರ್ವೋಕ್ತ,* ಪು. ೯೭ ಮತ್ತು ಶೇಷಶಾಸ್ತ್ರಿ ಆರ್., *ಪೂರ್ವೋಕ್ತ,* ಪು.೬೩

೨೭. ಪರಮಶಿವಮೂರ್ತಿ ಡಿ.ವಿ., *ಪೂರ್ವೋಕ್ತ,* ಪು.೧೦೨

೨೮. ಗೀತಾ ಪೋಲಿಸ ಪಾಟೀಲ್, ೨೦೧೫, *ಕೊಪ್ಪಳ ಪ್ರದೇಶದ ವಿಜಯನಗರ ಕಾಲದ ಶಿಲ್ಪಗಳು,* ಇತಿಹಾಸ ದರ್ಶನ ಸಂ.೩೧ , ಪು.೨೫೧

೨೯. ಚಿದಾನಂದಮೂರ್ತಿ ಎಂ., *ಪೂರ್ವೋಕ್ತ,* ಪು.೨೯೨ ಮತ್ತು ಪರಮಶಿವಮೂರ್ತಿ ಡಿ.ವಿ., ಅದೇ, ಪು.೧೦೪

೩೦. ರನ್ನ, *ಸಾಹಸಭೀಮ ವಿಜಯಂ,* ಪು.೩೫

೩೧. ಕಲಬುರ್ಗಿ ಎಂ.ಎಂ., ***ಪೂರ್ವೋಕ್ತ,*** ಪು.೭೬

೩೨. ಪರಮಶಿವಮೂರ್ತಿ ಡಿ.ವಿ., ೨೦೧೧, ***ತುರುಗೋಳ್ ಸಂಕಥನ,*** ಪು.೩೦-೩೩

೩೩. ಪ್ರಜಾವಾಣಿ, ೩ನೇ ಆಗಸ್ಟ್ ೧೯೯೮, ***ಜಿಲ್ಲಾ ಸುದ್ದಿ ಸೊಗಡು*** ಮತ್ತು ಸಂಯುಕ್ತ ಕರ್ನಾಟಕ, ೨೩.೦೭.೧೯೯೮

೩೪. ವಾಸುದೇವ ಬಡಿಗೇರ, ೧೯೯೮, ***ಬಳ್ಳಾರಿ-ಕೊಪ್ಪಳ ಜಿಲ್ಲಾಗಳ ಕೆಲವು ಪುರಾತತ್ವ ಅವಶೇಷಗಳು,*** ಇತಿಹಾಸ ದರ್ಶನ ಸಂ.೧೩, ಪು.೧೯

೩೫. ಪರಮಶಿವಮೂರ್ತಿ ಡಿ.ವಿ., ***ಪೂರ್ವೋಕ್ತ,*** (ಪುರದ ತುರುಗೋಳ್ ಶಿಲ್ಪದ ಛಾಯಚಿತ್ರ ಕೆಳಭಾಗದಲ್ಲಿ ೧೪ನೆಯ ಶತಮಾನದ ಶಿಲ್ಪವೆಂದು ಗುರುತಿಸಿದ್ದಾರೆ.)

೩೬. ಕಲಬುರ್ಗಿ ಎಂ.ಎಂ., ***ಪೂರ್ವೋಕ್ತ,*** ಪು.೧೦

೩೭. ಅದೇ, ಪು.೧೫

೩೮. ಚಿದಾನಂದಮೂರ್ತಿ, ಎಂ.ಎಂ., ***ಪೂರ್ವೋಕ್ತ,*** ಪು.೯೮

೩೯. ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ-೨, ಗಂಗಾವತಿ ತಾ. ***ಆನೆಗೊಂದಿ***, ಶಾ.ಸಂ-೩೪

೪೦. ಅದೇ, ***ಆನೆಗೊಂದಿ,*** ಶಾ.ಸಂ-೪೬

೪೧. ಅದೇ, ***ಆನೆಗೊಂದಿ,*** ಶಾ.ಸಂ-೪೭

೪೨. ಅದೇ, ***ಆನೆಗೊಂದಿ,*** ಶಾ.ಸಂ-೪೮

೪೩. ಅದೇ, ***ಆನೆಗೊಂದಿ,*** ಶಾ.ಸಂ-೪೯

೪೪. ಅದೇ, ***ಆನೆಗೊಂದಿ,*** ಶಾ.ಸಂ- ೫೩

೪೫. ಅದೇ, ***ಆನೆಗೊಂದಿ,*** ಶಾ.ಸಂ-೫೧

೪೬. ಅದೇ, ***ಆನೆಗೊಂದಿ***, ಶಾ.ಸಂ-೫೮

ಅಧ್ಯಾಯ : ಆರು

ನೀರಾವರಿ ವ್ಯವಸ್ಥೆ

======================

೬.೧ ಆಣೆಕಟ್ಟು ಮತ್ತು ಕಾಲುವೆಗಳು

೬.೨. ಕೆರೆಗಳು

೬.೩. ಬಾವಿಗಳು

ಅಧ್ಯಾಯ : ಆರು
ನೀರಾವರಿ ವ್ಯವಸ್ಥೆ

ನೀರು ಮಾನವನ ಮೂಲಭೂತ ಅವಶ್ಯಕತೆಗಳಲ್ಲಿ ಒಂದು. ನೀರಿಲ್ಲದೆ ಮನುಷ್ಯನಷ್ಟೆ ಏಕೆ, ಇಡೀ ಜೀವ ಸಂಕುಲ ಬದುಕಲಾರದು. ಹಾಗಾಗಿ ನೀರು ಭೂಮಿಯ ಮೇಲಿನ ಅತ್ಯಮೂಲ್ಯ ಸಂಪನ್ಮೂಲ.[೧] ಪ್ರಪಂಚದಲ್ಲಿರುವ ಕೋಟ್ಯಂತರ ಜೀವರಾಶಿಗಳು, ಪ್ರಾಣಿಗಳು ನೀರಿನಿಂದಲೆ ಉಗಮ ಮತ್ತು ವಿಕಾಸವನ್ನು ಹೊಂದಿವೆ. ಉಗಮ ಮತ್ತು ವಿಕಾಸದಲ್ಲಿ ನೀರಿನ ಪಾತ್ರ ಪ್ರಮುಖವಾದುದಾಗಿದೆ. ಪ್ರಾಗಿತಿಹಾಸ ಕಾಲದ ಮಾನವ ಅಲೆಮಾರಿಯಾಗಿದ್ದು ಆತನ ಎಲ್ಲಾ ಬಗೆಯ ಕಾರ್ಯಚಟುವಟಿಕೆಗಳ ಕಾರ್ಯ ಕ್ಷೇತ್ರವು ಸರೋವರ, ನದಿ, ಕೆರೆ, ತೊರೆಗಳ ಸಮೀಪದಲ್ಲಿಯೇ ಕೇಂದ್ರಿಕೃತವಾಗಿತ್ತು.[೨] ಕೆರೆ ಕಟ್ಟೆಗಳು ಭಾರತೀಯ ಪರಂಪರೆಯಲ್ಲಿ ಮಾನವ ಜೀವನದ ಅವಿಭಾಜ್ಯ ಅಂಗಗಳಾಗಿ ಅತಿ ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದಿದೆ. ಪ್ರಾಚೀನ ಮಾನವನು ತನ್ನ ನೀರಿನ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಮಳೆಯ ನೀರನ್ನು ಸಂಗ್ರಹಿಸುವ, ನದಿಯ ಪ್ರವಾಹವನ್ನು ಬೇರೆಡೆಗೆ ತಿರುಗಿಸುವ ಪ್ರಯತ್ನಗಳನ್ನು ಮಾಡಿದ್ದಾನೆ. ಅದರಿಂದ ಬೇಸಾಯವನ್ನು ಮಾಡುವುದಲ್ಲದೆ. ತನ್ನ ವಸತಿಯ ಬೆಳವಣಿಗೆಗೆ ಕಾರಣವಾಗಿಸಿಕೊಂಡಿದ್ದಾನೆ. ಸ್ಮಾರಕಗಳ ನಿರ್ಮಾಣದಲ್ಲಿ ಕೆರೆಯನ್ನು ಕಟ್ಟಿಸುವುದು ಒಂದು ಪ್ರಮುಖ ಕೆಲಸವಾಗಿತ್ತು. ಕೃಷಿ ಪ್ರಧಾನ ಅರ್ಥವ್ಯವಸ್ಥೆಯಲ್ಲಿ ಕೆರೆಗಳು ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತಿದ್ದವು. ರಾಷ್ಟ್ರಕೂಟರಿಂದ ಹೊಯ್ಸಳರವರೆಗಿನ ಅವಧಿಯಲ್ಲಿ ಕೃಷಿಯ ವಿಸ್ತರಣೆ ಕಾಣಿಸಿಕೊಂಡಿದ್ದರಿಂದಾಗಿ ಹೆಚ್ಚೆಚ್ಚು ಕೆರೆಗಳು ನಿರ್ಮಾಣಗೊಂಡವು. ಕೆರೆಯ ನಿರ್ಮಾಣವನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ದಾನವನ್ನು ನೀಡಲಾಗುತಿತ್ತು.[೩]

ವಿಜಯನಗರದ ಅರಸರ ಸಾಧನೆಗಳನ್ನು ತೂಗಿ ನೋಡುವಾಗ ಬಹಳ ಮುಖ್ಯವಾಗಿ ನಮ್ಮ ಗಮನವನ್ನು ಸೆಳೆಯುವ ಅಂಶವೆಂದರೆ ಅವರು ಇತರೆ ರಾಜವಂಶಗಳಿಗಿಂತ ಹೆಚ್ಚಾಗಿ ಕೆರೆ–ಕಟ್ಟೆ, ಕಾಲುವೆ ಮತ್ತು ಬಾವಿಗಳನ್ನು ತೋಡಿಸಿ ಸಾಮಾನ್ಯ ಜನರ ಜೀವನಾವಶ್ಯಕವಾದ ಜಲ ಸಂಪತ್ತನ್ನು ಹೆಚ್ಚಿಸಿದ್ದು. ಎಲ್ಲಿ ಜಲಸಂಪನ್ಮೂಲ ಯಥೇಚ್ಛವಾಗಿರುತ್ತದೊ ಅಲ್ಲಿ ಜನರು ಸಮೃದ್ಧ

ಜೀವನವನ್ನು ಸಾಗಿಸುತ್ತಾರೆಂದು ಇವರು ನಂಬಿದ್ದರು. ಪುರಾತನ ಕಾಲದಿಂದಲೂ ದಾನಗಳಲ್ಲಿ ಉದಕದಾನ ಬಹಳ ಶ್ರೇಷ್ಠವೆಂದು ಜನರ ನಂಬಿಕೆಯಾಗಿದೆ. ಈ ಕಾರಣದಿಂದಲೂ ಕೆರೆ-ಕಾಲುವೆಗಳ ನಿರ್ಮಾಣಕ್ಕೆ ಅರಸರು, ಅಧಿಕಾರಿಗಳು ಮುಂದಾದಾಗ ಸಾಮಾನ್ಯ ಜನರೂ ತಮ್ಮ ತನು-ಮನ-ಧನಗಳ ನೆರವನ್ನು ನೀಡುತ್ತಿದ್ದರು.[೪] ವಿಜಯನಗರದ ಆರಸರು ನೀರಾವರಿಗೆ ತುಂಬಾ ಪ್ರಾಮುಖ್ಯತೆ ನೀಡಿದ್ದರು. ಅದಕ್ಕಾಗಿ ನೀರಾವರಿ ಸಾಧನಗಳಾಗಿ ನದಿಗೆ ಅಣೆಕಟ್ಟುಗಳನ್ನು ನಿರ್ಮಿಸಿ, ಅವಕ್ಕೆ ಕಾಲುವೆಗಳನ್ನು ರಚಿಸಿ ಜಮಿನುಗಳಿಗೆ ನೀರು ಒದಗಿಸುತಿದ್ದರು. ಜೊತೆಗೆ ಬಯಲು ಪ್ರದೇಶಗಳಲ್ಲಿ ಕೆರೆಗಳನ್ನು ನಿರ್ಮಿಸಿದರು, ಬಾವಿಗಳನ್ನು ತೋಡಿಸಿದರು. ವಿಜಯನಗರದ ಲಕ್ಷ್ಮೀಧರಾಮಾತ್ಯನ ಶಾಸನದಲ್ಲಿ "ಕೆರೆಯಂಕಟ್ಟಿಸು ಬಾವಿಯಂ ಸವೆಸು, ದೇವಾಗಾರಂ ಮಾಡಿಸು......" ಎಂದು ಮುಂತಾಗಿದೆ. ಇದರಿಂದ ಕೆರೆಕಟ್ಟಿಸುವುದು ಬಾವಿ ನಿರ್ಮಿಸುವುದು ವಿಜಯನಗರ ಕಾಲದಲ್ಲಿ ಒಂದು ಸಾಮಾಜಿಕ ಹಾಗೂ ನೈತಿಕ ಜವಾಬ್ದಾರಿಯಾಗಿತ್ತೆಂದು ತಿಳಿದು ಬರುತ್ತದೆ. ಹಾಗಾಗಿ ವಿಜಯನಗರದ ಸಾಮ್ರಾಟರು ತಮ್ಮ ಸಾಮ್ರಾಜ್ಯದಾದ್ಯಂತ ಅನೇಕ ಅಣೆಕಟ್ಟು, ಕೆರೆ, ಬಾವಿಗಳನ್ನು ನಿರ್ಮಿಸಿದರು. ಇವುಗಳ ರಚನೆಯು ವಾಸ್ತು ನಿರ್ಮಾಣ ತತ್ವಗಳಿಗನುಗುಣವಾಗಿತ್ತು. ಅಣೆಕಟ್ಟುಗಳಾಗಲಿ, ಕಾಲುವೆಗಳಾಗಲಿ, ಕೆರೆ, ಬಾವಿಗಳಾಗಲಿ ಅವುಗಳನ್ನು ತುಂಬಾ ವ್ಯವಸ್ಥಿತವಾಗಿ ನಿರ್ಮಿಸಲಾಗಿದೆ. ಕೃಷ್ಣದೇವರಾಯನ ಕಾಲದಲ್ಲಿ ಕಟ್ಟಿಸಿದ ರಾಯರ ಕೆರೆಗೆ ಮಳೆ ನೀರಿಲ್ಲದೆ, ಗುಡ್ಡದ ಹೊರಬದಿಯಲ್ಲಿ ನಿರ್ಮಿಸಿ ಕೆರೆಗಳಿಂದ ಮೂರು ಹರಿದಾರಿಯಲ್ಲಿ ನೀರು ಬರುವಂತೆ ನಿರ್ಮಾಣ ಮಾಡಲಾಗಿತ್ತು. ಅವರ ಕಾಲದ ಕೆರೆಯ ರಚನಾ ಕೌಶಲ್ಯಕ್ಕೆ ಇದು ಉತ್ತಮ ಉದಾಹರಣೆಯಾಗಿದೆ. ಕೆರೆಗಳನ್ನು ನಿರ್ಮಿಸುವಾಗ ಅಲ್ಲಿಗೆ ಭೇಟಿ ನೀಡಿದ್ದ ಡೊಮಿಂಗೊ ಪಾಯಸ್ ತಾನು ಕಣ್ಣಾರೆ ಕಂಡ ಕೆರೆ ನಿರ್ಮಾಣದ ವಿವರಗಳನ್ನು ದಾಖಲಿಸಿದಾನೆ. ಕೆರೆ ನಿರ್ಮಾಣಕಾರ್ಯದಲ್ಲಿ ಹದಿನೈದರಿಂದ ಇಪ್ಪತ್ತು ಸಾವಿರ ಕಾರ್ಮಿಕರು ಭಾಗಿಯಾಗಿದ್ದರೆಂದು ಹೇಳುತ್ತಾನೆ.[೫]

ಕೊಪ್ಪಳ ಜಿಲ್ಲಾ ಪ್ರದೇಶದಲ್ಲೂ ವಿಜಯನಗರ ಕಾಲದ ಅನೇಕ ನೀರಾವರಿ ವಾಸ್ತು ಸ್ಮಾರಕಗಳು ಕಂಡು ಬರುತ್ತವೆ. ಜಿಲ್ಲಾ ಪ್ರದೇಶದ ವ್ಯಾಪ್ತಿಯಲ್ಲಿ ತುಂಗಭದ್ರಾ ನದಿಗೆ ಸುಮಾರು ೧೦ ಅಣೆಕಟ್ಟುಗಳನ್ನು, ಅವುಗಳಗೆ ೧೦ ಕಾಲುವೆಗಳನ್ನು, ೪೦ ಕೆರೆಗಳನ್ನು, ೬ ಬಾವಿಗಳನ್ನು ನಿರ್ಮಿಸಿದ್ದಾರೆ. ಈ ನೀರಾವರಿ ವಾಸ್ತು ಸ್ಮಾರಕಗಳಲ್ಲಿ ಕೆಲವು ಪ್ರಮುಖ ಸ್ಮಾರಕಗಳ ವಿವರಗಳನ್ನು ಈ ಕೆಳಗೆ ವಿವರಿಸಲಾಗಿದೆ.

೪.೧ ಅಣೆಕಟ್ಟು ಮತ್ತು ಕಾಲುವೆಗಳು

ಅಣೆ ಎಂದರೆ ನೀರು ಎಂದರ್ಥವಿದೆ. ಕಟ್ಟು ಅಥವಾ ಕಟ್ಟೆ ಎಂದರೆ ಒಡ್ಡು ಎಂಬ ಅರ್ಥವನ್ನು ಕೊಡುತ್ತದೆ. ಹರಿಯುವ ನೀರಿಗೆ ಅಡ್ಡಲಾಗಿ ಕಟ್ಟುವ ಕಟ್ಟೆಯೇ ಅಣೆಕಟ್ಟು ನದಿಗಳಿಗೆ ಅಷ್ಟೇ ಅಲ್ಲದೆ ಹಳ್ಳಗಳಿಗೂ ಸಣ್ಣ ಸಣ್ಣ ಕಟ್ಟೆಗಳನ್ನು ಕಟ್ಟಿ ನೀರನ್ನು ಸಂಗ್ರಹಿಸುತ್ತಿದ್ದರು. ಇವು ನೀರಾವರಿಗಿಂತ ಜಾನುವಾರಗಳಿಗೆ ನೀರು ಕುಡಿಯುವ ಉದ್ದೇಶಕ್ಕಾಗಿ ನಿರ್ಮಿಸಿದಂತಹವು. ಪ್ರಾಚೀನ

ಸಂಗಮ ಸಾಹಿತ್ಯದಲ್ಲಿ ಚೋಳ ರಾಜನಾದ ಕರಿಕಾಲನು ಕ್ರಿ.ಶ. ೧ನೇ ಶತಮಾನದಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಕಟ್ಟೆಯನ್ನು ನಿರ್ಮಾಣ ಮಾಡಿ ಅದರ ನೀರನ್ನು ಕೃಷಿ ಕಾರ್ಯಕ್ಕೆ ಹಾಗೂ ಜನರಿಗೆ ಕುಡಿಯುದಕ್ಕೆ ಉಪಯೋಗಿಸಿದನೆಂದು ಉಲ್ಲೇಖಿಸಲ್ಪಟ್ಟಿದೆ.[6]

ಕೊಪ್ಪಳ ಜಿಲ್ಲಾ ಪ್ರದೇಶದಲ್ಲಿ ತುಂಗಭದ್ರಾ ನದಿಗೆ ವಿಜಯನಗರ ಸಾಮ್ರಾಟರು ಅನೇಕ ಅಣೆಕಟ್ಟುಗಳನ್ನು ನಿರ್ಮಿಸುತ್ತಾರೆ. ಅವುಗಳಲ್ಲಿ ಹುಲಗಿ ಅಣೆಕಟ್ಟು, ಶಿವಪುರ ಅಣೆಕಟ್ಟು(ಕೊಪ್ಪಳ ತಾ.), ಸಣಾಪುರ ಅಣೆಕಟ್ಟು, ಬೆನ್ನೂರು ಅಣೆಕಟ್ಟು, ಚಿಕ್ಕಜಂತಗಲ, ಹಿರೇಜಂತಗಲ ಅಣೆಕಟ್ಟುಗಳು ಇಂದಿಗೂ ಸುಸ್ಥಿತಿಯಲ್ಲಿವೆ. ಈ ಅಣೆಕಟ್ಟುಗಳಲ್ಲಿ ಸಂಗ್ರಹಿಸಿದ ನೀರನ್ನು ಕಾಲುವೆಗಳ ಮೂಲಕ ಗಂಗಾವತಿ ಪರಿಸರ ನೂರಾರು ಜಮೀನುಗಳಿಗೆ ನೀರನ್ನು ಒದಗಿಸಲಾಗುತ್ತಿದೆ. ಈ ಕಾಲುವೆಗಳನ್ನು ವಿಜಯನಗರ ಕಾಲುವೆಗಳೆಂದೆ ಇಂದಿಗೂ ಕರೆಯಲಾಗುತ್ತಿದೆ.

ಹುಲಗಿ ಅಣೆಕಟ್ಟು ಮತ್ತು ಕಾಲುವೆ

ತಂಗಭದ್ರಾ ನದಿಯಲ್ಲಿ ಸುಮಾರು ನಾಲ್ಕು ಸಾವಿರ ಅಡಿಗಳಷ್ಟು ಉದ್ದವಾಗಿ ಈ ಅಣೆಕಟ್ಟನ್ನು ಕಟ್ಟಲಾಗಿದೆ. ಈ ಅಣೆಕಟ್ಟಿಗೆ ನಿರ್ಮಿಸಿರುವ ಕಾಲುವೆಗೆ ಹುಲಗಿ ಕಾಲುವೆ ಎಂದು ಕರೆಯುತ್ತಾರೆ. ಇದು ಸುಮಾರು ಏಳು ಮೈಲಿಗಳ ವರೆಗೆ ಹರಿದು, ಸಮಾರು ೬೫೫ ಎಕರೆ ಜಮೀನಿಗೆ ನೀರು ಒದಗಿಸುವಲ್ಲಿ ಸಫಲವಾಗಿದೆ.[7] ಹುಲಗಿ, ಅಗಳಕೇರಿ ಗ್ರಾಮಗಳ ಜಮೀನಿಗೆ ಇದು ನೀರನ್ನು ಒದಗಿಸುತ್ತದೆ.

ಶಿವಪುರ ಅಣೆಕಟ್ಟು ಮತ್ತು ಕಾಲುವೆ

ಕೊಪ್ಪಳ ತಾಲೂಕಿನ ಶಿವಪುರ ಹತ್ತಿರ ತುಂಗಭದ್ರಾ ನದಿಗೆ ಈ ಅಣೆಕಟ್ಟನ್ನು ನಿರ್ಮಿಸಲಾಗಿದೆ. ಈ ಅಣೆಕಟ್ಟಿನಿಂದ ಹೊರಡುವ ಶಿವಪುರ ಕಾಲುವೆಯು ಸಮಾರು ಒಂಭತ್ತು ಮೈಲುಗಳು ಹರಿಯುತ್ತಾ, ಕೆಲವೆಡೆ ಹುಲಿಗಿ ಕಾಲುವೆಯೊಂದಿಗೆ ಕೂಡಿಕೊಂಡು, ೯೯೭ ಎಕರೆ ಜಮೀನಿಗೆ ನೀರು ಒದಗಿಸುತ್ತದೆ.[8]

ಸಣಾಪುರ ಅಣೆಕಟ್ಟು ಮತ್ತು ಕಾಲುವೆ

ಇದು ಗಂಗಾವತಿ ತಾಲೂಕಿನ ಸಾಣಾಪುರದ ಹತ್ತಿರದ ಎಡದಂಡೆಯ ಅಣ್ಣೆಕಟ್ಟುಗಳಲ್ಲೆಲ್ಲಾ ಬಹು ಮುಖ್ಯವಾದುದಾಗಿದೆ. ಇದನ್ನು ತುಂಗಭದ್ರಾ ನದಿಯ ಶಾಖೆಗೆ ಮಾತ್ರ ಅಡ್ಡವಾಗಿ ಕಟ್ಟಲಾಗಿದೆ. ಇಲ್ಲಿಂದ ಹೊರಡುವ ಕಾಲುವೆಗೆ ಆನೆಗೊಂದಿ ಕಾಲುವೆ ಎಂದು ಕರೆಯುತ್ತಾರೆ. ಇದು ಸುಮಾರು ಹನ್ನೆರಡು ಮೈಲಿಗಳವರೆಗೆ ಹರಿಯುತ್ತಾ ಬೇಸಾಯಕ್ಕಾಗಿ ಜಮೀನುಗಳಿಗೆ ನೀರನ್ನೊದಗಿಸುತ್ತದೆ. ಈ ಕಾಲುವೆಯು ಸುಮಾರು ೨೨೨೦ ಎಕರೆ ಭೂಮಿಗೆ ನೀರನ್ನು ಒದಗಿಸುತ್ತದೆ. ಈ ಕಟ್ಟೆಯು ಸಣಾಪುರ, ವಿರುಪಾಪುರಗಡ್ಡೆ, ಹನುಮನಹಳ್ಳಿ, ಅಂಜನಹಳ್ಳಿ, ಆನೆಗೊಂದಿ, ರಾಮದುರ್ಗಾ, ಬಸವನದುರ್ಗ, ಕೃಷ್ಣಾಪುರ, ಸಂಗಪುರ, ಸಿಂಗನಗೊಂಡು ಮತ್ತು ರಾಜಾಪುರಗಳಿಗೆ ನೀರು ಹೋಗುತ್ತಿತ್ತು.[9]

ಚಿಕ್ಕಜಂತಗಲ್ಲ ಅಣೆಕಟ್ಟು ಮತ್ತು ಕಾಲುವೆ

ಚಿಕ್ಕಜಂತಗಲ್ಲ ಅಣೆಕಟ್ಟು ಹಿರೇಜಂತಗಲ್ಲ ಬಳಿಯ ದೇವಘಾಟ ಹತ್ತಿರ ನಿರ್ಮಿಸಲಾಗಿದೆ. ಈ ಕಟ್ಟೆಯಿಂದ ಹೊರಡುವ ಕಾಲುವೆಯನ್ನು ಕೆಳಮಟ್ಟದ ಕಾಲುವೆ ಎಂದು ಕರೆಯುತ್ತಾರೆ. ಈ

ಕಾಲುವೆಯು ಚಿಕ್ಕಜಂತಗಲ, ಅಯೋಧ್ಯ, ಢಣಾಪುರ ಗ್ರಾಮಗಳ ಜಮೀನುಗಳಿಗೆ ನೀರನ್ನು ಒದಗಿಸುತ್ತದೆ.

ಹಿರೇಜಂತಗಲ ಅಣೆಕಟ್ಟು ಮತ್ತು ಕಾಲುವೆ

ತುಂಗಭದ್ರಾ ನದಿಯ ಬಲದಂಡೆಯ ರಾಮಸಾಗರ ಅಣೆಕಟ್ಟಿನ ಎಡದಂಡೆಯ ಭಾಗವೇ ಇದು. ಈ ಅಣೆಕಟ್ಟೆಗೆ ಮೋತಿಕಟ್ಟೆ ಎಂತಲೂ ಕರೆಯುತ್ತಾರೆ. ಇಲ್ಲಿಂದ ಹೊರಡುವ ಕಾಲುವೆಯನ್ನು ಮೇಲ್ಮಟ್ಟದ ಕಾಲುವೆ ಎಂದು ಕರೆಯುತ್ತಾರೆ. ಈ ಕಾಲುವೆಯು ಹಿರೇಜಂತಗಲ, ವಿಪ್ರ, ಹೊಸಳ್ಳಿ ಹಾಗೂ ಅಚಲಾಪುರ ಗ್ರಾಮಗಳ ಜಮೀನುಗಳಿಗೆ ನೀರನ್ನು ಒದಗಿಸುತ್ತದೆ.

ಬೆನ್ನೂರು ಬಸವನ ಅಣೆಕಟ್ಟು ಮತ್ತು ಕಾಲುವೆ

ಬೆನ್ನೂರು ಗಂಗಾವತಿ ತಾಲೂಕಿನಲ್ಲಿದ್ದು ಗಂಗಾವತಿ–ರಾಯಚೂರ ರಸ್ತೆಯಲ್ಲಿ ಸಿದ್ಧಾಪುರ ಎಂಬ ಗ್ರಾಮವಿದ್ದು, ಅಲ್ಲಿಂದ ಪೂರ್ವಕ್ಕೆ ಸುಮಾರು ೨೨ ಕೀ.ಮೀ. ಈ ಹಳ್ಳಿಯಿಂದ ಪೂರ್ವಕ್ಕೆ ತುಂಗಭದ್ರಾ ನದಿ ಆಚೆ ಬದಿಯ ಸೂಗೂರು(ಶಿರಗುಪ್ಪ ತಾಲೂಕು, ಬಳ್ಳಾರಿ ಜಿಲ್ಲೆ) ಗ್ರಾಮಗಳ ಮಧ್ಯದಲ್ಲಿ ನದಿಗೆ ಈ ಅಣ್ಣೆಕಟ್ಟನ್ನು ನಿರ್ಮಿಸಲಾಗಿದೆ. ಈ ಅಣೆಕಟ್ಟು ಸುಮಾರು ೧೫ ಅಡಿ ಅಗಲವೂ, ಅರ್ಧ ಕಿ.ಮೀ. ಉದ್ದವಾಗಿಯೂ ಇದೆ. ಈ ಅಣೆಕಟ್ಟಿನ ಬಲ ದಂಡೆಯಲ್ಲಿ ಕಾಲುವೆಯನ್ನು ನಿರ್ಮಿಸಲಾಗಿದೆ. ನದಿಯ ದಂಡೆಗುಂಟ ಸಾಗಿರುವ ಕಾಲುವೆಯು ಈಗ ಬಹುಮಟ್ಟಿಗೆ ಮಣ್ಣಿನಿಂದ ಹೂತು ಹೋಗಿದೆ.

ಈ ಅಣೆಕಟ್ಟು ಅಲ್ಲಲ್ಲಿ ಒಡೆದು ಹೋಗಿದ್ದರೂ, ಉಳಿದ ಬಹುಭಾಗ ಭದ್ರವಾಗಿದೆ. ಇದನ್ನು ಕೆಂಚನಗುಡ್ಡದ ರಾಣಿ ತಂಗಮ್ಮ ತಮ್ಮ ಅಣೆಕಟ್ಟಿನಲ್ಲಿ ನೀರು ಸಂಗ್ರಹ ಕಡಿಮೆಯಾದಾಗಲೊಮ್ಮೆ ಒಡೆಸುತ್ತಿದ್ದಳೆಂದು ಸ್ಥಳೀಯರು ಹೇಳುತ್ತಾರೆ. ಈಕೆ ಕೆಂಚನ ಗುಡ್ಡದ ನಾಯಕ ಕೆಂಚೆನಗೌಡ ಸೊಸೆಯಾಗಿದ್ದು, ಗಂಡ ಪಂಪಾಪತಿ ನಾಯಕನ ನಿಧನಾನಂತರ ತಾನೇ ಆಡಳಿತ ನಡೆಸಿದಳು. ಈ ಅಣೆಕಟ್ಟನ್ನು ಪುನಃ ದುರಸ್ತಿಗೊಳಿಸಿ ಎರಡು ಬದಿಯಲ್ಲಿ ಕಾಲುವೆಗಳನ್ನು ನಿರ್ಮಿಸಿದರೆ ಸುತ್ತಲಿನ ಭೂಮಿಗೆ ನೀರಾವರಿ ಸೌಲಭ್ಯ ದೊರೆಯುತ್ತದೆ.[೧೦]

ಕ್ರಸಂ	ಗ್ರಾಮ	ತಾಲೂಕು	ಅಣೆಕಟ್ಟೆ	ಕಾಲಮಾನ
೧.	ಶಿವಪುರ	ಕೊಪ್ಪಳ	ಶಿವಪುರ ಅಣೆಕಟ್ಟು	೧೬ನೇ ಶತಮಾನ
೨.	ಸಣಾಪುರ	ಕೊಪ್ಪಳ	ಸಣಾಪುರ ಅಣೆಕಟ್ಟು	೧೬ನೇ ಶತಮಾನ
೩.	ಹುಲಿಗಿ	ಕೊಪ್ಪಳ	ಹುಲಿಗಿ ಅಣೆಕಟ್ಟು	೧೬ನೇ ಶತಮಾನ
೪.	ಕೋರಗಲ್ಲು	ಕೊಪ್ಪಳ	ಕೋರಗಲ್ಲು ಅಣೆಕಟ್ಟು	೧೬ನೇ ಶತಮಾನ
೫.	ಹಿರೇಜಂತಗಲ್ಲು	ಗಂಗಾವತಿ	ಹಿರೇಜಂತಗಲ್ಲು ಅಣೆಕಟ್ಟು	೧೬ನೇ ಶತಮಾನ
೬.	ಚಿಕ್ಕಜಂತಗಲ್ಲು	ಗಂಗಾವತಿ	ಚಿಕ್ಕಜಂತಗಲ್ಲು ಅಣೆಕಟ್ಟು	೧೬ನೇ ಶತಮಾನ
೭.	ಬೆನ್ನೂರು	ಗಂಗಾವತಿ	ಬಸವಣ್ಣ ಅಣೆಕಟ್ಟು	೧೬ನೇ ಶತಮಾನ

೫.೨ ಕೆರೆಗಳು

ಕೆರೆಗಳೆಂದರೆ ಜಲ ಸಂಗ್ರಾಹಾಗಾರಗಳು ಸಣ್ಣ ತೊರೆಯಂತಿರುವ ಹಳ್ಳಗಳನ್ನ ಆಧರಿಸಿ ಕೆರೆಗಳನ್ನ ನಿರ್ಮಿಸಲಾಗುತ್ತದೆ. ನೇರವಾಗಿಯೋ ಅಥವಾ ಅರೇ ವೃತ್ತಾಕಾರವಾಗಿಯೋ ಏರಿ(ಒಡ್ಡುಗಳನ್ನು) ನಿರ್ಮಿಸಿ ಕೆರೆಗಳನ್ನು ಮಾಡಲಾಗಿರುತ್ತದೆ. ಕೆಲವು ಸಲ ಬೆಟ್ಟ-ಗುಡ್ಡಗಳಿಂದ ಹರಿದು ಬರುವ ಮಳೆ ನೀರನ್ನು ಬಯಲು ಪ್ರದೇಶದಲ್ಲಿ ತಗ್ಗಾದ ಜಾಗದಲ್ಲಿ ನಿಲ್ಲುವಂತೆ ಮಾಡಿ ಒಡ್ಡು ಹಾಕಿ ಕೆರೆಗಳನ್ನು ನಿರ್ಮಿಸಲಾಗಿರುತ್ತದೆ.

ಕೆರೆಗಳು ಆಯಾ ಊರಿನ ಜಲ ಮೂಲಗಳಾಗಿರುತ್ತವೆ. ಊರಿನ ಬಳಕೆಯ ಅವಶ್ಯಕತೆಗೆ ಬೇಕಾಗುವ ನೀರಿನ ಪ್ರಮಾಣವನ್ನು ಅವಲಂಬಿಸಿ ಕೆರೆಗಳ ನಿರ್ಮಾಣ ಮಾಡಲಾಗುತ್ತದೆ. ಜನ ಬಳಕೆಯ ಅವಶ್ಯಕತೆಯನ್ನು ಪೂರೈಸಿದ ಮೇಲೆ ನೀರನ್ನು ಹೊಲಗದ್ದೆಗಳಿಗೆ ಬಳಸಿಕೊಳ್ಳಲಾಗುತ್ತದೆ. ಕೆಲವೆಡೆ ಮೀನುಗಾರಿಕೆಯಂತಹ ಚಟುವಟಿಕೆಗಳು ನಡೆಯುತ್ತವೆ. ಕೆರೆಗಳು ಆಯಾ ಊರಿನ ನೀರಿನ ಅವಶ್ಯಕತೆಗಳನ್ನು ಪೂರೈಸುವದರೊಂದಿಗೆ ಆ ಊರಿನ ಅಂತರ್ಜಲವನ್ನು ಹೆಚ್ಚಿಸುವ ಉದ್ದೇಶವು ಹೊಂದಿರುತ್ತದೆ.

ಪ್ರಾಗಿತಿಹಾಸ ಕಾಲದಿಂದಲೂ ಮಾನವನು ತನ್ನ ಜೀವನ ನಿರ್ವಹಣೆಗಾಗಿ ಕೆರೆಗಳನ್ನು ನಿರ್ಮಿಸಿಕೊಳ್ಳುತ್ತ ಬಂದಿದ್ದಾನೆ. ಚಾರಿತ್ರಿಕ ಕಾಲದಲ್ಲಿ ಕೆರೆಗಳ ನಿರ್ಮಾಣ ತುಂಬಾ ಪ್ರಾಮುಖ್ಯತೆಯನ್ನು ಪಡೆದುಕೊಂಡಿತು. ಕೆರೆಗಳನ್ನು ನಿರ್ಮಿಸುವುದು ಕೂಡ ಒಂದು ತಾಂತ್ರಿಕ ಕಲೆ. ಜಲ ಮೂಲ, ನೀರಿನ ಸಂಗ್ರಹ, ಪ್ರದೇಶದ ಮಣ್ಣಿನ ಗುಣಧರ್ಮ ಈ ಮುಂತಾದ ಸಂಗತಿಗಳನ್ನು ಅಗತ್ಯವಾಗಿ ಗಮನಿಸಿ ಕೆರೆಗಳನ್ನು ನಿರ್ಮಿಸಬೇಕಾಗುತ್ತದೆ. ಕೆರೆಗಳ ನಿರ್ಮಾಣಕಾರ್ಯದಲ್ಲಿ ಏಳು ವಿಧದ ರಚನೆಗಳಿರುತ್ತವೆ. ಅವುಗಳೆಂದರೆ, ಒಡ್ಡು(ಏರಿ) ನಿರ್ಮಾಣ, ತೂಬುಗಳು, ಕಾಲುವೆಗಳು, ಕೋಡಿ, ಕೆರೆಯ ಅಂಗಳ ಪ್ರದೇಶ, ಅಚ್ಚುಕಟ್ಟು ಪ್ರದೇಶ, ಜಲಾನಯನ ಪ್ರದೇಶ.[೧೧]

ವಿಜಯನಗರ ಕಾಲದ ಹಲವು ಶಾಸನಗಳಲ್ಲಿ ಕೆರೆ ನಿರ್ಮಾಣಕ್ಕೆ ಸಂಬಂಧಿಸಿದ ಹಲವು ಮಾಹಿತಿಗಳು ದೊರೆಯುತ್ತವೆ. ಕೆರೆಗಳನ್ನು ನಿರ್ಮಿಸಲು ಉಪ್ಪಾರ ಎಂಬ ಜನಾಂಗ ತಮ್ಮನ್ನು ತೊಡಗಿಸಿಕೊಂಡಿದ್ದಾರೆಂಬ ಮಾಹಿತಿ ಶಾಸನದಲ್ಲಿದೆ.[೧೨] ಕೊಪ್ಪಳ ಜಿಲ್ಲಾ ಪ್ರದೇಶದಲ್ಲಿ ಸಂಗಮ ಅರಸರ ಕಾಲದಿಂದಲೂ ಕೆರೆಗಳು ನಿರ್ಮಾಣವಾಗಿರುವುದನ್ನು ಕಾಣಬಹುದು. ವಿಶೇಷವಾಗಿ ವೆಂಕಟಗಿರಿ(ಗಂಗಾವತಿ), ತಾವರಗೇರೆ(ಕುಷ್ಟಗಿ)ಯ ಕೆರೆಗಳನ್ನು ರಾಯರ ಕೆರೆಗಳೆಂದು ಕರೆಯಲಾಗುತ್ತದೆ. ಜಿಲ್ಲೆಯ ವಿಜಯನಗರ ಕಾಲದ ಪ್ರಮುಖ ಕೆರೆಗಳ ವಿವರಗಳನ್ನು ಕೆಳಕಂಡಂತೆ ಗಮನಿಸಲಾಗಿದೆ.

ಅಗಳಕೆರೆ

ಅಗಳಕೆರೆ ಗ್ರಾಮದಲ್ಲಿ ಒಂದು ಕೆರೆಯಿದ್ದು. ಇದನ್ನು ಆ ಗ್ರಾಮದ ಹೆಸರಿನಿಂದ ಕರೆಯಲಾಗುತ್ತಿದೆ. ಈ ಕೆರೆಯನ್ನು ಯಾರು ನಿರ್ಮಿಸಿದರು ಎಂಬುದರ ಬಗ್ಗೆ ಮಾಹಿತಿಯು

ದೊರೆಯುವುದಿಲ್ಲ. ಈ ಕೆರೆ ಸುಮಾರು ೩೦೦ ಎಕರೆಯಷ್ಟು ವಿಸ್ತೀರ್ಣ ಹೊಂದಿದೆ. ಪ್ರಸ್ತುತ ಈ ಕೆರೆಯಲ್ಲಿ ಜಲಸಂಗ್ರಹವಿಲ್ಲದೆ ಅದನ್ನು ಕೃಷಿ ಭೂಮಿಯಾಗಿ ಪರಿವರ್ತಿಸಿ ತುಂಗಭದ್ರಾ ನೀರನ್ನು ಬಳಸಿ ಭತ್ತವನ್ನು ಬೆಳೆಯುತ್ತಾರೆ. ಕೆರೆಯ ಏರಿ ಪಶ್ಚಿಮ ದಿಕ್ಕಿಗೆ ಇದೆ. ಕೆರೆಯ ಏರಿಯು ಸುಮಾರು ೭ ಅಡಿ ಎತ್ತರ, ೪ ಅಡಿ ಅಗಲ ಇದೆ. ಈ ಏರಿಯನ್ನು ಕೆಳಭಾಗದಲ್ಲಿ ದೊಡ್ಡ ಗುಂಡು ಕಲ್ಲುಗಳು ಮತ್ತು ಅದರ ಮೇಲ್ಭಾಗದಲ್ಲಿ ಮಣ್ಣಿನಿಂದ ನಿರ್ಮಿಸಿದ್ದಾರೆ.

ತೂಬುಗಳನ್ನು ಸಾಮಾನ್ಯವಾಗಿ ಕಲ್ಲಿನಿಂದ ರಚಿಸಿದ್ದು, ಇದು ಕೆರೆಯ ಏರಿಯ ಮಧ್ಯಭಾಗದಲ್ಲಿ ತೂಬು ಇದೆ. ತೂಬನ್ನು ನಾಲ್ಕು ಕಂಬಗಳಿಂದ ಕೂಡಿದೆ. ಎರಡು ಕಂಬಗಳ ನಡುವಿನಲ್ಲಿ ಒಂದು ಅಡ್ಡ ಕಲ್ಲನ್ನು ಇರಿಸಲಾಗುತ್ತದೆ. ಈ ಎರಡು ಅಡ್ಡಗಲ್ಲುಗಳ ನಡುವೆ ಎರಡು ರಂಧ್ರಗಳಿವೆ. ಈ ನಾಲ್ಕು ಕಂಬಗಳನ್ನು ಆವರಿಸಿದಂತೆ ಛತ್ತು ಇದೆ. ಹೀಗೆ ನಾಲ್ಕು ಕಂಬಗಳನ್ನು ಹೊಂದಿದ್ದರಿಂದ ಈ ತೂಬು ಮಂಟಪದಂತೆ ಗೋಚರಿಸುತ್ತದೆ. ಈ ದೃಷ್ಟಿಯಿಂದ ಇದನ್ನು ವಿಶೇಷ ರಚನೆ ಎಂದು ಗುರುತಿಸಬಹುದು. ತೂಬಿನ ಮೇಲ್ಭಾಗದಲ್ಲಿರುವ ಕಲ್ಲಿನ ಮೇಲೆ ಗಜಲಕ್ಷ್ಮಿಯ ಉಬ್ಬು ಶಿಲ್ಪವಿದೆ.

ತಿಪ್ಪನಾಳ ಕೆರೆ

ತಿಪ್ಪನಾಳ ದುರ್ಗಮ್ಮ ದೇವಾಲಯ ಪಕ್ಕದಲ್ಲಿ ಕೆರೆಯಿದ್ದು, ಇದನ್ನು ಆ ಗ್ರಾಮದ ಹೆಸರಿನಿಂದ ಕರೆಯಲಾಗಿದೆ. ಈ ಕೆರೆ ಸುಮಾರು ೧೦೦ ಎಕರೆ ವಿಸ್ತೀರ್ಣವನ್ನು ಹೊಂದಿದೆ. ಪ್ರಸ್ತುತ ಈ ಕೆರೆಯಲ್ಲಿ ಜಲಸಂಗ್ರಹವಿಲ್ಲದೆ ಅದನ್ನು ಕೃಷಿಭೂಮಿಯಾಗಿ ಪರಿವರ್ತಿಸಿದ್ದಾರೆ. ಕೆರೆಯ ಏರಿಯು ಸುಮಾರು ೬ ಅಡಿ ಎತ್ತರ, ೪ ಅಡಿ ಅಗಲ ಇದೆ. ಏರಿಯನ್ನು ಕಲ್ಲು ಮತ್ತು ಮಣ್ಣಿನಿಂದ ನಿರ್ಮಿಸಿದ್ದಾರೆ. ಕೆರೆಯ ಏರಿಯ ಮಧ್ಯಭಾಗದಲ್ಲಿ ತೂಬು ಇದೆ. ತೂಬು ಎರಡು ಕಂಬಗಳಿಂದ ಕೂಡಿದೆ. ಎರಡು ಕಂಬಗಳ ನಡುವೆ ಒಂದು ಅಡ್ಡ ಕಲ್ಲನ್ನು ಇರಿಸಲಾಗಿದೆ. ಈ ಅಡ್ಡಗಲ್ಲುಗಳ ನಡುವೆ ಎರಡು ರಂಧ್ರಗಳಿವೆ. ತೂಬಿನ ಮೇಲ್ಭಾಗದಲ್ಲಿರುವ ಕಲ್ಲಿನ ಮೇಲೆ ಗಜಲಕ್ಷ್ಮಿ ಶಿಲ್ಪವಿದೆ.

ಕುಟುಗನಹಳ್ಳಿಕೆರೆ

ಕುಟುಗನಹಳ್ಳಿಯಿಂದ ಬೀಮನೂರಿಗೆ ಹೋಗುವ ಮಾರ್ಗದಲ್ಲಿ ಈ ಕೆರೆಯಿದ್ದು. ಇದನ್ನು ಆ ಗ್ರಾಮದ ಹೆಸರಿನಿಂದ ಕರೆಯಲಾಗುತ್ತಿದೆ. ಈ ಕೆರೆಯನ್ನು ಯಾರು ನಿರ್ಮಿಸಿದರು ಎಂಬುದರ ಬಗ್ಗೆ ಮಾಹಿತಿ ದೊರೆಯುವುದಿಲ್ಲ. ಈ ಕೆರೆ ಸುಮಾರು ೧೨೦ ಎಕರೆಯಷ್ಟು ವಿಸ್ತೀರ್ಣ ಹೊಂದಿದೆ. ಕೆರೆಯ ಏರಿ ಪಶ್ಚಿಮ ದಿಕ್ಕಿಗೆ ಇದೆ. ಏರಿಯು ಗುಂಡುಕಲ್ಲು ಮತ್ತು ಮಣ್ಣಿನಿಂದ ನಿರ್ಮಿಸಲಾಗಿದೆ. ಕೆರೆಯ ತೂಬು ಎರಡು ಕಲ್ಲಿನ ಕಂಬಗಳಿಂದ ನಿರ್ಮಿಸಲಾಗಿದೆ. ಎರಡು ಕಂಬಗಳ ನಡುವೆ ಒಂದು ಅಡ್ಡಕಲ್ಲನ್ನು ಇರಿಸಲಾಗಿದೆ. ಈ ಅಡ್ಡಗಲ್ಲುಗಳ ನಡುವೆ ಒಂದು ರಂಧ್ರ ಇದೆ. ತೂಬಿನ ಮೇಲ್ಭಾಗದಲ್ಲಿರುವ ಕಲ್ಲಿನ ಮೇಲೆ ಗಜಲಕ್ಷ್ಮಿಯ ಉಬ್ಬು ಶಿಲ್ಪವಿದೆ.

ಲಕ್ಷ್ಮಿಪುರ ಕೆರೆ

ಲಕ್ಷ್ಮಿಪುರ ಕೆರೆಯು ರಾಂಪುರದಿಂದ ಒಂದು ಕಿ.ಮೀ. ಮತ್ತು ಸಣಾಪುರದಿಂದ ಮೂರು ಕಿ.ಮೀ. ದೂರದಲ್ಲಿದೆ. ಲಕ್ಷ್ಮಿಪುರ ಕೆರೆಯು ಬೃಹತ ಪ್ರಮಾಣದ ಕೆರೆಯಾಗಿದ್ದು, ಸುಮಾರು

೩೦೦ ಎಕರೆ ವಿಸ್ತೀರ್ಣವನ್ನು ಹೊಂದಿದೆ. ಕೆರೆಯ ಏರಿಯು ಸುಮಾರು ೯ ಅಡಿ ಎತ್ತರ, ೬ ಅಡಿ ಅಗಲವಿದೆ. ಈ ಕೆರೆಯ ತೂಬು ಸಹ ದೊಡ್ಡದಿದೆ. ತೂಬು ಎತ್ತರವಾದ ಎರಡು ಕಂಬಗಳಿಂದ ಕೂಡಿದೆ. ಎರಡು ಕಂಬಗಳ ನಡುವೆ ಒಂದು ಅಡ್ಡ ಕಲ್ಲನ್ನು ಇರಿಸಲಾಗಿದೆ. ಪ್ರಸ್ತುತ ಈ ಕೆರೆಯಲ್ಲಿ ಜಲಸಂಗ್ರಹವಿಲ್ಲದೆ ಅದನ್ನು ಕೃಷಿಭೂಮಿಯಾಗಿ ಪರಿವರ್ತಿಸಿದ್ದಾರೆ.

ಹಿರೇಜಂತಗಲ್ಲ ಕೆರೆ

ಗಂಗಾವತಿಯಿಂದ ಆನೆಗೊಂದಿಗೆ ಸಾಗುವ ಮಾರ್ಗದಲ್ಲಿ ಹಿರೇಜಂತಗಲ ಗ್ರಾಮ ಇದೆ. ಹಿರೇಜಂತಗಲ್ಲ ಗ್ರಾಮದಲ್ಲಿ ಪ್ರಸನ್ನ ವಿರುಪಾಕ್ಷ ದೇವಾಲಯ ಇದೆ. ಸದಾಶಿವರಾಯನು ಈ ದೇವಾಲಯಕ್ಕೆ ದಾನ ನೀಡಿದ್ದಾನೆ. ಈ ದೇವಾಲಯ ವಿಜಯನಗರ ಕಾಲದ ದೇವಾಲಯಗಳಲ್ಲಿ ತುಂಬಾ ವಿಶಿಷ್ಟವಾದ ವಾಸ್ತು ರಚನೆ ಎನಿಸಿದೆ. ಹೀಗೆ ದೇವಾಲಯದೊಂದಿಗೆ ಕೆರೆಯನ್ನು ಸಹ ನಿರ್ಮಿಸಿರುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ಈ ಹಿನ್ನೆಲೆಯಲ್ಲಿ ಕೈಗೊಂಡ ಕ್ಷೇತ್ರಕಾರ್ಯದಿಂದ ಹಿರೇಜಂತಗಲ್ಲ ಗ್ರಾಮಕ್ಕೆ ಸಂಬಂಧಿಸಿದ ಆಂಜನೇಯ ದೇವಾಲಯದ ಪಕ್ಕದಲ್ಲಿ ಕೆರೆಯಿದ್ದು, ಇದನ್ನು ಆ ಗ್ರಾಮದ ಹೆಸರಿನಿಂದ ಕರೆಯಲಾಗಿದೆ. ಈ ಕೆರೆ ಸುಮಾರು ೧೫೦ ಎಕರೆ ವಿಸ್ತೀಣವನ್ನು ಹೊಂದಿದೆ. ಪ್ರಸ್ತುತ ಈ ಕೆರೆಯನ್ನು ಜಲಸಂಗ್ರಹವಿಲ್ಲದೆ ಅದನ್ನು ಕೃಷಿ ಭೂಮಿಯಾಗಿ ಪರಿವರ್ತಿಸಿದ್ದಾರೆ. ಕೆರೆಯ ಏರಿಯು ಸುಮಾರು ೬ ಅಡಿ ಎತ್ತರ, ೪ ಅಡಿ ಅಗಲವಿದೆ. ಈ ಕೆರೆಗೆ ತೂಬು ಇದೆ. ತೂಬು ಎರಡು ಕಂಬಗಳಿಂದ ಕೂಡಿದೆ. ಎರಡು ಕಂಬಗಳ ನಡುವೆ ಒಂದು ಅಡ್ಡ ಕಲ್ಲನ್ನು ಇರಿಸಲಾಗಿದೆ. ಈ ಅಡ್ಡಗಲ್ಲಿನ ನಡುವೆ ಎರಡು ರಂಧ್ರಗಳಿವೆ. ತೂಬಿನ ಮೇಲ್ಭಾಗದಲ್ಲಿರುವ ಕಲ್ಲಿನ ಮೇಲೆ ಗಜಲಕ್ಷ್ಮಿ ಶಿಲ್ಪವಿದೆ.

ಕೃಷ್ಣಾಪುರ ಕೆರೆ

ಗಂಗಾವತಿಯಿಂದ ಕೃಷ್ಣಾಪುರ ಗ್ರಾಮಕ್ಕೆ ಹೋಗುವ ಮಾರ್ಗದ ಎಡಬದಿಯಲ್ಲಿ ಕೆರೆಯನ್ನು ಕಾಣುತ್ತೇವೆ. ಈ ಕೆರೆಯ ಏರಿಯು ಕಲ್ಲು ಮಣ್ಣಿನಿಂದ ರಚಿಸಲ್ಪಟ್ಟಿದೆ. ಕೆರೆಯ ಏರಿಯು ಸುಮಾರು ೧೦೦ ಮೀ. ಉದ್ದ, ೮ ಮೀ. ಎತ್ತರ, ೪ ಮೀ. ಅಗಲ ಇದೆ. ಕೆರೆಯು ಒಂದು ತೂಬನ್ನು ಹೊಂದಿದ್ದು, ಎರಡು ಕಲ್ಲುಗಳಿಂದ ಕೂಡಿದೆ. ಈ ಕೆರೆಯು ಇಂದು ಗದ್ದೆಯಾಗಿ ಪರಿವರ್ತನೆಯಾಗಿದೆ.

ದಾಸನಾಳ ಕೆರೆ

ದಾಸನಾಳ ಸೇತುವೆಯಿಂದ ಮಾಣಿಭದ್ರೇಶ್ವರಗೆ ಹೋಗುವ ರಸ್ತೆಯ ಎಡಬದಿಯ, ಕಣಿವೆ ಹನುಮಪ್ಪನ ದೇವಾಲಯದ ಹತ್ತಿರದಲ್ಲಿ ಕೆರೆಯಿದೆ. ಈ ಕೆರೆ ಸುಮಾರು ೯೦ ಎಕರೆ ವಿಸ್ತೀರ್ಣವನ್ನು ಹೊಂದಿದೆ. ಕೆರೆಯ ಏರಿಯು ಸುಮಾರು ೫ ಅಡಿ ಎತ್ತರ, ೩ ಅಡಿ ಅಗಲವಿದೆ. ಈ ಕೆರೆಗೆ ತೂಬು ಇದೆ. ತೂಬು ಎರಡು ಕಂಬಗಳಿಂದ ಕೂಡಿದೆ. ಎರಡು ಕಂಬಗಳ ನಡುವೆ ಒಂದು ಅಡ್ಡ ಕಲ್ಲನ್ನು ಇರಿಸಲಾಗಿದೆ. ಈ ಅಡ್ಡಗಲ್ಲಿನ ನಡುವೆ ಎರಡು ರಂಧ್ರಗಳಿವೆ. ತೂಬಿನ ಮೇಲ್ಭಾಗದಲ್ಲಿರುವ ಕಲ್ಲಿನ ಮೇಲೆ ಗಜಲಕ್ಷ್ಮಿ ಶಿಲ್ಪವಿದೆ.

ಮಲ್ಲಾಪುರ ಕೆರೆ

ಮಲ್ಲಾಪುರ ಬೆಟ್ಟದ ದುರ್ಗಮ್ಮ ದೇವಾಲಯ ಪಕ್ಕದಲ್ಲಿ ಕೆರೆಯಿದ್ದು, ಇದನ್ನು ಆ ಗ್ರಾಮದ ಹೆಸರಿನಿಂದ ಕರೆಯಲಾಗಿದೆ. ಈ ಕೆರೆ ಸುಮಾರು ೧೫೦ ಎಕರೆ ವಿಸ್ತೀರ್ಣವನ್ನು ಹೊಂದಿದೆ. ಕೆರೆಯ ಏರಿಯು ಸುಮಾರು ೬ ಅಡಿ ಎತ್ತರ, ೪ ಅಡಿ ಅಗಲ ಇದೆ. ಏರಿಯನ್ನು ಕಲ್ಲುಗಳು ಮತ್ತು ಮಣ್ಣಿನಿಂದ ನಿರ್ಮಿಸಿದ್ದಾರೆ. ಕೆರೆಯ ಏರಿಯ ಮಧ್ಯಭಾಗದಲ್ಲಿ ಒಂದು ತೂಬು ಇದ್ದು, ಮತ್ತೊಂದು ತೂಬ ಬೆಟ್ಟದ ಪಕ್ಕದಲ್ಲಿದೆ. ಈ ಎರಡು ತೂಬುಗಳು ಒಂದೇ ರೀತಿಯ ರಚನೆ ಹೊಂದಿವೆ. ಈ ತೂಬುಗಳು ಎರಡು ಕಂಬಗಳಿಂದ ಕೂಡಿವೆ. ಎರಡು ಕಂಬಗಳ ನಡುವೆ ಒಂದು ಅಡ್ಡ ಕಲ್ಲನ್ನು ಇರಿಸಲಾಗಿವೆ. ಈ ಅಡ್ಡಗಲ್ಲುಗಳ ನಡುವೆ ಎರಡು ರಂಧ್ರಗಳಿವೆ. ತೂಬಿನ ಮೇಲ್ಭಾಗದಲ್ಲಿರುವ ಕಲ್ಲಿನ ಮೇಲೆ ಗಜಲಕ್ಷ್ಮಿ ಶಿಲ್ಪವಿದೆ. ಪ್ರಸ್ತುತ ಈ ಕೆರೆಯಲ್ಲಿ ಜಲಸಂಗ್ರಹವಿಲ್ಲದೆ ಅದನ್ನು ಕೃಷಿಭೂಮಿಯಾಗಿ ಪರಿವರ್ತಿಸಿದ್ದಾರೆ.

ಸುಳೆಕಲ್ ಕೆರೆ

ಸುಳೆಕಲ್ ಕೆರೆಯು ಕನಕಗಿರಿಯಿಂದ ೬ ಕಿ.ಮೀ. ಮತ್ತು ಗಂಗಾವತಿದಿಂದ ೧೯ ಕಿ.ಮೀ ದೂರದಲ್ಲಿದೆ. ಸುಳೆಕಲ್ ಕೆರೆಯು ಬೃಹತ ಪ್ರಮಾಣದ ಕೆರೆಯಾಗಿದೆ. ಕೆರೆಯು ಸುಮಾರು ३೦೦ ಎಕರೆ ವಿಸ್ತೀರ್ಣವನ್ನು ಹೊಂದಿದೆ. ಕೆರೆಯ ಏರಿಯು ಸುಮಾರು ೯ ಅಡಿ ಎತ್ತರ, ೬ ಅಡಿ ಅಗಲವಿದೆ. ತೂಬು ಎತ್ತರವಾದ ಎರಡು ಕಂಬಗಳಿಂದ ಕೂಡಿದೆ. ಎರಡು ಕಂಬಗಳ ನಡುವೆ ಒಂದು ಅಡ್ಡ ಕಲ್ಲನ್ನು ಇರಿಸಲಾಗಿದೆ. ಇದರ ಸುತ್ತ ಸಣ್ಣಕಲ್ಲು ಮತ್ತು ಸಿಮೆಂಟ್‌ನಿಂದ ಗೋಡೆಯನ್ನು ಕಟ್ಟಿ ಅದಕ್ಕೆ ರಂಧ್ರ ಬಿಟ್ಟು ನೀರು ಬೇರೆ ಕಡೆ ಹೊಗುವಂತೆ ಮಾಡಿದ್ದಾರೆ. ಪ್ರಸ್ತುತ ಈ ಕೆರೆಯಲ್ಲಿ ಜಲಸಂಗ್ರಹವಿಲ್ಲದೆ ಬಿಳೂ ಬಿದ್ದಿದೆ.

ವೆಂಕಟಗಿರಿ ರಾಯರ ಕೆರೆ

ವೆಂಕಟಗಿರಿಯ ಗ್ರಾಮದಿಂದ ಉತ್ತರ ದಿಕ್ಕಿನಲ್ಲಿ ವಿಜಯನಗರ ಕಾಲದ ರಾಯರ ಕೆರೆ ನಿರ್ಮಾಣವಾಗಿದ್ದು, ಇದು ಈ ಭಾಗದ ಪ್ರಮುಖ ಕೆರೆ ಎನಿಸಿದೆ. ಈ ಕೆರೆಯು ೮೦ ಎಕರೆ ವಿಸ್ತೀರ್ಣವನ್ನು ಹೊಂದಿದೆ. ಕೆರೆಯ ಏರಿಯನ್ನು ಕಲ್ಲು ಮಣ್ಣಿನಿಂದ ನಿರ್ಮಿಸಲ್ಪಟ್ಟಿದೆ. ಸುತ್ತಲೂ ಗುಡ್ಡವನ್ನು ಹೊಂದಿದ್ದು, ಗುಡ್ಡದ ಇಳಿಜಾರಿನಿಂದ ಮಳೆನೀರು ಹೆಚ್ಚಾಗಿ ಸಂಗ್ರಹವಾಗುತ್ತಿದೆ. ಪೂರ್ವ ಪಶ್ಚಿಮಾಭಿಮುಖವಾಗಿರುವ ಕೆರೆಯ ಏರಿಯು ಸುಮಾರು ೧/೨ ಕಿ.ಮೀ. ಉದ್ದವಾಗಿದೆ. ವಿಶಾಲ ವ್ಯಾಪ್ತಿಯುಳ್ಳ ಈ ಕೆರೆಯು ಈ ಭಾಗದ ಜನರ ಕೃಷಿಕರ ಜೀವನಾಡಿಯಾಗಿದೆ. ಏರಿಯಿಂದ ೮ ಮೀ. ಅಂತರದಲ್ಲಿ ಹಳೆಯ ತೂಬು ಇದ್ದು, ಅದಕ್ಕೆ ಸಮನಾರ್ಥವಾಗಿ ೨೦ಮೀ. ಅಂತರದಲ್ಲಿ ಹೊಸ ತೂಬನ್ನು ನಿರ್ಮಿಸಿರುವುದನ್ನು ಕಾಣಬಹುದು. ಕೆರೆಯ ಗರಿಷ್ಠ ನೀರಿನ ಸಾಮರ್ಥ (MCFT) ೨.೯३ ಅಚ್ಚುಕಟ್ಟು ಪ್ರದೇಶ (ಹೆಕ್ಟೇರ್‌ಗಳು) ೪೫, ನೀರು ನಿಲ್ಲುಗಡೆ/ಕೆರೆ ಅಂಗಳ ಪ್ರದೇಶ(ಹೆ.) ೪.೦೦ ಏರಿಯ ಉದ್ದ, ೮೪೦ ಮೀ. ಏರಿಯ ಎತ್ತರ ೪.೫ ಮೀ. ಏರಿಯ ಮೇಲ್ಭಾಗದ ಅಗಲ ೨.೫ ಮೀ. ಇದೆ. ಈ ಕೆರೆಗೆ ಎರಡು ತೂಬುಗಳಿವೆ.[೧३]

ಪುರದ ಕೆರೆ

ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ಪುರ ಗ್ರಾಮವು ತಾವರಗೇರಿ–ಸಿಂಧನೂರು ರಸ್ತೆಯಲ್ಲಿ ಬರುವ ಉಮಲೂಟಿ ಗ್ರಾಮದಿಂದ ೫ ಕಿ.ಮೀ. ಅಂತರದಲ್ಲಿದೆ. ಈ ಗ್ರಾಮದಲ್ಲಿ ಏಳು ಶಾಸನಗಳು, ಎರಡು ಪ್ರಾಚೀನ ದೇವಾಲಯಗಳು, ಒಂದೆರಡು ಆಧುನಿಕ ದೇವಾಲಯಗಳಿರುವುದನ್ನು ಕಾಣುತ್ತೇವೆ. ಇಲ್ಲಿಯ ಕ್ರಿ.ಶ. ೧೫೪೭ರ ಶಾಸನ ತಾವರಗೇರೆಯ ಸಿಮೆಯೊಳಗಣ ಪುರವೆಂಬ ಗ್ರಾಮದಲ್ಲೂ ದೇವಸ್ಥಾನಕ್ಕೆ ಸಲ್ಲುವಂಥಾದರೊಳಗೆ ಪಡುವಲುಯಿದ್ದ ಮಡೆಹೊಲಬಳಿಯ ಗಡ್ಡೆ, ಹುಣಸೆಮರದ ಉಲ್ಲೇಖ ಮಾಡಿದರೆ, ಮತ್ತೊಂದು ಶಾಸನ ಬಾಳೆ, ತೆಂಗು, ಹಲಸು, ಮಾವು, ನಿಂಬೆ, ಸಂಪಿಗೆ, ನಾರಂಗ, ಮಲ್ಲಿಗೆ, ಜಾಜಿ, ಕಣಗಿಲೆ, ಕೊಂಚವಾಳ ಮುಂತಾದ ಬೆಲ್ಲವತ್ತ ಹಾದರಿಯಿಂದ ನಿಕ್ಕಿದಂಗೆ ಪುಣ್ಯ ಎಂಬ ವರ್ಣನೆಯೊಂದಿಗೆ ಹೊಲ, ಗದ್ದೆ, ಅಡಕೆ, ಅರಸಿನ ಇತ್ಯಾದಿ ವಿವರಿಸುತ್ತದೆ. ಕೆರೆ, ಕಾಲುವೆ, ತೂಬು, ಬಾವಿಗಳಿರುವ ಪುರ ಶಿವಲಿಂಗಗಳಿಗೆ ಸಂಗಮವಾಗಿರುವ ಈ ಪ್ರೇಕ್ಷಣೀಯ ಸ್ಥಳ ಶಿವ ಭಕ್ತರಿಗೆ ಪುಣ್ಯಕ್ಷೇತ್ರವಾಗಿದ್ದು ಇಂದಿಗೂ ಸುತ್ತಮುತ್ತಲಿನ ಭಕ್ತರು ಇಲ್ಲಿಗೆ ಆಗಮಿಸಿ ಭಕ್ತಿಯಿಂದ ನಮಿಸುವರು.

ಇದೇ ಗ್ರಾಮದಲ್ಲಿರುವ ಕ್ರಿ.ಶ. ೧೪೪೬ ರ ಶಾಸನದಲ್ಲಿ[೧೪] ವಿಜಯನಗರ ಶ್ರೀ ವೀರಪ್ರತಾಪ ದೇವರಾಯನ ಶಾಸನದಲ್ಲೂ ಕೆರೆ ನಿರ್ಮಾಣದ ಉಲ್ಲೇಖ ಬರುತ್ತದೆ. ಬನದಾಯವೆಗಳು ಆ ವೋಹಿಲಾಪುರ ಅಗ್ನೇಯ ಭಾಗೆಯಲು ಕೆರೆಯನೂ ಕಟ್ಟಿಸಿ ರಾಯರಿಗೆ ಪುಂಣ್ಯ ಆಗಬೇಕೆಂದು ಬನದಾಯವೆನು ದೇವರ ನಯಿ ವೇದ್ಯಕೆಸಹಿರಂಣ್ಯೋ ಉದಕ ದಾನಧಾರಾ ಸಾಕ್ಷಿಕವಾಗಿ ಆ ಚಂದ್ರಾರ್ಕ್ಕ ಸ್ಥಾಯಿಯೊಗೆ ತ್ರಿ ಸಂಧ್ಯಾಕಾಲದಲ್ಲಿ ಆ ದೇವರ ನಯಿವೇದ್ಯವ ನಡೆಸುವಸ್ತಾ ಶ್ರೀ ಸಜನ ಸುದ್ಧ ಶಿವಾಚಾರ ಸಂಪಂನ್ನರಹ ಸೋಮಯದೇವ ಅಯ್ಯಗಳಕಯಿಗೆ ಹೊಲದ ಒಳಗೆ ಬನದಯವೆಗಳೂಬ ಧರ್ಮ್ಮಕ್ಕೆ ಕಟ್ಟಿಸಿ ಕೊಟ್ಟ ಕೆರೆಯ ಶಿಲಾಶಾಸನ. ಪುರದ ಬನದಾಯವೆಯು ವೋಹಿಲಾಪುರ ಅಗ್ನೇಯ ಭಾಗದಲ್ಲಿ ಕೆರೆಯನ್ನು ಕಟ್ಟಿಸಿ ರಾಯನಿಗೆ ಪುಣ್ಯವಾಗಬೇಕೆಂದು ದೇವರ ನೈವೇದ್ಯಕ್ಕೆ ತ್ರಿಸಂಧ್ಯಾ ಕಾಲದಲ್ಲಿ ಶ್ರೀ ಸಜ್ಜನ ಶುದ್ಧ ಶಿವಾಚಾರ ಸಂಪನ್ನ ಸೋಮಯದೇವ ಅಯ್ಯನವರಿಗೆ ದೇವರ ನೈವೇದ್ಯಕ್ಕೆ ನೆಲ್ಲುಯಿಲ್ಲವೆಂದು ವೋಹಿಲಪುರದ ಹೊಲದ ಒಳಗೆ ಬನದಾಯವೆಗಳೂ ಕೆರೆಯನ್ನು ಕಟ್ಟಿಸಿಕೊಟ್ಟಂತೆ ಈ ಮೇಲಿನ ಪದ್ಯದಿಂದ ತಿಳಿದು ಬರುತ್ತದೆ.

ಸೋಮೇಶ್ವರ ದೇವಾಲಯದ ಹಿಂಬದಿಯಲ್ಲಿ ಪಶ್ಚಿಮ ಭಾಗದಲ್ಲಿ ಬೃಹತ್ ಕೆರೆಯಿದೆ. ಇದೀಗ ಬಹುಮಟ್ಟಿಗೆ ದುರಸ್ತಿಗೊಂಡಿರುವ ಈ ಕೆರೆ ಕೊಪ್ಪಳ ಜಿಲ್ಲೆಯ ಪ್ರಾಚೀನ ಕೆರೆಗಳಲ್ಲಿ ಒಂದು. ಈ ಕೆರೆಯ ಬಗ್ಗೆ ಗ್ರಾಮದಲ್ಲಿರುವ ಕಲ್ಯಾಣ ಚಾಲುಕ್ಯರ ಕಾಲದ ಮತ್ತು ವಿಜಯನಗರ ಕಾಲದ ಎರಡು ಶಾಸನಗಳು ಉಲ್ಲೇಖಿಸುತ್ತವೆ. ವಿಜಯನಗರ ಕಾಲದ ಶಾಸನವನ್ನು ಕೆರೆಯ ಶಿಲಾಶಾಸನವೆಂದೇ ಶಾಸನದಲ್ಲಿ ಕರೆಯಲಾಗಿದೆ. ಮೇಲೆ ಉಲ್ಲೇಖಿಸಿದ್ದ ಎರಡು ಶಾಸನಗಳು ಕೆರೆಯ ನಿರ್ಮಾಣದ ಬಗೆಗೆ ಉಲ್ಲೇಖಿಸುತ್ತವೆ. ಇವುಗಳನ್ವಯ ಎರಡು ಕೆರೆಗಳ ಪ್ರತ್ಯೇಕ ನಿರ್ಮಾಣ

ವ್ಯಕ್ತವಾಗುತ್ತದೆ. ಆದರೆ ಪ್ರಸ್ತುತ ಗ್ರಾಮದಲ್ಲಿ ಒಂದೇ ಕೆರೆ ಇದೆ. ಇದರಿಂದ ಮೂಲತಃ ಕೆರೆಯನ್ನು ಕ್ರಿ.ಶ. ೧೨ನೆಯ ಶತಮಾನದಲ್ಲಿ ನಿರ್ಮಿಸಲಾಗಿದ್ದು, ನಂತರದಲ್ಲಿ ಅದು ಮುಚ್ಚಿ ಹೋಗಿರಲೂ ಪುನಃ ವಿಜಯನಗರ ಕಾಲದಲ್ಲಿ ಅದೇ ಸ್ಥಳದಲ್ಲಿ ಕೆರೆಯನ್ನು ನಿರ್ಮಿಸಿರಬೇಕೆಂದು ಸ್ಪಷ್ಟವಾಗಿ ಹೇಳಬಹುದು. ಹೀಗೆ ಈ ಪ್ರಾಚೀನ ಕಾಲದಿಂದಲೂ ಎರಡು ಬಾರಿ ನಿರ್ಮಾಣಗೊಂಡ ಈ ಕೆರೆಯನ್ನು ಪುನಃ ದುರಸ್ತಿಗೊಳಿಸಲಾಗಿದೆ.

ಕೆರೆಯ ಏರಿ ತೂಬುಗಳನ್ನೆಲ್ಲಾ ಸಂಪೂರ್ಣವಾಗಿ ದುರಸ್ತಿಗೊಳಿಸಿರುವುದರಿಂದ ಆಧುನಿಕ ಕೆರೆಯಂತೆ ಗೋಚರಿಸುತ್ತದೆ. ಕೆರೆಯ ಗರಿಷ್ಠ ನೀರಿನ ಸಾಮರ್ಥ್ಯ ೨.೩೯, ಅಚ್ಚುಕಟ್ಟು ಪ್ರದೇಶ ೫೦, ನೀರು ನಿಲುಗಡೆ, ಕೆರೆ ಅಂಗಳ ಪ್ರದೇಶ ೧೮೯, ಏರಿಯ ಉದ್ದ ೮೯೦ ಮೀ. ಏರಿಯ ಎತ್ತರ ೬ ಮೀ. ಏರಿಯ ಮೇಲ್ಭಾಗದ ಅಗಲ ೪.೫ ಮೀ. ತೂಬು ಎರಡು ಕಂಬಗಳಿಂದ ಕೂಡಿದೆ. ಎರಡು ಕಂಬಗಳ ನಡುವೆ ಒಂದು ಅಡ್ಡ ಕಲ್ಲನ್ನು ಇರಿಸಲಾಗಿದೆ. ಈ ಅಡ್ಡಗಲ್ಲಿನ ನಡುವೆ ಎರಡು ರಂಧ್ರಗಳಿವೆ. ತೂಬಿನ ಮೇಲ್ಭಾಗದಲ್ಲಿರುವ ಕಲ್ಲಿನ ಮೇಲೆ ಗಜಲಕ್ಷ್ಮೀ ಶಿಲ್ಪವಿದೆ.

ತಾವರೆಗೆರೆ ರಾಯರಕೆರೆ

ಕೊಪ್ಪಳ ಜಿಲ್ಲೆಯ ಕುಷ್ಟಗಿಯಿಂದ ೩೦ ಕಿ.ಮೀ. ದೂರದಲ್ಲಿ ತಾವರಗೆರೆಯ ಗ್ರಾಮ ಇದೆ. ತಾವರಗೆರೆಯಲ್ಲಿ ಕಲ್ಯಾಣ ಚಾಲುಕ್ಯರ ವೈಜುನಾಥ ಮತ್ತು ವಿಜಯನಗರ ಕಾಲದ ವೀರಭದ್ರ, ಆಂಜನೇಯ ದೇವಾಲಯಗಳು ಮತ್ತು ಸ್ಮಾರಕ ಶಿಲ್ಪಗಳಿವೆ. ಈ ಗ್ರಾಮಕ್ಕೆ ಅಲ್ಲಿಯ ಕೆರೆಯಿಂದಾಗಿಯೇ ತಾವರಗೆರೆ ಎಂಬ ಹೆಸರು ಬಂದಿದೆ. ಇಂದಿಗೂ ಅದೇ ಹೆಸರಿನಿಂದ ಕರೆಯುತ್ತಾರೆ. ಈ ಕೆರೆಯ ಮೊದಲ ಉಲ್ಲೇಖವನ್ನು ವೈಜುನಾಥ ದೇವಾಲಯದ ಹತ್ತಿರ ಇರುವ ೧೨ನೇ ಶತಮಾನದ ಶಾಸನದಲ್ಲಿ ತಾವರಗೆರೆ ಎಂದು ಉಲ್ಲೇಖವಿರುವುದನ್ನು ಕಾಣಬಹುದು. ಕ್ರಿ.ಶ. ೧೫೪೨ರ ವಿಜಯನಗರ ಸದಾಶಿವದೇವರಾಯನ ಶಾಸನದಲ್ಲಿ ಈ ಗ್ರಾಮಕ್ಕೆ ತಾವರಕೆರೆ ಎಂದೇ ಕರೆಯಲಾಗಿದೆ. ವಿಜಯನಗರದ ಪ್ರೌಢದೇವರಾಯನ ಧರ್ಮಪತ್ನಿ ಪದ್ಮಲಾದೇವಿಯ ಕುಷ್ಟರೋಗ ಪೀಡಿತಳಾಗಿದ್ದಳು. ಆಗ ಪ್ರೌಢದೇವರಾಯನು ಹಿತಕರವಾದ ವಾತಾವರಣದಿಂದ ಕೂಡಿದ ಕುಷ್ಟಗಿ ಗ್ರಾಮದಲ್ಲಿ ನೆಲೆಸಲು ಅನುಕೂಲ ಮಾಡಿಕೊಟ್ಟನು. ಪದ್ಮಲಾದೇವಿಯು ಪೂಜೆಗಾಗಿ ತಾವರೆಹೂಗಳನ್ನು ಬಳಸುತ್ತಿದ್ದು, ಪ್ರತಿನಿತ್ಯ ತಾವರೆ ಹೂಗಳಿಗಾಗಿ ಪ್ರೌಢದೇವರಾಯನು ತಾವರಗೆರೆಯಲ್ಲಿ ಕೆರೆಯನ್ನು ನಿರ್ಮಿಸಿ ಅದರಲ್ಲಿ ಯಥೇಚ್ಛವಾಗಿ ತಾವರೆಹೂಗಳನ್ನು ಬೆಳೆಯುವಂತೆ ಮಾಡಿದನು. ರಾಣಿಯ ಪೂಜೆಗೆ ದಿನಾಲು ತಾವರಕೆರೆಯಿಂದಲೇ ಹೂಗಳನ್ನು ಕಳುಹಿಸಲಾಗುತ್ತಿತ್ತು. ಈ ಕಾರಣದಿಂದ ಈ ಕೆರೆಗೆ ತಾವರಕೆರೆ ಎಂದು ಕರೆಯಲಾಯಿತೆಂಬುದು ಐತಿಹ್ಯವಿದೆ. ತದ ನಂತರದಲ್ಲಿ ಕೆರೆಯನ್ನು ದುರಸ್ತಿಗೊಳಿಸಿದರಿಂದ ರಾಯರಕೆರೆ ಎಂದು ಕರೆಯಲ್ಪಟ್ಟಿತು. ಇಲ್ಲಿ ಹುಟ್ಟಿಕೊಂಡ ಗ್ರಾಮವು ಕೂಡ ಕೆರೆಯ ಹೆಸರನ್ನೇ ಹೊಂದಿದೆ. ಈ ಕೆರೆಯಲ್ಲಿ ಹಿಂದೆ ಸಾಕಷ್ಟು ತಾವರೆ ಹೂಗಳು ಬೆಳೆಯುತ್ತಿದ್ದರಿಂದ ಇದಕ್ಕೆ ತಾವರಕೆರೆ ಎಂಬ ಹೆಸರು ಬಂದಿತೆಂಬುದು ಸ್ಥಳಿಯರ ಹೇಳಿಕೆ. ಈ

ಗ್ರಾಮದಿಂದ ರಾಯರ ಕೆರೆಯು ಅರ್ಧ ಕಿ.ಮೀ. ದೂರದಲ್ಲಿದೆ. ಕೆರೆಯು ತುಂಬಾ ವಿಶಾಲವಾಗಿದೆ. ಕೆರೆಗೆ ಪಶ್ಚಿಮ, ಪೂರ್ವ ಮತ್ತು ಅಗ್ನೇಯ ದಿಕ್ಕುಗಳಿಗೆ ಮುಖಮಾಡಿದಂತೆ ಅರೆವೃತ್ತಾಕಾರದ ಏರಿಯಿದೆ. ಏರಿಯು ಹೊರಬದಿಯಲ್ಲಿ ನೆಲಮಟ್ಟದಿಂದ ೬ ಮೀ. ಎತ್ತರವಾಗಿದೆ. ಏರಿಯ ಉದ್ದ ಸುಮಾರು ೯೦೦ ಮೀ, ಏರಿಯ ಮೇಲ್ಭಾಗದ ಅಗಲ ೫ ಮೀ. ಏರಿಯ ಒಳಭಾಗದಲ್ಲಿ ಕಲ್ಲುಗಳಿಂದ ನಿರ್ಮಿಸಿದ ಮೇಲ್ಭಾಗದಲ್ಲಿ ಮಣ್ಣಿನ ಹೊದಿಕೆಯನ್ನು ಅಳವಡಿಸಲಾಗಿದೆ.

ರಾಯರಕೆರೆಯು ಗರಿಷ್ಠ ನೀರಿನ ಸಾಮರ್ಥ್ಯ ೧೨.೨, ಅಚ್ಚುಕಟ್ಟು ಪ್ರದೇಶ ೧೨.೨, ನೀರು ನಿಲುಗಡೆ ಕೆರೆ ಅಂಗಳ ಪ್ರದೇಶ ೨೧.೪, ಈ ಕೆರೆಗೆ ಎರಡು ತೂಬು ಇವೆ. ಇವುಗಳು ಎರಡು ಕಂಬಗಳಿಂದ ಕೂಡಿವೆ. ಎರಡು ಕಂಬಗಳ ನಡುವೆ ಒಂದು ಅಡ್ಡ ಕಲ್ಲನ್ನು ಇರಿಸಲಾಗಿದೆ. ಈ ಅಡ್ಡಗಲ್ಲಿನ ನಡುವೆ ಎರಡು ರಂಧ್ರಗಳಿವೆ. ತೂಬಿನ ಮೇಲ್ಭಾಗದಲ್ಲಿರುವ ಕಲ್ಲಿನ ಮೇಲೆ ಗಜಲಕ್ಷ್ಮಿ ಶಿಲ್ಪವಿದೆ. ಈ ಕೆರೆಗೆ ಕೋಡಿಯಿದ್ದು ಅದು ದಕ್ಷಿಣಾಭಿಮುಖವಾಗಿದ್ದು ಸುಮಾರು ೬ ಮೀ. ಅಗಲವಾಗಿದೆ.

ಚಿಕ್ಕಬೆಣಕಲ್ ಕೆರೆ

ಗಂಗಾವತಿ ತಾಲೂಕಿನ ಚಿಕ್ಕಬೆಣಕಲ್ ಗ್ರಾಮದ ದಕ್ಷಿಣ ದಿಕ್ಕಿನಲ್ಲಿ ಬೆಟ್ಟಗಳ ಅಂಚಿಗೆ ಹೊಂದಿಕೊಂಡಂತೆ ಈ ಕೆರೆಯನ್ನು ನಿರ್ಮಿಸಲಾಗಿದೆ. ಇದು ವಿಶಾಲವಾದ ಕೆರೆಯಾಗಿದ್ದು ೧೫೦ ಎಕರೆ ವಿಸ್ತಾರವಾಗಿದೆ. ೪೫ ಅಡಿ ಆಳವನ್ನು ಹೊಂದಿರುವ ಈ ಕೆರೆಗೆ ಸುತ್ತಲಿನ ಗುಡ್ಡದ ಕಣಿವೆಗಳಿಂದ ನೀರು ಸಂಗ್ರಹವಾಗುತ್ತದೆ. ಕೆರೆಯ ಕೋಡಿಯ ಭಾಗವು ಪಶ್ಚಿಮ ದಿಕ್ಕಿನಲ್ಲಿದೆ. ಕೆರೆಯ ಬದಿಯ ಗುಂಡಿನಲ್ಲಿ ನಾಲ್ಕು ಸಾಲಿನ ಅಪೂರ್ಣ ಶಾಸನದಲ್ಲಿ ಸ್ವಸ್ತಿ ಶ್ರೀ ಜಯಾಭ್ಯುದಯ ಶಕವರುಷ ೧೨೬೨ನೆಯ ರೌದ್ರಿ ಸಂವತ್ಸರ ಶ್ರಾವಣ ಶು.೧೦ರ ಲು ಶ್ರೀ ಮಂನಮರಾಜಾದಿರಾಜ ರಾಜಪರಮೇಶ್ವರ ಗಂಡಬೇರುಂಡ ಗಜಬೆಂಟೆಕಾರ ಪೋಡ ಮಹೋದಾನದಿ ಸಮದ ಶ್ರೀ ವಿರಪ್ರತಾಪ ದೇವರಾಯ ಮಹಾರಾಯರು ಎಂದು ವಿಜಯನಗರದ ದೊರೆ ಎರಡನೆಯ ದೇವರಾಯನನ್ನು ಉಲ್ಲೇಖಿಸುತ್ತದೆ. ಈ ಶಾಸನದ ಆಧಾರದ ಮೇಲೆ ಪ್ರಸ್ತುತ ಕೆರೆಯನ್ನು ಕ್ರಿ.ಶ. ೧೪೪೦ರಲ್ಲಿ ಎರಡನೆಯ ದೇವರಾಯನು ನಿರ್ಮಿಸಿದನೆಂದು ಹೇಳಬಹುದು. ಸ್ಥಳೀಯವಾಗಿ ಈ ಕೆರೆಗೆ ಸೂರ್ಯರಾಯನ ಕೆರೆ ಎಂದು ಕರೆಯುತ್ತಾರೆ. ಈ ಕೆರೆಯಿಂದ ಹಿರೇಬೆಣಕಲ್, ಚಿಕ್ಕಬೆಣಕಲ್, ಮುಕ್ಕುಂಪಿ, ಲಿಂಗದಹಳ್ಳಿ ಗ್ರಾಮಗಳಿಗೆ ಸಾಕಷ್ಟು ಅನುಕೂಲವಿದೆ. ಕೆರೆಯ ಹೆಚ್ಚುವರಿ ನೀರಿನ್ನು ಕೆಳಭಾಗದಲ್ಲಿರುವ ತಾಯಮ್ಮನ ಕೆರೆಯಲ್ಲಿ ಸಂಗ್ರಹಿಸಲಾಗುತ್ತಿದೆ.[೧೫] ಕೆರೆಯ ಗರಿಷ್ಠ (MCFT) ೪.೫೩. ಅಚ್ಚುಕಟ್ಟು ಪ್ರದೇಶ (ಹೆಕ್ಟೇರಗಳಲ್ಲಿ) ೨೦೦, ನೀರು ನಿಲುಗಡೆ ಕೆರೆ ಅಂಗಳ ಪ್ರದೇಶ ೨೪.೩೦, ಏರಿಯ ಉದ್ದ ೮೫೪ ಮೀ., ಏರಿಯ ಎತ್ತರ ೯ಮೀ., ಏರಿಯ ಮೇಲ್ಭಾಗದ ಅಗಲ ೩ ಬಹುಮಟ್ಟಿಗೆ ನಾಶವಾಗಿದೆ.

ಕನಕಗಿರಿಯ ಲಕ್ಷ್ಮೀ ದೇವಿ ಕೆರೆ

ಕನಕಗಿರಿಯಿಂದ ಪಶ್ಚಿಮಕ್ಕೆ ೨ ಕಿ.ಮೀ. ಅಂತರದಲ್ಲಿ ಕನಕಗಿರಿ ನಾಯಕರ ಕಾಲದ ಮಹತ್ವದ ಲಕ್ಷ್ಮೀದೇವಿ ಕೆರೆ ಇದೆ. ಈ ಕೆರೆ ೩೦ ಎಕರೆ ವಿಸ್ತಾರವನ್ನು ಹೊಂದಿದೆ. ಕೆರೆಯ ಹೆಸರೇ ಸೂಚಿಸುವಂತೆ ಇದನ್ನು ಇಮ್ಮಡಿ ಉಡಚನಾಯಕನು ತನ್ನ ರಾಣಿ ಲಕ್ಷ್ಮೀದೇವಿ ಹೆಸರಿನಲ್ಲಿ ನಿರ್ಮಿಸಿದ್ದೆಂದು ಹೇಳಲಾಗುತ್ತಿದೆ. ಕೆರೆಯ ನೀರು ನಿಲ್ಲುವ ವಿಸ್ತಾರ ೯೮.೩೪ ಹೆಕ್ಟೇರ್ ಪ್ರದೇಶವಿದ್ದು ಏರಿಯ ಉದ್ದ ೯೨೦ ಮೀ. ಅಗಲ ೪ ಮೀ. ಎತ್ತರ ೫ ಮೀ., ಕೆರೆಯ ಆಳ ೧೦ ಮೀ. ಇದೆ. ಈ ಕೆರೆಗೆ ಹೊಂದಿಕೊಂಡು ೫೭೬ ಹೆಕ್ಟರ್ ಪ್ರದೇಶ ನೀರಾವರಿ ಕ್ಷೇತ್ರವಾಗಿದೆ. ಮಳೆಯಾಧಾರಿತವಾಗಿ ಗುಡ್ಡಗಳಿಂದ ಹರಿದು ಬರುವ ನೀರು ಇದಕ್ಕೆ ಆಧಾರವಾಗಿದ್ದರೂ ಇತ್ತೀಚೆಗೆ ಇದಕ್ಕೆ ತುಂಗಭದ್ರಾ ನದಿಯಿಂದ ನೀರು ತುಂಬುವ ಯೋಜನೆ ಹಮ್ಮಿಕೊಳ್ಳಲಾಗಿದೆ. ಈ ಕೆರೆಗೆ ಹೊಂದಿಕೊಂಡಂತೆ ಹಿರೇಹಳ್ಳ (ಈರಾಳ) ಬಸವೇಶ್ವರ ದೇವಾಲಯವಿದ್ದು, ವಿಶೇಷ ಸಂದರ್ಭದಲ್ಲಿ ಪೂಜೆ, ಉತ್ಸವಗಳು ನಡೆಯುವುದು. ಈ ದೇವಾಲಯವನ್ನು ಇಮ್ಮಡಿ ಉಡಚ ನಾಯಕನ ಕಾಲದಲ್ಲಿ ನಿರ್ಮಾಣ ಮಾಡಲಾಗಿದೆ. ಇದು ದ್ರಾವಿಡ ಶೈಲಿಯಲ್ಲಿ ನಿರ್ಮಾಣಗೊಂಡಿದ್ದು, ಒಳಭಾಗದಲ್ಲಿ ಶಿವಲಿಂಗ ಹೊರಗಡೆ ನಂದಿಯ ಮೂರ್ತಿ ಇದೆ.

ಕ್ರಸಂ.	ಕೆರೆಗಳು	ಗ್ರಾಮ	ತಾಲೂಕು	ಕಾಲಮಾನ
೧.	ವೆಂಕಟಗಿರಿಕೆರೆ	ವೆಂಕಟಗಿರಿ	ಗಂಗಾವತಿ	೧೪ ನೇ ಶತಮಾನ
೨.	ಮುಕ್ಕುಂಪಿಕೆರೆ	ಮುಕ್ಕುಂಪಿ	ಗಂಗಾವತಿ	೧೪ನೇ ಶತಮಾನ
೩.	ರಾಮನಕೆರೆ	ಬಿಳೇಬಾವಿ	ಕೊಪ್ಪಳ	೧೪ನೇ ಶತಮಾನ
೪.	ಕಡೇಬಾಗಿಲುಕೆರೆ	ಕಡೇಬಾಗಿಲು	ಗಂಗಾವತಿ	೧೪ನೇ ಶತಮಾನ
೫.	ವಿಠಲಾಪುರಕೆರೆ	ವಿಠಲಾಪುರ	ಗಂಗಾವತಿ	೧೪ನೇ ಶತಮಾನ
೬.	ಚಿಂಚಲಕೋಟೆ ಒಳಗಿನ ಕೆರೆ	ಕಡೇಬಾಗಿಲು	ಗಂಗಾವತಿ	೧೪ನೇ ಶತಮಾನ
೭.	ಅಗಳಕೆರೆ	ಅಗಳಕೆರೆ	ಕೊಪ್ಪಳ	೧೫ನೇ ಶತಮಾನ
೮.	ಕುಟಗನಹಳ್ಳಿಕೆರೆ	ಕುಟಗನಹಳ್ಳಿ	ಕೊಪ್ಪಳ	೧೫ನೇ ಶತಮಾನ
೯.	ಪುರದಕೆರೆ	ಪುರ	ಕುಷ್ಟಗಿ	೧೫ನೇ ಶತಮಾನ
೧೦.	ರಾಯರಕೆರೆ	ತಾವರಗೆರೆ	ಕುಷ್ಟಗಿ	೧೫ನೇ ಶತಮಾನ
೧೧.	ರಾಯರಕೆರೆ	ಚಿಕ್ಕಬೆಣಕಲ್	ಗಂಗಾವತಿ	೧೫ನೇ ಶತಮಾನ
೧೨.	ಬಸವಾಪಟ್ಟಣಕೆರೆ	ಬಸವಾಪಟ್ಟಣ	ಗಂಗಾವತಿ	೧೫ನೇ ಶತಮಾನ
೧೩.	ಲಕ್ಷ್ಮೀಪುರಕೆರೆ	ಲಕ್ಷ್ಮೀಪುರ	ಗಂಗವತಿ	೧೫ನೇ ಶತಮಾನ
೧೪.	ಕೃಷ್ಣಪುರಕೆರೆ	ಕೃಷ್ಣಾಪುರ	ಗಂಗಾವತಿ	೧೫ನೇ ಶತಮಾನ

೧೫.	ದಾಸನಾಳಕೆರೆ	ದಾಸನಾಳ	ಗಂಗಾವತಿ	೧೫ನೇಶತಮಾನ
೧೬.	ಕರಡೋಣಕೆರೆ	ಕರಡೋಣಾ	ಗಂಗಾವತಿ	೧೫ನೇ ಶತಮಾನ
೧೭.	ಹುಡೇದಜಾಲಿ ಕೆರೆ	ಹುಡೇದಜಾಲಿ	ಗಂಗಾವತಿ	೧೫ನೇ ಶತಮಾನ
೧೮.	ಚಿಕ್ಕಸೂಳೇಕೆರೆ	ಚಿಕ್ಕಸೂಳೇಕಲ	ಕೊಪ್ಪಳ	೧೫ನೇ ಶತಮಾನ
೧೯.	ರಾಮದುರ್ಗಕೆರೆ	ರಾಮದುರ್ಗ	ಗಂಗಾವತಿ	೧೫ನೇ ಶತಮಾನ
೨೦.	ಹಿರೇಸೂಳೇಕೆರೆ	ಹಿರೇಸೂಳೇ	ಕೊಪ್ಪಳ	೧೫ನೇ ಶತಮಾನ
೨೧.	ಇರಕಲಗಡಾಕೆರೆ	ಇರಕಲಗಡಾಕೆರೆ	ಕೊಪ್ಪಳ	೧೫ನೇ ಶತಮಾನ
೨೨.	ದೊಡ್ಡಕೆರೆ	ಕುಣಿಕೇರಿ	ಕೊಪ್ಪಳ	೧೫ನೇ ಶತಮಾನ
೨೩.	ಕುಣಿಕೇರಿ	ಸಣ್ಣಕೆರೆ	ಕೊಪ್ಪಳ	೧೫ನೇ ಶತಮಾನ
೨೪.	ಅಗಳಕೆರೆ	ಕೊಪ್ಪಳ	ಗಂಗಾವತಿ	೧೬ನೇ ಶತಮಾನ
೨೫.	ಕೆಂಚನದೋಣಿಕೆರೆ	ಕೆಂಚನದೋಣಿ	ಕೊಪ್ಪಳ	೧೬ನೇ ಶತಮಾನ
೨೬.	ಹೇಮಗುಡ್ಡಕೆರೆ	ಹೇಮಗುಡ್ಡ	ಗಂಗಾವತಿ	೧೬ನೇ ಶತಮಾನ
೨೭.	ಇಂದ್ರಗಿಕೆರೆ	ಇಂದ್ರಗಿಕೆರೆ	ಕೊಪ್ಪಳ	೧೬ನೇ ಶತಮಾನ
೨೮.	ಚಿನ್ನಾದೇವಿಕೆರೆ	ಕನಕಗಿರಿ	ಕನಕಗಿರಿ	೧೬ನೇ ಶತಮಾನ
೨೯.	ಲಕ್ಷ್ಮಿ ದೇವಿಕೆರೆ	ಕನಕಗಿರಿ	ಕನಕಗಿರಿ	೧೬ನೇ ಶತಮಾನ
೩೦.	ರಾಂಪುರಕೆರೆ	ಕನ್ನೆರಮಡು/ ರಾಂಪುರ	ಗಂಗಾವತಿ	೧೬ನೇ ಶತಮಾನ
೩೧.	ಇಂಗಳದಾಳಕೆರೆ	ಇಂಗಳದಾಳ	ಗಂಗಾವತಿ	೧೬ನೇ ಶತಮಾನ
೩೨.	ಬಸರಿಹಾಳಕೆರೆ	ಬಸರಿಹಾಳ	ಗಂಗಾವತಿ	೧೬ನೇ ಶತಮಾನ
೩೩.	ಹಿರೇಜಂತಗಲ್ಲುಕೆರೆ	ಹಿರೇಜಂತಗಲ್ಲು	ಗಂಗಾವತಿ	೧೬ನೇ ಶತಮಾನ
೩೪.	ಸುಳೆಕಲಕೆರೆ	ಸುಳೆಕಲ್	ಗಂಗಾವತಿ	೧೬ನೇ ಶತಮಾನ
೩೫.	ರಾಂಪುರಕೆರೆ	ರಾಂಪುರ	ಗಂಗಾವತಿ	೧೬ನೇ ಶತಮಾನ
೩೬.	ಮಲ್ಲಾಪುರ ಕೆರೆ (ಎರಡು ಕೆರೆ)	ಮಲ್ಲಾಪುರ	ಗಂಗಾವತಿ	೧೬ನೇ ಶತಮಾನ
೩೭.	ತಿಪ್ಪನಾಳಕೆರೆ (ಎರಡು ಕೆರೆ)	ತಿಪ್ಪನಾಳ	ಗಂಗಾವತಿ	೧೬ನೇ ಶತಮಾನ
೩೮.	ಕಾತರಕಿಕೆರೆ	ಕಾತರಕಿಕೆರೆ	ಕೊಪ್ಪಳ	೧೬ನೇ ಶತಮಾನ
೩೯.	ಅಗೋಲಿಕೆರೆ	ಅಗೋಲಿ	ಗಂಗಾವತಿ	೧೬ನೇ ಶತಮಾನ
೪೦.	ಬಂಕಾಪುರಕೆರೆ	ಬಂಕಾಪುರ	ಗಂಗಾವತಿ	೧೬ನೇ ಶತಮಾನ

೫.೩ ಬಾವಿಗಳು

ಅಂತರ್ಜಲವನ್ನು ಪಡೆಯುದಕ್ಕೊಸ್ಕರ ಭೂಮಿಯಲ್ಲಿ ಗುಂಡಿ ತೋಡಿದಾಗ ಅದರಲ್ಲಿ ನೀರು ಸಂಗ್ರಹವಾದರೆ ಆ ಗುಂಡಿಗೆ ಬಾವಿ ಎಂದು ಕರೆಯಲಾಗುತ್ತದೆ. ಮಾನಸೋಲ್ಲಾಸ ಗ್ರಂಥವು ಬಾವಿಗಳಲ್ಲಿ ಕೂಪ, ವಾಪಿ, ಪುಷ್ಕರಣಿ, ದೀರ್ಘಿಕೆ, ಕುಲ್ಯಾ ಹಾಗೂ ತಟಾಕಗಳೆಂಬ ವಿಧಗಳ ಬಗೆಗೆ ಉಲ್ಲೇಖಿಸುತ್ತದೆ.[೧೮]

ಹರಪ್ಪಾ ನಾಗರಿಕತೆಯ ನಗರಗಳಲ್ಲಿ ಬಾವಿಗಳ ನಿರ್ಮಾಣ ಪ್ರಮುಖವಾಗಿರುವುದನ್ನು ಕಾಣಬಹುದು. ಬಾವಿಗಳ ರಚನೆಯ ಬಗ್ಗೆ ವೇದಗಳು, ರಾಮಾಯಣ, ಮಹಾಭಾರತ ಮುಂತಾದ ಸಾಹಿತ್ಯದಲ್ಲಿ ಉಲ್ಲೇಖಗಳಿವೆ. ಋಗ್ವೇದದಲ್ಲಿ ಅಂತರ್ಜಲ ಸಂಗ್ರಹಣೆ, ಬಾವಿ ತೋಡುವುದು ವೃತ, ಕಪಿಲೆಗಳ ಪ್ರಸ್ತಾಪಗಳಿವೆ. ಮೌರ್ಯ ಸಾಮ್ರಾಟ ಅಶೋಕನು ರಸ್ತೆಯ ಬದಿಗಳಲ್ಲಿ ಪ್ರಯಾಣಿಕರ ಅನುಕೂಲಕ್ಕಾಗಿ ಬಾವಿಗಳನ್ನು ತೋಡಿಸಿದ್ದ ಸಂಗತಿ ಅವನ ಶಾಸನಗಳಿಂದ ತಿಳಿಯುತ್ತದೆ. ಚರಿತ್ರೆಯ ವಿವಿಧ ಕಾಲದುದ್ದಕ್ಕೂ ಭಾರತ ದೇಶದಲ್ಲಿ ಆಳ್ವಿಕೆ ನಡೆಸಿದ ವಿವಿಧ ರಾಜರು ಅನೇಕ ಬಾವಿಗಳನ್ನು ನಿರ್ಮಿಸಿದ್ದಾರೆ. ಆದರೆ, ಕೆರೆ ನಿರ್ಮಾಣಕ್ಕೆ ಸಂಬಂಧಿಸಿದಂತೆ ಹಾಕಿಸಿದಷ್ಟು ಶಾಸನಗಳನ್ನು ಬಾವಿಗಳ ನಿರ್ಮಾಣದಲ್ಲಿ ಹಾಕಿಸಿಲ್ಲ. ಹಾಗಾಗಿ ಶಾಸನೋಕ್ತ ಬಾವಿಗಳ ಉಲ್ಲೇಖ ವಿರಳವಾಗಿದೆ.
ಕೊಪ್ಪಳ ಜಿಲ್ಲೆಯಲ್ಲೂ ಪ್ರಾಚೀನ ಕಾಲದಿಂದಲೂ ಬಾವಿಗಳ ನಿರ್ಮಾಣವಾಗಿದೆ. ಕ್ರಿ.ಶ. ೧೦೬೧ರ ಅಳವಂಡಿ ಶಾಸನವು ಚಾಲುಕ್ಯ ತ್ರೈಲೋಕ್ಯಮಲ್ಲನ ಕಾಲದಲ್ಲಿ ಗುಲ್ಲಿಮಲ್ಲಯ್ಯ ಎಂಬುವನು ಬಾವಿಯನ್ನು ತೋಡಿಸಿದ ವಿಷಯವಿದೆ. ಜಿಲ್ಲೆಯ ಬಾವಿಯ ಬಗೆಗಿನ ಅತ್ಯಂತ ಪ್ರಾಚೀನ (ಶಾಸನ) ಉಲ್ಲೇಖ ಇದಾಗಿದೆ. ವಿಜಯನಗರ ಕಾಲದಲ್ಲೂ ಅನೇಕ ಬಾವಿಗಳು ನಿರ್ಮಾಣವಾಗಿವೆ. ಅವು ಕೇವಲ ರಾಜರಷ್ಟೇ ಅಲ್ಲ ಮಾಂಡಲಿಕರು, ಅಧಿಕಾರಿಗಳು, ಶ್ರೀಮಂತರು, ವರ್ತಕರು ಹಾಗೂ ಗಣ್ಯರಿಂದ ನಿರ್ಮಾಣವಾಗಿವೆ. ಹಾಗಾಗಿ ಈ ಬಾವಿಗಳು ಕೆಲವು ಸಲ ನಿರ್ಮಾತೃಗಳ ಹೆಸರುಗಳನ್ನೇ ಹೊತ್ತಿವೆ. ವಾಸ್ತುಶೈಲಿಯನ್ನು ಅನುಲಕ್ಷಿಸಿ ಜಿಲ್ಲೆಯ ವಿಜಯನಗರ ಕಾಲದ ಬಾವಿಗಳನ್ನು ಕೆಳಗೆ ವಿವರಿಸಲಾಗಿದೆ.

ಕನಕಗಿರಿಯ ವೆಂಕಟಪತಿ ಬಾವಿ

ಕರ್ನಾಟಕದ ಅಪರೂಪ ಬಾವಿಗಳಲ್ಲಿ ಕನಕಗಿರಿಯ ವೆಂಕಟಪತಿ ಬಾವಿಯೂ ಒಂದು. ಈ ಬಾವಿಯನ್ನು ಒಂದನೇ ಕನಕಪ್ಪ ಉಡಿಚನಾಯಕನ ಸಹೋದರ ವೆಂಕಟಪ್ಪನಾಯಕನು ಕ್ರಿ.ಶ. ೧೫೮೬ರಲ್ಲಿ ಕಟ್ಟಿಸಿದನು. ಈ ಬಾವಿಯ ನಿರ್ಮಾಣದ ಅಂದಿನ ವೆಚ್ಚ ಒಂದು ಲಕ್ಷ ವರಹಗಳು ಮಾತ್ರ. ತನ್ನ ಸಹೋದರನು ಅನೇಕ ದೇವಾಲಯಗಳನ್ನು, ಪುಷ್ಕರಿಣಿಗಳನ್ನು ಕಟ್ಟಿಸಿದ್ದನ್ನು ನೋಡಿದ ಇವನು ತಾನೂ ಏನಾದರೊಂದು ನಿರ್ಮಿಸಬೇಕೆಂದು ಯೋಚಿಸಿದನು. ಅವನ ಯೋಚನೆಯ ಫಲವೇ ಈ ಅದ್ಭುತ ಕೆತ್ತನೆಯ, ವಾಸ್ತು ವಿನ್ಯಾಸದ ವೆಂಕಟಪತಿಬಾವಿ. ಅರಮನೆಯವರಿಗಾಗಿಯೇ ನಿರ್ಮಾಣಗೊಂಡ ಈ ಬಾವಿಯನ್ನು 'ರಾಣಿ ಬಾವಿ' ಎಂದು ಜನಪದರು ಕರೆಯುವುದು ವಾಡಿಕೆ. ಬಾವಿಯಿಂದ ನೀರನ್ನು ಮೇಲೆತ್ತಿ ಕಾಲುವೆ ಮೂಲಕ ಹೂದೋಟಕ್ಕೆ ನೀರನ್ನು ಹರಿಸುವ ವ್ಯವಸ್ಥೆ

ಮಾಡಲಾಗಿತ್ತು. ಗಾರೆ ಮತ್ತು ಕಲ್ಲುಹರಳುಗಳಿಂದ ಮಾಡಿದ ಈ ಕಾಲುವೆಯನ್ನು ಇಂದಿಗೂ ಕಾಣಬಹುದು. ಏತದಿಂದ ನೀರನ್ನು, ಮೇಲೆತ್ತುತ್ತಿದ್ದರೆಂದು ತಿಳಿದುಬರುತ್ತದೆ. ನೆಲದ ಮಟ್ಟದಲ್ಲಿಯೇ ಇರುವ ಈ ಬಾವಿಯು ೩೦ ಅಡಿಗೂ ಹೆಚ್ಚು ಆಳವನ್ನು ಹೊಂದಿದ್ದು, ಸುತ್ತಲೂ ಸೈಜು ಕಲ್ಲುಗಳಿಂದ ಕಟ್ಟಲ್ಪಟ್ಟಿದೆ. ಒಂದು ರೀತಿಯಲ್ಲಿ ಈ ಬಾವಿಯು ದೇವಾಲಯುವೂ ಹೌದು. ಏಕೆಂದರೆ ವಿಷ್ಣು ಶಿವ ಮತ್ತು ಬ್ರಹ್ಮ ದೇವರ ಗುಡಿಗಳು ಈ ಬಾವಿಯಲ್ಲಿ ಇವೆ. ಸಂಗೀತದ ಸಪ್ತಸ್ವರಗಳನ್ನು ಹೊರಡಿಸುವ ಕಂಬಗಳೂ ಇಲ್ಲುಂಟು. ಪೂರ್ವದ ಬಾಲ್ಕನಿ ಕಟ್ಟಡವು ಅತ್ಯಂತ ಸುಂದರವಾಗಿದೆ.

ಕನಕಾಚಲ ಲಕ್ಷ್ಮಿನರಸಿಂಹ ದೇವಾಲಯದ ವಾಸ್ತುವಿನಂತೆ ಈ ಬಾವಿಯು ಇದೆ. ಈ ದೇವಾಲಯದ ಮಧ್ಯದಲ್ಲಿ ವೆಂಕಟರಮಣ(ವಿಷ್ಣು) ಎಡಕ್ಕೆ ಬ್ರಹ್ಮ ಮತ್ತು ಬಲಕ್ಕೆ ಈಶ್ವರ ದೇವಾಲಯಗಳಿದ್ದಂತೆ ಈ ಬಾವಿಯಲ್ಲಿಯೂ ಕಾಣಬಹುದು. ಆದರೆ ಈ ದೇವಾಲಯಗಳಲ್ಲಿ ಮೂರ್ತಿಗಳೇ ಇಲ್ಲ. ಈಶ್ವರ ದೇವಾಲಯದಲ್ಲಿ ಮಾತ್ರ ಭಗ್ನಗೊಂಡ ಲಿಂಗವಿದೆ. ಈ ದೇವಾಲಯಗಳ ಮುಂಭಾಗವೇ ವೆಂಕಟಪತಿ ಬಾವಿ. ವಿಷ್ಣು ದೇವಾಲಯದಲ್ಲಿ ಯಾವುದೇ ಮೂರ್ತಿ ಇಲ್ಲ. ಈ ದೇವಾಲಯದ ಮುಖಮಂಟಪದ ಕಂಬಗಳ ಸಾಲು ಭಿನ್ನ ಕೆತ್ತನೆಯಿಂದ ನೋಡುಗರ ಗಮನ ಸೆಳೆಯುತ್ತದೆ. ಈ ದೇವಾಲಯದ ಮುಂದುಗಡೆ ಅಂಗಳವಿದೆ ಯಾವುದೇ ಮೇಲಛತ್ತು ಇಲ್ಲ. ಸ್ವಲ್ಪ ಮುಂದೆ ಹೋದಾಗ ಹಿಂದೂ ಮುಸ್ಲಿಂ ಶೈಲಿಯ ಪ್ರವೇಶ ಕಮಾನು ಕಟ್ಟಡ ಬರುತ್ತದೆ. ಈ ಪ್ರವೇಶದ ಮೂಲಕ ಮೆಟ್ಟಿಲುಗಳನ್ನು, ಇಳಿಯುತ್ತಾ ಹೋದಾಗ ಬಾವಿಯ ಪ್ರವೇಶವಾಗುತ್ತದೆ. ಮೆಟ್ಟಿಲುಗಳಿಂದ ರಚನೆಯಾದ ಬಾವಿಯು ಇಲ್ಲಿ ತಳಕ್ಕೆ ಬಂದಂತೆ ಕಿರಿದಾಗುತ್ತಾ ಬಂದಿದೆ. ಚೌಕಾಕಾರವಿರುವ ಈ ಬಾವಿಯು ಸುತ್ತಲೂ ವಿಜಯನಗರ ಶೈಲಿಯ ಸಂಯುಕ್ತ ಕಂಬಗಳಿಂದ ಕೂಡಿದ ಪ್ರದಕ್ಷಿಣೆ ಮಂಟಪವನ್ನು ಹೊಂದಿದೆ.

ಈ ಬಾವಿಯ ಮುಖ್ಯ ಪ್ರವೇಶ ಉತ್ತರಾಭಿಮುಖವಾಗಿ ಬಾವಿಯ ನೈರುತ್ಯ ಮೂಲೆಯಿಂದ ಆಗುತ್ತದೆ. ಈ ಬಾವಿಯ ಈಶಾನ್ಯ, ವಾಯುವ್ಯ ಮತ್ತು ಅಗ್ನೇಯ ಮೂಲೆಗಳಲ್ಲಿ ಎಲ್ ಆಕಾರದ ಚಿಕ್ಕ ಪ್ರವೇಶಗಳಿವೆ. ಈ ಪ್ರವೇಶಗಳಿಗೆ ಛಾವಣಿ ಇದೆ. ಬಾಲ್ಕನಿ ಕಟ್ಟಡ ಪ್ರವೇಶವನ್ನು ಉತ್ತರಾಭಿಮುಖವಾಗಿ ಮತ್ತು ದಕ್ಷಿಣಾಭಿಮುಖವಾಗಿ ಎರಡೂ ಕಡೆಯಿಂದ ಮಾಡಬಹುದು. ಈ ಕಟ್ಟಡದ ಮೇಲೆಯೇ ಏತದ ವ್ಯವಸ್ಥೆಯನ್ನು ಮಾಡಿದ್ದಾರೆ. ಬಾವಿಯ ಮುಖ್ಯ ಪ್ರವೇಶದ ಎಡಗೋಡೆಯ ಮೇಲಿರುವ ಹತ್ತು ಭುಜಗಳುಳ್ಳ ಗಜಸಂಹಾರ ಶಿವನ ಶಿಲ್ಪ ಮತ್ತು ಎರಡು ನಾಗಶಿಲ್ಪಗಳು ನೋಡುಗರ ಗಮನ ಸೆಳೆಯುತ್ತವೆ. ಆನೆಯ ರೂಪದ ಗಜಾಸುರನ ಹೊಟ್ಟೆಯನ್ನು ಸೀಳಿ ಶಿವನು ವಿವಿಧ ಆಯುಧಗಳನ್ನು ಹಿಡಿದು ನೃತ್ಯ ಮಾಡುವ ಈ ಶಿಲ್ಪ ಬಾವಿಯ ಕಲಾವಂತಿಕೆಯನ್ನು ಹೆಚ್ಚಿಸಿದೆ. ಬಾವಿಯ ಪಶ್ಚಿಮದ ಗುಡಿಯ ಮುಂಭಾಗದ ಕಂಬಗಳು ಕೆಳಗೆ ಅಧಿಷ್ಠಾನದಲ್ಲಿ ಸಿಂಹ, ನೃತ್ಯ ಮತ್ತು ಸಂಗೀತಗಾರರ ಶಿಲ್ಪಗಳಿವೆ. ಇಲ್ಲಿನ ಏಳು ಕಂಬಗಳು ವಿಭಿನ್ನ ಕೆತ್ತನೆಯಿಂದ ಗಮನ ಸೆಳೆಯುತ್ತದೆ. ಮೊದಲನೆಯ ಕಂಬದಲ್ಲಿ ಗರುಡ, ನೃತ್ಯ ಮಾಡುವ ಮಾನವ ಶಿಲ್ಪವನ್ನು, ಎರಡನೆಯ

ಕಂಬದಲ್ಲಿ ವ್ಯಾಳಿ ಮೇಲೇರಿದ ಖಡ್ಗ ಮತ್ತು ಗುರಾಣಿ ಹಿಡಿದ ಸವಾರ, ಅಧಿಷ್ಠಾನದಲ್ಲಿ ಇಬ್ಬರು ಸಂಗೀತಗಾರರ ಶಿಲ್ಪಗಳು, ಮೂರನೆಯ ಕಂಬದಲ್ಲಿ ಹಿಂಗಾಲಿನ ಮೇಲೆ ನಿಂತ ಕುದುರೆಯನ್ನು ಏರಿದ ಸವಾರ, ಅಧಿಷ್ಠಾನದಲ್ಲಿ ಸಂಗೀತಗಾರ ಮತ್ತು ನೃತ್ಯಗಾರ್ತಿ, ನಾಲ್ಕನೆಯ ಕಂಬದಲ್ಲಿ ಖಡ್ಗವನ್ನು ಹಿಡಿದ ಗಡ್ಡಧಾರಿಯನ್ನು ಕುದುರೆ ತನ್ನೆರಡು ಮುಂಗಾಲಿನಿಂದ ತುಳಿಯುವ ಮತ್ತು ಅಧಿಷ್ಠಾನದಲ್ಲಿ ನೃತ್ಯಗಾರ್ತಿಯ ಶಿಲ್ಪ, ಐದನೆಯ ಕಂಬದಲ್ಲಿ ವ್ಯಾಳಿಯ ಮೇಲಿನ ಸವಾರ ಖಡ್ಗವನ್ನು ಹಿಡಿದಿರುವ, ಆರನೆಯ ಕಂಬದಲ್ಲಿನ ಮಜ್ಜಿಗೆ ಕಡೆಯುವ ಸ್ತ್ರೀ ಶಿಲ್ಪ, ಏಳನೆಯ ಕಂಬದಲ್ಲಿ ರಾಕ್ಷಸ ಸಂಹಾರ, ಆಂಜನೇಯ ಮುಂತಾದ ಶಿಲ್ಪಗಳು ಗಮನ ಸೆಳೆಯುತ್ತವೆ.

ಉತ್ತರ ಮತ್ತು ದಕ್ಷಿಣಕ್ಕೆ ಇರುವ ಗುಡಿಗಳ ಬಲ ಮತ್ತು ಎಡಭಾಗದಲ್ಲಿರುವ ಕಂಬಗಳಲ್ಲಿ ಸಪ್ತ ಸ್ವರಗಳು ಹೊರಡುತ್ತವೆಂದು ಇಲ್ಲಿಗೆ ಬಂದವರು ಪರೀಕ್ಷಿಸುತ್ತಾರೆ. ಆದರೆ ವಿಜಯವಿಠ್ಠಲ ದೇವಾಲಯದ ಕಂಬಗಳಷ್ಟು ಇವು ಸ್ಪಷ್ಟ ಸ್ವರಗಳನ್ನು ಹೊರಡಿಸಲಾರವು. ಪೂರ್ವದ ಬಾಲ್ಕನಿ ಕಟ್ಟಡವು ಮುಂದೆ ಚಾಚಿದ ಜಗಲಿಯ ಮೇಲಿರುವ ಕಂಬಗಳ ಮೇಲೆ ರಚನೆಗೊಂಡಿದೆ. ಈ ಕಂಬಗಳೆರಡರಲ್ಲಿ ಸಿಂಹದ ಮೇಲೆ ಖಡ್ಗಧಾರಿ ಸವಾರ ಕುಳಿತಿದ್ದಾನೆ. ಸಿಂಹಗಳು ಆನೆಯ ಮೇಲೆ ಹಿಂಗಾಲುಗಳನ್ನಿಟ್ಟು ನಿಂತಿವೆ. ಈ ಸಿಂಹಗಳ ಬಾಯಿಯಲ್ಲಿ ಕಲ್ಲು ಗುಂಡುಗಳಿದ್ದವು. ಅವುಗಳನ್ನು ಕೈಯಿಂದ ತಿರುಗಿಸಬಹುದಾಗಿತ್ತು. ಆದರೆ ನಿಧಿಚೋರರ ಕೃತ್ಯದಿಂದ ಆ ಗುಂಡುಗಳು ಹಾಳಾಗಿಹೋಗಿವೆ. ಈ ಬಾಲ್ಕನಿ ಕಟ್ಟಡವು ಕಮಾನುಗಳಿಂದ ಮಿಥುನ ಶಿಲ್ಪಗಳಿಂದ ಗಮನ ಸೆಳೆಯುತ್ತದೆ. ಕುಸ್ತಿ ಆಡುವ, ನೃತ್ಯ, ಸಂಗೀತಗಾರರ, ಗಿಳಿ, ಹೂವು, ಎಲೆಗಳ, ಶಿಲ್ಪವೂ ಇಲ್ಲುಂಟು. ಒಳಮಾಳಿಗೆಯಲ್ಲಿ ವಿವಿಧ ರಂಗವಲ್ಲಿಗಳ ಅಲಂಕಾರವಾಗಿದೆ.[೧೯]

ಕನಕಗಿರಿಯ ಅಚ್ಚಮ್ಮನ ಬಾವಿ

ಅಚ್ಚಮ್ಮಬಾವಿಯನ್ನು ಮುಮ್ಮಡಿ ಉಡಿಚನಾಯಕನ ರಾಣಿ ಅಚ್ಚಮ್ಮದೇವಿ ಕಟ್ಟಿಸಿದಳು. ಲಕ್ಷ್ಮೀದೇವಿ ಕೆರೆಯ ಅಂಗಳದಲ್ಲಿರುವ ಈ ಬಾವಿಯು ೫೦ ಅಡಿ ಉದ್ದ ೫೦ ಅಡಿ ಅಗಲವನ್ನು ಹೊಂದಿದೆ. ೩೦ ಅಡಿಗಳಷ್ಟು ಆಳವಾಗಿದೆ. ಬಾವಿಯು ಚೌಕಾಕಾರವಾಗಿದ್ದು ೩೦ ಅಡಿಗಳಷ್ಟು ಉದ್ದವಾದ ಪ್ರವೇಶವನ್ನು ಪೂರ್ವಭಾಗದಲ್ಲಿ ಹೊಂದಿದೆ. ಮೆಟ್ಟಿಲುಗಳ ಮೂಲಕ ಬಾವಿಯನ್ನು ಪ್ರವೇಶಿಸುವಾಗ ಎಡಕ್ಕೆ ಮತ್ತು ಬಲಕ್ಕೆ ಎರಡು ಪುಟ್ಟ ಗುಡಿಗಳು ಕಂಡುಬರುತ್ತವೆ. ಬಲಕ್ಕೆ ಇರುವ ಗುಡಿಯೊಳಗೆ ಆದಿಶೇಷ ಶಯನನಾದ ಮಹಾವಿಷ್ಣು ವಿಗ್ರಹವು ಗಮನ ಸೆಳೆಯುತ್ತದೆ. ಇದು ಕನಕಾಚಲ ಲಕ್ಷ್ಮೀನರಸಿಂಹ ದೇವಾಲಯದ ಪ್ರವೇಶ ಬಾಗಿಲ ತೋರಣದ ಮೇಲಿನ ಶಿಲ್ಪದಂತಿದೆ. ಪ್ರವೇಶ ಗೋಡೆಯಲ್ಲಿರುವ ೧೬ ದಳದ ಕಮಲ, ಗಜಲಕ್ಷ್ಮೀ, ನಾಗಶಿಲ್ಪಗಳು, ಮಜ್ಜಿಗೆ ಕಡೆಯುವ ಸ್ತ್ರೀ, ಕಾಮಧೇನು (ಪುರುಷ ಮೃಗ) ತನ್ನ ಕೈಯಲ್ಲಿ ಗಂಟೆ ಹಿಡಿದು ಶಿವಲಿಂಗಕ್ಕೆ ಮಂಗಳಾರತಿ ಮಾಡುವ, ಹಂಸ, ಶಂಕ, ನಾಮ, ಚಕ್ರ, ಜಗಳ, ನಿರತ ಗಜಗಳು, ತಳಕು, ಆಮೆ, ಮಾನವ ಮಿಥುನ, ಮೀನ ಮುಂತಾದ ಶಿಲ್ಪಗಳು ಬಾವಿಯ ಸೌಂದರ್ಯವನ್ನು ಇಮ್ಮಡಿಗೊಳಿಸಿವೆ. ಈ ಬಾವಿಯೂ ಏತ ಕಟ್ಟಡವನ್ನು ಹೊಂದಿದೆ.

ಕನಕಗಿರಿಯ ಚಿಕ್ಕಕನಕಪ್ಪನ ಬಾವಿ

ಚಿಕ್ಕಕನಕಪ್ಪನ ಬಾವಿಯನ್ನು ಚಿಕ್ಕ ಕನಕಪ್ಪನಾಯಕನು ಕಟ್ಟಿಸಿದನು. ಚೌಕಾಕಾರದಲ್ಲಿರುವ ಈ ಬಾವಿಯ ಏತ ಕಟ್ಟಡವು ಸುಂದರ ಕೆತ್ತನೆಗಳಿಂದ ಕೂಡಿದೆ. ಎರಡು ಕಂಬಗಳ ಮೇಲೆ ಏತ ಕಟ್ಟಡ ನಿಂತಿದೆ. ಈ ಭಾಗದ ಗೋಡೆಯಲ್ಲಿ ವಿಘ್ನೇಶ್ವರ, ನಂದಿ, ಈಶ್ವರ, ಗಜಲಕ್ಷ್ಮೀ ಶಿಲ್ಪಗಳನ್ನು ಕಾಣಬಹುದು. ಕುಪ್ಪಳಿಸುವ ಸಿಂಹ ಶಿಲ್ಪಗಳು ಈ ಬಾವಿಯಲ್ಲಿ ಮುಖ್ಯವಾಗಿ ಕಂಡುಬರುತ್ತವೆ. ಇಂತಹ ೧೨ ಶಿಲ್ಪಗಳು ಈ ಬಾವಿಯಲ್ಲಿವೆ. ಈ ಬಾವಿಯಲ್ಲಿದ್ದಂತೆ ಈಶ್ವರ ನಂದಿ ವಿಘ್ನೇಶ್ವರ ಮೂರ್ತಿಗಳು ದೆವ್ವದ ಗುಡಿ ಬಾವಿ ಎಂದು ಕರೆಯುವ ಬಾವಿಯಲ್ಲಿವೆ. ಹಾಗಾಗಿ ಈ ಬಾವಿಯನ್ನು ಈ ಚಿಕ್ಕಕನಕಪ್ಪನೇ ಕಟ್ಟಿಸಿರಬೇಕು. ಈ ಬಾವಿಯು ಪ್ರವೇಶದ ಬಲಭಾಗದಲ್ಲಿ ಚಿಕ್ಕಕನಕಪ್ಪನ ಗುಡಿ ಇದೆ. ಈ ಗುಡಿಯಲ್ಲಿ ಏಕ ಶಿಲೆಯಲ್ಲಿ ಮಾಡಲಾದ ಚಿಕ್ಕ ಕನಕಪ್ಪನ ಕಪ್ಪು ಶಿಲೆಯ ವಿಗ್ರಹವಿದೆ. ಈ ದೇವಾಲಯದ ಕಂಬಗಳಲ್ಲಿ ಮಿಥುನ, ಶಿಲ್ಪಗಳಿವೆ. ಗರ್ಭಗೃಹದ ಮೇಲೆ ದ್ರಾವಿಡ ಶೈಲಿಯ ಶಿಖರವಿದೆ.

ಕನಕಗಿರಿಯ ಮಹಾಂತರ ಮಠದ ಬಾವಿ

ಕನಕಗಿರಿಯ ಮೌನೇಶ್ವರ ಮಠವನ್ನು ಈ ಹಿಂದೆ ಮಹಂತರ ಮಠ ಎಂದು ಕರೆಯಲಾಗುತ್ತಿತ್ತು. ಕನಕಗಿರಿಗೆ ಬಂದಂತಹ ಶರಣರ, ಸನ್ಯಾಸಿಗಳ, ಸಾಧುಗಳ ಆಶ್ರಯಕ್ಕೆ ಈ ಸ್ಥಳವನ್ನು ಕೊಡಲಾಗತ್ತಿತ್ತು. ಹಾಗಾಗಿ ಅದನ್ನು ಮಹಂತರ ಮಠ ಎಂದು ಕರೆಯಲಾಯಿತು. ಈ ಮಠವು ಒಂದು ಕಾಲಕ್ಕೆ ವೈಷ್ಣವ ದೇವಾಲಯವಾಗಿತ್ತು. ಮಠದ ಪ್ರವೇಶ ಮತ್ತು ಬಾವಿಯ ಪ್ರವೇಶದಲ್ಲಿ ಶಂಕ, ನಾಮ, ಚಕ್ರ ಶಿಲ್ಪಗಳನ್ನು ಈಗಲೂ ನೋಡಬಹುದು. ಮೌನೇಶ್ವರರು ತಿಂಥಣಿಯಿಂದ ಇಲ್ಲಿಗೆ ಬಂದು ಬಹಳ ದಿನಗಳ ಕಾಲ ನೆಲೆಸಿದ್ದರೆಂದೂ, ಹಾಗಾಗಿ ಅಂದಿನಿಂದ ಈ ಸ್ಥಳವು ಮೌನೇಶ್ವರ ಮಠವಾಯಿತೆಂದು ಹೇಳಲಾಗುತ್ತಿದೆ. ಮಹಂತರ ಮಠದ ಬಾವಿಯು ಮಠದ ಹೊರಭಾಗದಲ್ಲಿದ್ದು ಪ್ರವೇಶವು ಮಠದ ಒಳಭಾಗದಲ್ಲಿದೆ. ಈ ಬಾವಿಯನ್ನು ಮೂರು ಹೆಸರಿನಿಂದ ಕರೆಯಲಾಗುತ್ತಿದೆ. ಹೊಕ್ಕು ತುಂಬೋಬಾವಿ, ಗಿಂಡಿಬಾವಿ, ಸೇದಬಾವಿ. ಮಠದ ಒಳಗಿನಿಂದ ಪೂಜೆಗಾಗಿ ಬಾವಿಯೊಳಗೆ ಹೊಕ್ಕು (ಪ್ರವೇಶಿಸಿ) ನೀರು ತುಂಬುವುದರಿಂದ ಹೊಕ್ಕು ತುಂಬೋ ಬಾವಿಯೆಂದು, ಮಠದ ಹೊರಗಿನಿಂದ ಸಾರ್ವಜನಿಕರು ನೀರನ್ನು ಸೇದಿಕೊಳ್ಳುವುದರಿಂದ ಸೇದಬಾವಿಯೆಂದು ಮತ್ತು ಮಠದ ಮೇಲಿನ ಅಂತಸ್ತಿನಿಂದ ಗಿಂಡಿಯನ್ನು ಬಿಟ್ಟು ನೀರನ್ನು ಸೇದಿಕೊಳ್ಳುವುದರಿಂದ ಗಿಂಡಿಬಾವಿಯೆಂದು ಕರೆಯುತ್ತಾರೆ. ಬಾವಿಯ ಪ್ರವೇಶದ ಗೋಡೆಗಳಲ್ಲಿ ಮುಂಗಸಿ ಹಾವನ್ನು ಹಿಡಿಯುತ್ತಿರುವ, ನಾಗ ಮಿಥುನ, ಹುಲಿಯನ್ನು ಭರ್ಚಿಯಿಂದ ತಿವಿದ ವೀರ, ಆಮೆ, ತಪಸ್ಸುನಿರತ ವ್ಯಕ್ತಿ ಮುಂತಾದ ಶಿಲ್ಪಗಳು ಕಂಡುಬರುತ್ತವೆ. ಈ ಮಠದೊಳಗೆ ಗರುಡಗಂಬ, ಶಿವಲಿಂಗ, ಹಾಳಾದ ಗುಡಿಗಳಿವೆ.

ಬಸರಿಹಾಳ ಲಕ್ಷ್ಮೀ ಗುಡ್ಡದ ಬಾವಿ

ಕನಕಗಿರಿಯ ಲಕ್ಷ್ಮೀ ಗುಡ್ಡದ ಉತ್ತರಭಾಗದ ಇಳಿಜಾರಿನಲ್ಲಿರುವ ಕನಕರಾಯನ ಬಾವಿಯನ್ನು ಮುಮ್ಮಡಿ ಉಡಿಚನಾಯಕನ ರಾಣಿ ಕನಕಮ್ಮ ರಾಣಿಯು ಕ್ರಿ.ಶ. ೧೬೬೮ರಲ್ಲಿ ಕಟ್ಟಿಸಿದಳು. ಈ

ಬಾವಿಯು ೪೦ ಅಡಿ ಉದ್ದ ೪೦ ಅಗಲವನ್ನು ಹೊಂದಿದೆ. ೨೫ ಅಡಿ ಆಳವನ್ನು ಹೊಂದಿದೆ. ಶಂಕ, ನಾಮ, ಚಕ್ರ, ಮೀನು ಆಮೆ ಮುಂತಾದ ಶಿಲ್ಪಗಳನ್ನು ಬಾವಿಯಲ್ಲಿ ಕೆತ್ತಲಾಗಿದೆ. ಈ ಬಾವಿಯ ಏತಕಟ್ಟಡದ ಭಾಗವು ಆಕರ್ಷಣೀಯವಾಗಿದೆ. ಬಾವಿಯ ಮೇಲ್ಭಾದ ಪಶ್ಚಿಮದಲ್ಲಿ ಒಂದು ಹಾಳಾದ ದೇವಾಲಯವಿದೆ.

ಹನುಮಸಾಗರ ತಂಗವ್ವನ ಬಾವಿ

ಹನುಮಸಾಗರವು ಕುಷ್ಟಗಿ ತಾಲೂಕಿನಲ್ಲಿದ್ದು ಕುಷ್ಟಗಿಯಿಂದ ವಾಯುವ್ಯಕ್ಕೆ ೨೦ ಕಿ.ಮೀ. ದೂರವಿದೆ. ಹನುಮಸಾಗರದ ಕೆ.ಇ.ಬಿ. ಕಛೇರಿ ಎದುರಿಗೆ ಒಂದು ವಿಶಾಲವಾದ ಮತ್ತು ಸುಂದರ ಕೆತ್ತನೆಗಳುಳ್ಳ ಬಾವಿಯಿದೆ. ಸ್ಥಳೀಯರು ಇದನ್ನು ತಂಗಮ್ಮನ ಬಾವಿ ಎಂದು ಕರೆಯುತ್ತಾರೆ. ಈ ಬಾವಿಯ ಬಗೆಯ ಐತಿಹ್ಯ ಈ ರೀತಿ ಇದೆ. ಶ್ರೀಮಂತ ಮನೆತನದ ಹಿನ್ನಲೆಯಿರುವ ತಂಗಮ್ಮಳು ತನ್ನ ಮಗನ ಮದುವೆಯನ್ನು ಸುಂದರವಾದ ಕನ್ಯೆಯೊಂದಿಗೆ ಮಾಡಿದಳು. ಆದರೆ ಈ ದಂಪತಿಗೆ ತುಂಬಾ ವರ್ಷಗಳಾದರು ಮಕ್ಕಳಾಗಲಿಲ್ಲ. ಮೊಮ್ಮಕ್ಕಳ ಭಾಗ್ಯಕಾಣದೆ ತಂಗಮ್ಮ ಈಶ್ವರನಿಗೆ ಹರಕೆ ಹೊರುತ್ತಾಳೆ. ಮೊಮ್ಮಕ್ಕಳು ಹುಟ್ಟಿದರೆ ಒಂದು ಉತ್ತಮವಾದ ಜನೋಪಯೋಗಿ ಕಾರ್ಯವೆನಿಸಿದ ಬಾವಿ ನಿರ್ಮಾಣ ಮಾಡುತ್ತೇನೆಂದು ಪ್ರಾರ್ಥಿಸುತ್ತಾಳೆ. ನಂತರದಲ್ಲಿ ಮೊಮ್ಮಕ್ಕಳು ಹುಟ್ಟಿದರಿಂದ ತನ್ನ ಹರಕೆಯಂತೆ ಗ್ರಾಮದಲ್ಲಿ ಸಾರ್ವಜನಿಕರಿಗೆ ಹಾಗೂ ಪ್ರಯಾಣಿಕರಿಗೆ ಕುಡಿಯುವ ನೀರಿನ ಅನುಕೂಲವಾಗಲಿ ಎಂಬ ಸದ್ದುದೇಶದಿಂದ ಕಲಾತ್ಮಕವಾಗಿ ಕೆತ್ತನೆ ಮಾಡಿದ ಬಾವಿಯೊಂದನ್ನು (ಪುಷ್ಕರಣಿ) ನಿರ್ಮಿಸುತ್ತಾಳೆ ಎಂದು ಜನ ಹೇಳುತ್ತಾರೆ. ಅಲ್ಲದೇ ಈ ಬಾವಿಯಲ್ಲಿ ದೇವರ ಗುಡಿ, ಆಹಾರ, ಅಡುಗೆ ತಯಾರಿಸಿಕೊಳ್ಳಲು ಎರಡು ಕೋಣೆಗಳು, ಅಗಲವಾದ ವಿಶಾಲವೆನಿಸಿದ ಮೆಟ್ಟಿಲುಗಳು, ಮಹಡಿ ಕಟ್ಟಡವಿದೆ.

ಬಾವಿಯ ಪ್ರವೇಶವು ಪೂರ್ವಭಾಗದಲ್ಲಿವೆ. ಪ್ರವೇಶ ದ್ವಾರದಿಂದ ಬಾವಿಯಲ್ಲಿ ಇಳಿಯುವ ದಾರಿಯಲ್ಲಿ ಪಶ್ಚಿಮಾಭಿಮುಖವಾಗಿ ೧೫ ಮೆಟ್ಟಿಲುಗಳಿವೆ. ಇದರ ನಂತರ ದೊಡ್ಡದಾದ ಕಮಾನಿದೆ. ಈ ರೀತಿಯ ಕಮಾನು ಕನಕಗಿರಿಯ ವೆಂಕಟಪತಿ ಬಾವಿಯಲ್ಲಿ ಕಾಣುತ್ತೇವೆ. ಈ ಕಮಾನಿನ ಎದುರಾಗಿ ದಕ್ಷಿಣಾಭಿಮುಖವಾಗಿ ಆಂಜನೇಯ ದೇವಾಲಯವಿದೆ. ಇದರಲ್ಲಿ ಗರ್ಭಗೃಹ, ತೆರೆದ ಸಭಾಮಂಟಪಗಳಿವೆ. ಸಭಾಮಂಟಪಕ್ಕಿಂತ ಗರ್ಭಗೃಹ ಎತ್ತರದಲ್ಲಿದೆ. ಇದರ ಪ್ರವೇಶದ್ವಾರವು ಸರಳವಾದ ರಚನೆಯಿಂದ ಕೂಡಿದ್ದು, ಒಳಗೆ ಆಂಜನೇಯನ ಉಬ್ಬುಶಿಲ್ಪವಿದೆ. ಮೂರು ಅಂಕಣಗಳಿಂದ ಕೂಡಿದ ಸಭಾಮಂಟಪದಲ್ಲಿ ಕೆಳಗೆ ಚೌಕಾಕಾರದ ಮಧ್ಯೆ ವೃತ್ತಾಕಾರ ಮೇಲೆ ಫಲಕ ಬೋದಿಗೆಗಳನ್ನೊಳಗೊಂಡ ಎರಡು ಕಂಬಗಳಿವೆ. ಗರ್ಭಗೃಹದ ಮೇಲೆ ಮೂರು ಹಂತದ ಚಿಕ್ಕಶಿಖರವಿದೆ. ಈ ದೇವಾಲಯದ ಬಲಭಾಗಕ್ಕೆ ಈಶ್ವರ ದೇವಾಲಯವಿದೆ. ಈ ದೇವಾಲಯದ ಗರ್ಭಗೃಹ ಮತ್ತು ಸಭಾಮಂಟಪದಲ್ಲಿ ಲಿಂಗ ಮತ್ತು ನಂದಿಯ ಶಿಲ್ಪಗಳಿವೆ. ಈ ಗರ್ಭಗೃಹದ ಪ್ರವೇಶ ದ್ವಾರದ ಲಲಾಟ ಬಿಂಬದಲ್ಲಿ ಗಣೇಶನ ಉಬ್ಬು ಶಿಲ್ಪವಿದೆ. ಈ ದ್ವಾರಬಾಗಿಲಿನ ಎರಡು

ಬದಿಗೂ ಕೈ ಮುಗಿದು ನಿಂತ ದ್ವಾರಪಾಲಕರ ಶಿಲ್ಪಗಳಿವೆ. ಈ ದೇವಾಲಯಗಳ ಗರ್ಭಗೃಹದ ಮೇಲೆ ಮೂರು ಹಂತದ ಚಿಕ್ಕ ಶಿಖರವಿದೆ. ಈ ಶಿಖರದ ಭಾಗ ಮಾತ್ರ ನೆಲದ ಮೇಲೆ ಕಾಣುತ್ತದೆ. ಈ ದೇವಾಲಯವನ್ನು ನೆಲದಲ್ಲಿ ಕೊರೆದು ನಿರ್ಮಿಸಿರುವುದರಿಂದ ಇದರ ಹೊರಗೋಡೆ ಕಂಡು ಬರುವುದಿಲ್ಲ. ಇಲ್ಲಿಂದ ಉತ್ತರಾಭಿಮುಖವಾಗಿ ಮೆಟ್ಟಿಲುಗಳಿದ್ದು, ಅವುಗಳು ನೀರಿನ ಮಟ್ಟಕ್ಕೆ ಹೋಗುತ್ತವೆ.

ತಂಗಮ್ಮ ಬಾವಿಯನ್ನು ತಳಭಾಗದಿಂದ ವ್ಯವಸ್ಥಿತವಾಗಿ ಕಡೆದು ದೊಡ್ಡ ಗಾತ್ರದ ಕಲ್ಲು ಮತ್ತು ಗಾರೆಯಿಂದ ನಿರ್ಮಿಸಲಾಗಿದೆ. ಏತ ನೀರಾವರಿ ವ್ಯವಸ್ಥಿತವಾಗಿ ಕಡೆದು ದೊಡ್ಡ ಗಾತ್ರದ ಕಲ್ಲು ಮತ್ತು ಗಾರೆಯಿಂದ ನಿರ್ಮಿಸಲಾಗಿದೆ. ಏತ ನೀರಾವರಿ ವ್ಯವಸ್ಥೆವಾಗಿ ನಿರ್ಮಿಸಿರುವ ಈ ಬಾವಿಯ ದಕ್ಷಿಣ ಭಾಗದ ಗೋಡೆಯ ಮಧ್ಯಭಾಗದ ನೀರು ಮೇಲೆತ್ತುವ ಜಗಲಿ (ಕಪಿಲೆ) ಇದೆ. ಇದರ ಮೇಲೆ ಮುಂದೆ ಚಾಚಿಕೊಂಡಿರುವ ಕೈಸಾಲೆ ಇದೆ. ಈ ಕೈ ಸಾಲೆಯಲ್ಲಿ ಕಿಟಕಿಗಳಿವೆ. ಜಗಲಿಯ ಕಟ್ಟಡದ ಕಲ್ಲುಗಳ ಮೇಲೆ ನಾಗಸರ್ಪ ಮತ್ತು ಮಿಥುನ ಶಿಲ್ಪಗಳಿವೆ. ಸರಿಯಾದ ರಕ್ಷಣೆ ಇಲ್ಲದ ಕಾರಣ ಕೈಸಾಲೆಯು ಶಿಥಿಲಾವಸ್ಥೆಗೆ ತಲುಪಿದೆ. ಪ್ರಸ್ತುತ ಬಾವಿಯಲ್ಲಿ ನೀರಿಲ್ಲದೆ ಬರಿದಾಗಿದ್ದು, ಗಿಡ-ಗಂಟಿಗಳಿಂದ ಸುತ್ತುವರೆದು ಪಾಳುಬಿದ್ದಿದೆ.[೨೦]

ಹನುಮಸಾಗರ ಆನೆಬಾವಿ

ಹನುಹಮಸಾಗರದಿಂದ ಪಶ್ಚಿಮಕ್ಕೆ ೨ ಕಿ.ಮೀ. ದೂರದಲ್ಲಿ ಹೊಲಗಳ ನಡುವೆ ಆನೆಬಾವಿ ಇದೆ. ಬಾವಿಯ ಪ್ರವೇಶದ್ವಾರವು ಉತ್ತರಾಭಿಮುಖವಾಗಿದ್ದು ಪ್ರವೇಶ ಮಾರ್ಗದ ಮೆಟ್ಟಿಲು ಎಡಬಲ ಪಕ್ಕದಲ್ಲಿ ೩ಮೀ. ಎತ್ತರದ ಸುಂದರವಾದ ಆನೆಗಳನ್ನು ಬಿಳಿ ಗ್ರಾನೈಟ್ ಕಲ್ಲಿನಲ್ಲಿ ಕೆತ್ತಲಾಗಿದೆ. ಅದ್ದರಿಂದ ಸ್ಥಳೀಯರು ಇದನ್ನು ಆನೆಬಾವಿ ಎಂದು ಕರೆಯುತ್ತಾರೆ. ಬಾವಿಗೆ ಇಳಿಯಲು ದಕ್ಷಿಣಾಭಿಮುಖವಾಗಿ ೨೬ ಮೆಟ್ಟಿಲುಗಳನ್ನು ನಿರ್ಮಿಸಿದ್ದಾರೆ. ಹಾಗೆಯೇ ಕಡಿದಾದ ಚಿಕ್ಕ ಚಿಕ್ಕ ಮೆಟ್ಟಿಲುಗಳನ್ನು ಕಲಾತ್ಮಕವಾಗಿ ಒಳಭಾಗದಲ್ಲಿ ನಿರ್ಮಿಸಿದ್ದಾರೆ. ಇವು ಬಾವಿಯ ಅಂದವನ್ನು ಹೆಚ್ಚಿಸಿವೆ. ಸಮಾರು ೩೦ ಅಡಿ ಆಳವನ್ನು ಹೊಂದಿರುವ ಈ ಬಾವಿಯ ೧೩ ಮೀ. ಅಗಲ ೨೬ಮೀ. ಉದ್ದದ ಸುತ್ತಳತೆಯನ್ನು ಹೊಂದಿದೆ. ದಕ್ಷಿಣಾಮುಖವಾಗಿರುವ ಎದುರು ಭಾಗದಲ್ಲಿ ಜಗಲಿ ಏತ ವ್ಯವಸ್ಥೆಯಿರುವ ರಚನೆ ಇದೆ. ಬಾವಿಯ ಎಡಪಾರ್ಶ್ವದ ಗೋಡೆಯಲ್ಲಿ ನಾಗಸರ್ಪ ಮತ್ತು ಬೇಟೆಗಾರನ ಶಿಲ್ಪವಿದೆ. ಬಾವಿಯಲ್ಲಿ ಮಧ್ಯದ ಹಂತದಲ್ಲಿ ಸಾಕಷ್ಟು ಮೆಟ್ಟಿಲು ಹಂತದ ರಚನೆಗಳನ್ನು ನಿರ್ಮಿಸಲಾಗಿದೆ. ಇದು ಬಾವಿಯ ಕಲಾತ್ಮಕತೆಯ ಅಂದವನ್ನು ಹೆಚ್ಚಿಸಿದೆ. ಪ್ರಸ್ತುತ ಬಾವಿಯಲ್ಲಿ ಸಾಕಷ್ಟು ಹೂಳು ತುಂಬಿದ್ದು, ನೀರಿಲ್ಲದೇ ಗಿಡ-ಗಂಟಿ ಪೊದೆಗಳು ಬೆಳೆದು ಶಿಥಿಲಾವಸ್ಥೆ ತಲುಪಿದೆ.[೨೧]

ಹನುಮಸಾಗರ ರಾಣಬಾವಿ

ಹನುಮಸಾಗರ ಗ್ರಾಮದ ಹೊರಭಾಗದಲ್ಲಿ ದಕ್ಷಿಣ ದಿಕ್ಕಿನಲ್ಲಿ ೪ ಕಿ.ಮೀ. ಅಂತರದಲ್ಲಿ ರಾಣಬಾವಿ ಎಂಬ ಹೆಸರಿನ ಬಾವಿ ಇದೆ. ಹನುಮಸಾಗರದಿಂದ ಗಜೇಂದ್ರ ಗಡ ರಸ್ತೆ ಮಾರ್ಗದಿಂದ

ಎಡಭಾಗದಲ್ಲಿ ೧೦೦ ಮೀ. ಅಂತರದಲ್ಲಿ ಈ ಬಾವಿ ಇದೆ. ಸುತ್ತಲೂ ಚೌಕಾಕಾರ ರಚನೆಯಿಂದ ಕೂಡಿರುವ ಈ ಬಾವಿಗೆ ನಾಲ್ಕು ದಿಕ್ಕಿನಿಂದಲೂ ಇಳಿಯಲು ಮೆಟ್ಟಿಲು ವ್ಯವಸ್ಥೆ ಮಾಡಲಾಗಿದೆ. ನಾಲ್ಕು ಕಡೆಗೆ ಅಗಲವಾದ ೨೧ ಮೆಟ್ಟಿಲುಗಳ ರಚನೆ ಇದೆ. ಪೂರ್ವಭಾಗದಲ್ಲಿ ಏತವ್ಯವಸ್ಥೆಯ (ಜಗಲು) ಮಾದರಿಯಲ್ಲಿ ಮಂಟಪದ ರಚನೆಯನ್ನು ಕಲಾತ್ಮಕವಾಗಿ ನಿರ್ಮಿಸಿದ್ದಾರೆ. ಬಾವಿಯ ಶಿಥಿಲಾವಸ್ಥೆಯಲ್ಲಿದೆ. ಬಾವಿಯ ಪೂರ್ವದಿಕ್ಕಿಗೆ ಹೊಂದಿಕೊಂಡಂತೆ ೨೦೦ ಮೀ. ಅಂತರದಲ್ಲಿ ಕೆಂಪು ಮರಳಗಲ್ಲಿನಲ್ಲಿ ಒಂದು ಚಿಕ್ಕಗುಡಿಯನ್ನು ನಿರ್ಮಿಸಲಾಗಿದೆ.[೨]

ಕ್ರಸಂ.	ಬಾವಿಗಳು	ಗ್ರಾಮ	ತಾಲೂಕು	ಕಾಲಮಾನ
೧.	ವೆಂಕಟಪತಿ ಬಾವಿ	ಕನಕಗಿರಿ	ಕನಕಗಿರಿ	೧೬ ನೇ ಶತಮಾನ
೨.	ಅಚ್ಚಮ್ಮನ ಬಾವಿ	ಕನಕಗಿರಿ	ಕನಕಗಿರಿ	೧೬ ನೇ ಶತಮಾನ
೩.	ಚಿಕ್ಕಕನಕಪ್ಪ ಬಾವಿ	ಕನಕಗಿರಿ	ಕನಕಗಿರಿ	೧೬ ನೇ ಶತಮಾನ
೪.	ಮಹಾಂತರ ಮಠ/ ಗಿಂಡಿ ಬಾವಿ	ಕನಕಗಿರಿ	ಕನಕಗಿರಿ	೧೬ ನೇ ಶತಮಾನ
೫.	ಲಕ್ಷ್ಮೀಗುಡ್ಡದ ಬಾವಿ	ಬಸರಿಹಾಳ	ಕನಕಗಿರಿ	೧೬ ನೇ ಶತಮಾನ
೬.	ತಂಗವ್ವನ ಬಾವಿ	ಹನುಮಸಾಗರ	ಕುಷ್ಟಗಿ	೧೬ ನೇ ಶತಮಾನ
೭.	ಆನೆ ಬಾವಿ	ಹನುಮಸಾಗರ	ಕುಷ್ಟಗಿ	೧೬ ನೇ ಶತಮಾನ
೮.	ರಾಣಿ ಬಾವಿ	ಹನುಮಸಾಗರ	ಕುಷ್ಟಗಿ	೧೬ ನೇ ಶತಮಾನ
೯.	ಕಲಕೇರಿ ಬಾವಿ	ಕಲಕೇರಿ	ಯಲಬುರ್ಗಾ	೧೬ ನೇ ಶತಮಾನ

ಅಡಿಟಿಪ್ಪಣಿಗಳು

೧. ಶರಣಬಸಪ್ಪ ಕೋಲ್ಕಾರ, ೨೦೧೨, ***ವಿಜಯನಗರ ಕಾಲದ ನೀರಾವರಿ ವ್ಯವಸ್ಥೆ ; ಆನೆಗೊಂದಿ ಪ್ರದೇಶ,*** ವಿಜಯನಗರ ಪರಿಸರ, ಪು.೬೮

೨. ವಾಸುದೇವನ್ ಸಿ. ಎಸ್., ೨೦೦೧, ***ಹಂಪಿ ಪರಿಸರದ ಕೆರೆಗಳು***, ಪು.೪

೩. ಮೋಹನ್ ಕೃಷ್ಣ ರೈ ಕೆ., ೨೦೦೯, ***ಚರಿತ್ರೆ ಕಥನ,*** ಪು. ೧೨

೪. ಪರಮಶಿವಮೂರ್ತಿ ಡಿ.ವಿ. (ಸಂ.,), ೨೦೧೦, ***ಕೃಷ್ಣದೇವರಾಯನ ಶಾಸನಗಳು ಸಂಪುಟ–೧,*** ಕನ್ನಡ–ಸಂಸ್ಕೃತ ಶಾಸನಗಳು ಪು. ೪೧

೫. ವಾಸುದೇವನ್ ಸಿ.ಎಸ್. ***ಪೂರ್ವೋಕ್ತ,*** ಪು. ೯–೧೦

೬. ದಿಪಕ್ ರಂಜನ್ ದಾಸ್, ***ಎಕನಾಮಿಕ್ ಹಿಸ್ಟರಿ ಆಫ್ ಡೆಕ್ಕನ್***, ಪು. ೧೨೦, ಹಾಗೂ ದೀಕ್ಷಿತರ್ ವಿ.ಆರ್.ಆರ್., *ಎ ಹಿಸ್ಟರಿ ಆಫ್ ಇರಿಗೇಷನ್ ಇನ್ ಸೌತ್ ಇಂಡಿಯಾ, ಜರ್ನಲ್ ಆಫ್ ಇಂಡಿಯನ್ ಕಲ್ಚರ್*, ಪು.೭೧–೮೧

೭. ಕೊಟ್ರಯ್ಯ ಸಿ.ಟಿ.ಎಂ.(ಲೇ.), *ವಿಜಯನಗರ ಕಾಲದ ತುಂಗಭದ್ರಾ ನದಿಯ ಅಣೆಕಟ್ಟೆಗಳು,* ದೇವರಕೊಂಡಾರೆಡ್ಡಿ (ಸಂ.), ಹಂಪಿ ಸಂಪುಟ ಕಲೆ, ಕ್ರೀಡೆ ಮತ್ತು ಕೌಶಲ, ಪು. ೪೩೮

೮. ಅದೇ, ಪು.೪೩೯

೯. ಅದೇ, ಪು.೪೩೯

೧೦. ಶರಣಬಸಪ್ಪ ಕೋಲ್ಕಾರ, *ಬೆನ್ನೂರಿನ ಬಸವನ ಅಣೆಕಟ್ಟು,* ಸುಧಾ ವಾರಪತ್ರಿಕೆ, ಬೆಂಗಳೂರು. ದಿನಾಂಕ ೧.೧೧.೧೯೯೮, ಪು. ೧೮-೧೯, ಮತ್ತು ಕ್ಷೇತ್ರಕಾರ್ಯದಿಂದ ಸಂಗ್ರಹಿಸಿದ ಮಾಹಿತಿ

೧೧. ಕೊಟ್ರಯ್ಯ ಸಿ.ಟಿ.ಎಂ., ೨೦೦೧, *ವಿಜಯನಗರ ಕಾಲದ ನೀರಾವರಿ ವ್ಯವಸ್ಥೆ,* ಪು.೨೨-೨೪

೧೨. ಎಚ್.ಎ.ಎಸ್. XIII, ಶಾ.ಸಂ. ೨೧೨-೫೮, ಪು. ೬೩

೧೩. ಸಣ್ಣ ನೀರಾವರಿ ವಿಭಾಗ, ಕುಷ್ಟಗಿ, ದಿ. ೦೭. ೦೪. ೨೦೧೧ ರಂತೆ ಇಲಾಖೆಯ ಕಡತದಿಂತ ಪಡೆದ ಮಾಹಿತಿ

೧೪. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೨, ಕೊಪ್ಪಳ ಜಿಲ್ಲೆ, ಕುಷ್ಟಗಿ ತಾ., *ಪುರ,* ಶಾ.ಸಂ. ೧೨

೧೫. ಶರಣಬಸಪ್ಪ ಕೋಲ್ಕಾರ, (ಲೇ.,) ೨೦೧೩, *ಗಂಗಾವತಿ ತಾಲ್ಲೂಕಿನಲ್ಲಿ ವಿಜಯನಗರ ಕಾಲದ ನೀರಾವರಿ ವ್ಯವಸ್ಥೆ,* ಗೋಪಾಲ್. ಆರ್., ಗಂಗಾಧರ ಟಿ.ಎಸ್., (ಸಂ.,), ವಿಜಯನಗರ ಅಧ್ಯಯನ ಸಂಪುಟ-೧೭ ಪು. ೧೪೨,

೧೬. ಸಣ್ಣ ನೀರಾವರಿ ವಿಭಾಗ, ಕುಷ್ಟಗಿ ದಿನಾಂಕ ೭.೪.೨೦೧೧ ರಂತೆ ಇಲಾಖೆಯ ಕಡತದಿಂದ ಪಡೆದ ಮಾಹಿತಿ

೧೭. ಕುಮಾರಿ ಶಾರದಾ ಮಲ್ಲಿಕಾರ್ಜುನ ಪಾಟೀಲ, *ಕೊಪ್ಪಳ ಜಿಲ್ಲೆಯ ಕೆರೆ-ಬಾವಿಗಳು ಚಾರಿತ್ರಿಕ ಅಧ್ಯಯನ,* ಪು. ೧೨೩, ಮತ್ತು ಕ್ಷೇತ್ರಕಾರ್ಯದಿಂದ ಸಂಗ್ರಹಿಸಿದ ಮಾಹಿತಿ

೧೮. ಚಿದಾನಂದ ಮೂರ್ತಿ ಎಂ., ೧೯೭೯, *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ,* ಪು. ೫೦೨

೧೯. ವಿನೋದ ಪಾಟೀಲ, *ಕರ್ನಾಟಕದ ಬಾವಿಗಳು,* ಪು.೨೫-೨೯, ಮತ್ತು ಕ್ಷೇತ್ರಕಾರ್ಯದಿಂದ ಸಂಗ್ರಹಿಸಿದ ಮಾಹಿತಿ

೨೦. ಕುಮಾರಿ ಶಾರದ ಮಲ್ಲಿಕಾರ್ಜುನ ಪಾಟೀಲ್, *ಪೂರ್ವೋಕ್ತ,* ಪು. ೧೮೨-೧೮೩, ಮತ್ತು ಕ್ಷೇತ್ರಕಾರ್ಯದಿಂದ ಸಂಗ್ರಹಿಸಿದ ಮಾಹಿತಿ

೨೧. ಅದೇ, ಪು.೧೮೩ ಮತ್ತು ಕ್ಷೇತ್ರಕಾರ್ಯದಿಂದ ಸಂಗ್ರಹಿಸಿದ ಮಾಹಿತಿ

೨೨. ಅದೇ, ಪು.೧೮೪-೧೮೫, ಮತ್ತು ಕ್ಷೇತ್ರಕಾರ್ಯದಿಂದ ಸಂಗ್ರಹಿಸಿದ ಮಾಹಿತಿ

ಅಧ್ಯಾಯ : ಏಳು

ಸಮಾರೋಪ

============================

ಅಧ್ಯಾಯ : ಏಳು

ಉಪಸಂಹಾರ

ವಿಜಯನಗರ ಸಾಮ್ರಾಜ್ಯವು ಭಾರತದ ಪ್ರಮುಖ ಸಾಮ್ರಾಜ್ಯಗಳಲ್ಲಿ ಒಂದೆನಿಸಿದೆ. ಕ್ರಿ.ಶ. ೧೩೩೬ರಲ್ಲಿ ಅಸ್ತಿತ್ವಕ್ಕೆ ಬಂದ ಈ ಸಾಮ್ರಾಜ್ಯವು ಸುಮಾರು ಎರಡುಕಾಲು ಶತಮಾನ ಕಾಲ ಅಸ್ಥಿತ್ವದಲ್ಲಿದ್ದು, ರಾಜಕೀಯ ಸಾರ್ವಭೌಮತ್ವವನ್ನು ಹೊಂದಿ ಸಾಂಸ್ಕೃತಿಕ ಶ್ರೀಮಂತಿಕೆಯಿಂದ ಬಾಳಿತು. ವಿಜಯನಗರದ ಉದಯವು ದಕ್ಷಿಣ ಭಾರತದ ಇತಿಹಾಸದಲ್ಲಿ ಹೊಸ ಯುಗಕ್ಕೆ ನಾಂದಿಯನ್ನು ಹಾಡಿತು. ರಾಜಕೀಯ ವಿಪ್ಲವ ಸನ್ನಿವೇಶದಲ್ಲಿ ಮೂಡಿಬಂದ ವಿಜಯನಗರವು ಎಲ್ಲಾ ರಾಜಕೀಯ ಕ್ಷೋಭೆಯನ್ನು ನಿವಾರಿಸಿ ಇಡೀ ದಕ್ಷಿಣ ಭಾರತವನ್ನು ಏಕಚಕ್ರಾಧಿಪತ್ಯದಡಿಯಲ್ಲಿ ತಂದಿತು. ಈ ಮೂಲಕ ದಕ್ಷಿಣದಲ್ಲಿ ರಾಜಕೀಯ ಅನೈಕ್ಯತೆ ತೊಡೆದು ಸುಭದ್ರತೆ ಸ್ಥಾಪನೆಯಾಯಿತು. ಜೊತೆಗೆ ಇದು ಸಾಂಸ್ಕೃತಿಕ ವಿಕಾಸಕ್ಕೂ ಹಾದಿಯನ್ನು ಉಂಟು ಮಾಡುತ್ತದೆ. ಸಮಾಜ, ಧರ್ಮ, ಸಾಹಿತ್ಯ, ಕಲೆ, ವಾಸ್ತುಶಿಲ್ಪ ಮುಂತಾದ ಕೇತ್ರದಲ್ಲಿ ಗಣನೀಯ ಪ್ರಗತಿ ಸಾಧಿತವಾಯಿತು. ಇಡೀ ದಕ್ಷಿಣ ಭಾರತದಾದ್ಯಂತ ಈ ಸಂಸ್ಕೃತಿ ಸಂವರ್ಧನೆಗೊಂಡಿದರ ಪರಿಣಾಮವಾಗಿ ನೂರಾರು ಸುಂದರ ಭವ್ಯ ದೇವಾಲಯಗಳು, ಕೋಟೆ ಕೊತ್ತಲುಗಳು ಲೌಕಿಕ ಕಟ್ಟಡಗಳು, ಧಾರ್ಮಿಕ ಮತ್ತು ಲೌಕಿಕ ವೈವಿಧ್ಯಮಯ ಶಿಲ್ಪಗಳು ರಚನೆಯಾದವು. ಈ ಎಲ್ಲಾ ಕಲಾ ಸ್ಮಾರಕಗಳು ವಿಜಯನಗರದ ಅರಸರು ವಾಸ್ತುಶಿಲ್ಪಕಲೆಗೆ ನೀಡಿದ ಪ್ರಾಧಾನ್ಯತೆಯ ಪ್ರತಿಬಿಂಬಿಸುತ್ತದೆ. ಅಷ್ಟೇ ಅಲ್ಲ ಈ ಸ್ಮಾರಕ, ಶಿಲ್ಪಗಳು ಸಮಕಾಲೀನ ಸಾಮಾಜಿಕ, ಧಾರ್ಮಿಕ ಬದುಕಿನ ಹತ್ತು ಹಲವು ಅಂಶಗಳನ್ನು ಪ್ರತಿನಿಧಿಸುತ್ತು ವಿಜಯನಗರ ಕಾಲದ ಬದುಕನ್ನು ಬಿಚ್ಚಿಡುತ್ತವೆ. ಹಾಗಾಗಿ ವಿಜಯನಗರದ ಜೊತೆಗೆ ನಮ್ಮ ನಾಡಿನ ಚರಿತ್ರೆಯನ್ನು ಅರಿಯುವಲ್ಲಿ ಈ ಸ್ಮಾರಕ ಶಿಲ್ಪಗಳು ಬಹುಮುಖ್ಯ ಆಕರಗಳಾಗಿವೆ.

ಈ ಹಿನ್ನಲೆಯಲ್ಲಿ ಇಂತಹ ಸ್ಮಾರಕ ಶಿಲ್ಪಗಳನ್ನು ಅನುಲಕ್ಷಿಸಿ ಅಧ್ಯಯನಗಳನ್ನು ನಡೆಸಲಾಗಿದೆ. ವಿಜಯನಗರದ ಸ್ಮಾರಕ ಶಿಲ್ಪಗಳ ಬಗೆಗೂ ಹೀಗಾಗಲೇ ಇಡೀ ಸಾಮ್ರಾಜ್ಯವನ್ನು ಕೇಂದ್ರಿಕರಿಸಿ ಮತ್ತು ನಿರ್ದಿಷ್ಟ ಪ್ರದೇಶಗಳನ್ನು ಕೇಂದ್ರಿಕರಿಸಿ ಅಧ್ಯಯನಗಳನ್ನು ನಡೆಸಲಾಗುತ್ತದೆ. ಈ ವಿಸ್ತೃತ

ವ್ಯಾಪ್ತಿಯ ಅಧ್ಯಯನಗಳಲ್ಲಿ ಪ್ರಾದೇಶಿಕ ಸ್ಮಾರಕ ಶಿಲ್ಪಗಳನ್ನು ಅನುಲಕ್ಷಿಸಲು ಸಾಧ್ಯವಾಗಿರುವುದಿಲ್ಲ. ಆದರೆ ಯಾವುದೇ ಒಂದು ರಾಜಮನೆತನದ ಅಥವಾ ಒಂದು ಕಾಲಘಟ್ಟದ ಸಾಂಸ್ಕೃತಿಕ ಚರಿತ್ರೆಯನ್ನು ಸಮಗ್ರವಾಗಿ ನಿರೂಪಿಸಬೇಕಾದರೆ ಸ್ಥಳೀಯ ಅಂಶಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದು ಅಗತ್ಯವಾದ ಕಾರ್ಯವಾಗಿದೆ. ಅಂದಾಗ ಮಾತ್ರ ಇತಿಹಾಸದ ಎಲ್ಲ ಮಜಲುಗಳನ್ನು ಸ್ಪಷ್ಟವಾಗಿ ಗ್ರಹಿಸಲು ಸಾಧ್ಯವಾಗುತ್ತದೆ. ಈ ಹಿನ್ನಲೆಯಲ್ಲಿ ಬಹುಮಟ್ಟಿಗೆ ಅಧ್ಯಯನಕ್ಕೆ ಒಳಪಡದ ಕೊಪ್ಪಳ ಜಿಲ್ಲೆಯ ವಿಜಯನಗರ ಕಾಲದ ಸ್ಮಾರಕಗಳ ಕುರಿತು ಅಧ್ಯಯನವನ್ನು ನಡೆಸಲಾಗಿದೆ.

ಅಧ್ಯಯನಕ್ಕೆ ಪೂರಕವಾಗಿ ಕೊಪ್ಪಳ ಜಿಲ್ಲೆಯ ಭೌಗೋಳಿಕ, ಸನ್ನಿವೇಶವನ್ನು ಗಮನಿಸಲಾಗಿದೆ. ಕೊಪ್ಪಳ ಜಿಲ್ಲಾ ಪ್ರದೇಶವು ಬಹು ಪ್ರಾಚೀನ ನಿರ್ಮಾಣವಾಗಿದೆಂಬುದಾಗಿ ತಿಳಿಯುತ್ತದೆ. ಈ ಪ್ರದೇಶದಲ್ಲಿ ತುಂಗಭದ್ರಾನದಿ ಪ್ರಧಾನ ನದಿಯಾಗಿದೆ. ಇದು ಈ ಪ್ರದೇಶದ ಜೀವನ ಸಂಸ್ಕೃತಿಯನ್ನು ರೂಪಿಸಿರುವುದನ್ನು ಗುರುತಿಸಬಹುದು. ನದಿ, ಸುತ್ತಮುತ್ತಲಿನ ಫಲವತ್ತಾದ ಭೂಮಿ ಮತ್ತು ಬೆಟ್ಟಗುಡ್ಡಗಳು ಇಲ್ಲಿ ಆದಿಮಾನವನು ನೆಲೆಗೊಳ್ಳಲು ಕಾರಣವಾದ ಸಂಗತಿಯನ್ನು ತಿಳಿಯಲಾಗಿತ್ತು. ನದಿಯ ಜೊತೆ ಇಲ್ಲಿಯ ವೈವಿಧ್ಯಮಯವಾದ ಸಸ್ಯ ಸಂಕುಲ, ಮಣ್ಣು, ಖನಿಜ, ಅರಣ್ಯ ಬೆಟ್ಟಗುಡ್ಡಗಳ ಭೌಗೋಳಿಕ ವೈಶಿಷ್ಟ್ಯತೆ ಈ ಪ್ರದೇಶದಲ್ಲಿದೆ. ಇವೆಲ್ಲವು ಮಾನವನ ಬದುಕುವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸಿವೆ. ಅಂದರೆ ಇಲ್ಲಿಯ ಇತಿಹಾಸ ಭೌಗೋಳಿಕ ಪರಿಸರದಿಂದ ಪ್ರಭಾವಿತವಾಗಿರುವುದನ್ನು ಗ್ರಹಿಸಬಹುದು.

ಕೊಪ್ಪಳ ಜಿಲ್ಲೆಯ ಪ್ರಾಗಿತಿಹಾಸವನ್ನು ಅವಲೋಕಿಸಲಾಗಿದೆ. ಇಲ್ಲಿಯ ಏಳು ತಾಲೂಕುಗಳಲ್ಲಿ ನಡೆದ ಸಂಶೋಧನೆಗಳು ಆದಿಮಾನವನ ಅಸ್ತಿತ್ವದ ಕುರುಹುಗಳನ್ನು ಹೊರಹಾಕಿವೆ. ಆದಿಮಾನವನ ವಸತಿನೆಲೆಗಳು ಸಮಾಧಿಗಳು, ಆಯುಧಗಳು, ಮಡಕೆಗಳು ಗುಹಾ ಚಿತ್ರಗಳು, ಬಂಡೆಯಲ್ಲಿ ಕೊರೆದ ಚಿತ್ರಗಳು ಮೊದಲಾದ ಪ್ರಾಚ್ಯಾವಶೇಷಗಳು ಲಭ್ಯವಾಗಿವೆ. ಇವುಗಳನ್ನು ಪ್ರಾಚ್ಯಶಾಸ್ತ್ರಜ್ಞರು ವ್ಯವಸ್ಥಿತವಾಗಿ ಅಧ್ಯಯನ ಮಾಡಿದ್ದಾರೆ. ಈ ಅಧ್ಯಯನಗಳಿಂದ ಜಿಲ್ಲೆಯ ಪ್ರಾಗಿತಿಹಾಸವು ಮಧ್ಯ ಹಳೆಶಿಲಾಯುಗದಿಂದಲೇ ಆರಂಭವಾಗಿರುವುದು ತಿಳಿದುಬಂದಿದೆ. ಕುಷ್ಟಗಿ ತಾಲೂಕಿನ ಹನುಮಸಾಗರದಲ್ಲಿ ಮಧ್ಯ ಹಳೆಶಿಲಾಯುಗದ ಕೈಕೊಡಲಿ, ಕೊಚ್ಚುಗತ್ತಿಗಳು, ಅದೇ ರೀತಿ ಇದೇ ತಾಲೂಕಿನ ಕಮಲದಿನ್ನಿಯಲ್ಲಿ ಮಧ್ಯ ಹಳೆ ಶಿಲಾಯುಗದ ಉಪಕರಣ ತಯಾರಿಕೆಯ ಕೇಂದ್ರವೊಂದು ಪತ್ತೆಯಾಗಿದೆ. ಹಳೇ ಶಿಲಾಯುಗದ ನಂತರ ಸೂಕ್ಷ್ಮಶಿಲಾಯುಗದ ಹಲವು ನೆಲೆಗಳು ಗಂಗಾವತಿ ತಾಲೂಕಿನಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಇಲ್ಲಿಯ ಏಳುಗುಡ್ಡಗಳ ಸಾಲಿನಲ್ಲಿರುವ ಆನೆಗೊಂದಿ, ಚಿಕ್ಕರಾಂಪುರ, ವಾಣಿಭದ್ರೇಶ್ವರ, ಇಂದರಗಿ ಮುಂತಾದೆಡೆ ಸೂಕ್ಷ್ಮ ಶಿಲಾಯುಗದ ನೆಲೆಗಳು ಪತ್ತೆಯಾಗಿವೆ. ಇವುಗಳಿಂದ ಈ ಪರಿಸರದ ಸೂಕ್ಷ್ಮಶಿಲಾಯುಗದ ಮಾನವನ ಜೀವನ ಸಂಸ್ಕೃತಿಯನ್ನು ತಕ್ಕಮಟ್ಟಿಗೆ ತಿಳಿಯಲಾಗಿದೆ. ಸೂಕ್ಷ್ಮ ಶಿಲಾಯುಗದ ನಂತರ ನವಶಿಲಾಯುಗ ಸಂಸ್ಕೃತಿ ಕಾಣಿಸಿಕೊಳುತ್ತದೆ. ಇದು ಹಿಂದಿಗಿಂತಲೂ ತುಂಬಾ ವಿಕಾಸವಾದ ಹಂತ. ಇಲ್ಲಿ ಆದಿಮಾನವನು

ಒಂದೆಡೆ ನೆಲೆ ನಿಂತು ಕೃಷಿ, ಪಶುಪಾಲನೆಯನ್ನು ವ್ಯವಸ್ಥಿತವಾಗಿ ರೂಢಿಸಿಕೊಂಡನು. ಈ ಸಾಂಸ್ಕೃತಿಕ ಹಂತದ ಹಲವಾರು ನೆಲೆಗಳು ಜಿಲ್ಲೆಯ ಕೊಪ್ಪಳ, ಗಂಗಾವತಿ, ಕುಷ್ಟಗಿ ತಾಲೂಕುಗಳಲ್ಲಿ ಕಂಡುಬರುತ್ತದೆ. ಕುಷ್ಟಗಿ ತಾಲೂಕಿನ ತಾವರಗೆರೆ, ಗಂಗಾವತಿ ತಾಲೂಕಿನ ವಾಣಿಭದ್ರೇಶ್ವರ ಬೆಟ್ಟ, ಅಗೋಲಿ, ಕಡೆಬಾಗಿಲು, ಸಂಗಾಪುರ ಮಹತ್ವದ ನೆಲೆಗಳಗಿವೆ. ಇಲ್ಲಿಯ ವಸತಿ ನೆಲೆಗಳು ಅವುಗಳಲ್ಲಿ ನಯಗೊಳಿಸಿದ ಶಿಲಾಯುಧಗಳು ಮಡಕೆ ಚೂರುಗಳು ಮಣಿಗಳು ದೊರೆಯುತ್ತವೆ. ಇವು ನವಶಿಲಾಯುಗ ಪ್ರಗತಿದಾಯಕವಾದ ಸಂಸ್ಕೃತಿಯನ್ನು ಬಿಂಬಿಸುತ್ತದೆ. ತದ ನಂತರ ಕಬ್ಬಿಣಯುಗ ಬೃಹತಶಿಲಾಯುಗ ಸಂಸ್ಕೃತಿ ಜಿಲ್ಲೆಯಲ್ಲಿ ನೆಲೆಗಳಿಂದ ವ್ಯಕ್ತವಾಗುತ್ತದೆ. ವಿಶೇಷವಾಗಿ ಗಂಗಾವತಿ ತಾಲೂಕಿನ ಏಳುಗುಡ್ಡ ಪರಿಸರದಲ್ಲಿ ಈ ಸಂಸ್ಕೃತಿಯಲ್ಲಿ ನಾವು ಅಧಿಕ ಸಂಖ್ಯೆಯಲ್ಲಿ ವಾಸಿಸಿದ ಅವರ ನಿರ್ಮಾಣಗಳಾದ ವೈವಿಧ್ಯಮಯವಾದ ಶಿಲಾಸಮಾಧಿಯ ಇಲ್ಲಿಯ ಹಿರೇಬೆಣಕಲ್, ಚಿಕ್ಕಬೆಣಕಲ್ಲು ಮಲ್ಲಾಪುರ, ಎಮ್ಮಿಗುಡ್ಡ, ಅಗೋಲಿ, ಹಂಪಸದುರ್ಗ, ಶಿವಪುರ, ಬಿಳೆಬಾವಿ, ಕೊಪ್ಪಳ ಮುಂತಾದಲ್ಲಿ ಕಂಡುಬಂದಿವೆ. ಈ ನೆಲೆಗಳಲ್ಲಿ ಗಂಗಾವತಿ ತಾಲೂಕಿನ ಹಿರೇಬೆಣಕಲ್ಲು ತುಂಬ ಮಹತ್ವದ ನೆಲೆಯಾಗಿದೆ. ಇಲ್ಲಿ ಸಮಾರು ೪೦೦ಕ್ಕೂ ಅಧಿಕ ಸಂಖ್ಯೆಯ ಶಿಲಾಸಮಾಧಿಗಳಿವೆ. ಹಾಗಾಗಿ ಇದು ಕರ್ನಾಟಕ ಪ್ರಾಗಿತಿಹಾಸ ಕಾಲದ ನೆಲೆಗಳಲ್ಲಿ ಮಹತ್ವದ ಸ್ತಾನವನ್ನು ಪಡೆದಿದೆ.

